# ಕಗ್ಗ ರಸಧಾರೆ

ಸಂಪುಟ ೩

ಕಗ್ಗ ರಸಧಾರೆ-ಸಂಪುಟ-3 (ಡಿವಿಜಿಯವರ ಮಂಕುತಿಮ್ಮನ ಕಗ್ಗಗಳ ರಸಧಾರೆ)

JNANA002066

ಡಿವಿಜಿಯವರ ಮಂಕುತಿಮ್ಮನ ಕಗ್ಗಗಳ ರಸಧಾರೆ



ವ್ಯಾಖ್ಯಾತ: ರವಿ ತಿರುಮಲೈ

# ಕಗ್ಗ ರಸಧಾರೆ

ಡಿವಿಜಿಯವರ ಮಂಕುತಿಮ್ಮನ ಕಗ್ಗಗಳ ರಸದಾರೆ

ಸಂಪುಟ-3

**ವ್ಯಾಖ್ಯಾತ: ರವಿ ತಿರುಮಲೈ**

ಪ್ರಕಾಶಕರು

ವಿಜಯರವಿ ಪ್ರಕಾಶನ

**KAGGA RASADHARE** - Vol-3 (Muktaka 451-700 Nos.)
- A commentary in Kannada on Dr. D.V. Gundappa's
`Mankuthimmana Kagga' by Ravi Tirumalai.

Pages: vi+ 318

©: Author

Published: 2015
Copies: 500

Price: Rs.250/-

Author:
Ravi Tirumalai
Phone: 96322 46255, 99451 56255
Email: myrathy@gmail.com

Publisher:
Vijayaravi Prakashana
No.586, 21st Main,
4th T Block, Jayanagara
Bengaluru-560 041
Tel: 080-22451417

Cover Page Design:
Sri Vasanth Kumar

Printed at:
Smart Printers
#11, 2nd Cross, K.V. Temple Street
Sourastrapet, Bengaluru 560053
080-41220615

ನನಗೆ ಬದುಕಿನ ಪಾಠ

ಹೇಳಿಕೊಟ್ಟ ಎಲ್ಲರಿಗೂ

**ಅರ್ಪಣೆ**

## ರಸಧಾರಾ ಸೂಚಿ


| ಕ್ರಸಂ. | ವಿಷಯ | ಮುಕ್ತಕ ಸಂಖ್ಯೆ | ಪುಟ ಸಂಖ್ಯೆ |
|---|---|---|---|
| 1. | ದ್ವಂದ್ವ ಸ್ವಾರಸ್ಯ | 451-453 | 1-3 |
| 2. | ಮೋಹ ಕರುಣಾ ಶಾಂತಿ | 454-458 | 4-8 |
| 3. | ಜೀವ ಕಾವ್ಯ | 459-463 | 9-13 |
| 4. | ಕಲೆ - ಬ್ರಹ್ಮಕೃತಿಯ ಟೀಕೆ | 464- 468 | 14-19 |
| 5. | ಕವಿ - ರಾಜ್ಯಕ | 469-473 | 20-25 |
| 6. | ನರನ ಮೃತ್ಯುಂಜಯತೆ | 474-478 | 26-31 |
| 7. | ಸಾರ್ಥಕತೆಯಿಂ ಸತ್ಯ | 479-483 | 32-37 |
| 8. | ಭಕ್ತಿ ಸ್ವಾಭಾವಿಕ | 484-488 | 38-43 |
| 9. | ಸಾಧನೋಪಾಯ | 489-493 | 44-49 |
| 10. | ನಿಷ್ಕಾಮ ಪೂಜೆ | 494 498 | 50-55 |
| 11. | ವರ ಯಾಚನೆ | 499-503 | 56-61 |
| 12. | ವರ - ನವಸತ್ವವೃಷ್ಟಿ | 504-508 | 62-69 |
| 13. | ಪ್ರಾಚೀನ ಪ್ರಸಾದ | 509-513 | 69-75 |
| 14. | ಅನುಭವ ಪ್ರಮಾಣ | 514- 518 | 75-81 |
| 15. | ಪೂರ್ವಶಾಸ್ತ್ರ - ನವನಾಗರಿಕತೆ | 519- 523 | 81-87 |
| 16. | ಶಾಸ್ತ್ರ ಬೆಳೆಯುತ್ತದೆ | 524-528 | 87-93 |
| 17. | ವ್ಯಕ್ತಿ ಮೌಲ್ಯ | 529-533 | 94-101 |
| 18. | ಸ್ವಾತಂತ್ರ್ಯ ಭಾರ | 534-538 | 101-107 |
| 19. | ಮಾನುಷ ತರ್ಕ | 539-543 | 107-113 |
| 20. | ಮನಸ್ಸು ಬುದ್ಧಿಗಳ ಮಹಿಮೆ | 544-548 | 114-121 |
| 21. | ಸಮನ್ವಯ ನ್ಯಾಯ | 549-553 | 121-127 |
| 22, | ಅಂತಜ್ಯೋ೯ತಿ | 554-558 | 127-133 |
| 23. | ಜಗದಶ್ವತ್ಥ | 559-563 | 133-139 |
| 24, | ಗುಣ ವಿಕಾಸ | 564-568 | 139-145 |

| | | | |
|---|---|---|---|
| 25. | ಪ್ರತಿಭಾಂಕುರ | 569 - 573 | 145-151 |

| ಕ್ರಸಂ. | ವಿಷಯ | ಮುಕ್ತಕ ಸಂಖ್ಯೆ | ಪುಟ ಸಂಖ್ಯೆ |
|---|---|---|---|
| 26. | ಪೌರುಷ ಮಿತಿ | 574-578 | 151-157 |
| 27. | ಬೆನ್ನಿಗೆ ತಕ್ಕ ಭಾರ | 579 - 583 | 157-164 |
| 28. | ಜೀವನ ಮಾಗಲಿ | 584-588 | 164-171 |
| 29. | ಪುರುಷತನವೇ ವಿಜಯ | 589-593 | 171-177 |
| 30. | ಯತ್ನ ದೈವಿಕ | 594-598 | 177-184 |
| 31. | ಬ್ರಹ್ಮ ನಾಯಕ | 599-602 | 184-189 |
| 32. | ಸಂಸಾರ ಪಾಕ | 603-608 | 189-197 |
| 33. | ಲೌಕಿಕ ತಪಸ್ಸು | 609 - 612 | 197-202 |
| 34. | ಹೃದಯ ಮಂಥನ | 613 - 618 | 202-209 |
| 35. | ಧರ್ಮ ನಿರ್ಣಯ | 619 - 623 | 210-215 |
| 36. | ಆತ್ಮ ಋಣ ಮನೆಯೆ ಮಠ | 624-628 | 216-222 |
| 37. | ಕಷ್ಟ ವೈವಿಧ್ಯ | 629-633 | 222-228 |
| 38. | ಹಣೆಯ ಬರಹ | 634 638 | 228-235 |
| 39. | ವಾಯಸ ವ್ರತ | 639-642 | 235-240 |
| 40. | ಆತ್ಮ ಚಿಕಿತ್ಸೆ | 643-648 | 240-248 |
| 41. | ಬಾಗಿಸದಿರಾತ್ಮವನು | 649- 653 | 248-254 |
| 42. | ಹೆಸರಿನ ಹಂಬಲ | 654-658 | 254-261 |
| 43. | ಗರ್ವ ಭಂಗ | 659 - 662 | 261-266 |
| 43. | ಎರಡು ಲೆಕ್ಕ | 663- 668 | 266-274 |
| 44. | ಮುಗಿವೇ ಭಾಗ್ಯ | 669-674 | 274-282 |
| 45. | ಸ್ವಾರಸ್ಯ ಮಿತ | 675 - 678 | 282-287 |
| 46. | ಜಾಣ ಹಿರಿಯ | 679-683 | 287-294 |

| | | | |
|---|---|---|---|
| 47. | ಮರೆವು - ಶಿವ ಕೃಪೆ | 684-688 | 295-301 |
| 48. | ಏಕಾಕಿ ಮನಸ್ಸಾಕ್ಷಿ | 689-693 | 301-307 |
| 49. | ತೃತೀಯ ನೇತ್ರ | 694-698 | 308-314 |
| 50. | ಎರಡು ಕೋಣೆಗಳು | 699-700 | 314-317 |


## ಮುನ್ನುಡಿ

'ಡಿ.ವಿ.ಜಿ.' ಎಂಬ ಸಂಕೇತಾಕ್ಷರಗಳಿಂದ ಖ್ಯಾತರಾದ ಡಾ॥ ಡಿ. ವಿ. ಗುಂಡಪ್ಪನವರು ರಚಿಸಿದ 'ಮಂಕುತಿಮ್ಮನ ಕಗ್ಗ' ಇಪ್ಪತ್ತನೇ ಶತಮಾನದ ಉತ್ತರಾರ್ಧದ ಕನ್ನಡ ಕೃತಿಗಳಲ್ಲಿ ಅತ್ಯಂತ ವಿಶಾಲ ಜನಾದರಣೆಯನ್ನು ಪಡೆದ ಕೃತಿ ಎಂಬ ಸಂಗತಿಯು ವಿವಾದಾತೀತವಾಗಿ ಸಿದ್ಧಪಟ್ಟಿದೆ. ನಿತ್ಯಜೀವನದಲ್ಲಿ ಎದುರಾಗುವ ಯಾವುದೇ ಸಮಸ್ಯೆಯ ಪ್ರಸಕ್ತಿ ಬಂದಾಗಲೂ, ಹಲವಾರು ವೈಪರೀತ್ಯಗಳಿಂದ ಕೂಡಿದ ಜಗತ್ತಿನ ವಿಷಯದಲ್ಲಿ ಸಾಮಾನ್ಯ ವ್ಯಕ್ತಿಯೊಬ್ಬನು ಯಾವ ಮನೋಭಂಗಿಯನ್ನು ಬೆಳೆಸಿಕೊಳ್ಳುವುದು, ನೆಮ್ಮದಿಗೆ ದಾರಿ ಮಾಡಬಹುದೆಂಬುದರ ಪ್ರಸಕ್ತಿ ಬಂದಾಗಲೂ, ಸರ್ವವಿದಿತ ಪೌರಾಣಿಕಾಖ್ಯಾನಗಳಿಂದ ಮತ್ತು ಐತಿಹಾಸಿಕ- ಸಾಹಿತ್ಯಕ ಸಂದರ್ಭಗಳಿಂದ ನಾವು ಕಲಿಯಬಹುದಾದ ಪಾಠಗಳು ಏನೆಂದು ಚಿಂತಿಸುವಾಗಲೂ, ಪರಸ್ಪರ ವಿರುದ್ಧಗಳಂತೆ ತೋರುವ (ಉದಾಹರಣೆ: ಸಂಪ್ರದಾಯ ಮತ್ತು ಆಧುನಿಕತೆ, ಶ್ರದ್ಧೆ ಮತ್ತು ವೈಚಾರಿಕತೆ, ಇತ್ಯಾದಿ) ದ್ವಂದ್ವಗಳ ನಡುವೆ ಸಮನ್ವಯ ಕುರಿತು ಚಿಂತಿಸುವಾಗಲೂ, ಹೀಗೆ ಜೀವನದ ಪ್ರಮುಖ ಸನ್ನಿವೇಶಗಳಲ್ಲಿ ನೆರವನ್ನೀಯುವ ಹಿತವಚನಗಳ ಒಟ್ಟಿಲು 'ಮಂಕುತಿಮ್ಮನ ಕಗ್ಗ. ಇದಿಷ್ಟು ಪ್ರಯೋಜಕತೆಯ ಮಾತಾಯಿತು. ಎರಡನೆಯದಾಗಿ, ಇಂದಿನವರಿಗೆ ಅತ್ಯಂತ ಉಪಕಾರಕವಾದ ಈ ಹಿತಬೋಧನೆಯನ್ನು ಕಾವ್ಯಮುಕ್ತಕಗಳಾಗಿ ಪದ್ಯರೂಪದಲ್ಲಿ ನಿವೇಶನಗೊಳಿಸಿರುವುದರಿಂದ ಲಬ್ಧವಾಗಿರುವ ಸ್ಮರಣಾನುಕೂಲತೆ, ಮೇಲಿನ ಎರಡೂ ಲಾಕ್ಷಣಿಕ ಅಂಶಗಳು. ಇವೆರಡಕ್ಕೂ ಮೀರಿದ ಒಂದು ಅನನ್ಯತೆ 'ಮಂಕುತಿಮ್ಮನ ಕಗ್ಗ'ದಲ್ಲಿದೆ. ಅದೆಂದರೆ, ಈ ಇಡೀ ಕೃತಿಯ ಅಂತಃಶ್ರುತಿಯಂತೆ ಓದುಗರನ್ನು ತನ್ನೆಡೆಗೆ ಸೆಳೆದುಕೊಳ್ಳುವ ಸ್ನೇಹಧ್ವನಿ. ಇಲ್ಲಿಯ ಅನೇಕ ಉಕ್ತಿಗಳು ಉನ್ನತ ಪಾಂಡಿತ್ಯದಿಂದ, ಶಾಸ್ತ್ರಾಧ್ಯಯನದಿಂದ ಮತ್ತು ಗಾಢ ಲೋಕಾನುಭವದಿಂದ ಜನಿತವಾದವು. ಆದರೆ ಕೃತಿಯಲ್ಲಿ ಎಲ್ಲಿಯೂ 'ನಾನು ಜ್ಞಾನಿ', ಅನುಭವಿ; ನನ್ನ ಮಾತನ್ನು ನೀವೆಲ್ಲ ಕೇಳಿರಿ' ಎಂಬಂತಹ ಠೇಂಕಾರದ ಧ್ವನಿ ಇಲ್ಲ. ಪ್ರತಿಯಾಗಿ ಪದ್ಯಗಳುದ್ದಕ್ಕೂ ಎದ್ದು ಕಾಣುವುದು 'ನಾನು ನಿಮ್ಮಂತಹ ಒಬ್ಬ ಸಾಮಾನ್ಯ; ನಿಮ್ಮಂತೆ ನಾನೂ ಬವಣೆಪಟ್ಟವನು, ನಮ್ಮ ಅನುಭವಗಳನ್ನು ಹಂಚಿಕೊಳ್ಳೋಣ' ಎಂಬ

ರೀತಿಯ ನಮ್ರತೆಯಿಂದಲೂ ಮೈತ್ರಿಭಾವದಿಂದಲೂ ಕೂಡಿದ ಪ್ರೇಮಳತೆ, ಲಕ್ಷಾಂತರ ಜನರಿಗೆ 'ಕಗ್ಗ'ದಿಂದ ಸಾಂತ್ವನವೂ ಸಮಾಧಾನವೂ ದೊರೆಯುತ್ತಿರುವುದು ಈ ಆದ್ರತೆಯಿಂದ. ಇದರಿಂದಾಗಿ ಅಸಂಖ್ಯ ಜನರ ಬಾಳಿನಲ್ಲಿ ಓರ್ವ ಆತ್ಮೀಯ ಸ್ನೇಹಿತನ ಸ್ಥಾನವನ್ನು 'ಕಗ್ಗ ಪಡೆದುಕೊಂಡಿದೆ.

ವರ್ಷಗಳು ಕಳೆದಂತೆ 'ಕಗ್ಗ'ದ ಜನಪ್ರಿಯತೆ ನೂರ್ಮಡಿಯಾಗಿ ಹೆಚ್ಚುತ್ತಿರುವುದು ಸಾಹಿತ್ಯಲೋಕದ ಒಂದು ವಿಸ್ಮಯ. ಕಳೆದ ಅರ್ಧ ಶತಮಾನದುದಕ್ಕೂ ಗ್ರಂಥಗಳಲ್ಲಿ, ಲೇಖನಗಳಲ್ಲಿ, ಉಪನ್ಯಾಸಗಳಲ್ಲಿ, ಚಿಂತನಗೋಷ್ಠಿಗಳಲ್ಲಿ 'ಕಗ್ಗ'ದ ಪದ್ಯಗಳಷ್ಟು ಅಧಿಕವಾಗಿ ಮೇಲಿಂದ ಮೇಲೆ ಉತ್ಕೃತಗೊಳ್ಳುತ್ತ ಬಂದಿರುವ ಉಕ್ತಿಗಳು, ಬೇರೆ ಇಲ್ಲ. 'ಕಗ್ಗ' ನಮ್ಮ ಜನತೆಯ ಮನದಾಳದ ಯಾವುದೋ ಆಕಾಂಕ್ಷೆಗಳಿಗೆ ಸಮಾಧಾನ



ನೀಡಲು ಶಕ್ತವಾಗಿದೆ ಎನ್ನಲು ಈ ವಿಶಾಲ ಜನಾದರಣೆಗಿಂತ ಬೇರೆ ಪುರಾವೆಯ ಅಗತ್ಯ ಇಲ್ಲ. ಯಾವ ರೀತಿಯ ಸಾಂತ್ವನಕ್ಕಾಗಿ ಜನತೆ ಕಾದಿದ್ದಿತೋ ಅದು 'ಕಗ್ಗ'ದಿಂದ ಲಬ್ದವಾಯಿತೆಂಬುದು ಸ್ಪಷ್ಟವಿದೆ. ಹೀಗೆ ಸಾಹಿತ್ಯಕೃತಿಯೊಂದು ಜನಸಾಮಾನ್ಯರಿಗೆ ಆಪ್ತವಾಗುವುದು ವಿರಳವಾಗಿಯಷ್ಟೆ ನಡೆಯುವ ವಿದ್ಯಮಾನ.

ಈ ಹಿನ್ನೆಲೆಯಲ್ಲಿ 'ಕಗ್ಗ'ದ ಹಲವಾರು ಗದ್ಯಾನುವಾದಗಳೂ, ಅವಲೋಕನಗಳೂ, ವ್ಯಾಖ್ಯಾನಗಳೂ ಪರಾಮರ್ಶನಗಳೂ ಬಂದಿರುವುದು ಮತ್ತು ಈಗಲೂ ಬರುತ್ತಿರುವುದು ಸಹಜವೇ ಆಗಿದೆ. ಈ ಬಗೆಬಗೆಯ ಅನುಕೃತಿಗಳೂ ವಿಶಾಲ ಪ್ರಸಾರವನ್ನು ಪಡೆದುಕೊಂಡಿವೆ ಎಂಬುದು ಡಿ.ವಿ.ಜಿ.ಯವರ ಮೂಲಕೃತಿಯ ಸತ್ಯವಂತಿಕೆಗೆ ಸಾಕ್ಷ್ಯವಾಗಿದೆ. 'ಕಗ್ಗ'ವನ್ನು ಕುರಿತು ವಿವಿಧೆಡೆಗಳಲ್ಲಿ ಪದೇಪದೇ ನಡೆಯುವ ವಾಚನ- ವ್ಯಾಖ್ಯಾನ-ಪ್ರವಚನಗಳೂ ವಿಶಾಲ ಪ್ರಮಾಣದ ಶೋತೃಗಳನ್ನು ಆಕರ್ಷಿಸಿವೆ. ಮುದ್ರಿತ ರೂಪದಲ್ಲಿ ಮಾತ್ರವಲ್ಲದೆ, ವಿದ್ಯುನ್ಮಾನ ಮಾಧ್ಯಮದ ಮೂಲಕವೂ 'ಕಗ್ಗ'ವನ್ನು ಕುರಿತ ವ್ಯಾಖ್ಯಾನಗಳನ್ನು ದೂರದ ಪ್ರದೇಶಗಳ ಮತ್ತು ವಿದೇಶಗಳ ಸಹಸ್ರಾರು ಸಾಹಿತ್ಯ ಪ್ರೇಮಿಗಳು ಆಸ್ವಾದಿಸುತ್ತಿದ್ದಾರೆ. ಈ ಹಿಂದೆಯೇ ಹಲವಾರು ಅನುವಾದ ಅಥವಾ ಅವಲೋಕನ ಕೃತಿಗಳು ಪ್ರಕಟಗೊಂಡಿದ್ದರೂ ಹೊಸ ಕೃತಿಗಳಿಗೂ ಸ್ವಾಗತ ದೊರೆಯುತ್ತಿದೆ.

ಹೀಗೆ ವರ್ಧಿಸುತ್ತ ಸಾಗಿರುವ 'ಕಗ್ಗ ವಾಙ್ಮಯಕ್ಕೆ ಇದೀಗ ಸೇರ್ಪಡೆಯಾಗುತ್ತಿರುವುದು, ನನ್ನ ಮಿತ್ರರೂ ಮೌಲಿಕ ಸಾಹಿತ್ಯದ ಅಭ್ಯಾಸಿಗಳೂ ಅಧ್ಯಯನಶೀಲರೂ ಆದ ಶ್ರೀ ರವಿ ತಿರುಮಲೈ ರಚಿಸಿರುವ 'ಕಗ್ಗ- ರಸಧಾರೆ' ಎಂಬ ಶೀರ್ಷಿಕೆಯ ನೂತನ ವ್ಯಾಖ್ಯಾನ.

ಕಗ್ಗ'ದ ಒಂದೊಂದು ಮುಕ್ತಕದಲ್ಲಿಯೂ ಜಗದ್ವಿಶಾಲವಾದ ಭಾವನಾ ಪ್ರಪಂಚವು ಘನೀಕೃತವಾಗಿದೆ. ಅಲ್ಲಿಯ ಶಬ್ದಗಳ ವಾಚ್ಯಾರ್ಥದ ಹತ್ತುಪಟ್ಟು ವಿಸ್ತೃತಾರ್ಥವು ಅಲ್ಲಿಯ ಮಾತುಗಳ ಹಿಂದಿನ ಧ್ವನಿಮೆಯಲ್ಲಿ ಸ್ಫೋಟಗೊಳ್ಳುತ್ತದೆ. ಹೀಗೆ ಒಳಹೊಕ್ಕಷ್ಟೂ ಹೆಚ್ಚುಹೆಚ್ಚು ಅರ್ಥಸೂಕ್ಷ್ಮಗಳು ಪ್ರಕಟಗೊಳ್ಳುತ್ತ ಹೋಗುತ್ತವೆ. ಭೌತಶಾಸ್ತ್ರದ ಪರಿಭಾಷೆಯಲ್ಲಿ ಹೇಳುವುದಾದರೆ 'ಕಗ್ಗ'ದ ಉಕ್ತಿಗಳು 'ಸ್ಟಾಟಿಕ್ `ರೀತಿಯವಲ್ಲ, ಅವು "ಡೈನಾಮಿಕ್' ರೀತಿಯವು, ಎಂದರೆ ಸಂಚಲನಾಶೀಲವಾದವು. ಈ ವೈಶಿಷ್ಟ್ಯದಿಂದಾಗೆಯೇ ಸಹೃದಯ ಓದುಗರಿಗೆ ಈ ಪದ್ಯಗಳಿಂದ ದೊರೆಯುವ ಒಡನಾಟವು ಪ್ರವಾಹರೂಪದ್ದೂ, ಸಾತತ್ಯಗುಣವುಳ್ಳದ್ದೂ ಆಗಿದೆ. ಮನನಮಾಡಿ ಧ್ಯಾನಿಸಿದೆಂತೆಲ್ಲ ಹೆಚ್ಚುಹೆಚ್ಚು ಅರ್ಥಸೂಕ್ಷ್ಮಗಳು ಹೊಳೆಯುತ್ತಾ ಹೋಗುತ್ತವೆ.

ಈ ಸತ್ತ್ವವಂತಿಕೆಯ ಕಾರಣದಿಂದ 'ಕಗ್ಗ'ವನ್ನು ಕುರಿತು ಈಗಾಗಲೇ ಹಲವಾರು ಕೃತಿಗಳು ಹೊರಬಂದಿದ್ದರೂ ನೂತನ ಅರ್ಥಶೋಧಗಳಿಗೆ ಸದಾ ಅವಕಾಶ ಉಳಿದೇ ಇರುತ್ತದೆ. ಕೃತಿಯ ಬಳಿಸಾರುವ ಜಿಜ್ಞಾಸುಗಳ ವ್ಯುತ್ಪತ್ತಿಗೂ ಮತ್ತು ಭಂಗ್ಯಂತರಕ್ಕೂ ಅನುಗುಣವಾಗಿ ಒಂದೊಂದು ಅನುಕೃತಿಗೂ ಅದರದ್ದೇ ವೈಶಿಷ್ಟ್ಯವಿರುವುದು ಸಾಧ್ಯವಿದೆ. ಅದರಂತೆ ಪ್ರಕೃತ 'ಕಗ್ಗರಸಧಾರೆ' ವ್ಯಾಖ್ಯಾನ ಕೃತಿಯಲ್ಲಿ ಶ್ರೀ ರವಿ ತಿರುಮಲೈ ಅವರು ಒಂದು ವಿನೂತನ ಪ್ರಸ್ಥಾನವನ್ನು ಸಂಯೋಜಿಸಲು ಯತ್ನಿಸಿದ್ದಾರೆ. ಇಲ್ಲಿ ಪ್ರತಿ ಪದ್ಯದ ಪದವಿಭಾಗ, ಅಲ್ಲಲ್ಲಿ ಕಠಿಣ ಶಬ್ದಾರ್ಥ ಇದ್ದು ಅನಂತರ ಇಂಗಿತಾರ್ಥದ ವ್ಯಾಖ್ಯೆ ಇದೆ.

ಈ ವ್ಯಾಖ್ಯಾನವನ್ನು ಶ್ರೀಯುತರು ನಾಲ್ಕು ಸಂಪುಟಗಳಲ್ಲಿ ಪ್ರಕಟಗೊಳಿಸಲಿಚ್ಛಿಸಿ, ಈಗಾಗಲೇ ಮುಕ್ತಕ 1 ರಿಂದ 200 ರ ವರೆಗಿನ ಮುಕ್ತಕಗಳನ್ನೊಳಗೊಂಡ 'ಮೊದಲ' ಸಂಪುಟವನ್ನೂ ಮತ್ತು 201-450 ಮುಕ್ತಕಗಳನ್ನೊಳಗೊಂಡ ಎರಡನೆಯ ಸಂಪುಟವನ್ನೂ ಹೊರತಂದಿದ್ದಾರೆ. ಪ್ರಸ್ತುತ ಪ್ರಕಟವಾಗುತ್ತಿರುವುದು 451 ರಿಂದ 700 ನೇ ಮುಕ್ತಕಗಳನ್ನೊಳಗೊಂಡ 'ಕಗ್ಗ-ರಸಧಾರೆ'ಯ ಮೂರನೆಯ ಸಂಪುಟ.

ಅಭಿಜಾತ ಸಾಹಿತ್ಯದ ವ್ಯಾಸಂಗದ ಹಿನ್ನೆಲೆ ಇದ್ದವರಿಗೆ ಪರಿಚಯವೇ ಆಗಿದ್ದರೂ ಅಂತಹ ಹಿನ್ನೆಲೆ ಇಲ್ಲದವರಿಗೆ ಸುಗಮವಾಗಲೆಂಬ ದೃಷ್ಟಿಯಿಂದ ಪದ್ಯಗಳಲ್ಲಿನ ಗ್ರಾಂಥಿಕ ಪ್ರಯೋಗಗಳಿಗೆ ಹೊಸಗನ್ನಡ ಆಡುಭಾಷೆಯ ವಿವರಣೆಗಳನ್ನು ಇಲ್ಲಿ ಕೊಡಲಾಗಿದೆ. ಉದಾಹರಣೆ: ಕಗ್ಗ-135ರಲ್ಲಿ ಸಾಮಾನ್ಯ ಓದುಗರಿಗೆ ಸುಬೋಧವಲ್ಲದ 'ಶಂಪಾತರಂಗ' ಎಂದರೆ ಮಿಂಚಿನ ಅಲೆಗಳು ಎಂಬ ಮತ್ತು 'ಧಂಭೋಳಿ' ಎಂದರೆ ವಜ್ರಾಯುಧ ಎಂಬ ವಿವರಣೆ ಸೇರಿಸಲಾಗಿದೆ. ಮೂಲ ಪದ್ಯದೊಳಗಿನ ಉಲ್ಲೇಖಗಳ ಮತ್ತು ರೂಪಕಗಳ ಅರ್ಥದ ಗ್ರಹಿಕೆಗೆ ಪೂರಕವಾಗುವಂತೆ ಭೌತಜಗತ್ತಿನ ಮತ್ತು ಮಾನವ ಜೀವನದ ಸನ್ನಿವೇಶಗಳ ವಿವರಗಳನ್ನು ಅಳವಡಿಸಿರುವುದು ಪ್ರಾರಂಭಿಕ ಸ್ತರದ ವಾಚಕ ಸಮುದಾಯಕ್ಕೆ ಪ್ರಯೋಜಕವಾಗಿದೆ. ಅಲ್ಲಲ್ಲಿ ಸಮಾಂತರ ಆಶಯದ ಪೂರ್ವಸಾಹಿತ್ಯೋಲ್ಲೇಖಗಳನ್ನು ನೀಡಲಾಗಿದೆ. ಇಲ್ಲಿಯ ಉಕ್ತಿಗಳು ಪ್ರತಿಫಲಿಸುವ ದಾಸಸಾಹಿತ್ಯದ ಉದ್ಧತಗಳನ್ನು ಹಲವಾರೆಡೆ ಕೊಡಲಾಗಿದೆ. ಭೌತವಿಶ್ವದ ರಚನೆಯ ವಿಸ್ಮಯಗಳ ಅವಲೋಕನವೇ ಹೇಗೆ ತತ್ತ್ವಬೋಧಕವಾಗಬಲ್ಲದೆಂಬುದನ್ನು ಹಲವಾರೆಡೆ ಸೂಚಿಸಲಾಗಿದೆ. ಉದಾಹರಣೆಗೆ : ಅಮಿತಪ್ರಪಂಚಾಕುಂಚನಾವರ್ತನ ಎಂಬ (ಕಗ್ಗ-91) ಸೂತ್ರರೂಪ ಪದಗುಚ್ಛವನ್ನು ಬೀಜದಿಂದ ಮರವಾಗುವ ಪ್ರಕ್ರಿಯೆಯ ಮತ್ತು ರೇಷ್ಮೆಹುಳುವಿನ ಜೀವನಚಕ್ರದ ನಿದರ್ಶನ ನೀಡಿ ಪುಷ್ಟಿಕರಿಸಲಾಗಿದೆ. ಕಗ್ಗ-147ರಲ್ಲಿ ಒಮ್ಮೆ ಮೋಹಕವೆನಿಸಿ ಅನಂತರ ಮೈಮರೆತರೆ ಅಧಃಪತನಕಾರಿಯಾಗುವ ಮಾಯೆಯ ಸ್ವರೂಪವನ್ನು ವರ್ಣಿಸುವಲ್ಲಿ ಜೀವನನಿರ್ವಹಣೆಯಲ್ಲಿ ಅಂತರ್ವಿವೇಚನೆಗೆ ಇರಬೇಕಾದ ಮುಖ್ಯ ಸ್ಥಾನವನ್ನು ವಿವರಿಸಲಾಗಿದೆ. ಕರವೆರಡರದೃಷ್ಟಕ್ಕೆ' ಎಂಬ ಕಗ್ಗ-158ರಲ್ಲಿ ಅಧ್ಯಾಹೃತವಾಗಿರುವ ಹಸ್ತಸಾಮುದ್ರಿಕ ವಿವರವನ್ನು ಲೇಖಕರು ಸ್ಫುಟಗೊಳಿಸಿದ್ದಾರೆ. ಕಗ್ಗ-162ರಲ್ಲಿ 'ಬಿಗಿಯದಿರು ನೀಂ ಬೀಗಿ' ಎಂಬ ವಾಕ್ಯಖಂಡಿಕೆಯಲ್ಲಿ ಹುದುಗಿರುವ ಶರಣಾಗತಿತ್ತ್ವದ ಉಪಾದೇಯತೆಯನ್ನು ಕಂಠೋಕ್ತಗೊಳಿಸಿದ್ದಾರೆ. ಕಗ್ಗ-185ರಲ್ಲಿ 'ಹೃದಯಜೀವನಕಿನಿತು ಬೆಲೆಯಿರದೇ?' ಎಂಬ ಮಾತುಗಳ ಆಶಯವನ್ನು ಸಾಂಪ್ರತಕಾಲದ ಕೇವಲ ವ್ಯವಹಾರ ಪ್ರಧಾನವೂ ಮೌಲ್ಯದೂರವೂ ಆದ ರೀತಿ-ನೀತಿಗಳ ಪ್ರಸ್ತಾಪದ ಮೂಲಕ ಮೊದಲ ಸಂಪುಟದಲ್ಲಿ ಸ್ಪಷ್ಟಗೊಳಿಸಿದ್ದಾರೆ.

ಇನ್ನು ಎರಡನೇ ಸಂಪುಟದಲ್ಲಿ ಅದೇ ಧಾಟಿಯನ್ನು ಮುಂದುವರೆಸುತ್ತಾ ಮುಕ್ತಕ 201 ರಲ್ಲಿ ದುರ್ಯೋಧನನ ದೃಷ್ಟಾಂತದಿಂದ ಮಾನವರಲ್ಲಿರುವ ಅಸೂಯೆಯನ್ನು', ಮುಕ್ತಕ 231ರಲ್ಲಿ ಬದುಕನ್ನು ಹೇಗೆ ನೋಡಬೇಕು ಎನ್ನುವ

ಸತ್ಯವನ್ನು, ಮುಕ್ತಕ 234 ರಲ್ಲಿ ಅನ್ಯಾಯ ವಿಕಟಗಳೆನಿತೋ ಸೃಷ್ಟಿ ಕ್ರಮದಿ ಎಂದು ಪರಮಾತ್ಮನ ಸೃಷ್ಟಿಯನ್ನೇ ಪ್ರಶ್ನಿಸುವ ಮನುಷ್ಯನ ವಿಚಿತ್ರ ಮನೋಭಾವವನ್ನೂ, ಮುಕ್ತಕ 270ರಲ್ಲಿ ಸಮಾಜದಲ್ಲಿರಬೇಕಾದ 'ಏಕಾತ್ಮತಾ ' ಭಾವದ ಅವಶ್ಯಕತೆಯನ್ನೂ, ಮುಕ್ತಕ 304ರಲ್ಲಿ " ಗ್ರೀಕ್ ದೇಶದ ಸಿಸಿಫಸ್ ನ ಕಥೆಯನ್ನೂ ದೃಷ್ಟಾಂತವಾಗಿ ನೀಡುತ್ತಾ ಮಾನವ ಪ್ರಯತ್ನದ ಮಿತಿಗಳನ್ನೂ, ವಿಶಧೀಕರಿಸುತ್ತ, ವ್ಯಾಖ್ಯಾನವನ್ನು ಮುಂದುವರೆಸಿದ್ದಾರೆ. ಹೀಗೆ 'ಕಗ್ಗ' ದ ಪದ್ಯಗಳ ಆಶಯದ ತಳಹದಿಯಾಗಿರುವ



ಸತರ್ಕ ಚಿಂತನ ವಿನ್ಯಾಸದ ಹಂತಗಳನ್ನು ಸ್ಪುಟಗೊಳಿಸುವ ರೀತಿಯಲ್ಲಿ 'ಕಗ್ಗ -ರಸಧಾರೆ " ವ್ಯಾಖ್ಯಾನ ರೂಪುಗೊಂಡಿದೆ.

ಮೂರನೆಯ ಸಂಪುಟದದಲ್ಲಿ ತಮ್ಮ ವ್ಯಾಖ್ಯಾನವನ್ನು ಮುಂದುವೆರೆಸುತ್ತಾ ಶ್ರೀ ರವಿ ತಿರುಮಲೈಯವರು, ಮುಕ್ತಕ 462 ರಲ್ಲಿ ಬದುಕಿನಲ್ಲಿ ನಮ್ಮ ಅಸ್ತಿತ್ವವನ್ನು, ಒಂದು ನಿರಂತರ ನೂತ್ನತೆಯನ್ನು ಕಾಪಾಡಿಕೊಳ್ಳುವ ಒಂದು ಅಶ್ವತ್ಥ ಮರದ ಎಲೆಗಳಿಗೆ ಹೋಲಿಸಿ, ಅವುಗಳು ಹೇಗೆ ಮರಕ್ಕೆ ಪೂರಕವಾಗಿದ್ದು ತಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಳ್ಳುತ್ತದೆಯೋ, ಹಾಗೆಯೇ ಬದುಕಿನಲ್ಲಿ ಮನುಷ್ಯನ ಕರ್ತವ್ಯದ ಒಂದು ಆಯಾಮವನ್ನು ವಿಶಧೀಕರಿಸಿದ್ದಾರೆ. ಮುಕ್ತಕ 527ರಲ್ಲಿ ಕತ್ತಲಲ್ಲಿ ದಾರಿ ಸಾಗಿಸಬೇಕಾದರೆ ಒಂದು ದೀವಿಗೆ ಇದ್ದರೆ ಸಾಕು. ಹಾಗೆಯೇ ಅಜ್ಞಾನವೆಂಬ ಕತ್ತಲೆಯಿಂದ ಜ್ಞಾನದ ಕಡೆಗೆ ಹೋಗಬೇಕಾದರೆ ನಮ್ಮ ಮನಸ್ಸು ಬುದ್ಧಿಗಳೇ ನಮಗೆ ದೀವಿಗೆಯಾಗಬೇಕು ಎಂದು, ಮುಕ್ತಕ 566 ರಲ್ಲಿ, ಮಾನವ ತನ್ನನ್ನು ಎಷ್ಟೇ ವಿಕೃತಗೊಳಿಸಿದರೂ ತನ್ನನ್ನು ತಾನು ಸರಿಪಡಿಸಿಕೊಳ್ಳುವ ಮತ್ತು ಕಾಪಾಡಿಕೊಳ್ಳುವ ಶಕ್ತಿ ಪ್ರಕೃತಿಗಿದೆ, ಪ್ರಕೃತಿ ಮುನಿದರೆ ಮನುಷ್ಯನ ಬಾಳು ದುಸ್ತರವಾಗುತ್ತದೆನ್ನುವುದಕ್ಕೆ ಹಲವಾರು ನಿದರ್ಶನಗಳಿವೆ ಎಂದು ಹೇಳಿ ಮನುಷ್ಯನಿಗೆ ಕಿಂಚಿತ್ತಾದರೂ ವಿವೇಕವಿದ್ದರೆ, ಪ್ರಕೃತಿಯಲ್ಲಿ ಒಂದಾಗಿ ಸಹಜತೆಯಿಂದ ಬಾಳಿದರೆ ಸುಖವೆನ್ನುತ್ತಾ, ಮುಕ್ತಕ 621 ರಲ್ಲಿ ಮನುಷ್ಯ ಎಲ್ಲ ಸುಖ ಸಂಪತ್ತುಗಳೂ ನನ್ನದೇ ಆಗಬೇಕು' ಎನ್ನುವ ಸಂಪೂರ್ಣ ಸ್ವಾರ್ಥ ಮನೋಭಾವ ಬಿಡದ ಹೊರತು ಒಟ್ಟು ಸಮಾಜದ ಹಿತವಾಗುವುದೇ ಇಲ್ಲ. ವೈಯಕ್ತಿಕವಾಗಿ ಬದಲಾವಣೆ ಬಂದಾಗ ಅದು ಇಹದ ಬದುಕನ್ನು ಸುಖವಾಗಿಸಿ, ಪಾರಮಾರ್ಥಿಕ

ಪ್ರಯಾಣವೂ ಸುಗಮವಾಗಬಹುದು ಎಂದು ಹೇಳಿ, ಮುಕ್ತಕ 685 ರಲ್ಲಿ 'ಕಷ್ಟ ಸುಖಗಳ ಜನನ ಮರಣಗಳ ವೃತ್ತದಿಂದ ನಮಗೆ ಬಿಡುಗಡೆಯೇ ಇಲ್ಲ. ಆದರೆ, ನೆನಪುಗಳೆಲ್ಲ ಮಾಸಿ ಪ್ರತಿ ಬಾರಿಯೂ ಒಂದು ಹೊಸತನವನ್ನು ಹೊತ್ತು ಹೊಸ ಜೀವನವನ್ನು ಮಾಡುವ ಸದವಕಾಶ ಸಂತಸದ ವಿಷಯವೇ ಅಲ್ಲವೇ? ಎಂದು ಹೇಳುತ್ತಾ ಆತ್ಮದ ಪ್ರಯಾಣದಲ್ಲಿ ಹೊರೇ ಕಡಿಮೆಯಾದರೆಷ್ಟೆ ಸುಖ ಎನ್ನುವುದನ್ನು ಸ್ಪಷ್ಟಿಕರಿಸಿದ್ದಾರೆ.

ಹೀಗೆ 'ಕಗ್ಗ'ದ ಪದ್ಯಗಳ ಆಶಯದ ತಳಹದಿಯಾಗಿರುವ ಸತರ್ಕ ಚಿಂತನ ವಿನ್ಯಾಸದ ಹಂತಗಳನ್ನು ಸ್ಫುಟಗೊಳಿಸುವ ರೀತಿಯಲ್ಲಿ ಪ್ರಕೃತ 'ಕಗ್ಗರಸಧಾರೆ' ಯ ಮೂರನೆಯ ಸಂಪುಟದ ವ್ಯಾಖ್ಯಾನವು ರೂಪುಗೊಂಡಿದೆ.

ಶ್ರೀ ರವಿ ತಿರುಮಲೈ ಅವರ ಈ ಶ್ರದ್ಧಾಪೂರ್ವಕ ಸಾಹಿತ್ಯ ಕೈಂಕರ್ಯಕ್ಕಾಗಿ ಅವರನ್ನು ಅಭಿನಂದಿಸುತ್ತ ಈ ನೂತನ ವ್ಯಾಖ್ಯಾನಕ್ಕೆ ವಾಚಕರ ಪ್ರೋತ್ಸಾಹವೂ ಸಹೃದಯ ಸ್ಪಂದನವೂ ದೊರೆಯಲೆಂದು ಹಾರೈಸುತ್ತೇನೆ..

**ಡಾ|| ಎಸ್. ಆರ್. ರಾಮಸ್ವಾಮಿ**

# ಪ್ರಸ್ತಾವನೆ

ನಾನು ಸಾಹಿತಿಯೂ ಅಲ್ಲ, ಲೇಖಕನೂ ಅಲ್ಲ. ಹತ್ತಾರು ವಿಧವಾದ ಜೀವನಾನುಭವಗಳನ್ನು ಪಡೆದ ನನಗೆ, ಒಂದು ದಿನ ಶ್ರೀ ಶ್ರೀಕಾಂತರವರು ಸಂಪಾದಿಸಿದ ಪುಸ್ತಕ, ಮಾನ್ಯ ಶ್ರೀ ಡಿ.ವಿ. ಗುಂಡಪ್ಪನವರ "ಮಂಕುತಿಮ್ಮನ ಕಗ್ಗ - ತಾತ್ಪರ್ಯ" ಸಿಕ್ಕಾಗ, ಒಂದು ನಿಧಿಯೇ ಸಿಕ್ಕಂತಾಗಿತ್ತು. ಆ ಸಮಯದಲ್ಲಿ "ಅಂತರ್ಜಾಲದ" ಮುಖಪುಸ್ತಕ(Facebook)ದಲ್ಲಿ ಸಕ್ರಿಯನಾಗಿದ್ದರಿಂದ ಅಲ್ಲಿನ "ಕನ್ನಡ ಬ್ಲಾಗ್ನಲ್ಲಿ ಮಾನ್ಯ ಶ್ರೀ ಡಿ.ವಿ. ಗುಂಡಪ್ಪನವರ ಮಂಕುತಿಮ್ಮನ ಕಗ್ಗ, ಕನ್ನಡ ಸಾಹಿತ್ಯ ಲೋಕದ ಮೇರು ಕೃತಿ. ಆದರೆ ಈ ಕೃತಿಗೆ ಸಾಹಿತ್ಯ ಅಕಾಡಮಿ ಪ್ರಶಸ್ತಿಯೋ ಅಥವಾ ಜ್ಞಾನಪೀಠ ಪ್ರಶಸ್ತಿಯೋ ಲಭ್ಯವಾಗಲಿಲ್ಲ. ಅಕಸ್ಮಾತ್ ಇದಕ್ಕೆ ನೋಬಲ್ ಬಹುಮಾನ ಸಿಕ್ಕಿದ್ದಿದ್ದರೆ 'ನೋಬಲ್'ಗೆ ಹಿರಿಮೆಯಾಗುತ್ತಿತ್ತೇ ಹೊರತು "ಮಂಕುತಿಮ್ಮನ ಕಗ್ಗ"ಕ್ಕಲ್ಲ, ಏಕೆಂದರೆ ಎಲ್ಲ ಹಿರಿಮೆಗಳೂ ಅಡಕವಾಗಿರುವ ಮಂಕುತಿಮ್ಮನ ಕಗ್ಗವನ್ನು ಯಾರಾದರೂ ಕೊಂಡಾಡಿದರೆ ಅದು ಕೊಂಡಾಡುವವರಿಗೆ ಹಿರಿಮೆಯಷ್ಟೇ! 'ವಾಚಕರು ಇಷ್ಟಪಟ್ಟಲ್ಲಿ, ಪ್ರತಿನಿತ್ಯ ಒಂದೊಂದು ಮುಕ್ತಕಕ್ಕೆ ವಿವರಣೆಯನ್ನು ಬರೆಯಲು ಉದ್ಯುಕ್ತನಾಗುತ್ತೇನೆ' ಎಂದು, ಒಂದು ಪ್ರಕಟಣೆಯನ್ನು ಇತ್ತೆ. ಮರುಕ್ಷಣವೇ ಬಹಳಷ್ಟು ಜನ ಸಹೃದಯ ಸದಸ್ಯರು ನನ್ನ ಕೋರಿಕೆಯನ್ನು ಮನ್ನಿಸುತ್ತಾ, ಬರೆಯಬಹುದೆಂದು ಅಪ್ಪಣೆ ಕೊಟ್ಟರು. ಅಂದು ಮೊದಲಾದದ್ದು ಇಂದಿಗೂ ನಡೆದುಕೊಂಡು ಬಂದಿದೆ.

ಬರೆಯಲೇನೋ ಮೊದಲಾದೆ. ಆದರೆ ಮನಸ್ಸಿನ ಒಂದು ಮೂಲೆಯಲ್ಲಿ, ಒಂದು 'ಭಯ' ಎಚ್ಚರಿಸುತ್ತಲೇ ಇತ್ತು. ಕಾಳಿದಾಸ 'ರಘುವಂಶ' ಕಾವ್ಯವನ್ನು ಬರೆಯಲುದ್ಯುಕ್ತನಾದಾಗ ಅವನಿಗೆ ಉಂಟಾದ ಶಂಕೆಗಳ ನನ್ನ ಮನಸ್ಸಿನಲ್ಲೂ ಸುಳಿದಾಡಿದವು. ಕಾಳಿದಾಸ ಬರೆಯುತ್ತಾನೆ, 'ಕ್ವ ಸೂರ್ಯಃ ಪ್ರಭವೋ ವಂಶಃ, ಕ್ವಚಾಲ್ಪ ವಿಷಯಾ ಮತಿಃ ತಿತೀರ್ಶುರ್ದುಸ್ತರಂ ಮೋಹಾತ್ ಉಡುಪೇನಾಸ್ಮಿ ಸಾಗರಂ' ಎಂದು, ಅರ್ಥಾತ್, 'ಎಲ್ಲಿ ಸೂರ್ಯ ಪ್ರಭೆಯಷ್ಟು ಪಾಜ್ವಲ್ಯಮಾನವಾದ ರಘುವಂಶ, ಅಲ್ಪ ವಿಷಯಗಳನ್ನರಿತ ನಾನೆಲ್ಲಿ, ಒಂದು ಸಣ್ಣ ಹರಿಗೋಲಿನ ಸಹಾಯದಿಂದ, ದುಸ್ತರವಾದ ಮತ್ತು ವಿಶಾಲವಾದ ಸಾಗರವನ್ನು ದಾಟಲು ಅತ್ಯಾಸೆಪಡುವವನಂತಿದೆ ನನ್ನ ಸ್ಥಿತಿ' ಎಂದು ಹೇಳುತ್ತಾನೆ.

ಜ್ಞಾನದ ಯಾವ ಭಾಗವನ್ನೂ ಆಳವಾಗಿ ಅಭ್ಯಾಸ ಮಾಡದ, ಅಲ್ಪ ಮತಿಯಾದ ನಾನು ಈ 'ಕಗ್ಗ'ವೆಂಬ ಮಹಾಸಾಗರದಲ್ಲಿ ಈಜಲು ಮತ್ತು ಈಜಿ ದಾಟಲು ಅತಿ ಆಸೆಯಿಂದ ಹೊರಟಂತೆ ಇತ್ತು ನನ್ನ ಪರಿಸ್ಥಿತಿ. ಮೊದಮೊದಲು ಬಹಳ ಅಳುಕಿನಿಂದಲೇ ಬರೆಯಲು ಆರಂಭಿಸಿದೆ. ಗುಂಡಪ್ಪನವರು ಈ ಮುಕ್ತಕಗಳಲ್ಲಿ ಎರಕ ಹೊಯ್ದಿರುವ ವಿಚಾರಗಳನ್ನು ಮನದಾಳಕ್ಕೆ ಇಳಿಸಿಕೊಳ್ಳುತ್ತಾ ನನ್ನ ವಿಚಾರಗಳೂ ವಿಕಾಸಗೊಳ್ಳತೊಡಗಿದವು. ನಾನೂ ಸಹ ಇದನ್ನೊಂದು ಕಲಿಕೆಯ ಮಾಧ್ಯಮವಾಗಿ ಅನುಭವಿಸುತ್ತಾ ಹೋದೆ.

ಇದಕ್ಕೂ ಮುಂಚೆ ನಾ ಆರನೆ ತರಗತಿಯಲ್ಲಿ ಓದುತ್ತಿದ್ದಾಗ, ಮಾನ್ಯ ಡಿ.ವಿ.ಜಿ.ಯವರ 'ವನಸುಮದಲೆನ್ನ ಜೀವನವು ವಿಕಸಿಸುವಂತೆ' ಎನ್ನುವ ಪದ್ಯ ನನ್ನನ್ನು ಬಹಳ ಆಕರ್ಷಿಸಿತ್ತು. ಶ್ರಾವ್ಯವಾಗಿ ಹಾಡುವ



ಪ್ರಯತ್ನವನ್ನೂ ಸಹ ಮಾಡಿದ್ದೆ. ವೇದಾಂತದ ಸಾರವನ್ನು ಆ ಪದ್ಯದ ಸಾಲುಗಳಲ್ಲಿ ಗುಂಡಪ್ಪನವರು ತುಂಬಿ ಬಿಟ್ಟಿದ್ದಾರೆ "ವಿಪುಲಾಶ್ರಯವನೀವ ಸುಫಲ ಸುಮಭರಿತ ಪಾದಪದಂತೆ" ಎಂಬಂತೆ ತಮ್ಮ ಜೀವನವನ್ನೂ ಮಾನ್ಯ ಗುಂಡಪ್ಪನವರು ನಡೆಸಿದರೆಂದೂ ನಾ ಬಲ್ಲೆ. ಅಂತಹ ಮಹನೀಯರು ಬರೆದ ಈ ಮುಕ್ತಕಗಳಿಗೆ, ವಿವರಣೆ ನೀಡುವ ಸೌಭಾಗ್ಯವನ್ನೂ ಅವರೇ ನನಗೆ ದಯ ಪಾಲಿಸಿದ್ದೆಂದು ನಾ ತಿಳಿದಿದ್ದೇನೆ.

ಪ್ರತಿಯೊಬ್ಬರ ಮನಗಳಲ್ಲೂ ಜೀವನವನ್ನು ಕುರಿತು, ಸಹಜವಾಗಿ ಉದ್ಭವವಾಗುವ ಸಾವಿರಾರು ಪ್ರಶ್ನೆಗಳಿಗೆ ಉತ್ತರಗಳು ಸಿಗುತ್ತವೆ, ಈ ಮುಕ್ತಕಗಳಲ್ಲಿ, ಇವುಗಳ ಪಠಣದಿಂದ ಆಧ್ಯಾತ್ಮಿಕವಾಗಿ ನಮಗಿರುವ ಸಂದೇಹಗಳಿಗೆ ಉತ್ತರವನ್ನು ಕಂಡುಕೊಳ್ಳುವ ಉಪಾಯವನ್ನು ನಮಗೆ ಮಾನ್ಯ ಗುಂಡಪ್ಪನವರು ಸೂಚಿಸಿದ್ದಾರೆ. ತತ್ವಶಾಸ್ತ್ರದ ಶಿಖರದಲ್ಲಿ ನಿಂತು, ಅಧಿಕಾರಯುಕ್ತವಾಗಿ ತತ್ವದ ಮತ್ತು ಸತ್ವದ ಸಮಗ್ರ ದರ್ಶನವನ್ನು ನೀಡುವ "ಮಂಕುತಿಮ್ಮನ ಕಗ್ಗ", ಕನ್ನಡ ಸಾಹಿತ್ಯದ ಮೇರುಕೃತಿ ಎಂಬುವುದರಲ್ಲಿ ಸಂದೇಹವೇ ಇಲ್ಲ. ಇದು ತತ್ವಶಾಸ್ತ್ರವಾಗಿ, ದರ್ಶನವಾಗಿ ಮತ್ತು ಅತ್ಯುತ್ತಮ ಸಾಹಿತ್ಯಕ ಕೃತಿಯಾಗಿ ಏಳು ದಶಕಗಳಿಗೂ ಮೀರಿ, ಸಾರ್ವಕಾಲಿಕ ಸತ್ಯವನ್ನು ನಿರಂತರವಾಗಿ ಪ್ರತಿಪಾದಿಸುತ್ತದೆ.

ಡಿ.ವಿ.ಜಿ. ಯವರು ಕ್ಲುಪ್ತವಾಗಿ ಮತ್ತು ಚೊಕ್ಕವಾಗಿ ಬರೆದ ನಾಲ್ಕು ಸಾಲುಗಳಿಗೆ, ವ್ಯಾಖ್ಯಾನವನ್ನು ಪುಟಗಟ್ಟಲೆ ಬರೆಯುವ ಅವಶ್ಯಕತೆ ಏನು?" ಎಂದು ಕೆಲವರು ಕೇಳಿದ್ದೂ ಉಂಟು ಮತ್ತು ನನ್ನ ಮನಸ್ಸಿನಲ್ಲೂ ಅಂತಹ ಸಂದೇಹಗಳು ಬಂದದ್ದು ಉಂಟು. ಈ ಮುಕ್ತಕಗಳಲ್ಲಿ ಹಲವಾರು ಕಡೆ ಹಳೆಗನ್ನಡವನ್ನು ವಿಸ್ತೃತವಾಗಿ ಬಳಸಲ್ಪಟ್ಟಿದೆ. ಇಂದಿನ ಪೀಳಿಗೆಗೆ ಕನ್ನಡವನ್ನು ಓದುವುದೇ ಕಷ್ಟ, ಇನ್ನು ಅವರಿಗೆ ಹಳೆಗನ್ನಡವನ್ನು ಓದುವುದು ಸಾಧ್ಯವಿಲ್ಲ ಅಥವಾ ಕಷ್ಟ ಸಾಧ್ಯ. ಅಷ್ಟೇ ಅಲ್ಲ ಇದು ತತ್ವಶಾಸ್ತ್ರ. ಬಹಳ ಕ್ಲಿಷ್ಟವಾದ ವಿಷಯ. ಹಾಗಾಗಿ ಹಳೆಗನ್ನಡದ ಪ್ರಯೋಗವಿರುವ ಮತ್ತು ಉನ್ನತವಾದ

ತತ್ವಶಾಸ್ತ್ರವನ್ನು ಪ್ರತಿಪಾದಿಸುವ ಈ ಮುಕ್ತಕಗಳನ್ನು ಓದಿ, ಅರ್ಥಮಾಡಿಕೊಳ್ಳುವುದೆಂದರೆ "ನೀರಿಳಿಯದ ಗಂಟಲಲ್ಲಿ ಕಡುಬು ತುರುಕಿದಂತಾಯ್ತು" ಎಂದು ಮುದ್ದಣನಿಗೆ ಮನೋರಮೆ ಹೇಳಿದಂತಾಗುತ್ತದೆ. ಕಗ್ಗವೆಂದರೆ 'ಕಗ್ಗಂಟು' ಎಂದು, ಅದನ್ನು ನೋಡಿ "ಅಯ್ಯೋ ಇದು ನಮಗೆ ಅರ್ಥವಾಗುವುದಿಲ್ಲ" ಎನ್ನುವವರನ್ನು ನಾ ಕಂಡಿದ್ದೇನೆ. ಆದ್ದರಿಂದಲೇ ಈ ಮುಕ್ತಕಗಳ ಸಾರಾಂಶವನ್ನು ಸರಳವಾದ ಆಡು ಭಾಷೆಯಲ್ಲಿ, ಓದುಗರಿಗೆ ತಿಳಿಸಲು ಪ್ರಯತ್ನಪಟ್ಟಿದ್ದೇನೆ.

ಡಿ.ವಿ.ಜಿ.ಯವರ "ಮಂಕುತಿಮ್ಮನ ಕಗ್ಗ"ದ ಒಂದೊಂದು ಮುಕ್ತಕವೂ, ಮುಕ್ತವಾಗಿ ಒಂದು ತತ್ವವನ್ನು ಪ್ರತಿಪಾದಿಸುತ್ತದೆ. ಒಂದೊಂದು ಮುಕ್ತಕಕ್ಕೂ ಒಂದೊಂದು ಪುಸ್ತಕವನ್ನೇ ಬರೆಯಬಹುದು. ಒಂದೊಂದು ಮುಕ್ತಕವೂ, ಜ್ಞಾನಿಗಳ ಕೈಯಲ್ಲಿ ಸಿಕ್ಕಾಗ, ವಜ್ರಕ್ಕೆ ತಿಕ್ಕಿದಷ್ಟೂ ಹೊಳಪು ಹೆಚ್ಚಾಗುವಂತೆ, ಹೊಸ ಹೊಸ ಹೊಳಹುಗಳು ಹೊಳೆದು, ಸತ್ವದ ಹೊಸ ಆಯಾಮಗಳ ವ್ಯಾಖ್ಯಾನ ಸಿಗುತ್ತದೆ. ಏಕೆಂದರೆ ಈ ಮುಕ್ತಕಗಳು ಪ್ರತಿಪಾದಿಸುವುದು ಸಾರ್ವಕಾಲಿಕ ತತ್ವಾಧಾರಿತ ಸತ್ಯಗಳು. ಆದರೆ ನಾನು ಜ್ಞಾನಿಯಲ್ಲ. ನಾನು ಜ್ಞಾನ ಪಿಪಾಸು. ಈ ಮುಕ್ತಕಗಳು ನನ್ನ ಪಿಪಾಸೆಯನ್ನು ತಣಿಸುವಲ್ಲಿ ಬಹಳ ಉಪಯುಕ್ತವಾಗಿವೆ. ಪ್ರತಿಯೊಬ್ಬರೂ ಅವರವರದೇ ರೀತಿಯಲ್ಲಿ, ಅವರವರ ವಿದ್ಯೆ, ಅನುಭವ, ಕಲಿಕೆ, ಗ್ರಹಿಕೆ ಮತ್ತು ಸಂಸ್ಕಾರಗಳ ಆಧಾರದ ಮೇಲೆ, ಈ ಮುಕ್ತಕಗಳಿಗೆ ತಮ್ಮದೇ ಆದಂತಹ ಒಂದು ಭಿನ್ನವಾದ ವ್ಯಾಖ್ಯಾನವನ್ನು ಮಾಡಬಹುದು. ಗುಂಡಪ್ಪನವರ ಈ ಮುಕ್ತಕಗಳು ಪ್ರತಿಯೊಬ್ಬರಿಗೂ ಅಂತಹ ಅವಕಾಶವನ್ನು ಕಲ್ಪಿಸಿದೆ. ಯಾರ ಪಾತ್ರೆ

ದೊಡ್ಡದೋ ಅವರ ಗ್ರಹಿಕೆಯೂ ಅಷ್ಟೇ ದೊಡ್ಡದಾಗಿರುತ್ತದಲ್ಲವೆ?

ಹೀಗೆ, ಜ್ಞಾನ ದಾಹವನ್ನು ತೀರಿಸಿಕೊಳ್ಳಲು ನಾ ಪ್ರಯತ್ನಪಟ್ಟಾಗ, ಫಲಸ್ವರೂಪದಲ್ಲಿ ಹೊರಬಂದದ್ದೇ "ಕಗ್ಗ ರಸಧಾರೆ". ಪ್ರತಿಯೊಂದು ಮುಕ್ತಕವನ್ನೂ ಬಿಡಿಸಲು ಕೈಗೆತ್ತಿಕೊಂಡಾಗ ಒಂದು ಹೊಸ ಹೊಳಹು, ಒಂದು ಹೊಸ ವಿಚಾರ ಮತ್ತು ಒಂದು ಹೊಸ ತತ್ವ ಕಣ್ಣ ಮುಂದೆ ನಿಲ್ಲುತ್ತಿತ್ತು. ಪ್ರತಿಯೊಂದು ಮುಕ್ತಕವನ್ನೂ, ನನ್ನ ಪರಿಮಿತ ಮತಿಯ ಪರಿಧಿಯೊಳಗೆ ಬಿಡಿಸಲು ಪ್ರಯತ್ನಪಟ್ಟಿದ್ದೇನೆ. ಹೀಗೆ ಬರೆದಿರುವ ವಿವರಣೆ, ವ್ಯಾಖ್ಯಾನಗಳ ಪ್ರಸ್ತುತತೆ, ಕೇವಲ ನನ್ನ ಜೀವನಾನುಭವ, ಹಲವರಿಂದ ಕಲಿತ ಜೀವನದ ಪಾಠ ಮತ್ತು ಓದಿದ ಹಲವಾರು ಪುಸ್ತಕಗಳ ಆಧಾರಿತವಾಗಿವೆ.

'ಕಗ್ಗ ರಸಧಾರೆ' ಕೇವಲ ಭಗವತ್ ಪ್ರೇರಣೆಯಿಂದ ನನ್ನಿಂದ ಬರೆಯಿಸಲ್ಪಟ್ಟಿದೆ. ಹೀಗೆ ಬರೆಯಲು ಪ್ರೇರೇಪಿಸಿದ ಆ ಪರಮಚೇತನಕ್ಕೆ ಮತ್ತು ಆ ಪರಮಚೇತನದ ಪ್ರತಿರೂಪಗಳಾಗಿ, ಬರೆಯುವಲ್ಲಿ ಮತ್ತು ಇದನ್ನು ಪುಸ್ತಕ ರೂಪದಲ್ಲಿ ತರಲು ಪ್ರೋತ್ಸಾಹಿಸಿದ ನನ್ನ ಸಹೃದಯ ಮಿತ್ರರಿಗೂ ನನ್ನ ಅನಂತ ನಮನಗಳು. ನನ್ನ ಈ ಪಯತ್ನದಲ್ಲಿ ನನಗೆ ದಾರಿದೀಪವಾಗಿ ಮಾನ್ಯ ಶ್ರೀ ಶ್ರೀಕಾಂತ್‌ರವರೂ ಮತ್ತು ಮಾನ್ಯ ಶ್ರೀ ಡಿ.ಆರ್. ವೆಂಕಟರಮಣನ್ ಅವರೂ ತಮ್ಮ ಕೃತಿರೂಪದಲ್ಲಿ ನನಗೆ ಸಹಕಾರಿಯಾಗಿದ್ದಾರೆ. ಅವರಿಗೆ ನನ್ನ ಅನಂತ ಧನ್ಯವಾದಗಳು.

**ಎಷ್ಟು ಚಿಂತಿಸಿದಡಂ ಶಂಕೆಯನೆ ಬೆಳೆಸುವೀ ।**
**ಸೃಷ್ಟಿಯಲಿ ತತ್ವವೆಲ್ಲಿಯೊ ಬೆದಕಿ ನರನು ॥**
**ಕಷ್ಟಪಡುತಿರಲೆನುವುದೇ ಬ್ರಹ್ಮ ವಿಧಿಯೇನೊ !।**
**ಅಷ್ಟೆ ನಮ್ಮಯ ಪಾಡು? - ಮಂಕುತಿಮ್ಮ ॥**

ಎಂಬಂತಹ ಸಾವಿರಾರು ಪಶ್ನೆಗಳನ್ನು ತಮ್ಮ ಅನೇಕ ಮುಕ್ತಕಗಳಲ್ಲಿ ನಮ್ಮ ಮುಂದೆ ಇರಿಸಿರುವ ಮಾನ್ಯ ಗುಂಡಪ್ಪನವರು, ನಮ್ಮ ಸ್ವತಂತ್ರ ಚಿಂತನೆಗೆ ಸಾಕಷ್ಟು ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಪ್ರತೀ ಮುಕ್ತಕದಲ್ಲೂ ಅವರು ಉಲ್ಲೇಖಿಸಿರುವ ಪ್ರಶ್ನೆಗಳು, ಜಿಜ್ಞಾಸುವಿಗೆ ಒಂದು ದೀರ್ಘ ತಪಸ್ಸನ್ನು ಮಾಡುವಷ್ಟು ಹೊಳಹು ನೀಡುತ್ತದೆ. ಈ "ಮಂಕುತಿಮ್ಮನ ಕಗ್ಗ" ಒಂದು ಜೀವನ ದರ್ಶನ, ಜಿಜ್ಞಾಸೆ ಹೆಚ್ಚಾಗಿ ಜ್ಞಾನ ಮನದಲ್ಲಿ ತುಂಬಿದಾಗ, ಲೋಕ ಕಲ್ಯಾಣಕ್ಕಾಗಿ ಅದನ್ನು ಹೊರಹಾಕುವುದು "ಋಷಿ ಸಂಸ್ಕೃತಿ". ಗುಂಡಪ್ಪನವರು ಒಂದು ಕಡೆ "ಯಾವ ತಿಳುವಳಿಕೆ ನಮ್ಮ ಜನಕ್ಕೆ ಇದ್ದರೆ ಸೂಕ್ತ ಎಂದು ನನಗೆ ಅನ್ನಿಸಿತೋ, ಅಂತಹ ಸಂಪಾದಿಸಿಕೊಂಡು, ಇತರರಿಗೆ ತಿಳಿಯಪಡಿಸಬೇಕೆಂದೂ, ತಿಳುವಳಿಕೆಯನ್ನು ನಾನು ಮೊದಲು ಜೀವನದ ಯಾವ ಸೊಬಗನ್ನು ನಾನು ಅನುಭವಿಸಿದಾಗ, ಅದನ್ನು ಇತರರೂ

ಅನುಭವಿಸಿಯಾರೆಂದು ನನಗನ್ನಿಸಿತೋ ಅಂತಹ ಸೊಗಸನ್ನು ತೋರಿಸುವುದು ನನ್ನ ಎಲ್ಲ ಬರವಣಿಗೆಯಲ್ಲೂ, ಮಾತಿನಲ್ಲೂ ಇರುವ ತಾತ್ಪರ್ಯ" ಎಂದು ಹೇಳುತ್ತಾರೆ. ಪುರಾತನ ಋಷಿ ಮುನಿಗಳು ಈ ಜಗತ್ತಿಗೆ ಯಾವ ಉದ್ದೇಶದಿಂದ ವೇದೋಪನಿಷತ್ತುಗಳನ್ನು ನೀಡಿದರೋ ಅಂತಹ ಉದಾತ್ತ ಉದ್ದೇಶವು ನಮ್ಮ ಗುಂಡಪ್ಪನವರದಾಗಿತ್ತು. ಆ ದೃಷ್ಟಿಯಲ್ಲಿ ನೋಡಿದಾಗ, ನಮ್ಮ ಗುಂಡಪ್ಪನವರು 'ಋಷಿ' ತುಲ್ಯರು. ಅವರಿಗೆ ಸಾಷ್ಟಾಂಗ ನಮನಗಳು.



ಈ 'ಕಗ್ಗ ರಸಧಾರೆ" ಯನ್ನು ನಾಲ್ಕು ಸಂಪುಟಗಳಲ್ಲಿ ಪ್ರಕಟಗೊಳಿಸಲಿಚ್ಚಿಸಿ, ಈಗಾಗಲೇ 1 ರಿಂದ 200 ರ ವರೆಗಿನ ಮುಕ್ತಕಗಳನ್ನೊಳಗೊಂಡ 'ಮೊದಲ' ಸಂಪುಟವನ್ನೂ ಮತ್ತು 201-450 ಮುಕ್ತಕಗಳನ್ನೊಳಗೊಂಡ 'ಎರಡನೆಯ' ಸಂಪುಟವನ್ನೂ ಹೊರತಂದಿದ್ದೇನೆ. ಪ್ರಸ್ತುತ ಪ್ರಕಟವಾಗುತ್ತಿರುವುದು 451 ರಿಂದ 700 ನೇ ಮುಕ್ತಕಗಳನ್ನೊಳಗೊಂಡ 'ಕಗ್ಗ-ರಸಧಾರೆ'ಯ ಮೂರನೆಯ ಸಂಪುಟ.

ಮಾನ್ಯ ಗುಂಡಪ್ಪನವರ ಒಡನಾಟದ ಭಾಗ್ಯವನ್ನು ಪಡೆದ, ಗೋಖಲೆ ಸಂಸ್ಥೆಯ ಮುಖ್ಯಸ್ಥರಾದ ಮಾನ್ಯ ಡಾ. ಎಸ್.ಆರ್. ರಾಮಸ್ವಾಮಿಗಳ ಸಹೃದಯದ 'ಮುನ್ನುಡಿ'ಗೆ ನಾ ಆಭಾರಿಯಾಗಿದ್ದೇನೆ. ಈ ಪುಸ್ತಕದ ಮುಖಪುಟಕ್ಕೆ, ತಾವು ಬರೆದ ಡಿ.ವಿ.ಜಿ.ಯವರ ಚುಕ್ಕಿಚಿತ್ರವನ್ನು ಉಪಯೋಗಿಸಲು ಅನುಮತಿ ನೀಡಿದ ಮಾನ್ಯ ಶ್ರೀ ಮೋಹನ್ ವರ್ಣೇಕರ್‌ರವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು.ಈ ಪುಸ್ತಕದ ಪ್ರಕಟಣೆಗೆ ಕೃಪೆಮಾಡಿ ಅನುಮತಿಸಿದ 'ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ'ಗೆ ನಾನು ಆಭಾರಿಯಾಗಿದ್ದೇನೆ.

ಈ ಪುಸ್ತಕದಲ್ಲಿ ಬರೆದ ಹಲವಾರು ವಿಚಾರಗಳನ್ನು ವಿಮರ್ಶೆಗೆ ಒಳಪಡಿಸಿ, ನನ್ನನ್ನು ತಿದ್ದಿ ತಮ್ಮ ಅನುಭವವನ್ನು ನನಗೆ ಎರಕ ಹೊಯ್ದ 'ಕಗ್ಗದ ಭಟ್ಟರು' ಎಂದೇ ಪಸಿದ್ಧರಾದ ಮಾನ್ಯ ಶ್ರೀ ಹೆಚ್. ಎಸ್. ಲಕ್ಷ್ಮೀನಾರಾಯಣ ಭಟ್ಟರಿಗೂ ನನ್ನ ತುಂಬು ಹೃದಯದ ಕೃತಜ್ಞತೆಗಳು. ಈ ಪುಸ್ತಕದ ಪ್ರಕಟಣೆಗೆ ಅನುಕೂಲವಾದ ಅಮೂಲ್ಯ ಸಲಹೆಯನ್ನಿತ್ತ ನವಕರ್ನಾಟಕ ಪಬ್ಲಿಕೇಷನ್ ಶೀ ಉಡುಪರಿಗೂ ನಾನು ಕೃತಜ್ಞನಾಗಿದ್ದೇನೆ. ವಿಚಾರಗಳ ಸಂಕೀರ್ಣತೆ ಮತ್ತು ಕ್ಲಿಷ್ಟತೆಗಳು ಇದಿರಾದಾಗ, ನನ್ನ ಸಹಾಯಕ್ಕೆ ಬಂದವರು ಮತ್ತು ಕಗ್ಗಗಳನ್ನು ದೀರ್ಘಕಾಲದ ಅಭ್ಯಾಸದಿಂದ ಅರಿತವರೂ ಆದ ನನ್ನ ಸ್ನೇಹಿತರು ಮಾನ್ಯ ಶ್ರೀಪಾದರಾವ್ ಮಂಜುನಾಥ್‌ರವರು, ಶ್ರೀ ರಮೇಶ್ ಜೋಯಿಸ್‌ರವರು, ಶ್ರೀ ಸದ್ಯೋಜಾತ ಭಟ್ಟರು, ನನ್ನ ಗುರು ಸಮಾನರಾದ ಮೈಸೂರಿನ, ನಿವೃತ್ತ ಸಂಸ್ಕೃತ

ಮಹೋಪಾಧ್ಯಾಯಿನಿ, ಶ್ರೀಮತಿ ಡಾ|| ಕೆ.ಎಲ್. ಪ್ರಸನ್ನಾಕ್ಷಿಯವರು. ಇವರೆಲ್ಲರಿಗೂ ನಾ ಚಿರಋಣಿ. ನನ್ನ ಈ ಪಯತ್ನದಲ್ಲಿ ನನಗೆ ಬೆನ್ನುಲುಬಾಗಿ ನಿಂತಿರುವ ನನ್ನ ಮಿತ್ರರಾದ ಶ್ರೀಯುತರಾದ ವಿಶ್ವಶರ್ಮ, ವೆಂಕಟೇಶಮೂರ್ತಿ ಕನಕಪುರ, ಆನಂದ್ ಜೋರಾಪುರ, ಎಮ್.ಎಸ್. ಪ್ರಸಾದ್, ಪುಷ್ಪರಾಜ ಚೌಟ, ಬದರೀನಾಥ ಪಲವಳ್ಳಿ, ಜಿ. ರವಿಕುಮಾರ್ ಮತ್ತು ಫೇಸ್‌ಬುಕ್ಕಿನ ಕನ್ನಡ ನನ್ನ ಎಲ್ಲ ಮಿತ್ರರಿಗೂ ಕೃತಜ್ಞತಾಪೂರ್ವಕ ನಮಸ್ಕಾರಗಳು.

ಈ ಪುಸ್ತಕಕ್ಕೆ "ಕಗ್ಗ ರಸಧಾರೆ" ಎಂಬ ಹೆಸರನ್ನು ನೀಡಿದ ಶ್ರೀ ಪುಷ್ಪರಾಜ ಚೌಟ ಮತ್ತು ಸದಾ ನನಗೆ ಸೂಕ್ತ ಸಲಹೆಗಳನ್ನು ನೀಡುತ್ತಾ ಈ ಪುಸ್ತಕದ ಮುಖ ಪುಟದ ವಿನ್ಯಾಸವನ್ನು ನನಗೆ ಮಾಡಿಕೊಟ್ಟ ನನ್ನ ಮಿತ್ರ ಶ್ರೀ ವಸಂತ್ ಕುಮಾರ್ ಬಂಟಕಲ್ ಅವರಿಗೂ ನನ್ನ ಅನಂತ ನಮನಗಳು.

ಈ ನನ್ನ ಕಿರು ಪ್ರಯತ್ನಕ್ಕೆ ಸಹೃದಯ ಒಂದುಗರ ಮೆಚ್ಚುಗೆಯೇ ನನಗೆ ಸಿಗುವ 'ಪಾರಿತೋಷಕ'.

ಬೆಂಗಳೂರು **- ರವಿ ತಿರುಮಲೈ**

2-8-2015



ಶ್ರೀ ಕೃಷ್ಣಮಾಚಾರಿ – ಶ್ರೀಮತಿ ಸುಭದ್ರಮ್ಮ

ನನ್ನ ಮಿತ್ರರಾದ
ಶ್ರೀ ಎಂ.ಕೆ. ಪ್ರಕಾಶ್ ಅವರು ತಮ್ಮ ತಂದೆ–ತಾಯಿಯರ
ಸ್ಮರಣಾರ್ಥ ಈ ಸಂಪುಟಕ್ಕೆ ಸಂಪೂರ್ಣ
ಸಹಕಾರ ನೀಡಿರುತ್ತಾರೆ.
ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

**ಮುಕ್ತಕ – 451**

**ನೀಲ ವಿಸ್ತರವಿರಲು ನಕ್ಷತ್ರ ಬಿಂದು ಸೊಗ।**
**ಶೈಲದಚಲತೆಯಿರಲು ಝರಿಯ ವೇಗ ಸೊಗ॥**
**ಬಾಳು ಬಯಲಂತಿರಲು ಮನೆಯಚ್ಚುಕಟ್ಟಿಂಬು।**
**ವೈಲಕ್ಷಣದೆ ಚೆಂದ - ಮಂಕುತಿಮ್ಮ॥**

ವಿಸ್ತರವಿರಲು=ವಿಸ್ತರವು+ಇರಲು ಶೈಲದಚಲತೆಯಿರಲು=ಶೈಲದ ಅಚಲತೆ+ಇರಲು,
ಬಯಲಂತಿರಲು=ಬಯಲಂತೆ+ಇರಲು, ಮನೆಯಚ್ಚುಕಟ್ಟಿಂಬು=ಮನೆಯ+ಅಚ್ಚುಕಟ್ಟು+ಇಂಬು
ನೀಲ=ಆಕಾಶ, ಸೊಗ=ಸೊಗಸು-ಚೆಂದ, ಝರಿಯ= ದುಮ್ಮಿಕ್ಕುವ ಜಲಪಾತ, ವೈಲಕ್ಷಣದೇ=ವೈವಿಧ್ಯತೆಯೇ

ವಿಶಾಲವಾದ ಅಕಾಶವಿರಲು ಅಲ್ಲಿ ಹರಡಿರುವ ನಕ್ಷತ್ರ ಸಮೂಹ ಚೆಂದ, ಅಲುಗಾಡದೆ ನಿಂತಿರುವ ಬೆಟ್ಟಗಳಿರುವಾಗ ಅಲ್ಲಿಂದ ಹರಿವ ನೇರ ಜಲಪಾತ ನೋಡಲು ಚೆಂದ, ಬದುಕು ಬಯಲಂತೆ ಇರಲು ನಾವಿರುವ ಮನೆಯೇ ನಮಗೆ ಸೊಗಸು, ಹಿತ. ಹೀಗೆ ವಿಭಿನ್ನತೆಯಿಂದ ಕೂಡಿದ ಜಗತ್ತೇ ನಮಗೆ ಚೆಂದವಾಗಿ ಕಾಣುತ್ತದೆ ಎಂದು ಮಾನ್ಯ ಗುಂಡಪ್ಪನವರು ಉಲ್ಲೇಖ ಮಾಡಿದ್ದಾರೆ ಈ ಮುಕ್ತಕದಲ್ಲಿ.

ಸೃಷ್ಟಿಯಲ್ಲಿ ಪ್ರತಿಯೊಂದೂ, ಒಂದಕ್ಕೊಂದು ಪೂರಕವಾಗೇ ಇದೆ. ಒಂದರ ಅಂದವನ್ನು ಹೆಚ್ಚಿಸಲು ಒಂದು ಮತ್ತೊಂದರೊಟ್ಟಿಗೆ ಪೈಪೋಟಿಯನ್ನು ಮಾಡುತ್ತಿದೆ.ಆಕಾಶದ ಅಗಾಧ ವೈಶಾಲ್ಯ, ನಕ್ಷತ್ರಗಳಿಗೆ ವಿಸ್ತಾರವಾಗಿ ಹರಡಿಕೊಳ್ಳಲು ಅನುವು ಮಾಡಿಕೊಟ್ಟು, ಅವುಗಳ ಚಿತ್ತಾರದ ಅಂದವನ್ನು ಹೆಚ್ಚಿಸಿದೆ.ತಗ್ಗಿರುವುದರಿಂದ ಎತ್ತರಕ್ಕೆ ಅಂದ. ಬಯಲಿರುವುದರಿಂದ ಕಾಡು ಮೇಡುಗಳಿಗೆ, ಗಿರಿಶಿಖರಗಳಿಂದ ಅಲ್ಲಿಂದ ದುಮ್ಮಿಕ್ಕಿ ಹರಿವ ಜಲಪಾತಗಳಿಗೆ ಅಂದ. ಹೀಗೆ ನೋಡುತ್ತಾ ಹೋದರೆ ಒಂದರಿಂದ ಮತ್ತೊಂದರ ಅಂದ ಹೆಚ್ಚಿಸಲು ಇಂಬು.

ಮನುಷ್ಯನ ಜೀವನ ವಿಸ್ತಾರವಾಗಿದೆ. ಜಗತ್ತೂ ಸಹ ವಿಶಾಲವಾಗಿದೆ. ಹಾಗಂದು ಮನುಷ್ಯ ಬಯಲಿನಲ್ಲಿ ಬದುಕ ನಡೆಸಲಾಗದು. ಆದ್ದರಿಂದ ಆ ಬಯಲಲ್ಲಿ ಕಟ್ಟಿಕೊಂಡ ಒಂದು ಪುಟ್ಟ ಮನೆಯೋ ಅಥವಾ ಗುಡಿಸಲೋ ಬದುಕಲಿಕ್ಕೆ ಅಂದ, ಅಲ್ಲವೇ? ಹೀಗೆ ವೈವಿಧ್ಯಮಯ ವಸ್ತು ವಿಷಯಗಳು ಒಂದೆಡೆ ಇದ್ದಾಗ ಒಂದಕ್ಕೊಂದು ಪೂರಕವಾಗಿ ಮತ್ತು ಪೋಷಕವಾಗಿ ಇರುತ್ತವೆ.

ಬುದ್ಧಿವಂತಿಕೆ, ರೂಪ, ಜಾಣತನ, ಪ್ರೀತಿ, ಪ್ರೇಮ ಸಹೃದಯತೆ ಮುಂತಾದ ಸಕಾರಾತ್ಮಕ ಗುಣಗಳೂ, ಹೆಡ್ಡತನ, ಕುರೂಪ, ಪೆದ್ದುತನ, ಅಹಂಕಾರ, ಕ್ರೌರ್ಯ ಮುಂತಾದ ನಕಾರಾತ್ಮಕ ಗುಣಗಳೂ ಪಕ್ಕ ಪಕ್ಕದಲ್ಲೇ ಇರುವುದರಿಂದ ನಮಗೆ ಯಾವುದೋ ಒಂದನ್ನು ಇದು ಬೇರೆ' ಎಂದು ಗುರುತಿಸಲು ಸಾಧ್ಯವಲ್ಲವೇ?

ಜಗತ್ತಿನ ಸೌಂದರ್ಯಕ್ಕೆ ಜಗತ್ತೇ ಕಾರಣ, ಜಗತ್ತಿನ ಒಂದಂಶವಾದ ನಾವು ಪರಮಾತ್ಮನಿಂದ ಬಳುವಳಿಯಾಗಿ ಬಂದ 'ಸೌಂದರ್ಯೋಪಾಸಕ ಗುಣದಿಂದ, ಜಗತ್ತಿನ ಸೊಗಸನ್ನು ನೋಡಬೇಕು, ಆನಂದದಿಂದಿರಬೇಕು. ಹಾಗಾದರೆ ಬದುಕು ಸಾರ್ಥಕ.

**ಮುಕ್ತಕ – 452**

**ನೀಳುಗೆರೆ ಬಳುಬಳುಕೆ ಕಡಳತೆರೆಯೊಯ್ಯಾರ।**
**ತಾಳಲಯ ಸೇರೆ ರಾಗದ ನಾಟ್ಯ ಧಾಟಿ॥**
**ಗೋಳದ ಜ್ವಾಲೆಯಿಂ ಗಗನಪಟ ಸಿಂಗಾರ।**
**ವೈಲಕ್ಷಣದೊಳಿಂಬು - ಮಂಕುತಿಮ್ಮ॥**

ಕಡಲತೆರೆಯೊಯ್ಯಾರ=ಕಡಲ+ತೆರೆಯ+ಒಯ್ಯಾರ, ವೈಲಕ್ಷಣದೊಳಿಂಬು=ವೈಲಕ್ಷಣದೊಳು+ಇಂಬು,
ನೀಳುಗೆರೆ= ನೇರ ಗೆರೆ, ಒಯ್ಯಾರ=ಬಳುಕಿವಿಕೆ, ಗೋಳದ ಜ್ವಾಲೆಯಿಂ = ಸದಾ ಉರಿಯುತ್ತಿರುವ ನಕ್ಷತ್ರಗಳು,
ಗಗನಪಟ= ಆಕಾಶ, ಇಂಬು ಸಹಾಯ, ಒತ್ತಾಸೆ

ಕಡಲಂಚಿನಲ್ಲಿ ಕಾಣುವ ನೇರ ನೇರವಾದ ಗೆರೆ ಹೇಗೆ ಕಡಲಲ್ಲಿ ತೆರೆಯೆದ್ದಾಗ ಒಂದು ಬಾರಿಬಳುಕಿ ನೋಡುಗರಿಗೆ ಆನಂದವನ್ನು ನೀಡುತ್ತದೋ, ಹೇಗೆ ರಾಗದ ಜೊತೆ ತಾಳ ಸೇರಿ ಲಯವಾಗಿ ನಾಟ್ಯಧಾಟಿಯಿಂದ ಮನವನ್ನು ರಂಜಿಸುತ್ತದೆಯೋ, ಪ್ರತಿಯೊಂದೂ ಉರಿವ ಅಗ್ನಿ ಗೋಳಗಳಾಗಿದ್ದರೂ ಆಗಸದ ಪಟಲದಲ್ಲಿ ಉದ್ದಕ್ಕೂ

ಹರಡಿ ನಕ್ಷತ್ರಗಳು, ಒಂದು ಸುಂದರ ಚಿತ್ತಾರವನ್ನು ಮೂಡಿಸಿದೆಯೋ, ಹಾಗೆ ವಿಲಕ್ಷಣವಾದ ಪ್ರತಿಯೊಂದೂ ಈ ಜಗತ್ತನ್ನು ಸುಂದರವಾಗಿಸಲು ಇಂಬು ನೀಡುತ್ತಿವೆ ಎಂದು ಉಲ್ಲೇಖಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಇಲ್ಲಿ ವಿಲಕ್ಷಣವೆಂದರೆ ವಿವಿಧ ಲಕ್ಷಣಗಳನ್ನು ಹೊಂದಿರುವ ಅನೇಕಾನೇಕ ವಸ್ತುಗಳು, ಒಂದೊಂದಕ್ಕೆ ಹೇಗೆ ಪೂರಕವಾಗಿವೆ ಎನ್ನುವುದೇ ಅರ್ಥ. ಸೃಷ್ಟಿಯ ಪ್ರತಿಯೊಂದೂ ಮತ್ತೊಂದರೊಡನೆ ಸಂಪರ್ಕಕ್ಕೆ ಬಂದಾಗ ಉಂಟಾಗುವ ಸುಂದರತೆಯೇ ಸೃಷ್ಟಿಯ ವಿಶೇಷ, ಭೂಮಿಯ, ಸೂರ್ಯನ, ನೀರಿನ ಸಂಪರ್ಕಕ್ಕೆ ಬಂದಾಗ ಒಂದು ಬೀಜ ಸಸಿಯಾಗಿ, ಗಿಡವಾಗಿ, ಮರವಾಗಿ ಬಣ್ಣ ಬಣ್ಣದ ಹೂಗಳಿಂದ, ರುಚಿ ರುಚಿಯಾದ ಹಣ್ಣುಗಳಿಂದ ಸುಂದರವಾಗಿ ಎಲ್ಲರಿಗೂ ಆನಂದವನ್ನು ನೀಡುತ್ತದೆಯಲ್ಲವೇ? ಹಾಗೆಯೇ ಸಕಲ ಜೀವರಾಶಿಗಳೂ ಮತ್ತೆಲ್ಲ ಜೀವರಾಶಿಗಳಿಗೂ ಆನಂದವನ್ನು ಕೊಡುತ್ತವೆ, ಅಲ್ಲವೇ! ಹಾಗೆ ಆನಂದವನ್ನು ನೀಡುವುದೇ ಸೃಷ್ಟಿಯ ಪ್ರತಿಯೊಂದರ ಬದುಕಿನ ಸಾರ್ಥಕತೆ.





ನಮ್ಮ ನಮ್ಮ ಜೀವನದಲ್ಲೂ ಅಂತಹ ಮಧುರವಾದ ವಿಷಯಗಳನ್ನು ನಾವು ಎಲ್ಲ ಕಡೆಯೂ ನೋಡಬಹುದು. ನೋಡುವ ಮನಸ್ಸಿರಬೇಕು ಅಷ್ಟೇ!! ಹಾರುವ ಹಕ್ಕಿ, ಬೀಸುವ ಗಾಳಿ, ಹೂ, ಹಣ್ಣು, ಗಿಡ, ಮರ, ನದಿ, ಝರಿ, ಕಾಡು, ಮೇಡು, ಪ್ರಾಣಿ, ಕೀಟ, ಕ್ರಿಮಿಗಳಂತಹ ವಸ್ತುಗಳು, ಪ್ರೀತಿ, ಪ್ರೇಮ, ಸಹನೆ, ಭಕ್ತಿಯಂತ ಮದುರ ಭಾವಗಳು, ಸಕ್ರಿಯತೆಗೆ ಇಂಬು ನೀಡುವ ದ್ವೇಷ, ಅಸೂಯೆ, ಕೋಪ, ಮುಂತಾದ ನಕಾರಾತ್ಮಕ ಭಾವಗಳೂ ಸಹ ಜಗತ್ತಿನ ಆನಂದವನ್ನು ಹೆಚ್ಚಿಸಲು ಇಂಬು ನೀಡುತ್ತವೆ.

ಈ ಜಗತ್ತಿನ ಸೃಷ್ಟಿಯ ಹಿಂದಿರುವ ಆ ಪರಮ ಚೇತನವೂ ಸುಂದರ, ಸುಂದರತೆಯಿಂದ ಸೃಷ್ಟಿಸಲ್ಪಟ್ಟ ಸಕಲವೂ ಸುಂದರ, ನೋಡುವ ಮನಸ್ಸು ಇರಬೇಕು, ಅನುಭವಿಸಲು ಹೃದಯಬೇಕು.ಪಡೆದ ಆನಂದವನ್ನು ಪರರಿಗೆ

ಹಂಚುವ ಮನೋಭಾವವನ್ನೂ ಬೆಳೆಸಿಕೊಳ್ಳಬೇಕು. ಹಾಗಾದರೆ ನಾವು ಸೌಂದರ್ಯೋಪಾಸನೆಯನ್ನು ಯೆತೇಚ್ಚವಾಗಿ ಮಾಡಬಹುದು.

**ಮುಕ್ತಕ – 453**

**ತಾಯೊ ತಂಗಿಯೊ ಎನಿಪ ಶುಚಿಯ ಸೌಮ್ಯದ ಸೊಬಗು।**
**ಪ್ರೇಯಸಿಯ ಕರೆವೊಲಾತುರವಡಿಪ ಬೆಡಗು॥**
**ಈಯೆರಡು ಸಮದ ರುಚಿ ನಿನ್ನನಿಬ್ಬಗೆಗೊಳಿಸೆ।**
**ಧ್ಯೆಯ ನಿನಗಾವುದೆ ಲೊ- ಮಂಕುತಿಮ್ಮ**

ಕರೆವೊಲಾತುರವಡಿಪ=ಕರೆಯ+ಒಲು+ಆತುರ+ವಡಿಪ,ನಿನ್ನನಿಬ್ಬಗೆಗೊಳಿಸೆ=ನಿನ್ನನು+ಇಬ್ಬಗೆ+ಗೊಳಿಸಿ,
ನಿನಗಾವುದೆಲೋ=ನಿನಗೆ+ಆವುದು+ಎಲೊ.
ಎನಿಪ=ಎನಿಸುವ, ಇಬ್ಬಗೆ=ಎರಡು ಭಾವ,

ತಾಯಿ ಮತ್ತು ತಂಗಿಯರ ಸೌಂದರ್ಯವನ್ನು ನೋಡುವ ಬಗೆ ಬೇರೆ ಮತ್ತು ತುಡಿತ ಮತ್ತು ಮಿಡಿತದಿಂದ ಕೂಡಿದ ಕರೆ ನೀಡುವ ಪ್ರೇಯಸಿಯ ಸೌಂದರ್ಯವನ್ನು ನೋಡುವ ಬಗೆ ಬೇರೆ. ಆದರೆ ಈ ಎರಡೂ ಭಾವಗಳು ನಮ್ಮಲ್ಲಿ ಬರುವುದರಿಂದ ಸೌಂದರ್ಯವನ್ನು ನೋಡುವ ಎರಡೂ ಬಗೆ ಭಿನ್ನ ಭಿನ್ನವಾಗಿದ್ದು ಇವೆರಡೂ ನಮಗೆ ಸಮನಾಗಿ ಆನಂದವೀಯುತ್ತಾ ಇರುವಾಗ ನಮ್ಮ ಧ್ಯೆಯ ಯಾವುದಾಗಿರಬೇಕು ಎನ್ನುವ ಪ್ರಶ್ನೆ ನಮ್ಮ ಮುಂದಿಟ್ಟಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ತಂದೆ, ತಾಯಿ, ಅಕ್ಕ, ತಂಗಿ, ಅಣ್ಣ ತಮ್ಮ, ಎಲ್ಲವೂ ನಮಗೆ ಜನ್ಮತಃ ಬರುವ ಸಂಬಂಧಗಳು. ಆದರೆ ಈ ಸಂಬಂಧದ ಹೊರಗೆ ನೋಡಿದರೆ, ಎಲ್ಲರೂ ಬೇರೆ ಬೇರೆ ವ್ಯಕ್ತಿಗಳು, ನಮಗೆ ನಮ್ಮ ತಾಯಿ ಮತ್ತು ಅಕ್ಕ ತಂಗಿಯರೂ ಸುಂದರವಾಗಿ ಕಾಣುತ್ತಾರೆ.ಅವರ ಸೌಂದರ್ಯ ನಮಗೆ ಕಾತರತೆಯನ್ನೋ ಸೆಳೆತವನ್ನೋ ಉಂಟಾಗಿಸುವುದಿಲ್ಲ. ಆದರೆ ಈ ರೀತಿಯ ಸಂಬಂಧಗಳಿಲ್ಲದಿದ್ದರೆ ಅನ್ಯರ ಸೌಂದರ್ಯದ ಸೆಳೆತವಿರುತ್ತದೆ ಮತ್ತು ಆ ಸಂಬಂದದ ರೂಪವೇ ಬೇರೆ ಇರುತ್ತದೆ.

ಹೀಗೆ ನಮ್ಮ ಮನಸ್ಸುಗಳಲ್ಲಿ ಉಂಟಾಗುವ ಎರಡೂ ಬಗೆಯ ಭಾವನೆಗಳಲ್ಲಿ ಬೇಧವನ್ನು ಮನಗಂಡು ವರ್ತಿಸುವುದೇ ನಾಗರೀಕತೆ.ಅದು ನಮಗೆ ಸಂಸ್ಕೃತಿ ಮತ್ತು ಸಂಸ್ಕಾರಗಳ ಬೆಳವಣಿಗೆಯಿಂದ ಬಂದದ್ದು. ಅಷ್ಟೇ ಅಲ್ಲ ಪ್ರಕೃತಿಯಲ್ಲಿ ನಮಗೆ ಕಂಡುಬರುವ ಹತ್ತು ಹಲವಾರು ವಸ್ತುಗಳಲ್ಲಿಯೂ ಸಹ ನಮಗೆ ಬಗೆ ಬಗೆಯ ಸೌಂದರ್ಯಗಳು ಅನುಭವಕ್ಕೆ ಬರುತ್ತದೆ.ವಸ್ತು ಬೇಧದೊಂದಿಗೆ ಸೌಂದರ್ಯಾಸ್ವಾಧನೆಯ ಬಗೆಯೂ ಬೇರೆಯಾಗಿ ನಮ್ಮ ಅನುಭವಕ್ಕೆ ಬಂದಾಗ ಗುಂಡಪ್ಪನವರು ಹೇಳುವಂತೆ 'ಸಮದ ರುಚಿ ನಮದಾಗುತ್ತದೆ.

ಹಾಗಾಗದಿದ್ದರೆ ಅನುಭವ ಸಂಕರವಾಗಿ ನಮ್ಮ ಮನಸ್ಸು ಕೆಡುತ್ತದೆ. ಕೆಟ್ಟ ಮನಸ್ಸು ಆಲೋಚಿಸುವ ಪರಿಯನ್ನು ನೋಡಿದರೆ ಅಸಹ್ಯವುಂಟಾಗುತ್ತದೆ. ಹಾಗಾಗಿ ನಾವು ಸಮದ ರುಚಿಯನ್ನು ಅನುಭವಿಸುವ ಸದಭಿರುಚಿಯನ್ನು ಬೆಳೆಸಿಕೊಳ್ಳಬೇಕು.

**ಮುಕ್ತಕ – 454**

**ಪರಿಪರಿಯ ವಿಶ್ವಪ್ರಕೃತಿಶಕ್ತಿತೇಜಗಳು ।**
**ಕೆರಳಿಸಲು ನರಹೃದಯರಭಸಗಳನದರಿಂ ||**
**ಪೊರಮಡುವ ಸಂಮೋಹಧೀರಗಂಭೀರಗಳ ।**
**ಸರಸತೆಯೆ ಸುಂದರವೊ -ಮಂಕುತಿಮ್ಮ ||**

ನರಹೃದಯರಭಸಗಳನದರಿಂ=ನರ+ಹೃದಯ+ರಭಸಗಳನ್+ಆದರಿಂ,
ಸಂಮೋಹಧೀರಗಂಭೀರಗಳ=ಸಂಮೋಹ+ಧೀರ+ಗಂಭೀರಗಳ,
ಪೊರಮಡುವ=ಪಡೆಯಲುದ್ಯುಕ್ತವಾಗುವುದು

ಜಗತ್ತಿನಲ್ಲಿನ ಮೂಲ ಶಕ್ತಿ ಎಂದರೆ ಪರಮಾತ್ಮ ಶಕ್ತಿ. ಬೇರೆ ಬೇರೆ ವಿಧದಲ್ಲಿ ಪ್ರಕಟಗೊಂಡು ಮನುಷ್ಯನ ಹೃದಯದಲ್ಲಿ ಮೋಹಕ, ಧೀರ, ಗಂಭೀರಗಳಂತಹ ಚಿತ್ರವಿಚಿತ್ರ ಭಾವನೆಗಳನ್ನು ಕೆರಳಿಸಿ, ಆನಂದವನ್ನು ಪಡೆಯಲುದ್ಯುಕ್ತನಾದಾಗ ಈ ಶಕ್ತಿಗಳೊಡನೆ ಇವನು ನಡೆಸುವ ಸರಸವೇ ಒಂದು ಸುಂದರತೆ ಎಂದು ಉಲ್ಲೇಖ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಪಂಚಭೂತಗಳ ಸ್ವರೂಪ ಭಿನ್ನ ಭಿನ್ನವಾದದ್ದು.ಶಬ್ದ ಸ್ಪರ್ಶ ರೂಪ ರಸ ಗಂಧಗಳಿಂದ ಉಂಟಾಗುವ ಭಾವನೆಯೇ ಬೇರೆ. ಇವೆಲ್ಲವೂ ಹೃದಯದಲ್ಲಿ ಕೆರಳಿಸುವಂತಹ ಪರಿಪರಿಯ ಭಾವನೆಗಳಿಗೆ ಇವನಿಂದ ಬರುವ ಪ್ರತಿಕ್ರಿಯೆ ಜಗತ್ತಿನ ಪರಿಪರಿಯ ಸುಂದರತೆಗೆ ಕಾರಣವೆಂದರೆ ಸರಿಯಾಗುವುದು. ಪರಮ ಚೇತನವೇ ಸುಂದರ. ಹಾಗಾಗಿ ಅದರಿಂದ ಹೊರಹೊಮ್ಮುವ ಪ್ರತಿ ರೂಪವೂ ಸುಂದರವಾಗಿರಲೇಬೇಕಲ್ಲವೇ?

4

ಕಗ್ಗರಸಧಾರೆ ಮೋಹ ಕರುಣಾ –ಶಾಂತಿ 454 458

ಬೆಟ್ಟಗುಡ್ಡಗಳು, ನದಿಝರಿಗಳು, ಗಿಡ ಮರಗಳು, ಪ್ರಾಣಿಪಕ್ಷಿಗಳು, ಕ್ರಿಮಿ ಕೀಟಗಳು, ಹೂ ಹಣ್ಣುಗಳು, ಚಿತ್ರವಿಚಿತ್ರವಾದ ಚಿತ್ತಾರಗಳು, ಸಾವಿರಾರು ಬಣ್ಣಗಳ ಈ ಜಗತ್ತು ಪ್ರತೀ ಮನುಷ್ಯನ ಹೃದಯದಲ್ಲಿ ಒಂದಲ್ಲ ಒಂದು ರೀತಿಯ ಭಾವನೆಗಳನ್ನು ಕೆರಳಿಸುತ್ತವೆ. ಮನುಷ್ಯ ಆ ಭಾವನೆಗಳನ್ನುತನ್ನದೇ ರೀತಿಯಲ್ಲಿ ಅನುಭವಿಸಿ ಮತ್ತು ತನ್ನದೇ ಆದ ಪ್ರತಿಕ್ರಿಯೆ ನೀಡಿದಾಗ ಅ ವಸ್ತುವಿಗೆ ಒಂದು ಸುಂದರತೆ ಬರುತ್ತದೆ. ಆ ಸುಂದರತೆ ಬೇರೆಯವರ ಅನುಭವಕ್ಕಿಂತ ಭಿನ್ನವಾಗಿರುತ್ತದೆ.

ಹೀಗೆ ಪ್ರಕೃತಿಯ ಶಕ್ತಿಯಿಂದ ಸೃಷ್ಟಿಯಾದ ಪರಿಪರಿಯ ವಸ್ತು, ವಿಷಯಗಳಿಂದ ಮನದಲ್ಲಿ ಉಂಟಾಗುವ ಭಾವನೆಗಳಿಗೆ ತನ್ನದೇ ರೀತಿಯಲ್ಲಿ ಪ್ರತಿಕ್ರಿಯೆ ನೀಡಿ, ತನ್ನದೇ ರೀತಿಯಲ್ಲಿ ಅನುಭವಿಸಿ ಆನಂದಪಡುವುದೇ, ಜಗತ್ತಿನಲ್ಲಿ ಮಾನವ ಅನುಭವಿಸುವ ಸರಸತೆ ಮತ್ತು ಸುಂದರತೆ.ಅದು ಮಾನವರಾದ ನಮಗೆ ಪರಮಾತ್ಮ ಕೊಟ್ಟ ವರ.ಅಂತಹ ಸುಂದರತೆಯ ಭಾವನೆಯನ್ನು ಅನುಭವಿಸಿದರೆ ನಮ್ಮ ಬದುಕು ಪರಿಪೂರ್ಣವಾಗುತ್ತದೆ.

**ಮುಕ್ತಕ – 455** **ಸುಂದರದ ರಸ ನೂರು; ಸಾರವದರೊಳು ಮೂರು |**
**ಹೊಂದಿಪ್ಪುವವು ಮೋಹ ಕರುಣೆ ಶಾಂತಿಗಳ ||**
**ಒಂದರಿಂದೊಂದು ಬೆಳೆಯಾದಂದು ಜೀವನವು |**
**ಚೆಂದಗೊಂಡುಜ್ಜುಗವೋ - ಮಂಕುತಿಮ್ಮ ||**

ಸಾರವದರೊಳು=ಸಾರವು+ಅದರೊಳು, ಹೊಂದಿಪ್ಪುವವು = ಹೊಂದಿದ್ದುವು+ಅವು,
ಒಂದರಿಂದೊಂದು=ಒಂದರಿಂದ+ಒಂದು, ಬೆಳೆಯಾದಂದು= ಬೆಳೆ +ಆದಂದು,
ಚೆಂದಗೊಂಡುಜ್ಜುಗವೋ= ಚೆಂದಗೊಂಡ+ ಉಜ್ಜುಗವೊ,
ಸಾರ= ಸತ್ವ, ಉಜ್ಜುಗ= ಕಾರ್ಯ

ಜಗತ್ತಿನ ವಸ್ತುಗಳಲ್ಲಿನ ನೂರಾರು 'ರಸ'ಗಳಲ್ಲಿ 'ಸಾರವಿರುವುದು ಮೂರು. ಅವೇ 'ಮೋಹ, ಕರುಣೆ ಮತ್ತು ಶಾಂತಿ. ಈ ಮೂರೂ ಸಾರಗಳು ಒಂದಕ್ಕೊಂದು ಪೂರಕವಾಗಿದ್ದು, ಒಂದು ಮತ್ತೊಂದರ ಬೆಳವಣಿಗೆಗೆ ಮೂಲವಾದರೆ, ನಮ್ಮ ಜೀವನವು ಚೆಂದಗೊಳ್ಳುತ್ತದೆ ಎಂದು ಸಾರಯುಕ್ತವಾದ ಬದುಕಿನ ಪರಿಚಯವನ್ನು ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ ಮಾಡಿದ್ದಾರೆ.

ಈ ಜಗತ್ತಿನ ವಸ್ತುಗಳು ಒಬ್ಬೊಬ್ಬರಿಗೆ ಒಂದೊಂದು ರೀತಿಯ ಅನುಭವವನ್ನು ನೀಡುತ್ತವೆ. ಒಂದೇ ವಸ್ತು, ವಿಷಯ ಅಥವಾ ವ್ಯಕ್ತಿ ಒಂದೇ ಸಮಯದಲ್ಲಿ, ಬೇರೆ ಬೇರೆ ಮನುಷ್ಯರ ಮನಸ್ಸಿನಲ್ಲಿ ಭಿನ್ನ ಭಿನ್ನವಾದ ಭಾವನೆಗಳನ್ನು ಕೆರಳಿಸಬಹುದು. ಆ ಭಾವನೆಗಳು ವ್ಯಕ್ತವಾದಾಗ ಅದರ ರೂಪಕ್ಕೆ 'ರಸ'ವೆನ್ನುತ್ತಾರೆ. ಗುಂಡಪ್ಪನವರು ಹೇಳುವ ನೂರಾರು ರಸಗಳನ್ನು ವಿದ್ವನ್ಮಣಿಗಳು ಒಂಬತ್ತಾಗಿ ವಿಂಗಡಿಸಿದ್ದಾರೆ. ಅವೇ 'ಶಾಂತ, ಶೃಂಗಾರ, ವೀರ, ಕರುಣ, ಅದ್ಭುತ, ಹಾಸ್ಯ, ಭಯಾನಕ, ಭೀಭತ್ಸ ಮತ್ತು ರೌದ್ರ' ರಸಗಳು.

ಆದರೆ ಮನುಷ್ಯನ ಮನೋಭಾವ ಊಹಿಸಲಸಾಧ್ಯವಾದ್ದರಿಂದ ಈ ವಿಂಗಡಣೆಯ ಸಮರ್ಪಕತೆಯ ಬಗ್ಗೆ ವಿವಾದವುಂಟು.

ಜೀವನದ ಮೌಲ್ಯಗಳನ್ನು ಪರಿಗಣಿಸಿ ಮಾನ್ಯ ಗುಂಡಪ್ಪನವರು ಈ ಎಲ್ಲಾ ರಸಗಳ ಸಾರವನ್ನು 'ಮೋಹ ಕರುಣೆ ಮತ್ತು ಶಾಂತ'ವೆಂದು ವಿಂಗಡಿಸಿದ್ದಾರೆ. ಮನುಷ್ಯನ ಮನದಲ್ಲಿ ಜಗತ್ತಿನ ಎಲ್ಲ ವಸ್ತುಗಳಲ್ಲಿಯೂ ಮೋಹವುಂಟಾಗುತ್ತದೆ.'ನಾನು' ಎನ್ನುವ 'ಮಮಕಾರ'ವೇ ಇದಕ್ಕೆ ಕಾರಣ. ಇದರಿಂದಲೇ ಇವನಿಗೆ ವಸ್ತು ವಿಷಯ ಮತ್ತು ವ್ಯಕ್ತಿಗಳ ಮೇಲೆ ಮೋಹವುಂಟಾಗುತ್ತದೆ.ಈ ಮೋಹವು ಮೇಲೆ ಉಲ್ಲೇಖಿಸಿದ ರಸಗಳಿಗೂ ಕಾರಣವಾಗುತ್ತದೆ ಮತ್ತು ಎಲ್ಲ ಅಥವಾ ಯಾವುದಾದರೂ ಒಂದು ರೂಪವನ್ನು ತಾಳಬಹುದು.

ಆದರೆ 'ನಾನು' ಎಂಬ ಮಮಕಾರವನ್ನು ಬಿಟ್ಟು ನನ್ನಂತೆ ಅನ್ಯರೂ ಸಹ' ಎಂದು ಯೋಚಿಸಿದರೆ ಜಗತ್ತಿನ ಜೀವಿಗಳೆಲ್ಲರಲ್ಲಿಯೂ 'ಕರುಣೆ'ಉಂಟಾಗಿ ಮನಸ್ಸು ಶಾಂತವಾಗುತ್ತದೆ. ಹಾಗೆ ಶಾಂತವಾದ ಮನಸ್ಸು 'ಸತ್ ಚಿತ್ ಆನಂದವನ್ನು ಪಡೆದುಕೊಳ್ಳುತ್ತದೆ. ಇದನ್ನೇ ಮಾನ್ಯ ಗುಂಡಪ್ಪನವರು' ಚೆಂದಗೊಂಡುಜ್ಜುಗವೋ ಎಂದು ಹೇಳುತ್ತಾ, ಹಾಗೆ ಆದರೆ ಜೀವನ ಚೆಂದವಾಗುತ್ತದೆ ಎಂದು ಹೇಳಿದ್ದಾರೆ. ನಾವೂ ಸಹ ಆ ಮೋಹದ ವೃತ್ತದಿಂದ ಹೊರಬಂದು, ಸಕಲ ಜೀವರಾಶಿಗಳಲ್ಲಿಯೂ ಕರುಣೆಯನ್ನು ತೋರಿದರೆ ನಮಗೂ ಶಾಂತಿ ಸಿಗಬಹುದು. ಆ ಮೋಹದ ಹಿಡಿತದಿಂದ ಹೊರಬರಬೇಕು ಅಷ್ಟೇ!!

**ಮುಕ್ತಕ – 456** **ಪಿಡಿ ಗಳಿಸು ಭುಜಿಸೊಡೆಯನಾಗೆನ್ನುವುದು ಮೋಹ |**
**ಕೊಡು ಸಲಿಸು ಸೇವೆಗೈಯನ್ನುವುದು ಕರುಣೆ ||**
**ಬಿಡು ನೀನು ನಾನುಗಳ, ವಿಶ್ವಾತ್ಮಪದವನೀ-**
**ನಡೆರೆನ್ನುವುದು ಶಾಂತಿ - ಮಂಕುತಿಮ್ಮ |**

ಭುಜಿಸೊಡೆಯನಾಗೆನ್ನುವುದು=ಭುಜಿಸು+ಒಡೆಯನಾಗು+ಎನ್ನುವುದು,
ಸೇವೆಗೈಯನ್ನುವುದು=ಸೇವೆ+ಗೈ+ಎನ್ನುವುದು,
ವಿಶ್ವಾತ್ಮಪದವನೀನಡರೆನ್ನುವುದು=ವಿಶ್ವಾತ್ಮ+ಪದವಿಯನು+ನೀನು+ಆ ಡರು+ಎನ್ನುವುದು,

ಭುಜಿಸು= ತಿನ್ನು, ಅನುಭವಿಸು, ಗೈ = ಮಾಡು, ಆಡರು=ಹೊಂದು

ಹಿಡಿ, ಗಳಿಸು, ಅನುಭವಿಸು, ಒಡೆಯನಾಗು ಎಂದು 'ಮೋಹ' ನಮ್ಮನ್ನು ಪ್ರೇರೇಪಿಸುತ್ತದೆ.'ಕರುಣೆ' ಕೊಡು, ಸಲ್ಲಿಸು, ಸೇವೆಮಾಡು, ಎನ್ನುವ ಭಾವಗಳನ್ನು ಮನದಲ್ಲಿ ಮೂಡಿಸುತ್ತದೆ. ನೀನು ಮತ್ತು ನಾವು ಎನ್ನುವ ಭೇದವನ್ನು ತೊರೆದು ವಿಶ್ವಾತ್ಮಭಾವವನ್ನು ಪಡೆ ಎಂದು 'ಶಾಂತಿ' ಭೋದಿಸುತ್ತದೆ ಎಂದು, ಮೋಹ ಕರುಣೆ ಮತ್ತು ಶಾಂತಿಯ ಸ್ವಭಾವಗಳನ್ನು ವಿಸ್ತರಿಸಿ ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

6

| | |
|---|---|
| ಕಗ್ಗರಸಧಾರೆ | ಮೋಹ ಕರುಣಾ ಶಾಂತಿ 454 458 |

ಈ ಜಗತ್ತಿನಲ್ಲಿ ಎಲ್ಲ ಪ್ರಾಣಿಗಳಿಗೂ ತಾವು ಇಷ್ಟಪಟ್ಟದ್ದನ್ನು ಪಡೆದುಕೊಳ್ಳಬೇಕೆಂಬ ಆಸೆ ಉಂಟಾಗುತ್ತದೆ. ಆ ಆಸೆ ಪ್ರೇರಕವಾಗಿ, ಪ್ರಯತ್ನ ನಡೆಯುತ್ತದೆ. ಪಡೆದರೆ, ಮತ್ತಷ್ಟು ಪಡೆಯಬೇಕೆಂಬ ಬಯಕೆಯಾಗುತ್ತದೆ.ಪಡೆದದ್ದು ತನಗೆ, ತನ್ನಲ್ಲೇ ಇರಬೇಕೆಂಬ ಮೋಹವುಂಟಾಗುತ್ತದೆ. ತಾರ್ಕಿಕವಾಗಿ ಒಂದು ವ್ಯಕ್ತಿ, ವಿಷಯ ಮತ್ತು ವಸ್ತುವಿನಲ್ಲಿ ಮೋಹವುಂಟಾದರೆ ಮಿಕ್ಕೆಲ್ಲ ಭಾವಗಳೂ ಬಂದು ಸೇರುತ್ತವೆ. ಇಂತಹ ಮನಃಸ್ಥಿತಿಯಲ್ಲಿ ಅಶಾಂತಿ, ಕ್ಲೇಶ ಅಥವಾ ದುಃಖವುಂಟಾಗುವ ಸಂಭವಗಳೇ ಹೆಚ್ಚು.

ಆದರೆ ಮನಸ್ಸಿನಲ್ಲಿ ಕರುಣಾಭಾವವಿದ್ದರೆ ಅನ್ಯ ಜೀವಿಗಳನ್ನೂ ತನ್ನಂತೆ ಕಾಣುವ ಮನೋಭಾವ ಬಂದು, ಕೊಡುವ ಮನಸ್ಸು ಬಂದು, ಅನ್ಯರಿಗೆ ಸೇವೆ ಮಾಡುವ ಮನೋಭಾವ ಬರುತ್ತದೆ.ಇಲ್ಲಿ ಕ್ಲೇಶವಿಲ್ಲ. ಒಂದು ಬಗೆಯ ತೃಪ್ತಿ ಇರುತ್ತದೆ.

ಆದರೆ ಈ ಮೋಹ ಮತ್ತು ಕರುಣೆ ಎರಡೂ ಭಾವಗಳನ್ನು ಮೀರಿ ಇರುವ ಭಾವವೇ ಶಾಂತಿ.ಶಾಂತ ಭಾವದಲ್ಲಿ ಜಗತ್ತಿನಲ್ಲಿರುವ ಎಲ್ಲ ಪ್ರಾಣಿಗಳೂ ತನ್ನಂತೆ, ಎಲ್ಲ ಆತ್ಮಗಳೂ ಒಂದೇ ಎಂದು ಒಂದು ವಿಶ್ವಾತ್ಮ ಭಾವ ಬಂದು, ಪರಸ್ಪರ ಭೇಧಗಳು ನಶಿಸಿ, ದ್ವಂದ್ವಗಳಿಂದ ಹೊರಬಂದು, ಮೋಹವೂ ಅಳಿಸಿಹೋಗಿ, ಮನಸ್ಸು ಶಾಂತವಾಗುತ್ತದೆ,

ಅಂತಹ ಶಾಂತ ಸ್ಥಿತಿಯನ್ನು ನಾವು ಪಡೆಯುವ ಪ್ರಯತ್ನವನ್ನು ಮಾಡಬೇಕು. ಅಲ್ಲಿಗೆ ತಲುಪಿದರೆ ಶುದ್ಧವಾದ 'ಆನಂದ' ನಮ್ಮದಾಗುತ್ತದೆ.

**ಮುಕ್ತಕ-457** **ಚಾರುದೃಶ್ಯಂಗಳಿಂ ಪ್ರೀತಿ ಹೃದಯವಿಕಾಸ |**
**ಕ್ರೂರದೌಷ್ಟ್ಯಗಳಿಂ ವೀರಾನುಕಂಪ ||**
**ಭೈರವಾದ್ಭುತಗಳಿಂ ಮೌನದಂತರ್ಮನನ |**
**ದಾರಿಯುದ್ಧಾರಕಿವು – ಮಂಕುತಿಮ್ಮ ||**

ಚಾರುದೃಶ್ಯಗಳಿಂ=ಚಾರು+ದೃಶ್ಯಗಳಿಂ, ಕ್ರೂರದೌಷ್ಟ್ಯಗಳಿಂ=ಕ್ರೂರ+ದೌಷ್ಟ್ರಂಗಳಿಂ, ವೀರಾನುಕಂಪ=ವೀರ+ಅನುಕಂಪ,ಭೈರವಾದ್ಭುತಗಳಿಂ=ಭೈರವ+ಅದ್ಭುತಗಳಿಂ,ಮೌನದಂತರ್ಮನನ=ಮೌನ ದ+ಅಂ ತರ್ಮನನ, ದಾರಿಯುದ್ಧಾರಕಿವು=ದಾರಿಯು+ಉದ್ಧಾರಕೆ+ಇವು
ಚಾರು= ಸುಂದರ, ದೌಷ್ಟ= ದುಷ್ಟತನ, ಭೈರವ=ಭೀಕರ, ಅಂತರ್ಮನನ= ಅಂತರಂಗದ ಚಿಂತನೆ,

ಒಳ್ಳೆಯ ಸುಂದರವಾದ ದೃಶ್ಯಗಳನ್ನು ನೋಡಿದರೆ ಮನಸ್ಸು ಪ್ರಫುಲ್ಲವಾಗುತ್ತದೆ. ಕ್ರೌರ್ಯ ಮತ್ತು ದುಷ್ಟತನವನ್ನು ನೋಡಿದರೆ, ಮನದಲ್ಲಿ ವೀರಾವೇಶ ಉಕ್ಕುತ್ತದೆ ಅಥವಾ ಅನುಕಂಪ ಉಂಟಾಗುತ್ತದೆ.ಭೀಕರ ಅಥವಾ ಅದ್ಭುತಗಳನ್ನು ಕಂಡಾಗ ಅಂತರ್ಮನ ಮೌನ ತಳೆದು ಚಿಂತನೆಗೊಳಗಾಗುತ್ತದೆ. ಈ ರೀತಿಯ ಅನುಭವಗಳು ಮಾನವನ ಉದ್ಧಾರಕ್ಕೆ ಮಾರ್ಗಗಳು ಎಂದು ಉಲ್ಲೇಖಿಸಿದ್ದಾರೆ ಮಾನ್ಯ ಗುಂಡಪ್ಪನವರು.

ಕಂಡ ದೃಶ್ಯ ಸುಂದರವಾಗಿದ್ದರೆ ಸಾಮಾನ್ಯವಾಗಿ ಮನಸ್ಸು ಆನಂದ ಪಡುತ್ತದೆ. ಹಾಗೆ ಕಂಡೂ ಆನಂದಪಡದ ಮನ 'ಅರಸಿಕ' ಮನವಾಗಿರಬೇಕು ಅಥವಾ ಬೇರಾವುದೋ ರೀತಿಯಲ್ಲಿ ಬಾಧಿತವಾಗಿಬೇಕು. ಇಲ್ಲದಿದ್ದರೆ ಸುಂದರ ವಸ್ತುವನ್ನು ಕಂಡು ಸಂತಸ ಪಡದ ಮನವಿರಲು ಸಾಧ್ಯವೇ ಇಲ್ಲ. ಹಾಗೆ ಆನಂದಪಟ್ಟ ಮನಸ್ಸು ತಾ ಪಟ್ಟ ಆನಂದದ ಪ್ರಭಾವದಿಂದ 'ಸುಮನ'ವಾಗುತ್ತದೆ.

ಇನ್ನು ಕ್ರೌರ್ಯ ಅಥವಾ ದೌಷ್ಟ್ಯಗಳನ್ನೂ ಕಂಡಾಗ, ನಾವು ಆ ಭಾವ ತೋರುವವರ ಪರವಾದರೆ ನಮ್ಮ ಮನದಲ್ಲಿ ವೀರಾವೇಶ ಉಕ್ಕುತ್ತದೆ ಅಥವಾ ಕ್ರೌರ್ಯ ಅಥವಾ ದೌಷ್ಟ್ಯಗಳಿಂದ ಪೀಡಿತರಾದವರ ಪರವಾದರೆ ನಮ್ಮ ಮನದಲ್ಲಿ ಅವರ ಪರವಾಗಿ ಅನುಕಂಪ ಉಂಟಾಗುತ್ತದೆ.ಇದಲ್ಲದೆ ಭಯಂಕರ ಅಥವಾ ಅದ್ಭುತಗಳನ್ನು ಕಂಡಾಗ ನಾವು ಮೂಕಸ್ಮಿತರಾಗುತ್ತೇವೆ ಅಥವಾ ಆ ವಸ್ತು ಅಥವಾ ವಿಷಯ ಕುರಿತು ಅಂತರ್ಮನದಲ್ಲಿ ಚಿಂತನೆ ಮತ್ತು ಮಂಥನವಾಗುತ್ತದೆ.

ಹಾಗಾಗಿ ಕೇವಲ 'ಮೋಹ, ಕರುಣೆ ಮತ್ತು ಶಾಂತ ಭಾವಗಳಲ್ಲದೆ ಅನ್ಯ ಭಾವಗಳೂ ಸಹ ನಮ್ಮ ಮನವನ್ನು ಪ್ರತಿಕ್ರಿಯೆ ನೀಡುವಂತೆ ಮಾಡಿ ನಮ್ಮ ಮೇಲೆ ಆ ಅನುಭವಗಳ ಪ್ರಭಾವವನ್ನು ಬೀರುತ್ತದೆ ಮತ್ತು ನಾವು ಅದರಿಂದ ಪ್ರಭಾವಿತರಾಗುತ್ತೇವೆ. ಹೀಗೆ ಸಾವಿರಾರು ಭಾವಗಳಿಂದ ಪ್ರಭಾವಿತವಾದ ನಮ್ಮ ವ್ಯಕ್ತಿತ್ವ, ಎಲ್ಲವನ್ನೂ ಅನುಭವಿಸಿ, ಎಲ್ಲದರ ಸಾರವನ್ನು ಅರಿತಾಗ, ಆತೋದ್ಧಾರಕ್ಕೆ ದಾರಿಯಾಗುತ್ತದೆ ಎಂದು ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು. ಅಂತಹ ಅನುಭವ, ಅರಿವು ನಮಗೆ ಲಭ್ಯವಾದರೆ ನಾವೇ ಧನ್ಯರು.

**ಮುಕ್ತಕ - 458**

**ಹಿಂದಣದುಳಿವಿರದು, ಮುಂದಣದರುಸಿರಿರದು |**
**ಒಂದರೆಕ್ಷಣ ತುಂಬಿ ತೋರುವುದನಂತ ||**
**ಒಂದೆ ಕಣ್ಣೊಂದೆ ಗುರಿಯೊಂದೆ ಮೈಮನಮರೆತ |**
**ಸುಂದರದ ಲೋಕವದು - ಮಂಕುತಿಮ್ಮ ||**

ಹಿಂದಣದುಳಿವಿರದು=ಹಿಂದಣದ+ಉಳಿವಿರದು, ಮುಂದಣದರುಸಿರಿರದು= ಮುಂದಣದರ+ಉಸಿರಿರದು, ಒಂದರೆಕ್ಷಣ=ಒದರೆಕ್ಷಣ, ತೋರುವುದನಂತ=ತೋರುವುದು+ಅನಂತ, ಲೋಕವದು=ಲೋಕವು+ಅದು

ಹಿಂದಿನದರ ಉಳಿವಿರದು, ಮುಂದಿನಿದರ ಸುಳಿವಿರದು, ರಸಾಸ್ವಾಧನೆಮಾಡುವಾಗ, ನೋಟ ಗಮನ ಎಲ್ಲದರೊಳಗೂ ಒಂದು ಘಳಿಗೆ ಆ ರಸದ ಅನುಭವವೇ ತುಂಬಿ, ಮೈ ಮನವನ್ನು ಮರೆತಂತೆ ಆಗುತ್ತದೆ ಮತ್ತು ಅಲ್ಲಿರುವಾಗ ಅದೊಂದು ಸುಂದರ ಲೋಕದಂತೆ ಕಾಣುತ್ತದೆ ಎಂದು ರಸಾಸ್ವಾಧನೆಯ ಮಾರ್ಗವನ್ನು ವಿಶ್ಲೇಷಿಸಿದ್ದಾರೆ ಮಾನ್ಯ ಗುಂಡಪ್ಪನವರು.





ತಾವು ಮಾಡುವ ಪ್ರತೀ ಕೆಲಸದಲ್ಲಿಯೂ ಜನರು ಈ ರಸಗಳ ಅನುಭವವನ್ನು ಪಡೆಯುತ್ತಿರುತ್ತಾರೆ. ಆದರೆ ಮಾಡುವ ಕೆಲಸದಲ್ಲಿ ತಲ್ಲೀನತೆ ಇಲ್ಲವಾದರೆ ರಸಾನುಭಾವವಾಗುವುದಿಲ್ಲ. ಈ ರೀತಿಯ ರಸಾನುಭವವನ್ನು ನಾವು ಕಲಾಕಾರ, ಶಿಲ್ಪಿ, ಸಂಗೀತಗಾರ, ವಿಜ್ಞಾನಿ, ಉಪಾಧ್ಯಾಯ, ಮುಂತಾದವರಲ್ಲಿ ಕಾಣಬಹುದು. ಅವರು ತಮ್ಮ ಕಾರ್ಯದ ಸಮಯದ ಪ್ರತೀ ಕ್ಷಣವನ್ನೂ ಅನನ್ಯವಾಗಿ ಅನುಭವಿಸುತ್ತಾರೆ. ಅವರು ಮಾನ್ಯ ಗುಂಡಪ್ಪನವರು ಹೇಳುವಂತೆ 'ಕಣ್ಣೊಂದೆ ಗುರಿಯೊಂದೆ ಮೈಮನ ಮರೆತ' ಅಂತಹ ಸ್ಥಿತಿಯಲ್ಲಿರುತ್ತಾರೆ. ಅದು ತಪಸ್ಸಿನ ಸ್ಥಿತಿ, ತಲೀನತೆಯ ಸ್ಥಿತಿ.ಆ ಸ್ಥಿತಿಯಲ್ಲಿ ಅಮಿತಾನಂದದ ಅನುಭವವಾಗುತ್ತದೆ.

ಇನ್ನು ನಾವು ಒಂದು ಕಲಾಕೃತಿಯನ್ನೋ, ಪ್ರಕೃತಿಯ ಸೌಂದರ್ಯವನ್ನೋ ನೋಡುವಾಗಲೋ ಅಥವಾ ಸಂಗೀತವನ್ನು ಕೇಳುವಾಗಲೋ, ಒಂದು ಒಳ್ಳೆಯ ಪುಸ್ತಕವನ್ನು ಓದುವಾಗಲೋ, ನಮ್ಮ ಮನಸ್ಸ ಸಹ ಹಿಂದಿನದನ್ನು ಮರೆತು ಮುಂದಿನ ಬಗ್ಗೆ ಆಲೋಚಿಸದೆ ಏಕಾಗ್ರತೆಯಿಂದ ಅದರೊಳಗೆ ಮುಳುಗಿ ಆನಂದವನ್ನು ಅನುಭವಿಸುವುದಿಲ್ಲವೇ? ಹಾಗೆ ಅನುಭವಿಸಿದರೆ ಮಾತ್ರ ನಾವು ಆ ವಸ್ತು, ವಿಷಯ ಅಥವಾ ವ್ಯಕ್ತಿಗಳಿಂದ ಸಿಗಬಹುದಾದ ಆನಂದವನ್ನು ಪಡೆಯಲು ಮತ್ತು ಅನುಭವಿಸಲು ಸಾಧ್ಯ. ಚಂಚಲ ಮನಸ್ಸಿಗೆ ಆನಂದ ಸಿಗಲು ಸಾಧ್ಯವಿಲ್ಲ.

ಹಾಗಾಗಿ ನಿಜವಾದ ಸೌಂದರ್ಯವನ್ನು ಅನುಭವಿಸಬೇಕಾದರೆ ಆ 'ಸುಂದರ ಕ್ಷಣ'ವನ್ನು ಅನನ್ಯವಾಗಿ ಅನುಭವಿಸಬೇಕು. ಹಾಗೆ ಅನುಭವಿಸಿದಾಗ ಅದೇ ಒಂದು 'ಸುಂದರ ಲೋಕ ವಿಹಾರ' ವಾಗುತ್ತದೆ. ಅಂತಹ ಅನುಭವವನ್ನು ನಾವು ಪಡೆಯುವ ಪ್ರಯತ್ನವನ್ನು ಮಾಡಬೇಕು.

ಮುಕ್ತಕ - 459

ಹೃದಯಪುಷ್ಪಮರಂದವಾತ್ಮಕೆ ನಿಜಾನಂದ ।
ಉದಿಪುದಾ ರಸ ಸುಂದರದ ಕಿರಣ ಸೋಕೆ ॥
ಬದುಕಿನೊಳ್ ಕವಿತೆಯೊಳ್ ಕಲೆಗಳೊಳ್ ಪ್ರಕೃತಿಯೊಳ್ ।
ಪುದಿದಿರ್ಪ ಕಾಂತಿಯದು - ಮಂಕುತಿಮ್ಮ ॥

ಹೃದಯಪುಷ್ಪಮರಂದವಾತ್ಮಕೆ=ಹೃದಯ+ಪುಷ್ಪ+ಮರಂದವು +ಆತ್ಮಕೆ, ನಿಜಾನಂದ= ನಿಜ+ಆನಂದ,
ಉದಿಪುದಾ =ಉದಿಪುದು+ಆ, ಪುದಿದಿರ್ಪ=ಪುದಿದು+ಇರ್ಪ
ಮರಂದವು = ಮಕರಂದ, ಉದಿಪುದು= ಉದಯಿಸುವುದು, ಪುದಿದು= ಹುಡುಗಿ, ಅಡಗಿ, ಇರ್ಪ=ಇರುವ

ಸೌಂದರ್ಯದ ಕಿರಣ ನಮ್ಮನ್ನು ಸೋಕಿದೊಡನೆ ತತ್ಸಂಬಂಧವಾದ 'ರಸ' ನಮ್ಮ ಮನಸ್ಸಿನಲ್ಲಿ ಉಕ್ಕಿ ಹೃದಯದ ಅನುಭವಕ್ಕೆ ಬಂದಾಗ, ಆತ್ಮವು ನಿಜಾನಂದವನ್ನು ಪಡೆಯುವುದು. ಬದುಕಿನಲ್ಲಿ, ಕವಿತೆ, ಕಲೆ ಮತ್ತು ಪ್ರಕೃತಿಗಳಲ್ಲಿ ಅಂತಹ ಅನಂದವನ್ನು ನೀಡುವ ಕಾಂತಿ ಅಡಗಿದೆ ಎಂದು ನಿಜಾನಂದಾನುಭೂತಿಯ ವಿಚಾರವನ್ನು ಅರುಹಿದ್ದಾರೆ ನಮಗೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

'ಹೃದಯ ಕಮಲ' ಎಂದಿದ್ದಾರೆ ನಮ್ಮ ಕವಿಗಳು, ದಾರ್ಶನಿಕರು, ಹೃದಯವನ್ನು ಒಂದು ಹೂವಿಗೆ ಹೋಲಿಸಿದ್ದಾರೆ. ಹೊರಗೆ ಕಂಡ ಆನಂದವು ಈ ಹೃದಯ ಕಮಲದಲ್ಲಿ ಸೇರಿ ಅದರ ಕಾಂತಿಯಿಂದ ಹೂವರಳಿ, ಆ ಆನಂದವನ್ನು ಹೃದಯದಿಂದ ಮನಕ್ಕೆ ಮನದಿಂದ, ಆತ್ಮಕ್ಕೆ ತಲುಪಿಸಿ, ಆತ್ಮವು ನಿಜಾನಂದವನ್ನು ಪಡೆಯುವಂತೆ ಮಾಡುತ್ತದೆ. ಪ್ರತಿಯೊಂದು ಸುಂದರ ವಸ್ತುವೂ ಅಂತಹ ನಿಜಾನಂದವನ್ನು ಕೊಡುವ ಕ್ಷಮತೆ ಮತ್ತು ಕಾಂತಿಯನ್ನು ಹೊಂದಿರುತ್ತದೆ.

ಅಂತಹ ಸೌಂದರ್ಯ ನಮ್ಮ ಬದುಕಿನ ಅನುಭವಗಳಲ್ಲಿ, ನಾವು ಓದಿದ ಕವಿತೆಯಲ್ಲಿ, ನಾವು ನೋಡಿದ ಕಲಾಕೃತಿಗಳಲ್ಲಿ ಅಥವಾ ಎಲ್ಲ ಸೌಂದರ್ಯಗಳ ಆಗರವಾದ ಪ್ರಕೃತಿಯಲ್ಲಿ ನಮಗೆ ಸಿಗುತ್ತದೆ. ಅಷ್ಟೇ ಅಲ್ಲದೆ ನಮ್ಮ ಮನಸ್ಸು ಸಕ್ರಿಯವಾಗಿ, ನಾವು ಬರೆದ ಕಥೆಯೋ, ಕವಿತೆಯೋ, ಕಾವ್ಯವೋ, ಚಿತ್ರವೋ, ಯಾವುದಾದರೂ ನಮಗಷ್ಟೇ ಅಲ್ಲದೆ ಅದನ್ನು ಓದಿದ ಅಥವಾ ನೋಡಿದವರಿಗೂ ಆನಂದವನ್ನು ನೀಡಬಲ್ಲದ್ದಾಗಿರುತ್ತದೆ ಅಲ್ಲವೇ?

ಜಗತ್ತಿನ ಸೃಷ್ಟಿಯಲ್ಲಿನ ಎಲ್ಲವೂ, ಪ್ರಮಾಣ ಭೇಧವಿದ್ದರೂ ಅಂತಹ ಆನಂದವನ್ನು ನೀಡಬಲ್ಲ ಕಾಂತಿಯನ್ನು ತನ್ನಲ್ಲಡಗಿಸಿಕೊಂಡಿರುತ್ತದೆ, ಅದನ್ನು ಹೊರ ಚೆಲ್ಲಬಲ್ಲ ಕ್ಷಮತೆ ಅದಕ್ಕೆ ಪ್ರಕೃತಿದತ್ತವಾಗಿ ಬಂದಿರುತ್ತದೆ. ಅದನ್ನು ಕಂಡು ಆಸ್ವಾಧಿಸುವ ಕ್ಷಮತೆಯನ್ನೂ ನಮಗೆ ಆ ಪರಮಾತ್ಮ ಕೊಟ್ಟಿರುವಾಗ, ಅಂತಹ ಸೌಂದರ್ಯವನ್ನು ಕಂಡು, ಆಸ್ವಾಧಿಸಿ, ಅನುಭವಿಸಿ ಮಾನ್ಯ ಗುಂಡಪ್ಪನವರು ಹೇಳಿರುವ ನಿಜಾನಂದವನ್ನು ಪಡೆಯಲು ನಾವು ಪ್ರಯತ್ನಪಡಬೇಕು. ಅದಕ್ಕೆ ಮನಸ್ಸು ನಿರ್ಮಲವಾಗಿರಬೇಕು. ಏಕೆಂದರೆ ಚಂಚಲ ಅಥವಾ ಕೊಳಕು ಮನಸ್ಸಿನಿಂದ ಆನಂದಾಸ್ವಾಧನೆ ಸಾಧ್ಯವಿಲ್ಲ. ಶುದ್ಧಮನಸ್ಸಿನಿಂದ ನಾವು ಪ್ರಯತ್ನಪಟ್ಟರೆ ನಮಗೂ ನಿಜಾನಂದದ ಅನುಭವವಾಗಬಹುದು.

**ಮುಕ್ತಕ – 460**

**ಜಗದ ಬಂದೀಗೃಹದಿ ಬಿಗಿಯುತಿರೆ ವಿಧಿ ನಿನ್ನ ।**
**ನಿಗಮ ಸತ್ಕಲೆ ಕಾವ್ಯಗಳ ಗವಾಕ್ಷಗಳಿಂ ॥**
**ಗಗನದೊಳನಂತದರ್ಶನದ ಮುಕ್ತಿಯನೊಂದು ।**
**ನಗುನಗಿಸಿ ಲೋಕವನ್ನು - ಮಂಕುತಿಮ್ಮ ॥**

ಬಿಗಿಯುತಿರೆ=ಬಿಗಿಯುತ+ಇರೆ, ಗಗನದೊಳನಂತದರ್ಶನದ= ಗಗನದೊಳು+ಅನಂತ+ದರ್ಶನದ,

ಮುಕ್ತಿಯನೊಂದು= ಮುಕ್ತಿಯನು+ಒಂದು

ಬಂದೀಗೃಹ=ಸೆರೆಮನೆ, ಗವಾಕ್ಷ-ಕಿಟಕಿ, ಒಂದು=ಹೊಂದು, ಪಡೆ

ವಿಧಿಯು ನಿನ್ನನ್ನು ಈ ಜಗತ್ತಿನ ಬಂದೀಖಾನೆಯಲ್ಲಿ ಸೆರೆಯಾಳಾಗಿಸಿರುವಾಗ, ಬಂದೀಖಾನೆಯ ಸೂರಿನಲ್ಲಿರುವ ಕಿಟಕಿಗಳಿಂದ ಆಕಾಶದ ಅನಂತ ದರ್ಶನದಿಂದ, ವೇದ, ಕಲೆ, ಕಾವ್ಯಗಳಂತಹ ವಿಚಾರಗಳನ್ನು ಅರಿತು, ಈ ಜಗತ್ತಿನಲ್ಲಿ ಅನಂದವನ್ನು ಪಡೆದು ನಕ್ಕು ನಲಿದು, ಪರರನ್ನೂ ನಗಿಸಿ, ಮುಕ್ತಿಯನ್ನು ಹೊಂದು ಎಂದು ಅಪ್ಪಣೆ ನೀಡಿದ್ದಾರೆ ಮಾನ್ಯ ಗುಂಡಪ್ಪನವರು, ಈ ಮುಕ್ತಕದಲ್ಲಿ.





ನಾವೆಲ್ಲಾ ನಮ್ಮ ವಿಧಿಗನುಸಾರ, ಈ ಜಗತ್ತಿನಲ್ಲಿ ಬಂದನಗಳಿಂದ ಬಂದಿಸಲ್ಪಟ್ಟ ಸೆರೆಯಾಳುಗಳು, ಪ್ರತಿನಿತ್ಯ ಈ ಬಂದನಗಳ ಸುಳಿಯಲ್ಲಿ ಕಾರ್ಯಗಳನ್ನು ಮಾಡುವುದೇ ನಮ್ಮ ವಿಧಿ. ಈ ಜಗತ್ತೇ ಒಂದು ಬಂದೀಖಾನೆ. ನಾವು ಮಾಡಿದ ಅಪರಾಧವೇನು ಎಂದು ಅರಿಯದೆಯೇ, ಸೆರೆಮನೆಯ ಅನುಭವ ನಮ್ಮದು. ಹೆಚ್ಚಿನಂಶ ನಮಗೆ ಈ ಸೆರೆಮನೆಯೇ ಬಹಳ ಪ್ರಿಯವಾಗಿಬಿಡುತ್ತದೆ. ಇದು ನಮಗೆ ಎಷ್ಟು ಒಗ್ಗಿ ಹೋಗುತ್ತದೆ ಎಂದರೆ, ಇದನ್ನು ಬಿಡಲು ನಮಗೆ ಮನಸ್ಸೇ ಬರುವುದಿಲ್ಲ.

ಆದರೆ ಇದು ಅಸಹನೀಯ ಎಂದು ನಮಗೆ ಅನಿಸಿದಾಗ ಅಥವಾ ಇದರಲ್ಲಿನ ಬದುಕು ನಮ್ಮನ್ನು ಬಿಗಿಯುತ್ತಿದೆ ಎಂದು ಅನಿಸಿದಾಗ ಅಥವಾ ಬಂದನದ ಭಾವದಿಂದ ಹೊರಬರಬೇಕೆಂದುಕೊಂಡಾಗ ಅನಂತ ವಿಶ್ವದಲ್ಲಿ ನೋಡಿದರೆ ನಮಗೆ, ವೇದ, ವೇದಾಂತ, ಕಾವ್ಯ, ಕಲೆ ಮುಂತಾದ ಬೆಳಕುಗಳು, ನಮ್ಮ ಬದುಕಿನ ಬಂದೀಖಾನೆಯ ಮೇಲ್ಚಾವಣಿಯ

ಕಿಟಕಿಗಳಿಂದ ಹರಿದು ಬರುತ್ತದೆ. ಆ ಬೆಳಕಿನಲ್ಲಿ ನಾವು ನಮ್ಮನ್ನು ತೊಡಗಿಸಿಕೊಂಡು, ಈ ಬೆಳಕುಗಳ ಮೂಲಕ ಪರತತ್ವವನ್ನು ಕಂಡುಕೊಂಡು, ಆನಂದ ಪಡಬೇಕು ಮತ್ತು ಆ ಆನಂದವನ್ನು ಪರರಿಗೂ ಹಂಚಿ ಸಂತಸಪಡಬೇಕು.

ನಿಜಕ್ಕೂ ಸಂತಸಪಡಬೇಕೆಂದುಕೊಂಡರೆ ಜಗತ್ತಿನಲ್ಲಿ ಸಾವಿರ ಮಾರ್ಗಗಳುಂಟು. ಮುಕ್ತರಾಗಬೇಕೆಂದರೆ ಅಥವಾ ಮುಕ್ತ ಭಾವವನ್ನು ಪಡೆಯಬೇಕೆಂದರೆ, ಬಂಧನದ ಭಾವದಿಂದ ಹೊರಬರಬೇಕು.ಪರಮಾತ್ಮ ತತ್ವದ ಬೆಳಕಿನಲ್ಲಿ ಜಗತ್ತನ್ನು ನೋಡಿದರೆ ಅದು ಸಾಧ್ಯ. ಅದನ್ನು ಪಡೆಯಲು ನಿರಂತರ ಪ್ರಯತ್ನ ನಮ್ಮದಾಗಬೇಕು.

**ಮುಕ್ತಕ – 461** **ರಾಮನುಂ ಭರತನುಂ ತಬ್ಬಿಕೊಂಡತ್ತಂದು ।**
**ಪ್ರೇಮಾಶ್ರುವುಕ್ಕಿ ನದಿಯಾಗಿ ಪರಿದಂದು ॥**
**ಸೀಮೆಯಂ ಮುಟ್ಟಿತಲ ಬಾಂಧವ್ಯಸೌಂದರ್ಯ ।**
**ಕ್ಷೇಮವದು ಜೀವಕ್ಕೆ - ಮಂಕುತಿಮ್ಮ ॥**

ತಬ್ಬಿಕೊಂಡತ್ತಂದು= ತಬ್ಬಿಕೊಂಡು+ಅ+ ಅಂದು, ಪ್ರೇಮಾಶ್ರುವುಕ್ಕಿ= ಪ್ರೇಮಾಶ್ರುವು+ಉಕ್ಕಿ,
ಪರಿದಂದು=ಪರಿದ+ಅಂದು,ಮುಟ್ಟಿತಲ=ಮುಟ್ಟಿತು+ಅಲ, ಕ್ಷೇಮವದು=ಕ್ಷೇಮವು+ಅದುಪರಿದ=ಹರಿದ,
ಸೀಮೆಯಂ=ಗಡಿಯನ್ನು (limit)

ರಾಮನು ಭರತನನ್ನು ಗಾಢವಾಗಿ ತಬ್ಬಿಕೊಂಡು ಅತ್ತ ದಿನ ಅವರಿಬ್ಬರಲ್ಲೂ ಪ್ರೇಮಾಶ್ರುವು ಉಕ್ಕಿ ನದಿಯಾಗಿ ಹರಿದು, ಭಾವ ಸೌಂದರ್ಯದ ಗರಿಮೆಯನ್ನು ಮುಟ್ಟಿದಂತೆ. ಪ್ರತೀ ಜೀವಿಯೂ ಭಾವ ಸೌಂದರ್ಯದಲ್ಲಿ ಮೆರೆದರೆ ಅದು ಜೀವಕ್ಕೆ ಹಿತ ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮಗೆ ಪ್ರಿಯವಾದವರನ್ನು ಕಾಣಲು ಮನಸ್ಸು ಹಾತೊರೆಯುತ್ತದೆ.ಅವರನ್ನು ಕಂಡಾಗ ಮನಸ್ಸು ಪ್ರಫುಲ್ಲವಾಗುತ್ತದೆ. ಭಾವುಕತೆ ಹೆಚ್ಚಾದರೆ ಪ್ರೇಮಾಶ್ರುವು ಉಕ್ಕಿ ಬರುತ್ತದೆ. ಹಾಗೆ ನಮ್ಮ ಆಪ್ತರನ್ನು ಕಂಡಾಗ

ಉಂಟಾಗುವ ಸಂತೋಷವೇ ಭಾವ ಸೌಂದರ್ಯ, ಈ ಭಾವ ಸೌಂದರ್ಯವನ್ನು ಅನುಭವಿಸುವುದು ಆತ್ಮಕ್ಕೆ ಸುಖವನ್ನು ನೀಡುತ್ತದೆ. ಆ ಸುಖವೇ ಆತ್ಮಕ್ಕೆ ಸಂಕ್ಷೇಮ, ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು.

ಸಚ್ಚಿದಾನಂದಸ್ವರೂಪವಾದ ಆತ್ಮ ಸಕಲ ಜೀವರಾಶಿಗಳಲ್ಲಿರುವ ಚೇತನವನ್ನೂ ಪ್ರೀತಿಸುವ ಕ್ಷಮತೆಯನ್ನು ಹೊಂದಿದೆ. ಆದರೆ ಇಂದ್ರಿಯ ಸಂಸರ್ಗದಿಂದ ಅಹಂಕಾರ ಜನ್ಯವಾದ 'ನಾನು-ನನ್ನದು' ಎಂಬ ಮಮಕಾರದಿಂದ, ರೂಪಭೇದವನ್ನು ಮಾಡುತ್ತದೆ. ಉದಾಹರಣೆಗೆ, ಕೆಲವರು ಜಿರಳೆ, ಹಲ್ಲಿಯಂತಹ ಪ್ರಾಣಿಗಳನ್ನು ಕಂಡಾಗ ಹೌಹಾರಿ ಬೀಳುತ್ತಾರೆ ಅಥವಾ ಅಸಹ್ಯಪಟ್ಟುಕೊಳ್ಳುತ್ತಾರೆ. ವಿಪರ್ಯಾಸವೆಂದರೆ ಆ ಜಿರಳೆ ಅಥವಾ ಹಲ್ಲಿಯಲ್ಲಿರುವ ಚೇತನ ಮತ್ತು ನಮ್ಮಲ್ಲಿರುವ ಚೇತನವೂ ಒಂದೇ ಎಂಬ ಅರಿವಿದ್ದರೂ ಸಹ, ರೂಪಭೇದದಿಂದ ನಮ್ಮಲ್ಲಿ ಭಾವಭೇದವುಂಟಾಗುತ್ತದೆ.ಲೋಕದ ಲೌಕಿಕ ವ್ಯವಹಾರದಲ್ಲಿ ಇದನ್ನು ತಪ್ಪು ಎಂದು ಪರಿಗಣಿಸಲಾಗದು.

ಆದರೆ ನಿಜಾನಂದವನ್ನು ಅನುಭವಿಸಬೇಕಾದರೆ ರೂಪ, ವರ್ಣ, ಭಾಷೆ, ಪ್ರದೇಶಗಳೆಂಬ ಗೋಡೆಗಳ ಚೌಕಟ್ಟಿನಿಂದ ಹೊರಬಂದು ಸಕಲ ಜೀವಿಗಳಲ್ಲೂ ಸಮನಾದ ಪ್ರೀತಿ ಪ್ರೇಮವು ನಮ್ಮ ಹೃದಯಕಮಲದಲ್ಲಿ ಅರಳಿದರೆ, ಆಗ ಆಗುವ ಅನಂದಾನುಭೂತಿಯ ಅನುಭವವು ಸುಂದರವಾಗಿರುತ್ತದೆ. ಆ ರೀತಿಯ ಅನುಭವಕ್ಕೆ ನಾವು ಬೆಳೆಯಬೇಕು. ಎಲ್ಲೆಗಳನ್ನು ಮೀರಿ ಬೆಳೆಯುವ ಪ್ರಯತ್ನವನ್ನು ಮಾಡಬೇಕು.

**ಮುಕ್ತಕ – 462**

**ಪ್ರೀತಿಮಹಿಮೆಯ ಚಿತ್ರ ರೀತಿಯಂ ವಾಲ್ಮೀಕಿ।**
**ನೀತಿಸೂಕ್ಷ್ಮದ ಗಹನಮಾರ್ಗಮಂ ವ್ಯಾಸರ್॥**
**ಗೀತೆಯಲಿ ವಿಶ್ವಜೀವನರಹಸ್ಯವನವರ್।**
**ಖ್ಯಾತಿಸಿಹರು ಕಾವ್ಯ - ಮಂಕುತಿಮ್ಮ॥**

ವಿಶ್ವಜೀವನರಹಸ್ಯವನವರ್= ವಿಶ್ವಜೀವನ+ರಹಸ್ಯವನು+ಅವರ್

ವಾಲ್ಮೀಕಿ ಮಹರ್ಷಿಯು ರಾಮಾಯಣದಲ್ಲಿ ಪ್ರೀತಿಯ ಮಹಿಮೆಯನ್ನೂ, ವ್ಯಾಸ ಮಹರ್ಷಿಯು ಮಹಾಭಾರತದಲ್ಲಿ ನೀತಿ ಸೂಕ್ಷ್ಮದ ಉನ್ನತ ವಿಚಾರಗಳನ್ನೂ, ಭಗವಾನ್ ಶ್ರೀ ಕೃಷ್ಣ ಭಗವದ್ಗೀತೆಯಲ್ಲಿ ಬದುಕಿನ

ರಹಸ್ಯವನ್ನೂ ತೋರಿ ಜಗತ್ತಿನಲ್ಲಿರುವ 'ಪ್ರೀತಿ, ನೀತಿ ಮತ್ತು ಜೀವನ'ದ ಸೌಂದರ್ಯವನ್ನು ಕಾವ್ಯರೂಪದಲ್ಲಿ ನೀಡಿದ್ದಾರೆ ಎಂದು ಪ್ರಸ್ತಾಪಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ರಾಮಾಯಣದಲ್ಲಿ ರಾಮ ಮತ್ತು ಭರತನ ಪ್ರೀತಿ, ರಾಮ ಮತ್ತು ಗುಹನ ಪ್ರೀತಿ, ರಾಮ ಮತ್ತು ಅಂಜನಾ ಪುತ್ರನ ಪ್ರೇಮ ಹೀಗೆ ಹತ್ತು ಹಲವಾರು ಪ್ರಸಂಗಗಳಲ್ಲಿ ವಾಲ್ಮೀಕಿ ಮಹರ್ಷಿಗಳು ಪ್ರೀತಿ ಪ್ರೇಮಗಳ ಮಹಿಮೆಯ ದೃಷ್ಟಾಂತವನ್ನು ಮೆರೆದಿದ್ದಾರೆ. ಅಂದಿನಿಂದ ಇಂದಿನವರೆಗೂ ಜಗತ್ತಿನಲ್ಲಿ ಆ ದೃಷ್ಟಾಂತಗಳು ಪ್ರೀತಿ ಪ್ರೇಮಗಳಿಗೆ ಪ್ರತೀಕವಾಗಿ ನಿಂತಿವೆ.





ಮಹಾಭಾರತದಲ್ಲಿ ವ್ಯಾಸರು ಜಗತ್ತಿನಲ್ಲಿ ಮಾನವರು ಪಾಲಿಸಬೇಕಾದ ನಿಯಮಗಳ ಮಹಾಪೂರವನ್ನೇ ಹರಿಸಿದ್ದಾರೆ. ಧರ್ಮರಾಯ ಮತ್ತು ಯಕ್ಷನ ನಡುವಿನ ಸಂವಾದ, ಮಹಾತ್ಮರಾದ ಭೀಷ್ಮ, ವಿಧುರ,ಧರ್ಮರಾಯ ಮುಂತಾದ ಪಾತ್ರಗಳ ಮೂಲಕ ನೀತಿ ಮತ್ತು ಧರ್ಮಗಳ ಸೂಕ್ಷ್ಮಗಳನ್ನು ಜಗತ್ತಿಗೆ ಅರುಹಿದ್ದಾರೆ. ಈ ಸೂಕ್ಷ್ಮಗಳು ಇಂದಿಗೂ ಪ್ರಸ್ತುತವಾಗಿ ಪಾಲಿಸಲು ಯೋಗ್ಯವಾಗಿವೆ.

ಭಗವಾನ್ ಶ್ರೀ ಕೃಷ್ಣನ ಭಗವದ್ಗೀತೆಯಂತೂ ಜೀವನ ಧರ್ಮವನ್ನು ಪ್ರತಿಪಾದಿಸಿದೆ ಮತ್ತು ಅದು ಸಾರ್ವಕಾಲಿಕ ಪ್ರಸ್ತುತತೆಯನ್ನು ಉಳಿಸಿಕೊಂಡಿದೆ. ಜಾತಿ, ಧರ್ಮ, ವರ್ಣ, ಪಂಗಡ, ದೇಶ, ಕಾಲಗಳ ಎಲ್ಲೆಯನ್ನು ಮೀರಿ ನಿಂತು, ಜ್ಞಾನದ ಉತ್ತುಂಗ ಶಿಖರದಲ್ಲಿ ನಿಂತು ಬದುಕಿನ ವಿಧಾನವನ್ನು ಘೋಷಿಸುತ್ತದೆ ಶ್ರೀಮದ್ ಭಗವದ್ಗೀತೆ.

ಜಗತ್ತಿನ ಬೇರೆಡೆಯಲ್ಲೂ ಲಭ್ಯವಾಗದ, ಪ್ರೀತಿ ಪ್ರೇಮ ನೀತಿ ನಿಯಮಗಳ ಅತೀ ಸುಂದರ ದೃಷ್ಟಾಂತಗಳು ನಮಗೆ ಈ ಕಾವ್ಯಗಳಲ್ಲಿ ಲಭ್ಯವಾಗುತ್ತದೆ ಎಂದು ನಮಗೆ ವಿಷಧೀಕರಿಸಿದ್ದಾರೆ ಮಾನ್ಯ ಗುಂಡಪ್ಪನವರು. ಆದರೆ ಇಂದಿನ ಸ್ಥಿತಿಯನ್ನು ನೋಡಿದರೆ ಬಹಳ ವಿಷಾಧವಾಗುತ್ತದೆ. ಅಂದಿನ ಪ್ರೀತಿ, ಪ್ರೇಮ, ನೀತಿ, ನಿಯಮಗಳ ಪರಿಭಾಷೆಯೇ ಬದಲಾಗಿದೆ. ಹಾಗಂದರೆ 'ಏನು' ಎಂದು ಕೇಳುವ ಪರಿಸ್ಥಿತಿ ಉಂಟಾಗಿದೆ. ಮೂಲಾರ್ಥದಲ್ಲಿನ ಇವುಗಳ ಮೌಲ್ಯಗಳು ಮತ್ತೆ ಪುನರುತ್ಥಾನವಾದರೆ, ನಮ್ಮ ಬದುಕುಗಳು ಮತ್ತೆ ಸುಂದರವಾಗಬಹುದು.

**ಮುಕ್ತಕ – 463**

**ಹೃದಯಕ್ಕೊಪ್ಪುವ ಭಾಷೆ ರಾಗ ಲಯ ವಿಸ್ತಾರ।**
**ಪದ ಚರ್ಚೆ ಮತವಿಚಾರಕೆ ತಕ್ಕ ಭಾಷೆ॥**
**ಹೃದಯ ಮತಿ ಸತಿಪತಿಗಳಂತಿರಲು ಯುಕ್ತವದು।**
**ಬದುಕು ರಸತರ್ಕೈಕ್ಯ - ಮಂಕುತಿಮ್ಮ॥**

ಹೃದಯಕ್ಕೊಪ್ಪುವ= ಹೃದಯಕ್ಕೆ+ ಒಪ್ಪುವ, ಸತಿಪತಿಗಳಂತಿರಲು ಸತಿ+ಪತಿಗಳಂತೆ+ಇರಲು,
ರಸತರ್ಕೈಕ್ಯ=ರಸ+ತರ್ಕ+ಐಕ್ಯ,
ಮತ= ಅಭಿಪ್ರಾಯ,

ಹೃದಯಕ್ಕೆ ಮುದನೀಡುವ ಸಂಗೀತ, ಕಲೆ, ಪ್ರಕೃತಿ ಮುಂತಾದವು ಅಗತ್ಯ .ತಮ್ಮ ತಮ್ಮ ಅಭಿಪ್ರಾಯವನ್ನು ಸಿದ್ಧಪಡಿಸಲು ಚರ್ಚೆಗೆ ವಾಗ್ವರಿ ಬೇಕು. ಹೃದಯ ಮತ್ತು ಬುದ್ಧಿ ಎರಡೂ ಗಂಡ-ಹೆಂಡಿರಂತಿರಲು ಬದುಕಿನಲ್ಲಿ ರಸಾನುಭವ ಮತ್ತು ತರ್ಕದ ಐಕ್ಯತೆಯನ್ನು ಕಂಡರೆ ಬದುಕು ಸುಂದರವಾಗುತ್ತದೆ ಎಂದು ಉಲ್ಲೇಖ ಮಾಡಿದ್ದಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮನಸ್ಸಿನ ಮೂಲಕ ನಮ್ಮ ಹೃದಯವನ್ನು ರಂಜಿಸುವ ವಿಚಾರಗಳು ಸಾಹಿತ್ಯ, ಸಂಗೀತ, ಕಲೆ, ಶಿಲ್ಪ, ಕಾವ್ಯ, ಕವನ ಮುಂತಾದ ಮಾನವ ನಿರ್ಮಿತವುಗಳು ಅಥವಾ ಆಕಾಶ, ಬೆಳದಿಂಗಳು, ಮಳೆ, ಝರಿ, ನದಿ, ಕಾಡು ಮುಂತಾದ ಪ್ರಕೃತಿ ನಿರ್ಮಿತವುಗಳು.ಇವೆಲ್ಲವೂ ನಮ್ಮ ಹೃದಯಕ್ಕೆ ಮುದ ನೀಡುತ್ತವೆ. ಹೃದಯ ಅರಳುವುದಕ್ಕೆ ಕಾರಣವಾಗುತ್ತವೆ.

ಭಾಷಾ ಚಾತುರ್ಯ, ವಾಗ್ಝರಿ, ತರ್ಕ,ಮುಂತಾದವು ನಮಗೆ ನಮ್ಮ ಅಭಿಪ್ರಾಯವನ್ನು ಸಿದ್ಧಪಡಿಸಲು ಬೇಕಾದ ಸಲಕರಣೆಗಳಾಗುತ್ತವೆ. ಇದು ಬುದ್ಧಿಯ ಕೆಲಸ. ಯಾರ ಬುದ್ಧಿ ಚುರುಕಾಗಿರುತ್ತದೆಯೋ ಅವರು ಈ ವಾದ ಮತ್ತು ತರ್ಕದಲ್ಲಿ ಮುಂದಿರುತ್ತಾರೆ. ಇಂತಹ ಬುದ್ಧಿವಂತರು ಮಂಡಿಸುವ ವಾದ ಅಥವಾ ತರ್ಕವು 'ಸರಿಯಾಗಿದೆ' ಎಂದು ಅನ್ನಿಸದಿದ್ದರೂ ಅವರ ಬುದ್ಧಿವಂತಿಕೆಯ ಪ್ರಭಾವದಿಂದ ಹಲವು ಬಾರಿ ಒಪ್ಪುವಂತಾಗುತ್ತದೆ.

ಒಂದಕ್ಕೊಂದಕ್ಕೆ ಅವಿನಾಭಾವ ಸಂಬಂಧವಿರುವ ಈ ಹೃದಯ ಮತ್ತು ಬುದ್ಧಿಗಳ ಒಳತಿರುಳ ನೋಡಿ. ಒಂದು ಭಾವುಕತೆಯಿಂದ ಕೂಡಿದ್ದರೆ ಮತ್ತೊಂದು ವಾಸ್ತವಿಕತೆಯಿಂದ ಕೂಡಿದೆ. ಎರಡೂ ಹಾಗೇ ಇರಬೇಕು. ಅದಲು ಬದಲಾದರೆ ವಿಪರ್ಯಾಸವಾಗಿಬಿಡುತ್ತದೆ. ಸತಿಪತಿಗಳಂತಿರುವ ಈ ಹೃದಯ ಮತ್ತು ಬುದ್ಧಿಗಳು, ರಸ ಮತ್ತು ತರ್ಕವನ್ನು ತುಂಬಿಕೊಂಡಿರುವ ಈ ಎರಡೂ ತಮ್ಮತನವನ್ನು ಉಳಿಸಿಕೊಂಡು, ಒಂದರೊಳಕ್ಕೆ ಇನ್ನೊಂದು ಐಕ್ಯವಾದಾಗ ಉಂಟಾಗುವ ಮನೋಭಾವ ಬದುಕನ್ನು ಸುಂದರವಾಗಿಸುತ್ತದೆ. ಇದನ್ನೇ ಮಾನ್ಯ ಗುಂಡಪ್ಪನವರು "ಯುಕ್ತವದು ಬದುಕು" ಎಂದಿದ್ದಾರೆ. ಅಂತಹ ಭಾವ ಮತ್ತು ಬುದ್ಧಿಯ ಐಕ್ಯತೆಯನ್ನು ನಾವು ಸಾಧಿಸಲು ಪ್ರಯತ್ನಿಸಬೇಕು.

**ಮುಕ್ತಕ – 464** **ಸ್ರವಿಸುವುದು ಜೀವರಸ ಹೃದಯಗರ್ತದ ತಳದಿ।**
**ಕಿವಿಗಾ ರಹಸ್ಯದುಲಿ ಕಾವ್ಯಗಾನಗಳಿಂ॥**
**ಭುವನದಾಚಿನ ರಹಸ್ಯದ ಕೀರ್ತಿ ವೇದಗಳ।**
**ರವದಿನೆಂದಾರ್ಷಮತ - ಮಂಕುತಿಮ್ಮ॥**

ರಹಸ್ಯದುಲಿ =ರಹಸ್ಯದ+ಉಲಿ, ಭುವನದಾಚಿನ = ಭುವನದಾಚಿನ,

ರವದಿನೆಂದಾರ್ಷಮತ= ರವದಿನೆ+ಎಂದು+ ಆರ್ಷಮತ,

ಗರ್ತ= ಆಳ,ಉಲಿ =ಮಾತು, ರವ= ಶಬ್ದ,

ಕಾವ್ಯವೋ, ಕವನವೋ, ಗಾಯನವೋ ಅಥವಾ ಯಾವುದಾದರೂ ಒಂದು ವಾದ್ಯದ ಸಂಗೀತವೋ ನಾವು ಏಕಾಂತದಲ್ಲಿದ್ದಾಗ ನಮ್ಮ ಕಿವಿಗಳಿಗೆ ಬಿದ್ದರೆ ನಮ್ಮ ಹೃದಯಗಳಿಂದ ಜೀವರಸ ಒಸರುತ್ತದೆ. ಇದು ಈ ಜಗತ್ತಿನ ವಿಷಯವಾದರೆ, ಈ ಭೂಮಿಯಿಂದಾಚಿನ ಜ್ಞಾನವು, ರಹಸ್ಯವಾಗಿ ವೇದಗಳಾಗಿ ಶಬ್ದರೂಪದಿ ನಮಗೆ ಇಳಿದುಬಂದಿದೆ ಎನ್ನುವುದು ಋಷಿಗಳ ಅಭಿಮತ ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.





ಮುಂಜಾನೆಯ ಹಕ್ಕಿಯ ಕಲರವ, ಪುಟ್ಟ ಮಕ್ಕಳ ತೊದಲ ನುಡಿಯ ಮಾತುಗಳು, ನಾವು ನೋಡುವ ಪ್ರಕೃತಿಯ ಬಹು ವಿನ್ಯಾಸದ ಕೃತಿ, ಕಲೆ, ಶಿಲ್ಪ, ನಾವು ಕೇಳುವ ಸಂಗೀತ, ಕಾವ್ಯ, ಕವನಗಳೆಲ್ಲವೂ ನಮ್ಮ ಹೃದಯದಲ್ಲಿ ಜೀವ ರಸವು ಉಕ್ಕುವಂತೆ ಮಾಡಿ ನಮಗೆ ಆನಂದವನ್ನು ನೀಡುತ್ತದೆ ಅಲ್ಲವೇ? ನೋಡುವ ಮನಸ್ಸಿದ್ದರೆ ನಮಗೆ ಕಂಡಲ್ಲೆಲ್ಲಾ ಪ್ರಕೃತಿಯ ಸೌಂದರ್ಯದ ಬೃಹತ್ ಚಿತ್ರಪಟ ಕಾಣುವುದು.

ಒಂದು ಕಡೆ ಪ್ರಕೃತಿಯ ಈ ಚೆಲುವು ಮತ್ತೊಂದು ಕಡೆ ಆ ಚೆಲುವನ್ನು ನೋಡಿ ಸ್ಪಂದಿಸುವ ಮಾನವ ಹೃದಯ, ಇವೆರಡರ ಸಕಾರಾತ್ಮಕ ಸಮ್ಮಿಲನದಿಂದಲೇ ಈ ಜಗತ್ತಿನ ಸೌಂದರ್ಯ ಹೆಚ್ಚಿದೆ.ಒಂದು ಕಡೆ ಕೃತಿ ಮತ್ತೊಂದು ಕಡೆ ಆ ಕೃತಿಯಾರಾಧನೆ, ಒಂದು ಕಡೆ ಗಾಯನ ಮತ್ತೊಂದು ಕಡೆ ಶ್ರೋತೃವಿನ ಹೃದಯ ಸ್ಪಂದನ, ಇವೆಲ್ಲವೂ ಸೇರಿ ಜಗತ್ತನ್ನು ಸುಂದರವಾಗಿಸಿದೆ.ಇವೆಲ್ಲಾ ಈ ಭೂಮಿಗೆ ಸಂಬಂಧಪಟ್ಟ ಚೆಲುವಿನ ವಿಷಯ.

ಈ ಭೂಮಿಯನ್ನು ಆಗ ಮಾಡಿಸಿದ ಆ ಪರಮ ಶಕ್ತಿಯ ನಿಗೂಢ ರಹಸ್ಯಗಳು ತಪಸ್ಸಿನಲ್ಲಿ ನಿರತರಾದವರ, ಮನಸ್ಸಿನ ವಾಂಛಗನುಗುಣವಾಗಿ, ವೇದಗಳ ರೂಪದಲ್ಲಿ ಧರೆಗಿಳಿದು ಬಂದಿದೆ ಎನ್ನುವುದು ಋಷಿಮತ. ಏಕೆಂದರೆ ಒಂದು ಕಾವ್ಯಕ್ಕೆ ಒಂದು ಕವನಕ್ಕೋ ಒಬ್ಬ ಕರ್ತೃವನ್ನು ಗುರುತಿಸಬಹುದು.ಆದರೆ ನಮ್ಮ ಸನಾತನದ ಆಧಾರವಾದ

ವೇದೋಪನಿಷತ್ತುಗಳಿಗೆ ಅದು ಅಸಾಧ್ಯ. ಹಾಗಾಗಿ ಅವು ರಹಸ್ಯವಾಗಿ ಋಷಿಮುನಿಗಳಿಗೆ ಇಳಿದ ದೈವೀಕ ಜ್ಞಾನವೆಂದು ಪರಿಗಣಿಸಲಾಗಿದೆ.

ಇಂತಹ ಅದ್ಭುತ ಧರೆಯಲ್ಲಿ ನಾವಿರುವುದೇ ನಮ್ಮ ಭಾಗ್ಯ. ನಾವು ಇದರಿಂದ ಒಂದಿಷ್ಟು ಪಡೆದು ನಮ್ಮ ಹೃದಯಗಳಲ್ಲಿ ಕಡೆದು, ಒಂದಿಷ್ಟು ತಿರುಗಿ ಕೊಡಲಾದರೆ ಅದೇ ನಮ್ಮ ಭಾಗ್ಯವೆಂದು ತಿಳಿಯಬೇಕು.

**ಮುಕ್ತಕ – 465**

**ಸ್ವರರಾಗಗೀತಿಗಳು ನಾಟ್ಯಾಭಿನೀತಿಗಳು ।**
**ಕರೆದೇಳಿಸುವುವು ಮನಸಿನಲಿ ನಿದ್ರಿಸುವಾ ॥**
**ಪರಿಪರಿಯ ಭಾವಗಳ ಗೂಢಸ್ವಭಾವಗಳ ।**
**ಪರಮೇಷ್ಠಿ ಟೀಕು ಕಲೆ - ಮಂಕುತಿಮ್ಮ ॥**

ಕರೆದೇಳಿಸುವುವು= ಕರೆದು +ಏಳಿಸುವುವು,

ಗೀತಿಗಳು= ಗೀತೆಗಳು, ಪರಮೇಷ್ಠಿ =ಸೃಷ್ಟಿಕರ್ತ, ಟೀಕು=ಟೀಕಿಸು,

ಸುಮ್ಮನಿರುವ ಅಥವಾ ಶಾಂತವಾಗಿರುವ ಮನಸ್ಸನ್ನು ಕರೆದು, ಎಬ್ಬಿಸಿ, ಸ್ವರ ರಾಗ ಗೀತೆಗಳ ಕೇಳುವ ಮತ್ತು ಕೇಳಿ ಆನಂದಿಸುವ, ನಾಟ್ಯ, ಅಭಿನಯ ಮುಂತಾದವುಗಳ ನೋಡುವ ಮತ್ತು ಹಾಗೆ ಕೇಳಿ ನೋಡಿದ್ದನ್ನು ಪರಿಪರಿಯಾಗಿ ಆನಂದಿಸುವ ಮಾನವನ ಹಲವಾರು ಗುಪ್ತ ಮತ್ತು ಸುಪ್ತ ಭಾವಗಳು, ಆ ಪರಮಾತ್ಮನ ಸೃಷ್ಟಿಯನ್ನೇ ಟೀಕಿಸುವ ಅಥವಾ ಅಣಕವಾಡುವ ಕಲೆಯಂತೆ ಇದೆ ಎಂದು, ಉಲ್ಲೇಖ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಜಗತ್ಸೃಷ್ಟಿಯಲ್ಲಿ ಎಲ್ಲವೂ ಸುಂದರವಾಗೇ ಇದೆ.ಈ ಎಲ್ಲ ಸೌಂದರ್ಯವೂ ಪರಿಪರಿಯಾಗಿ ಇದೆ.ಪ್ರತಿಯೊಂದೂ ಮನುಷ್ಯನ ಮನಸ್ಸನ್ನು ತನ್ನೆಡೆಗೆ ಆಕರ್ಷಿಸುತ್ತದೆ.ಶಾಂತವಾದ ಮಾನವನ ಮನಸ್ಸನ್ನು ಕೆರಳಿಸುತ್ತದೆ. ನೋಡುವಂತೆ, ಕೇಳುವಂತೆ, ಅನುಭವಿಸುವಂತೆ, ಆನಂದಪಡುವಂತೆ, ಈ ಎಲ್ಲಾ ಸೌಂದರ್ಯಗಳೂ ಮನುಷ್ಯನನ್ನು ಆಹ್ವಾನಿಸುತ್ತದೆ ಅಥವಾ ಪ್ರೇರೇಪಿಸುತ್ತದೆ. ಪ್ರಕೃತಿ ಸೌಂದರ್ಯ, ದೈವೀ ಶಕ್ತಿಯಿಂದ ಮಾನವನ ಜ್ಞಾನ ಭಂಡಾರದಲ್ಲಿರುವ ವೇದ ಉಪನಿಷತ್ತುಗಳು, ಸಂಗೀತ, ಕಲೆ, ಶಿಲ್ಪ, ಮುಂತಾದವುಗಳೆಲ್ಲ ತಮ್ಮ ತಮ್ಮ ಸೌಂದರ್ಯವನ್ನು ಹೊಂದಿದ್ದು, ಮಾನವನ ಸಂತೋಷಕ್ಕೆ ಮತ್ತು ಆನಂದಕ್ಕೆ ಕಾರಣವಾಗಿವೆ.

ಆದರೆ ಇವೆಲ್ಲವೂ ತಮ್ಮ ಮೂಲ ಸ್ವರೂಪದಲ್ಲಿ ಒಂದೇ ರೀತಿಯಿದ್ದರೂ, ಮನುಷ್ಯನ ಸಂಸ್ಕಾರಗಳು ಮತ್ತು ಪೂರ್ವ ವಾಸನೆಗಳಿಗನುಗುಣವಾಗಿ ಪರಿಪರಿಯಾದ ಪ್ರತಿಕ್ರಿಯೆಯನ್ನು ಹೊರಹೊಮ್ಮಿಸುತ್ತವೆ. ಅರ್ಥಾತ್ ಒಂದೇ ಸುಂದರವಸ್ತುವನ್ನು ನೋಡುವ ಹಲವರಲ್ಲಿ ಭಿನ್ನ ಭಿನ್ನವಾದ ಭಾವನೆಗಳನ್ನು ಕೆರಳಿಸುತ್ತಾ ಭಾವ ವಿಭಿನ್ನತೆಗೆ ಕಾರಣವಾಗಿದೆ. ಈ ಭಾವ ಭಿನ್ನತೆಯೇ, ಜಗತ್ತಿನ ವೈವಿಧ್ಯತೆಗೆ ಮತ್ತು ಹಲವಾರು ವಿಧವಾದ ಸಂಸ್ಕಾರ ಸಂಸ್ಕೃತಿಗಳ ಉಗಮಕ್ಕೆ ಕಾರಣವಾಗಿದೆ.

ಸ್ವತಂತ್ರ ಯೋಚನಾಶಕ್ತಿಯನ್ನು ಹೊಂದಿರುವ ನಮ್ಮ ಮಾನವನ ಭಿನ್ನ ಭಿನ್ನವಾದ ಪ್ರತಿಕ್ರಿಯೆಗಳು, ಆ ಪರಮಾತ್ಮನ ಸೃಷ್ಟಿಯನ್ನೇ ಟೀಕಿಸುವ ರೀತಿ ಇದೆ ಎಂದು ಮಾನ್ಯ ಗುಂಡಪ್ಪನವರು ಪರಮೇಷ್ಠಿ ಟೀಕು ಕಲೆ" ಎಂದು ಹೇಳಿದ್ದಾರೆ. ಟೀಕೆಯಂತಿದ್ದರೂ, ಭಿನ್ನವಾದರೂ, ಮನಸ್ಸಿಗೆ ಆನಂದವನ್ನು ನೀಡುತ್ತ, ಜಗತ್ತಿನ ಸೌಂದರ್ಯವೆಲ್ಲವೂ ತಮ್ಮ ಸಾರ್ಥಕತೆಯನ್ನು ಪಡೆಯುತ್ತಿವೆ. ಈ ಆನಂದದ ಮತ್ತು ಸಂತೋಷದ ವೈವಿಧ್ಯತೆಯೇ ಒಂದು ಸುಂದರವಾದ ಮತ್ತು ಆನಂದವಾದ ಅನುಭವವಲ್ಲವೇ।

**ಮುಕ್ತಕ – 466** **ವ್ಯಸನಕಾರಣವೊಂದು ಹಸನಕಾರಣವೊಂದು।**
**ರಸಗಳೀಯೆರಡಕಿಂತಾಳವಿನ್ನೊಂದು ॥**
**ಭ್ರುಶವಿಶ್ವಜೀವಿತಗಭೀರತೆಯ ದರ್ಶನದ।**
**ರಸವದದ್ಭುತಮೌನ - ಮಂಕುತಿಮ್ಮ॥**

ರಸಗಳೀಯೆರಡಕಿಂತಾಳವಿನ್ನೊಂದು = ರಸಗಳು+ಈ+ಎರಡಕಿಂತಾ+ಆಳವು+ಇನ್ನೊಂದು,

ರಸವದದ್ಭುತಮೌನ = ರಸವು+ಅದು+ಅದ್ಭುತ+ಮೌನ.

ಹಸನ=ನಗುವು, ಭೃಶ=ವಿಚಿತ್ರ, ಗಭೀರತೆ=ಗಂಭೀರತೆ,

ಈ ಜಗತ್ತಿನ ಸೌಂದರ್ಯಗಳು, ಕೆಲವರಿಗೆ ವ್ಯಸನಕ್ಕೆ ಕಾರಣವಾದರೆ,ಮತ್ತೆ ಕೆಲವು ಹರುಷಕ್ಕೆ ಕಾರಣವಾಗುತ್ತವೆ.





ಆದರೆ ಈ ಎರಡೂ ರಸಗಳಿಗಿಂತ ಆಳವಾದ ಇನ್ನೊಂದು ಅನುಭವವಿದೆ. ಈ ವಿಶ್ವದ ಗಂಭೀರತೆಯ ವಿಚಿತ್ರವನ್ನು ನೋಡಿದರೆ ಮನದಲ್ಲಿ ಒಂದು ಗಾಢ ಮೌನ ಆವರಿಸುತ್ತದೆ.ಈ ಮೌನ ರಸದ ಅನುಭವ ಬಹಳ ಅದ್ಭುತ ಎಂದು ಪ್ರಕೃತಿ ಸೌಂದರ್ಯವನ್ನು ಅನುಭವಿಸುವಲ್ಲಿ ಮಾನವನ ಚಿತ್ರ ವಿಚಿತ್ರವಾದ ಪ್ರತಿಕ್ರಿಯೆಯ ಬಗ್ಗೆ ನಮಗೆ ವಿವರಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಸೃಷ್ಟಿಯಲ್ಲಿನ ಅದ್ಭುತಗಳು ನಮ್ಮಲ್ಲಿ ಚಿತ್ರವಿಚಿತ್ರವಾದ ಪ್ರತಿಕ್ರಿಯೆಗಳನ್ನು ಉಂಟಾಗಿಸುತ್ತವೆ. ಹಲವು ನಮಗೆ ಒಂದು ಬಾರಿ ಆನಂದವನ್ನು ನೀಡಿದರೆ ಅವೇ ನಮಗೆ ಕಾಲಾಂತರದಲ್ಲಿ ದುಃಖಕ್ಕೆ ಕಾರಣವಾಗಬಹುದು. ಕೆಲವು ನಮಗೆ ಸದಾಕಾಲ ಆನಂದವನ್ನು ನೀಡಬಹುದು ಮತ್ತೆ ಕೆಲವು ನಮಗೆ ಬೇಸರ ಅಥವಾ ದುಃಖಕ್ಕೆ
ಕಾರಣವಾಗಬಹುದು, ಇದು ಬಹಳ ಸಹಜವಾಗಿದ ವಿಷಯ.

ಆದರೆ ನಾವು ಮನೋವಿಕಾರವಿಲ್ಲದೆ ಈ ಸೃಷ್ಟಿಯ ಸೌಂದರ್ಯವನ್ನು ನೋಡಿದಾಗ, ಈ ದುಃಖ ಅಥವಾ ಸಂತೋಷದ ಭಾವಗಳು ಮೊದಲು ಉಂಟಾಗಿ, ನಂತರ ಒಂದು ಗಂಭೀರ ಭಾವ ಬಂದು, ತದನಂತರ ಮನದಲ್ಲಿ

ಒಂದು ಗಾಢ ಮೌನವು ಆವರಿಸುತ್ತದೆ.ಆ ಮೌನ ಮನಸ್ಸಿಗೆ ಬಹಳ ಆಪ್ಯಾಯಮಾನವಾಗಿರುತ್ತದೆ. ಆದರೆ ಅಂತಹ ಮೌನವು ಮನಸ್ಸಿನಲ್ಲಿ ಮೂಡಬೇಕಾದರೆ ಮನಸ್ಸಿನಲ್ಲಿ ವಸ್ತು, ವಿಷಯ ಅಥವಾ ವ್ಯಕ್ತಿಗತವಾದ 'ವಿಕಾರಗಳು ಇರಬಾರದು. 'ಇದು ನನಗೆ ಇಷ್ಟ ಅಥವಾ ಇದು ನನಗೆ ಇಷ್ಟವಿಲ್ಲ' ಎಂಬ ಭೇಧವಿರಬಾರದು. ಆಗ ಜಗತೌಂದರ್ಯದಿಂದ ನಮ್ಮ ಮನಸ್ಸುಗಳಲ್ಲಿ ಮೂಡಬಹುದಾದ 'ಮೌನ'ದಲ್ಲಿ ನಾವು ಪರಮಾತ್ಮನನ್ನು ಮತ್ತು ಅವನ ಲೀಲಾವಿನೋದವನ್ನು ಕಾಣಬಹುದು.

ಸುಖ ದುಃಖಗಳನ್ನು ಮೀರಿದ 'ಮೌನ', ಅರಿಷಡ್ವರ್ಗಗಳನ್ನು ಮೀರಿದ 'ಮೌನ', ಶಬ್ದ ಸ್ಪರ್ಶ ರೂಪ ರಸ ಗಂಧಾದಿಗಳಿಗೆ ಅತೀತವಾದ 'ಮೌನ', ಶಾಂತ ಪ್ರಶಾಂತಭಾವದ 'ಮೌನದ' ದ ಅನುಭವ ನಮಗೆ ಆಗಬೇಕು. ನಾವು ಈ ಜಗತ್ತಿನ ವಿಷಯಗಳಿಗೆ ಮೀರಿ ಬೆಳೆದಾಗ ಅಂತಹ 'ಮೌನ'ದ ಅನುಭವ ನಮಗೆ ಆಗಬಹುದು. ಅದು ಸಾಧನೆಯಿಂದ ಬರುವುದು. ನಾವು ಅಂತಹ 'ಮೌನ'ವನ್ನು ಸಾಧಿಸುವ ಪ್ರಯತ್ನ ಪಡಬೇಕು.

**ಮುಕ್ತಕ – 467**

**ಗಣನೆಗೆಟುಕದ ಗುಣಗಳಾತ್ಮದವವರ್ಣ್ಯಗಳು |**
**ಮನದ ದೇಹದ ಜೀವದೆಲ್ಲ ಕರಣಗಳಾ ||**
**ಅನುಭವದ ಮುಕುರದೊಳ್ ಪ್ರತಿಫಲಿಸೆ ತನ್ನದೊಂ- |**
**ದಣುವದುವೆ ಸುಂದರವೊ – ಮಂಕುತಿಮ್ಮ ||**

ಗಣನೆಗೆಟುಕದ=ಗಣನೆಗೆ+ಎಟುಕದ, ಗುಣಗಳಾತ್ಮದವವರ್ಣ್ಯಗಳು=ಗುಣಗಳು+ಆತ್ಮದ+ಅವರ್ಣ್ಯಗಳು,
ಕರಣಗಳಾ=ಕರಣಗಳು+ಆ, ತನ್ನದೊಂದುವದುವೆ ತನ್ನದು+ಒಂದು+ಅಣುವು+ಅದುವೆ.
ಗಣನೆಗೆ= ಎಣಿಸಲು, ಕರಣ= ಅಂಗಾಂಗ, ಇಂದ್ರಿಯಗಳು,ಮುಕುರ=ಕನ್ನಡಿ,

ವರ್ಣಿಸಲು ಆಗದ ಮತ್ತು ಎಣಿಸಲು ಆಗದ ಆತ್ಮದ ಗುಣಗಳು, ಮನಸ್ಸಿನ, ದೇಹದ, ಜೀವದ, ಇಂದ್ರಿಯಗಳಿಂದ ಪಡೆದ ಅನುಭವಗಳನ್ನು ಮತ್ತು ಅದರಿಂದ ಪಡೆದ ಆನಂದವನ್ನು ಕನ್ನಡಿಯಂತಹ ಮುಖದ ಮೂಲಕ ಪ್ರತಿಫಲಿಸಿದಾಗ ಆ ಅನುಭವದ ಸೌಂದರ್ಯ ಇನ್ನೂ ಹೆಚ್ಚಾಗುತ್ತದೆ ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು.

ಜಗತ್ಸೃಷ್ಟಿಯ ಸಕಲವೂ ಸುಂದರವಾಗಿ ಇದ್ದರೂ ಮನುಷ್ಯನ ಸಂಸ್ಕಾರಗಳು, ಮನೋಭಾವದ ಆಧಾರದ ಮೇಲೆ ಅವನಲ್ಲಿ ಹಲವಾರು ಭಾವಗಳನ್ನು ಕೆರಳಿಸುತ್ತದೆ. ಒಂದೇ ವಸ್ತುವಿನಿಂದ ಒಂದೇ ವ್ಯಕ್ತಿಗೆ ಬೇರೆ ಬೇರೆ ಸಮಯದಲ್ಲಿ ಹತ್ತು ಹಲವಾರು ಭಾವಗಳು ಉಂಟಾಗುವುದರಿಂದ, ಈ ಭಾವಗಳು ಲೆಕ್ಕಕ್ಕೆ ಸಿಗದಷ್ಟು ಮತ್ತು ವರ್ಣನೆಗೆ ಸಿಗದಷ್ಟು ಎಂದು ಹೇಳುತ್ತಾರೆ ಶ್ರೀ ಗುಂಡಪ್ಪನವರು.

ಸೌಂದರ್ಯವನ್ನು ನೋಡಿದಾಗ ಉಂಟಾಗುವುದು ಆನಂದ, ಆನಂದದಲ್ಲಿ ಹಲವಾರು ವಿಧಗಳುಂಟು. ಮಾನುಷಾನಂದ, ಗಂಧರ್ವಾನಂದ, ದೇವಾನಂದ ಮತ್ತು ಬ್ರಹ್ಮಾನಂದ ಎಂಬುದು ಮುಖ್ಯವಾಗಿ ನಾವು ಪರಿಗಣಿಸಿದರೆ ಇಂದ್ರಿಯಗಳಿಂದ ಅನುಭವಿಸುವ ಈ ಮಾನುಷಾನಂದವು, ಗಂಧರ್ವಾನಂದ, ದೇವಾನಂದ ಮತ್ತು ಬ್ರಹ್ಮಾನಂದವಾಗಿ ಮನಸ್ಸಿಗೆ ಪ್ರಶಾಂತತೆಯನ್ನು ನೀಡುತ್ತದೆ.ಅಂಥಹ ಪ್ರಶಾಂತ ಭಾವದಲ್ಲಿ ನಾವು ಹೆಚ್ಚು ಹೊತ್ತು ನಿಂತಾಗ ಅದೇ ಧ್ಯಾನ, ಸಾಧನೆ.

ಈ ಸ್ಥಿತಿಯಲ್ಲಿ ಮನುಷ್ಯನಲ್ಲಿ ದ್ವಂದ್ವವಿಲ್ಲದೆ, ಭಾವ ಭೇದವಿಲ್ಲದೆ, ಎಲ್ಲ ವಿಕಾರಗಳಿಗೂ ಅತೀತನಾಗಿ ಸೌಂದರ್ಯೋಪಾಸನೆಯಲ್ಲಿ ಮನಸ್ಸು,ಬುದ್ಧಿ ದೇಹಾತ್ಮಗಳ ಏಕೀಭಾವ ಏರ್ಪಟ್ಟು, ಒಂದು ಸಾತ್ವಿಕ ಮೌನವು ಮನದಲ್ಲಿ ಉಂಟಾದಾಗ, ಆಂತರ್ಯದಲ್ಲಿ ಅನುಭವಿಸುವ ಆನಂದವು ಮುಖದಲ್ಲಿ ಪ್ರತಿಫಲಿಸುತ್ತದೆ. ಅಂತಹ ಪ್ರಶಾಂತ ಮೌನದ ಆನಂದ ರೂಪವನ್ನು ನಾವು ನಿಜಾರ್ಥದಲ್ಲಿನ ಸಾಧು ಸತ್ಪುರುಷರ ಮುಖ ಕಮಲಗಳಲ್ಲಿ ಕಾಣಬಹುದು. ಇದು ವರ್ಣನಾತೀತ, ಕೇವಲ ಅನುಭವ ವೇದ್ಯನಾವೂ ಸಹ ಅಂತಹ ಅನುಭವವನ್ನು ಪಡೆದರೆ ನಮ್ಮ ಜೀವನವೂ ಸಫಲವಾಗುವುದರಲ್ಲಿ ಸಂದೇಹವೇ ಇಲ್ಲ.

**ಮುಕ್ತಕ – 468**

**ಲಾವಣ್ಯವಾತ್ಮಗುಣವದರಿಂದ ಲೋಕಜನ।**
**ದೇವನನು ಕಮನೀಯ ವಿಗ್ರಹಂಗಳಲಿ ॥**
**ಭಾವಿಸುತ ತಮ್ಮಿಷ್ಟಭೋಗಗಳನರ್ಪಿಸುವರು ।**
**ಸೇವೆಯಿಂ ನಲಿಯುವರು- ಮಂಕುತಿಮ್ಮ ॥**

ಲಾವಣ್ಯವಾತ್ಮಗುಣವದರಿಂದೆ= ಲಾವಣ್ಯವು+ಆತ್ಮಗುಣವು+ಅದರಿಂದೆ,
ತಮ್ಮಿಷ್ಟಭೋಗಗಳನರ್ಪಿಸುವರು=ತಮ್ಮಿಷ್ಟ+ಭೋಗಗಳನು+ಅರ್ಪಿಸುವರು,
ಭೋಗ=ಪೂಜಾವಿಧಿಯಲ್ಲಿ ಅರ್ಪಿಸುವ ನೈವೇದ್ಯ





ಆತ್ಮದ ಗುಣ ಬಹಳ ಸುಂದರ. ಇಂತಹ ಸುಂದರ ಭಾವದಿಂದ ಸುಂದರ ವಿಗ್ರಹಗಳಲ್ಲಿ ಆ ಪರಮಾತ್ಮನನ್ನು ಭಾವಿಸುತ್ತಾ, ಆ ಪರಮಾತ್ಮನಿಗೆ ತಮಗಿಷ್ಟವಾದ ಪದಾರ್ಥಗಳನ್ನು ನೈವೇದ್ಯವಾಗಿ ಅರ್ಪಿಸುವ ಸೇವೆಯನ್ನು ಮಾಡುತ್ತಾ, ಲೋಕದ ಜನರು ನಲಿಯುತ್ತಾರೆ ಎಂದು ಉಲ್ಲೇಖ ಮಾಡಿದ್ದಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಆತ್ಮ, ಮನಸ್ಸು, ಬುದ್ಧಿ, ದೇಹಗಳೆಲ್ಲವೂ, ನಾವು ಒಪ್ಪಿಕೊಂಡರೂ, ಇಲ್ಲದಿದ್ದರೂ ಆ ಪರಮಾತ್ಮಾಧೀನ. ಅಹಂಕಾರಸಹಿತವಾಗಿ, ಇಂದ್ರಿಯಗಳ ಪ್ರಭಾವದಿಂದ, 'ನಾನು' ಎನ್ನುವ ಭಾವದಿಂದ ಆ ವಿಚಾರವು ಸ್ಮರಣೆಯಿಂದ ದೂರವಾಗಿರುತ್ತದೆ. ಆತ್ಮವು ಕೇವಲ 'ಸಾಕ್ಷಿ' ಭಾವದಿಂದ ಇರುತ್ತದೆ.ಮನಸ್ಸು ಬುದ್ಧಿ ಮತ್ತು ದೇಹಗಳ ಮಂಗನಾಟವನ್ನು ನೋಡುತ್ತಿರುತ್ತದೆ.ತನ್ನ ಪರಮಾತ್ಮಾಭಿಮುಖವಾದ ಗಮನಕ್ಕೆ ಉಪಕರಣಗಳಾದ ಇವುಗಳನ್ನು ಉಪಯೋಗಿಸುವ ಕಾರ್ಯದಲ್ಲಿ ನಿರಂತರ ತೊಡಗಿರುತ್ತದೆ.

ಹಾಗೆ ಮನುಷ್ಯ ಕಂಡುಕೊಂಡದ್ದೇ, ಮೂರ್ತಿಪೂಜೆ. 'ಪ್ರತಿಮಾಸು ಅಪ್ರಭುದ್ಧಾನಾಂ' ಎಂದು ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಅಪ್ಪಣೆ ಕೊಡಿಸಿದ್ದಾನೆ. ಪ್ರಭುದ್ಧತೆಯನ್ನು ಪಡೆಯುವ ತನಕ ಪ್ರತಿಮೆಗಳ ಸಹಾಯದಿಂದ, ರೂಪದ ಸಹಾಯದಿಂದಲೇ, ನಿರ್ಗುಣ ಮತ್ತು ನಿರಾಕಾರ ಬ್ರಹ್ಮನನ್ನು ಅರಿಯಬೇಕು. ಇದನ್ನರಿತ ಆತ್ಮವು ಬಹಳ ಸುಂದರವಾಗಿ ಪರಮಾತ್ಮನ ಕಲ್ಯಾಣಗುಣಗಳೆಲ್ಲಾ ನಮ್ಮ ಭಾವನೆಗೆ ಬರುವ ಹಾಗೆ ಸುಂದರ 'ಮೂರ್ತಿ'ಗಳನ್ನು ಕೆತ್ತಿ, ಪೂಜೆ ಮಾಡತೊಡಗಿದ. ಹತ್ತು ಹಲವಾರು ರೂಪಗಳನ್ನು ಭಾವಿಸಿ, ವಿಧವಿಧವಾದ ಪೂಜಾ ವಿಧಾನವನ್ನು ಕಂಡುಕೊಂಡ, ಸಮರ್ಪಣಾ ಭಾವದಿಂದ ತನ್ನಲ್ಲಿರುವುದನ್ನೆಲ್ಲಾ ಸಮರ್ಪಿಸುವ ಮೂಲಕ ಆನಂದಪಡತೊಡಗಿದ.

"ಈಶಾವಾಸ್ಯವಿದಂ ಸರ್ವಂ" ಎಂದು ಹೇಳುವ ಈಶಾವಾಸ್ಯೋಪನಿಷತ್ತಿನ ಮೂಲಭಾವವೇ ಈ ಜಗತ್ತಿನಲ್ಲಿರುವುದೆಲ್ಲವೂ ಆ 'ಈಶ'ನಿಂದಾಗಿ, 'ಈಶ'ನೇ ಆಗಿ, 'ಈಶ'ನಿಗಾಗಿಯೇ ಆಗಿದೆ ಎಂದು. ಹಾಗಾಗಿ "ಎಲ್ಲವನ್ನೂ ಅವನಿಗೆ ಸಮರ್ಪಿಸಿ, ನಿನಗೆ ಸಿಕ್ಕದ್ದೆಲ್ಲ ಅವನ 'ಪ್ರಸಾದ'ವೆನ್ನುವರೀತಿಯಲ್ಲಿ ನೀನು ಭುಜಿಸು" ಎಂದು ಹೇಳುತ್ತದೆ. ಅಹಂಕಾರವನ್ನು ತೊರೆಯಲು ಇದಕ್ಕಿಂತ ಅನ್ಯ ಮಾರ್ಗವುಂಟೆ?

ಪ್ರತಿಯೊಬ್ಬರೂ ಈ ಪರಮಾತ್ಮಾಭಿಮುಖವಾದ ಪ್ರಯಾಣದ ಯಾವುದೋ ಒಂದು ಹಂತದಲ್ಲಿರುತ್ತಾರೆ. ನಾವು ಯಾವ ಹಂತದಲ್ಲಿದ್ದೇವೆ ಎಂದು ಅರಿತುಕೊಳ್ಳುವ ಪ್ರಯತ್ನವನ್ನು ಮಾಡಬೇಕು. ಪ್ರತೀ ಹಂತದಲ್ಲೂ ಆ ಪರಮಾತ್ಮಾನುಭವವನ್ನು ಪಡೆಯಬೇಕು, ಆ ಅನುಭವದಲ್ಲಿ ಸಿಗುವ ಆನಂದದಿಂದ ನಮ್ಮ ಆತ್ಮ ನಲಿಯಬೇಕು.ಅಲ್ಲಿಂದ ಮುಂದಿನ ಹಂತಕ್ಕೆ ಹೋಗುವ ಪ್ರಯತ್ನವನ್ನು ಮಾಡಬೇಕು.ಅಂತ ಪ್ರಯತ್ನ ನಮ್ಮದಾದರೆ, ನಮ್ಮ ಜೀವನವೂ ಸಾರ್ಥಕ ಬದುಕಾಗುತ್ತದೆ.

**ಮುಕ್ತಕ – 469**

**ಸೌಂದರ್ಯವೊಂದು ದೈವರಹಸ್ಯ ಸೃಷ್ಟಿವೊಲು।**
**ನಿಂದಿರ್ಪುದದರಾಶೆಯಿನ ಜೀವಿತಾಶೆ ॥**
**ಅಂದುವುದು ಕಣ್ಣಿಗದು ಸಂಸ್ಕೃತಿಗೆ ತಕ್ಕಂತೆ।**
**ಚೆಂದದರಿವೆ ತಪಸ್ಸೊ – ಮಂಕುತಿಮ್ಮ ॥**

ಸೌಂದರ್ಯವೊಂದು = ಸೌಂದರ್ಯವು+ಒಂದು, ಸೃಷ್ಟಿವೊಲು=ಸೃಷ್ಟಿಯ+ಒಲು,
ನಿಂದಿರ್ಪುದದರಾಶೆಯಿನೆ= ನಿಂದು+ಇರ್ಪುದು+ಅದರ+ಆಶೆಯಿನೆ,
ಚೆಂದದರಿವೆ=ಚೆಂದದ+ ಅರಿವೆ, ಒಲು=ಹಾಗೆ, ಅರಿವೆ=ಜ್ಞಾನವೆ

ಒಂದು ವಸ್ತುವು ಸುಂದರವಾಗಿ ಏಕೆ ಇದೆ?' ಎನ್ನುವುದು ದೇವ ರಹಸ್ಯ.ಆ ಸೌಂದರ್ಯವನ್ನು ನೋಡಲು, ಪಡೆಯಲು ಮತ್ತು ಅನುಭವಿಸಲು ಮಾನವನಲ್ಲಿ ಇರುವ ಬಯಕೆಯೇ ಅವನ ಬದುಕಿನಾಸೆಗೆ ಅಧಾರ. ಪ್ರತಿಯೊಂದು ವಸ್ತುವಿನ ಅಂದ ಅಥವಾ ಸೌಂದರ್ಯಾನುಭವ ಆಯಾ ವ್ಯಕ್ತಿಯ ಸಂಸ್ಕೃತಿ, ಸಂಸ್ಕಾರಗಳಿಗೆ ಅನುಗುಣವಾಗಿರುತ್ತದೆ.ಆದರೆ ಒಂದು ವಸ್ತುವಿನ ನಿಜ ಸೌಂದರ್ಯವನ್ನು ಅರಿಯುವುದೇ ತಪಸ್ಸು ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

'ಜಗತ್ತಿನ ಸೌಂದರ್ಯವು ಹೇಗೆ ಆಯ್ತು?' ಎಂದರೆ, ನಮಗೆ ಉತ್ತರ ಸಿಗುವುದಿಲ್ಲ. ಹಾಗಾಗಿ, ಅದು ದೇವ ರಹಸ್ಯ, ಅಕಸ್ಮಾತ್ ಒಂದು ವಸ್ತುವನ್ನು ಉದಾ:- ಒಂದು ಚಿತ್ರ, ಶಿಲ್ಪ , ರಾಗ, ಕವನ, ಕಾವ್ಯ ಅಥವಾ ಒಂದು ಸುಂದರ ಭಾವವನ್ನು ನಾವು ಸುಂದರವಾಗಿ ರೂಪಿಸಿದರೆ, ಹಾಗೆ ನಾವು ರೂಪಿಸಲು ನಮ್ಮ ಬುದ್ಧಿ ಮನಸ್ಸುಗಳು ಹೇಗೆ ರೂಪುಗೊಂಡವು! ಅಥವಾ ನಾವೇ ಏಕೆ, ಬೇರಾರಾದರೂ ಅದನ್ನು ಮಾಡಬಹುದಿತ್ತಲ್ಲ ಎಂದರೆ, ಅದಕ್ಕೂ ನಮ್ಮಲ್ಲಿ ಉತ್ತರವಿರುವುದಿಲ್ಲ. ಏಕೆಂದರೆ ಅದೂ ಸಹ ದೇವ ರಹಸ್ಯ.

ಆ ಸೌಂದರ್ಯವನ್ನು ಪ್ರತಿಯೊಬ್ಬರೂ ಬೇರೆ ಬೇರೆ ರೀತಿಯಲ್ಲಿ ಅನುಭವಿಸುತ್ತಾರೆ. ಒಬ್ಬನಿಗೆ 'ಉದಯಿಸುವ ಸೂರ್ಯ' ಜೀವನೋತ್ಸಾಹವನ್ನು ತುಂಬುವ ಶಕ್ತಿಯಾದರೆ ಮತ್ತೊಬ್ಬನಿಗೆ ಅದು ಆಕಾಶದಲ್ಲಿ ಒಂದು ಕೊಲೆಯಾಗಿ ರಕ್ತ ಒಸರುತ್ತಿರುವಂತೆ ಭಾಸವಾಗಬಹುದು. ಪ್ರಕೃತಿ ಸೌಂದರ್ಯವನ್ನು ಕಂಡಾಗ ಒಬ್ಬನಿಗೆ ಮಾನಸೋಲ್ಲಾಸವುಂಟಾದರೆ

ಮತ್ತೊಬ್ಬನಿಗೆ ಯಾವ ಭಾವವೂ ಇಲ್ಲದ ನೀರವತೆಯ ಭಾಸವಾಗಬಹುದು. ಹಾಗಾಗಿ ಮಾನ್ಯ ಗುಂಡಪ್ಪನವರು ಹೇಳುವಂತೆ ಪ್ರತಿವ್ಯಕ್ತಿಗೂ ಆಗುವ 'ಸೌಂದರ್ಯಾನುಭವ' ಅವರವರ ಸಂಸ್ಕೃತಿ ಮತ್ತು ಸಂಸ್ಕಾರಗಳಿಗೆ ಹೊಂದಿಕೊಂಡಂತೆ ಇರುತ್ತದೆ.

ನಮ್ಮ ಭಾವನೆಗಳು ಹೇಗೆ ಇದ್ದರೂ ಪರಮಾತ್ಮನ ಸೃಷ್ಟಿಯಲ್ಲಿನ ಪ್ರತೀ ವಸ್ತುವಿಗೂ ಅದರದೇ ಆದಂತ ಒಂದು ಸೌಂದರ್ಯವು ಇದೆ.ಅದೇ ಆ ವಸ್ತುವಿನ 'ನಿಜ' ಸೌಂದರ್ಯ, ನಮಗದು ಅರಿವಿಗೆ ಬಾರದೆ ಇರಬಹುದು.





ಅದನ್ನು ಅರಿತುಕೊಳ್ಳಲು ನಮಗೆ ವಿಕಸಿತ ಮತ್ತು ಸಂಸ್ಕಾರಿತ ಮನಸ್ಸು ಮತ್ತು ಬುದ್ಧಿಗಳು ಬೇಕು. ಅವು ಸಂಸ್ಕಾರಗಳಿಂದ ಬರುತ್ತದೆ.ಆ ಸಂಸ್ಕಾರಗಳು ಸದ್ವಿದ್ಯೆಯಿಂದ ಬರುತ್ತದೆ. ಹಾಗಾಗಿ ಆ ಸದ್ವಿದ್ಯೆಯನ್ನು ಕಲಿತು ನಮ್ಮ ಸಂಸ್ಕಾರಗಳನ್ನು ಶುದ್ದೀಕರಿಸಿಕೊಂಡು ಸೃಷ್ಟಿಯ ಸೌಂದರ್ಯವನ್ನು 'ಯಥಾವತ್' ಅರಿಯುವ ಪರಿಯನ್ನು ಬೆಳೆಸಿಕೊಳ್ಳುವುದೇ, ಒಂದು ಸಾಧನೆ ಅಥವಾ ತಪಸ್ಸು ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

“ಮನಸ್ಸು ಸುಂದರವಾದರೆ ಜಗತ್ತು ಸುಂದರ” ಎನ್ನುವಂತೆ ಮೊದಲು ನಮ್ಮ ಮನಸ್ಸು ಬುದ್ಧಿಗಳನ್ನು ಸುಂದರವನ್ನಾಗಿಸುವ ತಪವನ್ನು ನಾವು ಮಾಡಬೇಕು. ಆ ಪ್ರಯತ್ನದಲ್ಲಿ ನಮಗೆ ಕಿಂಚಿತ್ ಜಯ ಸಿಕ್ಕರೂ ನಾವೇ ಧನ್ಯರೆಂದುಕೊಳ್ಳಬೇಕು .

**ಮುಕ್ತಕ – 470** ವಿವಿಧರಸಗಳ ಭಟ್ಟ, ಸೌಂದರ್ಯಕಾಮೇಷ್ಟಿ ।
ಕವಿಜಗತ್ಸೃಷ್ಟಿಯದು ಕಲೆಗನಾಕೃಷ್ಟಿ ॥
ಗವಿಯೊಳಗಣ ಪ್ರಕೃತಿಯಂತ್ರ,ವೈಚಿತ್ರ್ಯವದು ।
ತಪಸೊಂದೆ ಪಥವದಕೆ – ಮಂಕುತಿಮ್ಮ ॥

ಸೌಂದರ್ಯಕಾಮೇಷ್ಟಿ= ಸೌಂದರ್ಯ+ಕಾಮ+ಇಷ್ಟಿ, ಕವಿಜಗತ್ಸೃಷ್ಟಿಯದು =ಕವಿಜಗತ್+ಸೃಷ್ಟಿಯು+ಅದು, ಕಲೆಗನಾಕೃಷ್ಡಿ=ಕಲೆಗನ +ಆಕೃಷ್ಟಿ, ತಪಸೊಂದೆ=ತಪಸು+ಒಂದೆ, ಪಥವದಕೆ=ಪಥವು+ಅದಕೆ.
ಕಾಮೇಷ್ಟಿ=ಇಷ್ಟಾರ್ಥವನ್ನು ಪೂರೈಸಿಕೊಳ್ಳಲು ಮಾಡುವ ಯಜ್ಞ, ಆಕೃಷ್ಡಿ=ಸೆಳೆತ, ಪಥವು=ದಾರಿ.

ಹಲವಾರು ರಸಗಳನ್ನು ಭಟ್ಟಿ ಇಳಿಸಿದಂತೆ, ಮನಸ್ಸಿನಲ್ಲಿ ಸೌಂದರ್ಯೋಪಾಸನೆಯ ಒಂದು ಯಜ್ಞ ನಡೆಯುತ್ತದೆ. ಕವಿಯ ಕಾವ್ಯ, ಕವನ, ಕವಿತೆ ಮುಂತಾದವುಗಳಿಂದ, ಕಲಾವಿದನ ಸೃಷ್ಟಿಯಾದ ಚಿತ್ರ, ಶಿಲ್ಪ, ನೃತ್ಯ, ಗಾಯನ ಮುಂತಾದವುಗಳ ಸೆಳೆತದಿಂದ ಮತ್ತು ಮನವೆಂಬ ಗುಹೆಯಲ್ಲಿ ಸ್ವಾಭಾವಿಕವಾಗಿ ನಡೆಯುವ ಮಂಥನದಿಂದ ಭಾವರಸೋತ್ಪತ್ತಿಯಾಗಿ, ಆ ಭಾವಗಳೇ ಸೌಂದರ್ಯಾನುಭವ ಯಜ್ಞಕ್ಕೆ ಹವಿಸ್ಸಾಗುತ್ತದೆ. ಆ ರೀತಿಯ ಅನುಭವಕ್ಕೆ ತಪಸೊಂದೇ ಮಾರ್ಗವೆಂದು ಉಲ್ಲೇಖಿಸಿದ್ದಾರೆ ಮಾನ್ಯ ಗುಂಡಪ್ಪನವರು.

ಶುದ್ಧ ಮನಸ್ಸಿಗೆ, ಪ್ರಕೃತಿಯಲ್ಲಿನ ಸೌಂದರ್ಯವನ್ನು ಅಥವಾ ಅನ್ಯರಿಂದ ರೂಪಿತವಾದ ಸುಂದರ ವಸ್ತುಗಳನ್ನು ಕಂಡಾಗ, ಒಂದು ಸುಂದರ ಅನುಭವವಾಗುತ್ತದೆ. ತಾನು ಇಂದು ಕಂಡ, ಹಿಂದೆ ಕಂಡಿದ್ದ, ಮತ್ಯಾರೋ ವಿವರಿಸಿ ಹೇಳಿದ್ದ. ನಮ್ಮ ಕಲ್ಪನೆಯಲ್ಲಿ ಅರಳಿದ, ಕನಸಲ್ಲಿ ಭ್ರಮಿಸಿದ ಎಲ್ಲ ಅನುಭವಗಳ ರಸಗಳ ಮಂಥನ ಮನಸ್ಸೆಂಬ ಗುಹೆಯಲ್ಲಿ ನಡೆದಾಗ 'ಸತ್ಯದರ್ಶನ'ವಾಗುತ್ತದೆ. ಸತ್ಯವೇ 'ಸುಂದರ'ವಾಗಿರುವಾಗ ಸೌಂದರ್ಯದ ದರ್ಶನವೂ ಆಂತರ್ಯದಲ್ಲಿ ಆಗುತ್ತದೆ.ಇಲ್ಲಿ ವಿಚಿತ್ರವೆಂದರೆ ಪ್ರತಿಯೊಬ್ಬರಿಗೂ ಭಿನ್ನಭಿನ್ನವಾದ ಅನುಭವವಾಗುತ್ತದೆ. ಬೆಳಗಿನ ಜಾವದ ಹಕ್ಕಿಗಳ ಕಲರವದಿಂದ ಕೆಲವರಿಗೆ ಆನಂದಾನುಭವವಾದರೆ ಮತ್ತೆ ಕೆಲವರಿಗೆ ಮುಂಜಾನೆಯ ಸುಖ ನಿದ್ದೆಗೆ ತೊಂದರೆಯಾಗಬಹುದು.

ಇದು ಒಂದು ತಪಸ್ಸು, ಸತ್ಯಾನ್ವೇಷಣೆಯಿಂದ ನಮಗಾಗುವ 'ಸೌಂದರ್ಯ' ದರ್ಶನವೇ ಈ ತಪಸ್ಸಿನ ಫಲ. ಈ ಸ್ಥಿತಿಯಲ್ಲಿ ದ್ವಂದ್ವಗಳಿಗೆ ಎಡೆಯಿರುವುದಿಲ್ಲ, ಪಕ್ಷಪಾತವಿರುವುದಿಲ್ಲ, ಭ್ರಮೆಗಳಿರುವುದಿಲ್ಲ. ನಾಲ್ಕೂ ದಿಕ್ಕಿನಿಂದ ಬಂದ ರಸಾನುಭವವೇ ಶುದ್ಧ ಪಾಕದಂತೆ ಮನದೊಳಕ್ಕೆ ಇಳಿದು 'ಸತ್ಯ'ದರ್ಶನವಾಗುತ್ತದೆ.

ಆದರೆ ಈ ರೀತಿಯ ಅನುಭವ ಕೇವಲ, ಶುದ್ಧ ಸತ್ಯವನ್ನರಿಯುವ ಮನಸ್ಸಿರುವವರಿಗೆ ಆಗುತ್ತದೆ. ಪೂರ್ವಾಗ್ರಹ ಪೀಡಿತರಿಗೆ, ಇರುವುದನ್ನು ಯಥಾವತ್ ಒಪ್ಪಿಕೊಳ್ಳದೆ ಕಾಣುವ ಎಲ್ಲದರಲ್ಲೂ ಏನೋ ಒಂದು ಕೊರತೆಯನ್ನೇ ಕಾಣುವ ಪ್ರವೃತ್ತಿಯವರಿಗೆ ಆಗುವುದಿಲ್ಲ.

ಹಾಗಾಗಿ ನಾವು ಅನುಭವಿಸಬೇಕು. ಪ್ರತೀ ಕ್ಷಣವೂ ನಮಗೆ ಆನಂದದ ಅನುಭೂತಿಯಾಗಬೇಕು.ಅಂತಹ ಅನುಭವವನ್ನು ಪಡೆಯಲು ಮೊದಲು ಇಚ್ಛಿಸಬೇಕು, ಪ್ರಯತ್ನ ಪಡಬೇಕು, ದೊರೆತ ಅನುಭವವನ್ನು ಆಂತರ್ಯದಲ್ಲಿ ವಿಕಸಿತಗೊಳಿಸಿದರೆ, ಸತ್ಯದ ದರ್ಶನದಿಂದ 'ಸೌಂದರ್ಯ'ದ ಶುದ್ಧಾನುಭವ ನಮ್ಮದಾಗಬಹುದು.

**ಮುಕ್ತಕ – 471**

**ಮಂದಿರದ ಶಿಲ್ಪಿ ಯಂತ್ರಗಳ ಯೋಜಕ ರಾಜ್ಯ - |**
**ಸಂಧಾನಿ ವಿಜ್ಞಾನಿಯುದ್ಯೋಗದಾನಿ ||**
**ಮಂದಿ ಮುಂದಾಳು ಜನಬಾಂಧವ್ಯಪೋಷಕನು |**
**ಸೌಂದರ್ಯಕರರಿವರು — ಮಂಕುತಿಮ್ಮ ||**

ವಿಜ್ಞಾನಿಯುದ್ಯೋಗದಾನಿ=ವಿಜ್ಞಾನಿ+ಉದ್ಯೋಗ+ದಾನಿ, ಸೌಂದರ್ಯಕರರಿವರು=ಸೌಂದರ್ಯಕರು+ಇವರು
ಸೌಂದರ್ಯಕರು = ಸೌಂದರ್ಯವನ್ನು ಸೃಷ್ಟಿಸುವವರು.

ಮಂದಿರವನ್ನು ನಿರ್ಮಿಸುವ ಶಿಲ್ಪಿ, ಯಂತ್ರಗಳನ್ನು ಸೃಷ್ಟಿಸುವ ವಿಜ್ಞಾನಿ, ಆ ಯಂತ್ರಗಳನ್ನು ಕೈಗಾರಿಕೆಗಾಗಿ ಉಪಯೋಗಿಸುವ ಉದ್ಯಮಿ, ಸಮಾಜದ ವ್ಯವಸ್ಥೆಗೆ ರಾಜ್ಯಬಾರ ಕ್ರಮವನ್ನು ಅನುಸಂಧಾನ ಮಾಡುವ ರಾಜಕಾರಣಿ, ಉದ್ಯಮಗಳನ್ನು ಸ್ಥಾಪಿಸಿ ಸಾವಿರಾರು ಜನರಿಗೆ ಉದ್ಯೋಗವನ್ನು ಕೊಡುವವ, ಜನರನ್ನು ಹುರಿದುಂಬಿಸಿ

ಕಾರ್ಯೋನ್ಮುಖರನ್ನಾಗಿಸುವ ಜನನಾಯಕರು ಮತ್ತು ಜನರಲ್ಲಿ ಪರಸ್ಪರ ಬಾಂಧವ್ಯವನ್ನು ಹೆಚ್ಚಿಸುವವರು, ಇವರೆಲ್ಲರೂ ಈ ಜಗತ್ತಿನಲ್ಲಿ ಸೌಂದರ್ಯವನ್ನು ಉಂಟುಮಾಡುವವರು ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು.

ತನ್ನ ಶಕ್ತಿಯಿಂದ, ಈ ಜಗತ್ತನ್ನೇನೋ ಸೃಷ್ಟಿಸಿಬಿಟ್ಟ ಪರಮಾತ್ಮ. ಆದರೆ ಅದರಲ್ಲಿ ತನ್ನ ಕಲ್ಪನೆಗೆ ತಕ್ಕಂತ





ಮಾರ್ಪಾಡುಗಳನ್ನು ಮಾಡಿಕೊಂಡು ಸಂತೋಷಪಡುವ ಕ್ಷಮತೆಯನ್ನು ಮಾನವನಿಗೆ ಕೊಟ್ಟ. ಆ ಕ್ಷಮತೆಯನ್ನು ಉಪಯೋಗಿಸಿಕೊಂಡೇ ಮನುಷ್ಯ ಈ ಜಗತ್ತಿನಲ್ಲಿ ಇಷ್ಟೆಲ್ಲಾ ಸೌಂದರ್ಯವನ್ನು ಸೃಷ್ಟಿಸಿದ್ದಾನೆ. ತನ್ನ ಜ್ಞಾನ ಮತ್ತು ವಿಜ್ಞಾನದಿಂದ ಎಲ್ಲವನ್ನೂ ಸೃಷ್ಟಿಸಿದ, ಶಿಲ್ಪಗಳು, ದೇಗುಲಗಳು, ಇಗರ್ಜಿಗಳು, ಒಂದೊಂದು ಪ್ರಯೋಜನಕ್ಕೆ ಒಂದೊಂದು ಯಂತ್ರ, ಆ ಯಂತ್ರದಿಂದ ತಯಾರಿಸಲ್ಪಡುವ ಜನೋಪಯೋಗಿ ಪದಾರ್ಥಗಳು, ಹೀಗೆ ಸುಂದರ ವಸ್ತುಗಳ ಮಾನವ ಸೃಷ್ಟಿಯ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ಇವನು ಕಟ್ಟಿಕೊಂಡ ಸಮಾಜ, ಈ ಸಮಾಜದ ಆಡಳಿತಕ್ಕೆ ಬೇಕಾದ ವ್ಯವಸ್ಥೆ, ಅದನ್ನು ಪರಿಪಾಲಿಸುವ ಸಜ್ಜನರು, ಜೀವನ ಕ್ರಮವನ್ನು ವೈಜ್ಞಾನಿಕವಾಗಿ ವೇದೋಪನಿಷತ್ತಿನ ರೂಪದಲ್ಲಿ ರೂಪಿಸಿದ ಮತ್ತು ನಿರೂಪಿಸಿದ ಜ್ಞಾನಿಗಳು, ಋಷಿ ಮುನಿಗಳು, ಸುವ್ಯವಸ್ಥಿತ ಸಮಾಜದ ನಿರ್ಮಾಣಕ್ಕೆ ಕಾರಣರಾದ ಸುಧಾರಕರು ಮುಂತಾದವರೆಲ್ಲ ಈ ಜಗತ್ತನ್ನು ಸುಂದರವಾಗಿಸಲು ಶ್ರಮಿಸದವರೇ. ಆದ್ದರಿಂದಲೇ ಇವರನ್ನು ಮಾನ್ಯ ಗುಂಡಪ್ಪನವರು “ಸೌಂದರ್ಯಕರು' ಎಂದರು.

ಆದರೆ ಇಂದಿನ ಪರಿಸ್ಥಿತಿ ಏನು ಎಂದು ನೋಡಿದರೆ, ಬಹಳ ಜನ ಸಜ್ಜನರು ಸಾವಿರಾರು ವರ್ಷಗಳ ಶ್ರಮದಿಂದ, ತಪಸ್ಸಿನಿಂದ, ಶುದ್ಧಾಂತಃಕರಣದಿಂದ, ನಿಸ್ವಾರ್ಥದಿಂದ ನಿರ್ಮಿಸಿದ ಸೌಂದರ್ಯವನ್ನೆಲ್ಲ, ಇಂದಿನ

ನಾಯಕರು, ಸಮಾಜ ಸೇವಕರೆಂದು ತಮ್ಮನ್ನು ತಾವು ಕರೆದುಕೊಳ್ಳುವ ದುಷ್ಟ ರಾಜಕಾರಣಿಗಳು, ಅವರಿಗೆ ಬೆನ್ನೆಲುಬಾಗಿ ನಿಂತು ಅವರುನ್ನಪಯೋಗಿಸಿಕೊಂಡು ತಮ್ಮ ಖಜಾನೆಯನ್ನು ತುಂಬಿಕೊಳ್ಳುವ ಉದ್ಯೋಗಪತಿಗಳು, ಭ್ರಷ್ಟ ಅಧಿಕಾರಿಗಳು, ಹಾಳುಗೆಡುವಿದ್ದಾರೆ. ಇವರ ಸಂಖ್ಯೆ ಅಲ್ಪವಾದರೂ ಇವರು ಮಾಡುವ ಧಾಂದಲೆ ಬಹಳ ಘೋರ. ಆದರೆ ಅವರ ದುಷ್ಟತನಕ್ಕಿಂತ ಸಜ್ಜನರ ನಿಷ್ಕ್ರಿಯತೆಯೇ' ಎಲ್ಲ ರೀತಿಯ ಪತನಕ್ಕೂ ಕಾರಣವೆಂದರೆ ತಪ್ಪಾಗಲಾರದು. ವಿಳಂಬವಾಗಿಯಾದರೂ ಸಜ್ಜನರು 'ಎಚ್ಚೆತ್ತುಕೊಂಡರೆ ಮತ್ತೆ ಜಗತ್ತು ಸುಂದರವಾಗಬಹುದು.

**ಮುಕ್ತಕ – 472**

**ಕವಿ ಚಿತ್ರಕೋವಿದನು ಪರತತ್ವಶೋಧಕನು ।**
**ವಿವಿಧ ವಾದನ ಗೀತ ನೃತ್ಯ ಕುಶಲಿಗಳು ॥**
**ನವನವತೆಯಂ ಮನಸಿಗೀವೆಲ್ಲ ಕಲೆಗಾರ- ।**
**ರವರಿಂದ ಸುಂದರತೆ – ಮಂಕುತಿಮ್ಮ ॥**

ಮನಸಿಗೇವೆಲ್ಲ=ಮನಸ್ಸಿಗೆ+ಈವ+ಎಲ್ಲ, ಕಲೆಗಾರರವರಿಂದ= ಕಲೆಗಾರರು+ಇವರಿಂದ,
ಈವ=ಕೊಡುವ

ಕವಿ, ಚಿತ್ರ ಕಲಾವಿದ, ಪರತತ್ವವನು ಶೋಧಿಸಿ ಸತ್ವ ಗ್ರಾಹಕ ಮತ್ತು ತತ್ವ ಪ್ರಚಾರಕನು, ವಿವಿಧ ವಾದ್ಯಗಳನ್ನು





ನುಡಿಸುವ ಕಲಾವಿದರು, ಸಂಗೀತ, ನೃತ್ಯ ಮುಂತಾದ ಕಲೆಗಳಲ್ಲಿ ನಿಪುಣತೆಯನ್ನು ಪಡೆದ ಕುಶಲಿಗಳು, ತಮ್ಮ ತಮ್ಮ ಕ್ಷೇತ್ರಗಳಲ್ಲಿ ಹೊಸ ಹೊಸ ಆವಿಷ್ಕಾರವನ್ನು ಮಾಡಿ, ಹೊಸವಿಚಾರಗಳನ್ನು ನಮಗೆ ನೀಡಿ, ಆನಂದವನ್ನು

ನೀಡುವರು. ಇವರ ಸೃಷ್ಟಿಯೂ ಸಹ 'ಸುಂದರತೆ'ಯನ್ನು ಜಗತ್ತಿಗೆ ನೀಡುತ್ತದೆ ಎಂದು ಜಗತ್ತಿನಲ್ಲಿ ಹಲವಾರು ಜನ ತಮ್ಮ ಕಲ್ಪನೆ ಮತ್ತು ಕುಶಲತೆಯಿಂದ ಬದುಕಿನ ಸುಂದರತೆಗೆ ತಮ್ಮ ಕಾಣಿಕೆಯನ್ನು ನೀಡುತ್ತಾರೆ ಎನ್ನುವ ಭಾವವನ್ನು ಈ ಮುಕ್ತಕದಲ್ಲಿ ವ್ಯಕ್ತಪಡಿಸಿದ್ದಾರೆ ಮಾನ್ಯ ಗುಂಡಪ್ಪನವರು.

ದೇಹ, ಮನಸ್ಸು, ಬುದ್ಧಿ ಮತ್ತು ಆತ್ಮಕ್ಕೆ ಸಂತಸ ಅಥವಾ ಮುದವನ್ನು ನೀಡುವ ಯಾವುದೇ ವಿಷಯ ಸೌಂದರ್ಯದಿಂದ ಕೂಡಿರುತ್ತದೆ. ಏಕೆಂದರೆ ಸುಂದರವಲ್ಲದ ವಸ್ತು ಅಥವಾ ವಿಷಯ ಸಂತಸ ಅಥವಾ ಸುಖ ನೀಡಲು ಸಾಧ್ಯವಿಲ್ಲ. ಕವಿಯ ಕಲ್ಪನೆಯ ಮೂಸೆಯಿಂದ ಮೂಡುವ ಕವಿತೆ, ಕಾವ್ಯ,ಕಥೆ,ಕಲಾವಿದನ ಚಿತ್ರ, ಶಿಲ್ಪಿ ಮುಂತಾದವು ಯಾವುದೇ ಆದರೂ, ಎಲ್ಲರಿಗೂ ಅಲ್ಲದಿದ್ದರೂ ಹಲವರಿಗಂತೂ ಆನಂದ ನೀಡುತ್ತದೆ, ಏಕೆಂದರೆ ಒಂದು ವಸ್ತುವನ್ನು ಹಲವಾರು ಜನ ನೋಡಿದಾಗ ಪ್ರತಿಯೊಬ್ಬರಲ್ಲೂ ಭಿನ್ನಭಿನ್ನವಾದ ಪ್ರತಿಕ್ರಿಯೆಗಳು ಮೂಡುತ್ತವೆ. ಮುಕ್ತ ಮನಸ್ಸಿನ ನೋಟಕ್ಕೆ ಎಲ್ಲವೂ ಸುಂದರವೇ ಆಗಿರುತ್ತದೆ.

ಸಂಗೀತದಲ್ಲಿ 72 ಮೇಳಕರ್ತರಾಗಗಳು.ಆದರೆ ಒಬ್ಬ ನುರಿತ ಗಾಯಕ, ತನ್ನ ಮೇಧಾಶಕ್ತಿಯಿಂದ ಹಲವು ಹೊಸ ಹೊಸ ರಾಗಗಳನ್ನು ಸೃಷ್ಟಿಸುತ್ತಾನೆ. ಅವುಗಳಿಗೆ ಜನ್ಯ ರಾಗಗಳೆಂದು ಹೆಸರು.ಅವೂ ಸಹ ಬಹಳ ಸುಂದರವಾಗಿ ಕೇಳುಗನ ಮನಸ್ಸಿಗೆ ಆನಂದವನ್ನು ನೀಡುತ್ತದೆ. ಹಾಗೆಯೇ 'ಭರತ' ಮುನಿಯಿಂದ ಜಗತ್ತಿಗೆ ಕೊಡಲ್ಪಟ್ಟ ನೃತ್ಯಶಾಸ್ತ್ರವು ಹೊಸ ಹೊಸ ಆಯಾಮಗಳನ್ನು ಮೈಗೂಡಿಸಿಕೊಂಡು, 'ಕೂಚಿಪುಡಿ, ಭರತ ನಾಟ್ಯ, ಕಥಕ್ಕಳಿ, ಒಡಿಸ್ಸಿ ಮುಂತಾದ ಹೆಸರುಗಳಿಂದ ಬೇರೆ ಬೇರೆ ರೀತಿಯಲ್ಲಿ ಜನಗಳಿಗೆ ಮುದ ನೀಡುತ್ತಿದೆ. ಇದೂ ಸಹ ಕಲಾವಿದನ ಆವಿಷ್ಕಾರೀ ಮನೋಭಾವದಿಂದ ಸೃಷ್ಟಿಯಾದ ಸುಂದರತೆಗಳೇ ಅಲ್ಲವೇ?

ಹೀಗೆ ಕಾವ್ಯ, ಕಥೆ, ಕವನ, ಕವಿತೆ, ಚಿತ್ರ, ಶಿಲ್ಪ, ಸಾಹಿತ್ಯ, ರಾಗ, ನಾಟ್ಯ, ಸಂಗೀತ ಮುಂತಾದವುಗಳ ಜೊತೆಗೆ ಆಡಳಿತ, ರಕ್ಷಣೆ ಮುಂತಾದ ವಿಧಾನಗಳಿಗೆ ಹೊಸ ಆಯಾಮವನ್ನು ನೀಡುವ ಆಡಳಿತ ನಿಪುಣರೂ ಸಹ ಜನ ಜೀವನವನ್ನು ಸುಂದರವಾಗಿಸಲು ಪ್ರಯತ್ನವನ್ನು ಪಡುವುದರಿಂದ ಅವರನ್ನೂ ಸಹ, ಕಲಾವಿದರೆಂದು ಪರಿಗಣಿಸಿ ಸಾಮಾನ್ಯರ ಬದುಕನ್ನು ಸುಂದರವಾಗಿಸಲು ಇವರುಗಳು ಮಾಡುವ ಪ್ರಯತ್ನವೂ ಸಹ ಒಂದು 'ತಪಸ್ಸು' ಎನ್ನಬಹುದು.

ಅಂತಹ ಬಹುಜನ ಆನಂದದಾಯಕವಾದ ಯಾವುದಾದರೂ ವಿಷಯದ ಸೃಷ್ಟಿಯನ್ನು ಮಾಡುವಂತೆ, ನಾವೂ ಮಾಡುವ ಪ್ರಯತ್ನ ಪಟ್ಟರೆ ಮತ್ತು ಅಂತಹ ಪ್ರಯತ್ನದಲ್ಲಿ ನಮಗೆ ಕಿಂಚಿತ್ ಜಯ ಸಿಕ್ಕರೂ, ನಮ್ಮ ಜೀವನ ಸಾರ್ಥಕವಾಗುತ್ತದೆ ಅಲ್ಲವೇ?

**ಮುಕ್ತಕ – 473**

**ಪಾರಿಜಾತವ ಕಂಡು ನಿಡುಸುಯ್ದು, ಪದಗಳಿಂ ।**
**ಶೌರಿಕಥೆಯನು ಹೆಣೆದು ತೃಪ್ತನಹನು ಕವಿ ॥**
**ಊರಿನುದ್ಯಾನಕದ ತರಿಸಿ ಬೆಳೆಸುವ ಕಾರ್ಯ ।**
**ಧೀರನಲ ರಾಜ್ಯಕನು - ಮಂಕುತಿಮ್ಮ ॥**

ತೃಪ್ತನಹನು = ತೃಪ್ತನು+ ಅಹನು, ಊರಿನುದ್ಯಾನಕದ = ಊರಿನ+ಉದ್ಯಾನಕೆ+ಅದ,
ಧೀರನಲ =ಧೀರನು+ಅಲ, ನಿಡುಸುಯ್ದು=ನಿಟ್ಟುಸಿರಿಟ್ಟು,
ಶೌರಿ=ಕೃಷ್ಣ,

ಶ್ರೀ ಕೃಷ್ಣನ ಭಾರ್ಯೆ ರುಕ್ಮಿಣಿಗೆ ನಾರದನು ತಂದುಕೊಟ್ಟ, ದೇವಲೋಕದ ಪಾರಿಜಾತ ಪುಷ್ಪವನ್ನು ಕಂಡು ಅಸೂಯೆಗೊಂಡ ಸತ್ಯಭಾಮೆಯನ್ನು ಮೆಚ್ಚಿಸಲು ಶ್ರೀ ಕೃಷ್ಣ, ಆ ದೇವಲೋಕದ ಪಾರಿಜಾತ ವೃಕ್ಷವನ್ನೇ ಕದ್ದು ತಂದ ಕತೆಯನ್ನು, ಕವಿ ತನ್ನ ಕಲ್ಪನೆಯಿಂದ ಹೆಣೆದಿದ್ದಾನೆ. ಹೀಗೆ ಕವಿ ತನ್ನ ಕಲ್ಪನೆಯಲ್ಲಿ ಬರುವ ಎಲ್ಲವನ್ನೂ, ಕಾವ್ಯದಲ್ಲಿ ಸಾಜವನ್ನು ಸುಂದರವಾಗಿಸುವ ಸದುದ್ದೇಶದಿಂದ ತುಂಬಿದಾಗ ಅವನು ಮಹಾಕವಿಯಾಗುತ್ತಾನೆ. ಜನರು ಅದರಲ್ಲಿ ಶ್ರದ್ಧೆಯನ್ನಿಟ್ಟಾಗ, ರಾಜನು ಅದನ್ನು ಕಾರ್ಯರೂಪಕ್ಕೆ ತಂದಾಗ ಅವನು ಧೀರನಾಗುತ್ತಾನೆ ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಕಲ್ಪನಾ ಶಕ್ತಿಯಿರುವವನಿಗೆ ಕವಿ ಎನ್ನುತ್ತಾರೆ, ಅಂತಹ ಕವಿ, ಕಥೆ ಅಥವಾ ಕಾವ್ಯವನ್ನು ಹೆಣೆಯುತ್ತಾನೆ. ಹಲವಾರು ಪಾತ್ರಗಳು, ಹಲವಾರು ಸಂದರ್ಭಗಳು, ಹಲವಾರು ಪ್ರಸಂಗಗಳನ್ನು ವರ್ಣಿಸುತ್ತಾನೆ. ಆ ಪಾತ್ರಗಳನ್ನು ಉದಾರವಾಗಿ ಮತ್ತು ಉದಾತ್ತವಾಗಿ ಸೃಷ್ಟಿಸುತ್ತಾನೆ. ಆ ಪಾತ್ರಗಳ ಮೂಲಕ, ಅಲ್ಲಿ ವಿವರಿಸುವ ಸಂದರ್ಭ ಮತ್ತು

ಪ್ರಸಂಗಗಳ ಮೂಲಕ ಜನರ ಜೀವನವನ್ನು ಮತ್ತಷ್ಟು ಸುಂದರವಾಗಿಸುವ ವಿಧಾನವನ್ನು ಒಂದು ಸಂದೇಶ ಮತ್ತು ಆದೇಶದ ರೂಪದಲ್ಲಿ ಕೊಡುತ್ತಾನೆ.

ರಾಜನೆನಿಸಿಕೊಂಡವನು ಅಥವಾ ರಾಜ್ಯಾಂಗವನ್ನು ನಡೆಸುವ ಜವಾಬ್ದಾರಿಯನ್ನು ಹೊತ್ತವನು, ಆ ಕವಿಯ ಕಾವ್ಯ, ಕಥೆಗಳಲ್ಲಿನ, ಕಾರ್ಯರೂಪಕ್ಕೆ ತರಬಹುದಾದ ವಿಚಾರಗಳನ್ನು, ಕೇವಲ ಜನಹಿತಕ್ಕಾಗಿ ಕಾರ್ಯರೂಪಕ್ಕೆ ತಂದರೆ, ಕವಿಯ ಕಲ್ಪನೆಗೆ ಒಂದು ಮೂರ್ತರೂಪ ಕೊಟ್ಟು ಕವಿಯ ಕಲ್ಪನೆಯನ್ನು ಮತ್ತು ಅದರ ಉದ್ದೇಶ್ಯವನ್ನೂ ಸಾಕಾರಗೊಳಿಸಿದಂತಾಗುತ್ತದೆ. ಅಂತಹ ರಾಜ ಅಥವಾ ರಾಜಕಾರಣಿ ಧೀರನೆಂದೆನಿಸಿಕೊಳ್ಳುತ್ತಾನೆ ಎನ್ನುವುದು ಮಾನ್ಯ ಗುಂಡಪ್ಪನವರ ಅಭಿಮತ.

ಆದರೆ ಪ್ರಸ್ತುತ ಪರಿಸ್ಥಿತಿಯನ್ನು ನೋಡಿದರೆ ತುಂಬಾ ದುಃಖವಾಗುತ್ತದೆ.ಏಕೆಂದರೆ ಇಂದು ಸಮಾಜಮುಖಿಯಾಗಿ ಸರ್ವಜನ ಹಿತವನ್ನು ಕಲ್ಪಿಸಿಕೊಂಡು ಬರೆಯುವ ಕವಿಗಳೂ ಇಲ್ಲ. ಅಕಸ್ಮಾತ್ ಅಂತಹ ಕವಿಗಳು ನಮ್ಮಲ್ಲಿ ಇದ್ದಾರೆ ಎಂದಾದರೆ ಅವರ ಕಲ್ಪನೆಯನ್ನು ಸಾಕಾರಗೊಳಿಸುವ ರಾಜಕಾರಣಿಗಳೂ





ಇಲ್ಲ. ಎಲ್ಲರೂ 'ತಮ್ಮ ತಮ್ಮನ್ನು ಬಿಂಬಿಸಿಕೊಂಡು ಮೆರೆಯುವ ಪ್ರಯತ್ನದಲ್ಲಿ ತೀವ್ರ ಪೈಪೋಟಿ ಮಾಡುತ್ತಿದ್ದಾರೆ. ಮುಂದೆಂದಾದರೂ ಜನಜೀವನವತ್ತು ಸುಂದರವಾಗಿಸುವ ಕಲ್ಪನೆಯನ್ನು ಹೊತ್ತ ಕವಿಗಳೂ ಮತ್ತು ಅವರ ಕಲ್ಪನೆಯನ್ನು ಸಾಕಾರಗೊಳಿಸುವ ರಾಜಕೀಯ ಧುರೀಣರೂ ಬಂದು ಸಮಾಜದ ಪರಿಸ್ಥಿತಿ ಬದಲಾಗಬಹುದೆಂಬ ಅಪೇಕ್ಷೆ ಮತ್ತು ನಿರೀಕ್ಷೆಯನ್ನು ನಾವು ಬಿಡಬಾರದು.

**ಮುಕ್ತಕ – 474** **ಬಿದ್ದುದನು ನಿಲ್ಲಿಸದೆ ನರನ ಮೃತ್ಯುಂಜಯತೆ |**
**ಶುದ್ಧಿಸದೆ ನಭ ಧರೆಯ ಮರಮರಳಿ ಮಳೆಯಿಂ ||**
**ಗದ್ದೆ ಕೊಯ್ಲಾಗೆ ಮಗುಳ್ದದು ಬೆಳೆಯ ಕುಡದಿಹುದೆ |**
**ಬಿದ್ದ ಮನೆಯನ್ನು ಕಟ್ಟೋ - ಮಂಕುತಿಮ್ಮ ||**

ಮಗುಳ್ದದು = ಮಗುಳ್ದು+ಅದು, ಕುಡದಿಹುದೆ=ಕೊಡದೆ+ಇಹುದೆ ಮಗುಳ್ದದು = ಮತ್ತೆ ಅದು

ಕೊಳೆಯಾದ ಇಳೆಯನ್ನು ಮಳೆಯಿಂದ ಮತ್ತೆ ಮತ್ತೆ ತೊಳೆಯುವ ಆ ಆಕಾಶದಂತೆ, ಬೆಳೆಯನ್ನು ಕೊಯ್ದ ನಂತರವೂ ಮತ್ತೆ ಮತ್ತೆ ಬೆಳೆ ಬೆಳೆಯುವ ಈ ಧರೆಯಂತೆ, ಕೆಳಗೆ ಬಿದ್ದಿರುವುದನ್ನು ಎತ್ತಿ ನಿಲ್ಲಿಸುವುದೇ ಮಾನವನ ನಿರಂತರ ಕ್ಷಮತೆ, ಹಾಗಾಗಿ ಬಿದ್ದ ಮನೆಯನ್ನು ಎತ್ತಿ ಕಟ್ಟೋ ಎಂದು ಆದೇಶಿಸುತ್ತಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಎಂದೋ ಒಂದು ಬಾರಿ ಸೃಷ್ಟಿಯಾದ ಆ ಭುವಿಯನ್ನು ತಣಿಸಲು, ಕೋಟಿ ಕೋಟಿ ವರ್ಷಗಳಿಂದ ಮತ್ತೆ ಮತ್ತೆ ಮಳೆಯನ್ನು ಸುರಿಸುತ್ತಾ, ಭುವಿಯ ಕೊಳೆಯನ್ನು ತೊಳೆಯುತ್ತಲೇ ಇದೆ ಆ ನಭ . ಸಕಲ ಜೀವರಾಶಿಗಳ ಅಭಾದಿತ ಅಸ್ಥಿತ್ವಕ್ಕೆ ಪರಮಾತ್ಮ ಸೃಷ್ಟಿಸಿದ ಕ್ರಮವಿದು.ಮತ್ತೆ ಮತ್ತೆ ಚೈತನ್ಯವನ್ನು ತುಂಬುವ ಸೃಷ್ಟಿಯ ಕ್ರಮವಿದು. ಒಂದು ಬಾರಿ ಬೆಳೆ ಬೆಳೆದ ಭೂಮಿಯಲ್ಲಿ ಮತ್ತೆ ಮತ್ತೆ ಬೇರೆ ಬೇರೆ ಬೆಳೆಗಳು ಬೆಳೆಯುವುದಿಲ್ಲವೇ?

ಪ್ರಕೃತಿಯೇ ಒಂದು ಉತ್ಸಾಹದ ಚಿಲುಮೆಯಂತಿದೆ, ಮಾನವನ ಆಘಾತಕ್ಕೆ ಮತ್ತು ತನ್ನದೇ ಆದ ವಿಕೋಪಕ್ಕೆ ಎಷ್ಟುಬಾರಿ ಬಲಿಯಾದರೂ, ಮತ್ತೆ ಮತ್ತೆ ಹೊಸ ಪಲ್ಲವದೊಂದಿಗೆ ಉತ್ಸಾಹದಿಂದ ಹೊರಹೊಮ್ಮುತ್ತದೆ.

ಆ ಪ್ರಕೃತಿಯ ಮಗುವಾದ ಮನುಷ್ಯನೇನು, ಸಕಲ ಪ್ರಾಣಿಗಳೂ ಸಹ ಪ್ರತಿ ನಿತ್ಯ ಹೊಸ ಉತ್ಸಾಹದಿಂದ ಬದುಕನ್ನು ದೂಡುತ್ತವೆ. "ಮರಳಿ ಯತ್ನವ ಮಾಡು" ಎನ್ನುವ ವಾಣಿಯಂತೆ ಮನುಷ್ಯ ಪ್ರತಿ ಗಳಿಗೆಯೂ ತನ್ನ ಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳಲು ಪ್ರಯತ್ನ ಪಡುತ್ತಲೇ ಇರುತ್ತಾನೆ.

ನಮ್ಮ ಸುತ್ತು ಮುತ್ತಲಿನ ಜನರಲ್ಲಿ ಎಷ್ಟೋ ಮಂದಿ ಜೀವನದಲ್ಲಿ ಪೆಟ್ಟು ತಿಂದು ಕೆಳಗುರುಳಿದರೂ, ಮತ್ತೆ ತಮ್ಮ ಜೀವನವನ್ನು ಸುದಾರಿಸಿಕೊಳ್ಳಲು ನಿರಂತರ ಪ್ರಯತ್ನಮಾಡುತ್ತಾ ಹೊಸ ದಿಕ್ಕಿನಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರಲ್ಲವೇ? ಮಾನಸಿಕವಾಗಿ ಖಿನ್ನರಾದವರನ್ನು ಮತ್ತೆ ಜೀವನ್ಮುಖರನ್ನಾಗಿಸಲು ಪ್ರಯತ್ನಪಡುತ್ತೇವಲ್ಲವೇ? ಇದನ್ನೇ ಮಾನ್ಯ ಗುಂಡಪ್ಪನವರು "ಬಿದ್ದ ಮನೆಯನು ಕಟ್ಟೋ" ಎಂದು ಒಂದು ಆದೇಶದ ರೂಪದಲ್ಲಿ ನಮಗೆ ಹೇಳುತ್ತಾರೆ. ನಮಗೆ ಪರಮಾತ್ಮ ಅಂತಹ " ಪುನರುಜ್ಜಿವನದ" ಶಕ್ತಿಯನ್ನು ನೀಡಲಿ ಎಂದು ನಾವು ನಿರಂತರ ಪ್ರಾರ್ಥಿಸಿಕೊಳ್ಳಬೇಕು.

**ಮುಕ್ತಕ – 475**

**ಗೌರವಿಸು ಜೀವನವ, ಗೌರವಿಸು ಚೇತನವ |**
**ಆರದೋ ಜಗವೆಂದು ಭೇದವೆಣಿಸದಿರು ||**
**ಹೋರುವುದೇ ಜೀವನಸಮೃದ್ಧಿಗೋಸುಗ ನಿನಗೆ |**
**ದಾರಿಯಾತ್ಮೋನ್ನತಿಗೆ - ಮಂಕುತಿಮ್ಮ ||**

ಭೇದವೆಣಿಸದಿರು=ಭೇದವ +ಎಣಿಸದಿರು, ಜೀವನಸಮೃದ್ಧಿಗೋಸುಗ = ಜೀವನ+ಸಮೃದ್ಧಿ+ಗೋಸುಗ,
ದಾರಿಯಾತ್ಮೋನ್ನತಿಗೆ=ದಾರಿಯು+ಆತ್ಮ+ಉನ್ನತಿಗೆ,

ನಿನ್ನ ಜೀವನವನ್ನು ಗೌರವಿಸು, ಆ ಜೀವನಕ್ಕೆ ಮೂಲವಾದ ಚೇತನವನ್ನು ಗೌರವಿಸು, ಇದು ಯಾರದೋ ಜಗತ್ತು, ನಾನೇನೂ ಇಲ್ಲಿ ಶಾಶ್ವತವಾಗಿ ಇರುವುದಿಲ್ಲವಲ್ಲ ಎಂದು ಬದುಕನ್ನು ಗೌಣವೆಂದೆಣಿಸಬೇಡ. ಈ ಬದುಕಿನಲ್ಲಿ ನಾವು ಹೋರಾಡುವುದೇ ಸಮೃದ್ಧಿಗೋಸ್ಕರ. ಈ ಹೋರಾಟ ನಮಗೆ ಆತ್ಮೋನ್ನತಿಗೆ ದಾರಿಯಾಗಿದೆ, ಎಂದು ಬಹಳ ಗಹನವಾದ ತತ್ವವನ್ನು ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ ಅರುಹಿದ್ದಾರೆ.

ಬದುಕನ್ನು ಗೌರವಿಸಬೇಕು, ಪ್ರೀತಿಸಬೇಕು. ನಮ್ಮ ಅಸ್ತಿತ್ವಕ್ಕೆ ಕಾರಣವಾದ, ಪರಮ ಚೈತನ್ಯದ ಅಂಶವಾದ ಚೇತನವನ್ನು ಗೌರವಿಸಬೇಕು. "ನಮ್ಮ ಬದುಕನ್ನು ನಾವು ಕೇಳಿ ಪಡೆದುಕೊಂಡದ್ದಲ್ಲ, ಹೇಗಾದರೂ ಬದುಕಿದರಾಯ್ತು' ಎಂದು ಉಡಾಫೆಯ ಭಾವವನ್ನು ಬಿಟ್ಟು, ನಮ್ಮ ಬದುಕನ್ನು ನಾವೇ ಪ್ರೀತಿಸಬೇಕು. ಉತ್ಸಾಹ ಮತ್ತು ಆಶಯದೊಂದಿಗೆ ಬದುಕಿದಾಗ ಬದುಕಿಗೆ ಒಂದು ಅರ್ಥ ಸಿಗುತ್ತದೆ. ಪ್ರತೀ ಪ್ರಾಣಿಯ ಮೂಲ ಉದ್ದೇಶ 'ಆನಂದವನ್ನು ಪಡೆಯುವುದೇ

ಆಗಿರುತ್ತದೆ. ಆ ಆನಂದವನ್ನು ಪಡೆಯಬೇಕು ಮತ್ತು ಅದನ್ನು ಪಡೆಯುವುದಕ್ಕಾಗಿಯೇ ನಾವು ಬದುಕಿನಲ್ಲಿ ಹೋರಾಡುತ್ತೇವೆ, ಅಲ್ಲವೇ?

ಬದುಕು ಸಮೃದ್ಧವಾಗಬೇಕಾದರೆ ನಮ್ಮನ್ನು ನಾವು ಬದುಕಿನಲ್ಲಿ ತೊಡಗಿಸಿಕೊಳ್ಳಬೇಕು.ನಾವು ಮಾಡುವ ಪ್ರತೀ ಕೆಲಸದಲ್ಲೂ ಆಸ್ಥೆಯಿಂದ ತೊಡಗಿಸಿಕೊಳ್ಳಬೇಕು. ಯಾವುದೇ ಕೆಲಸವಾದರೂ ಉತ್ಸಾಹದಿಂದ





ಮಾಡಬೇಕು.ಆಗಲೇ ಕೆಲಸಮಾಡಿದ ತೃಪ್ತಿ ಮತ್ತು ಆ ಕೆಲಸದಿಂದ ಲಭ್ಯವಾಗುವ ಫಲಾನುಭವದ ತೃಪ್ತಿ ಎರಡೂ ಸಿಗಲು ಸಾಧ್ಯ. ಆ ತೃಪ್ತಿಯೇ ನಮಗೆ ಬದುಕಿನಲ್ಲಿ ಸಿಗುವ 'ಆನಂದ ಅಂತಹ ಆನಂದಕ್ಕಾಗಿ ನಮ್ಮ ಬದುಕಿನ ನಿರಂತರ ಹೋರಾಟ ನಡೆಯಬೇಕು.

ಬದುಕಿಗೆ ಉಪಕರಣಗಳಾದ ದೇಹ ಮನಸ್ಸು ಬುದ್ಧಿ ಮತ್ತು ಚೇತನಗಳನ್ನು ಶುದ್ಧವಾಗಿರಿಸಿಕೊಂಡರೆ ನಮ್ಮ ಆಲೋಚನೆಗಳು, ತದನುಗುಣವಾದ ನಮ್ಮ ಕೆಲಸ ಕಾರ್ಯಗಳು ಮತ್ತು ಅದರಿಂದ ಲಭ್ಯವಾಗುವ ಫಲಗಳು, ಎಲ್ಲವೂ ಶುದ್ಧವಾಗಿರಲು ಸಾಧ್ಯ. ಜೀವನದಲ್ಲಿ ಉತ್ಸಾಹದಿಂದ ಇದ್ದು, ಯಾವುದನ್ನೂ ಅತಿಯಾಗಿ ಪ್ರೀತಿಸದೆ, ಅತಿಯಾಗಿ ಅಂಟದೆ, ಲಭ್ಯವಾದ ಕೆಲಸವನ್ನು ನಿಸ್ಪೃಹತೆಯಿಂದ ಮಾಡುತ್ತಾ, ಸಂದ ಫಲವನ್ನು ಪರಮಾತ್ಮನ ಪ್ರಸಾದವೆಂದು ಸ್ವೀಕರಿಸಿ ಅನುಭವಿಸಿದಾಗ, ನಿಜವಾದ 'ಆನಂದ' ಸಿಗುತ್ತದೆ. ಅಂತಹ ಆನಂದವನ್ನು ಪಡೆಯುವ ಪ್ರಯತ್ನ ನಮ್ಮದಾಗಬೇಕು. ಅಂತಹ ಆನಂದ ನಮಗೆ ಸಿಕ್ಕರೆ ಆತ್ರೋದ್ಧಾರ'ವಾಗಿ ಬದುಕನಲ್ಲಿ ಸಾರ್ಥಕ್ಯ ಪಡೆದಂತಾಗುತ್ತದೆ.

**ಮುಕ್ತಕ – 476** **ಜೀವನೋದ್ಯಮವೆಲ್ಲ ತೋಟದುದ್ಯೋಗವೆನು ।**
**ಭಾವಬುದ್ಧಿಗಳ ಕೃಷಿಯಿಂದೊಗೆದ ಫಲದಿಂ ॥**
**ತೀವುತಿರೆ ನಗೆ ಹೊಳಪು ಮೊಗಮೊಗದೊಳಂ ಜಗದಿ ।**
**ಸೇವೆಯದು ಬೊಮ್ಮಂಗೆ – ಮಂಕುತಿಮ್ಮ ॥**

ಜೀವನೋದ್ಯಮವೆಲ್ಲ=ಜೀವನ+ಉದ್ಯಮವೆಲ್ಲ, ತೋಟದುದ್ಯೋಗವೆನು=ತೋಟದ+ಉದ್ಯೋಗವು+ಎನು, ಕೃಷಿಯಿಂದೊಗೆದ=ಕೃಷಿಯಿಂದ+ಒಗೆದ, ಮೊಗಮೊಗದೊಳಂ =ಮೊಗ+ಮೊಗದೊಳಂ.
ಉದ್ಯೋಗವೆನು=ಉದ್ಯೋಗವನ್ನು, ತೀವುತಿರೆ ತುಳುಕ್ಕುತ್ತಿದ್ದರೆ, ಮೊಗದೊಳಂ=ಮುಖದೊಳು, ಬೊಮ್ಮಂಗೆ= ಪರಮಾತ್ಮನಿಗೆ

ಸಕಲ ಚರಾಚರಗಳ ಜಗತ್ತಿನ ಜೀವನವು, ಆ ಪರಮಾತ್ಮನ ತೋಟ ಅಥವಾ ಉದ್ಯಾನವನ. ನಾವೆಲ್ಲಾ ಅವನು ಬೆಳೆಸಿದ ನಡೆದಾಡುವ ಗಿಡಗಳು. ನಮ್ಮ ಭಾವಗಳ ಮಂಥನದಿಂದ ಈ ಉದ್ಯಾನವನ್ನು ಕೃಷಿಗೈದಾಗ, 'ಆನಂದ'ದ ರೂಪದಲ್ಲಿ ಸುಫಲ ಲಭ್ಯವಾಗಿ ಪ್ರತೀ ಜೀವಿಯ ಮುಖದಲ್ಲೂ ನಗೆ ಮತ್ತು ಸಂತೋಷದ ಹೊಳಪು ತುಂಬಿ ತುಳುಕುತ್ತಿದ್ದರೆ, ಆ ಕೃಷಿಯೇ ನಾವೆಲ್ಲಾ ಮಾಡುವ 'ಪರಮಾತ್ಮನ ಸೇವೆ' ಯೆಂದಾಗುತ್ತದೆ ಎಂದು, ಪರಮಾತ್ಮನ ಸೇವೆಯ ಮತ್ತೊಂದು ವಿಧಾನವನ್ನು ನಮ್ಮ ಮುಂದಿಟ್ಟಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಪರಮಾತ್ಮನ ಸೃಷ್ಟಿಯು ಒಂದು ಉದ್ಯಾನವನದಂತಿದೆ. ಇಲ್ಲಿ ಇರುವುದೆಲ್ಲವನ್ನೂ ಪರಮಾತ್ಮನು ತನ್ನ ಸಂತೋಷಕ್ಕಾಗಿ ಸೃಷ್ಟಿಸಿಕೊಂಡ, ಉದ್ಯಾನವನದ ಗಿಡ ಮರಗಳಂತೆ ಇವೆ. ಇಲ್ಲಿರುವ ಪ್ರತಿಯೊಂದೂ ಒಂದಕ್ಕೊಂದು ಪೂರಕವಾಗೇ ಇವೆ. ಗಿಡ ಮರಗಳು, ಪ್ರಾಣಿ ಪಕ್ಷಿಗಳು, ಬೆಟ್ಟ ಗುಡ್ಡಗಳು, ಗಾಳಿ, ಭೂಮಿ, ಆಕಾಶ, ಅಗ್ನಿ, ಹೀಗೆ ಸಕಲವೂ ಒಂದಕ್ಕೊಂದು ಪೂರಕವಾಗೇ ಇವೆ. ಮಾನವನ ಹೊರತು ಮಿಕ್ಕೆಲ್ಲವುಗಳ ಆಲೋಚನಾ ಶಕ್ತಿಯಿಂದ ಸೃಷ್ಟಿಯಾಗುವ ಭಾವ ಮಾತ್ರ ಆ ಪೂರಕತ್ವಕ್ಕೆ ಸೀಮಿತವಾಗಿವೆ.

ಆದರೆ ಮಾನವನ ಭಾವನಾಶಕ್ತಿಗೆ ಮಿತಿಯೇ ಇಲ್ಲ. ಆ ದೇವ ದೇವನ ಸೃಷ್ಟಿಯನ್ನು ತಾನು ಅನುಭವಿಸುತ್ತಾ ಇದನ್ನು ಇನ್ನಷ್ಟು ಸುಂದರವನ್ನಾಗಿಸುವ ಕ್ಷಮತೆ ಕೇವಲ ಮಾನವನಲ್ಲಿ ಇದೆ, ಅಂತಹ ಮಾನವರಾದ ನಾವು ಸೃಷ್ಟಿಯಿಂದ ಕೇವಲ ನಮ್ಮ ಉನ್ನತೋನ್ನತ ಬೆಳವಣಿಗೆಗೆ ಪೂರಕವಾದ ವಿಚಾರಗಳನ್ನು ಗ್ರಹಿಸಿ ನಮ್ಮ ಭಾವನೆಗಳನ್ನು, "ಕೃಷಿಯಿಂದೊಗೆದ' ಎನ್ನುವಂತೆ, ಶುದ್ಧವಾಗಿಸಿಕೊಳ್ಳುತ್ತಾ, ನಮ್ಮ ಮನಸ್ಸಿನ ಅಂಗಳಗಳಲ್ಲಿ ಆನಂದವನ್ನು ತುಂಬಿಕೊಂಡರೆ, ನಾವುಗಳು ನಗುನಗುತ್ತಾ,ಉದ್ಯಾದನವನದಲ್ಲಿ ನಲಿಯುವ ಹೂಗಳಂತೆ, ಅರಳಿ ಹೊಳೆಯತ್ತೇವೆ, ನಲಿಯುತ್ತೇವೆ, ಆನಂದದಿಂದಿರುತ್ತೇವೆ.

ಪರಮಾತ್ಮ ನಮ್ಮನ್ನು ಅನಂದದಿಂದಿರಬೇಕೆಂದು ಅಪೇಕ್ಷಿಸುತ್ತಾನೆ ಮತ್ತು ಅನಂದದಿಂದ ಇರಲೆಂದೇ ಸೃಷ್ಟಿಸಿದ್ದಾನೆ. ಹಾಗಾಗಿ ನಾವು ನಮ್ಮ ಭಾವಗಳನ್ನು ಸುಂದರವಾಗಿಟ್ಟುಕೊಳ್ಳಲು, ಕೃಷಿ ಮಾಡಿ ಸುಫಲವನ್ನು ಪಡೆಯುವಂತೆ ನಿಜವಾದ ಆನಂದವನ್ನು ಪಡೆದು ನಗುನಗುತ್ತಾ ಹೊಳೆಯುತ್ತಿದ್ದರೆ ಅದೇ ನಾವು ನಮ್ಮನ್ನು ಸೃಷ್ಟಿಸಿದ ಆ ಪರಮಾತ್ಮನಿಗೆ ಸಲ್ಲಿಸುವ ನಿಜವಾದ ಪೂಜೆಯಾಗುತ್ತದೆ.

**ಮುಕ್ತಕ – 477**

**ಹೂವ ತಳೆದ ಗುಲಾಬಿಯಿಂದ ಮನಕಹುದೇನು ।**
**ನೋವೋ । ಸಂತಸವೋ । ನೋಡಾಮುಳ್ಳು ಬಾಳ್ಗೆ ॥**
**ಹೂವೆ ದಿವ್ಯಕಿರೀಟವದುವೆ ಕಾಲಕಟಾಕ್ಷ ।**
**ಜೀವನದ ತಿರುಳಷ್ಟೇ – ಮಂಕುತಿಮ್ಮ ॥**

ಮನಕಹುದೇನು= ಮನಕೆ+ಅಹುದೇನು, ದಿವ್ಯಕಿರೀಟವದುವೆ=ದಿವ್ಯ ಕಿರೀತವು+ಅದುವೆ,

ಅಹುದೇನು= ಆಗುವುದೇನು, ಕಟಾಕ್ಷ = ಕರುಣಾ ಪೂರಿತ ನೋಟ,

ಸುಂದರವಾದ ಹೂವನ್ನು ತಳೆದ ಗುಲಾಬಿ ಗಿಡದಿಂದ ನಾವು ಅರಿಯುವುದು ಅಥವಾ ಅನುಭವಿಸುವುದು, ನೋವೋ ನಲಿವೋ ಸಂತಸವೋ? ನೋಡಿ, ಗಿಡದ ಮುಳ್ಳನ್ನು ಬಾಳಿಗೆ ಹೋಲಿಸಿಕೊಂಡರೆ, ಗಿಡದ ಶಿಖರದಲ್ಲಿ ತಳೆಯುವ ಆ ಸುಂದರ ಹೂವನ್ನು ನಾವು ನಡೆದು ಬಂದ ಕಾಲವು ನಮಗೆ ಜೀವನದ





ಅಂತ್ಯದಲ್ಲಿ ಕರುಣಿಸುವ ಶಾಂತಿ, ನೆಮ್ಮದಿ ಅಥವಾ ಸುಖಕ್ಕೆ ಹೋಲಿಸಿಕೊಳ್ಳಬೇಕು. ಜೀವನದ ತಿರುಳು ಅಥವಾ ಸಾರವು ಅಷ್ಟೇ ಎಂದು ಜೀವನಾನುಭವವನ್ನು ನಾವು ಹೇಗೆ ಪರಿಗಣಿಸಬೇಕು ಎಂದು ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಗುಲಾಬಿ ಗಿಡದಲ್ಲಿ ಕಾಂಡದಲ್ಲಿ ಮುಳ್ಳುಗಳು ಮತ್ತು ಶಿಖರದಲ್ಲಿ ಸುಂದರ ಸುವಾಸಿತ ಹೂವು. ಇದನ್ನು ನಮ್ಮ ಜೀವನಕ್ಕೆ ಅನ್ವಯಿಸಿಕೊಂಡರೆ, ಮೊಳಕೆಯಾಗಿ, ಸಸಿಯಾಗಿ, ಗಿಡವಾಗಿ ರೂಪುಗೊಳ್ಳುವ ಗುಲಾಬಿ ಗಿಡದಂತೆಯೇ, ಶೈಶವ, ಬಾಲ್ಯ, ಯೌವನ, ಪ್ರೌಢ, ವಾರ್ಧಕ್ಯವೆನ್ನುವ ಹಂತಗಳನ್ನು ಹಾದು ಹೊಕ್ಕು ಜೀವನದ ಕಷ್ಟಗಳ ಕಾರ್ಪಣ್ಯಗಳನ್ನು ಅನುಭವಿಸಿ, ಆ ಅನುಭವದ ಮೂಸೆಯಿಂದ ದಾಟಿ ಹೊರಬಂದಾಗ 'ಜ್ಞಾನ'ವೆಂಬ ಮೊಗ್ಗು ಮೂಡಿ 'ಆನಂದ'ವೆಂಬ ಹೂವು ನಮ್ಮಲ್ಲಿ ಅರಳಬೇಕು.

ಗುಲಾಬಿ ಗಿಡದ ಕಾಂಡದಲ್ಲಿರುವ ಮುಳ್ಳುಗಳೇ ಜೀವನದಲ್ಲಿ ನಮಗೆ ಬರುವ ಕಷ್ಟಗಳಂತೆ. ಪ್ರತಿಯೊಬ್ಬರಿಗೂ ಬೇರೆ ಬೇರೆ ಸಂದರ್ಭಗಳಲ್ಲಿ, ಬೇರೆ ಬೇರೆ ಕಾಲಘಟ್ಟದಲ್ಲಿ, ಬೇರೆ ಬೇರೆ ರೀತಿಯ ಕಷ್ಟಗಳು, ಬೇರೆ ಬೇರೆ ಪ್ರಮಾಣ ಮತ್ತು ಪರಿಮಾಣದಲ್ಲಿ ಉಂಟಾಗುತ್ತದೆ. ಅವುಗಳನ್ನು ನಮ್ಮ ಪೂರ್ವ ಕರ್ಮದ ರೂಪದಲ್ಲಿ ತಂದುಕೊಳ್ಳುವುದೂ ನಾವೇ. ಅವುಗಳನ್ನು ಅನುಭವಿಸಿ, ನಿವಾರಿಸಿಕೊಳ್ಳುವ ಪ್ರಯತ್ನವನ್ನು ನಾವೇ ಮಾಡಬೇಕು, ಅಂತಹ ಪ್ರಯತ್ನದಿಂದ, ಅನುಭವಿಗಳಾದ ನಾವು ಪ್ರಾಜ್ಞರಾಗಿ ಮುಂದುವರೆದಾಗ, ನಮಗೆ ತಾಳ್ಮೆ ಅಥವಾ ಸಹನೆ ಮುಂತಾದವು ಮೈಗೂಡಿ, ಒಂದು ತಟಸ್ಥ ಮನೋಭಾವಕ್ಕೆ ತಲುಪುತ್ತೇವೆ. ಆದರೆ ಅದಕ್ಕೆ ಗುಂಡಪ್ಪನವರು ಹೇಳುವಂತೆ "ಕಾಲಕಟಾಕ್ಷ" ಅಂದರೆ ಕಾಲದ ಕರುಣೆಯಿಂದಲೇ ಅಂತಹ ಸ್ಥಿತಿಗೆ ತಲುಪಲು ಸಾಧ್ಯ. ಹಾಗೆ ತಲುಪಿದಾಗ ನಾವು ನಿಜವಾದ "ಆನಂದವನ್ನು ಪಡೆಯುತ್ತೇವೆ.

ಕೆಲವರು ಅಲ್ಪಕಾಲ ಜೀವನದಲ್ಲಿ 'ಮುಳ್ಳು'ಗಳನ್ನು ಅನುಭವಿಸಿ ಶೀಘ್ರವೇ ದಾಟಿ ಆನಂದವನ್ನು ಪಡೆಯುತ್ತಾರೆ ಮತ್ತೆ ಕೆಲವರು ಧೀರ್ಘಕಾಲ ಅನುಭವಿಸುತ್ತಾರೆ.ಕೆಲವರ ಜೀವನ ಮುಳ್ಳೇ ಇಲ್ಲದ ಗುಲಾಬಿ ಗಿಡದಂತೆ ಇರುತ್ತದೆ.ಮತ್ತೆ ಕೆಲವರ ಜೀವನ ಹೂವೇ ಬಿಡದ ಕೇವಲ ಮುಳ್ಳಿನ ಗುಲಾಬಿ ಗಿಡದಂತೆ ಇರುತ್ತದೆ. ನಮ್ಮ ಪೂರ್ವ ಕರ್ಮಗಳನ್ನು ನಾವು ಪಡೆದುಕೊಂಡು ಬರುತ್ತೇವೆ ಮತ್ತು ಅನುಭವಿಸುತ್ತೇವೆ. ಜೀವನದ ಅನುಭವಗಳನ್ನು ಪಡೆದು, ಅನುಭವಿಸಿ, ಕೊನೆಯಲ್ಲಿ "ನಮಗೂ ಜೀವನದ (ಗುಲಾಬಿ ಗಿಡದಲ್ಲಿ) ತುದಿಯಲ್ಲಿ "ನಿಜವಾದ ಆನಂದದ ರೂಪದಲ್ಲಿ ಸುಂದರ ಹೂವನ್ನು ಅರಳಿಸು ದೇವ" ಎಂದು ಪರಮಾತ್ಮನನ್ನು ಪ್ರಾರ್ಥಿಸಬೇಕು.

**ಮುಕ್ತಕ – 478**

**ಅಗೆದು ಗೊಬ್ಬರವಿಕ್ಕಿ ನೀರೆರೆದು ತೋಟಿಗನು ।**
**ಜಗವ ಮುಳ್ಳಿರಿತಗಳ ಸೈರಿಸೆ ಗುಲಾಬಿ ॥**
**ನಗುವುದೊಂದರೆನಿಮಿಷ; ನಗಲು ಬಾಳುಗಿಯುವುದು ।**
**ಮುಗುಳು ದುಡಿತಕೆ ತಣಿಸು ಮಂಕುತಿಮ್ಮ ॥**

ನೀರೆರೆದು=ನೀರು+ಎರೆದು, ಮುಳ್ಳಿರಿತಗಳ=ಮುಳ್ಳ+ಇರಿತಗಳ, ನಗುವುದೊಂದರೆನಿಮಿಷ=ನಗುವು+ಒಂದು+ಅರೆ+ನಿಮಿಷ, ಬಾಳುಗಿಯುವುದು=ಬಾಳು+ಮುಗಿಯುವುದು.

ಜಗವ =ಚುಚ್ಚುವ, ಸೈರಿಸೆ=ಸಹಿಸಿಕೊಂಡರೆ, ಅರೆ=ಅರ್ಧ, ಮುಗುಳು=ಮೊಗ್ಗು,

ಆ ಗುಲಾಬಿ ತೋಟದ ಮಾಲಿ, ನೆಲ ಅಗೆದು ಸಸಿ ನೆಟ್ಟು, ಅದಕ್ಕೆ ಗೊಬ್ಬರವ ಕೊಟ್ಟು ನೀರೆರೆದು, ಸೈರಣೆಯಿಂದ ಆ ಗಿಡದ ಮುಳ್ಳುಗಳಿಂದ ಚುಚ್ಚಿಸಿಕೊಂಡು, ಪ್ರೀತಿಯಿಂದ ಆ ಗಿಡವನ್ನು ಬೆಳೆಸಿದರೆ ಒಂದು ದಿನ ಹೂವು ಬಿಟ್ಟು, ಅಲ್ಪಕಾಲವಾದರೂ ಜಗಕೆ ಸಂತಸವನ್ನು ಕೊಡುತ್ತಾ ನಲಿದಾಗ, ಮಾಲಿಯ ಅಷ್ಟೂ ದುಡಿತಕ್ಕೂ ಒಂದು ಸಾರ್ಥಕ್ಯದ ಭಾವ ಮೂಡುತ್ತದೆ, ಎಂದು ಜಗತ್ತಿನಲ್ಲಿ 'ಆನಂದ'ವನ್ನು ಅನುಭವಿಸುವ ಪರಿಯ ಮತ್ತೊಂದು ಕೋನವನ್ನು ನಮಗೆ ವಿಶಧೀಕರಿಸಿದ್ದಾರೆ ಮಾನ್ಯ ಗುಂಡಪ್ಪನವರು, ನಮಗೆ ಈ ಮುಕ್ತಕದಲ್ಲಿ.

ನಾವು ಈ ದೃಷ್ಟಾಂತವನ್ನು ಬೇರೆ ಯಾವುದೇ ಹೂವಿನ ಗಿಡಕ್ಕೂ ಹೋಲಿಸಿಕೊಳ್ಳಬಹುದು.ಪಾರಿಜಾತದ ಗಿಡವನ್ನು ನೋಡಿದಾಗ ಗುಂಡಪ್ಪನವರು ಹೇಳುವ 'ನಗುವುದೊಂದರೆನಿಮಿಷ' ದ ಅನುಭವ ನಮಗೆ ಆಗುತ್ತದೆ. ಕೀಳಲೂ ಬಾರದ, ಮುಟ್ಟಿದರೆ ನಲುಗುವ ಆದರೂ ತನ್ನ ಸುಗಂಧದಿಂದ ಸುತ್ತು ಪರಿಸರವನ್ನು ಸುವಾಸಿತಗೊಳಿಸುವ ಪಾರಿಜಾತಕ್ಕೆ 'ನಗಲು ಬಾಳುಗಿಯುವುದು' ಎನ್ನುವುದು ಸಮರ್ಪಕವಾಗಿ ಅನ್ವಯವಾಗುತ್ತದೆ.

ಹೀಗೆ ಜಗತ್ತಿನಲ್ಲಿ ಜನಿಸಿದ ನಾವುಗಳು, ನಮ್ಮ ನಮ್ಮ ಪೂರ್ವ ಕರ್ಮಾನುಸಾರ ನಾವು ಮಾಡುವ ಪ್ರತೀ ಕೆಲಸದಲ್ಲೂ ತೊಡಕುಗಳನ್ನು ಎದುರಿಸುತ್ತಾ, ನಿವಾರಿಸುತ್ತಾ ಬದುಕುವಾಗ, ಕೆಲ ಸಂದರ್ಭಗಳಲ್ಲಿ ನಮಗೆ ಸಂತೋಷವನ್ನು ನೀಡುವ ಕ್ಷಣಗಳು ಹಲವಾರಿರಬಹುದು.ಅದು ಅಲ್ಪ ಕಾಲದ ಸಂತೋಷವೇ ಆದರೂ ನಾವು ಅದನ್ನು ತುಂಬು ಹೃದಯದಿಂದ ಅನುಭವಿಸಬೇಕು ಮತ್ತು ಆನಂದಿಸಬೇಕು.'ಅಯ್ಯೋ ಇದು ಕ್ಷಣಿಕ ಅಥವಾ ತಾತ್ಕಾಲಿಕ ಸುಖ, ಇದರಿಂದೇನಾಗಬೇಕು' ಎಂದು ಸಂದ ಆನಂದವನ್ನೂ ಅನುಭವಿಸದೆ, ಕೇವಲ ಕೊರತೆಗಳನ್ನೇ ಎಣಿಸುತ್ತಾ ಬದುಕಿದರೆ, ಜೀವನ ದುರ್ಭರವಾಗಿಬಿಡುತ್ತದೆ.

ನಮ್ಮ ಜೀವನದಲ್ಲಿ ನಾವು ಮಾಡುವ ಕಾಯ ಕರ್ಮಕ್ಕೆ ಸಿಗುವ ಸುಖ, ಸಂತೋಷ, ಆನಂದ, ತೃಪ್ತಿ ಎಲ್ಲವೂ ಹೂವಿನ ಗಿಡದ ಮೊಗ್ಗುಗಳಂತೆ, ಅವುಗಳು ಅರಳಿದಾಗ ಮತ್ತು ತಮ್ಮ ಸುಗಂಧವನ್ನು ಪಸರಿಸಿದಾಗ ನಮ್ಮ ದುಡಿಮೆಗೆ

ಒಂದು ಸಾರ್ಥಕ್ಯ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.ಅಂತಹ ಸಣ್ಣ ಸಣ್ಣ ಮತ್ತು ತಾತ್ಕಾಲಿಕ ಸುಖಗಳು ನಮ್ಮನ್ನು ಆ ಆನಂದದ ಕ್ಷಣಗಳನ್ನು ವಿಸ್ತರಿಸಿಕೊಳ್ಳುವ ಹಾಗೆ ಪ್ರೇರೇಪಿಸಬೇಕು.

ನಾವು ನಮ್ಮ ದುಡಿಮೆಯಿಂದ ನಮ್ಮಲ್ಲೇ ಸೃಷ್ಟಿಸಿಕೊಂಡ ಆನಂದದ ಮೊಗ್ಗನ್ನು ಅರಳಿಸಿ ಹೂವಾಗಿಸಿ, ನಾವೂ ಆನಂದಪಟ್ಟು ಅನ್ಯರಿಗೂ ಆನಂದ ನೀಡುವ ಭಾಗ್ಯ ನಮ್ಮದಾದರೆ, ನಮ್ಮ ಜೀವನ ಸಾರ್ಥಕವಾದಂತೆಯೇ ಅಲ್ಲವೇ?





**ಮುಕ್ತಕ – 479**

**ಸತ್ಯವೆಂಬುದದೇನು ಸೈನಿಕನ ಜೀವನದಿ।**
**ಕತ್ತಿಯವನಿಗೆ ಸತ್ಯವದರಿಂದ ಧರ್ಮ॥**
**ಭುಕ್ತಿ ಸುಪ್ತಿಗಳ ವಿಭವಂಗಳವನಿಗೆ ಮಿಥ್ಯೆ ।**
**ಸಾರ್ಥಕಥೆಯಿಂ ಸತ್ಯ - ಮಂಕುತಿಮ್ಮ॥**

ಸತ್ಯವೆಂಬುದದೇನು =ಸತ್ಯವೆಂಬುದು+ಅದು+ಏನು, ಸತ್ಯವದರಿಂದ= ಸತ್ಯವು+ಅದರಿಂದ,
ವಿಭವಂಗಳವನಿಗೆ=ವಿಬ 'ವಂಗಳು+ಅವನಿಗೆ,
ಭುಕ್ತಿ=ಆಹಾರ, ಸುಪ್ತಿ=ನಿದ್ದೆ, ವಿಭವಂ=ಆನಂದ, ಮಿಥ್ಯ= ಸುಳ್ಳು

ಸೈನಿಕನ ಜೀವನದಲ್ಲಿ ಸತ್ಯವೆಂಬುದು ಏನು? ಅವನಿಗೆ ಕತ್ತಿಯೇ ಅವನಿಗೆ ಸತ್ಯ ಮತ್ತು ಅದರಿಂದಲೇ ಅವನು ತನ್ನ ಧರ್ಮವನ್ನು ನಿರ್ವಹಿಸುತ್ತಾನೆ. ಆ ಸತ್ಯದ ಬಲದಿಂದ ಅವನು ತನ್ನ ಧರ್ಮವನ್ನು ನಿರ್ವಹಿಸುವಾಗ ಅವನಿಗೆ ಅನ್ನಾಹಾರಗಳ, ಆರಾಮ ನಿದ್ರೆಗಳ, ಮತ್ತು ಸುಖ ಆನಂದಗಳ ಪರಿವೆಯಿರುವುದಿಲ್ಲ ಮತ್ತು ಅವುಗಳೆಲ್ಲಾ ಅವನಿಗೆ ಮಿಥ್ಯವಾಗಿ ಕಾಣುತ್ತದೆ. ಅವನು ಸತ್ಯದ ಬಲದಿಂದಲೇ, ತನ್ನ ಧರ್ಮ ನಿರ್ವಹಣೆಯಿಂದ ಬದುಕಿನಲ್ಲಿ ಸಾರ್ಥಕತೆಯನ್ನು

ಕಂಡುಕೊಂಡು, ಜೀವನದ ಸತ್ಯವನ್ನು ಕಾಣುತ್ತಾನೆ ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜಗತ್ತಿನ ಪ್ರತಿ ಮಾನವನೂ ಒಬ್ಬ ಸೈನಿಕ. ಬದುಕಿನ ಹೋರಾಟದಲ್ಲಿ ನಿತ್ಯ ನಿರಂತರ ಹೋರಾಟದ ಸೈನಿಕ. ಸರಹದ್ದಿನ ಸೈನಿಕನಿಗೆ ಒಂದೇ ರೀತಿಯ ಹೋರಾಟ, ದೇಶದ ಶತ್ರುವಿನ ಮೇಲೆ ಹೋರಾಟ, ಬದುಕಿನಲ್ಲೂ ನಮಗೆ ಎರಡು ಮುಖದ ಯುದ್ಧ, ಒಂದು ಹೊರಗಿನ ಸಮಾಜದಲ್ಲಿ ಅಸ್ತಿತ್ವಕ್ಕೆ ಹೋರಾಟ ಮತ್ತು ಎರಡು ಅಂತರಂಗದಾಳದಲ್ಲಿ ಬಿಡುಗಡೆಗೆ ಹೋರಾಟ. ಈ ಎರಡೂ ಹೋರಾಟಗಳು ನಿರಂತರವಾಗಿ ನಡೆಯುತ್ತಲೇ ಇರುತ್ತದೆ.

ಬದುಕಿನ ಅಸ್ತಿತ್ವದ ಹೋರಾಟಕ್ಕೆ ಬೇಕಾದದ್ದು ನಿರಂತರ ಕೃಷಿ, ನಿಯಮ ನೀತಿಗಳ ಪಾಲನೆ, ಧರ್ಮದ ನಡೆ, ಇತರರೊಂದಿಗೆ ಪ್ರೇಮ, ಸೌಹಾರ್ದಯುತವಾದ ಬಾಳ್ವೆ, ಮುಂತಾದ ಆಯುಧಗಳು, ಬಾಳಿನಲ್ಲಿ ಉತ್ಸಾಹವೇ ಒಂದು ಮಹಾ ಆಯುಧ. ಇದೊಂದಿದ್ದರೆ ಎಂತಹ ವಿಷಮ ಪರಿಸ್ಥಿತಿಯ ಮೇಲೂ ಹೋರಾಡಿ ಜಯ ಸಾಧಿಸಿಬಿಡಬಹುದು.ಮಾಡುವ ಕೆಲಸದಲ್ಲಿ ಆ ವೃತ್ತಿಯ ಧರ್ಮವನ್ನು ಪರಿಪಾಲಿಸುತ್ತಾ 'ಶಿಸ್ತಿನ ಸಿಪಾಯಿ' ಯಾದರೆ ಹೊರ ಪ್ರಪಂಚದ ಯುದ್ಧದಲ್ಲೂ ನಮಗೆ ತೃಪ್ತಿ ಮತ್ತು ಆನಂದ ದೊರಕುತ್ತದೆ.

ಹೊರಗಿನ ಯುದ್ಧವು ಯಾವುದೇ ರೀತಿಯದಾಗಿದ್ದರೂ ಅಂತರಂಗದಾಳದಲ್ಲಿ ನಡೆಯುವ ಯುದ್ಧದ ಪರಿಯೇ ಬೇರೆ. ಇಲ್ಲಿ ಹೋರಾಡುವುದೇ ಚೇತನ. ತಾನು ಧರಿಸಿದ ರೂಪ ಸಂಬಂಧವಾಗಿ ಬಂದು ಎರಗುವ ಕ್ಲೇಶಗಳು ಮಾಡುವ ಹಾನಿಯನ್ನು ನಿವಾರಿಸಲು ನಿರಂತರ ಹೋರಾಟ.ಇಂದ್ರಿಯಗಳ ಮೂಲಕ

ಮನಸ್ಸು ಬುದ್ಧಿಗಳಿಗೆ ಅಂಟುವ ಕ್ಲೇಶವನ್ನು ತೊಳೆಯಲು ಮಾಡುವ ನಿರಂತರ ಹೋರಾಟವೇ ಅಂತರಂಗದ ಯುದ್ಧ.

ನಾವು ನಮ್ಮ ಹೊರಗಿನ ಮತ್ತು ಒಳಗಿನ ಹೋರಾಟವನ್ನು 'ಸತ್ಯ ಮತ್ತು ಧರ್ಮ'ವೆಂಬ ಎರಡು ಆಯುಧಗಳ ಸಹಾಯದಿಂದ ಗೆಲ್ಲಲಾದರೆ, ಅದುವೇ ನಮ್ಮ ನಿಜವಾದ ಜಯವಾಗುತ್ತದೆ, 'ಸಾರ್ಥಕಥೆಯಿಂ ಸತ್ಯ' ಎಂದು ಗುಂಡಪ್ಪನವರು ಹೇಳುವ ಹಾಗೆ.

**ಮುಕ್ತಕ – 480**

**ಕ್ಲೇಶ ನೂರಾಗಿರೆಯುಮಾಶೆಗಳ ಪುನರುದಯ |**
**ಬೇಸರದ ನುಡಿಯೊಳಂ ಲೇಸುಗಳ ನೆನಪು ||**
**ಆಶೆ ಸಾಯ್ತೆಂದೊಡಂ ಚೆಲುವೆನಲು ಕಣ್ಣಲೆತ |**
**ಮಾಸವೀ ಜೀವಗುಣ – ಮಂಕುತಿಮ್ಮ ||**

ನೂರಾಗಿರೆಯುಮಾಶೆಗಳ= ನೂರಾಗಿ+ಇರೆಯುಂ+ಆಶೆಗಳ, ಮನರುದಯ=ಪುನರ್+ಉದಯ,
ಸಾಯ್ತೆದೊಡಂ =ಸಾಯಿತು+ಎಂದೊಡಂ, ಚೆಳುವೆನಲು=ಚೆಲುವು+ಎನಲು, ಕಣ್ಣಲೆತ=ಕಣ್ಣ+ಅಲೆತ,
ಮಾಸವೀ=ಮಾಸವು+ಈ,
ಕ್ಲೇಶ=ಕಷ್ಟ, ಪುನರುದಯ=ಮರುಕಳಿಸುವುದು, ಲೇಸು=ಒಳ್ಳೆಯದು, ಮಾಸವು = ಅಳಿಯುವುದಿಲ್ಲ.

ನೂರಾರು ಕಷ್ಟಗಳನ್ನು ಅನುಭವಿಸುತ್ತಿದ್ದರೂ, ಮತ್ತು ಆ ಕಷ್ಟಗಳು 'ಆಸೆ' ಯ ಕಾರಣದಿಂದಲೇ ಸಂದಿವೆ ಎಂದು ಅರಿವಿದ್ದರೂ, ಮತ್ತೆ ಮತ್ತೆ ಮನದೊಳಗೆ ಆಸೆಗಳ ಬುಗ್ಗೆಗಳು ಏಳುತ್ತವೆ. ಇಂದಿನ ಕಷ್ಟಗಳ ಅನುಭವದಿಂದ ನಾವು ಆಡುವ ಬೇಸರದ ನುಡಿಗಳ ಮಧ್ಯೆ ಹಿಂದೆ ಅನುಭವಿಸಿದ ಸುಖ ಸಂತೋಷಗಳ ಸುಂದರ ನೆನಪು ಬರುತ್ತವೆ. ಇಷ್ಟೆಲ್ಲಾ ಕಷ್ಟ ಸುಖಗಳನ್ನು ಅನುಭವಿಸಿ 'ಏನೋ ಸ್ವಲ್ಪ ಜ್ಞಾನ ಬಂದಿದೆ' 'ಮನದೊಳಗಿನ 'ಆಸೆ ಸತ್ತಿದೆ' ಎನ್ನುವಾಗಲೇ ಮತ್ತೆ ಸುಂದರವಾದದ್ದು ಎದುರಾದರೆ ಕಣ್ಣು ಸೆಳೆಯುತ್ತದೆ ಮತ್ತು ಮನಸ್ಸು ಅದರ ಕಡೆಗೆ ವಾಲುತ್ತದೆ ಎಂದು ಹೇಳುತ್ತಾ 'ಇವು ಜೀವದ ಸ್ವಭಾವ, ಇವು ಅಳಿಸಿಹೋಗಲು ಸಾಧ್ಯವಿಲ್ಲ" ಎಂದು ಜಗತ್ತು ಮತ್ತು ಜೀವದ ಪರಸ್ಪರ ಸಂಬಂಧವನ್ನು ಉಲ್ಲೇಖಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಯಾರಿಗೂ, 'ಕಷ್ಟವಿಲ್ಲದ ಜೀವನವಿಲ್ಲ. ನಮ್ಮ ಜೀವನದಲ್ಲಿಯ ಹಲವಾರು ವಿಷಯಗಳು ಮೂಲತಃ ಸಹಜವಾಗಿದ್ದಾರೂ ನಮಗೆ, ನಮ್ಮ ಅನಿಸಿಕೆಗೆ ಅದು ಕಷ್ಟ ಎಂದು ಅನಿಸಬಹುದು.ಹಾಗೆ ಕಷ್ಟಗಳ ಹಾದಿಯಲ್ಲಿ ಹಾದು ಬಂದಮೇಲೆ 'ಛೇ! ಇದು ಸರಿಯಲ್ಲ, ಆಸೆ ಪಟ್ಟದ್ದರಿಂದಲೇ ಇಷ್ಟೊಂದು ಕಷ್ಟಗಳ ಸರಮಾಲೆ' ಎಂದು ನಮಗೆ ಅನ್ನಿಸಿದರೂ, ಮನಸ್ಸಿನಲ್ಲಿ ಮತ್ತೆ ಮತ್ತೆ ಆಸೆಗಳ ಪುನರಾಗಮನ, ಇಂದಿನ





ಕಷ್ಟ ಹೆಚ್ಚೆನಿಸಿದರೆ ಹಿಂದೆ ಅನುಭವಿಸಿದ್ದು ಸುಖವೆಂದೆನಿಸುತ್ತದೆ. ಇಂದು ಆರಾಮೆನಿಸಿದರೆ ಹಿಂದಿನದು ಹಿಂಸೆ ಎಂದು ಎನಿಸುತ್ತದೆ.

ಇನ್ನು ನಾವು ಸುಧಾರಿಸಿದ್ದೇವೆ, ನಮ್ಮ ಆಸೆ 'ಸುಟ್ಟಿದೆ ಅಥವಾ ಸತ್ತಿದೆ' ಎಂದು ನಮ್ಮನ್ನು ನಾವೇ ನಂಬಿಸಿಕೊಳ್ಳಲು ಪ್ರಯತ್ನಪಡುತ್ತಿರುವಾಗಲೇ, ಕಣ್ಣುಗಳಿಗೆ ಕಾಣುವ ಚೆಲುವಾದ ವಸ್ತು ಮತ್ತೆ ಮನದಲ್ಲಿ ಆಸೆಯ ಬುಗ್ಗೆಯನ್ನು ಎಬ್ಬಿಸುತ್ತದೆ, ಎಂದರೆ ಸತ್ಯವಾಗಲೂ ನಮ್ಮಲ್ಲಿ ಆಸೆಯ ಅಥವಾ ಅಸೆ ಪಡುವ ಪ್ರವೃತ್ತಿಯ ಸಂಪೂರ್ಣ ನಾಶವಾಗಿಲ್ಲವೆಂದೇ ಅರ್ಥವಲ್ಲವೇ? ಆಸೆಪಡುವುದು ಮಾನ್ಯ ಗುಂಡಪ್ಪನವರು ಹೇಳುವಂತೆ 'ಜೀವಗುಣ' ಎಂದರೆ ಈ ಜಗತ್ತಿನಲ್ಲಿ ರೂಪತಳೆದ. ಪ್ರತಿಯೊಂದು ಜೀವಿಯ ಮೂಲಗುಣ. ಅದು ನಾಶವಾಗುವುದೇ ಇಲ್ಲ ಎಂದು ಅರ್ಥ.

ಆಸೆ ತಪ್ಪಲ್ಲ. ಆದರೆ ದುರಾಸೆ ತಪ್ಪು ಆಸೆಪಡುವುದರಿಂದ ಸುಖ ಸಿಗುತ್ತದೋ ಇಲ್ಲವೋ, ಆದರೆ ದುರಾಸೆಯಿಂದ ಸಂಕಷ್ಟಗಳು, ಕಟ್ಟಿಟ್ಟ ಬುತ್ತಿ. ಅಂತಹ ದುರಾಸೆ ನಮ್ಮ ಮನವನ್ನು ಹೊಗದಂತೆ ಜಾಗರೂಕತೆ ವಹಿಸಬೇಕು.

**ಮುಕ್ತಕ – 481** **ನಿಶಿ ಹಿಂದೆ, ನಿಶಿ ಮುಂದೆ,ನಡುವೆ ಮಿಸುಕಾಟ ಬಾಳ್ ।**
**ನಿಶಿ ಕೆಲವರಿಗೆ ಸೊನ್ನೆ, ಕೆಲವರಿಗೆ ಗುಟ್ಟು ॥**
**ಮಸಕಿನಲಿ ಭೂತವೊಂದಿಹುದು, ದಿಟವಾದೊಡದ ।**
**ರುಸಿರು ಸೋಕದೆ ನಿನ್ನ । - ಮಂಕುತಿಮ್ಮ ॥**

ದಿಟವಾದೊಡದರಸುಸಿರು=ದಿಟವು+ಆದೊಡೆ+ಅದರ+ಉಸಿರು,

ನಿಶಿ=ರಾತ್ರಿ ಅಥವಾ ಅಜ್ಞಾನ, ಮಸಕಿನಲಿ= ಕತ್ತಲಲ್ಲಿ, ಮಿಸುಕಾಟ ಪರದಾಟ, ಸೋಕದೆ= ಅಂಟದೇ,

ನಮ್ಮ ಈ ಜನ್ಮದ ಹಿಂದೆ ಏನಿತ್ತೋ ಮತ್ತು ಈ ಜನ್ಮದ ನಂತರ ಏನೋ ನಮಗೆ ಅರಿವಿಲ್ಲ. ಇವೆರಡರ ನಡುವೆ ನಮ್ಮ ಮಿಸುಕಾಟ, ಓಡಾಟ, ಪರದಾಟಗಳು, ಕೆಲವರಿಗೆ ಹಿಂದೆ ಏನೋ ಇತ್ತು ಮತ್ತು ಮುಂದೆಯೂ ಏನೋ ಇದೆ ಎಂದು ನಂಬಿಕೆ. ಮತ್ತೆ ಕೆಲವರಿಗೆ ಏನೂ ಇಲ್ಲ ಮತ್ತೆ ಕೆಲವರಿಗೆ ಅದೊಂದು ರಹಸ್ಯ ಎಂದು ನಂಬಿಕೆ. ಇಲ್ಲದ್ದು ನಮ್ಮ ಮೇಲೆ ಪ್ರಭಾವ ಬೀರಲು ಸಾಧ್ಯವಿಲ್ಲ. ಆದರೆ ಇದೆ ಎಂಬ ನಂಬಿಕೆ ಬಂದರೆ ಹಾಗೆ ಇರುವುದು ತನ್ನ ಪ್ರಭಾವವನ್ನು ನಮ್ಮ ಮೇಲೆ ಬೀರದೆ ಇರುತ್ತದೆಯೇ? ಎಂದು, ಜನ್ಮ ಜನ್ಮಾಂತರದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಹಿಂದಿನ ಜನ್ಮದಲ್ಲಿ ನಾವು ಏನಾಗಿದ್ದೆವು ಎಂದು ಅರಿಯಲು ಅಸಾಧ್ಯ, ಹಾಗೆಯೇ ಮುಂದೆ ಏನಾಗುತ್ತೇವೆ

ಎಂದು ಊಹಿಸಲೂ ಅಸಾಧ್ಯ. ಹಾಗೆ ಯಾರಾದರೂ ತಮ್ಮನ್ನು ತಾವು ಶಾಸ್ತ್ರವಿದರು ಎಂದು ಹೇಳಿಕೊಂಡು 'ಜನ್ಮ ಜನ್ಮಾಂತರದ ಗುಟ್ಟನ್ನು ಹೇಳುತ್ತೇವೆ' ಎಂದರೆ ಅವರನ್ನು ಖಂಡಿತ ನಂಬಬಾರದು. ಅವರೆಲ್ಲ ಡೋಂಗಿಗಳು.

ಪ್ರತಿನಿತ್ಯ ಬದಲಾಗುತ್ತಲೇ ಇರುವ ಈ ಜಗತ್ತು ನಿತ್ಯವಲ್ಲ, ಹಾಗಾಗಿ ಸತ್ಯವಲ್ಲ, ಸತ್ಯವಲ್ಲದ್ದು ನಮಗೆ ಹಿತವೂ ಅಲ್ಲ. ಇಲ್ಲಿ ನಿರಂತರ 'ಉಳ್ಳ ದ್ದೇ ಸತ್ಯ. ಹಾಗೆ ನಿರಂತರವಾಗಿ ಅಭಾದಿತವಾಗಿ ಇರುವುದೇ ಆ ಪರಮ ಚೇತನ. ಹಾಗೆ ನಿರಂತರವಾಗಿ 'ಉಳ್ಳದ್ದೇ ನಮಗೆ ಒಳ್ಳೆಯದು. ಹಾಗಾಗಿ 'ಒಳ್ಳೆಯದು' ಎಂದರೆ ಆ ಪರಮ ಚೇತನ ಬಿಟ್ಟರೆ ಬೇರಾವುದೂ ಅಲ್ಲ. ನಿಶಿಯ ಹಿಂದೆಯೂ, ನಿಶಿಯ ಮುಂದೆಯೂ ಇರುವುದು ಆ ಪರಮ ಚೇತನವೊಂದೇ.ಆದರೆ ಆ ಪರಮ ಚೇತನದ ಸ್ವರೂಪವೂ ನಮಗೆ ಸ್ಪಷ್ಟವಾಗಿ ತೋರುವುದಿಲ್ಲ. ಇದೆಯೋ ಇಲ್ಲವೋ, ಚಿಕ್ಕದೋ ದೊಡ್ಡದೋ, ಇದೋ ಅದೋ ಎಂಬ ದ್ವಂದ್ವಗಳ ಮತ್ತು ಅನುಮಾನಗಳ ನಡುವೆ ನಮ್ಮ ಬಾಳು.

"ಮಸಕಿನಲಿ ಭೂತವೊಂದಿಹುದಿರುವುದು ದಿಟವಾದರೆ" ಎಂದು ಗುಂಡಪ್ಪನವರು ಹೇಳುವ ಹಾಗೆ ನಮ್ಮ ಹಿಂದೆ ಮತ್ತು ಮುಂದೆಯೂ ಆ ಪರಮಚೇತನದ ಕೈವಾಡವಿದೆ ಎಂದು ನಾವು ನಂಬಿದರೆ, ಅದರ ಪ್ರಭಾವ ನಮ್ಮ ಮೇಲೆ ಆಗುವುದು ಖಂಡಿತ. ನಂಬಿ, ಅದರ ಪ್ರಭಾವಕ್ಕೊಳಗಾಗಿದ್ದೇವೆ' ಎಂದೋ, ನಂಬದೆ 'ಯಾವ ಪ್ರಭಾವವೂ ನನ್ನ ಮೇಲಿಲ್ಲ' ಎಂದೋ ಇರುವುದು ಅವರವರ ಭಾವಕ್ಕೆ, ನಂಬಿಕೆಗೆ ಸೇರಿದ್ದು, ಹಾಗೆ ನಂಬಿ ಇದ್ದರೆ ಎರಡೂ ಸ್ಥಿತಿಯಲ್ಲಿ ಶಾಂತವಾಗಿ ಅಥವಾ ನೆಮ್ಮದಿಯಿಂದ ಇರಬಹುದು. ಇಲ್ಲವಾದರೆ ಎಡಬಿಡಂಗಿಯಾಗಿ 'ದ್ವಂದ್ವಗಳಲ್ಲಿ ನಾವು ತೊಳಲಾಡಬೇಕಾಗುತ್ತದೆ. ನಂಬುವುದೋ ಇಲ್ಲವೋ ಎಂಬ ಆಯ್ಕೆ ನಮ್ಮದೇ ಅಲ್ಲವೇ?

**ಮುಕ್ತಕ- 482** **ಗುಹೆಯಡಕೆ, ಗುಹೆ ಬಲಕೆ, ನಡುವೆ ಮಲೆ; ಕಣಿವೆಯಲಿ |**
**ವಿಹರಿಪೆಯ ಹುಲಿ ಬಾರದೆಂದು ನೀಂ ನಚ್ಚಿ ||**
**ರಹಸಿಯದ ಭೂತ ಪಿಡಿಯದ ತೆರದಿ ಬದುಕ ನಿ- |**
**ರ್ವಹಿಸುವುದೇ ಜಾಣ್ಮೆಯಲ - ಮಂಕುತಿಮ್ಮ ||**

ಮಲೆ=ಬೆಟ್ಟ, ವಿಹರಿಪೆಯ=ನಡೆದಾಡುವೆಯ, ನಚ್ಚಿ= ನಂಬಿ, ನೆಚ್ಚಿ, ತೆರದಿ=ರೀತಿಯಲ್ಲಿ ಜಾಣ್ಮೆ= ಬುದ್ಧಿವಂತಿಕೆ.

ಎಡಕ್ಕೆ ಒಂದು ಗುಹೆ ಮತ್ತು ಬಲಕ್ಕೆ ಒಂದು ಗುಹೆ, ಇವೆರಡರ ನಡುವೆ ಒಂದು ಬೆಟ್ಟ. ಇವೆರಡರ ನಡುವೆ ಕಣಿವೆಯೂ ಇದ್ದು ಅಲ್ಲೆಲ್ಲ ಓಡಾಡುವಾಗ 'ಹುಲಿಯೋ, ಸಿಂಹವೋ ಬರುವ ಸಾಧ್ಯತೆಗಳಿದ್ದರೂ 'ಛೇ! ಅವೆಲ್ಲ ಇಲ್ಲಿ ಬರುವುದಿಲ್ಲ ಎಂಬ ನಂಬಿಕೆಯಿಂದ ನೀ ಇದ್ದೀಯೇನು? ನಿನಗೆ ಗೊತ್ತಿಲ್ಲದ ರಹಸ್ಯದ ಭೂತ ನಿನ್ನ ಮೇಲೆ ಬಂದು ಎರಗಬಹುದು. ಹಾಗಾಗಿ ಅದು ಬಂದು ನಿನ್ನನ್ನು ಹಿಡಿಯದಂತೆ ಜಾಣೆಯಿಂದ





ಎಂದು ಊಹಿಸಲೂ ಅಸಾಧ್ಯ. ಹಾಗೆ ಯಾರಾದರೂ ತಮ್ಮನ್ನು ತಾವು ಶಾಸ್ತ್ರವಿದರು ಎಂದು ಹೇಳಿಕೊಂಡು 'ಜನ್ಮ ಜನ್ಮಾಂತರದ ಗುಟ್ಟನ್ನು ಹೇಳುತ್ತೇವೆ' ಎಂದರೆ ಅವರನ್ನು ಖಂಡಿತ ನಂಬಬಾರದು. ಅವರೆಲ್ಲ ಡೋಂಗಿಗಳು.

ಪ್ರತಿನಿತ್ಯ ಬದಲಾಗುತ್ತಲೇ ಇರುವ ಈ ಜಗತ್ತು ನಿತ್ಯವಲ್ಲ, ಹಾಗಾಗಿ ಸತ್ಯವಲ್ಲ, ಸತ್ಯವಲ್ಲದ್ದು ನಮಗೆ ಹಿತವೂ ಅಲ್ಲ. ಇಲ್ಲಿ ನಿರಂತರ 'ಉಳ್ಳ ದ್ದೇ ಸತ್ಯ. ಹಾಗೆ ನಿರಂತರವಾಗಿ ಅಭಾದಿತವಾಗಿ ಇರುವುದೇ ಆ ಪರಮ ಚೇತನ. ಹಾಗೆ ನಿರಂತರವಾಗಿ 'ಉಳ್ಳದ್ದೇ ನಮಗೆ ಒಳ್ಳೆಯದು. ಹಾಗಾಗಿ 'ಒಳ್ಳೆಯದು' ಎಂದರೆ ಆ ಪರಮ ಚೇತನ ಬಿಟ್ಟರೆ ಬೇರಾವುದೂ ಅಲ್ಲ. ನಿಶಿಯ ಹಿಂದೆಯೂ, ನಿಶಿಯ ಮುಂದೆಯೂ ಇರುವುದು ಆ ಪರಮ ಚೇತನವೊಂದೇ.ಆದರೆ ಆ ಪರಮ ಚೇತನದ ಸ್ವರೂಪವೂ ನಮಗೆ ಸ್ಪಷ್ಟವಾಗಿ ತೋರುವುದಿಲ್ಲ. ಇದೆಯೋ ಇಲ್ಲವೋ, ಚಿಕ್ಕದೋ ದೊಡ್ಡದೋ, ಇದೋ ಅದೋ ಎಂಬ ದ್ವಂದ್ವಗಳ ಮತ್ತು ಅನುಮಾನಗಳ ನಡುವೆ ನಮ್ಮ ಬಾಳು.

"ಮಸಕಿನಲಿ ಭೂತವೊಂದಿಹುದಿರುವುದು ದಿಟವಾದರೆ" ಎಂದು ಗುಂಡಪ್ಪನವರು ಹೇಳುವ ಹಾಗೆ ನಮ್ಮ ಹಿಂದೆ ಮತ್ತು ಮುಂದೆಯೂ ಆ ಪರಮಚೇತನದ ಕೈವಾಡವಿದೆ ಎಂದು ನಾವು ನಂಬಿದರೆ, ಅದರ ಪ್ರಭಾವ ನಮ್ಮ ಮೇಲೆ ಆಗುವುದು ಖಂಡಿತ. ನಂಬಿ, ಅದರ ಪ್ರಭಾವಕ್ಕೊಳಗಾಗಿದ್ದೇವೆ' ಎಂದೋ, ನಂಬದೆ 'ಯಾವ ಪ್ರಭಾವವೂ ನನ್ನ ಮೇಲಿಲ್ಲ' ಎಂದೋ ಇರುವುದು ಅವರವರ ಭಾವಕ್ಕೆ, ನಂಬಿಕೆಗೆ ಸೇರಿದ್ದು, ಹಾಗೆ ನಂಬಿ ಇದ್ದರೆ ಎರಡೂ ಸ್ಥಿತಿಯಲ್ಲಿ

ಶಾಂತವಾಗಿ ಅಥವಾ ನೆಮ್ಮದಿಯಿಂದ ಇರಬಹುದು. ಇಲ್ಲವಾದರೆ ಎಡಬಿಡಂಗಿಯಾಗಿ 'ದ್ವಂದ್ವಗಳಲ್ಲಿ ನಾವು ತೊಳಲಾಡಬೇಕಾಗುತ್ತದೆ. ನಂಬುವುದೋ ಇಲ್ಲವೋ ಎಂಬ ಆಯ್ಕೆ ನಮ್ಮದೇ ಅಲ್ಲವೇ?

**ಮುಕ್ತಕ- 482**

**ಗುಹೆಯಡಕೆ, ಗುಹೆ ಬಲಕೆ, ನಡುವೆ ಮಲೆ; ಕಣಿವೆಯಲಿ।**
**ವಿಹರಿಪೆಯ ಹುಲಿ ಬಾರದೆಂದು ನೀಂ ನಚ್ಚಿ।**
**ರಹಸಿಯದ ಭೂತ ಪಿಡಿಯದ ತೆರದಿ ಬದುಕ ನಿ-।**
**ರ್ವಹಿಸುವುದೇ ಜಾಣ್ಮೆಯಲ - ಮಂಕುತಿಮ್ಮ॥**

ಮಲೆ=ಬೆಟ್ಟ, ವಿಹರಿಪೆಯ=ನದೆದಾದುವೆಯ, ನಚ್ಚಿ= ನಂಬಿ, ನೆಚ್ಚಿ, ತೆರದಿ=ರೀತಿಯಲ್ಲಿ ಜಾಣ್ಮೆ=ಬುದ್ಧಿವಂತಿಕೆ.

ಎಡಕ್ಕೆ ಒಂದು ಗುಹೆ ಮತ್ತು ಬಲಕ್ಕೆ ಒಂದು ಗುಹೆ, ಇವೆರಡರ ನಡುವೆ ಒಂದು ಬೆಟ್ಟ. ಇವೆರಡರ ನಡುವೆ ಕಣಿವೆಯೂ ಇದ್ದು ಅಲ್ಲೆಲ್ಲ ಓಡಾಡುವಾಗ 'ಹುಲಿಯೋ, ಸಿಂಹವೋ ಬರುವ ಸಾಧ್ಯತೆಗಳಿದ್ದರೂ 'ಛೇ! ಅವೆಲ್ಲ ಇಲ್ಲಿ ಬರುವುದಿಲ್ಲ ಎಂಬ ನಂಬಿಕೆಯಿಂದ ನೀ ಇದ್ದೀಯೇನು? ನಿನಗೆ ಗೊತ್ತಿಲ್ಲದ ರಹಸ್ಯದ ಭೂತ ನಿನ್ನ ಮೇಲೆ ಬಂದು ಎರಗಬಹುದು. ಹಾಗಾಗಿ ಅದು ಬಂದು ನಿನ್ನನ್ನು ಹಿಡಿಯದಂತೆ ಜಾಣೆಯಿಂದ

ಬದುಕನ್ನು ನಡೆಸಬೇಕು' ಎಂದು ವಾಸ್ತವ ಮತ್ತು ನಮ್ಮ ನಂಬಿಕೆಗಳ ಮೇಲೆ ನಡೆಯುವ ನಮ್ಮ ಜೀವನಕ್ಕೆ ಒಂದು ಆದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಇಲ್ಲಿ ಗುಹೆಯಂದರೆ 'ಗುಹ್ಯ' ಎಂದು ಅರ್ಥ. ಗುಹ್ಯವೆಂದರೆ, ನಿಗೂಢ ಅಥವಾ ನಮಗೆ ಗೊತ್ತಿಲ್ಲದ ಎಂದು ಅರ್ಥ, ಅರ್ಥಾತ್ ನಮ್ಮ ಎಡ ಬಲ ಸುತ್ತು ಮುತ್ತಲಲ್ಲಿ ನಮಗೆ ಅರ್ಥವಾಗದ ವಿಷಯಗಳು ಹಲವಾರಿವೆ. ಅಷ್ಟೇ ಅಲ್ಲ ಉನ್ನತವಾದ (ಮಲೆ) ಅಥವಾ ಆಳವಾದ (ಕಣಿವೆ) ವಿಚಾರಗಳು ಯತೇಚ್ಚವಾಗಿವೆ. ನಮ್ಮ ಬದುಕಿನ ಹಾದಿಯಲ್ಲಿ ಯಾವುದಾದರೂ ವಿಚಾರ ನಮ್ಮ ಅರಿವಿಗೆ ಬಾರದಂತೆಯೇ ನಮ್ಮ ಮೇಲೆ ಪ್ರಭಾವ ಬೀರಬಹುದು, ನಮ್ಮನ್ನು ಔನ್ನತ್ಯಕ್ಕೆ ಕೊಂಡು ಹೋಗಬಹುದು, ಪ್ರಪಾತಕ್ಕೆ ತಳ್ಳಿ ಬಿಡಬಹುದು ಅಥವಾ ಕಾಡಿನ ಹುಲಿಯಂತೆಯೋ, ಸಿಂಹದಂತೆಯೋ, ನಮ್ಮನ್ನು ಹರಿದು ತಿಂದುಬಿಡಬಹುದು. ಹಾಗಾಗಿ ನಾವು ಅರಿತುಕೊಂಡು ಬಹಳ ಜಾಗರೂಕರಾಗಿ ಬುದ್ಧಿವಂತಿಕೆಯಿಂದ ಜೀವನ ಸಾಗಿಸಬೇಕು.

ಇಡೀ ಜಗತ್ತಿನ ವಿಷಯಗಳಲ್ಲಿ ನಮಗೆ ಗೊತ್ತಿರುವುದು ಕೇವಲ ಸ್ವಲ್ಪ. ಅಕ್ಕಪಕ್ಕದವರೂ ನಮಗೆ ಗೊತ್ತಿಲ್ಲ. ನಮ್ಮ ಮನೆಯವರನ್ನೇ ಅರಿತುಕೊಳ್ಳಲು ಸಾಧ್ಯವಿಲ್ಲ. ಅಷ್ಟೇಕೆ ನಮ್ಮನ್ನೇ ನಾವು ಅರಿತುಕೊಳ್ಳಲು ಸಾಧ್ಯವಾಗಿಲ್ಲ. ಹಾಗೆಂದು ನಾವು ಎಲ್ಲರನ್ನೂ ಸಂಶಯದ ದೃಷ್ಟಿಯಿಂದ ನೋಡಲಾಗುವುದಿಲ್ಲ. ನಾವು ಎಲ್ಲವನ್ನೂ ಎಲ್ಲರನ್ನೂ ನಂಬಿ ಕುಳಿತಿದ್ದೇವೆ. ನಮ್ಮ ನಂಬಿಕೆಗೆ 'ಜ್ಞಾನದ ಅಥವಾ ಅರಿವಿನ ಬಲವಿಲ್ಲ. ಹಾಗೆಂದು ಯಾವುದನ್ನೂ ನಂಬದೆ ಸಂಶಯದಿಂದ ಇರಲೂ ಸಾಧ್ಯವಿಲ್ಲ. ಹಾಗೆ ನಂಬುವಾಗ ಆದಷ್ಟು ಮಟ್ಟಿಗೆ ಅರಿತು ನಂಬಿದರೆ ಹಿತ. ಆದರ ಎಲ್ಲ ವಿಷಯಗಳ ಬಗ್ಗೆಯೂ ಎಲ್ಲ ಕಾಲದಲ್ಲೂ ಅರಿತುಕೊಳ್ಳಲು ಸಾಧ್ಯವಿಲ್ಲ. ಹಾಗೆ ನಮಗೆ ಗೊತ್ತಿಲ್ಲದ ವಿಷಯದ ಬಗ್ಗೆ ಸಂಶಯ ಪಡುವುದೂ ಸರಿಯಲ್ಲ. ಇದು ಒಂದು 'ಕತ್ತಿಯ ಮೇಲಿನ ಸಾಮಿನ' ರೀತಿ. ಬಹಳ ಜಾಗರೂಕರಾಗಿರಬೇಕು.

ನಾವು ಎಷ್ಟೇ ಜಾಗರೂಕರಾಗಿದ್ದರೂ ಅಥವಾ ಅಜಾಗರೂಕರಾಗಿದ್ದರೂ 'ವಿಧಿಪುರುಷ'ನ ಕೈವಾಡಕ್ಕೆ ಸಿಲುಕಿದವರು ನಾವು. ಹಾಗಾಗಿ ನಾವು ಅರಿತೋ ಅರಿಯದೆಯೋ, ಬೇಕೋ ಬೇಡವೋ, ನಂಬಿಯೋ ನಂಬದೆಯೋ ಬಂದದ್ದನ್ನು ಅನುಭವಿಸಿಯೇ ತೀರಬೇಕು. ಅನ್ಯ ದಾರಿಯಿಲ್ಲ. ನಂಬದೆ ಸಂಶಯಪೂರಿತವಾಗಿ ಅನುಭವಿಸಿದರೆ ಆಗುವ ನೋವು ಅಧಿಕ.ನಂಬಿ ಅರಿತು ಅನುಭವಿಸಿದರೆ ನೋವಿನ ಪ್ರಮಾಣ ಕಡಿಮೆಯಾ ಗುತ್ತದೆ.ನಂಬುವುದೋ ಅಥವಾ ನಂಬದೆ ಇರುವುದೋ ಅವರವರ ಇಚ್ಚೆಗೆ ಬಿಟ್ಟದ್ದಲ್ಲವೇ?

**ಮುಕ್ತಕ – 483** **ಗಾಳಿಯನು ಗುದ್ದಿದರೆ ಮೈ ನೊಯ್ಯುದೊಂದೆ ಫಲ।**
**ಮೂಲಸತ್ವವ ಮರೆತ ಸಾಹಸಗಳಂತು॥**
**ಮೇಳವಿಸೆ ಪೌರುಷಕೆ ದೈವಕೃಪೆಯಂದು ಫಲ।**
**ತಾಳಿ ಬಾಳಾವರೆಗೆ - ಮಂಕುತಿಮ್ಮ॥**





ನೊಯ್ಯುದೊಂದೆ =ನೊಯ್ಯುದು +ಒಂದೆ, ಸಾಹಸಗಳಂತು=ಸಾಹಸಗಳು+ಅಂತು,
ದೈವಕೃಪೆಯಂದು=ದೈವಕೃಪೆಯು+ಅಂದು, ಬಾಳಾವರೆಗೆ=ಬಾಳು+ಆವರೆಗೆ.
ಮೇಳವಿಸೆ=ಸೇರಿದರೆ, ತಾಳಿ=ತಾಳ್ಮೆಯಿಂದ ಇದ್ದು.

ಹಾಗೆ ನಮಗೆ ಗೊತ್ತಿಲ್ಲದ ಅಥವಾ ಅರಿವಿಲ್ಲದ ಸಂಗತಿಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಂಡು ಒಂದು ಭ್ರಮೆಯಿಂದ ಏನನ್ನೋ ಸಾಧಿಸಬೇಕೆಂದು ಹೊರಟಾಗ, ಕೇವಲ ಗಾಳಿಯಲ್ಲಿ ಗುದ್ದಾಡಿ ಮೈ ನೋಯಿಸಿಕೊಂಡಂತೆ, ವ್ಯರ್ಥ ಪ್ರಯತ್ನವಾಗುತ್ತದೆ. ಅಂತಹ ಕೆಲಸಗಳನ್ನು ಮಾಡುವಾಗ ನಮ್ಮನ್ನು ಕ್ರಿಯಾಶೀಲತೆಗೆ ಪ್ರೇರೇಪಿಸುವ ಆ ಪರಮ ಶಕ್ತಿಯನ್ನು ಅರಿಯದೆ ಮಾಡಿದ ಕೆಲಸಗಳವು, ಎಂದು ನಮ್ಮ ಪ್ರಯತ್ನಕ್ಕೆ, ಆ ಪರಮಾತ್ಮನ ಕೃಪೆಯ ಜೊತೆಯಾಗುತ್ತದೆಯೋ, ಅಂದು ನಾವು ಸಫಲರಾಗುತ್ತೇವೆ. ಅಲ್ಲಿಯ ತನಕ ತಾಳ್ಮೆಯಿಂದ ಬಾಳಬೇಕು ಎಂದು ಆದೇಶವನ್ನು ಮಾಡಿದ್ದಾರೆ ನಮಗೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಒಂದು 'ಸೌದೆ' ಮಂಡಿ, ಅಲ್ಲಿ ಒಂದು ತಕ್ಕಡಿ, ಸೌದೆಯ ಬೆಲೆ, ನೂರು ಕಿಲೋಗೆ 100 ರೂಪಾಯಿ. ತಕ್ಕಡಿಯ ಒಂದು ಕಡೆ 100 ಕಿಲೋ ತೂಕದ 'ಬಟ್ಟು' ಗಳು.ಮತ್ತೊಂದು ಕಡೆ ಸೌದೆಯನ್ನು ಪೇರಿಸುತ್ತಾ ಹೋಗುತ್ತಾರೆ. 95 ಪ್ರತಿಶತ ಅಲ್ಲಿ ಕಟ್ಟಿಗೆ ತುಂಬಿದರೂ ತಕ್ಕಡಿಯ ಮತ್ತೊಂದು ಬಾಗ ಅಲುಗಾಡುವುದೇ ಇಲ್ಲ. ಕಡೆಯ ನಾಲ್ಕು ಅಥವಾ

ಐದು ಸೌದೆಯ ತುಂಡುಗಳನ್ನು ಸೇರಿಸಿದಾಗ ತಕ್ಕಡಿ ಸಮನಾಗುತ್ತದೆ. ಇಲ್ಲಿ ಎರಡು ಪ್ರಶ್ನೆಗಳು ಮೊದಲು ಇಟ್ಟ 95 ಪ್ರತಿಶತ ಕಟ್ಟಿಗೆಗೆ ತೂಕವೇ ಇಲ್ಲವೇ? ಅಥವಾ ನಂತರ ಇಟ್ಟ 5 ಪ್ರತಿಶತ ಕಟ್ಟಿಗೆಗೆ ತಕ್ಕಡಿಯನ್ನು ಸಮನಾಗಿಸುವ ಶಕ್ತಿಯಿದೆಯೇ?

ಮೊದಲು ಇಟ್ಟ 95 ಪ್ರತಿಶತ ಕಟ್ಟಿಗೆ, ನಮ್ಮ ಪ್ರಯತ್ನದಂತೆ ಮತ್ತು ನಂತರದ 5 ಪ್ರತಿಶತ ಕಟ್ಟಿಗೆ, ಆ ದೈವ ಕೃಪೆಯಂತೆ. ಇವೆರಡೂ ಇದ್ದರೆ ಮಾತ್ರ ನಮ್ಮ ಜೀವನದ ತಕ್ಕಡಿಯೂ, 'ಆ ಸೌದೆಮಂಡಿಯ ತಕ್ಕಡಿಯಂತೆ' ಸಮತೋಲನಕ್ಕೆ ಬರುತ್ತದೆ. ನಮ್ಮ ಪ್ರಯತ್ನದ ಬಲಕ್ಕೆ ದೈವಕೃಪೆಯೂ ಸೇರಿದರೆ ಮಾತ್ರ ಮಾನ್ಯ ಗುಂಡಪ್ಪನವರು 'ಮೇಳವಿಸೆ ಪೌರುಷ ದೈವಕೃಪೆಯಂದು ಫಲ' ಎಂದು ಹೇಳುವಂತೆ ನಮಗೆ ನಮ್ಮ ಕಾರ್ಯಗಳಿಗೆ ತೃಪ್ತಿಕರವಾದ ಫಲ ಸಿಗಲು ಸಾಧ್ಯ.

ಇದನ್ನು ಅರಿತು ಕೆಲಸ ಕಾರ್ಯಗಳನ್ನು ಮಾಡಿದರೆ, ನಮ್ಮ ಪ್ರಯತ್ನದ ಗುಣಮಟ್ಟಕ್ಕೆ ತಕ್ಕಂತೆ ಅಲ್ಪ ಸ್ವಲ್ಪವೋ ಅಥವಾ ಸಂಪೂರ್ಣ ತೃಪ್ತಿಕರ ಫಲವೋ ನಮಗೆ ಲಭ್ಯವಾಗುತ್ತದೆ.ಇಲ್ಲದಿದ್ದರೆ ನಮ್ಮ ಎಲ್ಲ ಕೆಲಸಗಳೂ "ಗಾಳಿ ಗುದ್ದಿ ಮೈ ನೋಯಿಸಿಕೊಂಡತೆ'ಯೇ ಆಗುತ್ತದೆ. ಹಾಗಾಗಿ ಪರಮ ಪುರುಷನ ತತ್ವವನ್ನು ಮತ್ತು ಅವನ ಕೃಪೆಯ ಸತ್ವವನ್ನು ಅರಿತು, ನಂಬಿ ನಡೆದರೆ ಸುಖವಲ್ಲವೇ?





**ಮುಕ್ತಕ – 484**

**ಕತ್ತಲೆಯೊಳೇನನೋ ಕಂಡು ಬೆದರಿದ ನಾಯಿ।**
**ಎತ್ತಲೋ ಸಖನೋರ್ವನಿಹನೆಂದು ನಂಬಿ॥**
**ಕತ್ತೆತ್ತಿ ಮೋಳಿಡುತ ಬೊಗಳಿ ಹಾರಾಡುವುದು।**
**ಭಕ್ತಿಯಂತೆಯೆ ನಮದು – ಮಂಕುತಿಮ್ಮ॥**

ಕತ್ತಲೆಯೋಳೆನನೋ=ಕತ್ತಲೊಳು+ಏನನೋ, ಸಖನೊರ್ವನಿಹನೆಂದು=ಸಖನು+ಒರ್ವನು+ಇಹನು+ಎಂದು,

ಭಕ್ತಿಂ ಮಂತೆಯೆ=ಭಕ್ತಿಯು+ಅಂತೆಯೆ.

ಸಖ=ಸ್ನೇಹಿತ, ಸನ್ನಿಹಿತ, ಮೋಳಿಡುತ=ಊಳಿಡುವುದು

ಕತ್ತಲಲ್ಲಿ ಭ್ರಮಿಸಿ, ಏನನ್ನೋ ಕಂಡಂತಾಗಿ ಹೆದರಿದ ನಾಯಿ, ತನ್ನನ್ನು ಕಾಯುವ ಅಥವಾ ಕಾಪಾಡುವ ಯಾರೋ ಒಬ್ಬ ಸ್ನೇಹಿತನಿರುವನೆಂದು, ಎಲ್ಲಿರುವನೆಂದು ಅರಿಯದಿದ್ದರೂ, ಕತ್ತೆತ್ತಿ ಮೋಳಿಡುತ, ಬೊಗುಳಿ, ಹಾರಾಡಿ ಪರದಾಡುವುದು. ನಮ್ಮ ಭಕ್ತಿಯೂ ಸಹ ಇದೇ ರೀತಿಯದೆಂದು ಹೇಳುತ್ತಾರೆ ನಮ್ಮ ಗುಂಡಪ್ಪನವರು.

ಸತ್ಯವಾದ ಮಾತು. ಕೇವಲ ನಮ್ಮ ಮನಸ್ಸಿನಲ್ಲಿ ಉಂಟಾಗುವ ಭಯದಿಂದ ನಮಗೆ ಭಕ್ತಿಯುಂಟಾಗುತ್ತದೆ. ಅಜ್ಞಾನವೆಂಬ ಕತ್ತಲೆಯಲ್ಲಿ ನಾವೂ ಸಹ ಗುಂಡಪ್ಪನವರು ಮೇಲೆ ಉಲ್ಲೇಖ ಮಾಡಿರುವ ಆ ನಾಯಿಯಂತೆಯೇ ಹೆದರಿದ್ದೇವೆ. ಇದ್ದದನ್ನು ಕಳೆದುಕೊಳ್ಳುವ ಭಯ ಅಥವಾ ಬಯಸಿದ್ದು ಸಿಗಲಾರದೇನೋ ಎನ್ನುವ ಭಯದಿಂದ ಹೆದರಿದ್ದೇವೆ. ಆ ಹೆದರಿಕೆಯ ಕಾರಣ ನಮ್ಮನ್ನು ಯಾರಾದರೂ ಕಾಪಾಡಬೇಕು ಎಂದು ಮನಸ್ಸು ಬಯಸುತ್ತದೆ ಮತ್ತು ಹಾತೊರೆಯುತ್ತದೆ. ಹಾಗೆ ಮನಸ್ಸು ತನಗೆ ಹಿತವೆನಿಸಿದ ಅಥವಾ ತನಗೆ ಸಾಂತ್ವನ ನೀಡುವ ಯಾವುದಾದರೂ ಒಂದನ್ನು ಭದ್ರವಾಗಿ ಹಿಡಿದುಕೊಂಡು ಸಮಾದಾನ ಪಟ್ಟುಕೊಳ್ಳುವುದನ್ನೇ, ನಾವು 'ಭಕ್ತಿ' ಎಂದು ಕರೆದುಕೊಳ್ಳುತ್ತೇವೆ.

ಆದರೆ ಈ ಹೆದರಿಕೆಗೆ ಕಾರಣವೇನು? ವಸ್ತು, ವಿಷಯ ಮತ್ತು ವ್ಯಕ್ತಿಗಳಿಗೆ ನಾವು ಅಂಟಿಕೊಂಡಿರುವುದೇ ಕಾರಣ. ಆ ಅಂಟಿನ ಕಾರಣವಾಗಿಯೇ ನಮಗೆ, ಆ ವಸ್ತು, ವಿಷಯ ಮತ್ತು ವ್ಯಕ್ತಿಗಳನ್ನು ಕಳೆದುಕೊಳ್ಳುವ ಭಯವುಂಟಾಗುತ್ತದೆ. ಆ ಅಂಟು ಇಲ್ಲದಿದ್ದರೆ ಭಯವಿಲ್ಲ. ಆ ಅಂಟನ್ನು ತೊಳೆದುಕೊಳ್ಳಬೇಕಾದರೆ, ತೀವ್ರ ಸಾಧನೆ ಬೇಕು. ಆಗ ಅಂಟು ಮತ್ತು ತತ್ಕಾರಣವಾಗಿ ಉಂಟಾದ ಭಯ ತೊಲಗಿ “ಶುದ್ಧ ಭಕ್ತಿ” ಉಂಟಾಗುತ್ತದೆ.

ಸಂಯೋಗದಿಂದ ಈ ಭೂಮಿಯಲ್ಲಿ ಮಾನವ ಜನ್ಮವೆತ್ತಿರುವ ನಾವು, ನಮ್ಮ ನಮ್ಮ ಪೂರ್ವ ಕರ್ಮಗಳಿಗನುಸಾರವಾಗಿ ವಸ್ತು ವಿಷಯ ಅಥವಾ ವ್ಯಕ್ತಿಗಳನ್ನು ಪಡೆದುಕೊಳ್ಳುವುದೋ ಅಥವಾ ಕಳೆದು ಕೊಳ್ಳುವುದೋ ನಡೆಯುತ್ತದೆ. ಹಾಗೆ ಪಡೆದುಕೊಂಡದ್ದನ್ನು ಅಥವಾ ಕಳೆದುಕೊಂಡದ್ದನ್ನು ಆ ಪರಮಾತ್ಮನ ಕೃಪೆಯಿಂದ ನಡೆದದ್ದು ಎಂದು ಭಾವಿಸಿ ಎಲ್ಲವನ್ನೂ ಒಂದು ನಿರ್ಲಿಪ್ತ ಭಾವದಿಂದ ಅವನಿಗೆ ಸಮರ್ಪಿಸಿಬಿಟ್ಟರೆ, ಆಗ ನಮಗೆ “ ಅಂಟು” ಇರುವುದಿಲ್ಲ. ಅಂಟು ಇಲ್ಲದಿದ್ದರೆ “ಭಯವಿರುವುದಿಲ್ಲ. ಅಂತಹ

ಭಯವಿಲ್ಲದ ಭಕ್ತಿಯನ್ನು ನಾವು ರೂಢಿಸಿಕೊಂಡರೆ ನಮಗೆ ಸುಖ. ಇಲ್ಲದಿದ್ದರೆ ಗುಂಡಪ್ಪನವರು ಹೇಳಿದ ನಾಯಿಯಂತೆ ಜೀವಮಾನವಿಡೀ ಹೆದರುತ್ತಾ ಊಳಿಡುತ್ತಾ ಬದುಕಬೇಕು.ನಮ್ಮ ಆಯ್ಕೆ ಯಾವುದೆಂದು ನಾವೇ ನಿರ್ಧರಿಸಿಕೊಳ್ಳಬೇಕು.

**ಮುಕ್ತಕ – 485**

**ನಂಬದಿರ್ದನು ತಂದೆ, ನಂಬಿದನು ಪ್ರಹ್ಲಾದ ।**
**ನಂಬಿಯುಂ ನಂಬದಿರುವಿಬ್ಬಂದಿ ನೀನು ॥**
**ಕಂಬದಿನೋ ಬಿಂಬದಿನೋ ಮೋಕ್ಷವವರಿಂಗಾಯ್ತು ।**
**ಸಿಂಬಳದಿ ನೊಣ ನೀನು ಮಂಕುತಿಮ್ಮ ॥**

ನಂಬದಿರ್ದನು=ನಂಬದೆ+ಇದನು, ನಂಬದಿರುವಿಬ್ಬಂದಿ = ನಂಬದೆ+ಇರುವ+ಇಬ್ಬಂದಿ, ಮೋಕ್ಷವವರಿಂಗಾಯ್ತು = ಮೋಕ್ಷವು+ಅವರಿಂಗೆ+ಆಯ್ತು

ಪ್ರಹ್ಲಾದನ ತಂದೆ ಹಿರಣ್ಯಕಶಿಪು 'ಹರಿ'ಯನ್ನು ನಂಬಲಿಲ್ಲ, ದ್ವೇಷಿಸಿದ ಮತ್ತು ತಾನೇ ದೇವರೆಂದ. ಅವನ ಮಗ ಪ್ರಹ್ಲಾದ 'ಹರಿ' ಸರ್ವೋತ್ತಮನೆಂದ.ತಂದೆಯ ದ್ವೇಷ ಮತ್ತು ಮಗನ ಭಕ್ತಿ ಅಥವಾ ನಂಬಿಕೆ ಸಂಪೂರ್ಣವಾಗಿತ್ತು. ಹಾಗಾಗಿ ನಂಬದ ತಂದೆಯನ್ನು ಕಂಬದಿಂದ ಒದಗಿ ಮತ್ತು ಮಗನಿಗೆ ದರ್ಶನ ಭಾಗ್ಯದಿಂದ ಮುಕ್ತಿಯನ್ನು ಪ್ರಸಾದಿಸಿದ, ಆದರೆ ನಾವೋ, ನಂಬಿಯೂ ನಂಬದಂತೆ ಎಡಬಿಡಂಗಿ' ಸ್ಥಿತಿಯಲ್ಲಿ, ಸಿಂಬಳದಲ್ಲಿ ಏನೋ ಸಿಗುವುದೆಂಬ ಆಸೆಯಿಂದ ಹೋಗಿ ಅದರೊಳಗ ಅಂಟಿಕೊಂಡು ಹೊರ ಬರಲಾರದ ನೊಣದಂತೆ ಇದ್ದೇವೆ ಎಂದು, ನಮ್ಮ ಭಕ್ತಿಯ ಪರಿಯನ್ನು ಕುಹಕವಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

"ಅನನ್ಯಾಃ ಚಿಂತಯಂತೋ ಮಾಮ್" ಎನ್ನುತ್ತಾನೆ ಶ್ರೀ ಕೃಷ್ಣ ಗೀತೆಯಲ್ಲಿ ಅನ್ಯ ಯೋಚನೆಗಳಿಲ್ಲದೆ ನಿಶ್ಚಲವಾದ ಶ್ರದ್ಧೆ ಮತ್ತು ಭಕ್ತಿಯಿಂದ ನಂಬಿ ಮುಕ್ತಿಯನ್ನು ಪಡೆಯಬಹುದು ಎಂದು ಅರ್ಥ. ಹಾಗಾದಾಗ ಯಾವುದಾದರೂ ರೀತಿಯಲ್ಲಿ ನಮಗೆ ಮುಕ್ತಿ ಸಿಗುತ್ತದೆ. ಇದಕ್ಕೆ ಪುರಾಣ, ರಾಮಾಯಣ, ಮಹಾಭಾರತಗಳಲ್ಲಿ ಯತೇಚ್ಚವಾದ ಉದಾಹರಣೆಗಳು ಸಿಗುತ್ತವೆ. ಹಿರಣ್ಯಾಕ್ಷ, ಹಿರಣ್ಯಕಶಿಪು, ರಾವಣ ಕುಂಬಕರ್ಣ, ಶಿಶುಪಾಲ ದಂತವಕ್ರ, ಶೃಗಾಲ ವಾಸುದೇವ, ಜರಾಸಂದ, ಕಾಲಯವನ, ಮುಂತಾದವರು ತೀವ್ರ ದ್ವೇಷದಿಂದ ಮುಕ್ತಿಯನ್ನು ಪಡೆದವರು, ಮತ್ತೆ ದ್ರುವ, ಪ್ರಹ್ಲಾದ, ವಿಭೀಷಣ, ಹನುಮಂತ, ವಿಧುರ, ಉದ್ಭವ ಮುಂತಾದವರಿಗೆ ಭಕ್ತಿ ಮಾರ್ಗದಲ್ಲಿ ಮುಕ್ತಿ ಸಿಕ್ಕಿತು. ಭಕ್ತಿಯಿಂದಲೋ ಅಥವಾ ದ್ವೇಷದಿಂದಲೋ, ಹೇಗಾದರೂ ಸರಿ ಆ ಪರಮಾತ್ಮನಲ್ಲಿ ಭಕ್ತಿ, ಶ್ರದ್ಧೆ ಮುಖ್ಯ.

ಆದರೆ ನಮ್ಮ ಭಕ್ತಿಯೆಲ್ಲ 'ಸ್ವಾರ್ಥ'ದ ಭಕ್ತಿ, "ಸಂಕಟ ಬಂದಾಗ ವೆಂಕಟರಮಣ" ಎಂಬಂತೆ. ವಿಷಯ ಮತ್ತು ವಸ್ತು ವ್ಯಾಮೋಹದಿಂದ ಈ ಜಗತ್ತಿಗೆ ಅಂಟಿಕೊಂಡಿರುವ ನಮಗೆ, ಪಡೆದದ್ದನ್ನು ಉಳಿಸಿಕೊಳ್ಳುವ





ಅಥವಾ ಬಯಸಿದ್ದನ್ನು ಗಳಿಸಿಕೊಳ್ಳುವ ಕಾರಣಕ್ಕಾಗಿ ಮಾತ್ರ ಆ 'ದೇವರು ಮತ್ತು ಅವನಲ್ಲಿ ಭಕ್ತಿ 'ಬೇಕು ಅವರೆಡಾಗಿಬಿಟ್ಟರೆ ನಮ್ಮನ್ನು ಆಳುವುದು ನಮ್ಮ 'ಅಹಂಕಾರ'. ಆದರೆ ನಮ್ಮ ಭಯಗಳು ಮತ್ತು ಬಯಕೆಗಳು ಎಂದಿಗೂ ಪೂರ್ಣವಾಗುವುದೇ ಇಲ್ಲ. ನಾವು ಈ ವಿಷ ವೃತ್ತದಲ್ಲಿ 'ಸಿಂಬಳದ ಹುಳ'ದ ರೀತಿ ಅಂಟಿಕೊಂಡುಬಿಟ್ಟಿದ್ದೇವೆ. ಹಾಗಾಗಿ ನಮಗೆ ಮುಕ್ತಿಯೇ ಇಲ್ಲ. "ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ" ಎಂದು ದಾಸರು ಹೇಳುವಂತೆ ಇದೆ ನಮ್ಮ ಸ್ಥಿತಿ.

ಮುಕ್ತಿಯೆಂದರೆ ಬಂಧನವಿಲ್ಲದ ಸ್ಥಿತಿ, ಅಂತಹ 'ಮುಕ್ತಿ' ಬೇಕಾದರೆ ಪರಮಾತ್ಮನಲ್ಲಿ ಪರಿಪೂರ್ಣ, ನಿಸ್ಸಂಶಯವಾದ, ಅನನ್ಯವಾದ ಭಕ್ತಿ ಬೇಕು. ಅದನ್ನು ಬಿಟ್ಟು 'ಪರಮಾತ್ಮ ನನಗೆ ಅದು ಬೇಕು ಅಥವಾ ಇದು ಬೇಕು ಎಂದು ಅವನನ್ನು ಬೇಡುತ್ತಾ ಹೋದರೆ, ಅವನಿಂದ ಪಡೆದ ವಸ್ತು ವಿಷಯಗಳ "ಅಂಟು 'ನಮ್ಮನ್ನು ಬಿಡುವುದೇ ಇಲ್ಲ.

'ಹೇ ದೇವ ನನಗೆ ಅದು ಕೊಡು, ಇದು ಕೊಡು' ಎಂದು ಬೇಡದೆ, 'ಹೇ ದೇವ ನೀ ನನ್ನ ಮನದಲ್ಲಿ ಸ್ಥಿರವಾಗಿ ನಿಲ್ಲು' ಎಂದು ಬೇಡಬೇಕು. ಆಗ ನಮ್ಮ ಭಕ್ತಿ ಸ್ವಾರ್ಥ ರಹಿತವಾಗಿ "ಪರಮಾರ್ಥಕ್ಕಾಗಿ" ಆಗಿ ನಾವು ಈ ಜಗತ್ತಿನ ಬಂಧನದಿಂದ ಮುಕ್ತರಾಗಬಹುದು

**ಮುಕ್ತಕ – 486**

**ತನಗಿಂತ ಹಿರಿದ, ಭುವನಕ್ಕಿಂತ ಹಿರಿದೊಂದ -।**
**ನನುಭವದ ಹಿಂದೆ, ಸೃಷ್ಟಿಯ ನೆರಳ ಹಿಂದೆ ॥**
**ಅನುಮಿತಿಸಿ ಮನುಜನಾ ಹಿರಿದನೆಳಸುವನೆಯ್ದೆ।**
**ಮನುಜನೊಳಹಿರಿಮೆಯದು - ಮಂಕುತಿಮ್ಮ ॥**

ಹಿರಿದೊಂದನನುಭವದ= ಹಿರಿದೊಂದನು+ಅನುಭವದ, ಮನುಜನಾ = ಮನುಜನು+ಆ, ಹಿರಿದನೆಳಸುವನೆಯ್ದೆ = ಹಿರಿದನು+ಎಳೆಸುವನು +ಎಮ್ಮೆ

ಭುವನ=ಭೂಮಿ, ಅನುಮಿತಿಸಿ=ಅನುಮಾನ ಪಟ್ಟು, ಊಹಿಸಿ, ಅಂದಾಜು ಮಾಡಿ, ಎಳೆಸುವನು=ಹುಡುಕುವನು, ಎಯ್ದೆ=ಹಿರಿದಾದದ್ದು.

ತನಗಿಂತ ಹಿರಿದಾದದ್ದು ಈ ಭೂಮಿಗಿಂತ ಹಿರಿದಾದದ್ದು ಮತ್ತು ಇವೆಲ್ಲದರ ಅನುಭವಕ್ಕಿಂತ ಒಂದು ಹಿರಿದಾದ ಅನುಭವ, ಈ ಸೃಷ್ಟಿಯ ಹಿಂದೆ ಇದೆ ಮತ್ತು ಈ ಜಗತ್ತು ಅಂತಹ ಹಿರಿದಾದ ಒಂದು ಶಕ್ತಿಯ ನೆರಳು ಮಾತ್ರ ಎಂದು ಅರಿತ ಮಾನವನು ಆ ಪರಮಾತ್ಮನ ಸೃಷ್ಟಿಯಲ್ಲಿ ಭಿನ್ನವಾಗಿ ತನ್ನ ಹಿರಿಮೆಯನ್ನು ಮೆರೆದಿದ್ದಾನೆ ಎಂದು ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಉಲ್ಲೇಖಿಸಿದ್ದಾರೆ.

ಮನುಷ್ಯ ತನ್ನ ಅರಿವಿನ ಉಪಯೋಗವನ್ನು ಮಾಡತೊಡಗಿದಾಗ ಮತ್ತು ಆಲೋಚಿಸತೊಡಗಿದಾಗ ತನಗಿಂತ ದೊಡ್ಡದಾದ ಒಂದು ಶಕ್ತಿಯಿದೆ. ಹಾಗಾಗಿ ತನ್ನ ಪ್ರಮೇಯವಿಲ್ಲದೆಯೇ ತನ್ನ ಶಕ್ತಿಗೂ ಮೀರಿದ ಹಲವಾರು ಈ ಜಗತ್ತಿನಲ್ಲಿವೆ, ತಾನಿರುವ ಅ ಭೂಮಿಯ ಆಚೆಗೂ ಬೇರೊಂದು ಆದರೆ ಭಿನ್ನವಾದ

ಪ್ರಪಂಚವೊಂದು ಉಂಟು, ಆ ಶಕ್ತಿ ಎಲ್ಲವೂ ತಾನೇ ಆಗಿ ಎಲ್ಲವನ್ನೂ ನೆರಳಂತೆ ಕಾಯುತ್ತಿದೆ ಎಂಬುದನ್ನು ತನ್ನ ಅನುಮಾನದಿಂದ, ಅಂದಾಜು ಮಾಡಿದ್ದಾನೆ, ಮನುಷ್ಯ, ಎಲ್ಲವನ್ನೂ ಅವನು ತನ್ನ ಭಾವನೆಯಿಂದಲೇ ಅರಿತುಕೊಳ್ಳಲು ಪ್ರಯತ್ನಪಟ್ಟ, ಹೀಗೆ ಮಾಡುವುದು ಕೇವಲ ಮನುಷ್ಯನಿಗೆ ಮಾತ್ರ ಸಾಧ್ಯ, ಅನ್ಯ ಪ್ರಾಣಿಗಳಿಗೆ ಅಥವಾ ಸೃಷ್ಟಿಯಲ್ಲಿನ ಅನ್ಯ ಜೀವಿಗಳಿಗೆ ಅಸಾಧ್ಯವಾದದ್ದು ಮನುಷ್ಯನಿಗೆ ಸಾಧ್ಯವಾಗಿದೆ.

ಹಿಂದೆ ಯಾವ ಪ್ರಯೋಗಶಾಲೆಯೂ ಇಲ್ಲದಿದ್ದಾಗ, ಕೇವಲ ಊಹೆ, ಆಲೋಚನೆ, ಚಿಂತನೆ, ಅನುಭವ ಮುಂತಾದವುಗಳಿಂದ ಜ್ಞಾನ ಮತ್ತು ವಿಜ್ಞಾನವನ್ನು ತಿಳಿದುಕೊಂಡ ಮನುಷ್ಯ ನಿಜಕ್ಕೂ ಶ್ರೇಷ್ಠನೇ ಹೌದು. ಸನಾತನ ಸಂಸ್ಕೃತಿಯಲ್ಲಿ 'ತಪಸ್ಸಿನ ವಿಧಾನದಿಂದ ಇವೆಲ್ಲವೂ ಸಾಧ್ಯವಾಯಿತು. ಈ ಜಗತ್ತು, ಇದರ ವ್ಯಾಪಕತ್ವ ಮತ್ತು ವ್ಯಾಪ್ತಿ, ಇದರ ವಿಚಿತ್ರಗಳು, ಇದರ ಕಾರ್ಯವಿಧಾನ, ಇದಕ್ಕೆ ಕಾರಣ ಮತ್ತು ಇದೆಲ್ಲವನ್ನೂ ಒಂದು ಸೂತ್ರದಲ್ಲಿ ಪೋಣಿಸಿ, ಪಾಲಿಸುತ್ತಿರುವ ಆ ಪರಮ ಶಕ್ತಿಯ ರೂಪರಹಿತವಾದ ಶಕ್ತಿ ಸ್ವರೂಪ, ಇವೆಲ್ಲವನ್ನೂ ತನ್ನ ಆಲೋಚನೆಯಿಂದಲೇ ಕಂಡುಕೊಂಡ ಅಂದಿನ ಮಾನವರು, ಋಷಿ ಮುನಿಗಳು, ತಪಸ್ವಿಗಳು ಎಲ್ಲರೂ 'ಮಹಾನ್'ಗಳೇ ಅಲ್ಲವೇ? ಅಂತಹ ಮಹಾನ್ ಅನುಭವ ಕೇವಲ ಮಾನವನಿಗೆ ಮಾತ್ರ ಸಾಧ್ಯವಾಗಿದೆ.

ವೇದಗಳಲ್ಲಿ ಇವೆಲ್ಲವನ್ನೂ ಮತ್ತು ಇವುಗಳನ್ನು ನಾವು ಹೇಗೆ ಉಪಯೋಗಿಸಿಕೊಳ್ಳಬೇಕು, ಈ ಜಗತ್ತಿನೊಂದಿಗೆ ನಮ್ಮ ಸಂಬಂಧ ಹೇಗಿದೆ ಮತ್ತು ಈ ಜಗತ್ತಿನ ಎಲ್ಲವುಗಳೊಂದಿಗೆ ಹೇಗೆ ನಡೆದುಕೊಳ್ಳಬೇಕು ಎನ್ನುವುದನ್ನು ಕೇವಲ ತಪಸ್ಸಿನಿಂದಲೇ ಕಂಡುಕೊಂಡು 'ಮಹಾನ್'ಗಳಾದರೂ 'ಅಹಂಕಾರ'ರಹಿತರಾಗಿ ತಮ್ಮ ಹೆಸರನ್ನೂ ಹೇಳಿಕೊಳ್ಳದೆ ಒಂದು ಬೃಹತ್ 'ಕೊಡುಗೆ'ಯನ್ನು ಈ ಜಗತ್ತಿಗೆ ಕೊಟ್ಟಿದ್ದಾರೆ. ಇದೇ ಮಾನವನ ಹಿರಿಮೆ. ಇದನ್ನೇ ಮಾನ್ಯ ಗುಂಡಪ್ಪನವರು "ಮನುಜನೊಳಹಿರಿಮೆಯದು" ಎಂದಿದ್ದಾರೆ.

ಅಂದು ಅವರು ನೀಡಿದ ಈ ಸಂಪತ್ತಿನಿಂದ ನಾವು ಆ ಪರಮ ಶಕ್ತಿಯನ್ನು ಅರಿತುಕೊಳ್ಳುವ ಅಥವಾ ಅದನ್ನು ನಮ್ಮ ಭಾವನೆ ತಂದುಕೊಳ್ಳುವ ಕಿಂಚಿತ್ ಪ್ರಯತ್ನ ಮಾಡಿದರೂ ನಮ್ಮ ಜೀವನ ಸಾರ್ಥಕವಾಗುತ್ತದೆ.

ಮುಕ್ತಕ – 487 ನರರವೊಲೆ ಸುರರುಮಲೆದಲೆದು ಮರೆಯಾಗಿಹರು।
ಭರತದೇಶದೊಳಮೈಗುಪ್ತ ಯವನರೊಳಂ॥
ಸುರ ನಾಮ ರೂಪಗಳಸಂಖ್ಯಾತ ನಿಜವೊಂದು।
ತೆರೆಕೋಟಿ ಕಡಲೊಂದು - ಮಂಕುತಿಮ್ಮ॥

ನರರವೊಲೆ=ನರರ+ಒಲೆ, ಸುರರುಮಲೆದಲೆದು=ಸುರರುಂ+ಅಲೆದು+ಅಲೆದು, ಭರತದೇಶದೊಳಮೈಗುಪ್ತ ಯವನರರೊಳಂ=ಭರತದೇಶದೊಳಂ+ಐಗುಪ್ತ+ಯವನರೊಳಂ, ರೂಪಗಳಸಂಖ್ಯಾತರೂಪಗಳ್+ಅಸಂಖ್ಯಾತ. ಸುರರು=ದೇವತೆಗಳು, ಐಗುಪ್ತ=ಈಜಿಪ್ಪದೇಶ, ಯವನದೇಶ=ಗ್ರೀಕ್ ದೇಶ, ತೆರೆ= ಅಲೆ





ನರರಂತೆಯೇ ದೇವತೆಗಳೂ ಸಹ ಈ ಜಗತ್ತಿನಲ್ಲಿ ಜನಮಾನಸದಲ್ಲಿ ಇದ್ದು ಕಾಲಾಂತರದಲ್ಲಿ ಮರೆಯಾಗುತ್ತಾರೆ. ನಮ್ಮ ಭಾರತದಲ್ಲಿ ಪುರಾಣಗಳ ಕಾಲದ ಇಂದ್ರಾದಿ ದೇವತೆಗಳು ಇಂದು ಮರೆಯಾಗಿದ್ದಾರೆ. ಇದೇ ರೀತಿ ಚರಿತ್ರೆಯಲ್ಲಿ ನಮಗೆ ದೊರೆಯುವ ಪುರಾತನ ಈಜಿಪ್ಟ್ ಮತ್ತು ಗ್ರೀಕ್ ದೇಶದ ಸಂಸ್ಕೃತಿಗಳಲ್ಲಿ ಅಂದು ಇದ್ದಂತಹ ದೇವತೆಗಳು ಇಂದು ಕಾಣೆಯಾಗಿದ್ದಾರೆ. ಆದರೆ ಸಕಲ ಜಗತ್ತಿಗೂ ನಿಯಾಮಕ ಶಕ್ತಿಯೊಂದೇ ಎನ್ನುವ ಭಾವ ಇಂದಿಗೂ ಈ ಎಲ್ಲಾ ದೇಶಗಳಲ್ಲಿಯೂ ಹಾಗೆ ಉಳಿದಿದೆ.ಈ ವಿಷಯವನ್ನು ಒಂದೇ ಕಡಲಲ್ಲಿ ಕೋಟಿ ಕೋಟಿ ಅಲೆಗಳು ಎದ್ದು ಮತ್ತೆ ಬೀಳುತ್ತಾ, ಹೊಸ ಅಲೆಗಳಿಗೆ ಎಡೆಮಾಡಿ ಕೊಡುತ್ತದೆ ಎಂದು ಒಂದು ಉಪಮೆಯ ಸಹಿತ ವಿವರಿಸಿದ್ದಾರೆ ಮಾನ್ಯ ಗುಂಡಪ್ಪನವರು.

ಬದಲಾವಣೆಯೇ ಜಗತ್ತಿನ ನಿಯಮ. ಜಗತ್ತಿನ ಎಲ್ಲವೂ ನಿರಂತರವಾಗಿ ಬದಲಾಗುತ್ತಲೇ ಇರುತ್ತದೆ. ಜಗತ್ತೂ ಸಹ ಹಿನ್ನೆಲೆಯಲ್ಲಿ ಬದಲಾಗುತ್ತಾ ಹೋಗುತ್ತದೆ. ಹಳತು ಹೋಗಿ ಹೊಸತು ಬರುತ್ತದೆ.ಹಾಗೆಯೇ ನಮ್ಮ ಕಲ್ಪನೆಯ

ಮತ್ತು ನಮಗೆ ಒದಗುವ ದೇವತೆಗಳೂ ಸಹ ಕಾಲಕಾಲಕ್ಕೆ ಬದಲಾಗುತ್ತಾ ಹೋಗುತ್ತಾರೆ. ಹೋಮರ್ ಕವಿಯ 'ಒಡೆಸ್ಸಿ' ಮತ್ತು ಈಲಿಯಡ್' ಎಂಬ ಎರಡು ಗ್ರೀಕ್ ಕಾವ್ಯಗಳನ್ನು ನೋಡಿದರೆ ಎಷ್ಟೊಂದು ದೇವತೆಗಳ ಉಲ್ಲೇಖ ಮಾಡಿದ್ದಾನೆ ಕವಿ. ಆದರೆ ಇಂದು ಅಲ್ಲಿನ ಜನಮಾನಸದಲ್ಲಿ ಅವರುಗಳ ನೆನಪೂ ಇಲ್ಲ. ಹಾಗೆಯೇ ಭಾರತದಲ್ಲಿಯೂ ಒಂದೊಂದು ಕೆಲಸಕ್ಕೆ ಒಂದೊಂದು ದೇವತೆ ಅಥವಾ ಒಂದೊಂದು ಬೇಡಿಕೆಗೆ ಒಂದೊಂದು ದೇವತೆ ಇದ್ದ ಕಾಲವೂ ಇತ್ತು. ಅಗ್ನಿ, ವಾಯು ಮುಂತಾದ ದೇವತೆಗಳನ್ನು ಬೇರೆ ಬೇರೆ ಕಾರಣಗಳಿಗೆ ಪೂಜಿಸಿ, ಆರಾಧಿಸಿ, ಯಜ್ಞಯಾಗಾದಿಗಳಲ್ಲಿ ಹವಿಸ್ಸನ್ನು ನೀಡುವ ಪರಿಪಾಠ ಇದ್ದಿತು.ಆದರೆ ಇಂದು ಬದಲಾಗಿದೆ.ಬಹುಶಃ ಈಜಿಪ್ಟ್ ಮುಂದಾದ ದೇಶಗಳಲ್ಲಿನ ಕತೆಯೂ ಅಷ್ಟೇ.

ಬೇರೆ ಬೇರೆ ಕಾಲಕ್ಕೆ ಬೇರೆ ಬೇರೆ ಪ್ರದೇಶಗಳಲ್ಲಿನ ದೇವತಾ ಹೆಸರುಗಳು ಮತ್ತು ಪೂಜೆಗಳು ಹಲ ವಿಧವಾಗಿದ್ದವು. ಪ್ರೀತಿ ಪ್ರೇಮಕ್ಕೆ 'ಕಾಮದೇವ' ನೆಂದು ಭಾರತದಲ್ಲಿ ಕರೆದರೆ ಯವನರು ಅವನನ್ನು ವೀನಸ್' ಎಂದರು. ಮಳೆಗೆ, ಬೆಳೆಗೆ, ಹಣಕ್ಕೆ, ವಿದ್ಯೆಗೆ, ಹೀಗೆ ಒಂದೇ ದೇವತೆಗೆ ಪ್ರದೇಶ ಮತ್ತು ಕಾಲಾನುಗುಣವಾಗಿ ಬೇರೆ ಬೇರೆ ಹೆಸರುಗಳು. ಆ ದೇವತೆಯೂ ಸಹ ಒಂದು ಪರಮ ತತ್ವದ ಬಲದಿಂದಲೇ ಈ ಜಗತ್ತಿನಲ್ಲಿದೆ ಅಲ್ಲವೇ? ಇದನ್ನೇ ಮಾನ್ಯ ಗುಂಡಪ್ಪನವರು ಪರತತ್ವವನ್ನು ನಿರಂತರವಾಗಿರುವ ಅಗಾಧ ಕಡಲಿಗೆ ಹೋಲಿಸಿದರೆ ಅದರ ಮೇಲೆ 'ಎದ್ದು ಬೀಳುತ್ತಾ ಮತ್ತೆ ಮತ್ತೆ ಮೇಲೇಳುವ ಅಲೆಗಳನ್ನು ಬದಲಾಗುವ ದೇವತೆಗಳಿಗೆ ಹೋಲಿಸಿ "ತೆರೆಕೋಟಿ ಕಡಲೊಂದು" ಎಂದಿದ್ದಾರೆ.

ಪರಮಾತ್ಮ ತಾನು ಸೃಷ್ಟಿಸಿದ ಜಗತ್ತಿನ ಪರಿಪಾಲನೆಗೆ ನಿಯಮಿಸಲ್ಪಟ್ಟ ಅಧಿಕಾರಿಗಳೇ ಈ ದೇವತೆಗಳು.ನಮ್ಮ ಯೋಗಕ್ಷೇಮವನ್ನು ನೋಡಿಕೊಳ್ಳುವ ಈ ಅನ್ಯ ದೇವತೆಗಳನ್ನು ಮತ್ತು ಈ ದೇವತೆಗಳಿಗೂ ಆಧಾರವಾದ ಆ ಪರತತ್ವದ ಪ್ರಭು ಪರಮಾತ್ಮನು ನಮಗೂ ಸಹ ಆಧಾರನಲ್ಲವೇ? ಹಾಗಾಗಿ ಅವನಿಗೂ ನಾವು 'ನಿಶ್ಚಲ ವಾದ ಭಕ್ತಿಯನ್ನು ತೋರಬೇಕು.

**ಮುಕ್ತಕ – 488** **ಜೀವಿ ಬೇಡದಿರೆ ದೈವವನು ಕೇಳುವವರಾರು? |**
**ದೈವ ಗುಟ್ಟಿರಸದಿರೆ ಜೀವಿಯರಸುವುದೇಂ? ||**
**ಜೀವ ದೈವಂಗಳ ಪರಸ್ಪರಾನ್ವೇಷಣೆಯೆ |**
**ಲಾವಣ್ಯ ಸೃಷ್ಟಿಯಲಿ – ಮಂಕುತಿಮ್ಮ ||**

ಕೇಳುವವರಾರು=ಕೇಳುವವರು+ಯಾರು, ಗುಟ್ಟಿರಸದಿರೆ=ಗುಟ್ಟಾ+ಇರಿಸದೆ+ಇರೆ,
ಜೀವಿಯರಸುವುದೇಂ=ಜೀವಿ+ಅರಸುವುದು+ಏಂ, ಪರಸ್ಪರಾನ್ವೇಷಣೆಯೆ=ಪರಸ್ಪರ+ಅನ್ವೇಷಣೆಯೇ

ಜೀವಿ 'ಕಾಪಾಡು' ಎಂದು ಬೇಡದ್ದಿದರೆ ಆ ದೇವರನ್ನು ಕೇಳುವವರಾರು? ಅಥವಾ ಅ ದೈವವೆಂಬ ವಸ್ತು ನಿಗೂಢವಾಗಿಲ್ಲದಿದ್ದರೆ, ಜೀವಿ ಹುಡುಕುವುದೇನನ್ನು? ಹಾಗಾಗಿ ಜೀವನದಲ್ಲಿ ಈ ದೈವ ಮತ್ತು ಜೀವಿಯ ಪರಸ್ಪರ ನಿರ್ಭರತೆಯೇ ಈ ಸೃಷ್ಟಿಗೆ ಒಂದು ಮೆರಗನ್ನು ಕೊಟ್ಟಿದೆ ಎಂದು ಒಂದು ಕಡು ಸತ್ಯವನ್ನು ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಜಗತ್ತಿನಲ್ಲಿ ಮನುಷ್ಯ ಮತ್ತು ದೇವರೆಂಬ ವಸ್ತುವಿನದು ಅವಿನಾಭಾವ ಸಂಬಂಧ, ಭೂಮಿಯ ಮೇಲೆ ಮನುಷ್ಯನಿಗೆ, ಇವನು ಬೇಡದೆ ಸಿಕ್ಕ ವಸ್ತುಗಳೇ ಅಧಿಕ. ಗಾಳಿ, ನೀರು, ಮಳೆ, ಬೆಳೆ, ಬೆಳಕು, ಕತ್ತಲೆ, ಎಲ್ಲವೂ ಇವನು ಕೇಳದೆಯೇ ದೈವ ಕೊಟ್ಟದ್ದಲ್ಲವೇ? ಇವುಗಳು ನೈಸರ್ಗಿಕವಾಗಿ ಇವನು ಬೇಡದೇ ಬಂದರೂ, ಮಾನವ ಇದು ದೈವ ಕೃಪೆಯಿಂದ ಸಿಕ್ಕದ್ದು ಎಂದುಕೊಂಡ. ಅಲ್ಲಿಂದ ಶುರುವಾಯಿತು ಇವನ 'ದೈವ'ದ ಮೇಲಿಂದ ನಿರ್ಭರತೆ.ಪ್ರತೀ ಸಣ್ಣ ವಿಷಯಕ್ಕೂ ಇವನ ಬೇಡಿಕೆ ದೈವದಲ್ಲಿ ಇವನು ಬೇಡಿದ್ದರಿಂದ ಸಿಕ್ಕಿತೋ ಅಥವಾ ಮನುಷ್ಯ ಹಾಗಂದುಕೊಂಡನೋ, ಆದರೂ ಮನುಷ್ಯ ತನ್ನ ಭಾವನೆಗಳಿಂದ ಇವನ ಮತ್ತು ಆ ದೈವದ ಜೊತೆಗೆ ಒಂದು ಬಿಡಿಸಲಾಗದ ನಂಟನ್ನು ಹಾಕಿಕೊಂಡಿದ್ದಾನೆ.

ಈ ನಂಟು, ಕೈ' ಮೇಲಾದ ಒಂದು ಆಳವಾದ ತರಚುಗಾಯದ ಮೇಲೆ ಹಾಕಿದ ಪಟ್ಟಿಯಂತೆ (bandage). ಗಾಯ ಮಾಗುವವರೆಗೆ ತೆಗೆಯುವ ಹಾಗಿಲ್ಲ. ತೆಗೆಯಲು ಪ್ರಯತ್ನಪಟ್ಟರೆ ಗಾಯ ಮತ್ತೆ ವ್ರಣ, ಗಾಯ ಮಾಗಿಬಿಟ್ಟರೆ ಪಟ್ಟಿ ತಾನೇ ತಾನಾಗಿ ಕಳಚಿಹೋಗುತ್ತದೆ. ಈ ದೇವರು ಎಂಬುದು ನಮಗೆ ಆ ಪಟ್ಟಿಯಂತೆ ಅಂಟಿಕೊಂಡು ಬಿಟ್ಟಿದೆ.

ಆದರೆ ಒಂದು ವಿಷಯ. ಆ ದೈವವನ್ನು ನಂಬುವುದರಿಂದಲೇ ಮನುಷ್ಯ ಹೆಚ್ಚು ಸುಸಂಸ್ಕೃತನಾದ, ಆ ದೈವದಲ್ಲಿನ ಭಕ್ತಿಯೇ, ಸಾಹಿತ್ಯ, ಸಂಗೀತ, ಕಲೆ ಮುಂದಾದವುಗಳ ವಿಕಸನಕ್ಕೆ ಕಾರಣವಾಯಿತು. ಆ ದೈವ ಭಕ್ತಿಯೇ ಸಾಮಾಜಿಕ ವ್ಯವಸ್ಥೆಯನ್ನು, ನೀತಿ ನಿಯಮಗಳನ್ನೂ ಹುಟ್ಟುಹಾಕಿ, ಪಾಲಿಸುವ ಕ್ರಮವನ್ನೂ ಕಂಡುಕೊಳ್ಳುವುದಕ್ಕೆ ಕಾರಣವಾಯಿತು. ಹಾಗಾಗಿ ದೈವ ಭಕ್ತಿ ಮನುಷ್ಯನಿಗೆ ಒಳಿತನ್ನೇ ಮಾಡಿದೆ.

ಯಾರೇ ಬೇಡಲಿ ಬಿಡಲಿ ತನ್ನ ಕರ್ಮವನ್ನು ಆ ಪರಮ ಚೇತನ ಮಾಡುತ್ತಿದ್ದರೂ, ಮನುಷ್ಯನ ಈ ರೀತಿಯ ಭಾವನೆಗಳಿಂದ ದೈವಕ್ಕೊಂದು ಬೆಲೆ. ಬೇರೆ ಬೇರೆ ರೂಪಗಳು, ಬೇರೆ ಬೇರೆ ಪೂಜೆಗಳು.ಒಬ್ಬರಿಗಿಂತ ಇನ್ನೊಬ್ಬರು ಹೆಚ್ಚೆಂಬ ಭಾವನೆ. ಆ ದೈವದ ಹೆಸರಿನಲ್ಲಿ ಕಾದಾಟ, ಗುದ್ದಾಟ, ಕಾಲ ಕಾಲಕ್ಕೆ ಬದಲಾಗುವ ಇವನ ಹುಡುಕಾಟದ ವಿಧಾನ, ವರ್ಣಿಸಲಾಧ್ಯ, ಮಾನವನ ಹುಡುಕಾಟ ನಡೆದೇ ಇದೆ. ಪಾಪ ಇತ್ತೀಚೆಗೆ





ಇವನು 'ಗಾಡ್ ಪಾರ್ಟಿಕಲ್'ನ್ನೂ ಕಂಡುಕೊಂಡಿದ್ದಾನೆ. ಇವನ ಅನ್ವೇಷಣೆ ಇನ್ನೂ ನಡೆದೇ ಇದೆ.

ಆ ಜೀವಿ ಮತ್ತು ಆ ದೈವದ ಪರಸ್ಪರ ಹುಡುಕಾಟ ನಡೆದೇ ಇದೆ, ಅದು ಜಗತ್ತಿಗೆ ಒಂದು ಸೌಂದರ್ಯವನ್ನು ಅಥವಾ ಒಂದು ಲಾವಣ್ಯವನ್ನು ನೀಡಿದೆ ಎಂದರೆ ಏಕೆ ಬೇಡ ಎನ್ನಬೇಕು.

**ಮುಕ್ತಕ – 489** **ಕಣ್ಣಿರದೆ ರವಿಯೇನು? ರವಿಯಿರದೆ ಕಣ್ಣೇನು? ।**
**ಅನ್ಯೋನ್ಯ ಸಹಕೃತಿಯಿನುಭಯ ಸಾರ್ಥಕತೆ ॥**
**ನಿನ್ನಾತ್ಮ ಜಗದಾತ್ಮಕಂತು ಸಂಬಂಧವವು ।**
**ವಹ್ನಿಸ್ಫುಲಿಂಗಗಳೊ -ಮಂಕುತಿಮ್ಮ ॥**

ಕಣ್ಣಿರದೆ=ಕಣ್ಣು+ಇರದೆ, ರವಿಯಿರದೆ =ರವಿ+ಇರದೆ, ಸಹಕೃತಿಯಿನುಭಯ=ಸಹ+ಕೃತಿಯಿನ್+ಉಭಯ,
ನಿನ್ನಾತ್ಮ=ನಿನ್ನ+ಆತ್ಮ, ಜಗದಾತ್ಮಕಂತು=ಜಗದ+ಆತ್ಮಕೆ+ಅಂತು,
ಸಹಕೃತಿ=ಸಹಕಾರ, ವಹ್ನಿಸ್ಫುಲಿಂಗ=ಬೆಂಕಿಯಕಿಡಿಗಳು

ಸೃಷ್ಟಿಯ ಪರಸ್ಪರ ನಿರ್ಭರತೆಯನ್ನು ಮುಂದುವರೆಸುತ್ತಾ, ನೋಡುವ ಶಕ್ತಿಯಿಲ್ಲದೆ ಬೆಳಕಿದ್ದರೇನು ಬಿಟ್ಟರೇನು? ಬೆಳಕಿಲ್ಲದಿದ್ದರೆ ಕಣ್ಣಿದ್ದರೆಷ್ಟು ಬಿಟ್ಟರೆಷ್ಟು? ಇವೆರಡರ ಅನ್ಯೋನ್ಯತೆ ಮತ್ತು ಸಹಕಾರವೇ, ಆತ್ಮ ಮತ್ತು ಪರಮಾತ್ಮ ಸಂಬಂಧದ ಸ್ವರೂಪ, ಬೆಂಕಿಯಿದ್ದಾಗ ಕಿಡಿಯಿರುವಂತೆ, ಎಂದು ಪ್ರತಿವಸ್ತುವಿಗೂ ಇರುವ ಕಾರಣ, ಕಾರ್ಯ, ಕರ್ಮ ಮತ್ತು ಫಲದ ಸ್ವರೂಪವನ್ನು ವಿವರಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಒಂದು ಪರಮ ಶಕ್ತಿ.ಅದನ್ನೇ ನಾವು ಪರಮಾತ್ಮ ಅಥವಾ ಜಗದಾತ್ಮ ಎಂದಿಟ್ಟುಕೊಳ್ಳೋಣ. ಆ ಶಕ್ತಿಯಿಂದಲೇ ಎಲ್ಲವೂ ಆಗಿವೆ. ಸೂರ್ಯ ಚಂದ್ರರು, ನಕ್ಷತ್ರಗಳು ಮತ್ತು ಕೋಟಿ ಕೋಟಿ ಆಕಾಶಕಾಯಗಳು. ಒಂದೊಂದಕ್ಕೂ ಅವುಗಳದೇ ಆದ ವೈಶಿಷ್ಟ್ಯ, ಆ ವೈಶಿಷ್ಟ್ಯಕ್ಕೂ ಆ ಪರಮ ಶಕ್ತಿಯೇ ಕಾರಣ, ಅದು ಬೆಂಕಿಯಾದರೆ ಮಿಕ್ಕವೆಲ್ಲಾ ಕಿಡಿಗಳು "ವಹ್ನಿಸ್ಫುಲ್ಲಿಂಗಗಳು" ಎಂದು ಇದನ್ನೇ ಮಾನ್ಯ ಗುಂಡಪ್ಪನವರು ಹೇಳಿರುವುದು. ಆ ಪರಮ ಶಕ್ತಿಯನ್ನು ಹೊರತು ಬೇರಾವುದೂ ಇಲ್ಲಿ ಸ್ವತಂತ್ರವಲ್ಲ, ಎಲ್ಲಕ್ಕೂ ಅದೇ ಮೂಲ, ಅದೇ ಕಾರಣ, ಅದೇ ಕರಣ, ಅದೇ ಕಾರ್ಯ ಮತ್ತು ಅದೇ ಫಲ.

ಒಂದು ಇನ್ನೊಂದರ ಮೇಲೆ ಅಧಾರಪಟ್ಟಿರುವುದೇ ಎರಡಕ್ಕೂ ಸಾರ್ಥಕತೆ, ಒಂದಿಲ್ಲದೆ ಇನ್ನೊಂದಿಲ್ಲ. ನಾವೆಲ್ಲಾ ನಮ್ಮನ್ನು ನಾವು 'ಸ್ವತಂತ್ರರು' ಎಂದುಕೊಂಡಿದ್ದೇವೆ. ನಿಜಾರ್ಥದಲ್ಲಿ ನಾವು ಯಾರೂ ಸ್ವತಂತ್ರರಲ್ಲ. ಕೇವಲ ನಮ್ಮ ಅಹಂಕಾರ ನಮ್ಮನ್ನು ನಾವು 'ಸ್ವತಂತ್ರರು' ಎಂದು ಬೀಗಿವಂತೆ ಮಾಡುತ್ತದೆ. ನಮ್ಮ ಉಸಿರಾಟದಿಂದ ಹಿಡಿದು ಎಲ್ಲಕ್ಕೂ ನಾವು ಪರಾವಲಂಬಿಗಳು. ಅಹಂಕಾರವನ್ನು ತೊರೆದರೆ ನಮಗೆ ಸತ್ಯದರಿವಾಗಿ, 'ಆತ್ಮನಿಗೂ ಎಂದರೆ ನಮಗೂ, ಜಗದಾತ್ಮನಿಗೂ ಎಂದರೆ ಪರಮಾತ್ಮನಿಗೂ ಇರುವ

ಪರಸ್ಪರ 'ಸಹಕೃತಿಯಿನುಭಯ' ಸಹಕಾರದ, ಎಂದರೆ ಸಂಬಂಧವು ಅರ್ಥವಾಗುತ್ತದೆ, ಆ ಪರಮ ಸತ್ಯದ ಅರಿವಾದಾಗ ನಮ್ಮಲ್ಲೂ ಒಂದು ಜ್ಞಾನದ ಕಿಡಿ ಬೆಳಗಬಹುದು.

ನಾವು ಈ ಸೃಷ್ಟಿಯಲ್ಲಿನ ಒಂದು ಕಣ, ಅನ್ಯ ಕಣಗಳಂತೆಯೇ. ನಮ್ಮ ಅಸ್ತಿತ್ವಕ್ಕೆ ಮತ್ತು ಜೀವನಕ್ಕೆ ನಾವು ಇಡೀ ಸೃಷ್ಟಿಯ ಪ್ರತಿಯೊಂದರಮೇಲೂ ಅಧಾರಪಟ್ಟಿರುತ್ತೇವೆಯಾದ್ದರಿಂದಲೇ ನಮ್ಮ ಬದುಕು ಸಾಗುತ್ತದೆ. ಹಾಗಾಗಿ ನಾವು ಯಾವುದರ ಮೇಲೆ ಅಧಾರಪಟ್ಟಿರುತ್ತೇವೆಯೋ ಅದರೊಂದಿಗೆ 'ಸಹಕೃತಿ'ಯಿಂದ ಎಂದರೆ ಸಹಕಾರದೊಂದಿಗೆ ಇದ್ದರೆ ನಮ್ಮ ಬದುಕಿಗೆ ಒಂದು ಸಾರ್ಥಕತೆ ಎನ್ನುವುದನ್ನು ಸ್ಪಷ್ಟವಾಗಿ ಹೇಳಿದ್ದಾರೆ ಗುಂಡಪ್ಪನವರು. ಇದನ್ನು ಅರಿತು ಬದುಕಿದರೆ ಒಳಿತು ಇಲ್ಲದಿದ್ದರೆ ಕೆಡುಕು. ಆಯ್ಕೆ ನಮಗೇ ಬಿಟ್ಟದಲ್ಲವೇ?

**ಮುಕ್ತಕ – 490**

**ಬಹಿರದ್ಭುತವ ಮನುಜನಂತರದ್ಭುತವರಿತು ।**
**ಗ್ರಹಿಸುವಂತಾಗಿಸಲು ಪೂರ್ವಾನುಭವಿಗಳ್ ॥**
**ಬಹುಪರಿಯುಪಾಯಗಳ ನಿರವಿಸಿಹರದಕೇಕೆ ।**
**ಗಹಗಹಿಸುವೆಯೊ, ಮರುಳೆ? ಮಂಕುತಿಮ್ಮ ॥**

ಬಹಿರದ್ಭುತವ=ಬಹಿರ್+ಅದ್ಭುತವ, ಮನುಜನಂತರದ್ಭುತವರಿತು=ಮನುಜನ+ಅಂತರ್+ಅದ್ಭುತವು+ಅರಿತು, ಗ್ರಹಿಸುವಂತಾಗಿಸಲು=ಗ್ರಹಿಸುವಂತೆ+ಆಗಿಸಲು, ಪೂರ್ವಾನುಭವಿಗಳ್=ಪೂರ್ವ+ಅನುಭವಿಗಳ್, ಬಹುಪರಿಯುಪಾಯಗಳ = ಬಹು+ಪರಿಯ+ಉಪಾಯಗಳ, ನಿರವಿಸಿಹರದಕೇಕೆ-ನಿರವಿಸಿಹರು+ಅದಕೆ+ಏಕೆ,

ಬಹಿರ್= ಹೊರಗಿನ, ಅಂತ=ಒಳಗಿನ, ಅದ್ಭುತ=ವಿಚಿತ್ರ, ಪರಿಯ= ವಿಧಾನದ, ನಿರವಿಸಿಹರು=ನಿರ್ಮಿಸಿಹರು ಗಹಗಹಿಸುವೆಯೊ=ಅಟ್ಟಹಾಸ ಮಾಡುವೆಯೋ, ಮರುಳೆ=ಹುಚ್ಚ.

ನಮ್ಮ ಪೂರ್ವಜರು ತಮ್ಮ ಅನುಭವದಿಂದ, ಸೃಷ್ಟಿಯಲ್ಲಿ ನಮಗೆ ಹೊರಗೆ ಕಾಣುವ ಅದ್ಭುತಗಳನ್ನು, ಅಂತರಂಗದಲ್ಲಿ ಅರಿತುಕೊಳ್ಳಲು ಹಲವಾರು ವಿಧಾನಗಳನ್ನು ಕಂಡುಕೊಂಡಿದ್ದಾರೆ. ಅದನ್ನು ಅರಿಯುವ ಮುನ್ನ ಅಥವಾ ಅದನ್ನು ಅರಿತುಕೊಳ್ಳುವ ಪ್ರಯತ್ನವನ್ನೇ ಮಾಡದೆ ಅದನ್ನು ಕಂಡು ಕುಹಕವಾಡುವಂತೆ ಗಹಗಹಿಸಿ ಏಕೆ ನಗುತ್ತೀಯೆ,

ಹುಚ್ಚಾ ಎಂದು ಸತ್ಯವರಿಯದೆ ಒಂದು ವಿಷಯದ ಬಗ್ಗೆ ಕುಹಕವಾಡುವ ಮನಗಳನ್ನು ಕೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಸೃಷ್ಟಿಯಲ್ಲಿ ಅನೇಕಾನೇಕ ಅದ್ಭುತಗಳು ಇವೆ. ನಮಗೆ ಎಲ್ಲವೂ ಅರ್ಥವಾಗುವುದಿಲ್ಲ. ಇಡೀ ಜಗತ್ತನ್ನು ಒಂದು ಸೂತ್ರದಲ್ಲಿ ಬಂಧಿಸಿರುವ ಆ ಪರಮ ಚೇತನ, ಎಲ್ಲ ಅದ್ಭುತಗಳನ್ನೂ ಸಕಾರಣವಾಗಿಯೇ ನಿರ್ಮಿಸಿದೆ.ಅಲ್ಪ ಮತಿಗಳಾದ ನಾವು ಅದನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಅಸಮರ್ಥರಾಗಿದ್ದೇವೆ, ಆದರೆ ಅರ್ಥಮಾಡಿಕೊಳ್ಳಲು ಅಸಾಧ್ಯವಾದುದೇನಲ್ಲ, ಪ್ರಯತ್ನ ಪಡಬೇಕು.





ಆ ಪ್ರಯತ್ನದಲ್ಲಿ ನಮಗೆ ಒದಗಲು ನಮ್ಮ ಪೂರ್ವಜರು ತಮ್ಮ ಅನುಭವದಲ್ಲಿ ಕಂಡುಕೊಂಡ ಹಲವಾರು ಸತ್ಯಗಳನ್ನು ಪ್ರಮಾಣ ಪೂರ್ವಕವಾಗಿ ನಮಗೆ ನೀಡಿದ್ದಾರೆ. ಈ ಗುಂಪಿಗೆ ಸೇರುವುದೇ ವೇದಗಳು, ಉಪನಿಷತ್ತುಗಳು, ಪುರಾಣಗಳು, ಸೂಕ್ತ ಮತ್ತು ಸ್ತೋತ್ರಗಳು,ಸೂಕ್ತ ಗುರುವಿನ ಆಶ್ರಯದಲ್ಲಿ ಇವೆಲ್ಲವನ್ನೂ ಅಥವಾ ಯಾವುದಾದರೂ ಒಂದು ಭಾಗವನ್ನು ಅಭ್ಯಾಸಮಾಡಿದ್ದಲ್ಲಿ, ಸೃಷ್ಟಿಯ ಹೊರಗಿನ ಅದ್ಭುತಗಳಲ್ಲಿ ಕೆಲವನ್ನು ಅಂತರಂಗದಲ್ಲೂ ಕಂಡುಕೊಳ್ಳುವ ಮತ್ತು ಅನುಭವಿಸುವ ಕ್ಷಮತೆಯನ್ನು ನಾವು ಪಡೆದುಕೊಳ್ಳಬಹುದು.

ವಿಪರ್ಯಾಸವೆಂದರೆ ಏನೂ ಅರಿಯದೆ ಇದ್ದರೂ 'ಏನೋ ಅರಿತಿದ್ದೇವೆ' ಎನ್ನುವ ಅಹಂಕಾರದ ಭಾವದಿಂದ ಅರಿಯಬೇಕಾದ್ದರಿಂದ ವಂಚಿತರಾದಾಗ್ಯೂ, ಪ್ರತೀ ಸತ್ಯವನ್ನೂ ಕುಹಕವಾಡುವ ಜನಗಳು ನಮ್ಮಲ್ಲೇನೂ ಕಡಿಮೆ ಇಲ್ಲ. ಅಷ್ಟೇ ಅಲ್ಲ, ಸತ್ಯದ ಮೂಲವರಿಯದೆ, ತಾವು ಅರಿತದ್ದೆ ಪರಮ ಸತ್ಯವೆಂದು ನಂಬಿ ಹಲವಾರು 'ಮತ, ಧರ್ಮ, ಪದ್ಧತಿ, ರೀತಿ' ಎಂದು ಪಂಗಡಗಳಾಗಿ ಹಂಚಿ ಹೋಗಿರುವ ಸಮುದಾಯವನ್ನು ನೋಡಿದರೆ ಮಾನ್ಯ ಗುಂಡಪ್ಪನವರು

ಹೇಳುವಂತೆ, ಇದು ಕೇವಲ 'ಮರುಳಿ 'ಎಂದು ಅರ್ಥವಾಗುತ್ತದೆ. ಸತ್ಯವನ್ನರಿಯ ಬೇಕು, ಶುದ್ಧ ಸತ್ಯವನ್ನು ಅರಿಯಬೇಕು. ಭ್ರಮೆಯಿಂದ ಹೊರಗೆ ಬರಬೇಕು. ಅಂತಹ ಪ್ರಯತ್ನ ನಮ್ಮದಾಗಬೇಕು.

**ಮುಕ್ತಕ – 491**

**ಅಂಬುಧಿಯ ಮಡಕೆಯಲಿ, ಹೊಂಬಿಸಿಲ ಕಿಟಕಿಯಲಿ |**
**ತುಂಬಿಕೊಳ್ಳುವ ಬಡವನೈಶ್ವರ್ಯದಂತೆ ||**
**ಬಿಂಬದೊಳಗಮಿತ ಸತ್ವವ ಪಿಡಿದಿಡುವ ಭಕ್ತಿ- |**
**ಯಿಂಬು ಕಿಂಚಿನ್ಮತಿಗೆ – ಮಂಕುತಿಮ್ಮ ||**

ಬಡವನೈಶ್ವರ್ಯದಂತೆ=ಬಡವನ+ ಐಶ್ವರ್ಯದಂತೆ, ಬಿಂಬದೊಳಗಮಿತ=ಬಿಂಬದೊಳಗೆ+ಅಮಿತ,
ಪಿಡಿದಿಡುವ=ಪಿಡಿದು+ಇಡುವ, ಭಕ್ತಿಯಿಂಬು=ಭಕ್ತಿಯ+ಇಂಬು, ಕಿಂಚಿನ್ಮತಿಗೆ=ಕಿಂಚಿನ್+ಮತಿಗೆ
ಇಂಬು=ಸಹಾಯ, ಒತ್ತಾಸೆ, ಬಿಂಬ=ಮೂರ್ತಿ, ಪ್ರತಿಮೆ, ಕಿಂಚಿನ್ಮತಿ=ಅಲ್ಪ ಮತಿ

ಸಾಗರವನ್ನು ಒಂದು ಪುಟ್ಟ ಮಡಕೆಯಲ್ಲಿ ಅಥವಾ ಸೂರ್ಯನ ಹೊಂಬಿಸಿಲನ್ನು ತನ್ನ ಪುಟ್ಟ ಗುಡಿಸಲಿನ ಕಿಟಕಿಯಲ್ಲಿ ತುಂಬಿಕೊಳ್ಳುವ ಪ್ರಯತ್ನಪಡುವ ಬಡವನಂತೆ, ಮಹತ್ತಾದ ಪರತತ್ವವನ್ನು ಒಂದು ಪುಟ್ಟ ಮೂರ್ತಿಯಲ್ಲಿ ಕಾಣುವುದೇ ಭಕ್ತಿ ಎಂದು ಮಹತ್ತಾದ ವಿಷಯವನ್ನು ಅರುಹಿದ್ದಾರೆ ಮಾನ್ಯ ಗುಂಡಪ್ಪನವರು.

ಪ್ರತಿಯೊಬ್ಬರಿಗೂ ಭಕ್ತಿಯನ್ನು ತೋರುವ ಹಾದಿಯಲ್ಲಿ ಭಾವನೆಯ ಒಂದು ಆಳ ಮತ್ತು ವಿಸ್ತಾರವಿರುತ್ತದೆ.

ಹಲವರದು ಕಿಂಚಿನ್ಮತಿ ಮತ್ತು ಆಳವಿಲ್ಲದ್ದು ಮತ್ತೆ ಕೆಲವರದು ಆಳ ಮತ್ತು ವಿಸ್ತಾರ, ಒಬ್ಬರು ಇನ್ನೊಬ್ಬರನ್ನು ಟೀಕಿಸುವಂತಿಲ್ಲ. ಏಕೆಂದರೆ ಭಕ್ತಿಯೆನ್ನುವುದು ಅವರವರ ಭಾವಕ್ಕೆ ಸಂಬಂಧಿಸಿದ್ದು, ವೇದೊಪನಿಷತ್ತುಗಳನ್ನು ಪುರಾಣಗಳನ್ನು ಓದದ ಪಾಮರನಲ್ಲಿರುವ ಭಕ್ತಿಯ ಭಾವಕ್ಕೂ, ಅವುಗಳನ್ನು ಓದಿದ ಪಂಡಿತನಿಗೂ ಯಾವ ವ್ಯತ್ಯಾಸವೂ ಇಲ್ಲ. ಭಾವ ಒಂದೇ. ಆದರೆ ಆ ಭಾವವನ್ನು ವ್ಯಕ್ತಪಡಿಸಲು ಅವರವರುಗಳು ಉಪಯೋಗಿಸುವ ಪರಿಕರಗಳ ವ್ಯತ್ಯಾಸವಷ್ಟೆ, ಕೆಲವರಿಗೆ ಸಾದಾರಣ ಪೂಜಾ ವಿಧಾನವಾದರೆ, ಕೆಲವರದು ಆಡಂಬರದಿಂದ ಕೂಡಿದ್ದು, ಕೆಲವರದು ಕ್ಲುಪ್ತವಾದರೆ, ಕೆಲವರದು ಧೀರ್ಘ. ಕೆಲವರು ತೋರಿಕೆಗೆ ಪೂಜೆ ಮಾಡಿದರೆ ಕೆಲವರು ತೋರದೆಯೇ ಮನಸ್ಸಿನಲ್ಲಿ ತುಂಬು ಭಕ್ತಿಯನ್ನಿಟ್ಟುಕೊಂಡಿರುತ್ತಾರೆ. ಹೀಗೆ ಭಕ್ತಿಯಲ್ಲಿ ಹಲವಾರು ವಿಧಗಳು.

ಆದರೆ ಹಂತ ಹಂತವಾಗಿ ಬೆಳೆಯಬಹುದಾದ ಭಕ್ತಿ ಭಾವದ ಮೊದಲ ಹಂತದಲ್ಲಿ "ಬಿಂಬದೊಳಗಮಿತ ಸತ್ವವ ಪಿಡಿದಿಡುವ ಪ್ರಯತ್ನ ನಡೆದು, ಹಂತ ಹಂತವಾಗಿ ಅನೇಕ ರೂಪಗಳಿಂದ ಏಕ ರೂಪಕ್ಕೆ ಬಂದು ಮತ್ತೆ ಆಕಾರದಿಂದ ನಿರಾಕಾರ ಬ್ರಹ್ಮನನ್ನು ಧ್ಯಾನಮಾಡುವ ಸ್ಥಿತಿಗೆ ತಲುಪುವುದೇ ನಮ್ಮ ಸನಾತನದ ದಾರಿ. ಪ್ರಾಥಮಿಕ ಹಂತದ ಭಕ್ತರಿಗೆ, ಜ್ಞಾನದ ಬಡತನದವರಿಗೆ, ಮಾನ್ಯ ಗುಂಡಪ್ಪನವರು ಹೇಳುವ ಹಾಗೆ 'ಕಿಂಚಿನ್ನತಿಗಳಿಗೆ' ಒಂದು ರೂಪವಿದ್ದರೆ ಇಡೀ ಪರಮಾತ್ಮ ತತ್ವವನ್ನು ಅದರಲ್ಲಿಯೇ ಭಕ್ತಿಯಿಂದ ಕಾಣುವುದು ಸಾಧ್ಯ.

ಬೃಹತ್ ಮತ್ತು ಪರಮ ಚೇತನವೇ "ಅಣುರ್ಬೃಹತ್ ಕೃಶಸ್ಥೂಲೋ, ಗುಣಬೃನ್ನಿರ್ಗುಣೋ ಮಹಾನ್" ಎನ್ನುವಂತೆ ಎಲ್ಲದರಲ್ಲೂ ಸೇರಿಕೊಂಡಿರುವಾಗ ಭಕ್ತಿಯನ್ನು ತೋರಲು ಯಾವ ವಿಧಾನವನ್ನು ಬೇಕಾದರೂ ಆರಿಸಿಕೊಳ್ಳಬಹುದು.ಅವರವರ ಕ್ಷಮತೆ ಯೋಗ್ಯತೆ ಮತ್ತು ಸಾಧ್ಯತೆಗನುಗುಣವಾಗಿ ಅವರವರು ತಮ್ಮ ಭಕ್ತಿಯನ್ನು ತೋರುತ್ತಾರೆ. ನಾವು ನಮ್ಮಲ್ಲಿ ಭಕ್ತಿಯಿದ್ದರೆ, ಹಂತ ಹಂತವಾಗಿ ಮೇಲಕ್ಕೆ ಹೋಗುವ ಪ್ರಯತ್ನವನ್ನು ಮಾಡಬೇಕು

**ಮುಕ್ತಕ – 492**

**ಬಹಿರಂತರೈಕ್ಯವನು ನೆನಪಿಗಾಗಿಸಲೆಂದು |**
**ವಿಹಿತಮ್ ಆಚಮನಾರ್ಘ್ಯ ಪೂಜೆ ನೈವೇದ್ಯ |**
**ಗುಹೆಯೊಳಗಣದ ಹೊರಗಣದ ಕೂಡಿಸುವುಪಾಯ |**
**ಸಹಭಾವವದಕೆ ಸರಿ - ಮಂಕುತಿಮ್ಮ ||**

ಬಹಿರಂತರೈಕ್ಯವನು=ಬಹಿರ್+ಅಂತರ್+ಐಕ್ಯವನು, ನೆನಪಿಗಾಗಿಸಲೆಂದು=ನೆನಪಿಗೆ+ಆಗಿಸಲೆಂದು
ಆಚಮನಾರ್ಘ್ಯ +ಆಚಮನ+ಅರ್ಘ್ಯ , ಗುಹೆಯೊಳಗಣದ=ಗುಹೆ+ಒಳಗಣದ,
ಕೂಡಿಸುವುಪಾಯ=ಕೂಡಿಸುವ+ಉಪಾಯ, ವಿಹಿತಮ್=ವಿಧಿಸಲ್ಪಟ್ಟ, ನೈವೇದ್ಯ=ಅರ್ಪಿಸಲ್ಪಡುವ





ಹೊರ ಮತ್ತು ಒಳಗಿನ ಚೇತನವು ಒಂದೇ ಎಂದು ನಮಗೆ ನೆನಪು ಮಾಡಿಕೊಡಲು ವಿಧಿಸಲ್ಪಟ್ಟ ಕ್ರಮವೇ, ಆಚಮನ, ಅರ್ಘ್ಯ ಮತ್ತು ನೈವೇದ್ಯಗಳಿಂದ ಮಾಡುವಂತಹ ಪೂಜೆ. ಈ ಪೂಜಾಕ್ರಮದಿಂದ ನಮ್ಮ ಒಳಗಿರುವ ಮತ್ತು ಹೊರಗಿರುವ ಚೇತನಗಳ ಏಕತೆ ಮತ್ತು ಐಕ್ಯತೆಯನ್ನು ಅರಿತು, ಎರಡರಲ್ಲೂ ಸಮನ್ವಯವನ್ನು ತಾಳುವುದಕ್ಕೆ ಸರಿಯಾದ ಉಪಾಯವೇ ಪೂಜೆ ಎನ್ನುತ್ತಾರೆ ಈ ಮುಕ್ತಕದಲ್ಲಿ.

ನಾವು ಪೂಜೆಮಾಡುವುದು ನಮ್ಮ ಮನೆಯ ದೇವರ ಮೂರ್ತಿಗೋ ಅಥವಾ ದೇವಸ್ಥಾನದ ವಿಗ್ರಹಕ್ಕೋ ಎಂದು ಇಟ್ಟುಕೊಳ್ಳೋಣ, ಹಾಗೆ ಪೂಜೆ ಮಾಡುವಾಗ ನಮ್ಮ ಪೂರ್ವಜರು ಹಾಕಿಕೊಟ್ಟ ಕೆಲವು ವಿಧಿ ವಿಧಾನಗಳನ್ನು ಪಾಲಿಸುತ್ತೇವೆ. ಸ್ನಾನ, ಸಂಧ್ಯಾವಂದನೆ, ಜಪ, ತಪ, ಆರಾಧನೆ, ಅರ್ಘ್ಯ, ಆಚಮನ ಮುಂತಾದ ವಿಧಿಗಳನ್ನು ವಿಧಿಸಿದ್ದಾರೆ. ನಮ್ಮ ಸನಾತನದ ಪೂಜಾಕ್ರಮದಲ್ಲಿ. ಆದರೆ ನಾವು ಪೂಜೆಮಾಡುವುದು ಯಾವುದನ್ನು? ನಮ್ಮ ಎದುರಿಗೆ ಇರುವ ಮೂರ್ತರೂಪದ ವಿಗ್ರಹವನ್ನೋ ಅಥವಾ ಆ ವಿಗ್ರಹದ ಹಿಂದಿರುವ ಪರತತ್ವವನ್ನೋ?

'ಪರಮೆ ವ್ಯೋಮನ್' ಎಂದರೆ ಆಕಾಶದಲ್ಲಿ ಸಕಲಕ್ಕೂ ಮೂಲವಾದ ಮತ್ತು ಎಲ್ಲಕ್ಕಿಂತ ಮಿಗಿಲಾದ ಆ ಪರಮ ಚೇತನವನ್ನು, ನಿಹಿತಂ ಗುಹಾಯಾಂ' ಅಂತರಂಗಕ್ಕೆ ತಂದುಕೊಳ್ಳುವುದೇ ಪೂಜೆ, ಸಕಲ ವಿಶ್ವದಲ್ಲಿ ಆವೃತವಾಗಿರುವ ಆ ಪರಮಚೇತನವೇ ನಮ್ಮ ಒಳಗೂ ಇರುವ ಚೇತನವೆಂಬ ಅರಿವು ಮೂಡಬೇಕು. ಹಾಗೆ ಮೂಡಿದ ಅರಿವಿನಿಂದ ಸಕಲ ಚರಾಚರಗಳಿಗೆ ಕಾರಕ ಮತ್ತು ಧಾರಕವಾದ ಆ ಪರಸತ್ವ ಮತ್ತು ಪೂರ್ವ ಕರ್ಮಾನುರೂಪವಾಗಿ

ಇಂದ್ರಿಯಾಧಾರಿತವಾದ ಈ ದೇಹಧಾರಣೆ ಮಾಡಿರುವ ನಮ್ಮೊಳಗಿರುವ ಚೇತನ, ಎರಡೂ ಒಂದೇ ಎಂಬ ಅರಿವು ಸ್ಥಿರವಾಗಬೇಕು. ಹಾಗಾಗಲು ದಾರಿ ಈ ಪೂಜೆಯೊಂದೇ ಎಂದು ಹೇಳುತ್ತಾರೆ ಗುಂಡಪ್ಪನವರು.

ಆದರೆ ಈ ಪೂಜೆ ಹೇಗಿರಬೇಕು? ಜಗತ್ತಿನ ಎಲ್ಲ ಕಡೆಯೂ ಈ ರೀತಿಯ ಪೂಜೆ ಪರಿಪರಿಯಾದ ವಿಧಾನಗಳಲ್ಲಿ ನಡೆಯುತ್ತದೆ. ಮೂರ್ತರೂಪದ ಪೂಜೆ ಮತ್ತು ನಿರಾಕಾರ ಬ್ರಹ್ಮನ ಪೂಜೆ,ಬಹಿರಂಗದಲ್ಲಿ ವಿಜೃಂಭಣೆಯ ಪೂಜೆ, ಅಂತರಂಗದಲ್ಲಿ ಮೌನವಾದ ಪೂಜೆ ನಡೆಯುತ್ತದೆ. ವಿಧಿ ವಿಧಾನಗಳು ಹೇಗಿದ್ದರೂ ಆ ಪರಮ ಚೇತನವನ್ನು ಅಂತರಂಗಕ್ಕೆ ತಂದುಕೊಂಡು, ಎರಡೂ ವಿಲೀನವಾಗಿ ಸಮಭಾವದಲ್ಲಿ ಇರುವುದೇ ಸರಿಯಾದ ಪೂಜೆ, ಹೊರಗಿನ ಪೂಜೆಗಳು ಸಾಂಸ್ಕೃತಿಕ ಬೆಳವಣಿಗೆಗೆ ಎಡೆಮಾಡಿಕೊಟ್ಟರೆ, ಮೌನದ ಅಂತರಂಗ ಪೂಜೆ ಆತ್ಮೋನ್ನತಿಗೆ ದಾರಿಯಾಗುತ್ತದೆ.

**ಮುಕ್ತಕ – 493**

**ಬಹುಜನಂ ಕೈಮುಗಿದ ತೀರ್ಥದೊಳ್ ಕ್ಷೇತ್ರದೊಳ್ ।**
**ಮಹಿಮೆಯಲ್ಲೇನೆಂದು ಸಂಶಯಿಸಬೇಡ ॥**
**ವಿಹಿತಗೈದವರಾರು ವಸತಿಯಂ ದೈವಕ್ಕೆ ।**
**ಮಹಿಮೆ ಮನಸೋತೆಡೆಯೊ - ಮಂಕುತಿಮ್ಮ ॥**

ಮಹಿಮೆಯಲ್ಲೇನೆಂದು= ಮಹಿಮೆ+ಅಲ್ಲಿ+ಏನು+ಎಂದು,ವಿಹಿತಗೈದವರಾರು=ವಿಹಿತ+ಗೈದವರು+ಯಾರು,

ಮನಸೋತೆಡೆಯೊ= ಮನ+ಸೋತ+ಎಡೆಯೊ,

ವಿಹಿತ=ನಿಗದಿತ,

ಪರಮಾತ್ಮ ಸರ್ವ ವ್ಯಾಪಿ, "ಬಹಳ ಜನ ಕೈ ಮುಗಿಯಲು ಹೋಗುವ ಪುಣ್ಯತೀರ್ಥದಲ್ಲಿ ಅಥವಾ ಪುಣ್ಯಕ್ಷೇತ್ರದಲ್ಲಿ ಮಾತ್ರ ಪರಮಾತ್ಮನ ಮಹಿಮೆ ಇದೆಯೇನು?" ಎಂದು ಸಂಶಯಪಡಬೇಡ. ಆ ದೈವಕ್ಕೆ ಇಂತಹ ಕಡೆಯೇ ಇರಬೇಕು ಅಥವಾ ಇರಬಹುದು ಎಂದು ನಿಗದಿ ಪಡಿಸಿದವರಾರು? ಮಾನವರು ದೈವಕ್ಕೆ ಮನಸೋತೆಡೆಯಲ್ಲಾ ಆ ದೈವದ ಮಹಿಮೆ ಇರುವುದು, ಎಂದು ಮನುಜರ ಭಕ್ತಿಯ ಪರಿಪರಿ ವಿಧಗಳನ್ನು ಉಲ್ಲೇಖ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಪರಮಾತ್ಮನಿಗೆ ಒಂದು ಸ್ಥಳವುಂಟೆ? ಎಲ್ಲ ಸ್ಥಳವೂ ಅವನಿಂದಲೇ ಆಗಿರುವಾಗ, ಅವನಿಗೆ ಸ್ಥಳ ನಿಗದಿ ಮಾಡಲಾಗುವುದೇ? ಆದರೆ ನಮ್ಮ ನಂಬಿಕೆಗೆ ಮತ್ತು ನಮ್ಮ ತೃಪ್ತಿಗೆ ನಾವು ಒಂದು ಮೂರ್ತಿಯನ್ನೋ, ಕ್ಷೇತ್ರವನ್ನೋ, ತೀರ್ಥವನ್ನೋ ಪೂಜೆಮಾಡುತ್ತೇವೆ. ಒಂದು ಕ್ಷೇತ್ರಕ್ಕೋ ಅಥವಾ ತೀರ್ಥಕ್ಕೋ ಯಾರಾದರೂ ದೇವರನ್ನು ಕಾಣಲು ಹೋಗುತ್ತಾರೆಂದರೆ, ಅವರಿಗೆ ಆ ಸ್ಥಳದಲ್ಲಿ ನಂಬಿಕೆ ಹೆಚ್ಚು ಎಂದು ಅರ್ಥ. ಅನ್ಯರ ನಂಬಿಕೆಯನ್ನು ಗೌರವಿಸಬೇಕು. "ಅವರು ನಂಬಿದ ಸ್ಥಳದಲ್ಲಿ ಮಾತ್ರ ದೇವರಿದ್ದಾನೆಯೇ. ದೇವರು ಸರ್ವ ವ್ಯಾಪಿಯಲ್ಲವೇ? ದೇವರಿಲ್ಲದ ಸ್ಥಳವುಂಟೆ?" ಎನ್ನುವ ಮಾತುಗಳನ್ನು ಆಡಬಾರದು. ಏಕೆಂದರೆ ದೇವರೆಂಬುದೇ ನಂಬಿಕೆಗೆ ಸಂಬಂಧಪಟ್ಟ ವಿಷಯ. ಯಾರ ನಂಬಿಕೆಯನ್ನೂ ಹೀಗಳೆಯುವಂತಿಲ್ಲ.

ಮಾನವರ ನಂಬಿಕೆಯೇ ಪ್ರತೀ ಕ್ಷೇತ್ರಕ್ಕೂ, ತೀರ್ಥಕ್ಕೂ, ದೇವಸ್ಥಾನಕ್ಕೂ ಮಹಿಮೆಯನ್ನು ಕೊಡುತ್ತದೆ.ಆ ಮಹಿಮೆಯೇ ಜನರ ವಿಶ್ವಾಸ ಮತ್ತು ನಂಬಿಕೆಗಳನ್ನು ಅಧಿಕವಾಗಿಸುತ್ತದೆ. ಒಂದಕ್ಕೊಂದು ಪೂರಕವಾಗಿ ಬೆಳೆಯುತ್ತಾ ಹೋಗುತ್ತದೆ.ಕಾಲಕಾಲಕ್ಕೆ ಬದಲಾವಣೆ ಬಂದಂತೆಲ್ಲಾ ನಂಬಿಕೆಗಳೂ ಬದಲಾಗುತ್ತವೆ ಮತ್ತು ಹಾಗೆಯೇ ಜನರು ನಂಬುವ ತೀರ್ಥ ಮತ್ತು ಕ್ಷೇತ್ರ ಬದಲಾಗುತ್ತಾ ಹೋಗುತ್ತದೆ, ಮತ್ತು ಈ ಮಾನವರು ನಂಬುವ ಆ ದೇವರಗಳೂ ಸಹ ಬದಲಾಗುತ್ತಾ ಹೋಗುತ್ತಾರೆ. ಒಂದು ಕ್ಷೇತ್ರದಲ್ಲಿ ಬಹಳಷ್ಟು ಜನ ತುಂಬು ಭಕ್ತಿಯಿಂದ ಹೋಗಿ ಕೈ ಮುಗಿಯುವಾಗ,

ತಮ್ಮ ಮನದಾಳದ ಭಕ್ತಿಯ ತೀವ್ರ ಭಾವನೆಗಳನ್ನು ಅಲ್ಲಿ ಸಮರ್ಪಿಸುವುದರಿಂದ, ಆ ಸ್ಥಳಕ್ಕೆ ಬಂದು ಹೋಗುವವರು ಆ ಭಕ್ತಿ ಭಾವದಲ್ಲಿ ಮುಳುಗಿಹೋಗುತ್ತಾರೆ. ಇದೂ ಸಹ ಅನುಭವ ವೇದ್ಯ ಮತ್ತು ನಂಬಿಕೆ ಸಂಬಂಧಿಸಿದ್ದು,

ಆ ಪರಮಾತ್ಮ ಅಲ್ಲಿ, ಎಂದರೆ ಆ ಕ್ಷೇತ್ರದಲ್ಲಿ ಅಥವಾ ತೀರ್ಥದಲ್ಲಿ ಇದ್ದಾನೆಂದು ನಂಬಿ ಹೋಗುವವರಿಗೆ, ಅವರವರ ನಂಬಿಕೆಯೇ ಆಧಾರ. ಆದರೆ ಪರಮಾತ್ಮ ಸರ್ವವ್ಯಾಪಿ ಎಂದು ನಂಬಿ, ಕಾಣುವ ಕ್ಷಮತೆಯಿದ್ದರೆ ಕಂಡ ಕಂಡಲ್ಲಿ ಆ ಪರಮಾತ್ಮನ ಕ್ರಿಯೆಯ ಮೂಲಕ ಅವನನ್ನು ನೋಡಬಹುದು ಎನ್ನುವುದು ಪ್ರಾಜ್ಞರ ಅಭಿಪ್ರಾಯ. ಅಂತಹ ವಿಶಾಲ ಭಾವ ನಾವು ಬೆಳೆಸಿಕೊಂಡರೆ ಆ ದೈವವನ್ನು ಬೇಧವಿಲ್ಲದೆ ನೆನೆಯುವ ಮತ್ತು ಪೂಜಿಸುವ ಕ್ಷಮತೆಯನ್ನು ನಾವೂ ಸಹ ಬೆಳೆಸಿಕೊಳ್ಳಬಹುದು.





**ಮುಕ್ತಕ – 494**

**ಹರಿಭಜಕರೊಳು ಭಯದಿನೊಗೆದುದೆನಿಬರ ಭಕುತಿ |**
**ವರದ ಮೇಲಣ ಭಕ್ತಿಯೆನಿಬರದು ನೋಡೆ ||**
**ಬರಿಯ ಸಂತೋಷದನುರಾಗರಸ ನಿಜಭಕ್ತಿ |**
**ಪರಮದಾಕರ್ಷೆಯದು – ಮಂಕುತಿಮ್ಮ ||**

ಭಯದಿನೊಗೆದುದೆನಿಬರ=ಭಯದಿಂ+ಒಗೆದುದು+ಎನಿಬರ, ಭಕ್ತಿಯೆನಿಬರದು=ಭಕ್ತಿ+ಎನಿಬರ್+ಅದು, ಸಂತೋಷ ದನುರಾಗರಸ=ಸಂತೋಷದ+ಅನುರಾಗರಸ, ಪರಮದಾಕರ್ಷೆಯದು=ಪರಮದ+ಆಕರ್ಷ+ಅದು

ಒಗೆದುದು=ಹುಟ್ಟಿದ್ದು, ಎನಿಬರ=ಎಷ್ಟು 1, ಭಕುತಿ=ಭಕ್ತಿ, ಆಕರ್ಷೆ=ಆಕರ್ಷಣೆ,ಸೆಳೆತ, ಪರಮದ=ಪರಮಾತ್ಮನ

ಹರಿಭಕ್ತರಲ್ಲಿ, 'ಭಯ'ದಿಂದ 'ಭಕ್ತಿ'ಯನ್ನು ತೋರುವವರು ಮತ್ತು ಬೇಡಿಕೆಗಳನ್ನು ಮುಂದಿಟ್ಟು, ಆ ಬೇಡಿಕೆಗಳು ಈಡೇರಲೆಂದು ಭಕ್ತಿ ತೋರುವವರು, ಮತ್ತು 'ನೀ ನನಗೆ ಇದ ಕೊಟ್ಟರೆ, ನಾ ನಿನಗೆ ಅದ ಕೊಡುವೆ' ಎಂದು ಆ ದೈವದೊಂದಿಗೆ ವ್ಯಾಪಾರದ ಭಕ್ತಿ ತೋರುವವರೇ ಹೆಚ್ಚಾಗಿದ್ದಾರೆ. ಆದರೆ ಕೇವಲ ಆನಂದದ ಮತ್ತು ಅನುರಾಗದ ಭಾವದಿಂದ 'ನಿರಪೇಕ್ಷಿಯಾಗಿ ತೋರುವುದೇ ನಿಜವಾದ ಭಕ್ತಿ ಎಂದು ಅರುಹುತ್ತಾರೆ ನಮಗೆ ಈ ಮುಕ್ತಕದಲ್ಲಿ.

ನಾವು ಈ ಜಗತ್ತಿನಲ್ಲಿದ್ದೇವೆ ಮತ್ತು ಇದಕ್ಕೆ ಅಂಟಿಕೊಂಡಿದ್ದೇವೆ, ಇಲ್ಲಿ ನಮಗೆ ಭಯಗಳೇ ಅಧಿಕ.ಒಂದು ಇದ್ದದ್ದನ್ನು ಕಳೆದುಕೊಳ್ಳುವ ಭಯ, ಎರಡು ಬಯಸಿದ್ದು ಸಿಗದೇನೋ ಎನ್ನುವ ಭಯ, ಈ ಭಯದ ಭಾವಕ್ಕೆ ಸಾಂತ್ವನ ನೀಡುವುದೇ ಭಕ್ತಿ. ಅಂದರೆ ಈ ಭಕ್ತಿಗೆ ಕಾರಣ ನಮ್ಮ 'ಭಯ'. ಇದು ಸರಿಯಲ್ಲ.

ನಾವು ಬೇಡುತ್ತೇವೆ, ನಮಗೆ ಏನೇನೋ ಬೇಕು, ವಿದ್ಯೆ ಆರೋಗ್ಯ, ಯಶಸ್ಸು, ಹಣ ಇತ್ಯಾದಿ.ಈ ಪಟ್ಟಿಗೆ ಅಂತ್ಯವೇ ಇಲ್ಲ. ಹೇಗೆ ಬರುತ್ತದೆ ಎಂದು ನಮಗೆ ಗೊತ್ತಿಲ್ಲ. ಗೊತ್ತಿಲ್ಲದ್ದನ್ನೆಲ್ಲ ಆ ದೇವರಿಗೆ ನಿವೇದಿಸು.

ಹೀಗೆ 'ಹೇ ಪರಮಾತ್ಮ ನನಗೆ ಅದು, ಇದು, ಎಲ್ಲವೂ ಬೇಕು, ದಯಪಾಲಿಸು' ಎಂದು ಬೇಡುವ ಭಕ್ತಿ, ಅಷ್ಟೇ ಅಲ್ಲ "ಹೇ ದೇವ, ನೀ ಎನಗೆ ಬಡ್ತಿಯನ್ನು ಕೊಡಿಸಿದರೆ ನಿನಗೆ ನೂರು ತೆಂಗಿನಕಾಯಿ ಒಡೆಯುವೆ" ಎಂದೋ, ಅಥವಾ "ನನಗೆ ಈ ರೋಗದಿಂದ ಮುಕ್ತಿಯಾದರೆ ಸಾವಿರ ರೂಪಾಯಿನ ಕಾಣಿಕೆ ಕೊಡುವೆ" ಎಂದೋ ನಾವು ಬೇಡುತ್ತಾ, ಆ ದೇವರಿಗೆ ಲಂಚವನ್ನು ಕೊಡುವ ದುಷ್ಟತನದ ಅಥವಾ ವ್ಯಾಪಾರೀ ಭಕ್ತಿಯನ್ನೂ ತೋರುತ್ತೇವೆ.

ನಾವು ಜಗತ್ತಿಗೆ ಅಂಟಿಕೊಂಡಷ್ಟೂ ದಿನ, ನಮಗೆ ಭಯವಿರುತ್ತದೆ.ಭಯ ಹೋಗಬೇಕಾದರೆ ಜಗತ್ತಿನ ವಸ್ತು ವಿಷಯ ಮತ್ತು ವ್ಯಕ್ತಿಗಳ ಮೇಲಿನ ಸಾಂಗತ್ಯದ ಅಂಟು ಹೋಗಬೇಕು. ನಮಗೆ ಸಿಗುವುದೆಲ್ಲಾ ಮತ್ತು ಆಗುವುದೆಲ್ಲಾ ನಮ್ಮ ಪೂರ್ವ ಕರ್ಮಾನುಸಾರವೇ ಆಗುತ್ತದೆ ಎಂದು ದೃಢವಾಗಿ ನಂಬಿದರೆ, ಆ ದೈವದಲ್ಲಿ

ಬೇಡುವ ಪ್ರಸಂಗವೂ ಬರುವುದಿಲ್ಲ. ಹೀಗೆ ನಾವು ಬೇಡುವ ಮತ್ತು ಭಯದ ಭಾವ ಬಿಟ್ಟಾಗ ಇನ್ನು ಉಳಿಯುವುದು ಕೇವಲ, ನಿರ್ಮಲ, ಸ್ವಾರ್ಥರಹಿತ, ಪ್ರೇಮ ಪೂರಿತ, ಸಮರ್ಪಣಾ ಭಾವದ ಭಕ್ತಿ, ಈ ಸ್ಥಿತಿಯಲ್ಲಿ ಮನಸ್ಸು ನಿರ್ಮಲವಾಗಿಯೂ, ನಿರಮ್ಮಳವಾಗಿಯೂ, ಶಾಂತವಾಗಿಯೂ, ಆನಂದವಾಗಿಯೂ ಇರುತ್ತದೆ. ಆ ಪರಮಾತ್ಮನಲ್ಲಿ ಬೇಡಿದರೆ 'ನೀ ನಮ್ಮ ಅಂತರಂಗಕ್ಕೆ ಬಂದು ಕೂರು' ಎಂದು ಮಾತ್ರ ಬೇಡಬೇಕು. ಅಂತಹ ಭಕ್ತಿಯನ್ನು ನಾವು ಸಾಧಿಸಲಾದರೆ ನಾವೇ ಧನ್ಯರು.

**ಮುಕ್ತಕ – 495**

**ಅರುಣೋದಯಪ್ರಭೆಯ, ಗಿರಿಶೃಂಗದುನ್ನತಿಯ |**
**ವರುಣಾಲಯಾಯತಿಯ ನಿರುಕಿಸಿದೊಡಹುದೇಂ? ||**
**ಬೆರಗು, ಬರಿಬೆರಗು ನುಡಿಗರಿದೆನಿಪ್ಪಾನಂದ |**
**ಪರಮಪೂಜೆಯುಮಂತು - ಮಂಕುತಿಮ್ಮ ||**

ಗಿರಿಶೃಂಗದುನ್ನತಿಯ=ಗಿರಿ+ಶೃಂಗದ+ಉನ್ನತಿಯ, ವರುಣಾಲಯಾಯತಿಯ=ವರುನಾಲಯ+ಆಯತಿಯ, ರುಕಿಸಿದೊಡಹುದೇಂ=ನಿರುಕಿಸಿದೊಡೆ+ಆಹುದೇಂ, ನುಡಿಗರಿದೆನಿಪ್ಪಾನಂದ = ನುಡಿಗೆ+ಅರಿದು+ಎನಿಪ್ಪ+ಆನಂದ ಪರಮಪೂಜೆಯುಮಂತು=ಪರಮ+ಪೂಜೆಯುಂ+ಅಂತು, ವರುಣಾಲಯ=ಕಡಲು, ಆಯತಿ= ವಿಸ್ತಾರ, ನಿರುಕಿಸಿದೊಡೆ=ನೋಡಿದರೆ, ನುಡಿಗೆ-ಅರಿದು= ನುಡಿಗೆ ಎಟುಕದ, ವರ್ಣನಾತೀತ, ಎನಿಪ್ಪ=ಎನಿಸುವ, ಅಂತು=ಅದೇ ರೀತಿ,

ಮೂಡುತ್ತಿರುವ ಸೂರ್ಯನ ಬೆಳಕನ್ನು, ಮುಗಿಲನ್ನು ಮುಟ್ಟುವಂತೆ ನಿಂತಿರುವ ಗಿರಿಗಳ ಎತ್ತರವನ್ನು, ಅಳತೆಗೆ ಎಟುಕದ ಕಡಲ ವಿಸ್ತಾರವ ನೋಡಿದಾಗ, ಅವುಗಳ ನಿಜ ಸೌಂದರ್ಯವು ನಮ್ಮನ್ನು ಬೆರಗಾಗಿಸಿ, ನಮ್ಮಲ್ಲಿ ಮಾತಿಗೆ ಎಟುಕದಂತ ಒಂದು ಪ್ರಶಾಂತ, ಮೂಕ ಆದರೂ ಆನಂದದ ಭಾವವು ಬಂದು ನಿಲ್ಲುವುದಿಲ್ಲವೇ! ಹಾಗೆಯೇ ಪರಮಾತ್ಮನ ಪೂಜೆಯೂ ಆಗಬೇಕು ಎಂದು ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಸೂರ್ಯೋದಯದ ಪ್ರಶಾಂತ ಮತ್ತು ಶೀತಲ ಬೆಳಕನ್ನು ನೋಡಿದಾಗ, ಕಡಲನ್ನು ನೋಡಿದಾಗ, ನಮಗೆ ಕ್ಷಿತಿಜದಾಚೆಗೂ ಇರುವ ಮತ್ತು ಅಳೆಯಲು ಅಸಾಧ್ಯವಾದ ಅದರ ವಿಸ್ತಾರವನ್ನು ನೋಡಿದಾಗಾಗಲೀ ಅಥವಾ ಎತ್ತರದ ಗಿರಿ ಶೃಂಗಗಳನ್ನು ನೋಡಿದಾಗಾಗಲೀ, ನಮಗೆ ಅದನ್ನು ವರ್ಣಿಸಲು ಮಾತುಗಳೇ ಹೊರಡುವುದಿಲ್ಲ. ಸುಮ್ಮನೆ

ನೋಡುತ್ತಾ ನಿಲ್ಲುವಂತಾಗುತ್ತದೆ ಅದರ ಪರಿಶುದ್ಧತೆ, ಅಗಾಧತೆ, ಮತ್ತು ವೈಶಾಲ್ಯಗಳು ನಮ್ಮನ್ನು ಮೂಕಸ್ಮಿತರನ್ನಾಗಿಸುತ್ತದೆ. ಇದೇ ಭಗವದ್ ಸೃಷ್ಟಿಯ ವಿಶೇಷತೆ. ತಾನೇ ಸೃಷ್ಟಿಸಿದ ಈ ಅದ್ಭುತಗಳನ್ನು ಕಂಡು ಆ ಪರಮಾತ್ಮನೇ ಮೂಕಸ್ಮಿತನಾದರೂ ನಾವು ಆಶ್ಚರ್ಯಪಡಬೇಕಾಗಿಲ್ಲ.

ಈ ಜಗತ್ತಿನ ಪ್ರತೀ ಸೃಷ್ಟಿಯೂ ಅಷ್ಟೇ ಅಗಾಧವಾಗಿದೆ. ಕಾಡು, ಮೇಡುಗಳು, ಹರಿವ ನದಿಗಳು ಸಕಲ





ಚರಾಚರಗಳು, ಎಲ್ಲವೂ ಅದ್ಭುತವೇ । ಇವುಗಳೇ ಇಷ್ಟೊಂದು ಅದ್ಭುತವಾಗಿರಬೇಕಾದರೆ ಇವುಗಳನ್ನೆಲ್ಲ ಸೃಜಿಸಿದ ಆ ಪರಮ ಶಕ್ತಿಯನ್ನೆಷ್ಟು ಅದ್ಭುತವಾಗಿರಬೇಕು.ಸೃಷ್ಟಿಯನ್ನು ನೋಡಿಯೇ ನಾವು ಮೂಕಸ್ಮಿತರಾದರೆ ಇನ್ನು ಆ ಸೃಷ್ಟಿಕರ್ತನನ್ನು ಮನಸ್ಸಿನಲ್ಲಿ ಭಾವಿಸಿದರೆ ನಮಗೆ ಇನ್ನೇನಾಗಬೇಕು, ಮಾತು, ಯೋಚನೆ, ಎಲ್ಲವೂ ಸ್ತಬ್ಧವಾಗಿ ಕೇವಲ ಅದನ್ನು ಮನದಲ್ಲಿ ತುಂಬಿಕೊಳ್ಳುವಂತಾಗುತ್ತದೆ. ಅದನ್ನು ಭಾವಿಸುವುದಷ್ಟೇ ಆಗಬೇಕು.

ಅದರಿಂದ ಏನನ್ನಾದರೂ ಬೇಡುವುದಾಗಲೀ, ಅದರೊಂದಿಗೆ ವ್ಯಾಪಾರವನ್ನು ಮಾಡುವುದಾಗಲೀ ಅಥವಾ ಅದಕ್ಕೆ ಲಂಚ' ಕೊಡುವ ದುಷ್ಟನವನ್ನು ಮಾಡದೆ ನಿರ್ಮಲವಾದ ಮನಸ್ಸಿನಿಂದ ಆನಂದವನ್ನು ಅನುಭವಿಸಬೇಕು.ಅದೇ ನಿಜವಾದ ಪೂಜೆ, ಪ್ರಾರ್ಥನೆಯಾಗುತ್ತದೆ. ಅಂತಹ ಭಾವ ಮತ್ತು ಆನಂದ ನಮ್ಮದಾದರೆ, ನಾವೇ ಧನ್ಯರು.

**ಮುಕ್ತಕ – 496**

**ಬೆರಗಾಗಿಪುವುವೆಲ್ಲ ಪಿರಿತನದ ನೋಟಗಳು |**
**ಬೆರಗೆ, ಮೈಮರೆವೆ, ಸೊಲ್ಲಣಗುವುದೆ ಸೊಗಸು ||**
**ಬೆರಗು ಚಿತ್ತವ ನುಂಗಲೊಗೆವ ಶಾಂತಿಯ ಕಾಂತಿ |**
**ಪರಮನರ್ಚನೆಗೆ ವರ - ಮಂಕುತಿಮ್ಮ ||**

ಬೆರಗಾಗಿಪುವುವೆಲ್ಲ ಬೆರಗಾಗಿಪುವುವು+ಎಲ್ಲ, ಸೊಲ್ಲಣಗುವುದೆ ಸೊಲ್ಲು+ಅಣಗುವುದೆ,

ನುಂಗಲೊಗೆವ =ನುಂಗಲು+ಒಗೆವ, ಪರಮನರ್ಚನೆಗೆ=ಪರಮನ+ಅರ್ಚನೆಗೆ

ಬೆರಗಾಗಿಪುವುವು=ಚಕಿತಗೊಳಿಸುವುವು, ಸೊಲ್ಲು=ಮಾತು, ಒಗೆವ=ಬೀರುವ,

ಪರಮನರ್ಚನೆಗೆ= ಪರಮಾತ್ಮನ ಪೂಜೆಗೆ

ಜಗತ್ಸೃಷ್ಟಿಯ ಹಿರಿದಾದ ನೋಟಗಳೆಲ್ಲ ನಮ್ಮನ್ನು ಬೆರಗಾಗಿಸುತ್ತವೆ, ಆ ಬೆರಗು ನಮ್ಮನ್ನು ಮೈಮರೆಯುವಂತೆ ಮಾಡಿದಾಗ ನಾವು ಮೂಕಸ್ಮಿತರಾಗುವುದೇ ಸೊಗಸು. ನಾವು ಹಾಗೆ ಬೆರಗಾದಾಗ ನಮ್ಮ ಮನಸ್ಸನ್ನು ಆವರಿಸುವ ಪ್ರಭೆಯ ಅಥವಾ ಕಾಂತಿಯ ಶಾಂತತೆಯೇ ನಮಗೆ ಆ ಪರಮಾತ್ಮನನ್ನು ಪೂಜಿಸಲು ಸಿಕ್ಕ “ವರ' ಎಂದು ಉಲ್ಲೇಖಿಸಿದ್ದಾರೆ ಮಾನ್ಯ ಗುಂಡಪ್ಪನವರು.

ಹೀಗೆ ಹಿರಿದಾದ, ಅದ್ಭುತವಾದ, ಉತ್ಕೃಷ್ಟವಾದ ಸ್ಥಳವನ್ನೋ, ವಸ್ತುವನ್ನೋ, ವ್ಯಕ್ತಿಯನ್ನೋ ಅಥವಾ ಭಾವವನ್ನೋ ಕಂಡಾಗ, ನಮ್ಮ ಮನಸ್ಸು ಅದರ ವೈಶಾಲ್ಯಕ್ಕೆ, ಅದ್ಭುತತೆಗೆ ಮತ್ತು ಅಗಾಧತೆಗೆ ಸೋತು ಒಂದು ಶಾಂತ- ಪ್ರಶಾಂತ ಭಾವದಲ್ಲಿ ಮುಳುಗಿ ಹೋಗುತ್ತದೆ. ಮನಸ್ಸು ಮೂಕವಾಗುತ್ತದೆ. ಹಾಗೆ ನಮ್ಮ ಮಾತು ಅಡಗಿ ಆ ವಸ್ತುವಿನಿಂದಲೋ ಅಥವಾ ವ್ಯಕ್ತಿಯಿಂದಲೋ ಏನನ್ನೂ ಬೇಡದ, ಏನನ್ನೂ ಬಯಸದ,

ಮೈಮರೆಯುವ ಶಾಂತ ಭಾವ ನಮ್ಮಲ್ಲಿ ಉಂಟಾದಾಗ, ಅದು ನಮಗೆ ಆ ಪರಮಾತ್ಮನ ಪೂಜೆಗೆ ಸಿಕ್ಕ ಸೂಕ್ತ ವರವೆಂದೇ ಭಾವಿಸಬೇಕು.

ಈ ಜಗತ್ತಿನ ಅದ್ಭುತಗಳನ್ನು ಕಂಡಾಗ ಆಗುವ ಆನಂದ, ಮರದಿಂದ ಮರಕ್ಕೆ ಹಾರುವ ಮಂಗನಂತೆ ವಿಷಯಾಂತರವಾಗುತ್ತಲೇ ಇರುವ ನಮ್ಮ ಮನಸ್ಸನ್ನು ಕೆಲಕಾಲ ಶಾಂತವಾಗಿಸುವ ಮತ್ತು ಆ ಶಾಂತತೆಯಲ್ಲಿ ಒಂದು ಶೂನ್ಯತೆಯ ಅಥವಾ ಮನದೊಳಗೆ ಒಂದು ಮೌನದ ವಾತಾವರಣ ನಿರ್ಮಿಸಲು ಸಹಾಯ ಮಾಡುತ್ತದೆ. ಆ ಆನಂದದಲ್ಲಿ ಬರುವ ಅನನ್ಯಭಾವವೇ ಪರಮಾತ್ಮನ ಪೂಜೆ ಅಥವಾ ಧ್ಯಾನ ಮಾಡಲು ಸೂಕ್ತ ಮನೋವೇದಿಕೆ.

ಅಂತಹ ಪ್ರಶಾಂತಭಾವ ನಮಗೆ, ಒಂದು ಕಾವ್ಯವನ್ನು ಓದಿದಾಗಲೋ, ಪ್ರಕೃತಿಯನ್ನು ಆಸ್ವಾದಿಸಿದಾಗಲೋ, ಅಗಾಧವಾದ ಕಡಲನ್ನು ಕಂಡಾಗಲೋ, ಸುಶ್ರಾವ್ಯವಾದ ಸಂಗೀತವನ್ನು ಕೇಳಿದಾಗಲೋ ಅಥವಾ ಒಬ್ಬ ಸಹೃದಯ ವ್ಯಕ್ತಿಯ ಶುದ್ಧಾಂತರಂಗವನ್ನು ಕಂಡಾಗಲೋ, ಬರುತ್ತದೆ. ಆದರೆ ಅದು ನಮ್ಮೊಳಗೆ ಬರಬೇಕಾದರೆ, ನಮ್ಮ ಮನಸ್ಸನ್ನು ನಾವು ಪೂರ್ವ ಸಿದ್ಧತೆಯೊಂದಿಗೆ ಶುದ್ಧವಾಗಿಟ್ಟುಕೊಳ್ಳಬೇಕು. ಹಾಗಾದಾಗ ಮಾನ್ಯ ಗುಂಡಪ್ಪನವರು ಹೇಳುವ 'ಶಾಂತಿಯ ಕಾಂತಿ' ನಮ್ಮೊಳಗೆ ಬೆಳಗಿ ಆ ಪರಮಾತ್ಮನ ಪೂಜೆಗೆ ನಮ್ಮೊಳಗೂ ವೇದಿಕೆ ಸಿದ್ಧವಾಗುತ್ತದೆ.

**ಮುಕ್ತಕ – 497**

**ಸುತೆಯ ಪೋಷಿಸಿ ಬೆಳೆಸಿ, ಧನಕನಕದೊಡನವಳನ್- |**
**ಇತರಗೃಹಕಿತ್ತು ನೀಂ ಕೇಳ್ವ ಮುಯ್ಯೇನು ||**
**ಪ್ರತಿಫಲವು ಬೇರೇಕೆ | ಸುಕೃತಕದು ತಾನೇ ಫಲ |**
**ಹಿತ ಮನದ ಪಾಕಕದು - ಮಂಕುತಿಮ್ಮ ||**

ಧನಕನಕದೊಡನವಳನ್=ಧನ+ಕನಕದೊಡೆನೆ+ಅವಳನ್,ಇತರಗೃಹಕಿತ್ತು=ಇತರ+ಗೃಹಕೆ+ಇತ್ತು,
ಬೇರೇಕೆ=ಬೇರೆ+ಏಕೆ, ಸುಕೃತಕದು=ಸುಕೃತಕೆ+ಅದು, ಪಾಕಕದು=ಪಾಕಕೆ+ಅದು,
ಸುತೆಯ=ಮಗಳನ್ನು,ಕನಕ=ಚಿನ್ನ,
ಬಂಗಾರ, ಇತರ=ಅನ್ಯರ, ಸುಕೃತ=ಸತ್ಕಾರ್ಯ, ಪಾಕಕೆ=ಹದವಾಗಲಿಕ್ಕೆ.

ತನ್ನ ಮಗಳನ್ನು ಪೋಷಿಸಿ, ಬೆಳೆಸಿ, ದೊಡ್ಡವಳನ್ನಾಗಿಸಿ, ಸೂಕ್ತ ವಯಸ್ಸಿನಲ್ಲಿ ಧನ ಕನಕಗಳ ಸಹಿತ ವಿಜೃಂಭಣೆಯಿಂದ ವಿವಾಹ ಮಾಡಿ, ಅನ್ಯರ ಮನೆಗೆ ಕಳುಹಿಸಿಕೊಡುವಾಗ, ತಂದೆ ಪ್ರತಿಫಲವಾಗಿ ಅಪೇಕ್ಷೆ ಪಡುವುದೇನು? ಮಾಡಿದ ಕೆಲಸ ಸರಾಗವಾಗಿ ನಡೆದರೆ ಅದೇ ಒಳ್ಳೆಯ ಫಲವಲ್ಲವೇ? ಹಾಗೆಯೇ ಮನಸ್ಸು ಹಿತವಾಗಿ ಪಕ್ವವಾದರೆ ಸಾಕಲ್ಲವೇ ಬೇರೇನು ಬೇಕು ಎಂದು ಪ್ರಶ್ನಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.





ಮಗಳನ್ನು ಬೆಳೆಸಿ ಧಾರೆ ಎರೆದು ಪರರ ಮನೆಗೆ ಕೊಟ್ಟಾಗ, ಕರ್ತವ್ಯವನ್ನು ಮಾಡಿದಂತೆ ಅಲ್ಲವೇ? ಕರ್ತವ್ಯ ಎಂದರೆ ಪ್ರತಿಫಲವಿರಲಿ ಇಲ್ಲದಿರಲಿ ಮಾಡಲೇಬೇಕಾದ ಕೆಲಸ. ಹಾಗೆ ಕರ್ತವ್ಯವನ್ನು ಮಾಡಿದ ಮೇಲೆ ಪ್ರತಿಫಲವನ್ನು ಅಪೇಕ್ಷಿಸಬಾರದು.ಇಲ್ಲಿ ಸುತೆಯ ವಿವಾಹ 'ವನ್ನು ಮಾನ್ಯ ಗುಂಡಪ್ಪನವರು ಸೂಚ್ಯವಾಗಿ ಉಪಯೋಗಿಸಿದ್ದಾರೆ. ಏಕೆಂದರೆ ಇದು ನಮ್ಮ ಎಲ್ಲ ಕಾರ್ಯಗಳಿಗೂ ಅನ್ವಯವಾಗುತ್ತದೆ.ಒಂದು ಕೆಲಸವನ್ನು ಕರ್ತವ್ಯವೆಂಬ ಭಾವದಿಂದ ಮಾಡಿದಾಗ, ಮಾಡಿದ ಕೆಲಸ ತೃಪ್ತಿಯನ್ನು ನೀಡುತ್ತದೆ.ಆ ತೃಪ್ತಿಯೇ ಮಾಡಿದ ಕರ್ತವ್ಯಕ್ಕೆ ಪ್ರತಿಫಲ.ಬೇರೇನನ್ನಾದರೂ ಅಪೇಕ್ಷಿಸಿದರೆ ಅದು ಕರ್ತವ್ಯವಾಗದೆ ವ್ಯಾಪಾರವಾಗಿಬಿಡುತ್ತದೆ.

ಈ ಹಿಂದಿನ ಮುಕ್ತಕಗಳನ್ನು ಅವಲೋಕಿಸಿದರೆ, ಮಾನ್ಯ ಗುಂಡಪ್ಪನವರು, ಆ ಪರಮಾತ್ಮನ ಪೂಜೆ ನಮ್ಮಿಂದ ಹೇಗಾಗಬೇಕು ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಈ ಮುಕ್ತಕದಲ್ಲಿ ನೀಡಿದ್ದಾರೆ ಎಂದು ಅನಿಸುತ್ತದೆ. ನಾವುಗಳು ಆತ್ಮಗಳು. ಅವನೋ ಪರಮಾತ್ಮ.ಸೂರ್ಯನ ಶಾಕಕ್ಕೆ ಆವಿಯಾದ ಕಡಲ ನೀರು ಮೋಡವಾಗಿ ಮತ್ತೆ ಧರೆಗೆ ಇಳಿದು ಹಳ್ಳ, ತೊರೆ, ಕಾಲುವೆ ಮತ್ತು ನದಿಯಾಗಿ ಹರಿದು ಹರಿದು ಮತ್ತೆ ಕಡಲನ್ನು ಸೇರುವ ತವಕದಿಂದ ಓಡುವಂತೆ, ಅವನಿಂದ ಬೇರ್ಪಟ್ಟು ಇಂದ್ರಿಯಾಕರ್ಷಣೆಗಳಿಂದ ಕೂಡಿದ ದೇಹ ಧಾರಣೆ ಮಾಡಿದ ನಾವು ಮತ್ತೆ ಅವನನ್ನೇ ಸೇರುವ ಅಪೇಕ್ಷೆ ಮತ್ತು ಗುಣ ನಮ್ಮದು. ಇದನ್ನರಿಯದೆ, ದೇಹದ ಮೇಲಿನ ವ್ಯಾಮೋಹದಿಂದ, ಇಂದ್ರಿಯಗಳು ಮುಂದಿಡುವ

ಬೇಡಿಕೆಗಳಿಂದ ಪ್ರೇರಿತರಾಗಿ "ನಮಗೆ ಅದು ಕೊಡು ಅಥವಾ ಇದು ಕೊಡು' ಎಂದು ಪೂಜೆಮಾಡಿ ಪ್ರಾರ್ಥಿಸುತ್ತೇವೆ. ಈ ರೀತಿಯ ಪ್ರಾರ್ಥನೆ ಕರ್ತವ್ಯವಾಗುವುದಿಲ್ಲ, ಕೇವಲ ವ್ಯಾಪಾರವಾಗುತ್ತದೆ.

ನಮ್ಮ ಪೂಜೆ,ಅರ್ಚನೆ, ಹೂ ಹಣ್ಣುಗಳ ನೈವೇದ್ಯವೆಲ್ಲವೂ ಸಾಂಕೇತಿಕವಾಗಿರಬೇಕು. ಅಂತರಂಗದಲ್ಲಿ ನಾವು "ನಮ್ಮನ್ನೇ" ಆ ಪರಮಾತ್ಮನಿಗೆ ಸಮರ್ಪಿಸಿಕೊಳ್ಳಬೇಕು, ಆತ್ಮ ನಿವೇದನೆಯಾಗಬೇಕು.ಅದು ಸುಕೃತವಾಗುತ್ತದೆ. 'ಸಮರ್ಪಣೆ' ಯೇ ನಮ್ಮ ಕರ್ಮವೂ ಆಗಿ 'ಸಮರ್ಪಣೆ'ಯೇ ಆ ಕರ್ಮಕ್ಕೆ ಫಲವೂ ಆಗಬೇಕು. ಹಾಗಾದಾಗ ಮನಸ್ಸು ನಿರ್ಮಲವಾಗುತ್ತದೆ. ಇಂತಹ ಸಮರ್ಪಣಾ ಭಾವ ನಮ್ಮನ್ನು ಇಂದ್ರಿಯಾವೃತವಾದ ಈ ದೇಹದ ಬಂಧನದ, ಮತ್ತು ಪೂರ್ವ ಸಂಚಿತವಾದ ಕರ್ಮ ಬಂಧನದ ಭಾವದಿಂದ ಮುಕ್ತವಾಗಿಸುತ್ತದೆ. ಸಂಪೂರ್ಣ ಸಮರ್ಪಣಾಭಾವ ತಳೆಯಲು 'ಸಾಧನೆ' ಬಹಳ ಮುಖ್ಯ.ಅಂಥಹ ಸಾಧನೆಯನ್ನು ನಾವು ಮಾಡಲಾದರೆ, ನಾವೇ ಪುಣ್ಯವಂತರು.

**ಮುಕ್ತಕ – 498**

**ಸಂಗೀತ ತಲೆದೂಗಿಪುದು, ಹೊಟ್ಟೆ ತುಂಬಿತೆ |**
**ತಂಗದಿರೆನೆಸಕ ಕಣ್ಣಮೃತ, ಕಣಜಕದೇಂ ||**
**ಅಂಗಡಿಯ ಮಾಡದಿರು ಸುಕೃತಪ್ರಸಕ್ತಿಯಲಿ |**
**ಪೊಂಗುವಾತ್ಮವೇ ಲಾಭ – ಮಂಕುತಿಮ್ಮ ||**

ತಂಗದಿರೆನೆಸಕ=ತಂಗದಿರೆನ +ಎಸಕ, ಕಣ್ಣಮೃತ=ಕಣ್+ಅಮೃತ, ಕಣಜಕದೇಂ ।=ಕಣಜಕೆ +ಅದೇಂ, ಪೊಂಗುವಾತ್ಮವೇ=ಪೊಂಗುವ+ಆತ್ಮವೆ + ಲಾಭ, ತಂಗದಿರ =ತಣ್ಣನೆಯ ಚಂದಿರ, ಎಸಕ=ಬೆಳಕು, ಕಣಜ=ದವಸ ದಾನ್ಯಗಳ ಶೇಕರಣಾ ಸ್ಥಳ, ಸುಕೃತ=ಸತ್ಕಾರ್ಯ, ಪೊಂಗುವ = ಉಕ್ಕುವ,

ಸಂಗೀತವನ್ನು ಆಲಿಸಿದರೆ ಮನಸ್ಸಿಗೆ ಸಂತೋಷವಾಗುತ್ತದೆ, ಹೊಟ್ಟೆ ತುಂಬುತ್ತದೆಯೇ? ಇಲ್ಲ, ಹುಣ್ಣಿಮೆಯ ಬೆಳದಿಂಗಳು ಕಣ್ಣುಗಳಿಗೆ ಹಿತವಾಗಿರುತ್ತದೆ, ಮನೆಗೆ ದವಸ ದಾನ್ಯ ತಂದೀತೆ? ಇಲ್ಲ, ಹಾಗಾಗಿ ಸುಕೃತವನ್ನು ಎಸಗುವಾಗ ವಸ್ತುರೂಪದ ಪ್ರತಿಫಲವನ್ನು ಅಪೇಕ್ಷಿಸಬೇಡ.ಅಂತಹ ಒಳ್ಳೆಯ ಕೆಲಸ ಮಾಡುವುದರಿಂದ, ಕೇವಲ ಆತ್ಮಾನಂದವನ್ನು ಪಡೆಯಬೇಕು ಎಂದು ಸೂಚನೆಯನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಬದುಕಿನಲ್ಲಿ ಜೀವಿಕೆಗಾಗಿ ಮಾಡುವ ಕೆಲಸವನ್ನು ವ್ಯಾಪಾರದ ರೀತಿ ಮಾಡಬಹುದು ಆದರೆ ವಸ್ತು ಮತ್ತು ವಿಷಯಾತೀತವಾದ ಆನಂದವನ್ನು ಪಡೆಯಲು ಮಾಡುವ ಕೆಲಸಗಳಲ್ಲಿ ಪ್ರತಿಫಲದ ಅಪೇಕ್ಷೆಯನ್ನು ಮಾಡದೆ, ಮಾಡಿದ ಆ ಕೆಲಸದ ಅ ಸಫಲತೆಯೇ ಆ ಕಾರ್ಯಕ್ಕೆ ಫಲವೆನ್ನುವಂತಿರಬೇಕು. ಬದುಕುವಾಗ, ಬದುಕಿಗಾಗಿ (survival) ಮಾಡುವ ಕೆಲಸಗಳನ್ನು, ನಿಸ್ವಾರ್ಥವಾಗಿ ಮಾಡಿದಾಗ, ನಿರಪೇಕ್ಷಿಯಾಗಿ ಮಾಡಿದಾಗ, ಬದುಕುವುದಕ್ಕೆ ಏನು ಸಿಗಬೇಕೋ ಅದು ಸಿಕ್ಕಾಗಲೂ ವಿಷಯಾತೀತವಾದ ಆನಂದವನ್ನು ಪಡೆಯಬಹುದು.

ಸಂಗೀತದ ಕಾರ್ಯಕ್ರಮ ನಡೆಸಿಕೊಡುವ ಗಾಯಕ ಅಥವಾ ವಾದಕನಿಗೆ ಅದು ಬದುಕುವ ಮಾರ್ಗವಾದರೆ, ಆ ಸಂಗೀತವನ್ನು ಕೇಳುವ ಪ್ರೋತೃವಿಗೆ ಅದು ಕೇವಲ ಆತ್ಮಾನಂದಕ್ಕೆ ಮಾರ್ಗವಾಗಬೇಕು. ಸಂಗೀತ ಕೇಳುವವನು 'ನಾ ಕೇಳಿದರೆ ಇದರಿಂದ ನನಗೇನು ಲಾಭ' ಎನ್ನಬಾರದು.ಸಂಗೀತವನ್ನು ಕೇಳಿ ಅತ್ಯಮೂಲ್ಯವಾದ ಆತ್ಮಾನಂದವನ್ನು ಪಡೆಯಲಾಗದವನು, ಸಂಗೀತವನ್ನು ಕೇಳಿದರೆ 'ಕೋಣನ ಮುಂದೆ ಕಿನ್ನರಿ ಬಾರಿಸಿದಂತೆ" ಎನ್ನುವಂತಾಗುತ್ತದೆ. ಹಾಗಾಗಿ ಮಾಡುವ ಒಳ್ಳೆಯ ಕಾರ್ಯಗಳನ್ನು ಕೇವಲ ಮಾಡುವುದಕ್ಕೆ ಸೀಮಿತಗೊಳಿಸಿಕೊಂಡಾಗ ಕಣ್ಣಿಗೆ ಕಾಣದ, ಕೇವಲ ಭಾವನೆಗಳಿಗೆ ಎಟುಕುವ ಆನಂದ ನಮ್ಮದಾಗುತ್ತದೆ.

ಜೀವಿಕೆಯಲ್ಲಿ ಮಾಡುವ ಕೆಲಸಕ್ಕೂ ಅದರಿಂದುಂಟಾಗುವ ಫಲಕ್ಕೂ ನೇರ ಸಂಬಂಧವುಂಟು. ಆದರೆ ಭಾವನೆ, ಪ್ರಾರ್ಥನೆ, ಪೂಜೆ ಮತ್ತು ಇತರೆ ಸುಕೃತಗಳಲ್ಲಿ ಆ ಸಂಬಂಧವನ್ನು ಕಲ್ಪಿಸಬಾರದು.ಹಾಗೆ ಕಲ್ಪಿಸಿದರೆ ಅದು ವ್ಯಾಪಾರವಾಗುತ್ತದೆ.ಅದಕ್ಕೆ ಮಾನ್ಯ ಗುಂಡಪ್ಪನವರು "ಅಂಗಡಿಯ ಮಾಡದಿರು ಸುಕೃತಪ್ರಸಕ್ತಿಯಲಿ' ಎಂದರು. ಸಂಗೀತ, ಸಾಹಿತ್ಯ, ನೃತ್ಯ, ಕಲೆ, ಭಕ್ತಿ, ಭಜನೆ, ಸೇವೆಯಂತಹ ಎಲ್ಲ ಕೆಲಸಗಳೂ ಆತ್ಮಾನಂದವನ್ನು ನೀಡಲು ನಮಗೆ ಆ ಪರಮಾತ್ಮ ನೀಡಿರುವ ವರಗಳು, ಅವುಗಳನ್ನು ವ್ಯಾಪಾರೀಕರಣ ಮಾಡದೆ ಆತ್ಮಾನಂದವನ್ನು ಮಾತ್ರ ಪಡೆಯಬೇಕು.ಅಂತಹ ಪ್ರಯತ್ನ ನಮ್ಮಿಂದ ಒಂದು ಸಾಧನೆಯ ರೂಪದಲ್ಲಿ ಆಗಬೇಕು.





**ಮುಕ್ತಕ – 499**

**ದೇವಮಂದಿರ ಭಜನೆ ಪೂಜೆ ಪ್ರಸಾದಗಳು।**
**ಜೀವನದಲಂಕಾರ, ಮನಸಿನುದ್ಧಾರ॥**
**ಭಾವವಂ ಕ್ಷುಲ್ಲ ಜಗದಿಂ ಬಿಡಿಸಿ ಮೇಲೊಯ್ವು-।**
**ದಾವುದಾದೊಡಮೊಳಿತು - ಮಂಕುತಿಮ್ಮ॥**

ಜೀವನದಲಂಕಾರ=ಜೀವನದ+ ಅಲಂಕಾರ, ಮನಸಿನುದ್ಧಾರ=ಮನಸಿನ ಉದ್ಧಾರ,
ಮೇಲೊಯ್ಯುದಾವುದಾದೊಡಮೊಳಿತು=ಮೇಲೆ+ಒಯ್ದುದು+ಅದೊಡಂ +ಒಳಿತು.
ಭಾವಂ=ಮನಸ್ಸನ್ನು, ಕ್ಷುಲ್ಲ=ಅಲ್ಪಕ್ಷಣಿಕ, ಅದೊಡಂ=ಆದರೆ

ದೇವಸ್ಥಾನಕ್ಕೆ ಹೋಗುವುದು, ಭಜನೆ ಮಾಡುವುದು, ಪೂಜೆ, ನೈವೇದ್ಯ, ಪ್ರಸಾದ ಎಲ್ಲವೂ ನಮ್ಮ ಜೀವನಕ್ಕೆ ಒಂದು ಅಲಂಕಾರವಿದ್ದಂತೆ, ಮನಸ್ಸಿನ ಉದ್ದಾರದ ಮಾರ್ಗವಷ್ಟೇ. ಇವೆಲ್ಲವನ್ನೂ ಮಾಡಿ ನಮ್ಮ ಮನಸ್ಸು ಬುದ್ಧಿಗಳನ್ನು

ಈ ಕ್ಷಣಿಕ ಜಗತ್ತಿನ ಅಂಟಿನಿಂದ ಬಿಡಿಸಿಕೊಂಡು ನಮ್ಮ ಭಾವ ಮತ್ತು ಆಲೋಚನೆಗಳಲ್ಲಿ ಒಂದಿಷ್ಟು ಔನ್ನತ್ಯವನ್ನು ಪಡೆದರೆ ಒಳಿತು, ಎಂದು ಉಲ್ಲೇಖ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

"ನಮಗೆ ಸಿಕ್ಕುವ ಎಲ್ಲವೂ ನಮಗಿಂತ ಹಿರಿದಾದ ಒಂದು ಶಕ್ತಿಯಿಂದ ಸಿಗುತ್ತದೆ, ಅದೇ ದೇವರು" ಎಂದು ಮನುಷ್ಯ ಅರಿತುಕೊಂಡ.ಇವನಲ್ಲಿ ಕೃತಜ್ಞತೆಯ ಭಾವ ಮೂಡಿತು. ಅದನ್ನು ಭಕ್ತಿ ಎಂದ. ಆ ಭಾವಕ್ಕೆ ಬೇರೆ ಬೇರೆ ರೂಪಗಳನ್ನು ಕೊಡುತ್ತಾ ಮಂದಿರಗಳನ್ನು ಕಟ್ಟುವುದು, ಮೂರ್ತಿಪೂಜೆ ಮಾಡುವುದು, ಭಜನೆ, ತೀರ್ಥ, ಪ್ರಸಾದ ನೈವೇದ್ಯಗಳನ್ನು ಮತ್ತು ಅವುಗಳನ್ನು ತಿಳಿಸುವ ಸಾವಿರಾರು ವಿಧಿ ವಿಧಾನಗಳನ್ನು ಕಂಡುಕೊಂಡ. ಈ ಭಕ್ತಿ ಭಾವವನ್ನು ವ್ಯಕ್ತಪಡಿಸಲು ಮಂತ್ರ, ತಂತ್ರ, ಸಾಹಿತ್ಯ, ಸಂಗೀತ, ನೃತ್ಯ, ಶಿಲ್ಪ ಮತ್ತು ಚಿತ್ರ ಕಲೆಗಳಂತಹ ಅಯಾಮಗಳನ್ನು ಸೇರಿಸಿಕೊಳ್ಳುತ್ತಾ ಹೋದ. ಇದು ಸಮಾಜದಲ್ಲಿ ಒಂದು ವ್ಯವಸ್ಥೆ, ಜೀವನ ಕ್ರಮ, ಸಂಸ್ಕೃತಿ, ಸಂಸ್ಕಾರ, ಕಲೆ, ಸಾಹಿತ್ಯ ಮುಂತಾದವುಗಳ ಸೃಷ್ಟಿಗೆ ಕಾರಣವಾಗಿ ಸಾಮೂಹಿಕ ವಿಕಾಸಕ್ಕೆ ಕಾರಣವಾಯಿತು

ಇದಕ್ಕೆ ಇನ್ನೊಂದು ಆಯಾಮವನ್ನು ಸೇರಿಸಿಕೊಂಡು, ತಪಸ್ಸು, ಯೋಗ, ಧ್ಯಾನ, ಜಪ, ತಪ ಎಂಬ ವೈಯಕ್ತಿಕ ಸಾಧನಾ ಕ್ರಮಗಳನ್ನು, ತನ್ನ ಮನಸ್ಸನ್ನು ಉದ್ಧರಿಸಿಕೊಳ್ಳುವ ಮಾರ್ಗಗಳನ್ನೂ ಕಂಡುಕೊಂಡ. ಹಾಗಾಗಿ ಈ ದೇವರು ಎನ್ನುವ ಭಾವ ಇವನ ಸಾಮಾಜಿಕ ಮತ್ತು ವೈಯಕ್ತಿಕ ವಿಕಸನಕ್ಕೆ ಕಾರಣವಾಗಿದೆ. ಹೀಗೆ ಎಲ್ಲವೂ 'ಈ ಜಗತ್ತಿನಲ್ಲಿರುವಾಗಿನ ಇವನ ಬದುಕಿಗಾದದ್ದರಿಂದ ಮನುಷ್ಯ, ಬದುಕಿಗೆ ಮತ್ತು ಈ ಜಗತ್ತಿಗೆ ಬಿಡಿಸಲಾಗದ ಅಂಟಿನಿಂದ, ಅಂಟಿಕೊಂಡು ಬಿಟ್ಟಿದ್ದಾನೆ. ಇದನ್ನು ಅವನು ಸಂತೋಷದಿಂದ ತೊರೆಯಲಾದರೆ, ಅದು ನಿಜವಾದ ಸಾಧನೆಯಾಗುತ್ತದೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು. ಮೇಲೆ ಉಲ್ಲೇಖಿಸಿದ ಸಕಲ ಮಾರ್ಗಗಳೂ ಸಹ ಮನುಷ್ಯನನ್ನು ಈ ಜಗತ್ತಿನ ವ್ಯಾಮೋಹದಿಂದ ಬಿಡಿಸಿ ಪರಮಾರ್ಥದೆಡೆಗೆ ನಡೆಸುವ ಮೆಟ್ಟಿಲುಗಳೇ ಹೊರತು ಬೇರೇನೂ ಅಲ್ಲ.

ಇಲ್ಲಿ ಹುಟ್ಟಬೇಕು, ಇವುಗಳನ್ನೆಲ್ಲ ಅನುಭವಿಸಬೇಕು, ಅನುಭವವನ್ನು ಪಡೆಯಬೇಕು. ಆ ಅನುಭವದ ಬಲದಿಂದ, "ನಾ ಅನುಭವಿಸಿದ್ದೆಲ್ಲ ನಶ್ವರವಾದ ವಸ್ತುಗಳು, ಕ್ಷಣಿಕಾನಂದ ನೀಡುವ ವಿಷಯಗಳು, ನಾನು ಇವುಗಳಿಂದ ಬಿಡಿಸಿಕೊಳ್ಳಬೇಕು" ಎಂಬ ಶುದ್ಧ ಜ್ಞಾನ ಮೂಡಿ, ಬಿಡಿಸಿಕೊಳ್ಳಲು ಪ್ರಯತ್ನ ಪಟ್ಟು, ಆ ಪ್ರಯತ್ನ ಮಾನ್ಯ ಗುಂಡಪ್ಪನವರು "ಮೇಲೊಯ್ಯುದಾವುದಾದೊಡಮೊಳಿತು" ಎಂದು ಹೇಳುವಂತೆ ನಾವು ಔನ್ನತ್ಯವನ್ನು ಪಡೆಯಲಾದರೆ ಬದುಕು ಸಾರ್ಥಕವಾಗುತ್ತದೆ.

**ಮುಕ್ತಕ – 500**

**ದೇವನೇನತಿಶಯಿತಮಾನಿಸನೆ ಭೋಗಕ್ಕೆ |**
**ಹೂವುಣಿಸು ಮುಡುಪೊಡವೆಯವನಿಗಂ ಬೇಕೆ ||**
**ಆವುದೊಳ್ಳಿತೊ ತನಗೆ ನರನದನು ಪರಮಂಗೆ |**
**ನೈವೇದಿಸುದು ಸಾಜ – ಮಂಕುತಿಮ್ಮ ||**

ದೇವನೇನತಿಶಯಿತಮಾನಿಸನೆ ದೇವನೇನು+ಅತಿಶಯಿತ+ಮಾನಿಸನೆ, ಹೂವುಣಿಸು=ಹೂವ+ಉಣಿಸು, ಮುಡುಪೊಡವೆಯವನಿಗಂ=ಮುಡುಪ+ಒಡವೆಯು+ಅವನಿಗಂ, ಆವುದೊಳ್ಳಿತೊ=ಆವುದು+ಒಳ್ಳಿತೊ, ನರನದನು=ನರನು+ಅದನು, ಅತಿಶಯಿತ = ಅತಿಶಯದಿಂದ ಕೂಡಿದ,

ನಾವು ಪೂಜೆ ಮಾಡುವ ಆ ದೇವನು ಅತಿಶಯದ ಮನುಷ್ಯನೇನು? ನಾ ಮಾಡುವ ಹೂವಿನಲಂಕಾರ, ಕಟ್ಟಿಡುವ ಮುಡುಪುಗಳು, ನಾ ತೊಡಿಸುವ ಒಡವೆ ವಸ್ತ್ರಗಳು ಅವನಿಗೆ ಬೇಕೆ? ತಮಗೆ ಏನು ಬೇಕೋ, ಯಾವುದು ಹಿತವೋ ಅದನ್ನು ಆ ದೇವನಿಗೆ ಅರ್ಪಿಸುವುದು ಮಾನವನ ಸಹಜ ಗುಣ ಎಂದು ಭಕ್ತಿಯ ಒಂದು ಆಯಾಮವನ್ನು ಇಲ್ಲಿ ವಿಚಾರಕ್ಕೆ ಇಟ್ಟಿದ್ದಾರೆ ನಮಗೆ ಈ ಮುಕ್ತಕದಲ್ಲಿ.

ಆ ದೇವರನ್ನು ಕಣ್ಣಾರೆ ಕಂಡವರಿಲ್ಲ. ಕಾಣಲು ಸಾಧ್ಯವೂ ಇಲ್ಲ. ಏಕೆಂದರೆ ಆ ದೇವನಿಗೆ ರೂಪವೇ ಇಲ್ಲ. ನಮಗೆ ಅವನು ಸುಂದರನಾಗಿ ಕಾಣಬೇಕು ಹಾಗಾಗಿ ಸುಂದರ ರೂಪಗಳ ಮೂರ್ತಿಗಳು,ಅವನು ಸರ್ವ ಶಕ್ತಿ ಹಾಗಾಗಿ 'ಸಹಸ್ರ ಶೀರ್ಷಾ' ಎಂದರು. ತಮಗೆ ಅವನು ಸುಂದರವಾಗಿ ಕಂಡು ನಮ್ಮ ಮನ ತಣಿಯ ಬೇಕು, ಹಾಗಾಗಿ ಸುಂದರವಾದ ಹೂವಿನಲಂಕಾರ. ನಾವು ರುಚಿ ರುಚಿಯಾಗಿ ಏನನ್ನು ತಿನ್ನ ಬಯಸುತ್ತೇವೋ ಅದನ್ನು ಅವನಿಗೆ

ಸಮರ್ಪಿಸಿ ಅದನ್ನು ಪ್ರಸಾದವೆಂದು ಸ್ವೀಕರಿಸುತ್ತೇವೆ. ಬಹುಶಃ ನಾವು ಸಮರ್ಪಿಸಿದ್ದನ್ನೆಲ್ಲಾ ಆ ದೇವರು ತಿಂದುಬಿಟ್ಟಿದ್ದರೆ, ನಾವು ನೈವೇದ್ಯ ಮಾಡುತ್ತಿದ್ದೆವೋ ಇಲ್ಲವೋ, ಯಾರಿಗೆ ಗೊತ್ತು! ಆದರೆ ಇವಾವುದನ್ನೂ ಆ ಪರಮಾತ್ಮ ನನಗೆ ಇದು ಬೇಕು' ಎಂದು ಕೇಳಿದವನಲ್ಲ. ಇವೆಲ್ಲಾ ನಾವು ನಮ್ಮ ಮನಸ್ಸಂತೋಷಕ್ಕೆ ಮಾಡುವ ಕೆಲಸ. ಇನ್ನು ದೀಪ, ಧೂಪ, ಕರ್ಪೂರದ ಹಾರತಿ ಎಲ್ಲವೂ ನಮ್ಮಆನಂದಕ್ಕಾಗಿ ಅನೂಚಾನವಾಗಿ ನಡೆದು ಬಂದ ಸಂಪ್ರದಾಯ, ಸಂಸ್ಕೃತಿಗಳಿಗಾಗಿ ಮಾಡುವುದು ಅಷ್ಟೇ ಅಲ್ಲವೇ?





ನಾವು ಏನೇ ಸಮರ್ಪಿಸಿದರೂ ಅದರ ಹಿಂದೆ ಭಕ್ತಿ ಭಾವ ಮುಖ್ಯ. ಭಕ್ತಿ ಭಾವವಿಲ್ಲದೆ ಏನೇ ಸಮರ್ಪಿಸಿದರೂ ಅದು ನಮ್ಮ ಶುಷ್ಕ ಕರ್ಮವಾಗುತ್ತದೆಯೇ ಹೊರತು, ಅದರಿಂದ ನಿಜವಾದ ಆನಂದ ಸಿಗುವುದಿಲ್ಲ. ಭಕ್ತಿಯಿಂದ ಏನೇ ಸಮರ್ಪಿಸಿದರೂ ಸಾರ್ಥಕ್ಯಭಕ್ತಿಯಿಲ್ಲದೆ ಏನನ್ನೇ ಸಮರ್ಪಿಸಿದರೂ ವ್ಯರ್ಥ.ಈ ವಿಷಯವನ್ನು ದೃಢಪಡಿಸಲು ನಮಗೆ 'ಬೇಡರ ಕಣ್ಣಪ್ಪ, ಸುದಾಮ, ಶಬರಿ, ವಿಧುರ, ಕನಕ, ಪುರಂದರ, ಕಬೀರ, ಮೀರಾ, ಮುಂತಾದವರ ಭಕ್ತಿಯ ಹಲವಾರು ಉದಾಹರಣೆಗಳು ಹೇರಳವಾಗಿ ಸಿಗುತ್ತದೆ.ಶ್ರೀ ಕೃಷ್ಣ "ಪುಷ್ಪಂ ಪಂ ಫಲಂ ತೋಯಂ"ಎಂದು ಹೇಳಿ "ನೀ ಎನಗೆ ಹೂ, ಎಲೆ, ಹಣ್ಣು, ನೀರು" ಹೀಗೆ ಏನನ್ನಾದರೂ ಸಮರ್ಪಿಸು, ನನಗೆ ಪ್ರಿಯವೆ. ಹಾಗೆ ಸಮರ್ಪಿಸುವಾಗ, ಅನನ್ಯವಾಗಿ ಭಕ್ತಿಯನ್ನು ತೋರು" ಎನ್ನುತ್ತಾನೆ.

ನಮಗಿಷ್ಟವಾದದ್ದು. ನಮಗೆ ಪ್ರಿಯವಾದದ್ದು ಅಥವಾ ನಮಗೆ ಸಿಕ್ಕಿದ್ದನ್ನು ಆ ಪರಮಾತ್ಮನಿಗೆ ಅರ್ಪಿಸಬಹುದು. ಆದರೆ ಹಾಗೆ ಅರ್ಪಿಸುವಾಗ ಭಕ್ತಿಯ ಅನನ್ಯ ಭಾವವಿರಬೇಕು.ನಮಗೊಂದು ಬಾಳನ್ನಿತ್ತ ಭಗವಂತನಿಗೆ ಕೃತಜ್ಞತೆ ತೋರುವುದು ಭಕ್ತಿ.ಈ ಜಗತ್ತನ್ನು ಇಷ್ಟು ಸುಂದರವಾಗಿ ಸೃಷ್ಟಿಸಿ ನಮಗೆ ಆನಂದಪಡಲು, ಅವಕಾಶಮಾಡಿಕೊಟ್ಟ ಆ ಪರಮಾತ್ಮನ ಕಲ್ಯಾಣ ಗುಣಗಳನ್ನು ನಿಶ್ಚಲ ಮನಸ್ಸಿನಿಂದ ಹಾಡಿ ಕೊಂಡಾಡುವುದೇ ಭಕ್ತಿ. ಅಂತಹ ಶುದ್ಧ ಭಕ್ತಿ ನಮ್ಮ ಮನದಲ್ಲಿ ಉಂಟಾದರೆ ಅದಕ್ಕಿಂತ ಸೌಭಾಗ್ಯ ಬೇರೆ ಬೇಕೆ?

**ಮುಕ್ತಕ – 501**

**ಯುಕ್ತಿ ಸಾಮ್ರಾಜ್ಯದಲ್ಲಿ ಭಕ್ತಿ, ಬಡ ಪರದೇಶಿ |**
**ಶಕ್ತಿ ಚತುರತೆಯುಡುಗಿ ನೀನು ಸೋತಂದು ||**
**ಉತ್ಕ್ರಮಣದರೆಮನದಿ ದೈವವನು ಪಿಡಿದೇನು? |**
**ಭಕ್ತಿ-ರಕ್ತದಿ ಪರಿಗೆ – ಮಂಕುತಿಮ್ಮ ||**

ಚತುರತೆಯುಡುಗಿ=ಚತುರತೆ+ಉಡುಗಿ, ಉತ್ಕ್ರಮಣದರೆಮನದಿ=ಉತ್ಕ್ರಮಣದಿ+ಅರೆಮನದಿ
ಚತುರತೆ= ಚಾಲಾಕಿತನ, ಉತ್ಕ್ರಮಣ=ಅಂತ್ಯಕಾಲ,

ನಮ್ಮ ಅತಿ ಬುದ್ಧಿವಂತಿಕೆ ಉಪಯೋಗಿಸಿ ನಾವು ನಡೆಸುವ ಜೀವನದಲ್ಲಿ ಹಲವಾರು ಚತುರತೆಗಳನ್ನು ಬಳಸಿ ಬದುಕಬಹುದು. ಹಾಗೆ ಬದುಕುವಾಗ, ದೈವ ಭಕ್ತಿಯನ್ನುವುದು ನಮ್ಮಲ್ಲಿ ಸೊರಗುತ್ತದೆ, ಬಡವಾಗುತ್ತದೆ. ದೇಹದ ಶಕ್ತಿಯು ಅಡಗಿ ನಾವು ಸೊರಗಿದಾಗ 'ನಮ್ಮದೆಲ್ಲ ಮುಗಿಯಿತು, ಹೇ ಪರಮಾತ್ಮ ನೀನೆ ಗತಿ' ಎಂದು ಸಾಯುವ ಸಮಯದಲ್ಲಿ ಭಕ್ತಿ ತೋರಿದರೆ ಏನೂ ಪ್ರಯೋಜನವಿಲ್ಲ. ಭಕ್ತಿಯನ್ನುವುದು ನಮ್ಮ ದೇಹದಲ್ಲಿ ರಕ್ತ ಹರಿದಂತೆ ನಮ್ಮ ಮನಸ್ಸಿನಲ್ಲಿ ಸದಾಕಾಲ ಪ್ರಹಿಸುತ್ತಿರಬೇಕು ಎಂದು, ಭಕ್ತಿ ನಮ್ಮಲ್ಲಿ ಹೇಗಿರಬೇಕು ಎನ್ನುವುದನ್ನು ಪ್ರಸ್ತಾಪಿಸಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

“ಸಂಕಟ ಬಂದಾಗ ವೆಂಕಟರಮಣ" ಎನ್ನುವಂತಾಗದೆ, 'ಸದಾ ಎನ್ನ ಹೃದಯದಲ್ಲಿ ವಾಸಮಾಡು ಶ್ರೀ ಹರಿ” ಎಂದು ದಾಸರು ಹೇಳುವಂತೆ ನಮ್ಮಲ್ಲಿ ಆ ಭಕ್ತಿಯೆನ್ನುವುದು, ಸದಾ ಪ್ರವಹಿಸುವ ವಾಹಿನಿಯಾಗಬೇಕು. ತಿರುವನಂತಪುರದ ರಾಜ 'ಕುಲಶೇಖರರು' ತಮ್ಮ ಮುಕುಂದ ಮಾಲ ಸ್ತೋತ್ರದಲ್ಲಿ 'ಪ್ರಾಣಾವಸಾನ ಸಮಯೇ ಕಫವಾತಪಿತ್ತೈ: ಕಂಠಾವರೋದನವಿದೌ ಸ್ಮರಣಂ ಕುತಸ್ತೇ ಎನ್ನುತ್ತಾರೆ” ಎನ್ನುತ್ತರೆ. ಅರ್ಥಾತ್ ಪ್ರಾಣ ಹೋಗುವ ಸಮಯ ಬಂದಾಗ ಕಫ, ವಾತ ಮತ್ತು ಪಿತ್ತಗಳು ಹೆಚ್ಚಾಗಿ ಬಾಯಿಂದ ಮಾತು ಹೊರಡದೆ, ದೇಹ ನೋವನ್ನು ಅನುಭವಿಸುವಾಗ, 'ನಾರಾಯಣಾ ಗೋವಿಂದ' ಎನ್ನುವುದಕ್ಕಾಗುತ್ತದೆಯೇ? ಎನ್ನುತ್ತಾ ಅದಕ್ಕಾಗಿ 'ಅದ್ಯೈವ ಮೇ ವಿಷತು ಮಾನಸ ರಾಜ ಹಂಸಃ' ಎನ್ನುತ್ತಾರೆ ಈಗಲೇ ಬಂದು ನನ್ನ ಮನಸ್ಸಿನಲ್ಲಿ ಕೂರು, ಹೇ ಪರಮಾತ್ಮ ಎನ್ನುತ್ತಾರೆ.

ಸಾಮಾನ್ಯವಾಗಿ ನಮಗೆ ಅನುಕೂಲಗಳು ಹೆಚ್ಚಾದಾಗ ಅವುಗಳನ್ನು ಅನುಭವಿಸುವ ಭರದಲ್ಲಿ ಅವುಗಳನ್ನು ನಮಗೆ ನೀಡಿದ ಆ ಪರಮಾತ್ಮನನ್ನು ಮರೆತೇ ಹೋಗುತ್ತೇವೆ. ಇದು ಸಹಜವಾದ ಮನುಷ್ಯನ ಸ್ವಭಾವ. ಇದನ್ನೇ ಮಾನ್ಯ ಗುಂಡಪ್ಪನವರು 'ಯುಕ್ತಿ ಸಾಮ್ರಾಜ್ಯದಲಿ ಭಕ್ತಿ, ಬಡ ಪರದೇಶಿ' ಎಂದು, ಭಕ್ತಿ ಆಗ ಸೊರಗುತ್ತದೆ ಎಂದರು. ಅದು ಹಾಗಾಗದೆ, ಕಷ್ಟವಿರಲಿ, ಸುಖವಿರಲಿ ಭಕ್ತಿ ನಮ್ಮ ಮೂಲ ಗುಣವಾಗಿರಬೇಕು.ನಮಗೆ ಎಲ್ಲವನ್ನೂ ಕೊಟ್ಟ ಆ ಪರಮಶಕ್ತಿಗೆ ಕೃತಜ್ಞತೆಯನ್ನು ತೋರುವ ಭಕ್ತಿ ಸದಾಕಾಲ ನಮ್ಮಲ್ಲಿರಬೇಕು. 'ಕುಲಶೇಖರರು' ಅನಂತ ವೈಕುಂಠ ಮುಕುಂದ ಕೃಷ್ಣ ಗೋವಿಂದ ದಾಮೋದರ ಮಾಧವೇತಿ, ವಕ್ತುಂ ಸಮರ್ಥೋಪಿ ನ ವಕ್ತಿ ಕಶ್ಚಿತ್, ಅಹೋ ಜನಾನಾನ್ ವ್ಯಸನಾಭಿಮುಖ್ಯಂ' ಎನ್ನುತ್ತಾರೆ 'ಭಗವನ್ನಾಮ ಸ್ಮರಣೆಯನ್ನು ಮಾಡಲು ಸಾಮರ್ಥ್ಯವಿದ್ದರೂ ವ್ಯಸನಗಳಿಗೆ ದಾಸರಾಗಿ ಆ ಪರಮಾತ್ಮನ ನಾಮಸ್ಮರಣೆಯನ್ನು ಮಾಡುವುದಿಲ್ಲವಲ್ಲ' ಎಂಬ ಅರ್ಥದಲ್ಲಿ

ನಮ್ಮ ಎಲ್ಲ ಯೋಚನೆಗಳು, ಕೆಲಸಗಳು ಎಲ್ಲವೂ ನಾವಿರುವುದರಿಂದ ಮಾತ್ರ ಸಾಧ್ಯ, ಆದರೆ ನಾವಿರುವುದು ಆ ಪರಮ ಶಕ್ತಿಯ ಕೃಪೆಯಿಂದ. ಹಾಗಾಗಿ ನಾವು ತೋರಬೇಕಾದ ಕೃತಜ್ಞತಾ ಭಾವವೇ ಭಕ್ತಿಯಾಗಿ ನಮ್ಮಲ್ಲಿ ಸದಾಕಾಲ ಇರಬೇಕು ಎನ್ನುವುದೇ ಈ ಮುಕ್ತಕದ ಆಶಯ. ನಮ್ಮ ಅನುಕೂಲಕ್ಕೆ ತಕ್ಕಂತೆ ನಮ್ಮ ಅವಶ್ಯಕತೆಗೆ ತಕ್ಕಂತ ನಮ್ಮ ಭಕ್ತಿಯ ಪ್ರಮಾಣ ಬದಲಾಗುತ್ತಾ ಹೋದರೆ, ಅದು ಭಕ್ತಿಯಾಗದೆ ಕೇವಲ ವ್ಯಾಪಾರವಾಗುತ್ತದೆ.ಅದು ತಪ್ಪು. ಆ ಪರಮಾತ್ಮನಲ್ಲಿ ನಿಶ್ಚಲವಾದ ನಿರಂತರವಾದ ಭಕ್ತಿ ನಮ್ಮಲ್ಲಿ ಸದಾಕಾಲ ಇರಲಿ ಎನ್ನುವ ಆಶಯವನ್ನು ಇಟ್ಟುಕೊಳ್ಳೋಣ

**ಮುಕ್ತಕ – 502**

**ಸೃಷ್ಟಿಯದ್ಭುತ ಶಕ್ತಿಯುಳ್ಳೋರ್ವನಿರಲು ನ-।**
**ಮಿಷ್ಟಗಳನರಿತು ನೀಡುವುದವನಿಗರಿದೇಂ? ||**
**ಇಷ್ಟವಾತನೊಳುದಿಸುವಂತೆ ಚೋದಿಪುದೆಂತು? ।**
**ಕಷ್ಟ ನಮಗಿಹುದಷ್ಟೆ - ಮಂಕುತಿಮ್ಮ ||**





ಸೃಷ್ಟಿಯದ್ಭುತಶಕ್ತಿಯುಳ್ಳೋರ್ವನಿರಲು=ಸೃಷ್ಟಿಯ+ಅದ್ಭುತ+ಶಕ್ತಿ+ಉಳ್ಳವನು+ಓರ್ವನು+ಇರಲು,
ನಮ್ಮಿಷ್ಟಗಳನರಿತು= ನಮ್ಮ+ಇಷ್ಟಗಳನು+ಅರಿತು, ನೀಡುವುದವನಿಗರಿದೇಂ = ನೀಡುವುದು+ಅವನಿಗೆ+ಅರಿದೇಂ,
ಇಷ್ಟವಾತನೊಳುದಿಸುವಂತೆ=ಇಷ್ಟವು+ಆತನೊಳು+ಉದಿಸುವಂತೆ, ಚೋದಿಪುದೆಂತು=ಚೋದಿಪುದು+ಎಂತು
ನಮಗಿಹುದಷ್ಟೆ=ನಮಗೆ+ಇಹುದಷ್ಟೆ.
ಚೋದಿಸುದು=ಪ್ರಚೋದನೆ ಮಾಡುವುದು.

ಬೃಹತ್ತಾದ ಈ ಜಗತ್ತಿನಲ್ಲಿ ನಾವು ಒಂದು ಧೂಳ ಕಣದ ಲಕ್ಷದ ಒಂದು ಭಾಗವೂ ಅಲ್ಲ, ಆದರೆ ಅವನೋ, ಪರಮಾತ್ಮ, ಸೃಷ್ಟಿಯನ್ನೇ ಮಾಡುವ ಶಕ್ತಿಯುಳ್ಳವನು ಮತ್ತು ಬ್ರಹ್ಮಾಂಡಕ್ಕಿಂತ ಹಿರಿದಾದವನು. ಹಾಗಿರುವಾಗ ನಮ್ಮನ್ನು ಸೃಷ್ಟಿಸಿದ ಅವನಿಗೆ ನಮ್ಮ ಅವಶ್ಯಕತೆಗಳು ಮತ್ತು ನಮ್ಮ ಇಷ್ಟಗಳನ್ನು ಅರಿತುಕೊಂಡು ಎಲ್ಲವನ್ನೂ ನೀಡಲು ಗೊತ್ತಿಲ್ಲವೇನು? ಆದರೆ ಹಾಗೆ ನಮಗೆ ನೀಡುವ ಇಷ್ಟವನ್ನು ಅವನಲ್ಲಿ ಉಂಟಾಗುವಂತೆ ಮಾಡುವುದೇ ನಮಗಿರುವ ಕಷ್ಟ ಎಂದು ನಮ್ಮ ಪ್ರಾರ್ಥನೆ ಪೂಜೆಗಳ ಫಲ ಸ್ವರೂಪವನ್ನು ವಿಶ್ಲೇಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜಗತ್ಸೃಷ್ಟಿಯಲ್ಲಿರುವುದೆಲ್ಲವನ್ನೂ ಸೃಜಿಸುವ ಶಕ್ತಿಯಿರುವುದು ಆ ಪರಮಾತ್ಮನಿಗೆ ಮಾತ್ರಮಿಕ್ಕೆಲ್ಲರೂ ಅದನ್ನು ಅನುಭವಿಸುವುದಕ್ಕಾಗಿಯೇ ಸೃಷ್ಟಿಸಲ್ಪಟ್ಟವರು.ಬೆಳಕು, ಗಾಳಿ, ನೀರು, ಭೂಮಿ ಮತ್ತು ಇವೆಲ್ಲವುಗಳ ಸಮ್ಮಿಲನದಿಂದಾಗುವ ಮರುಸೃಷ್ಟಿ ಎಲ್ಲವನ್ನೂ ಕಾಲಕಾಲಕ್ಕೆ ನಡೆಸುತ್ತಿರುವುದೇ ಆ ಪರಮ ಶಕ್ತಿ. ಹಾಗಾಗಿ ಸಕಲ ಚರಾಚರಗಳಲ್ಲಿ ಯಾರಿಗೆ, ಏನು, ಯಾವ ಹೊತ್ತಿಗೆ ಬೇಕು, ಎನ್ನುವುದು ಆ ಶಕ್ತಿಗೆ ತಿಳಿದಿರುತ್ತದೆ. ಸಾಮೂಹಿಕ ಅವಶ್ಯಕತೆಗಳನ್ನು, ಉದಾಃ ಗಾಳಿ ಬೆಳಕು, ನೀರು, ನಾವು ಕೇಳದೆಯೇ ನಮಗೆ ಸಿಗುತ್ತವೆ. ಇವುಗಳನ್ನು ನಾವು ಬೇಡುವುದೂ ಇಲ್ಲ, ನಮ್ಮ ವಿಚಾರವೇನಿದ್ದರೂ ನಮ್ಮ ವೈಯಕ್ತಿಕ ಅವಶ್ಯಕತೆಗಳನ್ನು ಕುರಿತೇ ಆಗಿರುತ್ತದೆ. ಈ ನಮ್ಮ ವೈಯಕ್ತಿಕ ಅವಶ್ಯಕತೆಗಳ ಪೂರೈಕೆಗಾಗಿ ನಾವು ಆ ಪರಮಾತ್ಮನಲ್ಲಿ ಮೊರೆಯಿಟ್ಟು, ಪೂಜೆ, ಜಪ, ತಪ, ಹೋಮ ಹವನ ಮುಂತಾದವುಗಳನ್ನು ಮಾಡುತ್ತೇವೆ. ಆ ಪರಮಾತ್ಮನನ್ನು ನಮ್ಮ ಬೇಡಿಕೆಗಳನ್ನು ತೀರಿಸಲು ಪ್ರಚೋದಿಸುತ್ತೇವೆ. ಆದರೆ ಕಷ್ಟವಿರುವುದೇ ಇಲ್ಲಿ.

ನಮಗೆ ನಮ್ಮಪೂರ್ವ ಕರ್ಮದ ಅರಿವಿಲ್ಲ, ಹಾಗಾಗಿ ನಾವು ಏನೆಲ್ಲ ಪಡೆಯುವ ಕರ್ಮವನ್ನು ಹೊತ್ತು ಬಂದಿದ್ದೇವೆ ಎಂದು ನಮಗೆ ಗೊತ್ತಿಲ್ಲ. ಎರಡು ನಮಗೆ 'ಏನು ಬೇಕು' ಎನ್ನುವ ಸ್ಪಷ್ಟ ಕಲ್ಪನೆ ನಮಗೆ ಇಲ್ಲ. ಮೂರನೆಯದಾಗಿ ನಮಗೆ ಒಳಿತಾವುದು ಕೆಡುಕಾವುದು ಎಂಬುದೂ ನಮಗೆ ಗೊತ್ತಿಲ್ಲ. ಹಾಗಾಗಿ ಏನೇನನ್ನೋ ಬೇಡುತ್ತೇವೆ. ನಾವು ಬೇಡಿದ್ದೆಲ್ಲ ನಮಗೆ ಸಿಕ್ಕರೆ ನಮ್ಮನ್ನು ಹಿಡಿಯುವರಾರು । ನಾವು ಬೇಡುವ ಮತ್ತು ನಮಗೆ ಸಿಗುವುದರಲ್ಲಿ ಬಹಳ ಅಂತರ, ಹಾಗಾಗಿ ನಾವು ದುಃಖಿಗಳು.ಇದೊಂದು ವಿಷಮ ಸ್ಥಿತಿ,

ನಾವು ಬೇಡದಿದ್ದರೆ ನಮಗೆ ಯಾವುದು ಸೂಕ್ತವೋ ಮತ್ತು ಹಿತವೊ ನಮಗೆ ಸಿಗುತ್ತದೆ, ಬೇಡಿದರೆ,

ಬೇಡಿದ್ದು ಸಿಗಬಹುದು, ಆದರೆ ಬೇಡಿ ಪಡೆದುಕೊಂಡದ್ದರಿಂದ ಬರುವ ಕಷ್ಟ ಸುಖಗಳನ್ನು ನಾವೇ ಅನುಭವಿಸಬೇಕು. ಹಾಗಾಗಿ ಬೇಡಬಾರದು. ನಮ್ಮ ಪೂಜೆಯ ಮೂಲಕ ನಮ್ಮನ್ನು, ನಾವು ಮಾನಸಿಕವಾಗಿ ಆ ಪರಮ ಶಕ್ತಿಗೆ ಸಮರ್ಪಿಸಿಕೊಳ್ಳಬೇಕು, ಶರಣಾಗಬೇಕು. ಆಗ ನಮಗೆ ಯಾವುದು ಸರಿಯಾದದ್ದೋ ಅದು ನಮಗೆ ಸಿಗುತ್ತದೆ. ಸಿಕ್ಕದ್ದನ್ನು, ಆ ಪರಮಾತ್ಮನ ಪ್ರಸಾದವೆಂದು ಸ್ವೀಕರಿಸಿ ತೃಪ್ತಿಯ ಮನೋಭಾವ ಬೆಳೆಸಿಕೊಂಡಲ್ಲಿ 'ಆನಂದದಿಂದ ಇರಬಹುದು. ಅಪೇಕ್ಷೆಯಿಲ್ಲದೆ ಪೂಜೆಮಾಡುವ, ಶರಣಾಗುವ ಸ್ವಭಾವವನ್ನು ಬೆಳೆಸಿಕೊಳ್ಳುವುದೇ ಸಾಧನೆ. ಅದೊಂದು ಮುಕ್ತ ಸ್ಥಿತಿ.ಅಂತಹ ಸ್ಥಿತಿಯನ್ನು ತಲುಪಲು ನಾವೂ ಪ್ರಯತ್ನ ಪಡಬಹುದು. ಪ್ರಯತ್ನದಿಂದ ಖಂಡಿತ ಸಾಧಿಸಬಹುದು

**ಮುಕ್ತಕ – 503**

**ಜೀವಸತ್ವದಪಾರಭಂಡಾರವೊಂದಿಹುದು |**
**ಸಾವಕಾರನದೃಷ್ಟನ್ ಅದನಾಳುತಿಹನು ||**
**ಆವಶ್ಯಕದ ಕಡವನವನೀವುದುಂಟಂತೆ |**
**ನಾವೊಲಿಪುದೆಂತವನ? – ಮಂಕುತಿಮ್ಮ ||**

ಜೀವಸತ್ವದಪಾರಭಂಡಾರವೊಂದಿಹುದು =ಜೀವಸತ್ವದ+ ಅಪಾರ+ಭಂಡಾರ+ಒಂದು+ಇಹುದು,
ಸಾವಕಾರನದೃಷ್ಟನ್=ಸಾವಕಾರನ್+ಅದೃಷ್ಟನ್, ಅದನಾಳುತಿಹನು=ಅದನು+ಆಳುತಿಹನು,
ಕಡವನವನೀವುದುಂಟಂತೆ= ಕಡವನು+ಅವನು+ಈವುದು+ಉಂಟಂತೆ,
ನಾವೊಲಿಪುದೆಂತವನ=ನಾವು+ಒಲಿಪುದು+ಎಂತು+ಅವನ ಜೀವಸತ್ವ=ಚೇತನಾ ಶಕ್ತಿ,
ಭಂಡಾರ=ಶೇಕರಣೆ, ಅದೃಷ್ಟನ್=ಕಾಣದವನು, ಕಡವನು =ಸಾಲವನು, ಒಲಿಪುದು=ಒಲಿಸುವುದು.

ಜಗತ್ತಿನ ಸಮಸ್ತ ಜೀವಕೋಟಿಗೆ ಏನೇನು ಬೇಕೋ ಅವೆಲ್ಲವೂ ಒಳಗೊಂಡಂತೆ ಈ ಜಗತ್ತು ಸತ್ವಭರಿತವಾಗಿದೆ. ಈ ಸತ್ವಕ್ಕೆಲ್ಲ ಒಡೆಯ, ಅಧಿಪತಿ ಆ ಪರಮಾತ್ಮ, ನಾವು ಕೇಳಿ ಬಯಸಿದ್ದನ್ನು ಕೊಡಲು ಅವನಿಗೆ ಸಾಧ್ಯವಿದೆ. ಆದರೆ ಅವನಿಂದ ನಮಗೆ ಬೇಕಾದ್ದನ್ನು ಪಡೆಯಲು, ಅವನನ್ನು ಒಲಿಸುವುದು ಹೇಗೆ ಎನ್ನುವುದೇ ನಮ್ಮ ಪ್ರಶ್ನೆ ಎಂದು, ಒಂದು ಗಹನವಾದ ವಿಚಾರವನ್ನು ಮಂಡಿಸಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ನಾವು ಪಡೆಯುವುದೆಲ್ಲವೂ ಆ ಪರಮಾತ್ಮನ ಕೃಪೆಯಿಂದಲೇ. ಆದರೆ ಮಾನುಷಹಂಕಾರದಿಂದ 'ನಾವು ಪಡೆದೆವು' ಎಂದುಕೊಳ್ಳುತ್ತೇವೆ. ಆದರೆ ನಾವು ಬಯಸಿದ್ದನ್ನು ನಮ್ಮ ಪ್ರಯತ್ನದಿಂದಲೇ ಪಡೆಯಲಾಗದಿದ್ದರೆ, ಆ ಪರಮಾತ್ಮನಲ್ಲಿ ಮೊರೆಯಿಡುತ್ತೇವೆ. ನಮಗೆ ನಾವು ಬಯಸಿದ್ದು ಸಿಗದಿದ್ದಾಗ ಇದು ನಮ್ಮ ವಿಧಿಯಲ್ಲಿಲ್ಲ' ಎಂದು ಬಿಟ್ಟು ಬಿಡದೆ ಮತ್ತೆ ಮತ್ತೆ ಬೇಡುತ್ತೇವೆ, ಹರಕೆ ಹೊರುತ್ತೇವೆ, ಮುಡಿಪುಗಳ ಕಟ್ಟಿಸುತ್ತೇವೆ, ಪೂಜೆ





ಪುನಸ್ಕಾರಗಳನ್ನು ಮಾಡಿಸುತ್ತೇವೆ, ಅಲ್ಲವೇ? ಆಸೆ ಕೈಗೂಡಿದರೆ ಪರಮಾತ್ಮನ ಕೃಪೆಯಿಂದ ಸಿಕ್ಕಿತು ಎಂದೂ ಮತ್ತು ನಾನು ಇವುಗಳನೆಲ್ಲ ಮಾಡಿದ್ದಕ್ಕೆ ಪರಮಾತ್ಮನ ಕೃಪೆಯಾಯಿತು ಎಂದೂ ಅಂದುಕೊಳ್ಳುತ್ತೇವೆ. ಇಲ್ಲದಿದರೆ 'ದೈವೇಚ್ಛೆ' ಎಂದು ಸುಮ್ಮನಾಗುತ್ತೇವೆ ಮತ್ತು ನಮ್ಮ ಹಣೆಬರಹವೇ ಇಷ್ಟು ಎಂದು ನಮ್ಮನ್ನು ನಾವೇ ಹಳಿದುಕೊಳ್ಳುತ್ತೇವೆ. ಇದು ಮಾನವರ ಸಹಜ ಪ್ರವೃತ್ತಿ.

ನಾವು ಪಡೆಯುವುದೆಲ್ಲವೂ ಆ ಪರಮಾತ್ಮನ ಭಂಡಾರದಿಂದಲೇ, ಆದರೆ ಪಡೆಯುವ ಅರ್ಹತೆ ಅಥವಾ ಯೋಗ್ಯತೆ ನಮ್ಮ ಮೇಲೆ ನಿರ್ಭರವಾಗಿರುತ್ತದೆ. ಈ ಮುಕ್ತಕದಲ್ಲಿ 'ನಾವೊಲಿಪುದೆಂತವನ' ಎಂದು ನಾವು ಅವನನ್ನು ಒಲಿಸಿಕೊಳ್ಳುವುದು ಹೇಗೆ ಎನ್ನುತ್ತಾರೆ, ನಮ್ಮ ಪೂರ್ವಕರ್ಮದನುಸಾರ ನಮಗೆ ಹಿತವೊ, ಅಹಿತವೋ ನಮಗೊಂದಿಷ್ಟು ಸಿಗಬೇಕು. ಆ ಪರಮಾತ್ಮನಿಂದ ಪಡೆಯಲು ನಾವು ಯೋಗ್ಯತೆಯನ್ನು ಪ್ರಸ್ತುತ ಸಾಧನೆಯಿಂದ ಬೆಳೆಸಿಕೊಳ್ಳಬೇಕು. "ನಾನು ಮಾಡುತ್ತಿದ್ದೇನೆ ಅಥವಾ ನಾನೇ ಮಾಡುತ್ತೇನೆ" ಎನ್ನುವ ಅಹಂಕಾರದ ಭಾವ ಬಿಟ್ಟು ನಮ್ಮ ಪೂರ್ವ ಕರ್ಮ ಮತ್ತು ಪ್ರಸ್ತುತ ಕರ್ಮ ಎರಡನ್ನೂ ಆ ಪರಮಾತ್ಮನ ಪಾದಗಳಿಗೆ ಅರ್ಪಿಸಿ "ನೀನೇ ಶರಣು" ಎಂದಾಗ ಮನಸ್ಸು ತಿಳಿಯಾಗುತ್ತದೆ. ಅಪೇಕ್ಷೆ ರಹಿತವಾದ ಮನಸ್ಸು ಬಂದದ್ದನ್ನು ಸ್ವೀಕರಿಸಿ ಶಾಂತವಾಗಿ ಅನುಭವಿಸುತ್ತದೆ.ಆಗ ನಮಗೆ ಸಿಕ್ಕದೆಲ್ಲ ಹಿತವಾಗೇ ಇರುತ್ತದೆ. (ಮುಕ್ತಕ 158 ನೋಡಿ)

ಆದ್ದರಿಂದ ಬೇಡಿದ್ದನ್ನೆಲ್ಲ ಕೊಡುವ ಆ ಪರಮಾತ್ಮನಲ್ಲಿ ಬೇಡಿ ಪಡೆದದ್ದರಿಂದ ಬರುವ ಸುಖ, ಹಿತಕ್ಕಿಂತ, ನಮ್ಮ ಸಮಸ್ತವನ್ನೂ ಅವನಿಗೆ ಸಮರ್ಪಿಸಿ, ಬೇಡದೆ ಬಂದದ್ದೆಲ್ಲ ಅವನ ಪ್ರಸಾದವೆಂದು ಸ್ವೀಕರಿಸಿದಾಗ ಸಿಗುವ ಸುಖ, ಹಿತ ಮತ್ತು ಆನಂದ ಹೆಚ್ಚು ನೆಮ್ಮದಿಯನ್ನು ನೀಡುತ್ತದೆ.ನಮ್ಮ ಕರ್ತವ್ಯವನ್ನು ಮಾಡಬೇಕು.ಪರಮಾತ್ಮನಲ್ಲಿ ಅಚಲವಾದ ಭಕ್ತಿ ಮತ್ತು ನಂಬಿಕೆಯಿರಬೇಕು.ಹಾಗಾದಾಗ ಅವನನ್ನು ಒಲಿಸುವುದೂ ಸುಲಭ ಮತ್ತು ಅವನಿಂದ ಪಡೆದು ಅನಂದಪಡುವುದೂ ಸುಲಭ.

**ಮುಕ್ತಕ – 504**

**ಗಗನ ಬಿಸಿಗವಸಾಗಿ, ಕೆರೆಗಳಾವಿಗೆಯಾಗಿ |**
**ಜಗದುಸಿರೆ ಹೊಗೆಯಾಗಿ ಧಗಧಗಿಸುವಂದು ||**
**ಒಗೆದೆತ್ತಣಿನೊ ರಾತ್ರಿಯಲ್ಲಿ ಧರೆಗೆ ತಂಪೆರೆವ |**
**ಮುಗಿಲವೊಲು ದೈವಕೃಪೆ – ಮಂಕುತಿಮ್ಮ ||**

ಬಿಸಿಗವಸಾಗಿ=ಬಿಸಿಗವಸು+ಆಗಿ, ಕೆರೆಗಳಾವಿಗೆಯಾಗಿ= ಕೆರೆಗಳು+ಆವಿಗೆ+ಆಗಿ,

ಜಗದುಸಿರೆ=ಜಗದ+ಉಸಿರೆ, ಧಗಧಗಿಸುವಂದು ಧಗಧಗಿಸುವ+ಅಂದು,

ಒಗೆದೆತ್ತಣಿನೋ=ಒಗೆದು+ಎತ್ತಣಿನೊ, ತಂಪೆರೆವ+ತಂಪ+ಎರೆವ, ಮುಗಿಲವೊಲು=ಮುಗಿಲ+ಒಲು

ಗವಸು=ಮುಸುಕು, ಹೊದಿಕೆ, ಆವಿಗೆ=ಒಲೆ, ಒಗೆದು=ಹುಟ್ಟಿ, ಎತ್ತಣಿನೊ=ಎಲ್ಲಿಂದಲೋ, ಒಲು=ಹಾಗೆ

ಗಗನವು ಸೂರ್ಯನ ಪ್ರತಾಪದಿಂದ ಶಾಖ ಹೆಚ್ಚಾಗಿ ಇಡೀ ಧರೆಗೆ ಒಂದು ಬಿಸಿಯ ಹೊದಿಕೆಯಂತಾಗಿ, ಭೂಮಿಯ ಮೇಲಿನ ಎಲ್ಲಾ ಕೆರೆಗಳು ಆ ಶಾಖದಿಂದ ಒಲೆಗಳಂತಾಗಿ ನೀರೆಲ್ಲ ಬತ್ತಿ, ಜಗತ್ತಿನ ಉಸಿರೆಲ್ಲ ಹೊಗೆಯಂತೆ ಧಗಧಗಿಸುವಾಗ, ರಾತ್ರಿಯಲ್ಲಿ ಎಲ್ಲಿಂದಲೋ ಮೋಡಗಳೆಲ್ಲ ಒಂದುಗೂಡಿ ಧರೆಯನ್ನು ತಂಪಾಗಿಸಲು ಮಳೆಯ ಸುರಿಸುವಂತೆ, ಕಷ್ಟಗಳ ಸರಮಾಲೆಗಳಲ್ಲಿ ಸಿಕ್ಕು, ನಮಗೆ ಜೀವನವು ದುರ್ಭರವಾಗಿ, ಬದುಕಿನಲ್ಲಿ ತಾಪ ಹೆಚ್ಚಾಗಿ, ಅನ್ಯ ದಾರಿಯಿಲ್ಲದೆ ಕಂಗಾಲಾಗಿ ನಾವು ನಿಂತಾಗ, ನಮಗೆ ಆ ದೈವದ ಕೃಪೆ ಬರುತ್ತದೆ ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಸೂರ್ಯನ ಶಾಖದಿಂದ ಭೂಮಿಯ ಶಾಖ ಹೆಚ್ಚಾಗಿ ಧರೆಯ ಮೇಲಿನ ನೀರು ಆವಿಯಾಗಿ, ಮೇಲೇರಿ ಮೋಡವಾಗಿ, ಆ ಮೋಡವು ತನ್ನ ಭಾರವನ್ನು ಹೆಚ್ಚಿಸಿಕೊಂಡು, ಭಾರ ತಡೆಯಲಾರದೆ ಧರೆಗೆ ಮಳೆಯಾಗಿ ಇಳಿಯುತ್ತದೆ, ಅಂದರೆ ಗಗನದಿಂದ ಮಳೆ ಇಳೆಗೆ ಬರಬೇಕಾದರೆ ಒಂದು ಪೂರ್ವಭಾವಿ ತಯಾರಿ ನಡೆಯುತ್ತದೆಯಲ್ಲವೇ? ಹಾಗೆಯೇ ನಮಗೆ ಆ ದೈವ ಕೃಪೆ ಸಿಗಬೇಕಾದರೆ ನಮ್ಮ ಬದುಕಿನಲ್ಲೂ ಒಂದು ತಯಾರಿ ನಡೆಯಬೇಕು. ಇಂದ್ರಿಯಾವೃತವಾದ ದೇಹವನ್ನು ಹೊತ್ತು, ಜಗದ ಆಕರ್ಷಣೆಗಳಿಗೆ ಸಿಕ್ಕು "ಸುಖವೆಂಬ ಕಷ್ಟಗಳನ್ನು" ಅನುಭವಿಸಿ, ಆ ಕಷ್ಟಗಳ ತಾಪ ಅಧಿಕವಾಗಿ, 'ಅಹಂ' ಕಾರದಿಂದ ಸುಖ ಸಂತೋಷಗಳನ್ನು ಪಡೆಯಲು ಮತ್ತೆ ಮತ್ತೆ ಪ್ರಯತ್ನಪಟ್ಟು ಅದು ಸಿಗದೇ, ಬೇಸತ್ತು ಸುಸ್ತಾಗಿ ಬಳಲಿ ಬೆಂಡಾಗಿ 'ಹೇ ಪರಮಾತ್ಮ ನೀನೇ ಗತಿ' ಎಂದುಕೊಂಡಾಗ ನಮಗೆ 'ದೈವ ಕೃಪೆ' ಲಭಿಸಬಹುದು

ಜಗತ್ತಿನ ಸುಖಗಳೆಲ್ಲವೂ ಅಶಾಶ್ವತ, ಕ್ಷಣಿಕ ಮತ್ತು ಸಂಪೂರ್ಣ ತೃಪ್ತಿಯನ್ನು ನೀಡಲಾಗದವು ಎಂದು ಅರಿವು ಮೂಡಿದರೆ ಮನಸ್ಸು ಆ ದೈವದ ಕಡೆ ತಿರುಗೀತು. ಆದರೆ ಆ ಅರಿವು ಮೂಡುವುದು ಎಂದು? ಆ ಅರಿವು ಮೂಡಲು ಎಷ್ಟು ಕಷ್ಟಗಳನ್ನು ಅನುಭವಿಸಬೇಕು? ಯಾವ ಸಮಯದಲ್ಲಿ ಯಾವ ವಯಸ್ಸಿನಲ್ಲಿ ಮೂಡುತ್ತದೆ?, ಎನ್ನುವ ಪ್ರಶ್ನೆಗಳಿಗೆ ಸ್ಪಷ್ಟ ಉತ್ತರ ಸಿಗುವುದಿಲ್ಲ. ಇದು ದೈವ ರಹಸ್ಯ.

ಸೂರ್ಯನ ಶಾಖದಿಂದ ಕಾದ ನೀರು ಹೇಗೆ ಆವಿಯಾಗಿ ಮೇಲೇರಿ, ಮೋಡದ ಮೂಲಕ ಮಳೆಯಾಗಿ ಹೇಗೆ ಧರೆಗೆ ಇಳಿಯುತ್ತದೋ, ಹಾಗೆಯೇ ಸಂಸಾರದಲ್ಲಿ ಅನುಭವಗಳನ್ನು ಪಡೆದು, ಪರದಾಡಿ ತಾಪತ್ರಯಗಳನ್ನು ಅನುಭವಿಸಿದ ಮಾನವರೂ ಸಹ, ಸಾಂಸಾರಿಕ ಬಂಧನಗಳನ್ನು ಬಿಟ್ಟು ಮನಸ್ಸನ್ನು ಪರಮಾತ್ಮನೆಡೆಗೆ ತಿರುಗಿಸಿ,

ಶರಣಾಗಿ, ಶುದ್ಧ ಭಕ್ತಿ ಭಾವವನ್ನು ಮನದಲ್ಲಿ ತಳೆದರೆ, ಮಾನಸಿಕ ಕೇಶ ಕಡಿಮೆಯಾಗಿ ನಿಜವಾದ ಆನಂದ ಲಭ್ಯವಾದಾಗ ಅದನ್ನೇ ಗುಂಡಪ್ಪನವರು ಹೇಳುವ 'ದೈವಕೃಪೆ 'ಎಂದು ತಿಳಿಯಬೇಕು. ಆ ನೀರು ಕಾದು ಆವಿಯಾಗಿ ಜಗತ್ತಿನ ನಂಟನ್ನು ಬಿಟ್ಟು ಮೇಲೇರಿದಂತೆ ನಾವೂ ಸಹ ಜಗತ್ತಿನ ನಂಟಿನಿಂದ ಬಿಡಿಸಿಕೊಂಡು ನಮ್ಮ ಆಲೋಚನೆ ಮತ್ತು ಧ್ಯಾನವನ್ನು ಊರ್ಧ್ವಮುಖವಾಗಿಸಿಕೊಂಡರೆ, ನಮಗೆ ಆ ದೈವ ಕೃಪೆ' ಸಿಗುವುದು ಖಂಡಿತ. ಬಿಡಿಸಿಕೊಂಡು ಮೇಲೇರುವ ಪ್ರಯತ್ನವನ್ನು ಮಾಡಬೇಕು ಅಷ್ಟೆ





**ಮುಕ್ತಕ – 505**

**ದೈವಕೃಪೆಯನುವುದೇಂ? ಪರಸತ್ವನವವೃಷ್ಟಿ |**
**ಜೀವಗುಣ ಪಕ್ವಪಟ್ಟಂತದರ ವೇಗ ||**
**ಭಾವಚೋದನೆಗಳಲಿ ಬಾಹ್ಯಸಾಧನೆಗಳಲಿ |**
**ತೀವಿ ದೊರೆಕೊಳುವುದದು - ಮಂಕುತಿಮ್ಮ ||**

ದೈವಕೃಪೆಯನುವುದೇಂ=ದೈವಕೃಪೆ+ಎನುವುದು+ಅದೇಂ, ಪಕ್ವಪಟ್ಟಂತದರ=ಪಕ್ವ+ಪಟ್ಟಂತೆ+ಅದರ,
ದೊರೆಕೊಳುವುದದು=ದೊರೆ+ಕೊಳ್ಳುವುದು+ಅದು,
ಪರಸತ್ವನವವೃಷ್ಟಿ= ಪರಮಾತ್ಮನ ನಿತ್ಯನೂತನ ಕೃಪಾಧಾರೆ,
ಭಾವಚೋದನೆ= ಅಂತರಂಗದ ಆಲೋಚನೆಗಳಲ್ಲಿ, ಪಕ್ವಪಟ್ಟಂತೆ=ಅನುಭವಿಗಳಾದಂತೆ
ದೊರೆಕೊಳುವು=ಸಿಗುವುದು,

ದೇವರ ಕೃಪೆ ಎಂದರೆ ಏನು? ಪ್ರತಿನಿತ್ಯ ನವ ನವೀನ ರೀತಿಯಲ್ಲಿ ನಮಗೆ ಸಿಗುವ ಅವನ ಕೃಪೆಯಷ್ಟೇ. ಜೀವಿ ತನ್ನ ಅಂತರಂಗದ ಭಾವದಲ್ಲಿ ಮತ್ತು ಬಾಹ್ಯ ನಡವಳಿಕೆಗಳಲ್ಲಿ ಎಷ್ಟು ಬೇಗ ಪಕ್ವಗೊಂಡರೆ, ಅಷ್ಟೇ" ವೇಗದಲ್ಲಿ ಅವನಿಗೆ

ಆ 'ಪರಮಾತ್ಮನ ಕೃಪಾಧಾರೆ' ಸುರಿದು ತುಂಬಿಕೊಳ್ಳುವುದು ಎಂದು ಪ್ರಸ್ತಾಪಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮಗೆ ಸಿಕ್ಕಿರುವುದೆಲ್ಲ ಮತ್ತು ಸಿಗುವುದೆಲ್ಲವೂ ಆ ಪರಸತ್ವದ ಕೃಪೆಯಿಂದಲೇ ಸಿಗುತ್ತದೆ. ಆದರೆ ನಮಗೆ ಏನು ಬೇಕಿತ್ತು ಮತ್ತು ಏನು, ಎಷ್ಟು ಮತ್ತು ಯಾವ ಸಮಯಕ್ಕೆ ಸಿಕ್ಕಿದೆ ಎನ್ನುವುದು ನಮ್ಮ ತೃಪ್ತಿ ಅಥವಾ ಅತೃಪ್ತಿಯನ್ನು ನಿರ್ಧರಿಸುತ್ತದೆ ಅಲ್ಲವೇ? ಈ ಜಗತ್ತಿನಲ್ಲಿ ಇದ್ದು, ಈ ಜಗತ್ತನ್ನೇ ಅಪೇಕ್ಷೆ ಪಡುತ್ತಾ ಇಲ್ಲಿನ ಸುಖ ದುಃಖಗಳನ್ನೇ ಅನುಭವಿಸುತ್ತಾ ಇರುವವರೆಗೆ ಪರಮಾತ್ಮನ ಕೃಪೆಯ ಪರಿಚಯವಾಗುವುದಿಲ್ಲ. 'ಜೀವಗುಣ ಪಕ್ವಪಟ್ಟಂತದರ ವೇಗ' ಎಂದು ಗುಂಡಪ್ಪನವರು ಹೇಳುವಂತೆ ಜೀವ ಪಕ್ವವಾಗಬೇಕು, ಆದರೆ ಅದು ಅಷ್ಟು ಸುಲಭವೇ? ಕಷ್ಟ, ಆದರೆ ಅಸಾಧ್ಯವಂತೂ ಅಲ್ಲ.

ನಮಗೆ ಸಿಗುವುದೆಲ್ಲವೂ ಆ ಪರಮಾತ್ಮನ ಕೃಪೆಯಿಂದ ಎಂದು ಪರಿಗಣಿಸಲು ಮನಸ್ಸು ಬುದ್ಧಿಗಳ ಪಕ್ವತೆ ಬೇಕು. ಇಂದ್ರಿಯಗಳ ಬಂಧನದಲ್ಲಿ ಸಿಕ್ಕು ತೊಳಲಾಡುವ ಜೀವಿಗಳು, ಪಕ್ವತೆಯನ್ನು ಪಡೆಯಲು, ಬದುಕಿನ ಸೆಳೆತಗಳಲ್ಲಿ ಬಿದ್ದು, ಕಷ್ಟ ಕಾರ್ಪಣ್ಯಗಳನ್ನು ಮೈಮೇಲೆಳೆದುಕೊಂಡು, ಅನುಭವಗಳ ಒತ್ತಡದಲ್ಲಿ ನುಚ್ಚುನೂರಾಗಿ ಬಳಲಿ ಬೆಂಡಾಗಿ, ಜಗದ ಸುಖ ಕ್ಷಣಿಕವೆಂದು ಮನಗಂಡು ಇವುಗಳಿಂದ ಬಿಡಿಸಿಕೊಳ್ಳುವ ಪ್ರಯತ್ನದಲ್ಲಿ, ಆರ್ತರಾಗಿ, 'ಹೇ ಪರಮಾತ್ಮ ಕಾಪಾಡು' ಎಂದು ಮೊರೆಯಿಡಲು ಉದ್ಯುಕ್ತರಾದಾಗ,ಅದು ಜೀವ ಪಕ್ವತೆಯೆಡೆಗೆ ಮೊದಲ ಹೆಜ್ಜೆಯಾಗುತ್ತದೆ.

ಆ ಭಾವ ಮನಸ್ಸು ಬುದ್ಧಿಗಳಲ್ಲಿ ಸ್ಥಿರವಾದಾಗ, ಜಗತ್ತಿನ ಅಂಟಿನ ನಂಟು ಸಡಿಲವಾದಾಗ ಮಾನ್ಯ ಗುಂಡಪ್ಪನವರು ಹೇಳುವ 'ಜೀವಗುಣ ಪಕ್ವತೆ' ಬರುತ್ತದೆ. ಅಂತರಂಗ ಮತ್ತು ಬಹಿರಂಗ ಪಕ್ವತೆ ಬಂದಾಗ

ಅಹಂಕಾರ ನಶಿಸಿ ನಮಗೆ ಸಿಕ್ಕದೆಲ್ಲವೂ ಪರಮಾತ್ಮನ ಕೃಪೆ ಎಂದು ದೃಢ ನಂಬಿಕೆಯುಂಟಾದಾಗ, ತೃಪ್ತಿ, ಆನಂದ, ಸಂತೋಷ, ನೆಮ್ಮದಿ ಎಲ್ಲವೂ 'ದೈವಕೃಪೆ'ಯಿಂದ ನಮಗೆ ಸಿಗುತ್ತದೆ.ಆ ಪರತತ್ವದ ಆಭಿಮುಖ್ಯದಲ್ಲಿದ್ದಾಗ ಸಿಗುವುದೆಲ್ಲವೂ ದೈವಕೃಪೆ' ಎಂದಾಗುತ್ತದೆ, ಆ ಸ್ಥಿತಿಯನ್ನು ನಾವು ತಲುಪಲಾದರೆ ನಾವೇ ಧನ್ಯರು

**ಮುಕ್ತಕ – 506**

**ದೊರೆಗೆ ನೀಂ ಬಿನ್ನಯಿಸೆ ನೂರೆಂಟು ಬಯಕೆಗಳ |**
**ಸರಿ ತನಗೆ ತೋರ್ದೆತನ್ ಅದರೊಳವನೀವಂ ||**
**ಅರಿಕೆಯೆಲ್ಲವನಡಸದಿರೆ ದೊರೆಯೆ ಸುಳ್ಳಹನೆ? |**
**ಕರುಣೆ ನಿರ್ಬಂಧವೇಂ? - ಮಂಕುತಿಮ್ಮ ||**

ತೋರ್ದೆನಿತನ್=ತೋರ್ದ+ಎನಿತನ್, ಅದರೊಳವನೀವಂ=ಅದರೊಳ್+ಆವ+ಈವಂ,
ಅರಿಕೆಯೆಲ್ಲವನಡಸದಿರೆ=ಅರಿಕೆ+ಎಲ್ಲವನ್+ನಡಸದೆ+ಇರೆ, ಸುಳ್ಳಹನೆ= ಸುಳ್ಳ+ಅಹನೆ,
ನಿರ್ಬಂಧವೇಂ=ನಿರ್ಬಂಧವು+ಏಂ,
ಬಿನ್ನಯಿಸೆ= ಬೇಡಿದರೆ, ತೋರ್ದ=ಸರಿಕಂಡ, ಎನಿತನ್=ಅಷ್ಟನ್ನು,
ಅರಿಕೆ=ಬೇಡಿಕೆ, ಅಹನೆ=ಆಗುವನೆ, ನಿರ್ಬಂಧವು=ಬಲವಂತ

ರಾಜನಿಗೆ ನೀನು ನಿನ್ನ ನೂರೆಂಟು ಬಯಕೆಗಳನ್ನು ಅರಿಕೆಮಾಡಿದರೆ, ಅವನಿಗೆ ಯಾವುದು ಸರಿಯೆಂದು ತೋರುವುದೋ ಅದನ್ನು ನೀಡುವನು. ನೀ ಕೇಳಿದ್ದೆಲ್ಲ ಕೊಡಲಿಲ್ಲವೆಂದರೆ ಅವನು ರಾಜನೇ ಅಲ್ಲವೆಂದು ಹೇಳಲು ಸಾಧ್ಯವೇ? ಹಾಗೆಯೇ ಪರಮಾತ್ಮನ ಕರುಣೆಯೂ ಸಹ ಎಂದು ಭಗವದ್ವಾ ವಿಧಾನವನ್ನು ನಮಗೆ ಅರುಹಿದ್ದಾರೆ ಈ ಮುಕ್ತಕದಲ್ಲಿ ಮಾನ್ಯ ಗುಂಡಪ್ಪನವರು.

ಈ ಲೋಕದಲ್ಲಿ ಎಷ್ಟು ಜೀವಿಗಳಿದ್ದಾರೋ, ಎಲ್ಲರೂ ಅವರವರ ಬಯಕೆಗಳ ಈಡೇರಿಕೆಗಾಗಿ ಆ ಪರಮಾತ್ಮನಲ್ಲಿ ಮೊರೆಯಿಡುತ್ತಲೇ ಇರುತ್ತಾರೆ, ಆದರೆ ಯಾರಿಗೂ ಬಯಸಿದ್ದೆಲ್ಲಾ ಸಿಗುವುದೇ ಇಲ್ಲ. ಸಿಕ್ಕಿದ್ದೆಲ್ಲ ನಮ್ಮ ಅನುಕೂಲಕ್ಕೆ ಆಗಬಹುದು ಅಥವಾ ಆಗದೆ ಇರಬಹುದು.ಎಷೋ ಜನ "ಏನ್ ದೇವ್ರೋ ಏನೋ ನಂಗಂತೂ ಸ್ವಲ್ಪನೂ

ನಂಬೇನೆ ಇಲ್ಲ" ಎನ್ನುವುದನ್ನು ನಾವು ಕೇಳಿಲ್ಲವೇ? ನಾವು ಬಯಸಿದ್ದು ಸಿಗದಿದ್ದರೆ ಆ ದೇವರೇ ಇಲ್ಲವೆಂದು ಅರ್ಥವಲ್ಲವಲ್ಲ!

ಸಕಲ ಜಗತ್ತನ್ನೂ ಒಂದು ಸೂತ್ರದಲ್ಲಿ ನಡೆಸುತ್ತಿರುವ ಆ ಪರಮಾತ್ಮನಿಗೆ ಭಕ್ತರ ಬೇಡಿಕೆಗಳನ್ನು ಪರಿಗಣಿಸುವಾಗ ಮೂರು ವಿಷಯಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.ಒಂದು ಜಗತ್ತಿನ ವ್ಯವಸ್ಥೆ,





ಎರಡು ಭಕ್ತರ ಕರ್ಮಗತಿ ಮತ್ತು ಮೂರು ಭಕ್ತ ಪರಿಪಾಲನೆ.ಒಂದನ್ನು ನೋಡಿಕೊಳ್ಳುವಾಗ ಮತ್ತೊಂದಕ್ಕೆ ಧಕ್ಕೆ ಬಾರದಂತೆಯೇ ಇರಬೇಕು. ಯಾರದೋ ಬೇಡಿಕೆ ತೀವ್ರವಾಗಿದೆ ಎಂದಾಕ್ಷಣಕ್ಕೆ ಸರ್ವ ಹಿತಕ್ಕಿರುವ ಜಗದ್ವ್ಯವಸ್ಥೆಯನ್ನು ಮತ್ತು ಆ ವ್ಯಕ್ತಿಯ ಕರ್ಮಗತಿಯನ್ನು ಉಲ್ಲಂಗಿಸಿ ಅವನ ಬೇಡಿಕೆಯನ್ನು ತೀರಿಸಬೇಕೆಂದಿಲ್ಲ. ನಮ್ಮ ಅಥವಾ ನಮಗೆ ಸಂಬಂಧವಿರುವ ಅಥವಾ ನಮಗೆ ಸಂಬಂಧವೇ ಇರದ ಯಾರದೋ ಕರ್ಮಗತಿಯಿಂದ ನಮಗೆ ಏನಾದರೂ ಸಿಗಬಹುದು ಅಥವಾ ಸಿಗಬೇಕೆಂದಿದ್ದದ್ದು ತಪ್ಪಿಹೋಗಬಹುದು. ನಮ್ಮ ಯಾವ ಕರ್ಮದಿಂದ ನಮಗೆ 'ಇದು' ಸಿಕ್ಕಿತು ಅಥವಾ ಏನು ಮಾಡಿದ್ದಿದ್ದರೆ ನಾವು ಬಯಸಿದ್ದು ಸಿಗುತ್ತಿತ್ತು ಎಂದು ಹುಲುಮಾನವರಾದ ನಾವು ಅರ್ಥಮಾಡಿಕೊಳ್ಳುವುದು ಕಷ್ಟವಷ್ಟೇ ಅಲ್ಲ, ಅಸಾಧ್ಯ.

ಇದು ದೈವ ರಹಸ್ಯ ಎಷ್ಟೋವೇಳೆ ನಾವು ನಮ್ಮ ಕರ್ಮವನ್ನು ಸಮರ್ಪಕವಾಗಿ ಮಾಡಿದ್ದೇವೆ ಎಂದು ಅಂದುಕೊಂಡರೂ, ಸೂಕ್ತ ಫಲ ಸಿಗದೇ ಇರಬಹುದು ಅಥವಾ ಅಪ್ರಯತ್ನವಾಗಿ ನಾವು ಬಯಸಿದ್ದು, ನಮ್ಮ ಮಡಿಲಿಗೆ ಬಂದು ಬೀಳಬಹುದು. ಇದನ್ನು ವಿಶ್ಲೇಷಿಸುವುದು ಬಲು ಗೊಂದಲದ ವಿಷಯ, ನೆಮ್ಮದಿ ಹಾಳಾಗುತ್ತದೆ. ಹಾಗಾಗಿ ನಮಗಿರುವುದು ಒಂದೇ ದಾರಿ. ನಮ್ಮ ಪಾಲಿಗೆ ಬಂದ ಕೆಲಸವನ್ನು ನಿರ್ವಂಚನೆಯಿಂದ ಫಲಾಪೇಕ್ಷೆಯಿಲ್ಲದೆ

ಮಾಡುವುದು. ಸಿಕ್ಕ ಫಲವನ್ನು 'ದೈವಕೃಪೆ'ಯೆಂದು ಸ್ವೀಕರಿಸಿ ತೃಪ್ತಿಪಡುವುದು.ಇದೇ ಜಗತ್ತಿನಲ್ಲಿ ನಿಜವಾದ ಸುಖ ಮತ್ತು ಆನಂದದ ರಹಸ್ಯ

**ಮುಕ್ತಕ – 507** **ದಂಡನಿರ್ಣಯದಿ ನೀಂ ಕ್ಷಮಿಸೆನಲ್ ನ್ಯಾಯಪತಿ ।**
**ಹಿಂದಿನಾ ನಿನ್ನೊಳ್ತನವನ್ ಅಂದಿನಳಲನ್ ॥**
**ತಂದೆಬಗೆಯಿಂ ಬಗೆದು ಶಾಸನೋಗ್ರವನಿನಿತು ।**
**ಕುಂದಿಸಲಿಕ್ಕಾಗದೇಂ? - ಮಂಕುತಿಮ್ಮ ॥**

ಕ್ಷಮಿಸೆನಲ್=ಕ್ಷಮಿಸು+ಎನಲ್, ನಿನ್ನೊಳ್ತನವನ್ =ನಿನ್ನ+ಒಳ್ತನವನ್, ಅಂದಿನಳಲನ್=ಅಂದಿನ+ಅಳಲನ್, ಶಾಸನೋಗ್ರವನಿನಿತು=ಶಾಸನ+ಉಗ್ರವ+ಇನಿತು, ಕುಂದಿಸಲಿಕ್ಕಾಗದೇಂ=ಕುಂದಿಸಲಿಕ್ಕೆ+ಆಗದೇಂ ದಂಡ=ಶಿಕ್ಷೆ, ನ್ಯಾಯಪತಿ-ನ್ಯಾಯಾಧೀಶ, ಒಳ್ತನವನ್= ಒಳ್ಳೆಯತನವನ್ನು, ಅಳಲನ್=ದುಃಖವನ್ನು, ಉಗ್ರವ=ತೀವ್ರತೆಯನ್ನು, ಇನಿತು=ಸ್ವಲ್ಪ ಕುಂದಿಸಲಿಕ್ಕೆ=ಕಡಿಮೆ ಮಾಡಲು

'ನನ್ನ ಶಿಕ್ಷೆ ಕಡಿಮೆ ಮಾಡಿ ಎಂದು' ಬೇಡಿದರೆ ನ್ಯಾಯಾಧಿಪತಿಯು ಅಪರಾಧಿಯ ಹಿಂದಿನ ಸದ್ವರ್ತನೆ ಮತ್ತು ಹಿಂದೆ ಅವನು ಅನುಭವಿಸಿರುವ ದುಃಖವನ್ನು ಪರಿಗಣಿಸಿ, ತಂದೆ ತನ್ನ ಸುತನು ಸರಿಮಾರ್ಗದಲ್ಲಿರಲೆಂದು ಶಿಕ್ಷೆ ಕಡಿಮೆ ಮಾಡುವಂತೆ, ಶಿಕ್ಷೆಯ ತೀವ್ರತೆ ಮತ್ತು ಕಠಿಣತೆಯನ್ನು ಕಡಿಮೆ ಮಾಡಲಾರನೆ? ಎಂದು

ಪ್ರಶ್ನಿಸುತ್ತಾ ಪರಮಾತ್ಮನ ಕೃಪೆಯಿಂದ ನಾವು ನಮ್ಮ ಪೂರ್ವ ಕರ್ಮ ಮತ್ತು ಅದರ ಪರಿಣಾಮಗಳ ತೀವ್ರತೆಯನ್ನು ಹೇಗೆ ಕಡಿಮೆ ಮಾಡಿಕೊಳ್ಳಬಹುದು ಎಂಬ ವಿಚಾರವನ್ನು ಮಂಡಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜೀವಿಗಳು ಬದುಕಿನಲ್ಲಿ ಕಷ್ಟ ಸುಖಗಳನ್ನು ಅನುಭವಿಸುತ್ತಾರೆ. ಇಂದಿನ ಸುಖ ನಾಳೆಯ ಕಷಕ್ಕೆ ಕಾರಣವಾಗಬಹುದು ಮತ್ತು ಇಂದಿನ ಕಷ್ಟ ನಾಳಿನ ಸುಖಕ್ಕೆ ದಾರಿಯಾಗಬಹುದು.ಅಷ್ಟೇ ಅಲ್ಲ ಕಷ್ಟ ಮತ್ತು ಸುಖ ಎನ್ನುವುದು ಪರಿಣಾಮಗಳ ಪ್ರಭಾವದಿಂದ ನಮ್ಮ ಮನಸ್ಸಿನಲ್ಲಿ ಉಂಟಾಗುವ ಭಾವನೆಗಳಷ್ಟೆ.' ಯಾವ ಜನ್ಮದಲ್ಲಿ ಏನು ತಪ್ಪು ಮಾಡಿದ್ದೆವೋ ಈ ಜನ್ಮದಲ್ಲಿ ಅನುಭವಿಸುತ್ತಾ ಇದ್ದೇವೆ" ಅಥವಾ 'ಪೂರ್ವ ಪುಣ್ಯದಿಂದ ಅವರು ಸುಖವಾಗಿದ್ದಾರೆ' ಎನ್ನುವ ಮಾತನ್ನು ಬಹಳಷ್ಟು ಜನರ ಬಾಯಲ್ಲಿ ನಾವು ಕೇಳುತ್ತೇವಲ್ಲವೇ? ಆದರೆ ನಮಗೆ 'ಕಷ್ಟ' ಬೇಡ ಹಾಗಾಗಿ ಆ ಕಷ್ಟ ನಿವಾರಣೆಗಾಗಿ ನಮ್ಮ ಪ್ರಯತ್ನ ನಡೆಯುತ್ತದೆ.

ನಮ್ಮ ಕಷ್ಟ ಸುಖಗಳೆಲ್ಲಾ ನಮ್ಮ ಪೂರ್ವ (ಹಿಂದಿನ) ಕರ್ಮದ ಫಲವಷ್ಟೇ! ಪಾಪ ಅಂದರೆ ನೀತಿರಹಿತ ಕೆಲಸಗಳನ್ನು ಮಾಡಿದರೆ ಕಷ್ಟಗಳು ಬರುತ್ತವೆ. ಆ ಕಷ್ಟಗಳನ್ನು ಭರಿಸುವ ಶಕ್ತಿ ಅಧಿಕವಾಗಿದ್ದರೆ, ಕಷ್ಟಗಳಿಂದ ಉಂಟಾಗುವ ನೋವಿನ ತೀವ್ರತೆ ಕಡಿಮೆಯಾಗುತ್ತದೆ ಮತ್ತು ಶಕ್ತಿ ಕಡಿಮೆಯಿದ್ದಲ್ಲಿ ನೋವು ಅಧಿಕವಾಗುತ್ತದೆ.ಆ ದೈವದಲ್ಲಿ ನಮಗೆ 'ಪರಿಹಾರ ನೀಡು' ಎಂದೋ ಅಥವಾ ಕಷ್ಟಗಳ 'ಭರಿಸುವ ಶಕ್ತಿಯನ್ನು ನೀಡು' ಎಂದೋ ಬೇಡುತ್ತೇವೆ. ಇದನ್ನೇ ಮಾನ್ಯ ಗುಂಡಪ್ಪನವರು ದಂಡನಿರ್ಣಯದಿ ನೀಂ ಕ್ಷಮಿಸೆನಲ್ 'ಎಂದಿದ್ದಾರೆ. ನಾವು ಈ ಕಷ್ಟಗಳ ತೀವ್ರತೆಯನ್ನು ಕಡಿಮೆ ಮಾಡಿಕೊಳ್ಳಲು ಅಥವಾ ಕಷ್ಟಗಳಿಗೆ ಪರಿಹಾರ ಕಂಡುಕೊಳ್ಳಲು ಪೂಜೆ, ಪ್ರಾರ್ಥನೆ, ಜಪ, ತಪ ತೀರ್ಥಯಾತ್ರೆ ಮುಂತಾದವುಗಳಿಗೆ ಶರಣಾಗುತ್ತೇವೆ. ಹಾಗಾದಾಗ, ನಾವು ಮತ್ತೆ ತಪ್ಪು ಮಾಡುವುದು ನಿಲ್ಲುತ್ತದೆ ಮತ್ತು ಮಾನಸಿಕವಾಗಿ ಕಷ್ಟಗಳನ್ನು ಅನುಭವಿಸಲು ಧೈರ್ಯ ತುಂಬಿ, ಭಯ ನಿವಾರಣೆಯಾಗುತ್ತದೆ. ನಮ್ಮ ಪೂಜೆ ಪುನಸ್ಕಾರಗಳ ಮೂಲಕ ನಮಗೆ ನಾವೇ ಸಾಂತ್ವನ ತಂದುಕೊಳ್ಳುವ, ಧೈರ್ಯ ತಂದುಕೊಳ್ಳುವ ಮತ್ತು ಕಷ್ಟಗಳ ತೀವ್ರತೆಯನ್ನು ತಡೆದುಕೊಳ್ಳುವ ಶಕ್ತಿಯನ್ನು ಮಾನಸಿಕವಾಗಿ ಪಡೆದುಕೊಳ್ಳುತ್ತೇವೆ.

ಹಾಗೆ ಕಷ್ಟಗಳನ್ನು ಅನುಭವಿಸುವಾಗ, ಅದೇ ಅಭ್ಯಾಸವಾಗಿ, ನೋವು ಕಡಿಮೆಯಾಗುತ್ತದೆ.ಪರಿಸ್ಥಿತಿಗಳು ಬದಲಾಗಿ ನಮಗೆ ಕಷ್ಟಗಳು ಕಡಿಮೆಯಾದಾಗ' ದೈವ ಕೃಪೆ'ಯಿಂದ ನಮ್ಮ ಕಷ್ಟ ಪರಿಹಾರವಾಯಿತೆಂದು ನಾವು

ಅಂದುಕೊಳ್ಳುತ್ತೇವೆ. ವಸ್ತುತಃ ನಮ್ಮನ್ನು ನಾವೇ ಸರಿಪಡಿಸಿಕೊಂಡರೂ ಹಾಗೆ ಸರಿಪಡಿಸಿಕೊಳ್ಳಲು ನಮಗೆ ಒದಗಿದ್ದು, ನಮ್ಮ ಭಕ್ತಿ ಮತ್ತು ಪೂಜೆ. ಅರ್ಥಾತ್ ನಾವು ನಮ್ಮ ಮನಸ್ಸುಗಳಲ್ಲಿ 'ದೈವಕ್ಕೆ' ಬೇಡಿಕೆ ಸಲ್ಲಿಸಿದಾಗ "ಶಾಸನೋಗ್ರವನಿನಿತು ಕುಂದಿಸಲಿಕ್ಕಾಗದೇಂ" ಎಂದು ಗುಂಡಪ್ಪನವರು ಪ್ರಶ್ನೆ ಕೇಳಿದಂತೆ ನಮ್ಮೊಳಗಿರುವ ಆ ಪರಮಾತ್ಮನೇ ನ್ಯಾಯಾಧಿಪತಿಯ ಸ್ಥಾನದಲ್ಲಿ ನಿಂತು ನಮ್ಮ ಶಿಕ್ಷೆಯನ್ನು ಕಡಿಮೆ ಮಾಡುತ್ತಾನೆ. ನಮ್ಮ 'ಕುಕರ್ಮ'ಗಳಿಗೆ ಶಿಕ್ಷೆಯ ರೂಪದಲ್ಲಿ ನಾವು ಅನುಭವಿಸುವ ಕಷ್ಟಗಳ ತೀವ್ರತೆ ಕಡಿಮೆಯಾಗಬೇಕಾದರೆ, ಕಷ್ಟಗಳನ್ನು ಅನುಭವಿಸಲು ಧೈರ್ಯ ತುಂಬಿಕೊಳ್ಳಬೇಕಾದರೆ ನಾವು ದೈವಕ್ಕೆ ಮೊರೆ ಹೋಗಲೇಬೇಕು.





**ಮುಕ್ತಕ – 508**

**ತಕ್ಕಡಿಯ ದೈವ ಪಿಡಿದದರೊಂದು ತಟ್ಟೆಯಲಿ।**
**ಒಕ್ಕುವುದು ಬಿಡದೆ ಜೀವಿಯ ಪಾಪಚಯವ॥**
**ಇಕ್ಕುವುದು ಸುಕೃತಗಳನಿನ್ನೊಂದರೊಳಗಲ್ಲಿ।**
**ಭಕ್ತಿ ಪಶ್ಚಾತ್ತಾಪ – ಮಂಕುತಿಮ್ಮ॥**

ಪಿಡಿದದರೊಂದು=ಪಿಡಿದು+ಆದರ+ಒಂದು,
ಸುಕೃತಗಳನಿನ್ನೊಂದರೊಳಗಲ್ಲಿ= ಸುಕೃತಗಳನ್ನು+ಇನ್ನೊಂದರ+ಒಳಗೆ+ಅಲ್ಲಿಪಿಡಿದು=ಹಿಡಿದು,
ಪಾಪಚಯವ=ಶೇಕರಿಸಿದ ಪಾಪಗಳಗಂಟು, ಇಕ್ಕುವುದು=ಇಡುವುದು, ಸುಕೃತ+ಒಳ್ಳೆಯ ಕೆಲಸಗಳು,

ನಾವು ಮಾಡಿದ ಕೃತ್ಯಗಳನ್ನು ಒಳ್ಳೆಯ ಮತ್ತು ಕೆಟ್ಟದ್ದೆಂದು ವಿಂಗಡಿಸಿ, ಒಂದು ತಕ್ಕಡಿಯಲ್ಲಿ ಒಂದು ತಟ್ಟೆಗೆ ಸತ್ಕರ್ಮಗಳನ್ನೂ ಮತ್ತೊಂದು ತಟ್ಟೆಗೆ ಪಾಪಕರ್ಮಗಳನ್ನೂ ಹಾಕಿ ಆ ದೈವ 'ತುಲನೆ' ಮಾಡುತ್ತದಂತೆ. ಸುಕೃತಗಳ

ಫಲ, ಸುಖದ ರೂಪದಲ್ಲಿ ಮತ್ತು ಪಾಪ ಕರ್ಮಗಳ ಫಲ, ಕಷ್ಟಗಳ ರೂಪದಲ್ಲಿ ನಮಗೆ ಸಿಗುತ್ತದೆ. ಈಗಾಗಲೇ ಗಂಟು ಕಟ್ಟಿಕೊಂಡ ಪಾಪ ಕ್ರಮಗಳನ್ನು ಕಡಿಮೆ ಮಾಡಿಕೊಳ್ಳಲು ಸಾಧ್ಯವೇ ಇಲ್ಲ. ಆದರೆ ಅವುಗಳು ನಮ್ಮ ಮೇಲೆ ಬೀರುವ ಪ್ರಭಾವ ಮತ್ತು ಪರಿಣಾಮಗಳ ತೀವ್ರತೆಯನ್ನು ಭಕ್ತಿ ಮತ್ತು ಪಶ್ಚಾತ್ತಾಪಗಳಿಂದ ಕಡಿಮೆ ಮಾಡಿಕೊಳ್ಳಬಹುದು ಎನ್ನುವುದೇ ಮಾನ್ಯ ಗುಂಡಪ್ಪನವರ ಈ ಮುಕ್ತಕದ ಅಂತರ್ಯ.

ದೈವವೆಂದರೆ ನಮ್ಮ ಅಂತರಂಗದಲ್ಲಿರುವ ಆತ್ಮಸಾಕ್ಷಿ. ನಮಗೆ ಗೊತ್ತು, ನಾವು ಮಾಡಿದ ಒಳ್ಳೆಯ ಕೆಲಸಗಳೇನು ಮತ್ತು ಪಾಪ ಕೆಲಸಗಳೇನು ಎಂದು. ಅನ್ಯರಿಗಾರಿಗೂ ಅರಿಯದ ಸತ್ಯ ನಮ್ಮ ಅಂತರಂಗಕ್ಕೆ ಗೊತ್ತಿರುತ್ತದೆ ಅಲ್ಲವೇ ? ಕೆಲವನ್ನು ನಾವು ಅನ್ಯರಿಗೆ ಹೇಳಬಹುದು ಮತ್ತೆ ಕೆಲವನ್ನು ನಮ್ಮ ಜೀವನದುದ್ದಕ್ಕೂ ಯಾರಿಗೂ ಹೇಳದೆ ನಮ್ಮೊಡನೆಯೇ ಆ ರಹಸ್ಯಗಳೂ ಅಂತ್ಯವಾಗುತ್ತವೆ, ಅಲ್ಲವೇ? ಹಾಗಾಗಿ ನಮ್ಮ ಒಳ್ಳೆಯ ಮತ್ತು ಪಾಪ ಕರ್ಮಗಳ ತುಲನೆ ನಮ್ಮ ಅಂತರಂಗದಲ್ಲೇ ನಡೆಯುತ್ತದೆ ಮತ್ತು ನಡೆಯಬೇಕು. ಬದುಕಿನಲ್ಲಿ ಓಡುವ ಗತಿಯಲ್ಲಿ ನಾವು ಏನೇನನ್ನೋ ಮಾಡುತ್ತಾ ಹೋಗುತ್ತೇವೆ. ಮಾಡುವ ಆ ಸಮಯದಲ್ಲಿ ಇದು ಸರಿ ಅಥವಾ ಇದು ತಪ್ಪು ಎನ್ನುವ ವಿಶ್ಲೇಷಣೆಯನ್ನು ಮಾಡದೆ ನುಗ್ಗುತ್ತೇವೆ, ಓಡಿ, ಓಡಿ, ಸುಸ್ತಾಗಿ ಒಂದೆಡೆ ನಿಂತಾಗ 'ಆತ್ಮಾವಲೋಕನ' ಮೊದಲಿಟ್ಟರೆ, ಆಗ ಸರಿ ತಪ್ಪುಗಳ ತುಲನೆ ಅಂತರಂಗದಲ್ಲಿ ನಡೆಯುತ್ತದೆ. ಹಾಗೆ ತುಲನೆ ನಡೆಯುವಾಗ, ಶುದ್ಧಮನಸ್ಸಿನಿಂದ ತುಲನೆ ಮಾಡಿಕೊಳ್ಳಬೇಕು. 'ನಾನು ಮಾಡಿದ್ದೆ ಸರಿ'" ಎನ್ನುವ ಅಹಂಕಾರದ ಭಾವ ತೊರೆದು ನಿಷ್ಪಕ್ಷಪಾತದಿಂದ ತುಲನೆ ಮಾಡಿಕೊಂಡು, ಮಾಡಿದ ತಪ್ಪುಗಳನ್ನು ಒಪ್ಪಿಕೊಂಡರೆ 'ಅಯ್ಯೋ ನಾ ಮಾಡಿದ್ದು ತಪ್ಪು, ಹಾಗೆ ಮಾಡಬಾರದಿತ್ತು' ಎಂದು ಅನಿಸಿದರೆ, ಅದೇ ಪಶ್ಚಾತ್ತಾಪ, ಕೇವಲ ಪಶ್ಚಾತ್ತಾಪ ಪಟ್ಟರೆ ಸಾಲದು ಪರಿಷ್ಕಾರವನ್ನೂ ಕಂಡುಕೊಳ್ಳಬೇಕು. ಆ ಪರಿಷ್ಕಾರವೇ ಭಕ್ತಿ, ಮನಸ್ಸಿನಲ್ಲಿ ಭಕ್ತಿಯುಂಟಾದರೆ, ಕ್ರಮೇಣ ಸತ್ಸಂಗವಾಗಿ, ಮೋಹವಳಿದು, ಆ ಪರಮಾತ್ಮ ತತ್ವದಲ್ಲಿ

ನಿಶ್ಚಲವಾದ ಮನಸ್ಸಾದರೆ, ಆಗ ನಾವು ಮಾಡಿದ ಪುಣ್ಯ ಕೆಲಸಗಳಿಂದ ಬರುವ ಸುಖದ ಅನುಭವದಿಂದ ಉಂಟಾಗುವ ಪರಿಣಾಮವನ್ನೂ ಮತ್ತು ಸಂಚಿತ ಪಾಪ ಕರ್ಮಗಳಿಂದ ಉಂಟಾಗುವ ದುಃಖ ಮತ್ತು ನೋವುಗಳನ್ನು ತಡೆದುಕೊಳ್ಳುವ ಶಕ್ತಿ ಬರುತ್ತದೆ.

ಆದರೆ ಬದುಕಿನಲ್ಲಿ ನಿಂತು 'ಆತ್ಮಾವಲೋಕನ' ಮಾಡಿಕೊಳ್ಳುವ ಅವಕಾಶ ಬಹಳಷ್ಟು ಜನರಿಗೆ ಸಿಗುವುದೇ ಇಲ್ಲ. ಏಕೆಂದರೆ ಅವರಿಗೆ ನಿಲ್ಲುವ ಅವಕಾಶವೇ ಸಿಗುವುದಿಲ್ಲ. ಅಕಸ್ಮಾತ್ ಆ ಅವಕಾಶ ಸಿಕ್ಕಿ ಆತ್ಮಾವಲೋಕನ ಮಾಡಿಕೊಂಡರೂ ನಮ್ಮ ದೋಷಗಳನ್ನು ನಾವು ಒಪ್ಪಿಕೊಳ್ಳಲು ಸಿದ್ಧರಿರುವುದಿಲ್ಲ. ಅಹಂಕಾರ ಅಡ್ಡ ಬರುತ್ತದೆ. ಅಕಸ್ಮಾತ್ ಅಹಂಕಾರವನ್ನು ಬದಿಗಿಟ್ಟು ತಮ್ಮ ದೋಷಗಳನ್ನು ಒಪ್ಪಿಕೊಂಡರೂ ತಿದ್ದಿಕೊಳ್ಳುವ ಪ್ರಯತ್ನವನ್ನು ಮಾಡುವುದಿಲ್ಲ. ಹಾಗಾಗಿ ಕರ್ಮ ಶೇಷ ಹಾಗೆಯೇ ಉಳಿದುಬಿಡುತ್ತದೆ. ಯಾರಿಗಾದರೂ ಅಂತರಂಗದ ತುಲನೆಯ ಪರಿಣಾಮವಾಗಿ ತಮ್ಮ ತಪ್ಪಿನ ಅರಿವಾಗಿ ತಿದ್ದಿಕೊಳ್ಳಲು ಪ್ರಯತ್ನಪಟ್ಟು, ಕರ್ಮ ಫಲವನ್ನು ಅನುಭವಿಸಿ ತೀರಿಸಿಬಿಡಲು ಆದರೆ ಅವರೇ ಪುಣ್ಯವಂತರೆಂದು ಪರಿಗಣಿಸಬೇಕು

**ಮುಕ್ತಕ – 509**

**ಪ್ರಾರಬ್ಧದಲಿ ನಿನ್ನ ಪುಣ್ಯವಿನಿತಾನುಮಿರೆ |**
**ಸೇರೆ ಪಶ್ಚಾತ್ತಾಪ ಭಾರವದರೊಡನೆ ||**
**ದಾರುಣದ ಕರ್ಮನಿಯತಿಯನಿನಿತು ಶಿಥಿಲಿಪುದು |**
**ಕಾರುಣ್ಯದಿಂ ದೈವ - ಮಂಕುತಿಮ್ಮ ||**

ಪುಣ್ಯವಿನಿತಾನುಮಿರೆ= ಪುಣ್ಯವು+ಇನಿತಾನುಂ+ಇರೆ, ಭಾರವದರೊಡನೆ=ಭಾರವು+ಅದರೊಡನೆ,
ಕರ್ಮನಿಯತಿಯ, ಎನಿನಿತು=ಕರ್ಮ+ನಿಯತಿಯನು+ಇನಿತು,
ಪ್ರಾರಬ್ಧ=ಹಿಂದಿನಿಂದ ಬಂದ ಕರ್ಮ ಶೇಷ. ಇನಿತಾನುಂ=ಸ್ವಲ್ಪವಾದರೂ, ದಾರುಣ=ಘೋರ,
ನಿಯತಿಯನು=ನಿರ್ಧಾರಿತ, ಕಾರುಣ್ಯದಿಂ= ಕರುಣೆಯಿಂದ

ನಮ್ಮ ಪೂರ್ವ ಕರ್ಮಗಳಿಗನುಸಾರವಾಗಿ ಘೋರವಾದ ಕರ್ಮಫಲಗಳನ್ನು ಅನುಭವಿಸಲೇ ಬೇಕಾದಾಗ, ಪೂರ್ವ ಸಂಚಿತ ಕರ್ಮಗಳಲ್ಲಿ ಸ್ವಲ್ಪವಾದರೂ ಪುಣ್ಯವು ಇದ್ದರೆ, ಅದರೊಟ್ಟಿಗೆ ನಮ್ಮ ತಪ್ಪಿನ ಅರಿವಾಗಿ ಪಶ್ಚಾತ್ತಾಪವೂ

ಸೇರಿದರೆ, ದೈವದ ಕರುಣೆಯಿಂದ ಅನುಭವಿಸಬೇಕಾದ ಕಷ್ಟಗಳ ತೀವ್ರತೆ ಸ್ವಲ್ಪವಾದರೂ ಕಡಿಮೆಯಾಗುತ್ತದೆ ಎಂದು ಉಲ್ಲೇಖಮಾಡಿದ್ದಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಎಲ್ಲರ ಜೀವನದಲ್ಲೂ ಪ್ರಮಾಣ ಬೇಧವಿದ್ದರೂ, ಪಾಪ, ಪುಣ್ಯ, ಕರ್ಮಗಳ ಮಿಶ್ರಣ ಇರುತ್ತದೆ. ಪಾಪ ಮಾಡಿದರೆ ಕಷ್ಟವನ್ನೂ, ಪುಣ್ಯಮಾಡಿದರೆ ಸುಖವನ್ನೂ ಅನುಭವಿಸುತ್ತಾರೆ ಎನ್ನುವುದು ನಮ್ಮ ನಂಬಿಕೆ. ಹಾಗೆ ಕಷ್ಟಗಳನ್ನು ಅನುಭವಿಸುವಾಗ ಅವರು ಮಾಡಿದ ಪಾಪ ಕರ್ಮಗಳು, ಮತ್ತಷ್ಟನ್ನು ಅಂಟಿಸಿಕೊಳ್ಳದಿದ್ದರೆ,





ಕ್ಷೀಣಿಸುತ್ತವೆ. ಹಾಗೆಯೇ ಸುಖಪಡುವಾಗ ಪುಣ್ಯವೂ ಕ್ಷೀಣಿಸುತ್ತದೆ ಎನ್ನುವುದೂ ಸಹ ನಮ್ಮ ನಂಬಿಕೆ. ಪಾಪ ಮಾಡಿದವನಿಗೆ ತಾನು ಮಾಡಿದ್ದು ಪಾಪ ಎಂದು ಅರಿವಾಗುವುದೇ ಸರಿಯಾದ ಮಾರ್ಗಕ್ಕೆ ಮೊದಲ ಹೆಜ್ಜೆ. ಅರಿವಾದಮೇಲೆ, ಅಹಂಕಾರವನ್ನು ಬಿಟ್ಟು ತೀವ್ರ ಪಶ್ಚಾತ್ತಾಪ ಪಡುವುದು ಎರಡನೆಯ ಹೆಜ್ಜೆ. ಅಂತಹ ಪಾಪ ಮತ್ತೆ ಮಾಡದೆ ಇರುವುದು ಮೂರನೇ ಹೆಜ್ಜೆ, ಮಾಡಿದ ಪಾಪವನ್ನು ಸರಿಪಡಿಸಿಕೊಳ್ಳಲು ಮಾಡುವ ಪ್ರಯತ್ನವೇ ನಾಲ್ಕನೇ ಹೆಜ್ಜೆ.

ಹೀಗೆ ಮುಂದಕ್ಕೆ ಹೆಜ್ಜೆ ಇಡುತ್ತಾ ಹೋಗುವಾಗ, ಪಶ್ಚಾತ್ತಾಪ ಸಹಿತವಾದ ಭಾವವಿರುತ್ತಾದ್ದರಿಂದ, ಆ ದೈವದ ಕೃಪೆಗೆ ಪಾತ್ರನಾಗಿ, ಪಾಪ ಕರ್ಮದ ಫಲವಾಗಿ ಕಷ್ಟ ಕಾರ್ಪಣ್ಯಗಳನ್ನು ಅನುಭವಿಸಲೇಬೇಕಾದರೂ, ಹಾಗೆ ಅನುಭವಿಸುವಾಗ, ಗುಂಡಪ್ಪನವರು ಹೇಳುವಂತೆ 'ದಾರುಣದ ಕರ್ಮನಿಯತಿಯನಿನಿತು ಶಿಥಿಲಿಪುದು' ಎಂಬಂತೆ, ಕಷ್ಟ ಕಾರ್ಪಣ್ಯಗಳ ತೀವ್ರತೆಯನ್ನು ಅನುಭವಿಸುವ, ತಡೆದುಕೊಳ್ಳುವ ಶಕ್ತಿಯನ್ನು ಪಡೆದುಕೊಂಡು ತೀರ ಕಳವಳಗೊಂಡ ಮನಸ್ಸು, ತಹಬಂದಿಗೆ ಬರುತ್ತದೆ. ಆ ಸ್ಥಿತಿಯಲ್ಲಿ ಮತ್ತೆ ಪಾಪ ಮಾಡುವ ಸಾಧ್ಯತೆ ಕಡಿಮೆ.

ಆದರೆ, ತಾನು ಮಾಡುತ್ತಿರುವುದು ಪಾಪ ಎಂದು ನಮಗೆ ಅರಿವಾಗುವುದು ಎಂದು? "ಬಹಳ ಆಳವಾದ ಕೆಸರಿನ ಕಮರಿಯಲ್ಲಿ ಸಿಕ್ಕಿಕೊಂಡ ಆನೆ' ಯಂತೆ ನಾವು ನಮ್ಮ ಪಾಪ ಕರ್ಮಗಳ ಕೂಪದಲ್ಲಿ ಮುಳುಗಿದ್ದರೆ, ಮೇಲೆ ಬರಲು ಬಹಳ ಕಷ್ಟ. ನಮ್ಮ ಪೂರ್ವ ಪುಣ್ಯದ ಬಲದಿಂದ ಹೊರಬಂದರೂ ಮೇಲೆ ಹೇಳಿದ ಹಂತಗಳನ್ನು ದಾಟಿ ಶುದ್ಧರಾಗಿ ಹೊರಬರಲು ಖಂಡಿತ ಆ ದೈವ ಕೃಪೆ ಬೇಕು. ನಾವು ಆ ಕೂಪದಿಂದ ಹೊರಬರಲು ಉತ್ಕಟ ಇಚ್ಛೆಯನ್ನು ಹೊಂದಿದ್ದರೆ 'ಶಿಥಿಲಿಪುದು ಕಾರುಣ್ಯದಿಂ ದೈವ" ಎಂದು ಗುಂಡಪ್ಪನವರು ಹೇಳಿದಂತೆ ಆ ದೈವವೂ ಸಹ ನಮ್ಮ ಸಹಾಯಕ್ಕೆ ಬರುತ್ತದೆ ಅಲ್ಲವೇ? ಪಾಪ ಮಾಡುವ ಸ್ಥಿತಿಯಿಂದ, ಮಾಡಿದ್ದು ಪಾಪವೆಂದು ಅರಿತು, ಪಶ್ಚಾತ್ತಾಪ ಪಟ್ಟು ನಮ್ಮನ್ನು ನಾವು ತಿದ್ದಿಕೊಳ್ಳಲು ಪ್ರಯತ್ನ ಪಟ್ಟು ಆ ಮೂಲಕ ದೈವ ಕೃಪೆಗೆ ಪಾತ್ರರಾಗಿ 'ಶುದ್ಧ'ರಾಗಿ ಬದುಕಿನಲ್ಲಿ ಹೊರಬರಲಾದರೆ ನಾವೇ ಧನ್ಯರೆಂದಂದುಕೊಳ್ಳಬೇಕು

**ಮುಕ್ತಕ – 510**

**ನಿನ್ನೇಳುಬೀಳುಗಳು ನಿನ್ನ ಸೊಗ ಗೋಳುಗಳು ।**
**ನಿನ್ನೊಬ್ಬನೋಸುಗವೆ ನಡೆವ ಯೋಜನೆಯೇಂ? ॥**
**ಇನ್ನದೆನಿಬರ ಜೀವಪಾಕವದರಿಂದಹುದೊ! ।**
**ಛನ್ನವಾ ಋಣಮಾರ್ಗ - ಮಂಕುತಿಮ್ಮ ॥**

ನಿನ್ನೇಳುಬೀಳುಗಳು=ನಿನ್ನ+ಏಳು+ಬೀಳುಗಳು,ನಿನ್ನೊಬ್ಬನೋಸುಗವೆ=ನಿನ್ನ+ಒಬ್ಬನ+ಓಸುಗವೇ, ಇನ್ನದೆನಿಬರ= ಇನ್ನದೆ+ಎನಿಬರ, ಜೀವಪಾಕವದರಿಂದಹುದೊ =ಜೀವ+ಪಾಕವು+ಅದರಿಂದ+ಅಹುದೊ,
ಸೊಗ=ಸಂತೋಷ, ನಿನ್ನೋಬ್ಬನೋಸುಗವೆ= ನಿನ್ನೊಬ್ಬನಿಗಾಗಿಯೇ, ಇನ್ನದೆನಿಬರ=ಇನ್ನೂ ಅದೆಷ್ಟು ಜನರ, ಅಹುದೊ ಆಗುವುದೋ, ಛನ್ನ= ರಹಸ್ಯ, ಗೂಢ

ನಿನ್ನ ಬದುಕಿನ ಏರಿಳಿತಗಳು, ನಿನ್ನ ಸಂತೋಷ ಮತ್ತು ದುಃಖಗಳೆಲ್ಲವೂ ನಿನ್ನೊಬ್ಬನಿಗಾಗಿಯೇ ನಡೆದ ಒಂದು ಯೋಜನೆಯೆಂದು ನೀನಂದುಕೊಳ್ಳಬೇಡ. ನಿನ್ನ ಜೀವನ, ಹಲವಾರು ಕಾರಣಗಳ ಪ್ರಭಾವದಿಂದ ರೂಪುಗೊಂಡಿದೆ.ಆದರೆ ಯಾರಿಂದ ಯಾವ ಋಣ ಬಂದಿದೆ,ಎಷ್ಟು ಬಂದಿದೆ ಎನ್ನುವುದು ನಮಗರಿವಾಗದ ರಹಸ್ಯ ಎಂದು ಒಂದು ಗೂಢವಾದ ವಿಚಾರವನ್ನು ಮಂಡಿಸಿದ್ದಾರೆ ಮಾನ್ಯ ಗುಂಡಪ್ಪನವರು.

ಅಡುಗೆ ಮಾಡುವಾಗ ಒಂದು ಪದಾರ್ಥಕ್ಕೆ ಒಂದು ನಿರ್ಧಿಷ್ಟ ರುಚಿ' ಬಂದಿದೆ ಎಂದರೆ, ಅದಕ್ಕೆ ಹಾಕಿದ ನೀರಿನ, ತರಕಾರಿಯ, ಬೇಳೆಯ, ಹುಣಸೆಯ, ಉಪ್ಪಿನ, ಖಾರದ ಪುಡಿಯ (ಇದರೊಳಗೆ 5-6ವಸ್ತುಗಳ ಮಿಶ್ರಣ) ಮತ್ತು ಮೇಲೆ ಹಾಕುವ ಒಗ್ಗರಣೆಯ ಪ್ರತೀ ವಸ್ತುವಿನ ಗುಣಗಳು ವಿವಿಧ ಪ್ರಮಾಣದಲ್ಲಿ ಸೇರಿಕೊಂಡಿವೆ ಎಂದು ಅರ್ಥ. ಆದರೆ ಆ ರುಚಿಯೇ ಬರಬೇಕಾದರೆ ಯಾವುದು ಎಷ್ಟು ಪ್ರಮಾಣದಲ್ಲಿ ಸೇರಿಕೊಂಡಿದೆ ಎಂದು ಹೇಳುವುದು ಅಸಾಧ್ಯ.

ಹಾಗೆಯೇ ನಮ್ಮ ರೂಪ, ನಮ್ಮ ಸ್ವಭಾವ ಮತ್ತು ನಮ್ಮ ಗುಣಗಳೂ ಸಹ ನಮ್ಮ ವ್ಯಕ್ತಿತ್ವವನ್ನು ರೂಪಿಸಲು ಬೇರೆ ಬೇರೆ ಪ್ರಮಾಣದಲ್ಲಿ ಬಂದು ಸೇರಿಕೊಂಡಿವೆ. ನಾವು ತಾಯಿಯ ಗರ್ಭದಲ್ಲಿ ಬಿದ್ದಾಗಲೇ ವಂಶವಾಹಿನಿಯಿಂದ ಬಂದ ಗುಣಗಳು, ಗರ್ಭದಲ್ಲಿ ತಾಯಿ ಸೇವಿಸುವ ಆಹಾರ, ತಾಯಿಯ ಚಿಂತನೆಗಳಿಂದ ಬರುವ ಗುಣಗಳು, ಭೂ ಪತನವಾದಮೇಲೆ, ಪ್ರಕೃತಿಯಿಂದ, ಸೇವಿಸುವ ಆಹಾರದಿಂದ, ಕೇಳುವ ಶಬ್ದಗಳಿಂದ, ಸುತ್ತಲಿನವರ ಮಾತುಗಳಿಂದ, ಬೆಳೆಯುತ್ತ ಹೋದಂತೆ ನಮಗೆ ಸಿಗುವ ಸಂಗದಿಂದ, ನೋಡಿ, ಕೇಳಿ, ಹೇಳಿಸಿಕೊಂಡು ಕಲಿಯುವ ವಿಷಯಗಳು, ನಮ್ಮ ಸ್ವಂತ ಚಿಂತನೆಯಿಂದ ರೂಢಿಸಿಕೊಳ್ಳುವ ಗುಣಗಳು, ಹೀಗೆ ಸಾವಿರಾರು ವಿಚಾರಗಳ ಪ್ರಭಾವ ನಮ್ಮ ಮೇಲೆ ಆಗಿ ನಾವು ರೂಪುಗೊಳ್ಳುತ್ತೇವೆ. ಇದರಲ್ಲಿ ನಮ್ಮ ಪ್ರಮೇಯ ಬಹಳ ಕಡಿಮೆ. ಆದರೆ ಯಾವುದರಿಂದ ಏನನ್ನು ಮತ್ತು ಎಷ್ಟನ್ನು ಯೆರವಲು ಪಡೆದು ನಾವಾಗಿದ್ದೇವೆ ಎಂದು ಅರಿಯುವುದು ಕಷ್ಟವಷ್ಟೇ ಅಲ್ಲ ಅಸಾಧ್ಯ. ಏಕೆಂದರೆ ಅದು ದೈವ ರಹಸ್ಯ. ಇದನ್ನೇ ಮಾನ್ಯ ಗುಂಡಪ್ಪನವರು "ಛನ್ನವಾ ಋಣಮಾರ್ಗ " ಎಂದಿದ್ದಾರೆ

ನಮ್ಮ ಪ್ರಮೇಯವೇ ಇಲ್ಲದೆ ತಾನೇ ತಾನಾಗಿ ನಮ್ಮೊಳಗೆ ಸೇರಿಕೊಳ್ಳುವ ಬಹಳಷ್ಟು ಗುಣಗಳಿಂದ ನಾವು ರೂಪುಗೊಳ್ಳುತ್ತೇವೆ ಎಂದು ಅರಿತುಕೊಂಡರೆ, ಈ ಜಗತ್ತನ್ನು ಒಂದು ಸೂತ್ರದಲ್ಲಿ ಬಂಧಿಸಿ ಜಗನ್ನಾಟಕವನ್ನಾಡಿಸುವ ಆ ಪರಮಾತ್ಮನ ಕೈ ಚಳಕ ನಮಗೆ ಅರ್ಥವಾಗುತ್ತದೆ. ಆಗ ನಮಗೆ 'ನಾನು' ಎನ್ನುವ ಭಾವ ನಶಿಸಿ, ಅಹಂಕಾರ

ಕಡಿಮೆಯಾದೀತು. ನಮ್ಮ ಅಸ್ತಿತ್ವಕ್ಕೆ ಪ್ರತೀ ಕ್ಷಣವೂ ಆ ಪರಮಾತ್ಮನಿಗೆ ಕೃತಜ್ಞತೆಯನ್ನು ತೋರುವ ಸ್ವಭಾವ ನಮ್ಮದಾಗಬಹುದು.

**ಮುಕ್ತಕ – 511**

**ನರಕ ತಪ್ಪಿತು ಧರ್ಮಜಂಗೆ,ದಿಟ, ಆದೊಡೇಂ? ।**
**ನರಕ ದರ್ಶನದುಃಖ ತಪ್ಪದಾಯಿತಲ? ||**
**ದುರಿತತರುವಾರು ನೆಟ್ಟುದೊ, ನಿನಗುಮುಂಟು ಫಲ |**
**ಚಿರಋಣದ ಲೆಕ್ಕವದು - ಮಂಕುತಿಮ್ಮ ||**





ದುರಿತತರುವಾರು=ದುರಿತ+ತರುವ+ಆರು, ನಿನಗುಮುಂಟು=ನಿನಗುಂ+ಉಂಟು,
ದಿಟ=ಸತ್ಯ, ಆದೊಡೇಂ=ಆದರೇನು ।,ದುರಿತತರು=ಪಾಪದ ವೃಕ್ಷ, ಚಿರಋಣದ=ಅಳಿಯದ ಸಾಲ.

ಶ್ರೀ ಕೃಷ್ಣನ ಅನುಜ್ಞೆಯಂತೆ " ಹತೋಶ್ವತ್ತಾಮೋ ನಾಮ ಕುಂಜರಃ" ಎಂದು ಹೇಳುವಾಗ 'ನಾಮ ಕುಂಜರಃ' ಎನ್ನುವುದನ್ನು ಕೇಳಿಸದಂತೆ ಹೇಳಿ, ತನ್ನ ಮಗನಾದ ಅಶ್ವತ್ತಾಮನೇ ಸತ್ತನೆಂದು ಭಾವಿಸುವಂತೆ ಮಾಡಿ ಕೌರವರ ಸೇನಾಧಿಪತ್ಯವನ್ನು ವಹಿಸಿದ್ದ 'ದ್ರೋಣ' ನ ಸಾವಿಗೆ ತಂತ್ರದಿಂದ ಕಾರಣನಾದ ಧರ್ಮರಾಯನಿಗೆ ನರಕವಾಸ ತಪ್ಪಿದರೂ, ಈ ಒಂದು ಪಾಪದಿಂದ ನರಕ ದರ್ಶನವಾಯಿತಲ್ಲ!! ಇಲ್ಲಿ ಕೃಷ್ಣನ ಮಾತು ಧರ್ಮಜನ ಬಾಯಲ್ಲಿ' ಅದೇ ರೀತಿ ನಮ್ಮ ನಮ್ಮ ಬದುಕುಗಳಲ್ಲೂ ಯಾರೋ ಮಾಡಿದ ಪಾಪಕ್ಕೆ ಯಾರೋ ಬಲಿಯಾಗುವುದಿಲ್ಲವೇ? ಅದಕ್ಕೆ ಕಾರಣ ನಮಗರ್ಥವಾಗದ ಋಣ' ದ ಲೆಕ್ಕಾಚಾರ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ತನ್ನ ದ್ವಿಚಕ್ರವಾಹನ ಏನೋ ತೊಂದರೆ ಕೊಟ್ಟಾಗ, ರಸ್ತೆಯ ಬದಿಯಲ್ಲಿ ಅದನ್ನು ದುರಸ್ತಿ ಮಾಡಲು ನೋಡುತ್ತಿದ್ದಾಗ, ಗಗನದಲ್ಲಿ ಹಾರುತ್ತಿದ ಹದ್ದು, ತಾನು ಹಿಡಿದಿದ್ದ ಹಾವೊಂದನ್ನು ಯಾವುದೋ ಕಾರಣಕ್ಕಾಗಿ ಬಿಟ್ಟಾಗ ಅದು ನೇರ ಅವನ ಮೇಲೆ ಬಿದ್ದು ಅವನಿಗೆ ಕಚ್ಚಿ ಅವನ ಮೃತ್ಯುವಾದ ಘಟನೆಯನ್ನು ನಾನು ಕೇಳಿದ್ದೇನೆ. ಎಂತಹ ವಿಚಿತ್ರ. ವಾಸ್ತವವಾದಿಗಳು, ಇದನ್ನು ಕಾಕತಾಳೀಯವೆನ್ನುತ್ತಾರೆ. ಆದರೆ ಈ ಜಗತ್ತಿನಲ್ಲಿ ಕಾರಣವಿಲ್ಲದೆ ಯಾವ ಘಟನೆಯೂ ನಡೆಯುವುದಿಲ್ಲವೆನ್ನುವುದು ನಮ್ಮ ನಂಬಿಕೆ.

ಶುದ್ಧ ಕುಡುಕನಾದ ಮನೆಯ ಯಜಮಾನನ ವರ್ತನೆಯಿಂದ ಮನೆ ಮಂದಿಯಲ್ಲ ಯಾತನೆಯನ್ನು ಅನುಭವಿಸುತ್ತಾರಲ್ಲವೇ? ದುಷ್ಟ ಮಕ್ಕಳಿಗಾಗಿ ಆಜೀವ ಪರ್ಯಂತ ದುಡಿಯುವ ತಂದೆ ತಾಯಿಗಳೆಷ್ಟೋ ಇರುತ್ತಾರಲ್ಲವೇ? ಪಾಪ ಅಥವಾ ಕೆಟ್ಟ ಕೆಲಸಗಳನ್ನು ಯಾರಾದರೂ ಮಾಡುವಾಗ, ಅನ್ಯರು ಅವರಿಗೆ ಎಷ್ಟು ಬುದ್ಧಿವಾದ ಹೇಳಿದರೂ ಮತ್ತು ತಾನು ಮಾಡುವುದು ಸರಿಯಲ್ಲ ಎಂದು ಅವನಿಗೆ ಅನ್ನಿಸಿದರೂ ಮತ್ತೆ ಮತ್ತೆ ಅದೇ ತಪ್ಪನ್ನು ಮಾಡುವ ಮಂದಿಯೆಷ್ಟು? ಇದೆಲ್ಲ ಏಕೆ ಹೀಗೆ ಎಂದರೆ, ನಮಗೆ ಸಮರ್ಪಕವಾದ ಉತ್ತರ ಮತ್ತು ವಿಶ್ಲೇಷಣೆ ಸಿಗುವುದಿಲ್ಲ.

ನಮಗರಿಯದ, ನಾವು ಬಾಧ್ಯರಲ್ಲದ ಕೆಲಸಗಳು ನಮ್ಮೊಡನೆ ಏಕೆ ಆಗುತ್ತವೆ ಮತ್ತು ತತ್ಪರಿಣಾಮವಾಗಿ ನಮಗೆ ಬೇಡದ ಫಲಗಳು ಏಕೆ ಸಿಗುತ್ತವೆ ಎಂದು ಅರಿಯಲು ಪ್ರಯತ್ನಪಟ್ಟರೂ ಅರ್ಥವಾಗುವುದಿಲ್ಲ. ಇದನ್ನೇ ಮಾನ್ಯ ಗುಂಡಪ್ಪನವರು 'ಚಿರಋಣದ ಲೆಕ್ಕವದು' ಎಂದರು. ನಮ್ಮ ಯಾವ ಪೂರ್ವ ಕರ್ಮದ ಫಲವೋ ಅಥವಾ ಯಾರ ಕರ್ಮ ಫಲವನ್ನು ನಾವು ಅನುಭವಿಸುತ್ತಿದ್ದೇವೋ, ಯಾವ ಕಾರಣದಿಂದ ಅನುಭವಿಸುತ್ತಿದ್ದೇವೋ ನಮಗೊಂದೂ ಅರ್ಥವಾಗುವುದಿಲ್ಲ, ಆದರೆ ಅದಕ್ಕೆ ಕಾರಣವೇ ಇಲ್ಲವೆಂದು ಅರ್ಥವಲ್ಲ. ಏಕೆಂದರೆ ಒಂದು ಕಾರ್ಯವಿದ್ದರೆ ಅದಕ್ಕೊಂದು ಕಾರಣವಿರಲೇ ಬೇಕು. ಆ ಕಾರಣ, ಅದರ ಕಾರ್ಯ ಮತ್ತು ಅದಕ್ಕೊಂದು ಫಲ ಇದ್ದೇ ಇರುತ್ತದೆ. ಆದರೆ ಯಾವುದರಿಂದ ಯಾವುದು ಎಂದು ಅರ್ಥಮಾಡಿಕೊಳ್ಳುವ ಕ್ಷಮತೆ ನಮಗಿರುವುದಿಲ್ಲ. ಬಂದದ್ದನ್ನು ಅನುಭವಿಸುತ್ತಾ ಹೆಚ್ಚಿನ ಕರ್ಮಗಳನ್ನು ಅಂಟಿಸಿಕೊಳ್ಳದೆ ಜಾಗರೂಕರಾಗಿವುದನ್ನು ಬಿಟ್ಟು ನಮಗೆ ಅನ್ಯ ಮಾರ್ಗವಿಲ್ಲ.

**ಮುಕ್ತಕ – 512**

**ಆವ ಋಣಕೋಸುಗವೊ, ಆರ ಹಿತಕೋಸುಗವೊ।**
**ಅವಾವ ಕಾರಣಕೋ, ಆವ ಯೋಜನೆಗೋ॥**
**ನೋವ ನೀಂ ಪಡುವುದೇ ದೈವೇಚ್ಛೆಯಾಗಿರದೆ?।**
**ದೈವಕುರುಡೆನ್ನದಿರು - ಮಂಕುತಿಮ್ಮ॥**

ಋಣಕೋಸುಗವೊ=ಋಣಕ್ಕಾಗಿಯೋ, ಹಿತಕೋಸುಗವೊ=ಹಿತಕ್ಕಾಗಿಯೋ,

ಯಾವ ಋಣ ತೀರಿಸಲೋ ಅಥವಾ ಯಾರ ಹಿತಕ್ಕಾಗಿಯೋ ಅಥವಾ ಬೇರೆ ಯಾವುದೋ ಕಾರಣಕ್ಕೋ ಅಥವಾ ನಮಗರಿಯದ ಶಕ್ತಿಯ ಯಾವ ಯೋಜನೆಗನುಸಾರವಾಗಿಯೋ ನೀನು ನೋವನುಭವಿಸುವುದೇ ದೈವೇಚ್ಛೆ ಆಗಿದ್ದರೆ ಆ ದೈವವನ್ನು ಕುರುಡು ಎನ್ನಬೇಡ. ಏಕೆಂದರೆ ನೀ ಅನುಭವಿಸುವುದು ಕೇವಲ ದೈವ ಕೃಪೆಯನ್ನಲ್ಲ, ಅದರೊಳಗೆ ನಿನ್ನ ಪಾಲೂ ಇರುತ್ತದೆ ಎಂದು ನಮ್ಮ ಕರ್ಮಫಲಗಳ ವಿಚಾರವನ್ನು ಮಂಡಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

'ಋಣ' ಎಂದರೆ ಹಿಂದೆ ಪಡೆದದ್ದು ಮತ್ತು ಹಿಂತಿರುಗಿಸಲೇ ಬೇಕಾದದ್ದು ಎಂದು ಅರ್ಥ. ಹಿಂದೆ ಯಾರಿಂದಲೋ ಏನನ್ನೂ ಪಡೆದಿದ್ದ ಕಾರಣ ಅದನ್ನು ಹಿಂತಿರುಗಿಸಲೇ ಬೇಕಾಗಿರುವುದರಿಂದ ಅದರ ಪ್ರಯತ್ನದಲ್ಲಿ ನಮ್ಮ ಕೆಲವು ಕೆಲಸಗಳು ಮತ್ತು ಕಾರಣವರಿಯದೆ ಯಾರದೋ ಅವಶ್ಯಕತೆಗಳನ್ನು ತೀರಿಸಲು ಪರಹಿತ' ದ ಕೆಲಸಗಳನ್ನು ನಾವು ಮಾಡುತ್ತೇವೆ, ಅಲ್ಲವೇ? ನಮಗೆ ಇದರ ಹಿಂದಿನ ಕಾರಣಗಳು ಮತ್ತು ಘಟನೆಗಳ ಅರಿವಾಗುವುದೇ ಇಲ್ಲ. ಯಾವುದರಿಂದ ಯಾವುದು? ಏಕೆ ಹೀಗೆ, ಅಥವಾ ಹೀಗೇ ಏಕೆ ಎಂದು ಪ್ರಯತ್ನಪಟ್ಟರೂ ನಮಗೆ ಅರ್ಥವಾಗುವುದೇ ಇಲ್ಲ.

ಯಾರದೋ ಮನೆಯಲ್ಲಿ ನಮಗೆ ಊಟ ಆದರೆ ಬೇರೆ ಯಾರಿಗೋ ನಮ್ಮ ಮನೆಯಲ್ಲಿ ಉಪಚಾರ. ಯಾರೋ ನಮಗೆ ಸೂಕ್ತ ಸಮಯದಲ್ಲಿ ಸಹಾಯ ಮಾಡುತ್ತಾರೆ, ಮತ್ತ್ಯಾರೋ ನಮ್ಮಿಂದ ಸಹಾಯವನ್ನು ಪಡೆಯುತ್ತಾರೆ. ಒಂದು ಘಟನೆಗೂ ಮತ್ತೊಂದಕ್ಕೂ, ಒಬ್ಬ ವ್ಯಕ್ತಿ ಮತ್ತು ಮತ್ತೊಂದು ವ್ಯಕ್ತಿಗೂ ಯಾವುದೇ ಸಂಬಂಧವಿಲ್ಲದಿದ್ದರೂ,

ಸಂಪರ್ಕವೇರ್ಪಟ್ಟಾಗ ಕಾಕತಾಳೀಯವಾಗಿ ಕಂಡರೂ ಅದು ಒಂದು ಪೂರ್ವ ನಿರ್ಧಾರಿತ ವಿನ್ಯಾಸದಂತೆಯೇ ನಡೆಯುತ್ತದೆ.

ಆ ವಿನ್ಯಾಸದಲ್ಲಿ ನಮ್ಮ ಪಾತ್ರವು ಅಧಿಕವಾಗಿದ್ದು ನಮ್ಮ ಪೂರ್ವ ಕರ್ಮದಿಂದ ವಿನ್ಯಾಸಗೊಂಡಿರುತ್ತದೆ ಮತ್ತು ಅನ್ಯರ ಕರ್ಮಾನುಸಾರವಾಗಿಯೂ ನಮ್ಮ ಬದುಕಿನ ವಿನ್ಯಾಸ ರೂಪುಗೊಂಡಿರಬಹುದು. ಇದು ಅರ್ಥವಾಗುವುದಿಲ್ಲ. ನಮಗೆ ಯಾವುದು ಅರ್ಥವಾಗುವುದಿಲ್ಲವೋ ಅದನ್ನು 'ದೈವಕೃಪೆ' ಎಂದು ನಾವು ಒಪ್ಪಿಕೊಳ್ಳಲೇಬೇಕು. ಅನ್ಯಥಾ ದಾರಿಯಿಲ್ಲ. ಹಾಗಾಗಿ ಆಯಾಯಾ ಸಮಯಕ್ಕೆ ನಮ್ಮೆದುರಿನ ಕೆಲಸವನ್ನು ಶ್ರದ್ಧೆಯಿಂದ ಮಾಡುವುದು. ಅನಪೇಕ್ಷಿಯಾಗಿರುವುದು, ಕಾರಣಗಳ ಹುಡುಕಿ, ಬದುಕನ್ನು ಕೆದಕುವುದರಿಂದ ಯಾವ ಪ್ರಯೋಜನವೂ ಇಲ್ಲ. ಬಂದ ಕರ್ಮ ಫಲವನ್ನು ಸಂತೋಷದಿಂದ ಅನುಭವಿಸುವುದು ಮಾಡಿದರೆ ಸುಖ ನೆಮ್ಮದಿ ಎರಡೂ ಇರುತ್ತದೆ.





**ಮುಕ್ತಕ -513**

**ಆವುದರಿನಾವಾಗ ದೈವ ತಾನೊಲಿದೀತೆ? |**
**ಪೂರ್ವಿಕದ ನಿಯತಿಯನದೆಂದು ಸಡಲಿಪುದೋ? ||**
**ಭಾವಿಸುಕೃತವದೆಂದು ಪೂರ್ವದುರಿತಕೆ ಮಿಗಿಲೋ? |**
**ದೈವಿಕರಹಸ್ಯವದು - ಮಂಕುತಿಮ್ಮ ||**

ಆವುದರಿನಾವಾಗ= ಆವುದರಿನ್+ಆವಾಗ, ತಾನೊಲಿದೀತೊ=ತಾನ್+ಒಲಿದೀತೆ,
ನಿಯತಿಯನದೆಂದು=ನಿಯತಿಯನು+ಅದು+ಎಂದು, ಭಾವಿಸುಕೃತವದೆಂದು=ಭಾವಿ+ಸುಕೃತವು+ಅದೆಂದು,
ಆವುದರಿನ್= ಯಾವುದರಿಂದ, ಸುಕೃತ=ಪುಣ್ಯ ಕಾರ್ಯ, ಪೂರ್ವ=ಹಿಂದಿನ, ದುರಿತ=ಪಾಪ

ನಾವು ಏನು ಮಾಡಿದರೆ ಆ ದೈವ ನಮಗೆ ಒಲಿದೀತು? ಹಿಂದಿನಿಂದ ಪಡೆದುಬಂದ ಕರ್ಮ ಶೇಷವನ್ನು ಎಂದು ಸಡಿಲಿಸಿತು. ನಮ್ಮ ಮುಂದಿನ ಪುಣ್ಯವು, ಹಿಂದಿನ ಪಾಪಕ್ಕಿಂತ ಎಂದು ಅಧಿಕವಾಗುವುದೋ ಯಾವುದೂ ನಮಗೆ ಅರ್ಥವಾಗುವುದಿಲ್ಲ. ಅದೊಂದು ದೈವೀಕ ರಹಸ್ಯವೆಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮಗೆ ಸುಖ ಮತ್ತು ದುಃಖಗಳು, ನಮ್ಮ ಬಾಳಿನಲ್ಲಿ ಬರುತ್ತಲೇ ಇರುತ್ತವೆ. ಕೇವಲ ಸುಖ ದುಃಖಗಳಾದರೆ ಹೇಗೋ ಸಹಿಸಿಕೊಂಡುಬಿಡಬಹುದು. ಆದರೆ ಯಾತನಾಪೂರಿತವಾದ ಪ್ರಸಂಗಗಳನ್ನು ಎದುರಿಸಬೇಕಾಗಿ ಬಂದಾಗ 'ಯಾವ ಪಾಪದ ಫಲವೋ' ಎಂದು ನಾವು ನಮ್ಮ ಪೂರ್ವ ಕರ್ಮವನ್ನು ಹಳಿಯುತ್ತೇವೆ, ಮತ್ತೆ ಸುಖ ಬಂದಾಗ ಅದನ್ನು ಮರೆಯುತ್ತೇವೆ. ಇದು ಸಹಜ. ಆದರೆ ಯಾವ ಕರ್ಮದಿಂದ ಈ ಸುಖ ದುಃಖಗಳು ನಮಗೆ ಬರುತ್ತವೆ ಎನ್ನುವುದು ನಮಗೆ ಅರ್ಥವಾಗುವುದಿಲ್ಲ. ನಮ್ಮ ಪಾಪ ಕರ್ಮಗಳು ಎಷ್ಟಿವೆ - ಮತ್ತು ಅವುಗಳ ಹಿಡಿತದಿಂದ ನಮ್ಮನ್ನು ಆ ದೈವ ಎಂದು ಮುಕ್ತವಾಗಿಸುತ್ತದೆ, ಎನ್ನುವುದಾಗಲೀ ಅಥವಾ ಎಷ್ಟು ಪುಣ್ಯ ಮಾಡಿದರೆ ಅಥವಾ ಯಾವ ಪುಣ್ಯಕಾರ್ಯ ಮಾಡಿದರೆ ನಮ್ಮ ಪಾಪದ ಗಂಟು ಕರಗುತ್ತದೆ ಎಂದು ನಮಗೆ ಎಂದಿಗೂ ಅರ್ಥವೇ ಆವಾಗುವುದಿಲ್ಲ ಅಲ್ಲವೇ? ಇದನ್ನೇ ನಮ್ಮ ಗುಂಡಪ್ಪನವರು "ದೈವಿಕರಹಸ್ಯವಿದು' ಎಂದರು.

ವಿಪರ್ಯಾಸವೆಂದರೆ, ಜಗತ್ತಿನಲ್ಲಿ ಜನರೆಲ್ಲರೂ, ಪಾಪ ಪೂರಿತವಾದ ಪೂರ್ವ ಕರ್ಮದ ಅನುಸಾರವಾಗಿ ಕಷ್ಟಗಳು ಬಂದಾಗ, ಅವುಗಳನ್ನು ತೀರಿಸಿಕೊಳ್ಳಲು ಮಾಡುವ ಕೆಲಸಗಳು ಅವರಿಗರಿವಿಲ್ಲದೆಯೇ ಅವರಿಂದ ಮತ್ತಷ್ಟು ಪಾಪಗಳನ್ನು ಮಾಡಿಸುತ್ತದೆ. ಮಾಡಿದ ಪಾಪ ಕಳೆಯಲು ದೇವರಿಗೆ 'ಲಂಚ'ಕೊಡುವ ಪಾಪ ಮಾಡುವವರಿಲ್ಲವೇ? ಮಾಡಬಾರದ ಕೆಲಸವನ್ನು ಮಾಡಿದರೆ ಪಾಪ. 'ಕರ್ತವ್ಯಂ'' ಎಂದು ಹೇಳಲ್ಪಡುವ ಮಾಡಲೇಬೇಕಾದ ಕೆಲಸವನ್ನು ಮಾಡಿದರೆ "ಸುಖದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯ್ ತತೋ ಯುದ್ಧಾಯ ಯುಜ್ಯಸ್ಯ ನೈವಂ ಪಾಪಮವಾಪ್ಸ್ಯಸಿ" (ಭ.ಗೀ, ಸಾಂಖ್ಯ ಯೋ - 28) ಎಂದು ಶ್ರೀ ಕೃಷ್ಣ ಹೇಳುವಂತೆ ನಾವೂ ಸಹ ಜೀವನದ ಯುದ್ಧದಲ್ಲಿ ಸುಖ ಬಂದಾಗ ಉಬ್ಬದೆ, ದುಃಖ ಬಂದಾಗ ಕುಗ್ಗದೆ ಪಾಲಿಗೆ ಬಂದ ಕೆಲಸಗಳನ್ನು 'ಕರ್ತವ್ಯ' ಎಂದು ಮಾಡಿದರೆ, ಸುಖ ದುಃಖಗಳಿಂದ ಉಂಟಾಗುವ ಮನೋ ವಿಕಾರಗಳಿಲ್ಲದೇ 'ರಕ್ತಿ'ಯಲ್ಲೂ ವಿರಕ್ತ ಭಾವದಿಂದಿರಬಹುದು.

ನಮ್ಮ ಬದುಕಿನ ದೈವೀ ವಿನ್ಯಾಸವನ್ನು (divine design) ಅರ್ಥಮಾಡಿಕೊಳ್ಳುವುದು ಅಸಾಧ್ಯ. “ಆಚಾರವೇ ಸ್ವರ್ಗ ಅನಾಚಾರವೇ ನರಕ' ಎಂದು ಬಸವಣ್ಣನವರು ಹೇಳಿದಂತೆ ಅನ್ಯರಿಗೆ ನೋವ ನೀಡದ ಕೃತ್ಯಗಳೇ ಪುಣ್ಯವು ಮತ್ತು ಪರ ಪೀಡನೆಯೇ ಪಾಪ. ಈ ಮೂಲ ತತ್ವವನ್ನು ಮನವರಿಕೆ ಮಾಡಿಕೊಂಡು ನಮ್ಮ ಸತ್ಕಾರ್ಯಗಳಿಂದ ಸಂಚಿತ ಪಾಪದ ಮೂಟೆಯನ್ನು ಕರಗಿಸಿಕೊಳ್ಳಬೇಕು. ಮಾಡಿದ ಕೆಲಸವನ್ನೆಲ್ಲಾ 'ಪರಮಾತ್ಮ'ನಿಗೆ ಸಮರ್ಪಿಸಿ ಬಂದದ್ದೆಲ್ಲಾ ಬರಲಿ ಆ ಗೋವಿಂದನ ದಯೆ ಇರಲಿ' ಎಂದು ಇರಲಾದರೆ ಶಾಂತವಾಗಿರಬಹುದು, ಅನಂದವಾಗಿರಬಹುದು.

**ಮುಕ್ತಕ – 514**

**ಎನಗೆ ಸುಖವಿಲ್ಲವದರಿಂ ದೇವರಿರನೆನ್ನು - |**
**ವನುಮಿತಿಯ ನೀಂ ಗೆಯ್ಯೆ, ಸುಖಿಯದೇನೆನುವಂ? ||**
**ತನುಬಾಹ್ಯಕರಣದನುಭವಕಿಂತ ಸೂಕ್ಷ್ಮತರ- |**
**ದನುಭವವ ನೀನರಸೋ - ಮಂಕುತಿಮ್ಮ ||**

ಸುಖವಿಲ್ಲವದರಿಂ=ಸುಖವು+ಇಲ್ಲ+ಆದರಿಂ, ದೇವರಿರನೆನ್ನುವನುಮಿತಿಯ= ದೇವರ+ಇರನು+ಎನ್ನುವ+ ಅನುಮಿತಿಯ, ಸುಖಿಯದೇನೆನುವಂ=ಸುಖಿಯೂ+ಅದೇನು+ಅನುವಂ, ತನುಬಾಹ್ಯಕರಣದನುಭವಕಿಂತ= ತನು+ಬಾಹ್ಯ+ಕರಣದ+ಅನುಭವಕಿಂತ, ಸೂಕ್ಷ್ಮತರದನುಭವವ= ಸೂಕ್ಷ್ಮ ರದ+ಅನುಭವವ, ನೀನರಸೋ=ನೀನು+ಅರಸೋ, ಅನುಮಿತಿಯ= ಅನುಮಾನವನ್ನು, ನೀಂ ಗೆಯ್ಯ= ನೀನು ಮಾಡಲು,

ನಿನಗೆ ಕಷ್ಟ ಬಂದಿದೆ, ಹಾಗಾಗಿ ಆ ದೇವರೇ ಇಲ್ಲ ಎಂದು ನೀನು ಅನುಮಾನ ಪಟ್ಟರೆ, ಸುಖಪಡುತ್ತಿರುವವನು ಏನು ಹೇಳುತ್ತಾನೆ ಎಂದು ನೋಡು. ಈ ಸುಖ ದುಃಖವೆನ್ನುವುದು ಕೇವಲ ಹೊರಗಿನ ಅನುಭವ. ಆದ್ದರಿಂದ ದೇಹ ಮನಸ್ಸು ಬುದ್ಧಿಗಳೆಂಬ ಬಾಹ್ಯ 'ಕರಣ'ಗಳಿಗೂ ಅತೀತವಾದ ಸೂಕ್ಷ್ಮತರವಾದ ಆನಂದದ ಅಥವಾ ಸುಖದ ಅನುಭವವನ್ನು ನೀನು ಹುಡುಕು ಎಂದು ಒಂದು ಸೂಚನೆಯನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ .

ಬದುಕಿನ ಪಯಣದಲ್ಲಿ ಅತೀವ ಕಷ್ಟಗಳು, ಆ ಕಷ್ಟಗಳ ಕಾರಣವಾಗಿ ನಾವು ಯಾತನೆಯನ್ನು ಅನುಭವಿಸುವಾಗ, “ಆ ದೇವರೇ ಇಲ್ಲ, ಇದ್ದಿದ್ದರೆ ನಮಗೆ ಇಷ್ಟೊಂದು ಕಷ್ಟ ಬರ್ತಿತ್ತಾ?' ಎಂದು ಹಳಹಳಿಸುವ ಎಷ್ಟೋ

ಜನರನ್ನು ನಾವು ನೋಡಿಲ್ಲವೇ? ಅಷ್ಟೇ ಅಲ್ಲ ಕಷ್ಟಗಳು ತೀರಿ ಸುಖದ ದಿನಗಳು ಬಂದಾಗ 'ಅಬ್ಬ ದೇವರು ಕಣ್ಣು ಬಿಟ್ಟ, ನಮ್ಮ ಕಷ್ಟಗಳೆಲ್ಲಾ ತೀರಿತು' ಎಂದು ಸಮಾಧಾನಪಟ್ಟುಕೊಳ್ಳುವವರಿಲ್ಲವೇ? ಹಾಗಾಗಿ, ಸಾಮಾನ್ಯ ಸಮೀಕರಣವೇನೆಂದರೆ ನಮ್ಮ ಕಷ್ಟ ಸುಖಗಳಿಗೆ ಆ ದೇವರೇ ಬಾಧ್ಯನು. ಅವನೇ ಎಲ್ಲವನ್ನೂ ನೋಡಿಕೊಳ್ಳಬೇಕು. ಅವನು ನಮಗೆ ಒರಗಿಕೊಳಲು ಒಂದು ಕಂಬ.





ಆದರೆ ನಮ್ಮ ಜೀವನದ ಸಾಮಾನ್ಯ ಸುಖ ದುಃಖಗಳು ಕೇವಲ ಇಂದ್ರಿಯಗಳಿಗೆ ಸಂಬಂಧಿಸಿದ್ದು. ಕೆಲಕಾಲ ಇರುವ ದುಃಖಗಳು ಮತ್ತು ಕೆಲಕಾಲ ಇರುವ ಸುಖಗಳು. ವಸ್ತುಗಳಿಂದ ಸಿಗುವ ಮತ್ತು ನಾವು ಅನುಭವಿಸುವ ಸುಖ ದುಃಖಗಳು. ಆದರೆ ನಿಜವಾದ ಸುಖವೇನು ಎನ್ನುವುದಕ್ಕೆ ಮಾನ್ಯ ಗುಂಡಪ್ಪನವರು "ತನುಬಾಹ್ಯಕರಣದನುಭವಕಿಂತ" ಎಂದು ಈ ಮುಕ್ತಕದಲ್ಲಿ ಹೇಳುವಂತೆ ಆ ಸುಖದ ಅನುಭವ ಇಂದ್ರಿಯಾತೀತವಾಗಬೇಕು ಎನ್ನುತ್ತಾರೆ. ಆದರೆ ಇಂದ್ರಿಯಗಳಿಲ್ಲದೆ ಅನುಭವಿಸುವುದು ಹೇಗೆ? ಎನ್ನುವ ಪ್ರಶ್ನೆ ನಮ್ಮಲ್ಲಿ ಉದ್ಭವವಾಗುತ್ತದೆ.

ಯಾವುದೇ ವಸ್ತು, ವಿಷಯ ಅಥವಾ ವ್ಯಕ್ತಿಗಳನ್ನು ಅಪೇಕ್ಷಿಸಿ, ಸಿಕ್ಕಾಗ ಸಂತಸ ಪಡುವುದು ಅಥವಾ ಸಿಗದಿದ್ದಾಗ ದುಃಖಪಡುವುದು ಮಾನವ ಸಹಜವಾದ ಭಾವ. ಆದರೆ ಅಪೇಕ್ಷೆಯೇ ಇಲ್ಲದೆ ಇದ್ದರೆ, ಬಂದದ್ದನ್ನು ಅಥವಾ ಸಿಕ್ಕದ್ದನ್ನು ಸಂವೇದನಾರಹಿತವಾಗಿ ಸ್ವೀಕರಿಸಿ, ಹಾಗೆ ಸಿಕ್ಕದ್ದು ಆ ಪರಮಾತ್ಮನ ಪ್ರಸಾದವೆಂದು ಅಂದುಕೊಂಡರೆ ಒಂದು ತೃಪ್ತಿಯ ಭಾವ ಬರುತ್ತದೆ. ಅಲ್ಲಿ ಆನಂದವಿರುತ್ತದೆ. ಅದೇ ಮಾನ್ಯ ಗುಂಡಪ್ಪನವರು ಹೇಳುವ "ಸೂಕ್ಷ್ಮ ತರದನುಭವ", ಅಂತಹ ಅನುಭವವನ್ನು ನಾವು ಪಡೆಯಲು ನಮ್ಮ ಮನಸ್ಸು ಬುದ್ಧಿ ಮತ್ತು ದೇಹಗಳನ್ನು ಸಿದ್ಧಪಡಿಸಿಕೊಳ್ಳಬೇಕು. ನಮ್ಮ ಆನಂದ ಇಂದ್ರಿಯಾತೀತವಾದ ಆತ್ಮಾನುಸಂಧಾನದಿಂದ ಉಂಟಾಗುವ

ಆನಂದವಾಗಬೇಕು, ಹಾಗಾದರೆ ಅದು ನಿರಂತರ ಆನಂದವಾಗುತ್ತದೆ. ಅಂತಹ ಆನಂದವನ್ನು ಪಡೆಯಲು ನಾವು ಸಾಧನಾ ಸ್ವರೂಪದ ಪ್ರಯತ್ನ ಮಾಡಬೇಕು.

**ಮುಕ್ತಕ – 515**

**ಎನ್ನ ಬೇಡಿಕೆ ನಷ್ಟವಹುದೆಂತು, ದೇವನಿರೆ? ।**
**ಅನ್ಯಾಯ ಜಗವೆಲ್ಲ,ದೇವನಿರನೆನುತ ॥**
**ತನ್ನ ತನ್ನನುಭವವ ನಂಬಲೋರೊರ್ವನುಂ**
**ಭಿನ್ನವಾಗದೆ ಸತ್ಯ । - ಮಂಕುತಿಮ್ಮ ॥**

ನಷ್ಟವಹುದೆಂತು=ನಷ್ಟವು+ಅಹುದು+ಎಂತು, ದೇವನಿರನೆನುತ= ದೇವಾನು+ಇರನು+ಎನುತಿರೆ,
ತನ್ನನುಭವವ=ತನ್ನ+ಅನುಭವವ, ನಂಬಲೋರೊರ್ವನುಂ =ನಂಬಲು+ಒರೋರ್ವನುಂ
ಅಹುದೆಂತು=ಆಗುವುದು ಹೇಗೆ, ಭಿನ್ನವಾಗದೆ =ವ್ಯತ್ಯಾಸವಾಗದೆ.

“ಆ ದೇವನಿರುವುದಾದರೆ ನನ್ನ ಬೇಡಿಕೆಗಳು ಈಡೇರದೆ ಇರಲು ಸಾಧ್ಯವೇ?” ಎಂದು ದೇವರನ್ನು ನಂಬುವವನು ಆಶಾಭಾವದಿಂದ ಇರುತ್ತಾನೆ. ಈ ಜಗತ್ತಿನಲ್ಲಿ ಎಷ್ಟೊಂದು ಅನ್ಯಾಯಗಳು ಅಕ್ರಮಗಳು ದುಷ್ಟತನಗಳು ನಡೆಯುತ್ತಿರುವಾಗ ಛೇ! ಇಷ್ಟೊಂದು ಅನ್ಯಾಯಗಳಿರುವಾಗ ಆ ದೇವರೆಂಬುವನು ಇರಲು ಸಾಧ್ಯವಿಲ್ಲ, ಎಂದು ವಾಸ್ತವವಾದಿ ಅಥವಾ ನಾಸ್ತಿಕವಾದಿ ಇರುತ್ತಾನೆ. ಹೀಗೆ, ಇರುವ ಒಂದು ಸತ್ಯಕ್ಕೆ ಅವರವರ ಅನುಭವಕ್ಕೆ ಅನುಸಾರವಾಗಿ ಬೇರೆ ಪರಿಭಾಷೆಯನ್ನು ಕೊಟ್ಟಾಗ ಸತ್ಯವು ಭಿನ್ನವಾಗದೆ? ಎಂದು ಪ್ರಶ್ನಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಹೀಗೆ, ಪ್ರತಿಯೊಬ್ಬರ ಅನುಭವದ ಆಧಾರದಮೇಲೆ ಆ ದೇವರು ಎನ್ನುವ ವಸ್ತುವಿಗೆ ನೂರಾರು ಪರಿಭಾಷೆಗಳು, ರೂಪಗಳು ಮತ್ತು ವಿಧ ವಿಧವಾದ ಪೂಜೆಗಳು. ಈ ವಿಚಾರ ವೈವಿಧ್ಯತೆಯಿಂದ ಹುಟ್ಟಿಕೊಂಡದ್ದೇ ಭಿನ್ನ ಭಿನ್ನವಾದ ಮತಗಳು, ಧರ್ಮಗಳು, ನಂಬುವವನಿಗೆ ಈ 'ದೇವರು' ಎಂಬುದು ಒಂದು ಊರುಗೋಲಿದ್ದಂತೆ, ಆಶ್ರವನ್ನೀಯುವ ಮಹಾವೃಕ್ಷವಿದ್ದಂತೆ. ಆದರೆ ಭಾವನೆಗೆ ಮಾತ್ರ ನಿಲುಕುವ ವಸ್ತುವಾದ್ದರಿಂದ ಎಷ್ಟು ಭಿನ್ನ ಭಾವನೆಗಳಿದ್ದರೆ, ಅಷ್ಟೊಂದು ಭಿನ್ನ ಭಿನ್ನ ರೂಪಗಳು, ತತ್ವಗಳು, ಮತಗಳು. ಹಾಗಿರುವಾಗ ಸತ್ಯದ ಪರಿಭಾಷೆ ಒಂದೇ ಆಗಲು ಹೇಗೆ ಸಾಧ್ಯ ಎನ್ನುವುದೇ ಪ್ರಶ್ನೆ.

ಪರಿಭಾಷೆಗಳು ಎಷ್ಟೇ ವಿದದಲ್ಲಿ ಇದ್ದರೂ, ಸತ್ಯದ ಸ್ವರೂಪ ಬದಲಾಗುವುದಿಲ್ಲ ಅಲ್ಲವೇ? “ಏಕಂ ಸತ್ಯಂ ಬಹುದಾ ವಿಪ್ರಾಃ ವದಂತಿ” ಎನ್ನುವ ಉಕ್ತಿ ಇಲ್ಲಿ ಬಹಳ ಸೂಕ್ತವಾಗುತ್ತದೆ. ಸತ್ಯವೊಂದೇ ಅದರೂ, ಅವರವರ ಅನುಭವಕ್ಕೆ ತಕ್ಕಂತೆ ಅವರವರು ನೀಡುವ ವ್ಯಾಖ್ಯಾನಗಳು ಭಿನ್ನವಾಗಿರುತ್ತದೆಯಷ್ಟೆ. ಹಾಗಾಗಿ ಒಬ್ಬನೇ ಪರಮಾತ್ಮ ತನ್ನ ಇಚ್ಚೆಯಿಂದಲೇ ಕೋಟ್ಯಾಂತರ ರೂಪಗಳನ್ನು ಧರಿಸಿ ಎಲ್ಲದರಲ್ಲೂ ತಾನಿರುತ್ತ, ತನ್ನ ಮಾಯೆಯಿಂದ ಎಲ್ಲವೂ ಭಿನ್ನ ಭಿನ್ನವಾಗಿ ಕಾಣುವಂತೆ ಸೃಷ್ಟಿಸಿದ್ದಾನೆ ಎಂಬುದನ್ನು ಅರಿತುಕೊಳ್ಳಬೇಕು. ನಮಗೆ ಒಂದು ನಂಬಿಕೆ ಬೇಕು ಮತ್ತು ನಾವು ನಂಬುವುದನ್ನು ದೃಢವಾಗಿ ನಂಬಬೇಕು. ನಮ್ಮ ಸತ್ಯವನ್ನು ನಮ್ಮದೇ ದಾರಿಯಲ್ಲಿ ಕಂಡುಕೊಳ್ಳಬೇಕು. ಹಾಗೆ ಕಂಡ ಸತ್ಯದಲ್ಲಿ ಸಿಗುವ ಆನಂದವನ್ನು ಅನುಭವಿಸಬೇಕು.

**ಮುಕ್ತಕ – 516**

**ಅನುಭವದ ಪರಿ ನೂರ್ವರಿಗೆ ನೂರು ನೂರು ಪರಿ |**
**ದಿನವೊಂದರೊಳೆ ಅದೊಬ್ಬಂಗೆ ನೂರು ಪರಿ ||**
**ಎಣಿಪುದಾರನುಭವವನ್, ಆವ ಪ್ರಮಾಣದಲಿ? |**
**ಮಣಲ ಗೋಪುರವೊ ಅದು - ಮಂಕುತಿಮ್ಮ ||**

ದಿನವೊಂದರೊಳೆ=ದಿನವು+ಒಂದರ+ಒಳೆ, ಅದೊಬ್ಬಂಗೆ=ಅದು+ಒಬ್ಬಂಗೆ,
ಎಣಿಪುದಾರನುಭವವನ್=ಎಣಿಪುದು+ಆರ+ಅನುಭವವನ್,
ನೂರ್ವರಿಗೆ =ನೂರು ಜನರಿಗೆ, ಎಣಿಪುದು=ಎಣಿಸುವುದು, ಪ್ರಮಾಣ=ಅಳತೆ, ಮಣಲ=ಮರಳ

ನಮಗೆ ಯಾವುದೇ ವಿಷಯದ ಅನುಭವ ಎಲ್ಲ ಕಾಲಕ್ಕೂ ಒಂದೇ ರೀತಿಯಲ್ಲಿ ಇರುವುದಿಲ್ಲ. ಒಂದು ವಿಷಯ ನೂರು ಜನಕ್ಕೆ ನೂರು ರೀತಿಯ ಅನುಭವವನ್ನು ನೀಡಬಹುದು. ಹಾಗೆಯೇ ಒಂದೇ ವಿಷಯವು ಒಂದೇ ದಿನದಲ್ಲಿ, ಒಬ್ಬನೇ ವ್ಯಕ್ತಿಗೆ, ಬೇರೆ ಬೇರೆ ಸಮಯದಲ್ಲಿ ಬೇರೆ ಬೇರೆ ರೀತಿಯ ಅನುಭವವನ್ನು ನೀಡಬಹುದು. ಹಾಗೆಯೇ ಪರಮಾತ್ಮಾನುಭವವೂ ಸಹ ಸದಾಕಾಲ ಒಂದೇ ರೀತಿಯಲ್ಲಿರುವುದಿಲ್ಲ ಮತ್ತು ಅವನನ್ನು ಕುರಿತಾದ ಭಾವನೆಗಳನ್ನು ಎಣಿಸಲು ಸಾಧ್ಯವಿಲ್ಲ ಎಂದು ಹೇಳುತ್ತಾ, ಈ ಅನುಭವವು, ಎದ್ದು, ಬಿದ್ದು ಮತ್ತೆ ಬೇರೆಯೇ ರೂಪ ಪಡೆದು ನಿಲ್ಲುವಂತಹ ಮರಳ ಗೋಪುರವಿದ್ದಂತೆ ಎಂದು ಉಲ್ಲೇಖ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.





ಈ ಜಗತ್ತಿನಲ್ಲಿ ಎಷ್ಟು ಜನರಿದ್ದಾರೋ, ಅಷ್ಟೂ ಜನರಿಗೆ ಅವರವರ ಭಾವಕ್ಕೆ ತಕ್ಕಂತೆ ಮತ್ತು ಅವರವರ ನಂಬಿಕೆಗೆ ತಕ್ಕಂತೆ ಈ 'ದೇವರು' ಎಂಬ ವಸ್ತುವು ಅನುಭವಕ್ಕೆ ಬರುತ್ತದೆ. ಜಗತ್ತನ್ನು ಸೃಷ್ಟಿಸಿದ ಒಂದು ಅದ್ಭುತ, ಅನುಪಮ, ಅನಂತ ಮತ್ತು ಪರಮ ಶಕ್ತಿಯನ್ನೇ 'ದೇವರು' ಎಂದೂ, ನಮ್ಮ ಅಸ್ತಿತ್ವಕ್ಕೆ ಕಾರಣ ಭೂತವಾದ ಒಂದು ಶಕ್ತಿಯೆಂದೂ, ಕಾಣದಿದ್ದರೂ ಕೇವಲ ಭಾವಿಸಿ ಶ್ರದ್ಧೆ ಭಕ್ತಿಯಿಂದ ಪೂಜಿಸಿಸುವುದು ಅನಾದಿ ಕಾಲದಿಂದಲೂ ಬಂದಿದೆ. ಆದರೆ ಪೂಜಿಸುವ ಕ್ರಮ ಕಾಲಾನುಕಾಲಕ್ಕೆ ಜನರ ಅನುಭವ ಮತ್ತು ಭಾವನೆಗನುಗುಣವಾಗಿ ಬದಲಾಗುತ್ತಾ ಬಂದಿದೆ ಮತ್ತು ನಿರಂತರ ಬದಲಾಗುತ್ತಾ ಇದೆ. ಎಂದೋ ಒಂದು ಕಾಲಕ್ಕೆ ಜನ ಮಾನಸದಲ್ಲಿ ಇದ್ದ ದೇವರುಗಳು ಇಂದು ಇಲ್ಲ ಮತ್ತು ಆ ದೇವರುಗಳನ್ನು ಪೂಜಿಸುವ ಕ್ರಮವೂ ಇಲ್ಲ. ಹೀಗೆ ಬದಲಾಗುವ ಪರಿಯನ್ನೆ ಮಾನ್ಯ ಗುಂಡಪ್ಪನವರು “ಮಣಲ ಗೋಪುರವೊ ಅದು” ಎಂದರು.

ಅಷ್ಟೇ ಅಲ್ಲ ಒಂದು ವಸ್ತುವೋ ಅಥವಾ ಒಂದು ರೂಪವೋ ಒಂದೇ ವ್ಯಕ್ತಿಯಲ್ಲಿ, ಒಂದೇ ಸಮಯದಲ್ಲಿ ಹಲವಾರು ಭಾವಗಳನ್ನು ಎಬ್ಬಿಸಬಹುದು. ಆ ಒಂದೇ ವಸ್ತುವನ್ನು ಕಂಡ ನೂರು ಜನರಲ್ಲಿ ನೂರು ಭಿನ್ನವಾದ ಭಾವಗಳು ಮತ್ತು ಕಲ್ಪನೆಗಳು ಉದ್ಭವವಾಗಬಹುದು. ಇದನ್ನೇ 'ನಿಜಗುಣ ಶಿವಯೋಗಿಗಳು' ಅವರವರ ಭಾವಕ್ಕೆ' ಎಂದರು.

ಅನ್ನಮಾಚಾರ್ಯರು 'ಪಿಂಡಂತೆ ನಿಪ್ಪಟಿ' ಎಂದರೆ ಹಿಟ್ಟಿನಂತೆ ನಿಪ್ಪಟ್ಟು ಎಂದು ಹೇಳುತ್ತಾ ಪ್ರತಿಯೊಬ್ಬರ ಅಂತರಾತ್ಮ ಹೊಕ್ಕು ನೋಡಲು ಸಾಧ್ಯವಾದರೆ ಅವರ ಭಾವ ಎಷ್ಟಿರುತ್ತದೋ 'ದೇವರು' ಅವರಿಗೆ ಅಷ್ಟಿರುತ್ತಾನೆ ಎಂದು ಹೇಳುತ್ತಾರೆ.

ಹಾಗಾಗಿ ದೇವರು ಎಂಬುದು ಕೇವಲ ಭಾವನೆಗೆ ಸಂಬಂಧಪಟ್ಟದ್ದೆ ವಿನಃ ಮತ್ತೇನೂ ಅಲ್ಲ. ಆ ಭಾವಗಳಿಗೆ ಒಂದು ರೂಪವನ್ನು ಕೊಟ್ಟು ಜನರು ತಮ್ಮ ಪೂಜೆಗಳನ್ನು ಸಲ್ಲಿಸುತ್ತಾರೆ. ಇದು ಅಪ್ರಭುದ್ಧಾವಸ್ಥೆ, ಮನಸ್ಸು ಬುದ್ಧಿಗಳು ಪ್ರಭುದ್ಧವಾಗುತ್ತಾ ಹೋದಂತೆ ಆಕಾರದಿಂದ ನಿರಾಕಾರದೆಡೆಗೆ ಸಾಗುತ್ತವೆ. ಅಲ್ಲಿ ಭಾವ ದೃಢವಾಗುತ್ತದೆ. ಭಾವದೃಢತೆಯಲ್ಲಿ ಭಕ್ತಿ ಅನಪೇಕ್ಷಣೀಯ ಮತ್ತು ಅಕಳಂಕಿತವಾಗುತ್ತದೆ.

**ಮುಕ್ತಕ – 517**

**ಮನುಜ ಸಾಕಲ್ಯದನುಭವಕೆ ಮಿತಿಗೊತ್ತುಂಟೆ? |**
**ದಿನದಿನವು ಕಡಲಲೆಗಳಂತೆ ಪರಿವುದದು ||**
**ಅನುಮಿತಿಯ ನಿರ್ಧಾರವದರಿಂ ನಿರಾಧಾರ |**
**ದನಿ ನೂರು ನರನೆದೆಗೆ – ಮಂಕುತಿಮ್ಮ ||**

ಸಾಕಲ್ಯದನುಭವಕೆ=ಸಾಕಲ್ಯದ+ಅನುಭವಕೆ, ಕಡಲಲೆಗಳಂತೆ=ಕಡಲ+ಅಲೆಗಳಂತೆ,
ನಿರ್ಧಾರವದರಿಂ=ನಿರ್ಧಾರವು+ಆದರಿಂ, ನರನೆದೆಗೆ=ನರನ+ಎದೆಗೆ,
ಎದೆಗೆ=ಹೃದಯಕ್ಕೆ (ಹೃನ್ಮನಸ್ಸಿಗೆ)

ಮನುಷ್ಯನ ಸಕಲ ಅನುಭವಗಳಿಗೆ ಒಂದು ಮಿತಿಯು ಉಂಟೆ? ಸಮುದ್ರದ ಮೇಲೆ ಏಳುವ ಅಲೆಗಳನ್ನು ಎಣಿಸಲಾಗುವುದೇ? ಹಾಗೆಯೇ ಪ್ರತಿನಿತ್ಯ ಮನುಷ್ಯನ ಹೃದಯದಲ್ಲಿ ಏಳುವ ಭಾವನೆಗಳನ್ನು ಎಣಿಸಲೂ ಆಗುವುದಿಲ್ಲ ಮತ್ತು ಅದರ ಉದ್ದ, ಆಳ, ಮತ್ತು ಎತ್ತರಗಳನ್ನು ಅಳೆಯಲೂ ಆಗುವುದಿಲ್ಲ. ಹಾಗೆ ಅಳೆದರೆ ಅದಕ್ಕೆ ಯಾವ ಆಧಾರವೂ ಇರುವುದಿಲ್ಲ ಏಕೆಂದರೆ ನೂರಾರು ಭಾವನೆಯ ದನಿಗಳು ನರನ ಹೃದಯಕ್ಕೆ, ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮನುಷ್ಯನ ಮನದಲ್ಲಿ ಉದ್ಭವವಾಗುವ ಭಾವಗಳನ್ನು ಲೆಕ್ಕ ಹಾಕಲು ಸಾಧ್ಯವೇ? ಯಾವ ಕಾರಣದಿಂದ ಯಾವ ಭಾವ ಉಂಟಾಗುತ್ತದೆ ಎಂದು ಹೇಳುವುದು, ಯಾವ ಕ್ಷಣದಲ್ಲಿ ಯಾವ ಅಲೆ ಸಮುದ್ರದಲ್ಲಿ ಮೇಲೇಳುತ್ತದೆ ಎಂದು ಹೇಳಲಾಗದಷ್ಟೇ ಕಷ್ಟ. ಒಂದೇ ಕಾರಣವು ಒಬ್ಬರಲ್ಲಿ ಹಲವಾರು ವಿಭಿನ್ನ ಭಾವಗಳನ್ನು ಹುಟ್ಟುಹಾಕಬಹುದು. ಆ ಭಾವಗಳ ತೀವ್ರತೆ ಮತ್ತು ಆ ನಮ್ಮ ವಸ್ತು ವಿಷಯ ಅಥವಾ ವ್ಯಕ್ತಿಗಳೊಂದಿಗಿನ ಸಂಬಂಧದ ಮೇಲೆ ಆಧಾರಪಟ್ಟಿರುತ್ತದೆ. ಆ ಸಂಬಂಧ ವರ್ಣನೆಗೆ ಮತ್ತು ಗಣನೆಗೆ ಅತೀತವಾದದ್ದರಿಂದ ನಮ್ಮ ಭಾವಗಳೂ ಸಹ ಗಣನಾತೀತವಾಗಿ ಮತ್ತು ವರ್ಣನಾತೀತವಾಗಿರುತ್ತದೆ.

ಕಡಲಲ್ಲಿ ಮೇಲೇಳುವ ಅಲೆಗಳಂತೆ ಯಾವ ಭಾವ ಯಾವಾಗ, ಯಾವ ರೀತಿಯಲ್ಲಿ, ಮೇಲೇಳುತ್ತದೆ ಎಂದು ಹೇಳಲು ಸಾಧ್ಯವೇ ಇಲ್ಲ. ಎದ್ದರೆ ಏಳಲಿ ನಮಗೇನು?' ಎಂದು ನಮಗನ್ನಿಸಬಹುದು. ಆದರೆ ಕಡಲ ಮೇಲೆ ಏಳುವ ಅಲೆಗಳು ಕಡಲಿಗೆ ಯಾವ ತೊಂದರೆಯನ್ನೂ ಮಾಡದಿದ್ದರೂ ನಮ್ಮ ಮನಸ್ಸುಗಳಲ್ಲಿ ಏಳುವ ಭಾವಗಳು ನಮ್ಮ ಮೇಲೆ ಖಂಡಿತ ತನ್ನ ಪರಿಣಾಮವನ್ನು ಬೀರುತ್ತದೆ. ಆ ಪರಿಣಾಮದ ತೀವ್ರತೆ ಆ ವಸ್ತು ವಿಷಯ ಮತ್ತು ವ್ಯಕ್ತಿಗಳೊಂದಿಗಿನ ನಮ್ಮ ಪರಸ್ಪರ ಸಂಬಂಧದ ತೀವ್ರತೆ ಮತ್ತು ತತ್ಪರಿಣಾಮವಾಗಿ ಉಂಟಾಗುವ ಭಾವ ತೀವ್ರತೆಯ ಮೇಲೆ ಅಧಾರಪಟ್ಟಿರುತ್ತದೆ. ನಮ್ಮ ಭಾವನೆಗಳಿಗೆ ಗುಣವುಂಟು. ಅವು ಸಾತ್ವಿಕ, ರಾಜಸಿಕ ಮತ್ತು ತಾಮಸಿಕವಾಗಿರಬಹುದು.

ಈ ಮೂರೂ ಗುಣಗಳ ಪ್ರಭಾವದಿಂದ ಉಂಟಾಗುವ ಭಾವಗಳು ನಮ್ಮ ಮೇಲೆ ಅದೇ ರೀತಿಯ ಪರಿಣಾಮಗಳನ್ನು ಬೀರುತ್ತವೆ. ಹಾಗೆ ಬೀರಿದ ಪ್ರಭಾವ ನಮ್ಮ ವ್ಯಕ್ತಿತ್ವವನ್ನೂ ರೂಪಿಸುತ್ತದೆ. ಹಾಗಾಗಿ ನಾವು ಏನಾಗಬೇಕು ಎನ್ನುವುದು ನಮ್ಮ ಭಾವಗಳ ಮೇಲೆ ಅಧಾರಪಟ್ಟಿದೆ. ನಮ್ಮಲ್ಲಿ ಉಂಟಾಗುವ ಭಾವಗಳ ಸ್ವರೂಪ ಮತ್ತು

ಅವುಗಳಿಂದಾಗುವ ಪರಿಣಾಮಗಳನ್ನು ಅರಿಯುವುದೇ ಕಷ್ಟ. ಹಾಗೆ ಅರಿತಲ್ಲಿ ನಮ್ಮನ್ನು ನಾವು ರೂಪಿಸಿಕೊಳ್ಳುವುದು ಸಾಧ್ಯವಾಗುತ್ತದೆ.

**ಮುಕ್ತಕ – 518**

**ಅರ್ಥವುಂಟನುಭವಕ್ಕಾದೊಡದು ಮಿತದರ್ಥ ।**
**ಸ್ವಾರ್ಥಮಿತವಾದಂತೆ ವಿಸ್ತರಿಪುದರ್ಥ ॥**
**ಸಾರ್ಥಕವನ್ನುದಾರ್ಷೇಯಾರ್ಥದೊಡವೆರೆಯೆ ।**
**ಪಾರ್ಥನನುಭವದಂತೆ - ಮಂಕುತಿಮ್ಮ ॥**





ಅರ್ಥವುಂಟನುಭವಕ್ಕಾದೊಡದು=ಅರ್ಥವು +ಉಂಟು+ಅನುಭವಕ್ಕೆ+ಆದೊಡೆ+ಅದು,
ಮಿತದರ್ಥ=ಮಿತದ+ಅರ್ಥ, ಸ್ವಾರ್ಥಮಿತವಾದಂತೆ= ಸ್ವಾರ್ಥ+ಮಿತವಾದಂತೆ,
ವಿಸ್ತರಿಪುದರ್ಥ=ವಿಸ್ತರಿಪುದು+ಅರ್ಥ,
ಸಾರ್ಥಕವಪ್ಪುದಾರ್ಷೇಯಾರ್ಥದೊಡವೆರೆಯೆ=ಸಾರ್ಥಕ್ಯವು+ಅಪ್ಪುದು+ಆರ್ಷೇಯ+ಅರ್ಥದೊಡೆ+ಬೆರೆಯೆ,
ಪಾರ್ಥನನುಭವದಂತೆ =ಪಾರ್ಥನ+ಅನುಭವದಂತೆ,
ಆದೊಡೆ =ಆದರೆ, ಆರ್ಷೇಯ= ಋಷಿಮುನಿಗಳಿಂದ ಬಂದ ಜ್ಞಾನ ವಾಹಿನಿ.

ನಮ್ಮ ಪ್ರತೀ ಅನುಭವಕ್ಕೂ ಅರ್ಥವಿದೆಯಾದರೂ ಅದು ಕೇವಲ ನಮ್ಮ ಪರಿಮಿತ ಮತಿಯ ಮಿತಿಗೆ ಸೀಮಿತವಾದದ್ದು ಏಕೆಂದರೆ ಅಲ್ಲಿ ಸ್ವಾರ್ಥದ ಲೇಪವಿರುತ್ತದ್ದೆ. ಸ್ವಾರ್ಥದ ಭಾವ ಕಡಿಮೆಯಾದಲ್ಲಿ ಆ ಭಾವದ ಅರ್ಥ ವಿಸ್ತಾರವಾಗುತ್ತದೆ. ಅರ್ಜುನನಿಗೆ ಯುದ್ಧರಂಗದಲ್ಲಿ ವೈರಾಗ್ಯ ಬಂದಾಗ ಹೇಗೆ ಅವನಿಗೆ 'ಭಗವದ್ಗೀತೆ' ಯ

ಭೋಧನೆಯಾಯಿತೋ ಹಾಗೆಯೇ ನಮ್ಮ ಸನಾತನ ಋಷಿಮುನಿಗಳಿಂದ ಹರಿದುಬಂದಿರುವ ಜ್ಞಾನದ ವಾಹಿನಿಯೊಂದಿಗೆ ನಮ್ಮ ಭಾವ ಮಿಳಿತವಾದರೆ ಆಗ ನಾವು ಭಾವ ಸಾರ್ಥಕ್ಯವನ್ನು ಪಡೆಯಬಹುದು ಎಂದು ಭಾವಗಳ ಔನ್ನತ್ಯವನ್ನು ಹೇಗೆ ಪಡೆಯಬಹುದು ಎಂದು ನಮಗೆ ಮಾರ್ಗ ತೋರಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಸಾಮಾನ್ಯವಾಗಿ ನಮ್ಮ ಭಾವನೆಗಳು ನಾವು ಎಷ್ಟು ಯೋಚನೆ ಮಾಡಬಲ್ಲೆವೋ ಅಷ್ಟಕ್ಕೇ ಸೀಮಿತವಾಗಿರುತ್ತದೆ... ವಿಶಾಲವಾಗಿರುವುದಿಲ್ಲ. ಏಕೆಂದರೆ ನಾವು ವಿಶಾಲ ಮನೋಭಾವದವರಾಗಿಲ್ಲದೆ, ಕೇವಲ ಸ್ವಾರ್ಥದಿಂದ ಎಲ್ಲವನ್ನೂ ಅನುಭವಿಸುತ್ತೇವೆ. ಹೀಗಿದ್ದರೆ ನನಗಿಷ್ಟ', 'ಹೀಗಾದರೆ ನನಗಿಷ್ಟ', ಇದು ಯಾಕೋ 'ನನಗೆ ಸರಿಹೋಗೋಲ್ಲ' ಎಂದು ಹೇಳುವಾಗ ನಮ್ಮ ಭಾವನೆಗಳು 'ನನಗೆ' ಎಂಬ ಸ್ವಾರ್ಥದ ಲೇಪದಿಂದ ಪ್ರೇರಿತವಾಗಿರುತ್ತವೆ. ಇದನ್ನು ಬಿಟ್ಟು ಪರರ ಭಾವಗಳಿಗೂ ನಾವು ಪ್ರಾಮುಖ್ಯತೆ ನೀಡಿದಾಗ ನಮ್ಮ ಭಾವ 'ನನಗೆ'ಯಿಂದ 'ನಮಗೆ'ಎಂಬ ವೈಶಾಲ್ಯತೆಯನ್ನು ಪಡೆದುಕೊಳ್ಳುತ್ತದೆ. ಈ ಹಂತದಲ್ಲಿ ನಾವು ಭಾವವೈಶಾಲ್ಯವನ್ನು ಪಡೆದರೂ ಸಹ ಅದು ಇನ್ನೂ ನಮ್ಮನ್ನು ಈ ಜಗತ್ತಿಗೆ ಅಂಟಿಸಿಯೇ ಇರುತ್ತದೆ.

ಅದಕ್ಕಿಂತ ಒಂದು ಹಂತ ಮೇಲೆಕ್ಕೇರಬೇಕಾದರೆ ಆರ್ಷ್ಯ ಸಂಸ್ಕೃತಿಯಲ್ಲಿ ನಮಗೆ ನಮ್ಮ ಋಷಿಮುನಿಗಳು ನೀಡಿರುವ ಜ್ಞಾನದ ಮೂಸೆಯಲ್ಲಿ ನಮ್ಮ ಭಾವನೆಗಳನ್ನು ಹಾಕಿ ನಮ್ಮ ಮನಸ್ಸು ಬುದ್ಧಿಗಳಲ್ಲಿನ ಸಂಕುಚಿತತೆಯ ಭಾವ, ಸ್ವಾರ್ಥದ ಭಾವ ಮುಂತಾದ ಕಸವನ್ನು ತೊಳೆದುಕೊಂಡಾಗ, ಹಿಂದೆ ನಾವೆಷ್ಟು ಸಣ್ಣವರಾಗಿದ್ದೆವು ಎಂಬ ಅರಿವಾಗುತ್ತದೆ. ಮಹಾ ಭಾರತದಲ್ಲಿ ಅರ್ಜುನನಿಗೆ ಯುದ್ಧರಂಗದಲ್ಲಿ " ಅಯ್ಯೋ, ಇವನು ನಮ್ಮ ತಾತ, ನಮ್ಮ ಮಾವ, ನಮ್ಮ ಅಣ್ಣ, ನಮ್ಮ ತಮ್ಮ" ಎಂಬಂತಹ ಸಂಕುಚಿತ ಭಾವಗಳು ಬಂದು, ಇವರನ್ನು ಕೊಂದು ಮತ್ತು ಗೆದ್ದು ಪಡೆಯುವ ಆ ರಾಜ್ಯ ನನಗೇಕೆ" ಎಂದು ಗೋಳಾಡಿದಾಗ, ಅವನಿಗೆ ಇದ್ದದ್ದು ಸಂಕುಚಿತ ಭಾವ. ಸರ್ವ ಉಪನಿಷತ್ತುಗಳ ಸಾರವೆಂದೇ ಕರೆಯಲ್ಪಡುವ ಭಗವದ್ಗೀತೆಯ ಭೋಧನೆಯಾದಾಗ ಅವನಿಗೆ ದುಃಖವು ಹೋಗಿ ಉನ್ನತ ವಿಚಾರಗಳಲ್ಲಿ ಸಂದೇಹಗಳು ಮನದಲ್ಲಿ ಉದ್ಭವವಾಗಿ, ಧರ್ಮ, ಕರ್ಮ, ಜ್ಞಾನ, ವೈರಾಗ್ಯ ಮುಂತಾದ ವಿಚಾರಗಳನ್ನು ತಿಳಿಯುವ ಬಯಕೆಯಾಯಿತು. ವಿಚಾರ ವೈಶಾಲ್ಯವೂ ಆಯಿತು ಮತ್ತು ವೈಚಾರಿಕ ಮತ್ತು ಭಾವ ಸಾರ್ಥಕ್ಯವೂ ಆಯಿತು.

ಹಾಗಾಗಿ ನಮ್ಮ ಭಾವಗಳು ಉನ್ನತವಾಗಬೇಕಾದರೆ 'ಸ್ವಾರ್ಥದ' ಹಿಡಿತದಿಂದ ಹೊರಬರಬೇಕು, ಭಾವ ವೈಶಾಲ್ಯತೆಯನ್ನು ಪಡೆಯಬೇಕು ಮತ್ತು ಉನ್ನತ ವಿಚಾರಗಳಿಂದ ನಮ್ಮ ಭಾವಗಳು ಬೆಳೆದರೆ ನಾವೂ ಬೆಳೆಯಲು ಸಾಧ್ಯ. ನಾವೆಲ್ಲಿದ್ದೇವೆ ಎಂದು ಅರಿತುಕೊಂಡರೆ ಮುಂದಕ್ಕೆ ಹೋಗುವ ಪ್ರಯತ್ನವನ್ನು ಮಾಡಿದರೆ, ನಾವು ಬೆಳೆಯಬಹುದು.

**ಮುಕ್ತಕ – 519**

**ಪ್ರಾಲೇಯಗಿರಿಗುಹೆಯ ಗಂಗೆ ವೇದ ಪುರಾಣ ।**
**ಕಾಳಿಂದಿ ಶೋಣೆ ಪೌರುಷ ಬುದ್ಧಿಯುಕ್ತಿ ॥**
**ಮೂಲ ಸ್ವತಸ್ಸಿದ್ಧ ಸಂವಿದಾಪಗೆಗಿಂತು ।**
**ಕಾಲದುಪನದಿ ನೆರವು – ಮಂಕುತಿಮ್ಮ ॥**

ಸಂವಿದಾಪಗೆಗಿಂತು=ಸಂವಿದಾಪಗೆಗೆ+ಇಂತು, ಕಾಲದುಪನದಿ= ಕಾಲದ+ಉಪನದಿ,
ಪ್ರಾಲೇಯಗಿರಿ=ಹಿಮಾಲಯ ಪರ್ವತ, ಕಾಲಿಂದಿ ಶೋಣೆ = ಎರಡು ನದಿಗಳ ಹೆಸರು,
ಸಂವಿದಾಪಗೆ= ಜ್ಞಾನದ ಹರಿವು,

ಹಿಮಾಲಯದ ಅಂತರಂಗದಿಂದ ಹರಿವ ಮತ್ತು ಎಂದೂ ಬತ್ತದ ಸಾರ್ವಕಾಲಿಕ ನದಿ ಗಂಗೆಯಂತೆ, ಸರ್ವಕಾಲಕ್ಕೂ ಸತ್ಯವನ್ನೇ ಪ್ರತಿಪಾದಿಸುವುದು ನಮ್ಮ ವೇದ ಮತ್ತು ಪುರಾಣಗಳು, ಆ ಗಂಗೆಯಲ್ಲಿ ಬಂದು ಸೇರುವ ಯಮುನಾ, ಶೋಣಾ ಮುಂತಾದ ನದಿಗಳಂತೆ ನಮ್ಮ ಬುದ್ಧಿಶಕ್ತಿ, ಜಾಣ್ಮೆ, ಯುಕ್ತಿಗಳು ಸತ್ಯದ ಮೂಲವಾದ ವೇದ ಉಪನಿಷತ್ತುಗಳ ಸತ್ವವನ್ನು ಅನುಸಂಧಾನಮಾಡಿದಾಗ ಕಾಲವೆಂಬ ಉಪನದಿಯ ನೆರವನ್ನು ಪಡೆದು, ಜ್ಞಾನದ ಸುಭದ್ರ ತಳಹದಿಯಮೇಲೆ ನಮ್ಮ ಪ್ರಯತ್ನದಿಂದ ಜ್ಞಾನದೀವಿಗೆಯನ್ನು ನಮ್ಮ ನಮ್ಮ ಹೃದಯದಲ್ಲಿ ಬೆಳಗಿಸಿಕೊಳ್ಳಬೇಕು ಎನ್ನುವ ಆಶಯವನ್ನು ವ್ಯಕ್ತಪಡಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜಗತ್ತಿನಲ್ಲಿ ಬೇರೆಲ್ಲೂ ಲಭ್ಯವಲ್ಲದ ಜ್ಞಾನಭಂಡಾರ ನಮ್ಮ ವೇದ ಮತ್ತು ಉಪನಿಷತ್ತಿನ ಸಾರ. ಅದಕ್ಕೆ ಪರಮಾತ್ಮನೇ ಮೂಲವೆಂದು ನಂಬಿದೆ ನಮ್ಮ ಸನಾತನ. ಹಾಗಾಗಿಯೇ ಮೂಲಕ್ಕೆ ಹಿಮಾಲಯವನ್ನೂ, ಅಲ್ಲಿಂದ

ಹರಿದು ಬಂದ ಜ್ಞಾನವಾಹಿನಿಯನ್ನು ನಿತ್ಯನೂತನ, ನಿರಂತರವಾದ ಗಂಗಾ ನದಿಗೆ ಹೋಲಿಸಿರುವುದು, ಮಾನ್ಯ ಗುಂಡಪ್ಪನವರು . ನಮ್ಮೆಲ್ಲ ಜ್ಞಾನದ ಮೂಲವೇ ಆ ಮೂಲ ಸತ್ವವಾದ ಪರಸತ್ವ ಅಥವಾ ಪರಮ ಚೇತನ ಅಥವಾ ಪರಮಾತ್ಮ, ಆ ಜ್ಞಾನವನ್ನು ಅಡಿಪಾಯವಾಗಿಸಿಕೊಂಡು ಬೆಳೆದ ಮಿಕ್ಕೆಲ್ಲ ಜ್ಞಾನವಾಹಿನಿಗಳು ನಮ್ಮ ಪ್ರಯತ್ನ, ಬುದ್ಧಿವಂತಿಕೆ ಮತ್ತು ಯುಕ್ತಿಗಳಿಂದ ನಿರ್ಮಿತವಾದದ್ದು.





ಜಗತ್ತಿನ ಜನ ಜೀವನ ಸುಧಾರಣೆಗೆ ಈ ಮೂಲ ಜ್ಞಾನ ಬಹಳ ಸಹಾಯಕವಾಗಿದೆ. ಅಷ್ಟೇ ಅಲ್ಲ ಇದರ ಆಧಾರದ ಮೇಲೆ ಬೆಳೆದ ಕಥೆ, ಪುರಾಣ, ಕಾವ್ಯ, ಕವಿತೆ, ಸಂಗೀತ, ಸಂಸ್ಕಾರಗಳ ಮಹಾಪೂರವೇ ಹರಿದು ನಮ್ಮ ಸಂಸ್ಕೃತಿ ಸಂಸ್ಕಾರಗಳಲ್ಲಿ ಹಾಸು ಹೊಕ್ಕಾಗಿದೆ. ಮೂಲದಿಂದ ಬಂದ ಜ್ಞಾನವು ಸ್ವತಃ ಸಿದ್ಧವಾದ ಜ್ಞಾನ. ಅದಕ್ಕೆ ಪ್ರಮಾಣ ಬೇಕಿಲ್ಲ. ಸರ್ವ ಕಾಲಕ್ಕೂ ಅನ್ವಯವಾಗುವ ಜ್ಞಾನದ ನಿಧಿಯದು. ಕಾಲವು ಅದನ್ನು ತನ್ನೊಟ್ಟಿಗೆ ಉಳಿಸಿಕೊಂಡು ನಮಗೆ ಉಣಬಡಿಸುವ ನೆರವನ್ನು ಮಾಡುತ್ತಿದೆ.

ಆದರೆ ನಮಗದು ಇಂದು ಬೇಡವಾಗಿದೆ. ಹೊಸತಿನ ಅನ್ವೇಷಣೆಯಲ್ಲಿ ತಳುಕನ್ನು ಹಿಡಿದು ಸತ್ವವನ್ನು ಬಿಡುವ ದುಃಚೇಷ್ಟೆ ನಮ್ಮದು, ತನ್ನ ತನವನ್ನೂ ಕಳೆದುಕೊಂಡು ಹೊಸತನವನ್ನು ಸಂಪೂರ್ಣ ಪಡೆಯಲಾಗದೆ, 'ಎಡಬಿಡಂಗಿ' ಸ್ಥಿತಿಯಲ್ಲಿದ್ದೇವೆ ನಾವು. ಹಳೆಯ ಮೌಲ್ಯಗಳನ್ನು ಹಾಗೆಯೇ ಉಳಿಸಿಕೊಂಡು ಹೊಸತನ್ನು ಅಳವಡಿಸಿಕೊಂಡರೆ ನಮ್ಮ ಜೀವನ ಇನ್ನೂ ಹೆಚ್ಚು ಸುಂದರವಾಗಿ, ಸಂತೋಷದಾಯಕವಾಗಿ ಮತ್ತು ಅರ್ಥಪೂರ್ಣವಾಗಿರಬಹುದಲ್ಲವೇ?

**ಮುಕ್ತಕ – 520** **ತಿಳಿವಾವುದಿಳೆಗೆ ಯುಗಯುಗದ ಬೆಳಕಾಗಿತ್ತೋ।**
**ಹಳದೆಂದು ನೀನದನು ಕಳೆಯುವೆಯ, ಮರುಳೆ? ||**
**ತಳಹದಿಯದಲ್ತೆ ನಮ್ಮೆಲ್ಲ ಹೊಸ ತಿಳಿವಿಂಗೆ?**
**ಹಳೆ ಬೇರು ಹೊಸ ತಳಿರು - ಮಂಕುತಿಮ್ಮ ||**

ತಿಳಿವಾವುದಿಳೆಗೆ=ತಿಳಿವು+ಆವುದು+ಇಳೆಗೆ, ಹಳದೆಂದು=ಹಳತು+ಎಂದು,
ತಳಹದಿಯದಲ್ತೆ = ತಳಹದಿಯು+ಅದು+ಅತ್ತೆ,
ತಿಳಿವು= ಅರಿವು, ಜ್ಞಾನ, ಮರುಳೆ=ಹುಚ್ಚಾ ತಳಹದಿಯು=ಅಡಿಪಾಯ, ಬುನಾದಿ, ತಳಿರು=ಚಿಗುರು

ಈ ಜಗತ್ತಿನಲ್ಲಿ ನಮ್ಮ ಸನಾತನದ, ವೇದದ, ಜ್ಞಾನವೇ ಅತೀ ಪುರಾತನವಾದದ್ದು. ಅದು ಅನಾದಿ ಕಾಲದಿಂದ ಯುಗ ಯುಗಗಳಿಂದ ಜನಮಾನಸದೊಳಕ್ಕೆ ಹರಿದು ಬರುತ್ತಿದೆ. ಅದನ್ನು ಹಳತು ಎಂದು ನೀನು ಹೇಳುತ್ತೀಯಾ ಹುಚ್ಚಾ? ಅದೇ ಅಲ್ಲವೇ ನಮ್ಮ ಜಗತ್ತಿನ ಸಮಸ್ತ ಆಧುನಿಕ ಜ್ಞಾನದ ಉಗಮಕ್ಕೆ ತಳಹದಿ ಅಥವಾ ಅಡಿಪಾಯ. ಹಳೆಯಬೇರು ಆಳವಾಗಿ ನೆಲದಲ್ಲಿರುವಾಗ ಮಾತ್ರ ಹೊಸ ಚಿಗುರು ಪ್ರತೀ ವಸಂತಕ್ಕೂ ನಳನಳಿಸುವುದು ಎಂದು ನಮ್ಮ ಬದುಕಿನ, ಸಂಸ್ಕಾರ, ಸಂಸ್ಕೃತಿಗಳ ಮತ್ತು ಜ್ಞಾನದ ಬೇರನ್ನು ನಮಗೆ ನೆನಪಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಅರಿಯಬೇಕು, ಅರಿತರೆ ಅರ್ಥವಾಗುತ್ತದೆ. ಹಾಗೆ ಅರಿಯದೆ " "ಅದು ಹಳತು' ನೋಡಿ, ನಾವು ಅಧುನಿಕರು, ಆಧುನಿಕ ವಿಜ್ಞಾನವನ್ನು ಎಲ್ಲಿಯ ತನಕ ತೆಗೆದುಕೊಂಡು ಹೋಗಿದ್ದೇವೆ" ಎಂದು ಕೊಚ್ಚಿಕೊಳ್ಳುವ ಇಂದಿನ

ನವೀನರು, ಈ ಆಧುನಿಕ ವಿಜ್ಞಾನವೇನೂ ಆಕಾಶದಿಂದ ಹಾಗೆಯೇ ಉದುರಿಬಿಡಲಿಲ್ಲ, ಅದೂ ಸಹ ಆ ಪುರಾತನದ ಆಧಾರದ ಮೇಲೆಯೇ ಕಂಡುಕೊಂಡದ್ದು ಎಂದು ಗುರುತಿಸುವಲ್ಲಿ ವಿಫಲರಾಗಿದ್ದಾರೆ.

ವೇದಕಾಲದಲ್ಲಿ ಕೇವಲ ತಪಸ್ಸಿನಿಂದಲೇ ಸೃಷ್ಟಿ ರಹಸ್ಯವನ್ನು ಕಂಡುಕೊಂಡ ನಮ್ಮ ಸನಾತನ ಸಂಸ್ಕೃತಿಯ ಋಷಿಮುನಿಗಳನ್ನು ಇಂದಿನ ಆಧುನಿಕ ವಿಜ್ಞಾನಿಗಳಿಗೆ ಹೋಲಿಸಲು ಆಗದು. ಸಂಖ್ಯಾ ಶಾಸ್ತ್ರ, ಜೀವಶಾಸ್ತ್ರ, ಔಷದೀಯ ಜ್ಞಾನ, ಖಗೋಳ ಶಾಸ್ತ್ರ ವಾಸ್ತು ಶಾಸ್ತ್ರ ವಸ್ತು ಶಾಸ್ತ್ರ, ಮುಂತಾದ ಅನೇಕಾನೇಕ ವಿಜ್ಞಾನದ ವಿಷಯಗಳ ಜೊತೆಗೆ ವೇದಾಂತ ಶಾಸ್ತ್ರವನ್ನೂ ಒಳಗೊಂಡಿತ್ತು. ಅಂದಿನವರ ವಿಸ್ತಾರವಾದ ಮತ್ತು ನಿಖರವಾದ ಜ್ಞಾನ. ಇಂದು ಯಾವುದೂ ಆಳವಾದ ಅಭ್ಯಾಸವಿಲ್ಲದ, ಕೇವಲ 'ಹೊಟ್ಟೆಪಾಡಿನ ಕಲಿಕೆ'ಯಾಗಿದೆ ನಮ್ಮ ವಿದ್ಯಾಭ್ಯಾಸ. ಇಂದು ಏನೇ ಕಲಿತರೂ ಅದೆಲ್ಲವೂ ಅಂದಿನ ವಿಶೇಷ ಜ್ಞಾನದ ಆಧಾರದಿಂದಲೇ ಇರಬೇಕು, ಹಾಗಾಗಿ ಹಳೆಯದು ಎನ್ನುವುದಕ್ಕಿಂತ ಮೂಲವಾದದ್ದು ಎಂದರೆ ಹೆಚ್ಚು ಸೂಕ್ತವೆನಿಸುತ್ತದೆ. ಮೂಲದೊಂದಿಗಿನ ಕೊಂಡಿ ಕಳಚಿದರೆ ನಮಗಾಗುವುದು ಕೇವಲ `ಎಡಬಿಡಂಗಿ ಸ್ಥಿತಿ.

ಹಳೆಯದನ್ನು ಮರೆತರೆ ಅದು ದುರಂತ. ಒಂದು ಮರ ಹೊಸ ಚಿಗುರ ತಳೆದು ಪ್ರತೀ ವಸಂತದಲ್ಲೂ ತನ್ನ ಸೊಬಗನ್ನು ಮೆರೆಯಬೇಕಾದರೆ, ಭೂಮಿಯಾಳದಲ್ಲಿ ತನ್ನ ಹಳೆಯ ಬೇರಿನೊಡನೆ ಸಂಪರ್ಕದಿಂದಲೇ ಸಾಧ್ಯ. ಹಾಗೆಯೇ ನಮ್ಮ ಜ್ಞಾನ ಮತ್ತು ಸಂಸ್ಕಾರಗಳು ಚಿರಕಾಲ ಉಳಿಯಬೇಕಾದರೆ ಮತ್ತು ಹೊಸ ಹೊಸ ಆಯಾಮಗಳೊಂದಿಗೆ ವಿಕಾಸವಾಗಬೇಕಾದರೆ, ಪುರಾತನ ಜ್ಞಾನದ ಆಧಾರದಮೇಲೆ ಆಗಬೇಕೇ ವಿನಃ ಅದನ್ನು ಮರೆತಲ್ಲ. ದುರಂತವೆಂದರೆ ಇಂದಿನ ನಮ್ಮ ಆಧುನಿಕ ಸಮಾಜ ನಿಧಾನವಾಗಿ ಅಧೋಗತಿಗೆ ಇಳಿಯುತ್ತಿದೆ. ಅದನ್ನು ತಡೆಗಟ್ಟಿ ನಮ್ಮ ಮುಂದಿನ ಪೀಳಿಗೆಗೆ ಸಂಸ್ಕಾರ ಮತ್ತು ಸಂಸ್ಕೃತಿಗಳನ್ನು ನೀಡಬೇಕಾದರೆ, ನಮ್ಮ ಹಿಂದಿನವರ ಶುದ್ಧ ಮೌಲ್ಯಗಳೊಂದಿಗೆ ಮತ್ತೆ ನಮ್ಮ ಗಟ್ಟಿ ಸಂಬಂಧವನ್ನು ಕಟ್ಟಿಕೊಳ್ಳುವುದೇ ದಾರಿ, ಅನ್ಯತಾ ಅಧೋಗತಿ ತಪ್ಪಿದ್ದಲ್ಲ.

**ಮುಕ್ತಕ – 521**

**ವೇದ ಲೋಕಾಚಾರ ನಿನ್ನನುಭವದ ಯುಕ್ತಿ ।**
**ಶೋಧಿಸಿ ಮೂರನುಂ ಸಂವಾದಗೊಳಿಸು ॥**
**ಸಾಧಿತಜ್ಞಾನ ನರಸಾಧ್ಯ ಪ್ರಮಾಣವದು ।**
**ಹಾದಿ ಬೆಳಕದು ನಿನಗೆ ಮಂಕುತಿಮ್ಮ ॥**

ಶೋಧಿಸಿ = ಅಳೆದು ಅರ್ಥೈಸಿ, ಮೂರನುಂ=ಮೂರನ್ನೂ, ಸಾಧಿತಜ್ಞಾನ=ಓದಿ, ಕೇಳಿ, ಅಂತರಂಗದಲ್ಲಿ ಮಥಿಸಿ ಗಳಿಸಿದ ಜ್ಞಾನ.

ಅನಾದಿ ಕಾಲದಿಂದಲೂ ಹರಿದು ಬಂದಿರುವ ವೇದಜ್ಞಾನದ ಸಾರ, ಲೋಕಾರೂಢಿಯಲ್ಲಿ ನಮಗೆ ಲಭ್ಯವಾದ ಜ್ಞಾನ ಮತ್ತು ನಾವು ನಮ್ಮ ಅಂತರಂಗದಲ್ಲಿ ಮಥಿಸಿ ಅರಿತು ಪಡೆದುಕೊಂಡ ಅರಿವು, ಈ ಮೂರನ್ನು





ಸಮನ್ವಯಗೊಳಿಸಿದ್ದಲ್ಲಿ, ಅದು ಸಾಧಿಸಿದ ಜ್ಞಾನವಾಗಿ ರೂಪುಗೊಳ್ಳುತ್ತದೆ. ನರನ ಸಾಧನೆಗೆ ಮತ್ತು ಅಂತಹ ಸಾಧಿತ ಜ್ಞಾನವೇ ನಮ್ಮ ಬದುಕಿಗೆ ಬೆಳಕಾಗುತ್ತದೆ ಎಂದು ಸೂಚಿಸಿದ್ದಾರೆ, ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಇಲ್ಲಿ ಮೂರು ರೀತಿಯ ಜ್ಞಾನದ ಮೂಲಗಳನ್ನು ಮಾನ್ಯ ಗುಂಡಪ್ಪನವರು ಉಲ್ಲೇಖಮಾಡಿದ್ದಾರೆ. ಮೊದಲನೆಯದು, ಸ್ವಯಂ ಪ್ರಮಾಣವಾದ ಸನಾತನ ಸಂಸ್ಕೃತಿಯ ಆಧಾರವಾದ ವೇದ ವಾಙ್ಮಯ, ಎರಡನೆಯದು, ನಮ್ಮ ಬದುಕಿನಲ್ಲಿ ನಾವು ನಮ್ಮ ಪೂರ್ವಜರಿಂದ ಪಡೆದ ಶಿಕ್ಷಣ ಮತ್ತು ಸಂಸ್ಕಾರಗಳು, ಸಮಾಜದಲ್ಲಿ ನಮ್ಮ ಸುತ್ತುಮುತ್ತಲಿಂದ ನೋಡಿ, ಕೇಳಿ, ಕಲಿತ ವಿದ್ಯೆಗಳು ಮತ್ತು ಲೋಕದ ಜನರ ಅನುಭವದ ಜ್ಞಾನ ಭಂಡಾರ ಮತ್ತು ಮೂರನೆಯದು ಮೊದಲ ಎರಡೂ ಗುಂಪನ್ನು ನಮ್ಮ ಮನಸ್ಸಿನೊಳಕ್ಕೆ ತೆಗೆದುಕೊಂಡು ಬುದ್ಧಿ ಮತ್ತು ವಿವೇಕದಿಂದ ಮಥನ ಮಾಡಿ, ನಮ್ಮ ಬದುಕು ಸರಿಹಾದಿಯಲ್ಲಿ ಹೋಗಲು ನಾವೇ ಕಂಡುಕೊಂಡ ಸತ್ಯಗಳು. 'ಶೋಧಿಸಿ ಮೂರನುಂ ಸಂವಾದಗೊಳಿಸು' ಎಂದು ಮಾನ್ಯ ಗುಂಡಪ್ಪನವರು ಹೇಳುವಂತೆ ಈ ಮೂರನ್ನೂ ನಮ್ಮ ಅಂತರಂಗದಲ್ಲಿ

ಸಮನ್ವಯಗೊಳಿಸಿದಾಗ ನಮ್ಮೊಳಗೆ ನಮ್ಮನ್ನು ಬದುಕಿನ ಹಾದಿಯಲ್ಲಿ ಕೊಂಡು ಹೋಗಬಲ್ಲ ಒಂದು ಉಜ್ವಲ ಬೆಳಕಿನ 'ಜ್ಞಾನದ ದೀಪ' ನಮಗೆ ಸಿಗುತ್ತದೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ನಾವೂ ಬದುಕುತ್ತೇವೆ! ಬೆಳಗೆದ್ದು ನೈಸರ್ಗಿಕವಾಗಿ ಸಂದ ವಿಧಿಗಳನ್ನು ಮಾಡುತ್ತಾ, ತಿಂದು, ಉಂಡು, ಮಲಗಿ, ಪಾಲಿಗೆ ಬಂದ ಕೆಲಸವನ್ನು ಮಾಡುತ್ತಾ ಸಾಮಾನ್ಯ ಬದುಕನ್ನು ಬದುಕುತ್ತೇವೆ. ಕಲಿಕೆ ಶೂನ್ಯ. ನಮಗೆ ಯಾವುದರಲ್ಲೂ ಆಳವಾಗಿ ಅಭ್ಯಾಸ ಮಾಡುವ ಪ್ರವೃತ್ತಿಯೂ ಇಲ್ಲ, ಜ್ಞಾನದ ದಾಹವೂ ಇಲ್ಲ, ಆಸ್ಥೆಯೂ ಇಲ್ಲ. ಅನ್ಯ ಪ್ರಾಣಿಗಳು ಜೀವಿಸುವಂತೆ ನಾವೂ ಜೀವಿಸಿದ್ದೇವೆ. ಜ್ಞಾನಭಂಡಾರವು ನಮ್ಮ ಎದುರಿನಲ್ಲೇ ಇದ್ದರೂ ಅರಿಯಬೇಕೆಂಬ ಆಸೆ ನಮಗೆ ಇಲ್ಲವೇ ಇಲ್ಲ. ಅದರ ಮೇಲೆ ನಮಗೆ ಎಲ್ಲವೂ ಗೊತ್ತು ಎನ್ನುವ ಅಹಂಕಾರ ಬೇರೆ. ಅಜ್ಞಾನದ ಕೂಪದಲ್ಲೇ ಹುಟ್ಟಿ, ಬೆಳೆದು, ಬದುಕಿ, ನಾಶವಾಗುವ ಜೀವನಗಳು ನಮ್ಮದು.

ಆದಿ ಶಂಕರರು ಹೇಳುವಂತೆ ಬಾಲ್ಯದಲ್ಲಿ ಕ್ರೀಡಾಸಕ್ತನಾಗಿ, ಯವ್ವನದಲ್ಲಿ ಕಾಮಾಸಕ್ತನಾಗಿ ವಾರ್ದಕ್ಯದಲ್ಲಿ ರೋಗಗಳಿಗೆ ತುತ್ತಾಗಿ ಅಂತ್ಯಗೊಳ್ಳುವ ನಮ್ಮ ಬದುಕೂ ಒಂದು ಬದುಕೇ? ಮಾನ್ಯ ಗುಂಡಪ್ಪನವರು ಹೇಳುವಂತೆ ಅರಿವು ಪಡೆಯುವ ಕೆಲಸ ನಮ್ಮದಾದರೆ ಆ ಅರಿವು ನಮ್ಮ ಬದುಕಿನ ಸಾರ್ಥಕ್ಯಕ್ಕೆ "ಹಾದಿ ಬೆಳಕಾಗುತ್ತದೆ" ಅಂತಹ ಪ್ರಯತ್ನವನ್ನು ಮಾಡಿದರೆ, ಜನ್ಮಜನ್ಮಾಂತರದಲ್ಲೂ ಆ ಪ್ರಯತ್ನ ನಿರಂತರವಾಗಿ ನಡೆದರೆ ಎಂದೋ ಒಂದು ದಿನ ನಮಗೆ ಅಜ್ಞಾನದಿಂದ ಮುಕ್ತಿ ಸಿಗಬಹುದು.

**ಮುಕ್ತಕ – 522**

**ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು |**
**ಹೊಸಯುಕ್ತಿ ಹಳೆತತ್ವದೊಡಗೂಡೆ ಧರ್ಮ ||**
**ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ |**
**ಜಸವು ಜನಜೀವನಕೆ – ಮಂಕುತಿಮ್ಮ ||**

ಹಳೆತತ್ವದೊಡಗೂಡೆ = ಹಳೆತತ್ವದೊಡೆ+ಒಡಗೂಡೆ, ಹೊಸಯುಕ್ತಿ = ಹೊಸತಂತ್ರ,
ಮೇಳವಿಸೆ=ಸಮನ್ವಯಗೊಂಡರೆ, ಜಸವು = ಸಂತೋಷವು,

ಮಾನ್ಯ ಗುಂಡಪ್ಪನವರ ಈ ಮುಕ್ತಕ ಬಹಳ ಪ್ರಖ್ಯಾತವಾದ ಮತ್ತು ಹೆಚ್ಚು ಪ್ರಚಾರವನ್ನು ಪಡೆದ ಮುಕ್ತಕಗಳಲ್ಲಿ ಒಂದು. ಒಂದು ಮರದ ಬೇರುಗಳು ಹಳೆಯದಾಗಿದ್ದು ಮತ್ತು ಆಳವಾಗಿದ್ದರೆ ಆ ಮರದಲ್ಲಿ ಮೊಳೆಯುವ ಹೊಸ ಚಿಗುರು ಬಹಳ ಸೊಗಸು. ಹಾಗೆಯೇ, ನಮ್ಮ ಹಳೆಯ ತತ್ವದ ಸತ್ವವನ್ನು ಉಳಿಸಿಕೊಂಡು, ಹೊಸ ಯುಕ್ತಿಯಿಂದ ಕೂಡಿ ಪಾಲಿಸುವ ಧರ್ಮವಾಗಬೇಕು. ಪುರಾತನ ಋಷಿಗಳ ಜ್ಞಾನದ ವಾಕ್ಯಗಳೊಡನೆ ನವೀನ ವಿಜ್ಞಾನವು ಸಮನ್ವಯಗೊಂಡರೆ, ಅಂತಹ ಒಂದು ಸ್ಥಿತಿ ಜನರ ಜೀವನಕೆ ನಿಜವಾದ ಸಂತಸವನ್ನು ತರುತ್ತದೆ ಎಂದು ಬದುಕಿನ ಅದ್ಭುತ ಸತ್ಯವನ್ನು ಪ್ರತಿಪಾದಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮ ಗುಣ ರೂಪಗಳೂ ಸಹ ವಂಶವಾಹಿನಿಗಳ ಮೂಲಕ ನಮ್ಮ ಹಳೆಯ ತಲೆಮಾರಿನ ಜನರಿಂದ ಹರಿದು ಬರುತ್ತದೆ. ಯಾರಿಂದ ಯಾವ ಗುಣ, ಯಾರಿಂದ ಯಾವ ರೂಪ ಯಾರಿಗೆ ಬರುತ್ತದೆ ಎಂದು ಹೇಳುವುದು ಕಷ್ಟ. ಅಂದರೆ ನಮ್ಮ ಇಂದಿನ ಗುಣ ರೂಪಗಳಿಗೆ 'ಮರದ ಹಳೆಯ ಬೇರಿನಂತೆ ಅವುಗಳೇ ಮೂಲ. ಇದು ಒಂದು ಅನಿವಾರ್ಯತೆಯಿಂದ ನಮಗೆ ನಮ್ಮ ಮೂಲದೊಡನೆ ಸಂಪರ್ಕ, ಹಾಗೆಯೇ ನಮ್ಮ ಸಮಾಜದ ಸಂಸ್ಕೃತಿಯ ಬೆಳವಣಿಗೆಯ ಹಾದಿಯೂ ನಮ್ಮ ಪುರಾತನರು ಹಾಕಿಕೊಟ್ಟ ಹಾದಿಯಲ್ಲಿರಬೇಕು. ಇಂದಿನ ನವೀನತೆಗೆ ಅಂದಿನ ಪುರಾತನತೆ ಮೇಲ್ಯೆಸಿದಾಗ ಮೂಲ ತತ್ವಗಳನ್ನು ಉಳಿಸಿಕೊಂಡು, ಅದರ ಆಧಾರದ ಮೇಲೆ ಹೊಸ ಯುಕ್ತಿಗಳಿಂದ ಬೆಳೆಸಿಕೊಂಡ ನವನವೀನತೆಯು ಸುಂದರವಾಗಿರುತ್ತದೆ. ಹಾಗಾಗದೆ ಮೂಲ ಹಳೆಯ ಬೇರಿನೊಡನೆ ಸಂಪರ್ಕ ಕಡಿದುಕೊಂಡರೆ ಮರವೇ ಸೊರಗುತ್ತದೆ. ಸೊರಗಿದ ಮರದಿಂದ ಚಿಗುರೂ ಇಲ್ಲ, ಹೂವೂ ಇಲ್ಲ.

ಅನಾದಿಕಾಲದಿಂದ ಬಂದ ನಮ್ಮ ಸಂಸ್ಕೃತಿ ಮತ್ತು ಸಂಸ್ಕಾರಗಳು ಪರಮೋಚ್ಚ ಜ್ಞಾನದ ಆಧಾರದ ಮೇಲೆ ವಿಕಾಸವಾದ ಒಂದು ಸುಸಂಸ್ಕೃತ ಹಂತದಿಂದ ಬಂದದ್ದು. ನಮ್ಮ ಪೂರ್ವಜರ ಮೌಲ್ಯಾಧಾರಿತ ಸಮಾಜದಲ್ಲಿ, ಇದ್ದ ಮೌಲ್ಯಗಳು, ನೀತಿ ನಿಯಮಗಳು, ಉನ್ನತವಾಗಿದ್ದವು. ಅದೇ ನಮ್ಮ ಸಾಮಾಜಿಕ ಅಸ್ತಿತ್ವಕ್ಕೆ ಆಧಾರ. ಅದನ್ನು ತೊರೆದರೆ ತಲೆತಲಾಂತರದಿಂದ ಬಂದ ಕೊಂಡಿ ಕಳಚಿ ನಾವು ಅಧೋಗತಿಗೆ ಬೀಳುವ ಸಾಧ್ಯತೆ ಖಂಡಿತ ಇದೆ.

ಆದರೆ ಇಂದಿನ ಪರಿಸ್ಥಿತಿ ಬಹಳ ಭಿನ್ನವಾಗಿ ಚಿಂತೆಗೆ ಕಾರಣವಾಗಿದೆ. ಪಾಶ್ಚಾತ್ಯ ನಡವಳಿಕೆಗಳ ಅಂಧಾನುಕರಣೆ ಮತ್ತು ನಮ್ಮ ಮೌಲ್ಯಾಧಾರಿತ ಸಂಸ್ಕೃತಿಯನ್ನು ಹೀಗೆಳೆಯುವುದು, ಈಗಿನ ನವೀನರ ಒಂದು ಹವ್ಯಾಸವಾಗಿದೆ. ಉರಿಯುವ ಬೆಂಕಿಗೆ ನಮ್ಮ (so called ) ಬುದ್ಧಿಜೀವಿಗಳ ತುಪ್ಪ ಸುರುಯುವಿಕೆ. ವಿಜ್ಞಾನದ ಹತ್ತು ಹಲವಾರು ಸಂಶೋಧನೆಗಳು ನಮ್ಮನ್ನು ನಮ್ಮ ಬೇರಿಂದ ದೂರ ಮಾಡುವಂತಿದೆ. ನಮ್ಮ ಸಮಾಜದ ಆಧಾರವಾದ ಸಂಸ್ಕೃತಿಯನ್ನು ತೊರೆದು ಯಾವ ಮೌಲ್ಯಗಳೂ ಇಲ್ಲದ ಪಾಶ್ಚಾತ್ಯ ಸಂಸ್ಕೃತಿಗೆ ಮಾರುಹೋಗಿರುವುದು ದುರಂತವೇ! ಮತ್ತೆ ನಮ್ಮ ಬೇರಿನೊಂದಿಗೆ ಸಂಪರ್ಕವನ್ನು ಪಡೆದುಕೊಳ್ಳುವ





ಪ್ರಯತ್ನ ನಡೆಯಬೇಕು. ಆಧುನಿಕತೆಯ ಎಲ್ಲ ಸೌಲಭ್ಯಗಳನ್ನೂ ಸಂಪೂರ್ಣವಾಗಿ ಉಪಯೋಗಿಸಿಕೊಂಡು ನಮ್ಮ ಸಂಸ್ಕೃತಿ ಮತ್ತು ಸಂಸ್ಕಾರಗಳ ಪುನರ್ವಿಕಾಸಕ್ಕೆ ಸಮರೋಪಾದಿಯಲ್ಲಿ ಪ್ರಯತ್ನ ನಡೆಯಬೇಕು. ಹಾಗಾದಾಗ ಮಾನ್ಯ ಗುಂಡಪ್ಪನವರ ಈ ಮುಕ್ತಕದ ಆಶಯ ಸಾಕಾರವಾದೀತು.

**ಮುಕ್ತಕ – 523**

**ವೇದಗಳು ಶಾಸ್ತ್ರಗಳು ಲೋಕನೀತಿಗಳೆಲ್ಲ |**
**ಹಾದಿ ತೋರಲು ನಿಶಿಯೊಳುರಿವ ಪಂಜುಗಳು ||**
**ಸೌಧವೇರಿದವಂಗೆ, ನಭವ ಸೇರಿದವಂಗೆ |**
**ಬೀದಿ ಬೆಳಕಿಂದೇನೊ? ಮಂಕುತಿಮ್ಮ ||**

ನಿಶಿಯೊಳುರಿವ=ನಿಶಿಯೊಳು+ಉರಿವ, ಸೌದವೇರಿದವಂಗೆ=ಸೌದವ+ಏರಿದ+ಅವಂಗೆ,
ಸೇರಿದವಂಗೆ=ಸೇರಿದ+ಅವಂಗೆ, ಬೆಳಕಿಂದೇನೊ? =ಬೆಳಕಿಂದ+ಏನೊ |

ನಿಶಿ+ಇರುಳು, ಕತ್ತಲೆ, ಸೌಧ=ಎತ್ತರವಾದ ಮನೆ, ಭವನ, ನಭ=ಆಕಾಶ,

ಕತ್ತಲಲ್ಲಿ ನಮಗೆ ಬೆಳಕ ತೋರುವ ಪಂಜುಗಳಂತೆ ಅಜ್ಞಾನದಲ್ಲಿರುವವಗೆ ವೇದದ ಮತ್ತು ಶಾಸ್ತ್ರಗಳ ಜ್ಞಾನ, ವಿಜ್ಞಾನಗಳು ದೀಪಗಳಂತೆ. ಒಂದು ಲಾಟೀನಿನ ಬೆಳಕಿನಲ್ಲಿ ಹಾದಿಯನ್ನು ಸವೆಸಿ, ದೀಪಗಳ ಬೆಳಕಿನಿಂದ ಪ್ರಾಜ್ವಲ್ಯಮಾನವಾದ ಮನೆಯನ್ನೋ, ಸೌಧವನ್ನೋ ಹೊಕ್ಕವನಿಗೆ, ಆ ಲಾಟೀನಿನ ಬೆಳಕಿನ ಅವಶ್ಯಕತೆಯಿರುವುದಿಲ್ಲ ಎಂದು ಅಜ್ಞಾನದಿಂದ ಜ್ಞಾನದೆಡೆಗೆ ಹೋಗುವ ಮಾರ್ಗವನ್ನು ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮಗೆ ಬದುಕಿನಲ್ಲಿ ಎಲ್ಲವೂ ಉಪಕರಣಗಳೇ, ಆತ್ಮಕ್ಕೆ ದೇಹ ಮನಸ್ಸು, ಬುದ್ಧಿಗಳು ಉಪಕರಣಗಳು, ದೇಹಕ್ಕೆ ಜಗತ್ತೇ ಉಪಕರಣ, ಮನಸ್ಸಿಗೆ ಜಗದ್ ವಿಚಾರಗಳು ಉಪಕರಣಗಳು, ಬುದ್ಧಿಗೆ ಮನಸ್ಸಿನಿಂದ ಒಳಹೊಕ್ಕ ಅರಿವು ಉಪಕರಣ. ಹೀಗೆ ಆತ್ಮಕ್ಕೆ ಮನಸ್ಸು, ಬುದ್ಧಿ ಮತ್ತು ದೇಹಗಳ ಎಲ್ಲ ಉಪಕರಣಗಳೂ, ಉಪಕರಣಗಳಾಗುತ್ತವೆ. ಅದೇ ರೀತಿ ಅಜ್ಞಾನದಲ್ಲಿರುವವನಿಗೆ ವೇದ ಶಾಸ್ತ್ರಗಳು ಕಲಿಕೆಯ ಉಪಕರಣಗಳು. ಅವುಗಳು ಮಜಲುಗಳಲ್ಲ, ಮಜಲನ್ನು ತಲುಪಲು ಬೇಕಾದ ಸಾಧನಗಳು. ಇವುಗಳ ಕಲಿಕೆಯ ಮೂಲಕ, ಇವುಗಳಲ್ಲಡಗಿರುವ ತತ್ವ ಮತ್ತು ಸತ್ವಗಳ ಮೂಲಕ ಮನುಷ್ಯ ಜ್ಞಾನಿಯಾಗಬೇಕು. ಆ ಜ್ಞಾನ ಅವನನ್ನು ಭೇಧಗಳನ್ನೆಲ್ಲ ಮೀರಿ ನಿಲ್ಲುವಂತೆ ಮಾಡುವ ಸಾಧನವಾಗಬೇಕು.

ಹಾದಿ ಸವೆಸಲು ಬೀದಿ ಬೆಳಕು ಬೇಕು, ಮನೆ ಸೇರಿದ ಮೇಲೆ ಆ ಬೀದಿ ಬೆಳಕಿಂದ ಏನಾಗಬೇಕು ಎಂದು ಹೇಳುತ್ತಾ ನಮ್ಮ ಜ್ಞಾನ ಸಂಪಾದನೆಗೆ ಬೇಕಾದ 'ಏಣಿ' ಮತ್ತು ಆ ಏಣಿಯ 'ಮೆಟ್ಟಿಲುಗಳನ್ನು ನಮಗೆ ತೋರಿದ್ದಾರೆ ಮಾನ್ಯ ಗುಂಡಪ್ಪನವರು. ಮೆಟ್ಟಿಲು, ಮೇಲೇರಿ ಮಜಲನ್ನು ಮುಟ್ಟಲು ಬೇಕಾದ

ಉಪಕರಣ ಅಥವಾ ಸಲಕರಣೆ. ಆದರೆ 'ಮೆಟ್ಟಿಲನ್ನೇ' ಮಹಡಿಯೆಂದುಕೊಳ್ಳುವವರು ನಮ್ಮಲ್ಲಿ ಬಹಳಷ್ಟು ಜನ ಸಿಗುತ್ತಾರೆ. ಅವರು ಮೆಟ್ಟಲುಗಳಲ್ಲೇ ಸಿಕ್ಕಿಕೊಂಡಿರುತ್ತಾರೆ. ಕೈಲಿದ್ದ ಲಾಟೀನಿನ ಬೆಳಕಿಂದ ಹಾದಿ ಸವೆಸಿ ಮನೆ ಸೇರಿಕೊಂಡಂತೆ, ನಾವು ನಮ್ಮ ಬದುಕಿನ ಹಾದಿಯಲ್ಲಿ ಅಜ್ಞಾನವನ್ನು ನೀಗಲು ಸಿಕ್ಕ ಜ್ಞಾನದ ನಿಧಿಯನ್ನು ಪಡೆದು, ತತ್ವವನ್ನು ಅರಿತು, ಸತ್ವವನ್ನು ಹೀರಿ ಅವುಗಳನ್ನು ಮೀರಿ ಮೇಲೇರಬೇಕು. ಹಾಗೆ ಮೇಲೇರಿದಾಗ ಬೆಳಕಲ್ಲಿ ಕಂಡ ಭೇದಗಳು ಮಾಯವಾಗುತ್ತವೆ. ಹಾಗಾದಾಗ ಒಂದು ಧನ್ಯತೆಯ ಭಾವ ನಮ್ಮದಾಗುತ್ತದೆ. ನಾವು ಸಾಧಕರಾಗುತ್ತೇವೆ.

ಸಕಲ ವಿದ್ಯೆಯ ಉದ್ದೇಶ ಪರತತ್ವವನ್ನು ಅರಿಯುವುದೇ ಆಗಿರುತ್ತದೆ, ಅದನ್ನರಿಯಲು ಈ ಎಲ್ಲ ಜ್ಞಾನಗಳೂ ಉಪಕರಣಗಳಂತೆ ನಮಗೆ ಸಹಾಯಮಾಡುತ್ತವೆ. ಇವುಗಳ ಸಹಾಯವಿಲ್ಲದೆ ನಾವು ಮೇಲೇರಲು ಸಾಧ್ಯವಿಲ್ಲ. ಹಾಗೆಂದು ಅವುಗಳಿಗೇ ಜೋತುಬೀಳುವುದು ಸರಿಯಲ್ಲ. ಅವುಗಳನ್ನು ಮೀರಿ ಮೇಲೇರಬೇಕು. ಈ ಜ್ಞಾನ ನಿಧಿಗಳೆಲ್ಲ ನೀಡುವ ಮತ್ತು ತೋರುವ ಬೆಳಕಲ್ಲಿ ನಾವು ಬೆಳಗಬೇಕು, ಮತ್ತು ನಮ್ಮ ಬೆಳಕು ಜಗತ್ತಿಗೆ ಬೆಳಕಾಗಬೇಕು.ಆಗ ಬದುಕು ಸಾರ್ಥಕವಾಗುತ್ತದೆ.

**ಮುಕ್ತಕ – 524**

**ಪಿರಿದೆಲ್ಲ ಮತಿನೀತಿಗಳಿಗಿಂತ ಜೀವಿತವು |**
**ನೆರೆಬಂದ ನದಿ ದಡಕೆ ಬಾಗಿ ಪರಿಯುವುದೇಂ? ||**
**ಧರುಮಸೂಕ್ಷ್ಮದ ತಿಳಿವೆ ಲೋಕಸೂತ್ರದ ಸುಳುವು |**
**ಅರಸು ಜೀವಿತ ಹಿತವ - ಮಂಕುತಿಮ್ಮ ||**

ನಮಿಪುದೇಂ = ನಮಸ್ಕಾರ ಮಾಡುವುದೇನು? ನೆರೆ= ಪ್ರವಾಹ, ಅರಸು=ಹುಡುಕು

ಬದುಕು, ಬದುಕಿನ ಎಲ್ಲ ಸೂತ್ರಗಳಿಗಿಂತ ಹಿರಿಯದು. ಉಕ್ಕಿ ಪ್ರವಾಹವಾಗಿ ಹರಿಯುವ ನದಿ, ದಡಕ್ಕೆ ನಮಸ್ಕರಿಸುತ್ತದೇನು? ಧರ್ಮ ಸೂಕ್ಷ್ಮಗಳೆಲ್ಲ ಬದುಕಿನ ಸೂತ್ರಗಳನ್ನು ನಮಗೆ ಅರಿವಾಗಿಸಬೇಕು ಹಾಗಾಗಿ ನೀನು ಅವುಗಳನ್ನೆಲ್ಲ ಮೀರಿ ಬದುಕಿನ ಹಿತವನ್ನು ಹುಡುಕು ಎಂದು ಒಂದು ಜ್ಞಾನದ ಸುಳಿವು ಮತ್ತು ಒಂದು ಆದೇಶ ಎರಡನ್ನೂ ನೀಡಿದ್ದಾರೆ, ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಅತಿಯಾದ ಮಳೆಯಿಂದ ಉಂಟಾದ ಪ್ರವಾಹದ ಕಾರಣ ಉಕ್ಕಿ ಹರಿಯುವ ನದಿ ತನ್ನ ಎರಡು ದಡಗಳ ಎಲ್ಲೆಯೊಳಗೇ ಹರಿಯುವುದಿಲ್ಲ, ತಳ್ಳಿಕೊಂಡು ಬರುವ ಶಕ್ತಿಯ ಕಾರಣ ರಭಸದಿಂದ ಹರಿಯುವಾಗ ಎಲ್ಲೆಮೀರಿ ಹರಿದು ಎರಡೂ ಬದಿಯ ದಡಗಳನ್ನೂ ದಾಟಿ ತನ್ನ ಪ್ರಭಾವ ತೋರುವುದಲ್ಲವೇ? ಅದು ನದಿಯ ಹರಿವಿನ ಸ್ವಭಾವ. ಗಡಿಗಳಿಗೆ, ದಡಗಳಿಗೆ ಹಾನಿಯಾಗುತ್ತದೆಂದು ತನ್ನ ಹರಿವ ದಿಕ್ಕನ್ನಾಗಲೀ ಗತಿಯನ್ನಾಗಲೀ ಬದಲಾಯಿಸಲು ಸಾಧ್ಯವಿಲ್ಲ. ಹಾಗೆ ಬದಲಾಯಿಸಿದರೆ ಅದು ತನ್ನ ಗಮ್ಯವನ್ನು ಸೇರಲು ಸಾಧ್ಯವಿಲ್ಲ.





ನದಿಯ ಹರಿವಿನ ಗಮ್ಯ ಕಡಲು, ಕಡಲು ಸೇರಿದಮೇಲೆ ಹರಿವು ಇರುವುದಿಲ್ಲ. ಹಾಗೆಯೇ ಮನುಷ್ಯನ ಬದುಕಿನ ಪ್ರವಾಹದ ಗಮ್ಯ ಜೀವಿತದ ಹಿತವನ್ನು ಪಡೆಯುವುದು. ಪರತತ್ವವನ್ನು ಅರಿತು ಶಾಂತಿಯನ್ನು ಪಡೆಯುವುದು. ವೇದ, ಪುರಾಣ, ಶಾಸ್ತ್ರ, ಧರ್ಮ ಸೂಕ್ಷ್ಮಗಳು, ಕರ್ಮಾಂಗಗಳು ಮುಂತಾದ ಎಲ್ಲಾ ವಿಧವಾದ ಜ್ಞಾನದ ಆಯಾಮಗಳು ಮನುಷ್ಯನಿಗೆ ತನ್ನ ಜೀವಿತದ ಹಿತವನ್ನು ಅರಸುವ ಹಾದಿಯಲ್ಲಿ ಪೂರಕವಾಗಿರಬೇಕು, ಅಲ್ಲದೆ ತನ್ನದೇ ಆದ ನಿರ್ಬಂಧಗಳನ್ನು ಹೇರಿ ಉಸಿರುಗಟ್ಟಿಸುವಂತಹ ಸ್ಥಿತಿಗೆ ತಳ್ಳಿದರೆ ಗಮ್ಯ ಸೇರುವುದು ದೂರದ ಮಾತಾಗುತ್ತದೆ. ಧರ್ಮ ಸೂಕ್ಷ್ಮಗಳ ಕಲಿಕೆ, ಲೋಕದ ನಮ್ಮ ಬದುಕಿನ ಸಂಕೀರ್ಣತೆಯನ್ನು ಅರಿತುಕೊಂಡು, ನಡೆಯನ್ನು ಅರಿತು ಬದುಕನ್ನು ಹಿತವಾಗಿಸಿಕೊಳ್ಳುವುದಕ್ಕಾಗಿಯೇ ಆಗಬೇಕೆ ಹೊರತು ಬೇರಲ್ಲ.

ಹೇಗೆ ನದಿ ನೆರೆಬಂದಾಗ ತನ್ನ ದಡವನ್ನೂ ಲೆಕ್ಕಿಸದೆ ಮುನ್ನುಗ್ಗಿ ಹರಿದು ತನ್ನ ಗಮ್ಯವನ್ನು ಸೇರಲು ಓಡುವುದೋ, ಹಾಗೆಯೇ ನಾವೂ ಸಹ ಅರಿವನ್ನು ಪಡೆದುಕೊಳ್ಳಬೇಕು. ಆ ಅರಿವನ್ನು ಪಡೆದುಕೊಳ್ಳಲು ಯಾವ ಯಾವ ವಿದ್ಯೆಗಳನ್ನು ಕಲಿಯಬೇಕೋ, ಅದನ್ನೆಲ್ಲ ಕಲಿತುಕೊಳ್ಳಬೇಕು. ಕಲಿತ ವಿದ್ಯೆಗಳ ಸಾರವನ್ನು ಹೀರಬೇಕು ಮತ್ತು ಅವುಗಳನ್ನೂ ಮೀರಿ ಮನಸ್ಸನ್ನು ಶಾಂತವಾಗಿಸಿಕೊಳ್ಳಬೇಕು ಮತ್ತು ಬದುಕನ್ನು ಹಿತವಾಗಿಸಿಕೊಂಡು ನಾವು ಪಡೆದ ಹಿತವನ್ನು ಪರರಿಗೆ ಹಂಚಲು ಸಾಧ್ಯವಾದರೆ, ಆಗ ನಮ್ಮ ಬದುಕೂ ಸಹ ಸಾರ್ಥಕವಾಗುತ್ತದೆ.

**ಮುಕ್ತಕ – 525**

**ಜಗ ಬೆಳೆದು ಚಿಗುರುತಿರೆ ಶಾಸ್ತ್ರ ಕರಟಿರಲಹುದೆ? |**
**ನಿಗಮಸಂತತಿಗೆ ಸಂತತಿಯಾಗದಿಹುದೆ? ||**
**ಬಗೆಬಗೆಯ ಜೀವಸತ್ವವಿಕಾಸವಾಗುತಿರ |**
**ಲೊಗೆವುದೈ ವಿಜ್ಞಾನ - ಮಂಕುತಿಮ್ಮ ||**

ಕರಟಿರಲಹುದೆ=ಕರಟಿರಲ್+ಅಹುದೆ, ಸಂತತಿಯಾಗದಿಹುದೆ=ಸಂತತಿಯು+ಆಗದಿಹುದೆ,
ಜೀವಸತ್ವವಿಕಾಸವಾಗುತಿರಲೊಗೆವುದೈ= ಜೀವಸತ್ವ+ವಿಕಾಸವಾಗುತಿರಲ್+ಒಗೆವುದೈ,
ಕರಟಿರಲ್+ಸುರುಟಿಕೊಂಡು ಹೋಗಿರಲ್,
ನಿಗಮ=ವೇದ, ಒಗೆವುದೈ=ಹುಟ್ಟುವುದು ಅಥವಾ ವಿಕಾಸವಾಗುವುದು.

ಜಗತ್ತೆಲ್ಲ ಬೆಳೆದು ಹೊಸ ವಿಚಾರಗಳು ಚಿಗುರುತ್ತಿರುವಾಗ, ಅದಕ್ಕೆ ಪೂರಕವಾದ ಶಾಸ್ತ್ರವು ಸುರುಟಿಕೊಂಡಿರಲು ಸಾಧ್ಯವೇ? ಜ್ಞಾನದ ಆಯಾಮಗಳೂ ಸಹ ಹೊಸ ಹೊಸ ವಿಚಾರಗಳ ನೆಲೆಯಾಗಬೇಕು. ಎಲ್ಲೆಡೆಯಲ್ಲಿಯೂ ಹೊಸತಿನ ವಿಕಾಸವಾಗುತ್ತಿರಬೇಕಾದರೆ ಜ್ಞಾನವೂ ವಿಕಾಸಗೊಳ್ಳಬೇಕು ಮತ್ತು ಹಾಗೆ ವಿಕಾಸಗೊಂಡದ್ದರಿಂದ

ಕಗ್ಗರಸಧಾರೆ ಶಾಸ್ತ್ರ ಬೆಳೆಯುತ್ತದೆ 524 528

ವಿಜ್ಞಾನದ ಹೊಸ ಹೊಸ ವಿಚಾರಗಳು ಬೆಳಕಿಗೆ ಬರಬೇಕು ಎಂದು ಜಗತ್ತಿನ ನಿರಂತರ ನವೀನತೆಯ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಒಂದು ಮರದಲ್ಲಿ ಹೊಸ ಚಿಗುರು ತಳೆದರೆ ಅದು ಸೊಗಸು, ಹಾಗೆ ಹೊಸ ಚಿಗುರೇ ತಳೆಯದ ಮರವನ್ನು 'ಬರಡೆ' ನ್ನುತ್ತಾರೆ. ಅದು ಸೊಗಸನ್ನು ನೀಡದು. ಹಾಗೆಯೇ ಜಗತ್ತಿಗೆ ಶಕ್ತಿಯನ್ನು ಮತ್ತು ಹೊಸತನವನ್ನು ನೀಡುವ ಆ ಪರಮ ಶಕ್ತಿಯೇ ನವನವೀನ ರೀತಿಯಲ್ಲಿ ಪ್ರಕಟಗೊಳ್ಳುತ್ತಿರುವಾಗ, ಆ ಜಗತ್ಪಭೆಗೆ ವ್ಯಾಖ್ಯಾವನ್ನು ನೀಡುವ ವೇದ ಶಾಸ್ತ್ರಗಳೂ ಸಹ ಹೊಸತನವನ್ನು ಅಳವಡಿಸಿಕೊಂಡರೆ ನಿರಂತರವಾಗಿರಲು ಸಾಧ್ಯ. ಬದಲಾಗುವ ಕಾಲಕ್ಕೆ ತಕ್ಕಂತೆ ಎಲ್ಲವೂ ಬದಲಾಗಬೇಕು, ಹಾಗೆ ಬದಲಾಗದ್ದು, ಕಾಲಕ್ರಮದಲ್ಲಿ ನಾಶವಾಗುತ್ತದೆ ಅಥವಾ ಲುಪ್ತವಾಗುತ್ತದೆ. ಹಿಂದೆ ಇದ್ದಂತಹ ಹಲವಾರು ಸಂಸ್ಕೃತಿಗಳು, ಭಾಷೆಗಳು, ಆಚಾರ ವಿಚಾರಗಳು, ಜೀವನ ಕ್ರಮಗಳು, ಇಂದು ಇಲ್ಲದ್ದನ್ನು ನೋಡಿದರೆ, ಬಹುಶ ಅವುಗಳು ಹೊಸತನಕ್ಕೆ ತಮ್ಮನ್ನು ತಾವು ಅಳವಡಿಸಿಕೊಳ್ಳದೆ ಹೋದವು ಎಂದು ಅನಿಸುತ್ತದೆ.

ಪಂಚಭೂತಗಳಿಂದಾದ ಈ ನಮ್ಮ ಭುವಿಯಲ್ಲಿ ನಿರಂತರವಾಗಿ ನವೀನತೆ ಕಂಡುಬರುತ್ತದೆ. ಹಾಗಿದ್ದಲ್ಲಿ ಇವುಗಳನ್ನೆಲ್ಲ ಒಂದು ಸೂತ್ರದಲ್ಲಿ ನಡೆಸಿಕೊಂಡು ಹೋಗುವ, ಜ್ಞಾನಕ್ಕೆ ಮೂಲವಾದ ಆ ಪರಮ ಶಕ್ತಿಯೂ ಸಹ ನಿತ್ಯ ನೂತನವಾಗಿರುವುದಲ್ಲವೇ? ಆದರೆ ಅದರ ನವೀನತೆಯನ್ನು ಕಾಣಬೇಕು. ಅದನ್ನು ಬಿಟ್ಟು ಎಂದೋ ಪಾಲಿಸಿದ ಆಚಾರವಿಚಾರಗಳನ್ನು ಇಂದಿಗೂ ಹಿಡಿದುಕೊಂಡು ಕುಳಿತರೆ ಅಪ್ಪ ಹಾಕಿದ ಅಲ್ಲದ ಮರಕ್ಕೆ ನೇಣುಹಾಕಿಕೊಂಡಂತೆ ಅಲ್ಲವೇ?

ನಿಂತ ನೀರು ಕೊಳೆಯುತ್ತದೆ, ನಾರುತ್ತದೆ. ಕೆಟ್ಟನಾತ ಹಬ್ಬುತ್ತದೆ ಮತ್ತು ರೋಗಗಳಿಗೆ ಕಾರಣವಾಗುತ್ತದೆ ಮತ್ತು ತನ್ನ ಗಮ್ಯದಿಂದ ದೂರವಿರುತ್ತದೆ, ಆದರೆ ಹರಿವ ನೀರು ತನ್ನ ಹರಿವಿಗೆ ಸಿಕ್ಕದ್ದನ್ನೆಲ್ಲಾ ತನ್ನ ಒಟ್ಟಿಗೆ ತೆಗೆದುಕೊಂಡು ಹೋಗುತ್ತದೆ, ಮಾರ್ಗ ಹೊಸದಾದರೂ ಖುಷಿಯಿಂದ ಹರಿಯುತ್ತದೆ ಮತ್ತು ತನ್ನ ಗಮ್ಯ ಸೇರುತ್ತದೆ, ಹಾಗಾಗಿ ನಮ್ಮ ಬದುಕುಗಳು ನಿಂತ ನೀರಾಗದೆ ಹರಿವ ನದಿಯಾದರೆ ನಾವೂ ಸಹ ನಮ್ಮ ಗಮ್ಯವನ್ನು ಸೇರಬಹುದು. ಪ್ರಯತ್ನ ಪಟ್ಟರೆ ನಮ್ಮ ಮನಸ್ಸುಗಳಲ್ಲೂ ಸಹ ಹೊಸತನ್ನು ಬರಮಾಡಿಕೊಳ್ಳುವ ಮತ್ತು ಹೊಸತನಕ್ಕೆ ಅಳವಡಿಸಿಕೊಳ್ಳುವ ಕ್ಷಮತೆಯನ್ನು ಬೆಳೆಸಿಕೊಂಡು ನಾವೂ ಸಹ ನಿತ್ಯನೂತನರಾಗಿರಬಹುದು.

**ಮುಕ್ತಕ – 526** **ಸೆರೆಬಿದ್ದು ಧರ್ಮಪಾದಪ ನಿಲದು ಮಠಗಳಲಿ |**

**ಜರೆಯಿಂದ ಬರಡುವುದು ಮಠದ ನೆರಳಿನಲಿ ||**

**ಪರಸತ್ತ್ವ ರಸ ವಿಶ್ವಜೀವನದ ಬೇರ್ಗಳಿಂ |**

**ನೆರೆಯಲಾ ತರು ತಂಪು -ಮಂಕುತಿಮ್ಮ ||**





ಸೆರೆಬಿದ್ದು= ಬಂದಿಯಾಗಿ, ಧರ್ಮಪಾದಪ=ಧರ್ಮವೆಂಬಮರ, ಜರೆ=ಮುಪ್ಪು, ಮುದಿತನ, ಬರಡುವುದು= ಸೊರಗಿ ಒಣಗುವುದು, ಪರಸತ್ವರಸ=ಜಗತ್ತನ್ನಾಳುವ ತತ್ವದ ಸಾರ, ತರು=ಮರ

ಧರ್ಮವೆಂಬ ಮರ ಭಿನ್ನ ಭಿನ್ನ ಮತಗಳ ಆಧಾರದಮೇಲೆ ನಿಲ್ಲುವುದಿಲ್ಲ, ಮಠಗಳ ಮತ್ತು ಅವುಗಳು ಪ್ರತಿಪಾದಿಸುವ ಮತಗಳ ನೆರಳಿನಲ್ಲಿದ್ದರೆ, ಧರ್ಮ ಸೊರಗುತ್ತದೆ. ಜನ ಜೀವನದ ಬದುಕಿನಲಿ ಸಂಸ್ಕೃತಿ ಮತ್ತು ಸಂಸ್ಕಾರಗಳ ಬೇರುಗಳಲ್ಲಿ ಪರತತ್ವದ, ಪರಮಾತ್ಮನ, ತತ್ವ ಮತ್ತು ಸತ್ವಗಳು ಆಳವಾಗಿ ಇಳಿದಲ್ಲಿ ಈ ಧರ್ಮವೆಂಬ ವೃಕ್ಷ ಮತ್ತೆ ಸಮೃದ್ಧಿಯಾಗಿ ಬೆಳೆದು ಸೊಂಪಾಗುತ್ತದೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಜಗತ್ತಿನ ಆದಿಯಿಂದ ಸೃಷ್ಟಿಯಾದ ಪ್ರತಿವಸ್ತುವಿಗೂ ಅದರದೇ ಆದಂತಹ ಒಂದು ಧರ್ಮವಿದೆ. ಸಮಗ್ರವಾಗಿ, ಸೃಷ್ಟಿಧರ್ಮವು ಎಂದಿಗೂ ಸ್ವತಂತ್ರವಾಗಿ ನಿಲ್ಲುತ್ತದೆ. ಆದರೆ ಅದಕ್ಕೆ ಮನುಷ್ಯ ಬೇರೆ ಬೇರೆ ರೀತಿಯಲ್ಲಿ ವ್ಯಾಖ್ಯಾನ ಮಾಡುತ್ತಾ, ಹತ್ತು ಹಲವಾರು ಪರಿಭಾಷೆಗಳನ್ನು ನೀಡುತ್ತಾನೆ. ಆಗ ಪ್ರತಿಯೊಂದು ಪರಿಭಾಷೆಯೂ ಒಂದೊಂದು ಮತವಾಗಿ ಹೊರಹೊಮ್ಮುತ್ತದೆ, ಅದಕ್ಕೆ ಹಲವರು ಅನುಯಾಯಿಗಳಾಗುತ್ತಾರೆ. ಅವರ ಬಲದಿಂದ ಆ ಮತ ಬೆಳೆಯುತ್ತದೆ, ಅದನ್ನು ಕಾಪಾಡಲು ಮತ್ತು ಬೆಳೆಸಲು ಮಠಗಳು ಹುಟ್ಟಿಕೊಳ್ಳುತ್ತವೆ. ಆ ಮಠಗಳಿಗೆ ಹಲವರು ಆಶ್ರಯ ನೀಡಿ ಬೆಳೆಯಲು ಪ್ರೋತ್ಸಾಹಿಸುತ್ತಾರೆ ಮತ್ತು ಹಲವರು ಆಶ್ರಯಪಡೆದು ಬೆಳೆಯಲು ಕಾರಣರಾಗುತ್ತಾರೆ,

ಎಷ್ಟು ಅಭಿಮತಗಳು ಮತ್ತು ಪರಿಭಾಷೆಗಳಿದ್ದರೆ ಅಷ್ಟು ಮಠಗಳು, ಮಠಾಧೀಶರುಗಳು, ಅನುಯಾಯಿಗಳ ಗುಂಪುಗಳು, ಇಡೀ ಸಮಾಜವನ್ನು ಮೂಲದಿಂದ ಬೇರ್ಪಡಿಸುವ ಕಾರ್ಯಕ್ರಮ ಮುಂದುವರೆಯುತ್ತದೆ, ಅಷ್ಟೇ ಅಲ್ಲ ಬದಲಾದ ವಿಚಾರಧಾರಗಳು ಭಾಷೆ, ಜಾತಿ, ಆಚಾರ ಸಂಪ್ರದಾಯದ ಹೆಸರಿನಲ್ಲಿ ಸಮಾಜವನ್ನು ಛಿದ್ರ ಛಿದ್ರವಾಗಿಸಿ, ಜನರ ಮನಸ್ಸನ್ನು ಕಲುಷಿತಗೊಳಿಸಿ ಸ್ವಾರ್ಥ ಸಾಧನೆಯನ್ನು ಮಾಡುತ್ತಿವೆ ಈ ಮತಗಳು ಮತ್ತು ಮಠಗಳು.

ಒಂದು ವಿಚಾರವನ್ನು ನಾವು ಸ್ಪಷ್ಟವಾಗಿ ಅರಿತುಕೊಳ್ಳಬೇಕು. ಧರ್ಮದ ಮೂಲ ಸ್ವರೂಪ ಎಂದಿಗೂ ಬದಲಾಗುವುದೇ ಇಲ್ಲ. ಅದರ ಮೂಲ ಸತ್ವದ ಆಧಾರದ ಮೇಲೆಯೇ ಹೊಸ ಹೊಸ ಆಯಾಮಗಳು ಚಿಗುರುತ್ತವೆ, ಒಂದು ಮರದ ಬೇರುಗಳು, ಕಾಂಡ, ಎಲ್ಲವೂ ಮೂಲ ಬೇರಿನೊಂದಿಗೆ ಸಂಪರ್ಕವನ್ನಿಟ್ಟುಕೊಂಡದ್ದರಿಂದಲೇ ಹೊಸ ಚಿಗುರು, ಹೊಸ ಕೊಂಬೆಗಳು, ಹೂ ಹಣ್ಣುಗಳು ಪ್ರತೀ ವಸಂತದಲ್ಲೂ ನಮಗೆ ಕಾಣುವುದು. ಆ ಸಂಪರ್ಕವನ್ನು ಕಡಿದುಕೊಂಡರೆ, ಮರವೇ ನಾಶವಾಗುತ್ತದೆ, ಹಾಗೆಯೇ ಪ್ರತಿಯೊಂದು ಸಮಾಜವೂ ತನ್ನ ಮೂಲ ಸಂಸ್ಕಾರ, ಸಂಸ್ಕೃತಿಗಳೊಡನೆ ಎಲ್ಲಿಯ ತನಕ ಸಂ ಬಂಧವನ್ನಿಟ್ಟುಕೊಂಡಿರುತ್ತದೆಯೋ ಅಲ್ಲಿಯತನಕ ಅದು ತನ್ನ ಸ್ವಧರ್ಮದಿಂದ ಬೇರಾಗುವುದಿಲ್ಲ. ಮಾನವ ಜನಾಂಗದ ಚರಿತ್ರೆಯಲ್ಲಿ ನಮಗಿದರ ದೃಷ್ಟಾಂತಗಳು ಹೇರಳವಾಗಿ ಸಿಗುತ್ತವೆ. ನಾವು ಭಾರತೀಯರು. ನಮಗೆ ಸನಾತನದ ತತ್ವ ಮತ್ತು ಸತ್ವಗಳೇ ಅಧಾರ. ಅದನ್ನು ತೊರೆದರೆ ನಮ್ಮ ಸಂಸ್ಕೃತಿಯೂ ಸಹ ಚರಿತ್ರೆಯ ಪುಟಗಳಲ್ಲಿ ಕಳೆದುಹೋಗುವ ಸಾಧ್ಯತೆ ಇದೆ. ಇಂದು ನಾಗರೀಕತೆಯ ವಿಕಾಸದ ಹೆಸರಿನಲ್ಲಿ ನಡೆಯುತ್ತಿರುವ ಬದಲಾವಣೆಗಳು ನಮ್ಮನ್ನು ಆ ದಿಕ್ಕಿನಲ್ಲೇ ಕೊಂಡುಹೋಗುತ್ತಿವೆ.

ನಮ್ಮ ಮುಂದಿನ ಪೀಳಿಗೆಗೆ ಒಂದು ಸುಸಂಸ್ಕೃತ, ಸತ್ವಯುತವಾದ ಸಮಾಜವನ್ನು ನಾವು ಬಿಟ್ಟು ಹೋಗಬೇಕಾದರೆ, ಜಗತ್ತಿಗೆ ಆಧಾರವಾದ ಪರಮಾತ್ಮ ತತ್ವವು ಮತ್ತು ಆ ತತ್ವದ ಸತ್ವ ಒಂದೇ, ಮಾನವ ಜನಾಂಗಕ್ಕೆ ಮೂಲ ಧರ್ಮ ಒಂದೇ ಮತ್ತು ಆ ತತ್ವದ ಆಧಾರದ ಮೇಲೆಯೇ ಜಗತ್ತಿನ ಜನರೆಲ್ಲರೂ ಪ್ರೇಮ, ಸೌಹಾರ್ಧಯುತವಾದ ಬಾಳ್ವೆ ನಡೆಸಬೇಕು, ಎಂದು ಅರಿತು ಬಾಳಲಾದರೆ, ಗುಂಡಪ್ಪನವರ "ಪರಸತ್ವರಸ ವಿಶ್ವಜೀವನದ ಬೇರ್ಗಳಿಂ ನೆರೆಯಲಾ ತರು ತಂಪು" ಎಂಬ ಆಶಯದಂತೆ ಈ ಜಗತ್ತು ಎಂಬ ತರುವೂ ಸಹ ಸುಂದರವಾಗಬಹುದು.

**ಮುಕ್ತಕ – 527** **ಜೀವಕಾರಣಮೂಲ ಗೂಢವಾಗಿರ್ದೊಡಂ |**
**ಧೀವಿಕಾಸದ ಬೆಳಕನಾದನಿತು ಗಳಿಸಿ ||**
**ಕೈವಲ್ಯಪಥವನರಸುತ ಯಾತ್ರಿಸಲೇಬೇಕು |**
**ದೀವಿಗೆಯು ಮತಿಯೊಂದೆ - ಮಂಕುತಿಮ್ಮ ||**

ಗೂಢವಾಗಿರ್ದೊಡಂ=ಗೂಢವಾಗಿ+ಇರ್ದೊಡಂ, ಧೀವಿಕಾಸದ=ಧೀ+ವಿಕಾಸದ,
ಬೆಳಕನಾದನಿತು=ಬೆಳಕನು+ಆದ+ಇನಿತು, ಕೈವಲ್ಯಪಥವನರಸುತ=ಕೈವಲ್ಯ+ಪಥವನು + ಅರಸುತ,
ಮತಿಯೊಂದೆ=ಮತಿಯೂ+ಒಂದೆ,
ಇರ್ದೊಡಂ= ಇದ್ದರೆ, ಧೀ=ಬುದ್ಧಿ, ಕೈವಲ್ಯ=ಪಾರಮಾರ್ಥ, ಇನಿತು=ಸ್ವಲ್ಪ,
ದೇವಿಗೆ=ಬೆಳಕನೀಡುವ ಹಣತೆ,

ಈ ಜಗತ್ತಿನ ಮೂಲ ಕಾರಣವು ಗೂಢವಾಗಿರುವಾಗ, ಬುದ್ಧಿಯು ವೃದ್ಧಿಯಾಗುವಂತಹ ಜ್ಞಾನದ ಬೆಳಕನ್ನು ಪಡೆದು, ಪಾರಮಾರ್ಥದ ತತ್ವವನ್ನು ಅರಸುವ ದಾರಿಯಲ್ಲಿ ಪ್ರಯಾಣಮಾಡಲೇಬೇಕು. ಕತ್ತಲಲ್ಲಿ ಬೆಳಕ ನೀಡುವ ದೀವಿಗೆ ಮತ್ತು ಜ್ಞಾನವನ್ನು ಅರಸುವ ಬುದ್ಧಿ ಎರಡೂ ಒಂದೇ ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಜಗತ್ತಿಗೆ ಒಂದು ಪರಮ ಶಕ್ತಿಯೇ ಮೂಲಕಾರಣ, ಅದಕ್ಕೆ ಪರಮಾತ್ಮ, ದೇವರು, ಸೃಷ್ಟಿಕರ್ತ, ಪರಮಪುರುಷ ಹೀಗೆ ಹತ್ತು ಹಲವಾರು ಹೆಸರುಗಳು. ಈ ಜಗತ್ತಿನ ಎಲ್ಲಕ್ಕೂ ಅದೇ ಮೂಲ. ಆದರೆ ಅದು ತನ್ನ

ಗೂಢತೆಯನ್ನು ಬಿಟ್ಟು ಕೊಡಲೊಲ್ಲದು, ಅನಾದಿ ಕಾಲದಿಂದಲೂ ಮನುಷ್ಯನ ಮನಸ್ಸಿನಲ್ಲಿ 'ಇದು ಏನು?' 'ಇದು ಯಾರು?' ಎನ್ನುವ ಜಿಜ್ಞಾಸೆ ಇದ್ದು, ಇಂದಿಗೂ ಬಗೆಹರಿದಿಲ್ಲ. ಅದನ್ನು ಅರಿಯಲು ಪ್ರಯತ್ನಪಟ್ಟವರೆಲ್ಲರೂ, ಅವರವರದೇ ರೀತಿಯಲ್ಲಿ ಸಾಹಸಮಾಡಿದರು. ಆ ಪರತತ್ವವನ್ನು ಕಂಡುಕೊಳ್ಳಲು ತಪಸ್ಸು, ಜಿಜ್ಞಾಸೆ, ಧ್ಯಾನ, ಪೂಜೆ, ಯಜ್ಞ, ಹೋಮ, ಹವನ, ಮನೋಮಂಥನ, ವಿಚಾರ ವಿನಿಮಯ ಮುಂತಾದವುಗಳು ಅನಾದಿಕಾಲದಿಂದಲೂ ನಡೆಯುತ್ತಲೇ ಬರುತ್ತಿವೆ.ಅವರವರು ಕಂಡುಕೊಂಡ ಸತ್ಯಗಳನ್ನು





'ಇದೇ ಸತ್ಯ' ವೆಂದು ನಂಬಿದರು. ಆದರೆ ಸತ್ಯವನ್ನು ಅರಿಯಲು ಪ್ರಯತ್ನಿಸಿ, ಮತ್ತೇನನ್ನೋ ಅರಿತು, ಅದೇ ಸತ್ಯವೆಂದು ನಂಬಿ, ಪ್ರತಿಪಾದಿಸಿ, ಭಿನ್ನ ಭಿನ್ನ ಮತಗಳನ್ನು ಹುಟ್ಟು ಹಾಕಿ, ತಮ್ಮ ಮತವೇ ಶ್ರೇಷ್ಠ ಎಂದು ಪ್ರಚಾರಗೊಳಿಸಿರುವ ಕಾರಣದಿಂದ, ಮತ ಮತ್ತು ಅಭಿಮತಗಳು ಭಿನ್ನಭಿನ್ನವಾಗಿ ಮೂಲ ಸತ್ಯದಿಂದ ಜನರು ದೂರಾಗುವಂತೆ ಆಗಿದೆ. ಆದ್ದರಿಂದ ಅನ್ಯರ ವಿಚಾರಗಳನ್ನು ಕೇಳಿದರೂ, ಮಾನ್ಯ ಗುಂಡಪ್ಪನವರು "ಧೀವಿಕಾಸದ ಬೆಳಕನಾದನಿತು ಗಳಿಸಿ ಕೈವಲ್ಯಪಥವನರಸುತ ಯಾತ್ರಿಸಲೇಬೇಕು" ಎಂದು ಹೇಳುವಂತೆ ಪ್ರತಿಯೊಬ್ಬರೂ ಆ ಪರತತ್ವವನ್ನು ಅರಿಯಲು ಸ್ವಂತ ಪ್ರಯತ್ನವನ್ನು ಮಾಡಲೇಬೇಕು, ಮನಸ್ಸು ಬುದ್ಧಿಗಳನ್ನು ಏಕಾಗ್ರತೆಯಿಂದ ತೊಡಗಿಸಿಕೊಂಡು, ಧ್ಯಾನ ಮುಂತಾದವುಗಳಿಂದ ತಮ್ಮ ತಮ್ಮ ರೀತಿಯಲ್ಲಿ ಪರತತ್ವವನ್ನು ಕಂಡುಕೊಳ್ಳಲೇ ಬೇಕು.

ಮುನಿಶ್ರೇಷ್ಠನಾದ ವಿಶ್ವಾಮಿತ್ರನಿಂದ ಜಗತ್ತಿಗೆ ನೀಡಲ್ಪಟ್ಟ 'ಗಾಯತ್ರಿ' ಮಂತ್ರ "ತತ್ ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ಧೀ ಯೋ ನಃ ಪ್ರಚೋದಯಾತ್" ಎನ್ನುತ್ತದೆ. ಎಂದರೆ "ನಮ್ಮ ಬುದ್ಧಿಗಳನ್ನು ಪ್ರಚೋದಿಸುವ ಮತ್ತು ತೀಕ್ಷ್ಣಗೊಳಿಸುವ ಆ ದೇವನ ಶ್ರೇಷ್ಠವಾದ ತೇಜಸ್ಸನ್ನು ನಾವು ಧ್ಯಾನ ಮಾಡೋಣ" ಎಂದು. ನಮ್ಮ ನಮ್ಮ ಮನಸ್ಸುಗಳನ್ನು ಸರಿ ಮಾರ್ಗದಲ್ಲಿಟ್ಟುಕೊಳ್ಳುವ (self psychological treatment) ಮತ್ತು ನಮ್ಮನ್ನು ಅದೇ ಮಾರ್ಗದಲ್ಲಿ ನಡೆಸಿಕೊಂಡುಹೋಗುವ ಪ್ರಕ್ರಿಯೆ ನಮಗೆ ನಮ್ಮ 'ಸನಾತನ' ದಿಂದ ಬಂದಿದೆ. ಕಡಿಮೆ

ಶಕ್ತಿಯಿರುವವರು ಹೆಚ್ಚಿನ ಶಕ್ತಿವಂತರಿಂದ ತಮಗೆ ಬೇಕಾದ ಶಕ್ತಿಯನ್ನು ಪಡೆಯುವುದು ಸಹಜ ಧರ್ಮವಾಗಿದೆ. ಅದೇ ರೀತಿಯಲ್ಲಿ ಜ್ಞಾನ ಪಡೆಯಲು ಇಚ್ಛಿಸುವವರು ತಮಗಿಂತ ಹೆಚ್ಚು ಜ್ಞಾನವಂತರನ್ನು ಆಶ್ರಯಿಸಿ ಮಾರ್ಗವನ್ನು ಅರಿಯಬೇಕು. ಆದರೆ 'ನಾವೇ ನಡೆಯಬೇಕು! ನಾವು ಆಶ್ರಯಿಸಿದವರೇ ನಮ್ಮನ್ನು ನಡೆಸಲು ಬಿಟ್ಟರೆ ಅವರು ತಮ್ಮ ಮಾರ್ಗದಲ್ಲಿ ನಮ್ಮನ್ನು ನಡೆಸಿಕೊಂಡು ಹೋಗುತ್ತಾರೆ ಅಲ್ಲವೇ? ಹಾಗಾಗಿ ನಮಗೆ ಸತ್ಯ ದರ್ಶನವಾಗಬೇಕಾದರೆ ಪ್ರಯತ್ನ ನಮ್ಮದೇ ಆಗಬೇಕು.

ಕತ್ತಲಲ್ಲಿ ದಾರಿ ಸಾಗಿಸಬೇಕಾದರೆ ಒಂದು ದೀವಿಗೆ ಇದ್ದರೆ ಸಾಕು, ಹಾಗೆಯೇ ಅಜ್ಞಾನವೆಂಬ ಕತ್ತಲೆಯಿಂದ ಜ್ಞಾನದ ಕಡೆಗೆ ಹೋಗಬೇಕಾದರೆ ನಮ್ಮ ಮನಸ್ಸು ಬುದ್ಧಿಗಳೇ ನಮಗೆ ದೀವಿಗೆಯಾಗಬೇಕು. 'ತಮಸೋಮಾ ಜ್ಯೋತಿರ್ಗಮಯ' ಎನ್ನುವ ವೇದ ವಾಕ್ಯವೂ '(ನಾವು) ಕತ್ತಲಿನಿಂದ ಬೆಳಕಿನೆಡೆಗೆ ಹೋಗೋಣ' ಎಂದು ಹೇಳುತ್ತದೆ. ಮೌನವಾಗಿ, ಶಾಂತವಾಗಿ, ಅಂತರಂಗದಲ್ಲಿ ಬೆಳಕನ್ನು ಕಂಡುಕೊಳ್ಳಬೇಕು. ಪ್ರಯತ್ನಪಟ್ಟರೆ ಸರ್ವರಿಗೂ ಇದು ಸಾಧ್ಯವೆಂಬುದು ಪರಮ ಸತ್ಯ.

**ಮುಕ್ತಕ – 528**

**ಭಕ್ತಿ ನಂಬುಗೆ ಸುಲಭ; ಭಜನೆ ವಂದನೆ ಸುಲಭ |**
**ತತ್ವಶೋಧನೆ ಕಷ್ಟ; ಮತಿಕಾರ್ಯ ಕಷ್ಟ ||**
**ಸುತ್ತುವುದು ಗಿರಿಸುತ್ತ ಸುಳುವೆಂದು ಲೋಕಜನ |**
**ಹತ್ತುವನು ತಾಪಸಿಯೋ ಮಂಕುತಿಮ್ಮ ||**

ಸುಳುವೆಂದು=ಸುಳುವು+ಎಂದು ತತ್ವಶೋಧನೆ=ತತ್ವವನ್ನು ಹುಡುಕುವುದು, ಮತಿಕಾರ್ಯ= ಬುದ್ಧಿಯ ಕೆಲಸ, ಸುಳುವೆಂದು=ಸುಲಭವೆಂದು,

ಭಕ್ತಿ, ಭಜನೆ, ಧ್ಯಾನಗಳನ್ನು ಮಾಡುವುದು ಸುಲಭದ ಕೆಲಸ. ಆದರೆ ಪರತತ್ವವನ್ನು ಹುಡುಕುವುದು ಮತ್ತು ಆ ಹುಡುಕುವುದಕ್ಕಾಗಿ ನಡೆಸುವ ಬುದ್ದಿಯ ಕಾರ್ಯ, ಇನ್ನೂ ಕಷ್ಟತರವಾದದ್ದು. ಸುಲಭವೆಂದು ಬೆಟ್ಟವನ್ನು ಸುತ್ತುತ್ತಾರೆ ಲೋಕದ ಜನ. ಆದರೆ ಹತ್ತಿ ಸಾಧಿಸುವವನೇ ತಾಪಸಿ ಎಂದು ಭಕ್ತಿ ಮಾರ್ಗವನ್ನು ಮತ್ತು ಪರತತ್ವವನ್ನು ಅರಿಯುವ ಮಾರ್ಗವನ್ನು ವಿಶ್ಲೇಷಣೆ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಆಧ್ಯಾತ್ಮ ಸಾಧನೆ ಮಾರ್ಗದಲ್ಲಿ ಭಕ್ತಿ, ಭಜನೆ, ವಂದನೆ, ಆಲಯ ದರ್ಶನ, ತೀರ್ಥಕ್ಷೇತ್ರಗಳಿಗೆ ಹೋಗುವಿಕೆ, ವ್ರತ, ಹೋಮ, ಹವನ, ಧ್ಯಾನ, ಯೋಗ, ತಪಸ್ಸು ಎಲ್ಲವೂ ಬೇರೆ ಬೇರೆ ಹಂತಗಳು. ಕೆಲವು ಸುಲಭ ಮಾರ್ಗಗಳು, ಕೆಲವು ಕ್ಲಿಷ್ಟ ಮಾರ್ಗಗಳು. ಕೆಳಹಂತದಿಂದ ಮೇಲಿನ ಸ್ಥರಕ್ಕೆ ಹೋಗುವುದೇ ಆಧ್ಯಾತ್ಮ ಸಾಧನೆ. ಪ್ರಾಥಮಿಕ ಶಾಲೆಗೆ ಹೋದ ಮಕ್ಕಳು ಸ್ನಾತಕೋತ್ತರ ವಿದ್ಯಾಭ್ಯಾಸವನ್ನು ಮಾಡುವುದಿಲ್ಲವೇ, ಹಾಗೆ. ಆದರೆ ಪ್ರಾಥಮಿಕ ಶಾಲೆಗೆ ಸೇರಿದ ಎಷ್ಟು ಮಕ್ಕಳು ಸ್ನಾತಕೋತ್ತರ ಹಂತಕ್ಕೆ ತಲುಪುತ್ತಾರೆ ಎನ್ನುವುದು ಪ್ರಶ್ನೆ. ಭಕ್ತಿ ಎನ್ನುವುದು ನಂಬಿಕೆಯ ವಿಷಯ.

ಈ ಭಕ್ತಿಯ ವಿಷಯದಲ್ಲಿ ಮನುಷ್ಯನ ಮನಸ್ಸನ್ನು ಅರಿಯುವುದು ಬಹಳ ಕಷ್ಟ. ಒಂದು ದಿನವೂ, ದೇವಸ್ತಾನಕ್ಕೆ ಹೋಗದ, ಕೈ ಮುಗಿಯದ, ಯಾವ ವ್ರತ ನೇಮಗಳನ್ನೂ ಮಾಡದವನಿಗೆ ಭಕ್ತಿಯಿಲ್ಲವೆಂದಲ್ಲ. ಅಂತರಂಗವನ್ನು ಬಗೆದು ನೋಡಿದರೆ ಮಾತ್ರ ಅರ್ಥವಾಗುತ್ತದೆ, ಯಾರ ಭಕ್ತಿ ಎಷ್ಟು ಎಂದು. ಆದರೆ ಸಾಮಾನ್ಯವಾಗಿ ದೇವಸ್ತಾನಕ್ಕೆ ಹೋಗುವವರು, ಮನೆಯಲ್ಲಿ ಪೂಜೆ ಪುನಸ್ಕಾರಗಳನ್ನು ಆಚರಿಸುವವರ ಮನದಲ್ಲಿ ಕಿಂಚಿತ್ ಭಕ್ತಿ ಕೆಲಕಾಲಕ್ಕಾದರೂ ಇರುತ್ತದೆ. ಇದು ಸುಲಭದ ಮಾರ್ಗ, ಆದರೆ ಭಕ್ತಿಯ ಗುರಿಯಾದ ತತ್ವಶೋಧನೆಯ ಕೆಲಸ ಬಹಳ ಕಷ್ಟವಾದದ್ದು.

ಭಕ್ತಿಯ ಮಾರ್ಗ ಬಹಳ ಸುಲಭದ ಮಾರ್ಗ. ಲೌಕಿಕ ಜೀವನದಲ್ಲಿ ಮುಳುಗಿರುವವರಿಗೆ ಪಾರಮಾರ್ಥಕ್ಕೆ ಸಮಯ ಸಿಗುವುದಿಲ್ಲ. “ಹರಿದಾಡುವಂತಾ ಮನವ ನಿಲಿಸುವುದು ಬಲು ಕಷ್ಟ” ಎಂದು ಹರಿದಾಸರು ಹಾಡಿದ್ದಾರೆ. ಅಂತಹ ಮನಸ್ಸನ್ನು ಏಕಾಗ್ರತೆಯಿಂದ ನಿಲಿಸಿ ಜಗತೃಷ್ಟಿಗೆ ಕಾರಣ, ಕರಣ ಮತ್ತು ಕರ್ತೃವೂ ಆದ, ಆ ಪರ ತತ್ವವನ್ನು ಅರ್ಥಮಾಡಿಕೊಳ್ಳುವುದು ಬಹಳ ಕಷ್ಟದ ಮತ್ತು ಕಠಿಣ ಕೆಲಸ. ಮೊದಲಿನದು ಬೆಟ್ಟವನ್ನು ಸುತ್ತುವಂತಾ ಕೆಲಸವಾದರೆ

ಎರಡನೆಯದು ಬೆಟ್ಟವನ್ನು ಹತ್ತುವ ಕೆಲಸ. ಯಾರಿಗೆ ಯಾವುದು ಹಿತವೊ ಅದನ್ನು ಅವರವರು ಮಾಡುತ್ತಾರೆ. ಕಷ್ಟಪಟ್ಟರೆ ಬೆಟ್ಟ ಹತ್ತಬಹುದು. ಇಲ್ಲದಿದ್ದರೆ ಅದರ ತಳದಲ್ಲಿಯೇ ತೃಪ್ತಿಪಡಬಹುದು.





**ಮುಕ್ತಕ – 529**

**ಪರದೈವವನು ತೊರೆಯೆ ಗತಿ ನರನಿಗಿಲ್ಲ ದಿಟ ।**
**ನರನಿಲ್ಲದಿರೆ ದೇವನನು ಕೇಳ್ವರಾರು? ॥**
**ಪುರುಷತೆಯೆ ಸೇತುವೆ ಮೃಗತ್ವದಿಂ ದಿವ್ಯತೆಗೆ ।**
**ಮುರಿಯದಿರು ಸೇತುವೆಯ –ಮಂಕುತಿಮ್ಮ ॥**

ನರನಿಗಿಲ್ಲ = ನರನಿಗೆ +ಇಲ್ಲ, ನರನಿಲ್ಲದಿರೆ=ನರನು+ಇಲ್ಲದಿರೆ, ಕೇಳ್ವರಾರು=ಕೇಳ್ವರು +ಆರು, ಗತಿ=ದಾರಿ, ದಿಟ=ಸತ್ಯ

ದೇವರನ್ನು ಬಿಟ್ಟು ಮನುಷ್ಯನಿಗೆ ಬೇರೆ ಗತಿಯೇ ಇಲ್ಲ. ಮನುಷ್ಯನಿಲ್ಲದಿದ್ದರೆ ಆ ದೇವರನ್ನು ಕೇಳುವವರು ಯಾರು? ಜಗತ್ತನ್ನು ಸರ್ವರೀತಿಯಲ್ಲೂ ಆವರಿಸಿಕೊಂಡಿರುವ ಆ ಪರಮ ಶಕ್ತಿಯೇ ಪಶುತ್ವಕ್ಕೂ ದೈವತ್ವಕ್ಕೂ ನಡುವೆ ಇರುವ ಸೇತುವೆ. ಆ ಸೇತುವೆಯನ್ನು ಮುರಿಯದೆ ಇರು ಎಂದು, ಜಗತ್ತಿನಲ್ಲಿ ಮನುಷ್ಯನಿಗೂ ಮತ್ತು ಆ ದೇವರೆಂಬ ತತ್ವಕ್ಕೂ ಇರುವ ಸಂಬಂಧವನ್ನು ವಿವರಿಸುತ್ತಾ, ಈ ಸಂಬಂಧವನ್ನು ಮುರಿಯದಿರು ಎಂದು ಒಂದು ಆದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಭೂಮಿಯಮೇಲೆ ಪಶುವಿನಂತೆ ಅಲೆಮಾರಿಯಾಗಿದ್ದ ಮನುಷ್ಯನ ಅತ್ಯದ್ಭುತವಾದ ಆವಿಷ್ಕಾರ 'ದೇವರು' ಎಂಬ ತತ್ವ. ತನ್ನ ಮಿತಿಗಳನ್ನು ಅರಿತು ತನಗಿಂತ ಉನ್ನತ ಮತ್ತು ಅಮಿತ ಶಕ್ತಿಯ ಒಂದು ತತ್ವ ತನ್ನನ್ನು ಕಾಯುತ್ತದೆ, ತನ್ನ ಅವಶ್ಯಗಳನ್ನು ಪೂರೈಸುತ್ತದೆ, ತನ್ನ ಅಸ್ತಿತ್ವಕ್ಕೆ ಪೂರಕವಾಗಿದೆ ಎಂದು ಮನಗಂಡ ಮನುಷ್ಯ, ಆ ಶಕ್ತಿಗೆ 'ದೇವರು'

ಎಂದು ಕರೆದ. ನಮ್ಮ ಮನುಷ್ಯನ ಅವಶ್ಯಕತೆಗಳು ದಿನದಿಂದ ದಿನಕ್ಕೆ ಬೆಳೆಯುತ್ತಾ ಹೋದಂತೆ ಈ 'ದೇವರು' ಎಂಬ ತತ್ವಕ್ಕೆ ಇವನ ಅಂಟು ಮತ್ತು ನಂಟು ಹೆಚ್ಚಾಗುತ್ತಾ ಹೋಯಿತು. ಇವನ ವಿಚಾರ ಬೆಳೆದಂತೆಲ್ಲಾ 'ದೇವರು' ಎಂಬ ತತ್ವಕ್ಕೆ ಹೊಸ ಹೊಸ ಆಯಾಮಗಳು ಹುಟ್ಟಿಕೊಳ್ಳುತ್ತಾ ಹೋದವು ಮತ್ತು ಈ ಪ್ರಕ್ರಿಯೆ ಇಂದಿಗೂ ಮುಂದುವರೆಯುತ್ತಾ ಇದೆ. ಅಲೆಮಾರಿಯಾಗಿದ್ದ ಮನುಷ್ಯನ ಜೀವನವು ಈ 'ದೇವರು' ಎಂಬ ತತ್ವದಿಂದ ಬದಲಾಗುತ್ತಾ ಹೋಯಿತು. ಹೊಸ ಹೊಸ ವಿಚಾರಗಳಿಗನುಗುಣವಾಗಿ ಹೊಸ ಹೊಸ ಮತಗಳು, ಧರ್ಮಗಳು ಮತ್ತು ದೇವರುಗಳು ಹುಟ್ಟಿಕೊಳ್ಳತೊಡಗಿದವು. ಈ ಬದಲಾವಣೆಯಿಂದ ಮನುಷ್ಯನ ಸಂಸ್ಕೃತಿ, ಸಂಸ್ಕಾರಗಳು ವಿಕಾಸಗೊಳ್ಳತೊಡಗಿದವು. ಮನುಷ್ಯ ಮತ್ತು ದೇವರಿಬ್ಬರ ಮಧ್ಯೆ ಒಂದು ಅವಿನಾಭಾವ ಸಂಬಂಧ ಸ್ಥಿರವಾಯಿತು. ಮಾನ್ಯ ಗುಂಡಪ್ಪನವರು ಹೇಳುವಂತೆ ಅವನಿಲ್ಲದೆ ಇವನಿಲ್ಲ ಮತ್ತು ಇವನಿಲ್ಲದೆ ಅವನಿಲ್ಲ ಎಂಬ ಹಂತಕ್ಕೆ ಬಂದು ತಲುಪಿತು.

ಮನುಷ್ಯನ ಅಪೇಕ್ಷೆ ಆಕಾಂಕ್ಷೆಗಳಿಗೆ ಮಿತಿಯೇ ಇಲ್ಲ. ತನಗೆ ಯಾವುದು ಸಿಗುವುದೋ ಯಾವುದು ಸಿಗುವುದಿಲ್ಲವೋ ಇವನಿಗೆ ಗೊತ್ತಾಗುವುದೇ ಇಲ್ಲ. ಹಾಗಾಗಿ ಇವನಿಗೆ ಭಯ ಇರುತ್ತದೆ. ಮನುಷ್ಯನ ಎಲ್ಲಾ ಭಯಗಳನ್ನೂ ಎರಡು ಗುಂಪಿಗೆ ಹಾಕಿಬಿಡಬಹುದು. ಒಂದು "ತನ್ನಲ್ಲಿರುವುದು ಕಳೆದುಹೋಗುವ ಭಯ" ಎರಡು "ತಾನು ಬಯಸಿದ್ದು ಸಿಗದೇ ಹೋಗುವ ಭಯ" ಈ ಎರಡು ಭಯಗಳ ಕಾರಣದಿಂದಾಗಿಯೇ ಇವನಿಗೆ ದೇವರು ಬೇಕು. ಭಯವಿಲ್ಲದ ಸ್ಥಿತಿಗೆ ತಲುಪಿದರೆ ಇವನಿಗೆ ದೇವರು ಬೇಕಾಗುವುದಿಲ್ಲ. ಆದರೆ ಭಯ ಹೋಗುವುದಿಲ್ಲವಲ್ಲ! ಈ ದೇವರು ಎಂಬುದು ಹಸೀ ಗಾಯದ ಮೇಲೆ ಹಾಕಿದ ಬ್ಯಾಂಡೇಜ್

ತರಹ, ಗಾಯ ಮಾಗದೆ ಅದನ್ನು ತೆಗೆಯಲು ಆಗುವುದಿಲ್ಲ. ತೆಗೆದರೆ ಮತ್ತೆ ಹುಣ್ಣು ಪ್ರಣವಾಗುತ್ತದೆ.ಗಾಯ ಮಾಗಿದರೆ ಬ್ಯಾಂಡೇಜ್ ತಾನೇ ತಾನಾಗಿ ಕಳಚಿಕೊಳ್ಳುತ್ತದೆ. ನಮಗಿರುವುದು 'ಭಯ'ವೆಂಬ ಗಾಯ ಮತ್ತು ಅದರ ಮೇಲಂಟಿಸಿರುವುದು 'ದೇವರು' ಎಂಬ ಬ್ಯಾಂಡೇಜ್, ನಮಗೆ ಭಯ ಹೋಗುವುದಿಲ್ಲ ಮತ್ತು ನಾವು ದೇವರನ್ನು ಬಿಡಲೂ ಸಾಧ್ಯವಿಲ್ಲ.

ಆದರೆ ಈ ದೇವರು ಎಂಬ ತತ್ವ ನಮಗೆ ಬೇಕೇ? ಎಂದು ಆಲೋಚಿಸಿದರೆ, "ಖಂಡಿತ ಬೇಕು" ಎನ್ನುವ ಉತ್ತರ ಸಿಗುತ್ತದೆ. ಏಕೆಂದರೆ ಈ ತತ್ವದ ಆಧಾರದ ಮೇಲೆಯೇ ಜಗತ್ತಿನ ನಾಗರೀಕತೆ ಬೆಳೆದು ನಿಂತಿದೆ. ಒಂದು ವ್ಯವಸ್ಥಿತ ಸಮಾಜದ ನಿರ್ಮಾಣಕ್ಕೆ ಈ ತತ್ವ ಬಹಳ ಉಪಕಾರಿಯಾಗಿದೆ. ಹಲವಾರು ಅಚಾರಗಳು, ಆಚರಣೆಗಳು, ಸಂಪ್ರದಾಯಗಳು ಬೆಳೆದು ಬಂದಿವೆ. ಈ ಸೃಷ್ಟಿಗೆ ಕಾರಣವಾದ ಪರತತ್ವವನ್ನು ಅರಿಯುವ ಹಾದಿಯಲ್ಲಿ ಇವೆಲ್ಲ ಪೂರಕವಾಗಿವೆ. ಹಾಗಾಗಿಯೇ ಮಾನ್ಯ ಗುಂಡಪ್ಪನವರು 'ಪುರುಷತೆಯ ಸೇತುವೆ ಮೃಗತ್ವದಿಂ ದಿವ್ಯತೆಗೆ ಎಂದು ಹೇಳಿದರು. ಪರಮಾತ್ಮ ತತ್ವವನ್ನು ಅರಿಯಲು ನಮಗೆ ಈ 'ದೇವರು' ಎಂಬುದು ಸೇತುವೆ ಇದ್ದ ಹಾಗೆ. ಇದನ್ನು ಬಿಟ್ಟರೆ ನಮ್ಮ ಬದುಕುಗಳಲ್ಲಿ ಒಂದು 'ಶೂನ್ಯ'ತೆ (vacuum) ಉಂಟಾಗುತ್ತದೆ. ಅಲ್ಲಿ ಬದುಕು ತೀರ ಅಸಹನೀಯವಾಗುತ್ತದೆ. ಹಾಗಾಗಿ ನಮಗೆ ದೇವರು ಬೇಕು ಮತ್ತು ಆ ದೇವರಿಗೆ ನಾವು ಬೇಕು, ನಾವು ಈ ದೇವರ ಮೂಲಕ, ಅವನಿಗೆ ಸಲ್ಲಿಸುವ ಪೂಜೆ ಪುನಸ್ಕಾರಗಳ ಮೂಲಕ, ನಾವು ಮಾಡುವ ವ್ರತ, ಧ್ಯಾನ, ವಿಧಿ, ಮುಂತಾದವುಗಳ ಮೂಲಕವೇ ಆ ಪರತತ್ವವನ್ನು ಅರಿತುಕೊಳ್ಳಲು ಸಾಧ್ಯ. ಹಾಗಾಗಿ ದೇವರಲ್ಲಿ ನಂಬಿಕೆ ಇರಬೇಕು. ಆದರೆ ಅಲ್ಲಿಯೇ ನಿಲ್ಲದೆ ಮುಂದೆ ಹೆಜ್ಜೆ ಇಡುತ್ತಾ ಅಂತಿಮವಾದ ಆ ಪರತತ್ವವನ್ನು ಅರಿತುಕೊಳ್ಳುವ ಪ್ರಯತ್ನಪಡಬೇಕು.

**ಮುಕ್ತಕ – 530**

**ನಿನ್ನ ಕಣ್ ಕಿವಿ ಮನಗಳರಿವಷ್ಟು ನಿನ್ನ ಜಗ।**
**ನಿನ್ನಳಿಸುವ ನಗಿಸುವೆಲ್ಲ ನಿನ್ನಂಶ॥**
**ಉನ್ನತಿಗೆ ನೀನೇರಿದಂತೆ ಜಗ ವಿಸ್ತರಿಸಿ।**
**ಸಣ್ಣತನ ಸವೆಯುವುದು - ಮಂಕುತಿಮ್ಮ॥**

ಮನಗಳರಿವಷ್ಟು=ಮನಗಳು+ಅರಿವಷ್ಟು, ನಿನ್ನಳಿಸುವ = ನಿನ್ನ+ಅಳಿಸುವ, ನಗಿಸುವೆಲ್ಲ=ನಗಿಸುವ +ಎಲ್ಲ, ನಿನ್ನಂಶ=ನಿನ್ನ+ಅಂಶ, ನೀನೇರಿದಂತೆ=ನೀನು+ಏರಿದಂತೆ,

ಉನ್ನತಿ=ಉತ್ತರೋತ್ತರ ಬೆಳವಣಿಗೆ,

ನೀನು ಕಾಣುವಷ್ಟು, ನೀನು ಕೇಳುವಷ್ಟು, ಮತ್ತು ನಿನ್ನ ಮನಸ್ಸು, ಎಷ್ಟನ್ನು ಊಹಿಸಬಹುದೋ ಅಷ್ಟು ನಿನ್ನ ಜಗತ್ತಾಗುತ್ತದೆ. ನಿನ್ನನ್ನು ಕಣ್ಣೀರಿಡಿಸುವ ಮತ್ತು ನಗಿಸುವ ಎಲ್ಲ ಅಂಶಗಳೂ ನಿನ್ನವೇ ಆಗಿರುತ್ತದೆ. ಅವುಗಳನ್ನು ಮೀರಿ ನೀನು ಬೆಳೆದರೆ ನಿನ್ನ ಜಗತ್ತು ವಿಶಾಲವಾಗಿ ನಿನ್ನಲ್ಲಿ ಸಣ್ಣತನ ಸವೆದು ನೀನೂ ಸಹ ಬೆಳೆಯುತ್ತೀಯೆ ಎಂದು ಉಲ್ಲೇಖ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.





ನಮಗೆ ಎಷ್ಟು 'ಗೊತ್ತು' ಅಂದರೆ, ನಾವು ಎಷ್ಟು ದೂರ ನೋಡಬಹುದೋ ಅಥವಾ ಎಷ್ಟು ದೂರದ ಶಬ್ದ ಕೇಳಬಹುದೋ ಅಥವಾ ನಮ್ಮ ಮನಸ್ಸು ಎಷ್ಟು ದೂರ ತೀಕ್ಷ್ಣವಾಗಿ ಯೋಚಿಸಬಲ್ಲದೋ ಅಷ್ಟು. ನಮ್ಮ ಅರಿವಿಗೆ, ಕಾಣುವ, ಕೇಳುವ ಮತ್ತು ಯೋಚಿಸುವ ಕ್ಷಮತೆಯ ಮಿತಿಯುಂಟು. ನಮ್ಮ ಅನುಭವಕ್ಕೆ ಬರುವುದೆಲ್ಲವೂ ನಮ್ಮ ನೋಟದ, ಕೇಳಿಕೆಯ ಮತ್ತು ಆಲೋಚನೆಯ ಪರಿಧಿಯಲ್ಲೇ ಇರುತ್ತದೆ. ಅಷ್ಟೇ ನಮ್ಮ ಪ್ರಪಂಚ. ನಮ್ಮ ನೋವು ನಲಿವುಗಳೆಲ್ಲವೂ ಆ ಅನುಭವಗಳಿಂದಲೇ ಆಗುತ್ತದೆ, ಹಾಗಾಗಿ ನಮ್ಮ ನಗು, ಅಳು, ಆನಂದ, ಸಂತೋಷ ಇವುಗಳೆಲ್ಲಕ್ಕೂ ನಮ್ಮ ಅಂತರಂಗದ ಭಾವಗಳೇ ಕಾರಣ.

“ಉನ್ನತಿಗೆ ನೀನೇರಿದಂತೆ ಜಗ ವಿಸ್ತರಿಸಿ ಸಣ್ಣತನ ಸವೆಯುವುದು' ಎಂದು ಮಾನ್ಯ ಗುಂಡಪ್ಪನವರು ಹೇಳುವಂತೆ, ನಾವು ಬೆಳೆದರೆ ನಮ್ಮ ಜಗತ್ತೂ ಬೆಳೆದು ವಿಸ್ತಾರವಾಗುತ್ತದೆ. ಆ ದಿಕ್ಕಿನಲ್ಲಿ ನಮ್ಮ ಪ್ರಯಾಣಕ್ಕೆ ನಮ್ಮ ಪೂರ್ವಜರು ಬಹಳ ಒಳ್ಳೆಯ ಮಾರ್ಗಗಳನ್ನು ಸೂಚಿಸಿದ್ದಾರೆ. “ಭದ್ರಂ ಕರ್ಣೇಭಿಃ ಶ್ರುಣುಯಾಮ ದೇವಾಃ, ಭದ್ರಂ ಪಶ್ಯಮಾಕ್ಷಿಭಿರ್ಯಜತ್ರಾಃ, ಸ್ಥಿರೈರಂಗೈಃಸ್ತುಷ್ಟುವಾಗುಂ ಸಸ್ತನೂಭಿ: ವ್ಯಶೇಮ ದೇವಹಿತಂ ಯದಾಯು:” ನಮ್ಮ ಕಣ್ಣುಗಳು ಒಳ್ಳೆಯದನ್ನೇ ನೋಡಲಿ, ನಮ್ಮ ಕಿವಿಗಳು ಒಳ್ಳೆಯದನ್ನೇ ಕೇಳಲಿ, ನಮ್ಮ ಅಂಗಾಂಗಗಳು ಸ್ಥಿರವಾಗಿರಲಿ

ಮತ್ತು ನಮ್ಮ ಆಯಸ್ಸನ್ನು ದೇವಹಿತಕ್ಕಾಗಿಯೇ ಉಪಯೋಗಿಸೋಣ ಎನ್ನುವ ಉದಾತ್ತ ಆಶಯಗಳನ್ನು ಅನುಸರಿಸಲು ನಮಗೆ 'ಸನಾತನ' ಹೇಳಿಕೊಡುತ್ತದೆ.

ಇದನ್ನು ನಾವು ಪಾಲಿಸಿದಾಗ ಅಪ್ರಯತ್ನಪೂರ್ವಕವಾಗಿಯೇ ನಮ್ಮ ಮನಸ್ಸು ಬುದ್ಧಿಗಳು ಶುದ್ಧವಾಗುತ್ತಾ ಹೋಗುತ್ತವೆ, ಮತ್ತು ಮಾನ್ಯ ಗುಂಡಪ್ಪನವರು ಹೇಳುವಂತೆ ನಮ್ಮಲ್ಲಿ ಸಣ್ಣತನ ತೊಲಗಿ ಉದ್ದಾತ್ತವಾದಂತ ಭಾವಗಳು ಮೂಡುತ್ತವೆ. ಸಂಕುಚಿತತೆಯನ್ನು ಬಿಟ್ಟು ವಿಶಾಲತೆಯೇ ನಮ್ಮ ಸ್ವಭಾವವಾದಾಗ, ಇಡೀ ಜಗತ್ತೇ ಒಂದು ಕುಟುಂಬವೆನ್ನುವ ತತ್ವ ಸ್ಥಿರವಾಗುತ್ತದೆ. ಅಂತಹ ಸ್ಥಿತಿಯಲ್ಲಿ ಆನಂದ ಸುಖ ಸಂತೋಷಗಳು ಅನಾಯಾಸವಾಗಿ ನಮ್ಮದಾಗುತ್ತವೆ.

**ಮುಕ್ತಕ - 531**

**ಶಶ್ವದ್ವಿಕಾಸನ ಹ್ರಾಸನ ಕ್ರಮಗಳಿಂ ।**
**ವಿಶ್ವದಲಿ ನರ್ತಿಸುತೆ ಪೌರುಷೋನ್ನತಿಯೊಳ್ ॥**
**ಸ್ವಸ್ವರೂಪವನರಸುವಾಟ ಪರಚೇತನದ ।**
**ಹೃಷ್ಯದ್ವಿಲಾಸವೆಲೊ – ಮಂಕುತಿಮ್ಮ ॥**

ಶಶ್ವದ್ವಿಕಾಸನ=ಶಶ್ವತ್+ವಿಕಾಸನ, ಪೌರುಷೋನ್ನತಿಯೊಳ್=ಪೌರುಷ+ಉನ್ನತಿಯೊಳ್,
ಸ್ವಸ್ವರೂಪವನರಸುವಾಟ=ಸ್ವ+ಸ್ವರೂಪವನ್ನು+ಅರಸುವ +ಆಟ, ಹೃಷ್ಯದ್ವಿಲಾಸವೆ=ಹೃಷ್ಯದ್+ವಿಲಾಸವೋ
ಶಶ್ವತ್=ಶಾಶ್ವತ, ಪೌರುಷ=ಶಕ್ತಿ, ಉನ್ನತಿಯೊಳ್=ಉನ್ನತಿಯಲ್ಲಿ, ಹೃಷ್ಯದ್=ಹರ್ಷದ, ಆನಂದದ,

ಶಾಶ್ವತವಾದ ಆ ಪರಮ ಪೌರುಷ(ಶಕ್ತಿ)ವೊಂದು ವಿಕಸನ ಮತ್ತು ಹಾಸನ ಕ್ರಮಗಳಿಂದ ತನ್ನನ್ನೇ ತಾನು ಹುಡುಕುವ ಆಟವನ್ನು ಆಡುತ್ತಾ ಜಗನ್ನಾಟಕದಲ್ಲಿ ಹರ್ಷ ಮತ್ತು ವಿಲಾಸದಿಂದ ಮಗ್ನವಾಗಿದೆ, ಎನ್ನುವ ತತ್ವವನ್ನು ಈ ಮುಕ್ತಕದಲ್ಲಿ ನಮಗೆ ಅರುಹಿದ್ದಾರೆ ಮಾನ್ಯ ಗುಂಡಪ್ಪನವರು.

ಈ ಜಗತ್ತಿನಲ್ಲಿ ಇರುವುದೇ ಎರಡು. ಒಂದು ಜೀವ. ಮತ್ತೊಂದು ಜಡ, ಜೀವವನ್ನು ಚೇತನವೆಂದೂ ಕರೆಯುತ್ತಾರೆ. ಆ ಮಹಾ ಪರಮಚೇತನವು ತನ್ನ ಇಚ್ಚೆಯಿಂದಲೇ ಕೋಟಿ ಕೋಟಿ ರೂಪದಲಿ ಪ್ರಕಟಗೊಂಡಿದೆ ಎನ್ನುವುದನ್ನು ಮಾನ್ಯ ಗುಂಡಪ್ಪನವರು ಮುಕ್ತಕ 74 ರಲ್ಲಿ “ಸುಮ್ಮನೊಬ್ಬಂಟಿಯೆಂತಿಹುದು? ಬೇಸರವಹುದು ಹೊಮ್ಮುವೆನು ಕೋಟಿ ರೂಪದಲಿ ನಾನೆಂದು ಬೊಮ್ಮನೆಳಸಿದನಂತೆ” ಎಂದು ಹೇಳುತ್ತಾರೆ. ತೈತ್ತರೀಯ ಉಪನಿಷತ್ತಿನ 'ಬ್ರಹ್ಮಾನಂದವಲ್ಲಿ' ಯ ಆರನೇ ಅನುವಾಕವು 'ಬಹುಸ್ಯಾಂ ಪ್ರಜಾಯೇಯೇತಿ 'ಎಂದು, ಆ ಪರಮಾತ್ಮನು 'ನಾನು ಬಹಳವಾಗುತ್ತೇನೆ' ಎಂದು ಸಂಕಲ್ಪಿಸಿ, ತಪಸ್ಸಿನ ಮೂಲಕ ಇಡೀ ಜಗತ್ತನ್ನು ಮತ್ತು ಇಲ್ಲಿರುವ ಪ್ರತಿಯೊಂದು ವೈವಿಧ್ಯತೆಯನ್ನು ತನ್ನಿಂದಲೇ ಸೃಷ್ಟಿಸಿ, ತಾನೂ ಅದರಲ್ಲಿ ಸೇರಿದನೆಂದು ಹೇಳುತ್ತದೆ. ಒಂದು ಪರಮ ಚೇತನ ಮತ್ತು ಒಂದು ಬೃಹತ್ ಗೋಳ, ಆ ಚೇತನದ ಶಕ್ತಿಯಿಂದಲೇ ಈ ಗೋಳವು ಸಿಡಿದು ಕೋಟ್ಯಾಂತರ ರೂಪಗಳಾಗಿದೆ ಎನ್ನುವುದನ್ನು ವೇದವು ಹೇಳುತ್ತದೆ ಮತ್ತು ಆಧುನಿಕ ವಿಜ್ಞಾನಿಗಳೂ ಸಹ 'ಬಿಗ್ ಬ್ಯಾಂಗ್ ಥಿಯರಿ' ಎನ್ನುವ ಪರಿಭಾಷೆಯಲ್ಲಿ ಇದನ್ನೇ ಹೇಳುತ್ತಾರೆ. ಆದ್ದರಿಂದ ಒಂದು ಕಡೆ ಪರಮ ಚೇತನವು ತನ್ನದೇ 'ವಿಕಸನದ ಕ್ರಮದಿಂದ ಹಲವಾಗಿದೆ, ಎಂದರೆ ವಿಕಸನವಾಗಿದೆ ಎನ್ನುವುದು ಪ್ರಮಾಣಿತ ಸತ್ಯ.

ಈ ವಿಕಸನದ ಪ್ರಕ್ರಿಯೆಯಲ್ಲಿ ಆ ಚೇತನವು ಕೋಟ್ಯಾಂತರ ರೂಪಗಳನ್ನು ಧರಿಸಿಕೊಂಡಿದೆ. ಯಾವ ರೂಪವೂ ಶಾಶ್ವತವಲ್ಲ. ಕಾಲಕ್ರಮದಲ್ಲಿ ರೂಪಬದಲಾವಣೆಯಾಗುತ್ತಲೇ ಇರುತ್ತದೆ. ಈ ರೂಪ ಬದಲಾವಣೆಯನ್ನು ನಾವು ಪ್ರಾಕೃತ ಭಾವದಿಂದ 'ಹುಟ್ಟು ಮತ್ತು ಸಾವು' ಎನ್ನುತ್ತೇವೆ. ಇದೇ ವಿಕಸನ ಮತ್ತು ಹಾಸನ ಪ್ರಕ್ರಿಯೆ. ಒಂದು ರೂಪವನ್ನು ಧರಿಸಿದ ಚೇತನವು ಆ ರೂಪದ ವಿಕಸನದ, ಎಂದರೆ ಬದಲಾವಣೆಗೆ ಕಾರಣವಾಗುತ್ತದೆ ಮತ್ತು ಆ ರೂಪದಲ್ಲಿ ಈ ಜಗತ್ತಿನಲ್ಲಿ ಆ ರೂಪದ ಸ್ವಭಾವಕ್ಕನುಗುಣವಾಗಿ ಅನುಭವಿಸುತ್ತಾ ಹೋಗುತ್ತದೆ. ಈ ಅನುಭವಗಳಿಂದ ರೂಪ ಕ್ಷೀಣಿಸುತ್ತದೆ, ಕಾಲಕ್ರಮದಲ್ಲಿ ಕ್ಷೀಣಿಸಿದ(ಹ್ರಾಸಿತ) ರೂಪವನ್ನು ತೊರೆದು ಚೇತನವು ಮತ್ತೊಂದು ರೂಪವನ್ನು ಧರಿಸುತ್ತದೆ. ಚೇತನವು ಒಂದು ರೂಪದಿಂದ ಮತ್ತೊಂದು ರೂಪಕ್ಕೆ ಹೋಗುವುದೇ ವಿಕಸನ ಮತ್ತು ಆ ರೂಪವನ್ನು

ತೊರೆಯುವುದೇ ಹಾಸನ. ಹೀಗೆ ಭಿನ್ನ ಭಿನ್ನವಾದ ರೂಪಗಳನ್ನು ಧರಿಸುವ ಚೇತನವನ್ನು ನಾವು ಆತ್ಮ ಎಂದು ಕರೆಯುತ್ತೇವೆ.

ಈ ಆತ್ಮದ ಮೂಲವೇ ಆ ಪರಮ ಚೇತನ ಅಥವಾ ಪರಮ ಆತ್ಮ. ಈ ಆತ್ಮವು ಹಲವಾರು ರೂಪಗಳನ್ನು ಧರಿಸಿ, ಪ್ರತೀ ರೂಪದಲ್ಲಿ ಈ ಜಗತ್ತಿನ ಅನುಭವಗಳನ್ನು ಪಡೆದು, ತನ್ನ ಮೂಲವನ್ನು ಅರಿತುಕೊಳ್ಳುವ ಮತ್ತು ತನ್ನ ಮೂಲವನ್ನು ಸೇರುವ ವಿಲಾಸವೇ ಈ ಜಗದ್ವ್ಯಾಪಾರ, ಸೂರ್ಯನ ಶಾಖಕ್ಕೆ ಕಡಲ ನೀರು ಆವಿಯಾಗಿ, ಮೋಡವಾಗಿ, ಮಳೆಯಾಗಿ, ತೊರೆ, ಕುಂಟೆ, ಕೊಳ ಮತ್ತು ನದಿಯಾಗಿ ತನ್ನ ಸ್ವಸ್ಥಾನವಾದ ಕಡಲನ್ನು ಸೇರಲು ಹಾತೊರೆಯುವಂತೆ, ಪ್ರತೀ ಆತ್ಮವೂ ತನ್ನ ಮೂಲವನ್ನು ಅರಿಯುವ ಪ್ರಯತ್ನವೇ,





ಮಾನ್ಯ ಗುಂಡಪ್ಪನವರು ಹೇಳುವ 'ಪರಚೇತನದ ಹೃಷ್ಯದ್ವಿಲಾಸ '. 'ನಾವು' ಎಂದುಕೊಂಡಿರುವ ನಾವೆಲ್ಲಾ ಬೇರೆ ಬೇರೆ ರೂಪಗಳನ್ನು ಹೊದ್ದಿರುವ ಆ ಪರಮ ಚೇತನದ ಒಂದು ಅಂಶವಷ್ಟೇ.

ಆ ಜಗನ್ನಾಟಕ ಸೂತ್ರಧಾರಿಯ ಕೈ ಗೊಂಬೆಗಳಾದ ನಾವು ಪ್ರಾಕೃತಭಾವದಿಂದ, ಈ ಜಗತ್ತಿಗೆ ಅಂಟಿಕೊಂಡು 'ನಾನತ್ವ'ವನ್ನು ಬೆಳೆಸಿಕೊಂಡಿರುವಷ್ಟು ದಿನ ಈ 'ವಿಕಸನ-ಹ್ರಾಸನ' ವೃತ್ತದಲ್ಲೇ ಇರುತ್ತೇವೆ. ಸ್ವರೂಪದ ಅರಿವಾದಮೇಲೆ, ಮಳೆಯ ಹನಿ ಕಡಲ ಸೇರುವಂತೆ ಬೃಹಚ್ಚೇತನದಲ್ಲಿ ಲೀನವಾಗುತ್ತೇವೆ. ಅಹಾ! ಈ ಜಗತ್ತು ಎಷ್ಟು ಸುಂದರ ಇದನ್ನು ತೊರೆದು ಅರಿಯದ ಮತ್ತೊಂದು ಲೋಕಕ್ಕೆ ಹೋಗುವುದು ಯಾವ ಪ್ರಯೋಜನಕ್ಕೆ ಎಂದು ವಾದ ಮಾಡುವವರೂ ಇದ್ದಾರೆ. ಆದರೆ ಇಲ್ಲಿ 'ನಾವು' ಅನುಭವಿಸುತ್ತಿದ್ದೇವೆ ಎನ್ನುವುದೇ ಪ್ರಾಕೃತ ಭಾವ. ವ್ಯಕ್ತಿಗತ ಸಂಸ್ಕೃತಿಯ ಔನ್ನತ್ಯದಲ್ಲಿ 'ನಾನಲ್ಲ' ಎಲ್ಲವೂ ಆ ಪರಮ ಚೇತನವೇ ಎಂಬ ಭಾವ ಸ್ಥಿರವಾಗಬೇಕು. ಅದೇ ಸ್ವರೂಪದ ಅರಿವು. ಆದೇ ಸಾರ್ಥಕತೆ,

ಮುಕ್ತಕ - 532

ಕಟ್ಟಡದ ಪರಿಯನಿಟ್ಟಿಗೆಯಂತು ಕಂಡೀತು? ।
ಗಟ್ಟಿ ನಿಲದದು ಬೀಳೆ ಗೋಡೆ ಬಿರಿಯುವುದು ॥
ಸೃಷ್ಟಿಕೋಟೆಯಲಿ ನೀನೊಂದಿಟಿಕೆ; ಸೊಟ್ಟಾಗೆ ।
ಪೆಟ್ಟು ತಿನ್ನುವೆ ಜೋಕೆ - ಮಂಕುತಿಮ್ಮ ॥

ಪರಿಯನಿಟ್ಟಿಗೆಯಂತು=ಪರಿಯನು+ಇಟ್ಟಿಗೆ+ಎಂತು,ನಿಲದದು=ನಿಲದು+ಅದು,ನೀನೊಂದಿಟಿಕೆ=ನೀನೊಂದು+ಇಟಿಕೆ,
ಸೊಟ್ಟಾಗೆ=ಸೊಟ್ಟ+ಆಗೆ,
ಇಟ್ಟಿಗೆ=ಇಟ್ಟಿಗೆ

ಇಟ್ಟಿಗೆಗಳಿಂದ ಕಟ್ಟಲ್ಪಡುವುದು ಕಟ್ಟಡ, ಆದರೆ ಆ ಕಟ್ಟಡ ಹೇಗಿರುವುದೆಂದು ಆ ಇಟ್ಟಿಗೆ ಅರಿಯಲು ಸಾಧ್ಯವಿಲ್ಲ. ಆ ಇಟ್ಟಿಗೆ ಗಟ್ಟಿಯಾಗಿ ನಿಲ್ಲದೆ ಇದ್ದರೆ ಅದರಿಂದ ಕಟ್ಟಿದ ಗೋಡೆ ಬಿರುಕುಬಿಡುವುದು. ಹಾಗೆಯೇ ಈ ಜಗತ್ತಿನ ಕಟ್ಟಡದಲ್ಲಿ ನಾವೂ ಒಂದು ಇಟ್ಟಿಗೆ ಮಾತ್ರ ನಾವು ಸ್ಥಿರವಾಗಿರದಿದ್ದರೆ, ಪೆಟ್ಟು ತಿಂದು ಸರಿಯಾಗಬೇಕಾಗುವುದು, 'ಜೋಕೆ' ಎಂದು ಒಂದು ಎಚ್ಚರಿಕೆಯನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಪರಮಾತ್ಮನ ಸೃಷ್ಟಿಯಲ್ಲಿ ಎಲ್ಲವೂ ಸಮರ್ಪಕವಾಗೇ ಇದೆ. ಎಲ್ಲೂ ನಮಗೆ ಕೊರತೆಗಳು ಕಾಣುವುದಿಲ್ಲ. ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳಿಂದ ನಮ್ಮ ಅರಿವಿಗೆ ಬರುವ ಪ್ರತಿಯೊಂದು ವಸ್ತುವೂ ಸಮರ್ಪಕವಾಗೇ ಸೃಷ್ಟಿಸಲ್ಪಟ್ಟಿದೆ. ಹಾಗೆ ಸೃಷ್ಟಿಸಲ್ಪಟ್ಟ ಜಗತ್ತಿನ ಕೋಟ್ಯಾಂತರ ವಸ್ತುಗಳಲ್ಲಿ ಮನುಷ್ಯನೂ ಒಂದು ಸಮಗ್ರವಾಗಿ ಆ ಪರಮ ಚೇತನವು ತನ್ನ ಸಂಕಲ್ಪದಿಂದ ಈ ಜಗತ್ತನ್ನು ತನ್ನ ಸಂತೋಷಕ್ಕಾಗಿಯೇ ಸೃಷ್ಟಿಸಿಕೊಂಡಿದೆ.

ಇದರೊಳಗೆ ನಮ್ಮ ಪ್ರಮೆಯವೇನೂ ಇಲ್ಲ. ತಾನು ಸೃಷ್ಟಿಸಿದ ಮನೆಯಲ್ಲಿ ಯಾವುದು ಹೇಗಿರಬೇಕು, ಎಲ್ಲಿರಬೇಕು, ಎಷ್ಟಿರಬೇಕು ಎಂದು ನಿರ್ಧರಿಸುವುದೇ ಆ ಪರಮಚೇತನ. ಸೃಷ್ಟಿಯ ಒಂದು ಸಣ್ಣ ಅಂಶವಾದ ನಮಗೆ ಸೃಷ್ಟಿಯ ಸಮಗ್ರ ರಹಸ್ಯವನ್ನು ಅರ್ಥಮಾಡಿಕೊಳ್ಳುವುದು ಅಸಾಧ್ಯವಾದರೂ, ಸೃಷ್ಟಿಕರ್ತ ತಾ ಸೃಷ್ಟಿಸಿದ ಪ್ರತಿಯೊಂದಕ್ಕೂ ಒಂದು 'ಧರ್ಮ'ವನ್ನಿಟ್ಟೇ ಸೃಷ್ಟಿಸಿದ್ದಾನೆ ಎಂದು ಅರಿಯಬೇಕು. ಮನುಷ್ಯರಾದ ನಮಗೂ ಸಹ ಒಂದು 'ಧರ್ಮ'ವಿದೆ. ಅದಕ್ಕೆಚ್ಯುತಿ ಬಾರದಂತೆ ಬದುಕುವುದೇ ನಮ್ಮ ಕರ್ತವ್ಯ.

ಈ ಜಗತ್ಸೌಧದಲ್ಲಿನ ವ್ಯವಸ್ಥೆಯ ಗೋಡೆಯೊಳಗೆ ನಾವೊಂದು ಇಟ್ಟಿಗೆ, ಈ ಗೋಡೆಯಲ್ಲಿ ನಾವು ಗಟ್ಟಿಯಾಗಿ ನಿಲ್ಲಬೇಕಾದರೆ ಧರ್ಮವನ್ನು ಪಾಲಿಸಬೇಕು. ನಮ್ಮ ಬುದ್ಧಿ ಸೊಟ್ಟಗಾಗಿ, ಅಹಂಕಾರದಿಂದ ನಾವು ಸೊಟ್ಟಗಾದರೆ, ಈ ಜಗತ್ತಿನ ವ್ಯವಸ್ಥೆ ಸೊಟ್ಟಗಾಗುತ್ತದೆ. ಹಾಗಾದರೆ, ಅದಕ್ಕೆ ಕಾರಣರಾದ ನಮಗೆ ಪೆಟ್ಟು ಬೀಳುತ್ತದೆ. ಇದನ್ನೇ ಮಾನ್ಯ ಗುಂಡಪ್ಪನವರು 'ಪೆಟ್ಟು ತಿನ್ನುವೆ. ಜೋಕೆ' ಎಂದು ನಮ್ಮನ್ನು ಎಚ್ಚರಿಸಿದ್ದಾರೆ. ಸೃಷ್ಟಿಕರ್ತನು ನಮಗೊಂದು ಧರ್ಮವನ್ನು ವಿಧಿಸಿದ್ದಾನೆ. ಅದನ್ನು ಅರಿತೂ ಸಹ ಸ್ವಾರ್ಥ ಮತ್ತು ಅಹಂಕಾರದಿಂದ ವರ್ತಿಸಿದರೆ ನಾವು ಪಡುವ ಅವಸ್ಥೆ, ನೋವು ಮತ್ತು ಸಂಕಟವೆಲ್ಲಾ ಆ ವಿಧಿ ನಮಗೆ ನೀಡುವ ಶಿಕ್ಷೆಯೆಂದೇ ಭಾವಿಸಬೇಕು.

ಇಂದು ಜಗತ್ತಿನಲ್ಲಿ ನಡೆದಿರುವುದೇ ಅದು. ಮನಸ್ಸು ಬುದ್ಧಿಗಳು ತಲೆಕೆಳಗಾಗಿವೆ. ಬಹುತೇಕಮಂದಿಗೆ ಈ ಜಗತ್ತಿನ ವ್ಯವಸ್ಥೆಯ ಕಲ್ಪನೆಯೇ ಇಲ್ಲ. ಅರಿತವರೂ ಅರಿಯದವರಂತೆ ವರ್ತಿಸುತ್ತಾ ಸೃಷ್ಟಿಯ ಎಲ್ಲ ನಿಯಮಗಳನ್ನೂ ಗಾಳಿಗೆ ತೂರಿಬಿಟ್ಟು, ಮನಸೋ ಇಚ್ಛೆ ವರ್ತಿಸುತ್ತಿದ್ದಾರೆ. ಮಾನವತೆ, ದಯೆ, ಕರುಣೆ, ಪ್ರೀತಿ, ವಾತ್ಸಲ್ಯ, ತ್ಯಾಗದಂತಹ ಗುಣಗಳನ್ನು, ಅಹಂಕಾರ, ದ್ವೇಷ, ಸ್ವಾರ್ಥ, ಈರ್ಷ್ಯೆ ಮುಂತಾದ ಗುಣಗಳು ಆಕ್ರಮಿಸಿ, ಸೃಷ್ಟಿಯ ವ್ಯವಸ್ಥೆಯ ಗೋಡೆಯನ್ನು ಶಿಥಿಲಗೊಳಿಸುತ್ತಿದೆ. ಪತನದ ಅಥವಾ ನಾಶದ ಹಾದಿಯಲ್ಲಿ ನಮ್ಮ ಮಾನವ ಜಾರುತ್ತಿದ್ದಾನೆ. ಇದರಿಂದ ಪಾರಾಗಲು ನಮಗೆ ಅವಕಾಶವಿನ್ನೂ ಇದೆ. ಎಚ್ಚೆತ್ತುಕೊಂಡರೆ ಬಾಳು ಇಲ್ಲದಿದ್ದರೆ ಹಾಳು.

**ಮುಕ್ತಕ – 533**

**ಪುರುಷಂ ಸ್ವತಂತ್ರನೋ? ದೈವ ವಿಧಿ ಪರವಶನೋ? |**
**ಎರಡುಮನಿತಿನಿತುಳ್ಳ ತೋಳಿನಂತಿಹನೋ? ||**
**ತಿರುಗುವುದು ಮಡಿಸುವುದು ತೋಳ್ ಮೈಯಕಟ್ಟಿನಲಿ |**
**ನರನಂತು ಮಿತಶಕ್ತ - ಮಂಕುತಿಮ್ಮ ||**

ಎರಡುಮನಿತಿನಿತುಳ್ಳ = ಎರಡು+ಅನಿತು+ಇನಿತು+ಉಳ್ಳ, ತೋಳಿನಂತಿಹನೋ=ತೋಳಿನಂತೆ+ಇಹನೋ,

"ಮನುಷ್ಯ ಸಂಪೂರ್ಣ ಸ್ವತಂತ್ರನೋ ಅಥವಾ ಅವನು ದೈವ ಮತ್ತು ತನ್ನ ಪೂರ್ವ ಕರ್ಮಗಳಿಗೆ





ಅಧೀನನೋ ಅಥವಾ ಸ್ವಾತಂತ್ರ ಮತ್ತು ತನ್ನಿಚ್ಛೆ ಎರಡೂ ಅಲ್ಪ ಸ್ವಲ್ಪ ಇರುವವನೋ?" ಎಂದು ಪ್ರಶ್ನಿಸುತ್ತಾ ಹೇಗೆ ನಮ್ಮ ಮೈಕಟ್ಟಿನ ಮಿತಿಯೊಳಗೆ ನಮ್ಮ ತೋಳಿಗೆ ತಿರುಗಿಸಲು, ಮಡಿಸಲು ಸ್ವಾತಂತ್ರವಿದೆಯೋ, ಹಾಗೆಯೇ ನಮಗೂ ನಮ್ಮ ಸ್ವ ಶಕ್ತಿಯ ಮತ್ತು ನಾವು ಪಡೆದುಕೊಂಡು ಬಂದ ವಿಧಿಯ ಮಿತಿಯೊಳಗೆ, 'ನಡೆಯಲಾಗುತ್ತದೆ, ಎಂದು ಮನುಷ್ಯನ ಇತಿ ಮಿತಿಗಳ ಒಂದು ವಿಶ್ಲೇಷಣೆಯನ್ನು ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ತಾನು ಏನು ಮಾಡಬೇಕೆಂದಿದ್ದಾನೋ ಅದನ್ನು ಮಾಡಲಾದರೆ ಅದು ಮನುಷ್ಯನಿಗಿರುವ ಸ್ವಾತಂತ್ರ ಪ್ರತೀ ಮನುಷ್ಯನಿಗೂ ಅವನದೇ ಆದ ಮನಸ್ಸು ಬುದ್ಧಿ ಮತ್ತು ಇಚ್ಛೆಗಳು, ಇವೆ. ಇವುಗಳ ಮಿತಿಯಲ್ಲಿ ಅವನು ಯೋಚಿಸಬಹುದು, ಯೋಜಿಸಬಹುದು,ಆ ನಿಟ್ಟಿನಲ್ಲಿ ಕಾರ್ಯೋನ್ಮುಖನಾಗಬಹುದು ಮತ್ತು ತಾ ಬಯಸಿದ್ದನ್ನು ಪಡೆಯಬಹುದು. ಅದಕ್ಕೂ ಮೀರಿ ಅವನಿಂದ ಏನೂ ಸಾಧ್ಯವಿಲ್ಲ. ಇವನ ಮಿತಿಗಳನ್ನು ನಿಶ್ಚಯಿಸಿರುವುದು ಇವನಿಗಿಂತ ಅಧಿಕ ಶಕ್ತಿವಂತವಾದ, ಸಕಲ ಸೃಷ್ಟಿಯನ್ನೂ ನಿಯಂತ್ರಿಸುವ ಆ ಪರಮ ಶಕ್ತಿ, ಆದರೆ ಆ ಪರಮ ಶಕ್ತಿ ಸದಾಕಾಲ ಇವನ ಕೈ ಹಿಡಿದು ನಡೆಸುವುದಿಲ್ಲ. 'ಕೀ' ಕೊಟ್ಟ ಗಡಿಯಾರ 'ಕೀ' ಇದ್ದಷ್ಟು ಹೊತ್ತು ನಡೆಯುವುದಿಲ್ಲವೆ, ಹಾಗೆ ನಾವೆಲ್ಲಾ ಆ ಪರಮ ಚೇತನದಿಂದ 'ಕೀ' ಕೊಟ್ಟು ಈ ಜಗತ್ತಿನಲ್ಲಿ ಬಿಡಲ್ಪಟ್ಟ ಗೊಂಬೆಗಳು. ನಮ್ಮ ಶಕ್ತಿಗೆ ಒಂದು ಮಿತಿಯಿದೆ ಮತ್ತು ನಮ್ಮ ಕೆಲಸಗಳೆಲ್ಲ ಆ ಮಿತಿಯೊಳಗೇ ನಡೆಯಬೇಕು.

ದೈಹಿಕ ಶಕ್ತಿಗೆ ಒಂದು ಮಿತಿ, ಮಾನಸಿಕ ಶಕ್ತಿಗೆ ಒಂದು ಮಿತಿ, ಬುದ್ಧಿಯ ಶಕ್ತಿಗೆ ಒಂದು ಮಿತಿ, ಹೀಗೆ ಎಲ್ಲವೂ ಒಂದು ಮಿತಿಗೆ ಒಳಪಟ್ಟಿರುವುದಲ್ಲವೇ? ನಮ್ಮ ಶಕ್ತಿಯೆಷ್ಟು? ನಮ್ಮ ಮಿತಿಯೆಷ್ಟು? ಎಂದು ಅರಿಯುವುದೇ ನಮ್ಮ ಎಲ್ಲ

ಕಲಿಕೆಯ ಗುರಿ. ಮಿತಿಗಳನ್ನು ಅರಿತು ನಡೆದುಕೊಂಡರೆ ಬದುಕು ಶಾಂತವಾಗಿ ಮತ್ತು ಸಫಲವಾಗಿ ಇರುತ್ತದೆ. ಆದರೆ ನಮ್ಮ ಆಸೆಗಳು ಆಕಾಂಕ್ಷೆಗಳು, ಮಮತೆ ಮಮಕಾರಗಳು ನಮ್ಮ ಮಿತಿಯನ್ನು ಅರಿಯಲು ಬಿಡುವುದೇ ಇಲ್ಲ. ಏನನ್ನೋ ಮಾಡಲು ಹೋಗುವುದು ಏನನ್ನೋ ಪಡೆಯುವುದು. ಇದು ನಮ್ಮಲ್ಲಿ ಬಹುತೇಕ ಮಂದಿಯ ಅನುಭವ. ಏಕೆ ಹೀಗಾಯಿತು, ನನ್ನಿಂದ ಎಲ್ಲಿ ತಪ್ಪಾಯಿತು ಎಂದು ಸ್ವ-ವಿಶ್ಲೇಷಣೆ ಮಾಡಿಕೊಳ್ಳುವವರೇ ಕಡಿಮೆ. ಹಾಗೆ ಪ್ರಯತ್ನಪಟ್ಟರೂ ನಮಗೆ ನಮ್ಮ ಮಿತಿಯ ಅರಿವಿಲ್ಲವಾದ್ದರಿಂದ ನಮ್ಮ ವೈಫಲ್ಯಗಳಿಗೆ ಮತ್ತು ತತ್ಕಾರಣವಾಗಿ ಉಂಟಾದ ಕಾರ್ಪಣ್ಯಗಳಿಗೆ ಕಾರಣಗಳು ಮತ್ತು ನಮ್ಮ ಪ್ರಶ್ನೆಗಳಿಗೆ ಉತ್ತರವೇ ಸಿಗುವುದಿಲ್ಲ.

ಗೂಟಕ್ಕೆ ಕಟ್ಟಿದ ಹಸುವಿಗೆ ಮೇಯಲು ಕಟ್ಟಿದ ದಾರದ ಉದ್ದದ ಮಿತಿ ಹೇಗೋ, ಹಾಗೆ ನಮ್ಮ ಮತಿಯ ಮಿತಿಯಲ್ಲಿ ನಾವು ನಮ್ಮನ್ನು ಚಾಚಿಕೊಳ್ಳಬಹುದು. ಹಸುವಿಗೆ ತನ್ನನ್ನು ಕಟ್ಟಿದ ಹಗ್ಗದ ಉದ್ದವನ್ನು ಹೆಚ್ಚಿಸಿಕೊಳ್ಳಲಾಗುವುದಿಲ್ಲ. ಆದರೆ ಮನುಷ್ಯನಿಗೆ ಅದು ಸಾಧ್ಯ. ಹೆಚ್ಚು ಹೆಚ್ಚು ಜ್ಞಾನವನ್ನು ಪಡೆದರೆ, ತನ್ನನ್ನು ಮಿತಗೊಳಿಸಿದ ವಿಷಯಗಳನ್ನು ನಿವಾರಿಸಿಕೊಂಡು ತನ್ನ ಕಾರ್ಯಕ್ಷಮತೆಯ ಮಿತಿಯನ್ನು ಹೆಚ್ಚಿಸಿಕೊಳ್ಳಬಹುದು. ಹಾಗಾಗಲು ಪ್ರಯತ್ನ ಬೇಕು. ಸಾಧನೆ ಬೇಕು ಮುಕ್ತ ಮನಸ್ಸು ಬೇಕು, ಹಾಗಲ್ಲದೆ ನಾ ಇರುವುದೇ ಹೀಗೆ ನಾ ಮಾಡಿದ್ದೇ ಸರಿ ಎಂದು ಹಠವಾದಿಯಾದರೆ ನಮ್ಮ 'ಮಿತಿ' ತನ್ನನ್ನು ಸುತ್ತಿ





ಇರುವ ಆವರಣವನ್ನು ದಾಟಲು ಆಗುವುದೇ ಇಲ್ಲ. ಮಾನ್ಯ ಗುಂಡಪ್ಪನವರು 'ನರನಂತು ಮಿತಶಕ್ತ ಎಂದು ಹೇಳುವಂತೆ ನಾವೆಲ್ಲಾ ಮಿತ ಶಕ್ತರು. ಆದರೆ ನಮ್ಮ ಮಿತ ಶಕ್ತಿಯನ್ನು ಅಧಿಕವಾಗಿಸಿಕೊಳ್ಳಲು ನಮ್ಮ ಪೂರ್ವಜರು, ಜ್ಞಾನಿಗಳು ನಮಗೆ ಮಾರ್ಗ ತೋರಿದ್ದಾರೆ. ಪ್ರಯತ್ನಪಟ್ಟರೆ ಆ ಮಿತ ಶಕ್ತಿಯನ್ನು ಅಧಿಕವಾಗಿಸಲು ಸಾಧಿಸಬಹುದು.

**ಮುಕ್ತಕ – 534** **ಹರಡುವುದು ಸಾಜ ವಾಯುಗೆ ಸೈಸದದು ತಡೆಯನ್ |**
**ಉರುಳಿಪುದದೆಲ್ಲವನು ತಡೆಗಳಿಲ್ಲದಿರೆ ||**
**ನರನ ಸ್ವತಂತ್ರಗತಿಯಂತು ಹಿತ ಮಿತವಿರಲು |**
**ಅರಸೋ ಮಿತಿಯಾಯತಿಯ - ಮಂಕುತಿಮ್ಮ ||**

ಸೈಸದದು = ಸೈಸದು+ಅದು, ಉರುಳಿಪುದದೆಲ್ಲವನು =ಉರುಳಿಸುದು +ಅದು+ ಎಲ್ಲವನು, ಸ್ವತಂತ್ರಗತಿಯಂತು =ಸ್ವತಂತ್ರ+ಗತಿಯು+ಅಂತು, ಮಿತಿಯಾಯತಿಯ=ಮಿತಿಯ+ಆಯತಿಯ,
ಸಾಜ = ಸಹಜ, ಸೈಸದದು= ಸಹಿಸದು ಅದು, ಅರಸೋ ಹುಡುಕೋ, ಗತಿಯು= ಬದುಕಿನ ನಡೆ, ಆಯತಿಯ= ವೈಶಾಲ್ಯತೆಯ

ವಿಶಾಲವಾಗಿ ಹರಡಿಕೊಳ್ಳುವುದು ಗಾಳಿಗೆ ಸಹಜ ಗುಣ. ಅದರ ಹರಡುವಿಕೆಗೆ ಅಡ್ಡಿಗಳನ್ನು ಅದು ಸಹಿಸುವುದಿಲ್ಲ. ಹಾಗೆ ತನಗೆ ಅಡ್ಡಿಯಾಗಿ ಬಂದದ್ದನ್ನೆಲ್ಲಾ ಉರುಳಿಸಿ ತಳ್ಳಿಬಿಡುತ್ತದೆ. ಬದುಕಿನ ಗತಿಗೆ ಅಡೆ ತಡೆಗಳಿಲ್ಲದಿದ್ದರೆ ಮನುಷ್ಯನ ಬದುಕಿನ ಗತಿಯೂ ಸಹ ಗಾಳಿಯಂತೆಯೇ ಸಿಕ್ಕ ಸಿಕ್ಕದ್ದನ್ನೆಲ್ಲಾ ಉರುಳಿಸಿಕೊಂಡು ಹೋಗುವಂತಾಗುತ್ತದೆ. ಮಿತಿಯಿರಲು ಬದುಕು ಹಿತ. ಹಾಗಾಗಿ ನೀನು ನಿನ್ನ ಬದುಕಿನ ವೈಶಾಲ್ಯತೆಯ ಮಿತಿಯನ್ನು ಅರಿತುಕೋ ಎಂದು ಒಂದು ಆದೇಶವನ್ನು ನೀಡಿದ್ದಾರೆ ನಮಗೆ ಮಾನ್ಯ ಗುಂಡಪ್ಪನವರು, ಈ ಮುಕ್ತಕದಲ್ಲಿ.

ಈ ಜಗತ್ತಿನ ಪ್ರತಿ ಸೃಷ್ಟಿಗೂ ಒಂದು ಮಿತಿಯಿದೆ. ಗಾಳಿಗೊಂದು ಮಿತಿ, ನೀರಿಗೊಂದು ಮಿತಿ, ಮನುಷ್ಯನಿಗೊಂದು ಮಿತಿ, ಪ್ರಾಣಿಗಳಿಗೊಂದು ಮಿತಿ, ಕ್ರಿಮಿ ಕೀಟಗಳಿಗೊಂದು ಮಿತಿ. ಈ ಮಿತಿಗಳು ಹಲವಾರು ಸ್ತರ ಮತ್ತು ರೀತಿಗಳಲ್ಲಿ ಇರುತ್ತದೆ. ಇದು ಸೃಷ್ಟಿ ನಿಯಮ. ಎಲ್ಲವೂ ತಮ್ಮ ಮಿತಿಯಲ್ಲಿ ನಡೆದುಕೊಂಡರೆ ಅವುಗಳಿಗೆ ಹಿತ. ಇದನ್ನೇ ಗುಂಡಪ್ಪನವರು “ಹಿತ, ಮಿತವಿರಲು” ಎಂದಿದ್ದಾರೆ. ಹಾಗೆ ನಮ್ಮ ಬದುಕಿನಲ್ಲಿ ಹಿತವಿಲ್ಲದಿದ್ದರೆ ಜೀವನ ಶಾಂತವಾಗಿರುವುದಿಲ್ಲ. ಆದರೆ ನಮ್ಮ ಮಿತಿಗಳನ್ನು ತಿಳಿದುಕೊಳ್ಳುವ ಬಗೆ ಏನು? ಇದೇ ಬಹಳ ದೊಡ್ಡ ಸಮಸ್ಯೆ. ನಾವು ಮಾತನಾಡುತ್ತೇವೆ, ಆ ಮಾತು ಸಂದರ್ಭಕ್ಕನುಗುಣವಾಗಿ, ಯಾರೊಡನೆ ಮಾತನಾಡುತ್ತಿದ್ದೇವೆ, ಎಲ್ಲಿ ಮಾತನಾಡುತ್ತಿದ್ದೇವೆ ಎಂದು ಅರಿತು ಎಷ್ಟು ಬೇಕೋ ಅಷ್ಟು ಮಾತನಾಡಿದರೆ, ಅದು ಮಿತವಾದ ಮಾತು, ಹಾಗಾಗಿ ಅದು ಹಿತವಾಗಿರುತ್ತದೆ.

'ಮಾತು ಬಲ್ಲವನಿಗೆ ಜಗಳವಿಲ್ಲ' ಎಂದು ನಾಣ್ನುಡಿಯೇ ಇಲ್ಲವೇ । ಇದು ನಮ್ಮ ಯೋಚನೆ, ಯೋಜನೆ, ಕಾರ್ಯ, ಎಲ್ಲಕ್ಕೂ ಅನ್ವಯವಾಗುತ್ತದೆ.

ನಾವು ಸ್ವತಂತ್ರರೆಂದು ಅಥವಾ ನಮಗೆ ಸ್ವಾತಂತ್ರ ಬೇಕು ಎಂದುಕೊಳ್ಳುವುದು ತಪ್ಪಲ್ಲ. ಆದರೆ ನಾವೆಷ್ಟು ಪರತಂತ್ರರು ಮತ್ತು ನಮ್ಮ ಸ್ವಾತಂತ್ರದ ಗಡಿ, ಎಲ್ಲೆ, ಮಿತಿಗಳೇನು ಎಂದು ಅರಿತುಕೊಳ್ಳುವುದು ಬಹಳ ಮುಖ್ಯ. ಹಾಗೆ ಅರಿಯಲಾದೇ ಅಥವಾ ಅರಿತುಕೊಳ್ಳಲು ಪ್ರಯತ್ನವನ್ನು ಪಡದೇ ನಡೆದುಕೊಂಡರೆ, ಅದು ಸ್ವೇಚ್ಛೆಯಾಗುತ್ತದೆ. ಇಡೀ ಜಗತ್ತಿನ ತಂತ್ರವನ್ನು ರೂಪಿಸಿರುವ ಆ ಪರಮಾತ್ಮನೊಬ್ಬನೇ ಸಂಪೂರ್ಣ ಮತ್ತು ಸರ್ವ ಸ್ವತಂತ್ರ, ಮಿಕ್ಕೆಲ್ಲವೂ ಆ ಪರಮಾತ್ಮನ ತಂತ್ರದಿಂದ ನಿರ್ಮಿಸಲ್ಪಟ್ಟ ಈ ಜಗದ್ಯಂತ್ರದ ಒಂದು ಭಾಗವಷ್ಟೇ. ಪ್ರತಿಯೊಂದಕ್ಕೂ ಒಂದೊಂದು ಮಿತಿಯಿದೆ. ಅರಿವಿಗೊಂದು ಮಿತಿ, ಕಾರ್ಯ ಕ್ಷಮತೆಗೊಂದು ಮಿತಿ ಮತ್ತು ಕೌಶಲ್ಯಕ್ಕೊಂದು ಮಿತಿ, ನಮ್ಮ ಮಿತಿಗಳನ್ನು ಅರಿತು ಮತ್ತು ಆ ಮಿತಿಯ ಪರಿಧಿಯಲ್ಲಿ ನಡೆದುಕೊಳ್ಳುವುದೇ ನಮ್ಮ ಕರ್ತವ್ಯ. ನಮ್ಮ ಮಿತಿ ಮತ್ತು ಅದರ ವೈಶಾಲ್ಯತೆಗಳನ್ನು ಸರಿಯಾಗಿ ಅರಿತುಕೊಂಡರೆ, ನಮ್ಮ ಕ್ಷಮತೆಯನ್ನು ಮತ್ತು ಮಿತಿಯನ್ನು ಅಧ್ಯಯನ ಮತ್ತು ಸಾಧನೆಯಿಂದ ಹೆಚ್ಚಿಸಿಕೊಳ್ಳಬಹುದು.

“ಅತಿ ಸರ್ವತ್ರ ವರ್ಜ್ಯೇತ್ 'ಎನ್ನುವುದು ಸೂತ್ರ ಎಂದರೆ ಮಿತಿಯಲ್ಲಿರಬೇಕು ಎಂದು ಅರ್ಥ. ಹಾಗಾಗಿ ಮಾನ್ಯ ಗುಂಡಪ್ಪನವರು “ಅರಸೋ ಮಿತಿಯಾಯತಿಯ” ಎಂದು ಆದೇಶಿಸಿದ್ದಾರೆ. ಹಾಗೆ ನಾವು ನಮ್ಮ ಮಿತಿಯ ಆಯತಿ(extent)ನ್ನು ಅರಿತಾಗ ನಮ್ಮಲ್ಲಿ ತಾಳ್ಮೆ ಸಹನೆ, ಉದಾರತೆ, ಸಹಿಷ್ಣುತೆ ಮುಂತಾದ ಸಮಾಜಮುಖಿ ಗುಣಗಳು ಬೆಳೆಯುತ್ತವೆ. ನಮ್ಮ ಮಿತಿ ನಮ್ಮದು, ಆದರೆ ಜಗತ್ತಿನ ಮಿತಿ ಪರಮಾತ್ಮ. ಇವೆರಡನ್ನೂ ಅರಿತು ನಡೆದುಕೊಳ್ಳುವುದೇ ನಮ್ಮ ಜೀವನದ ಉದ್ದೇಶವಾಗಿರಬೇಕು. ಇದು ಬದುಕಿನ ಸಫಲತೆಯ ಮಾರ್ಗ,

**ಮುಕ್ತಕ – 535**

**ನೀರ ನೆರೆ ತನ್ನೆದುರಿನಣೆಕಟ್ಟನೊಡೆಯುವುದು ।**
**ಊರನದು ಕೊಚ್ಚುವುದು ಬದಿಯ ಕಟ್ಟದಿರೆ ॥**
**ಏರಿಗಳನಿಕ್ಕೆಲದಿ ನಿಲಿಸೆ ಹರಿಯುವುದು ಸಮನೆ ।**
**ಪೌರುಷದ ನದಿಯಂತು ಮಂಕುತಿಮ್ಮ ॥**

ತನ್ನೆದುರಿನಣೆಕಟ್ಟನೊಡೆಯುವುದು - ತನ್ನ+ಎಂದುರಿನ+ಅಣೆಕಟ್ಟನ್ನು+ಒಡೆಯುವುದು,

ಊರನದು = ಊರನ್ನು+ಅದು, ಕಟ್ಟದಿರೆ=ಕಟ್ಟದೆ+ಇರೆ, ಏರಿಗಳನಿಕ್ಕೆಲದಿ =ಏರಿಗಳನು+ಇಕ್ಕೆಲದಿ,

ನದಿಯಂತು=ನದಿಯು+ಅಂತು,

ನೆರೆ=ಪ್ರವಾಹ, ಬದಿಯ=ಪಕ್ಕದ, ಇಕ್ಕೆಲದಿ=ಎರಡೂ ಕಡೆ, ನಿಲಿಸೆ=ನಿಲ್ಲಿಸಲು, ಪೌರುಷದ=ಶಕ್ತಿಯ

(102)

ಕಗ್ಗರಸಧಾರೆ | ಸ್ವಾತಂತ್ರ್ಯ ಭಾರ 534 - 538

ನದಿಯ ಪ್ರವಾಹ ಹೊಮ್ಮಿ ಬಂದರೆ, ಅದು ಅಣೆಕಟ್ಟನ್ನು ಒಡೆಯುವುದು. ತನ್ನ ಹರಿವಿನ ಹಾದಿಯಲ್ಲಿ ಬರುವ ಊರುಗಳನೆಲ್ಲ ಕೊಚ್ಚಿಕೊಂಡು ಹೋಗಬಹುದು. ಆದರೆ ಅದೇ ನದಿಗೆ ಎರಡೂ ಬದಿಯಲ್ಲಿ ಕಟ್ಟೆಗಳನ್ನು ಕಟ್ಟಿದರೆ ಅದು ಸಮನಾಗಿ ಹರಿದು ತನ್ನ ಗಮ್ಯವನ್ನು ಕಂಡುಕೊಳ್ಳುತ್ತದೆ. ನದಿಯ ಶಕ್ತಿಯಷ್ಟೇ ಅಲ್ಲ ಮಿಕ್ಕ ಎಲ್ಲಾ ಶಕ್ತಿಗಳೂ ಈ ನದಿಯ ಪ್ರವಾಹದ ಶಕ್ತಿಯಂತೆ, ಎಂದು ಉಲ್ಲೇಖ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನದಿಯ ಹರಿವಿಗೆ ಒಂದು ಇಬ್ಬದಿಯ ತಡೆ ಬೇಕು, ಇಲ್ಲದಿದ್ದರೆ ಅದು ದಿಕ್ಕುದೆಸೆಯಿಲ್ಲದೆ ಹರಿಯುತ್ತದೆ. ಅದಕ್ಕೆ ಇಬ್ಬದಿಯ ಕಟ್ಟೆ ನಿರ್ಮಿಸಿದರೆ ಅದು ಸರಾಗವಾಗಿ ತನ್ನ ಗಮ್ಯವನ್ನು ಸೇರುವುದಷ್ಟೇ ಅಲ್ಲ, ತನ್ನ ಹರಿವಿನ ಸುತ್ತಲಿನ ಪ್ರದೇಶವನ್ನು ಸಸ್ಯಶ್ಯಾಮಲವಾಗಿಸುವ ಕೆಲಸಕ್ಕೂ ಉಪಯೋಗಕ್ಕೆ ಬರುತ್ತದೆ. ಅದರೊಳಗೆ ಸುಪ್ತವಾಗಿರುವ ಶಕ್ತಿಯನ್ನು ವಿದ್ಯುತ್ತಾಗಿಸುವುದಿಲ್ಲವೇ ನಾವು? ಹಾಗೆಯೇ ಆ ಶಕ್ತಿ ಹಲವಾರು ಉಪಯೋಗಕ್ಕೆ ಬರುತ್ತದೆ. ಹಾಗಾಗಿ ಅದಕ್ಕೆ ಇಬ್ಬದಿಯ ಕಟ್ಟೆಯನ್ನು ಕಟ್ಟಬೇಕು.

ಶಕ್ತಿಯೇ ಹಾಗೆ. ಅದರದು ವಿರಾಟ್ ಸ್ವರೂಪ. ಬೇರೆ ಬೇರೆ ರೂಪಗಳನ್ನು ಹೊದ್ದು ತನ್ನ ಪರಾಕ್ರಮವನ್ನು ಮೆರೆಯುವುದೇ ಆ ಪರಮ ಶಕ್ತಿಯ ಸ್ವಭಾವ. ಅದೇ ನಮ್ಮನ್ನು ಕಾರ್ಯೋನ್ಮುಖನನ್ನಾಗಿಸುವುದು, ನಮ್ಮಲ್ಲಿ ಪ್ರವಹಿಸುವ ಆ ಶಕ್ತಿಗೆ ಒಂದು ಮಾರ್ಗ ಬೇಕು. ನಮ್ಮ ಎಲ್ಲಾ ಕಲಿಕೆಯ ಉದ್ದೇಶವೇ ಆ ಶಕ್ತಿಗೆ ಹರಿವಿನ ಒಂದು ಸೂಕ್ತ ಮಾರ್ಗ ಕಲ್ಪಿಸುವುದು. 'ನದಿ'ಗೆ ಕಟ್ಟೆ ಕಟ್ಟಿದಂತೆ ನಮ್ಮೊಳಗಿರುವ ಶಕ್ತಿಗೂ ಒಂದು ಕಟ್ಟೆ ಬೇಕು. ಅದನ್ನು ನಮಗೆ ನಮ್ಮ

ಬಾಲ್ಯದಲ್ಲಿ ತಮ್ಮ ತಂದೆ ತಾಯಿಯರು ನಿರ್ಮಿಸುತ್ತಾರೆ. ಹಾಗೆ ಮಾಡದಿದ್ದರೆ ನಮ್ಮಲ್ಲಿರುವ ಶಕ್ತಿ ವ್ಯರ್ಥವಾಗಿ ನಾವು ಏನಾಗಬಹುದಾಗಿತ್ತೋ ಅದಾಗದೆ ಏನೇನೋ ಆಗಿಬಿಡುತ್ತೇವೆ. ನಮ್ಮ ಶಕ್ತಿಯ ಸದುಪಯೋಗದಲ್ಲಿ ನಮ್ಮ ಪಾತ್ರವೂ ಅವಶ್ಯ ಇದೆ. ನಮಗೆ ಸ್ವತಂತ್ರವಾಗಿ ಯೋಚಿಸಲು ಸಾಧ್ಯವಾದಾಗ ನಮ್ಮ ಕ್ಷಮತೆಯನ್ನು ನಾವೇ ಗುರುತಿಸಿಕೊಂಡು ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡರೆ ನಾವು ಏನಾಗಬೇಕೆಂದುಕೊಂಡರೆ ಅದಾಗಬಹುದು. "ಮಕ್ಕಳಿಗೆ ತಂದೆ ಬಾಲ್ಯದೊಳಕ್ಕರ ವಿದ್ಯೆಗಳನರಿಪದಿರ್ದೊಡೆ, ಕೊಂದಂ ಲಕ್ಕ ಧನಮಿರಲು ಕೆಡುಗುಂ ಚಿಕ್ಕಂದಿನ ವಿದ್ಯೆ ಪೊರುಗು ಚೂಡಾರತ್ನ" ಎಂದು ಹೇಳಲ್ಪಟ್ಟಿದೆ. ಹಾಗಾಗಿ ಬಾಲ್ಯದಲ್ಲಿಯೇ ನಮಗೆ ಆ ಮಾರ್ಗದರ್ಶನ ಬೇಕು.

ವಿಪರ್ಯಾಸವೆಂದರೆ, ಇಂದು ಸಮಾಜದಲ್ಲಿ ಇದು ಆಗುತ್ತಿಲ್ಲ. ಮಕ್ಕಳಲ್ಲಿನ ಕ್ಷಮತೆಯನ್ನು ಗುರುತಿಸುವ ಕ್ಷಮತೆ ಯಾರಿಗೂ ಇಲ್ಲ. ಎಲ್ಲರಿಗೂ ಒಂದೇ ರೀತಿಯ ವಿದ್ಯಾಭ್ಯಾಸ. ಆಕಸ್ಮಿಕವಾಗಿ ಒಬ್ಬ ವ್ಯಕ್ತಿಯ ಕ್ಷಮತೆಗನುಗುಣವಾಗಿ ಅವನಿಗೆ ಬೆಳೆಯಲು ಅವಕಾಶಗಳು ಸಿಗುತ್ತವೆ ಅಷ್ಟೇ. ಆದರೆ ಅದು ನಿಯೋಜಿತ ರೀತಿಯಲ್ಲಿ ಆದರೆ ನಮ್ಮ ಸಮಾಜದಲ್ಲಿ ಇನ್ನೂ ಹೆಚ್ಚು ಹೆಚ್ಚು ಯೋಗ್ಯರನ್ನು ನಾವು ನೋಡಬಹುದು. ಶಕ್ತಿಗೆ ಅಥವಾ ಪೌರುಷಕ್ಕೆ ಒಂದು ಮಾರ್ಗವನ್ನು ಕಲ್ಪಿಸಿದರೆ ಅದು ಸಮಾಜಕ್ಕೆ ಉಪಯೋಗವಾಗುವರೀತಿಯಲ್ಲಿ ಬೆಳೆಯುತ್ತದೆ. ಇಲ್ಲದಿದ್ದರೆ ಅದೇ ಶಕ್ತಿ ಸಮಾಜ ಘಾತಕವಾಗುತ್ತದೆ ಎನ್ನುವುದೇ ಈ ಮುಕ್ತಕದ ಹೂರಣ.

**ಮುಕ್ತಕ – 536** **ಎಸಳಿನಡಿ, ಗಿಡದ ಬಿಗಿ, ಮೇಲೆ ಗಾಳಿಯ ಸರಸ |**

**ಕುಸುಮದ ಕ್ಷೇಮವಾ ಬಿಗಿತ ಬಿಡುತೆಗಳಿಂ ||**

**ಕುಶಲ ಸೌರಭವ ನಿರ್ಯತ್ನ ಸ್ವತಂತ್ರದಿಂ |**

**ಪಸರಿಪಾ ನಯ ಸುಖವೋ - ಮಂಕುತಿಮ್ಮ ||**

ಎಸಳಿನಡಿ=ಎಸಳಿನ +ಅಡಿ, ಪಸರಿಪಾ =ಪಸರಿಪ+ಆ

ಹೂವಿನ ಎಸಳುಗಳನ್ನು ತೊಟ್ಟಿನ ಮೂಲಕ ಗಿಡವು ಬಿಗಿಯಾಗಿ ಹಿಡಿದುಕೊಂಡು ಇರುತ್ತದೆ. ಹೀಗೆ ಹೂವಿನ ಕ್ಷೇಮಕ್ಕಾಗಿ ಗಿಡದ ಭದ್ರಹಿಡಿತಕ್ಕೆ ಒಳಪಟ್ಟ ಹೂವಿನ ಮೇಲೆ ಗಾಳಿ ಸರಸವಾಡುತ್ತದೆ ಮತ್ತು ಹೂವು ಗಿಡದ ಹೊರಗಿದ್ದರೂ ಅದರ ಹಿಡಿದಲ್ಲಿದ್ದುಕೊಂಡೆ ತನ್ನ ಸೌರಭವನ್ನು ಅಪ್ರಯತ್ನವಾಗಿ ಹೊರಸೂಸುವುದು ಸುಖ. ನಮ್ಮ ಬದುಕೂ ಹಾಗೆಯೇ ನಮ್ಮ ಮಿತಿಗಳ ಬಿಗಿ ಹಿಡಿತದಲ್ಲಿ ಇದ್ದುಕೊಂಡೇ ಒಳಿತನ್ನು ಪಸರಿಸುವ ಕೆಲಸ ನಮ್ಮಿಂದ ಆಗಬೇಕು ಎಂದು, ಒಂದು ಆಶಯವನ್ನು ಮಾನ್ಯ ಗುಂಡಪ್ಪನವರು ವ್ಯಕ್ತಪಡಿಸಿದ್ದಾರೆ ಈ ಮುಕ್ತಕದಲ್ಲಿ.

ನಮ್ಮ ಈ ದೇಹವೆಂಬುವ ಗಿಡದಲ್ಲಿ ಅರಳುವ ಹಲವಾರು ಭಾವನೆಗಳ ಹೂಗಳೆಂದರೆ ನಾವು ವ್ಯಕ್ತಪಡಿಸುವ ಭಾವಗಳು ಮತ್ತು ವಿಚಾರಗಳು ಮತ್ತು ತಧಾರಿತ ನಮ್ಮ ಕೆಲಸಗಳು. ಅವುಗಳು ನಮ್ಮ ವಿಚಾರದ, ಬುದ್ಧಿಯ, ಕ್ಷಮತೆಯ, ಸಂಸ್ಕಾರಗಳ ಮಿತಿಗಳ ಹಿಡಿತದಲ್ಲಿದ್ದುಕೊಂಡೇ ಅರಳಬೇಕು. ಹಾಗೆ ಅರಳಿದಾಗ ಅದು ಸೂಸುವ ಸುಗಂಧ ಸಮಾಜಮುಖಿಯಾಗಿ ಹಿತವಾಗಿರುತ್ತದೆ. ನಿಸರ್ಗದಲ್ಲಿ ಕಾಣುವ ಗಿಡಗಳು ಸಾಮಾನ್ಯವಾಗಿ ಒಂದೇ ಸುಗಂಧದ ಮತ್ತು ಒಂದೇ ಬಣ್ಣದ ಹೂಗಳನ್ನು ಅರಳಿಸಿದರೆ, ಈ ನಮ್ಮ ದೇಹವವೆಂಬುವ ಗಿಡ ಒಂದೇ ಸಮಯದಲ್ಲಿ ಹತ್ತು ಹಲವಾರು ಬಣ್ಣ, ರೂಪ, ಗಂಧವನ್ನು ಬೀರುವಂತಾ ಹೂಗಳನ್ನು ಅರಳಿಸುತ್ತದೆ. ಇದೇ ವಿಚಿತ್ರ. ನಮ್ಮ ಭಾವನೆಗಳು, ಕೆಲಸಗಳು, ಯೋಚನೆಗಳು, ಯೋಜನೆಗಳು, ಮಾತುಗಳು ಎಲ್ಲವೂ ನಮ್ಮಿಂದ ಹೊರಹೊಮ್ಮುವ ಹೂಗಳೆಂದು ಪರಿಗಣಿಸಿದರೆ ಅವುಗಳಿಂದ ಹೊರಹೊಮ್ಮುವ ವೈವಿಧ್ಯಮಯ ರೂಪ, ಬಣ್ಣ, ಸುಗಂಧಗಳನ್ನು ಊಹಿಸಲು ಅಸಾಧ್ಯವಲ್ಲವೇ?

ನಮಗೆ ನಾವೇ ನಿಯಮಿಸಿಕೊಂಡ ಬಿಗಿಗಳು ಮತ್ತು ಹಿಡಿತಗಳು ಮತ್ತು ನಮ್ಮ ಸಂಸ್ಕಾರಗಳು ಮತ್ತು ಸಮಾಜ ವಿಧಿಸಿದ ಬಿಗಿಗಳ ಹಿಡಿತದಲ್ಲಿ ನಾವು ಮೊಗ್ಗಾಗಿ, ಬೆಳೆದು ಹೂವಾದರೆ, ಸುಗಂಧವೆ ನಮ್ಮ

ಸ್ವಭಾವವಾಗುತ್ತದೆ. ಇಂತಹ ಸುಗಂಧದಿಂದ ನಾವಿರುವ ಜಗತ್ತೆಂಬ ಹೂದೋಟದಲ್ಲಿ ಅನ್ಯ ಹೂಗಳು ಸೂಸುವ ಸುಗಂಧದೊಂದಿಗೆ, ನಾವು ಸೂಸುವ ಸುಗಂಧವು ಸಮನ್ವಯಗೊಂಡಾಗ ಜಗತ್ತು ಒಂದು ಹಿತವಾದ ತಾಣವಾಗುತ್ತದೆ. ಹಾಗಲ್ಲದೆ ನಾವು ಯಾವ ಹಿಡಿತಕ್ಕೂ ಸಿಗದೇ ಅರಳಿದರೆ ಬೇಗ ಉದುರಿಹೋಗಿ (ಪತನಗೊಂಡು) ಕೊಳೆತು ದುರ್ಗಂಧವನ್ನೇ ಬೀರುವಂತಾದರೆ, ಅದು ದುರಂತ.

ಹಿಡಿತಗಳ ಮತ್ತು ಬಿಗಿತಗಳ ಹತೋಟಿಯಲ್ಲಿ ಜೀವನ ನಡೆಸಿದರೆ ನಮ್ಮಿಂದ ಸುಗಂಧ, ಇಲ್ಲದಿದ್ದರೆ ಪತನಗೊಂಡು, ಕೊಳೆತು ನಾರಿ ಕೇವಲ ದುರ್ಗಂಧ ಹೊರಡಿಸಬಹುದು. ಹಾಗಾಗಿ ನಾವು ನಮ್ಮ ಇತಿ





ಮಿತಿಗಳನ್ನು ಅರಿತುಕೊಂಡು ಸಮಾಜದ ಅಥವಾ ಈ ಜಗತ್ತೆಂಬ ಹೂದೋಟದಲ್ಲಿ ಪ್ರೀತಿ, ಪ್ರೇಮ, ಸಹಿಷ್ಣುತೆ, ತ್ಯಾಗ, ಮುಂತಾದ ಸಮಾಜಮುಖೀ ಸುಂಗಂಧಗಳನ್ನು ಸೂಸುವ ಹೂಗಳನ್ನು ಅರಳಿಸುವಂತಹ ಗಿಡಗಳಾಗಿ ಬಾಳಬೇಕು. ಸ್ವೇಚ್ಛೆಯಿಂದ ಯಾರ ಹಿಡಿತಕ್ಕೂ ಸಿಗದೇ ಅರಳಿ, ಬೇಗ ಉದುರಿ ಅಥವಾ ಪತನಗೊಂಡು ಕೊಳೆತು ನಾರುವ ಹೂವಾಗಬಾರದೆಂಬ ಆಶಯದೊಂದಿಗೆ ಜೀವಿಸಬೇಕು. ಹಾಗಾದರೆ ನಮ್ಮ ಜೀವನವೂ ಸಾರ್ಥಕವಾಗುತ್ತದೆ.

**ಮುಕ್ತಕ – 537**

**ತರಣಿಶಶಿಪಥಗಳನು,ಧರೆವರುಣಗತಿಗಳನು |**
**ಮರುದಗ್ನಿವೇಗಗಳ ನಿಯಮಿಸಿಹ ದಕ್ಷನ್ ||**
**ನರನರಸಿಕೊಳಲಿ ದಾರಿಯ ತನಗೆ ತಾನೆಂದು |**
**ತೊರೆದನೇತಕೆ ನಮ್ಮ - ಮಂಕುತಿಮ್ಮ ||**

ತರಣಿಶಶಿಪಥಗಳನು= ಶಶಿತರಣಿ+ಪಥಗಳನು, ಧರೆವರುಣಗತಿಗಳನು=ಧರೆ+ವರುಣ+ಗತಿಗಳನು,
ಮರುದಗ್ನಿವೇಗಗಳ=ಮರುತ್ +ಅಗ್ನಿ+ವೇಗಗಳನು, ನಿಯಮಿಸಿಹ=ನಿಯಮಿಸಿ+ಇಹ,
ನರನರಸಿಕೊಳಲಿ=ನರನು+ಅರಸಿಕೊಳಲಿ, ಶಶಿ=ಚಂದ್ರ, ತರಣಿ=ಸೂರ್ಯ, ಪಥಗಳನು = ಹಾದಿಗಳನ್ನು,
ಧರೆ= ಭೂಮಿ, ವರುಣ=ಮಳೆಯ ದೇವತೆ, ಮರುತ್ =ವಾಯುದೇವ,ಅಗ್ನಿ ಅಗ್ನಿದೇವ,
ದಕ್ಷನ್ = ದಕ್ಷನಾದ ಪರಮಾತ್ಮ, ಅರಸಿಕೊಳಲಿ=ಹುಡುಕಿಕೊಳ್ಳಲಿ ಅಥವಾ ಕಂಡುಕೊಳ್ಳಲಿ.

ಆ ದಕ್ಷನಾದ, ಸರ್ವಶಕ್ತನಾದ ಪರಮಾತ್ಮನು, ತಾನೇ ಸೃಷ್ಟಿಸಿದ ಸೂರ್ಯ, ಚಂದ್ರ, ಭೂಮಿ, ಮಳೆ, ಗಾಳಿ,ಅಗ್ನಿ ಮುಂತಾದವುಗಳ ವೇಗವನ್ನು ನಿಯಂತ್ರಿಸುತ್ತಿದ್ದಾನೆ. ಆದರೆ ಮನುಷ್ಯರಿಗೆ ಮಾತ್ರ ತಮ್ಮ ತಮ್ಮ ವೇಗವನ್ನು ತಾನೇ ನಿಯಂತ್ರಿಸಿಕೊಳ್ಳಲಿ ಎಂದು ಏಕೆ ಬಿಟ್ಟನೋ, ಎಂದು ಒಂದು ಸುಂದರ ಪ್ರಶ್ನೆಯನ್ನು ತಮಗೆ ತಾವೇ ಕೇಳಿಕೊಳ್ಳುತ್ತಾ ನಮ್ಮ ಮುಂದಿಟ್ಟಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಪ್ರಶ್ನೆ ಸಹಜವಾಗೇ ಇದೆ, ಏಕೆಂದರೆ ಗುಂಡಪ್ಪನವರು ಮೇಲೆ ಉಲ್ಲೇಖಿಸಿದ ಈ ಸೂರ್ಯ, ಚಂದ್ರ, ಭೂಮಿ, ಮಳೆ, ಗಾಳಿ,ಅಗ್ನಿ ಮುಂತಾದವುಗಳು ಸಂಪೂರ್ಣವಾಗಿ ಆ ಪರಮಾತ್ಮನ ನಿಯಂತ್ರಣದಲ್ಲಿವೆ. ಆದರೆ ಅವುಗಳಿಗೂ ಸ್ವಾತಂತ್ರವಿದ್ದರೂ 'ಸ್ವೇಚ್ಛೆ' ಇಲ್ಲ ಎಂಬುದು ಅರ್ಥ. ಪರಿಪೂರ್ಣತೆಯಿಂದ ಕೂಡಿದ ಈ ಸೃಷ್ಟಿಯಲ್ಲಿ ಸಕಲವೂ ಪರಿಪೂರ್ಣವೇ. ಮಾನವನ ಬುದ್ಧಿಯ ಹೊರತು. ತನ್ನ ಮಿತಿಗಳನ್ನು ಅರಿತರೂ ಅದನ್ನು ಉಲ್ಲಂಘಿಸಿ ಹೋಗುವ ಉದ್ಧಟತನ ನಮ್ಮ ಮನುಷ್ಯನಿಗೆ.

ಈ ಸೂರ್ಯ, ಚಂದ್ರ, ಭೂಮಿ, ಮಳೆ, ಗಾಳಿ, ಅಗ್ನಿ ಮುಂತಾದವುಗಳಿಗೆ ಧರ್ಮವು ಮಾತ್ರ ನಿಗದಿತ. ಅವುಗಳಿಗೆ ಅವುಗಳ ಧರ್ಮವೇ ಕರ್ಮವಾಗಿರುತ್ತದೆ. ಆದರೆ ಮನುಷ್ಯ ಮಾತ್ರ ಧರ್ಮ ಕರ್ಮಗಳ ನಡುವೆ ತನಗಿಷ್ಟಬಂದಂತೆ 'ಗೆರೆ' ಎಳೆದುಕೊಂಡಿದ್ದಾನೆ. ಸೂರ್ಯಾದಿಗಳನ್ನೆಲ್ಲ ಸಂಪೂರ್ಣವಾಗಿ ನಿಯಂತ್ರಿಸುವ

ಆ ಪರಮಾತ್ಮ ಮಾನವನಿಗೆ ಮಾತ್ರ ಸ್ವಲ್ಪ ಸ್ವಾತಂತ್ರವನ್ನು ಕೊಟ್ಟು ತನ್ನ ದಾರಿಯನ್ನು ತಾನೇ ನಿಗದಿ ಪಡಿಸಿಕೊಳ್ಳಲಿ ಎಂದು ಬಿಟ್ಟಿದ್ದಾನೆ.

ಮನುಷ್ಯನಿಗೆ ಹೀಗೆ ಸ್ವಲ್ಪ ಸ್ವಾತಂತ್ರವನ್ನು ಇತ್ತ ಆ ದೇವನೇ ಧರ್ಮದ ಹಾದಿಯನ್ನು ತುಳಿಯುವ ಪರಿಯನ್ನೂ ವೇದ, ಉಪನಿಷತ್ತು, ಭಾಗವತ, ಭಗವದ್ಗೀತೆ, ಪುರಾಣ, ಕಾವ್ಯ ಮುಂತಾದವುಗಳ ಮೂಲಕ ಕೊಟ್ಟಿದ್ದಾನೆ "ಇವುಗಳನ್ನು ಓದಿ ಅರಿತು ನಿನ್ನ ಮಿತಿಯನ್ನು ಅರಿತುಕೊ, ನಿನ್ನ ಧರ್ಮವನ್ನು ಅರಿತುಕೊ, "ಉದ್ಧರೇತ್ ಆತ್ಮನಾತ್ಮಾನಂ" ಎಂದು ಹೇಳುತ್ತಾ ನಿನ್ನ ಉದ್ದಾರದ ದಾರಿಯನ್ನು ನೀನೇ ಕಂಡುಕೊ" ಎಂದು ಒಂದು ಅಮೌಖಿಕ ಮತ್ತು ಸೂಕ್ಷ್ಮ ಆದೇಶವನ್ನೂ ಇತ್ತಿದ್ದಾನೆ.

ನಾವು ಮಾನವರೂ ಸಹ ಅನ್ಯ ಸಕಲ ಜೀವಿಗಳಂತೆಯೇ `ದೈವಕ್ಕೆ ಅಧೀನ'ರಾಗೇ ಇದ್ದೇವೆ. ಆದರೆ ಆ ಪರಮಾತ್ಮ ನೀಡಿದ ಅಲ್ಪ ಸ್ವಾತಂತ್ರದಿಂದ ನಾವು ರೂಢಿಸಿಕೊಂಡ ಸ್ವಾರ್ಥ, ಮಮಕಾರ, ವ್ಯಾಮೋಹ, ಅಹಂಕಾರ, ದ್ವೇಷ, ಮುಂತಾದ ದುರ್ಬುದ್ಧಿಗಳಿಂದ ನಮ್ಮ ವಿವೇಕ ಕವಿದು ಹೋಗಿ ನಮ್ಮ ಮಿತಿ ಮತ್ತು ಕ್ಷಮತೆಯನ್ನು ಅರಿಯಲಾಗದೆ ಅಥವಾ ಅರಿಯಲು ಪ್ರಯತ್ನವನ್ನು ಪಡದೇ, ದಿಕ್ಕು ತಪ್ಪಿದ ಸ್ಥಿತಿಯಲ್ಲಿದ್ದೇವೆ. ನಾವು ದೈವಕ್ಕೆ ಅಧೀನ ಎಂದು ಅರಿತಿದ್ದರೂ, ನಮಗೂ ಮಿತಿಗಳು ಇವೆ ಎಂದು ಅರಿತಿದ್ದರೂ ನಾವು ಈ ಲೋಕದಲ್ಲಿ 'ಸ್ಥಿರವಾಗಿ' ಇರುತ್ತೇವೆ ಎನ್ನುವ ಮೂಲ ಅಹಂಭಾವದಿಂದ, ಅಹಂಕಾರವನ್ನು ಬೆಳೆಸಿಕೊಂಡು, ಮೆರೆಯುತ್ತಿದ್ದೇವೆ. ನಮಗೆ ಸಿಕ್ಕ ಸ್ವಾತಂತ್ರದಲ್ಲಿ ನಮ್ಮ ಮಿತಿಗಳನ್ನು ಅರಿತು ನಡೆದರೆ ನಮಗೂ ಹಿತ ಮತ್ತು ನಾವಿರುವ ಈ ಸಮಾಜಕ್ಕೂ ಹಿತ .

**ಮುಕ್ತಕ – 538**

**ತನ್ನ ಬೆವರಿನ ಕೊಳದಿ ತಾಂ ಮುಳುಗಿ ತೇಲುತ್ತೆ ।**
**ಧನ್ಯನಾನ್ನೆನುವನದೊರ್ವ ಸ್ವತಂತ್ರನ್ ॥**
**ಪುಣ್ಯತೀರ್ಥದೊಳಿಳಿದು ಕರಗಲ್ ಸ್ವತಂತ್ರ ತಾನ್ ।**
**ಎನ್ನುವವನಿನ್ನೊರ್ವ - ಮಂಕುತಿಮ್ಮ ॥**

ಧನ್ಯನಾನ್ನೆನುವನದೊರ್ವ=ಧನ್ಯ+ನಾನು+ಎನ್ನುವನು+ಅದೊರ್ವ,

ಪುಣ್ಯತೀರ್ಥದೊಳಿಳಿದು=ಪುನ್ಯತೀರ್ಥದೊಳು+ಇಳಿದು, ಎನ್ನುವವನಿನ್ನೊರ್ವ=ಎನ್ನುವವನು+ಇನ್ನೊರ್ವ

ಓರ್ವ= ಒಬ್ಬ, ಅದೊರ್ವ=ಅವನೊಬ್ಬ, ಇನ್ನೋರ್ವ=ಮತ್ತೊಬ್ಬ,

ತನ್ನ ದುಡಿಮೆಯನ್ನು ತನಗಾಗಿ ಮತ್ತು ತನ್ನ ಕುಟುಂಬಕ್ಕಾಗಿಯೇ ಮಾಡುತ್ತಾ, ತನ್ನ ಕಷ್ಟ ಸುಖಗಳ ಸುಳಿಯಲ್ಲೇ ತಾನೇ ಮುಳುಗಿ ತೇಲುತ್ತಾ, ತನ್ನ ಜೀವನ ಸಾರ್ಥಕವಾಯಿತು ಎಂದು ನೆನೆಯುವ ಒಬ್ಬನಾದರೆ, ತನ್ನ ಕುಟುಂಬವನ್ನು ಪಾಲಿಸುತ್ತಾ, ಈ ಜಗತ್ತೇ ಒಂದು ಕುಟುಂಬ ಅಥವಾ ಪುಣ್ಯಕ್ಷೇತ್ರ





ಅಥವಾ ಪುಣ್ಯತೀರ್ಥ ಎಂದು, ಸಮಾಜಾಭಿಮುಖಿಯಾಗಿ ತನ್ನ ಹೆಸರನ್ನೂ ಉಳಿಸದೆ ಕರಗಿಹೋಗುವವನು ಮತ್ತೊಬ್ಬ, ಹೀಗೆ ಜಗತ್ತಿನಲ್ಲಿ ಇರುವ ನಾನಾ ರೀತಿಯ ಜನಗಳ ವಿಶ್ಲೇಷಣೆಯನ್ನು ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಾವಿರುವ ಸಮಾಜದಲ್ಲಿ 'ತಾನಾಯಿತು ತನ್ನ ಕೆಲಸವಾಯಿತು' ಎಂದು ಸ್ವಲ್ಪವೂ ಅಕ್ಕ-ಪಕ್ಕ ನೋಡದ ಜನರು ನಮಗೆ ಸಿಗುತ್ತಾರೆ. ಇಂತಹವರಿಗೆ ಅವರ ವೈಯಕ್ತಿಕ ಜೀವನಕ್ಕೆ ಮತ್ತು ಅದರ ಅನುಕೂಲಕ್ಕೆ ಸಮಾಜದ ಅವಶ್ಯಕತೆ ಇಲ್ಲ, ಅವರಿಗೆ ಯಾರೂ ಬೇಕಿಲ್ಲ ಮತ್ತು ಯಾವುದೂ ಬೇಕಿಲ್ಲ. ಅಷ್ಟು ಸೀಮಿತ ಜೀವನವನ್ನು ನಡೆಸಿ ತಾವು ಧನ್ಯರಾದೆವೆಂದುಕೊಳ್ಳುವ ಜನರು ಇವರು. ಅವರು ತಮ್ಮ ಇಡೀ ಜೀವನವನ್ನು ತಾವು ಸಂತೋಷಪಡುವುದಕ್ಕಾಗಿಯೇ ಬದುಕುತ್ತಾರೆ ಮತ್ತು ಅನ್ಯರ ಸಂತೋಷದ ಬಗ್ಗೆ ಕಿಂಚಿತ್ ಯೋಚನೆಯೂ ಇವರಲ್ಲಿ ಇರುವುದಿಲ್ಲ. ಅವರ ಪ್ರಪಂಚವು ಬಹಳ ಚಿಕ್ಕದು ಅದನ್ನು ಕೊಳದಿ' ಎಂದಿದ್ದಾರೆ ಮಾನ್ಯ ಗುಂಡಪ್ಪನವರು. ಅಂತಹವರನ್ನು ಸಾಮಾನ್ಯವಾಗಿ 'ಕೂಪಸ್ಥ ಮಂಡೂಕ' ಎಂದೂ ಕರೆಯುತ್ತಾರೆ. ಬಾವಿಯೊಳಗಿನ ಕಪ್ಪೆಯಂತೆ ಅವರ ಪ್ರಪಂಚ ಸೀಮಿತವಾಗಿರುತ್ತದೆ. ಇನ್ನೂ ಒಂದು ಅರ್ಥದಲ್ಲಿ ಇವರನ್ನು ಕರ್ಮಯೋಗಿಗಳೆಂದೂ ಕರೆಯಬಹುದು. ತಮ್ಮ ಪಾಲಿಗೆ ಬಂದಕೆಲಸವನ್ನು ನಿಷ್ಠೆಯಿಂದ

ಮಾಡುತ್ತಾ ಅತ್ತ ಇತ್ತ ತಿರುಗಿಯೂ ನೋಡದೆ ಮಾಡುವ ಕೆಲಸದಲ್ಲಿ ನಿಮಗ್ನರಾಗಿ, ಧನ್ಯತೆಯನ್ನು ಪಡೆಯುತ್ತಾರೆ. ಅವರು ಮಾಡುವ ಕೆಲಸವನ್ನೇ ಪೂಜೆಯೆಂದು ಭಾವಿಸಿ ಅದರಲ್ಲೇ ಪರಮಾತ್ಮನನ್ನು ಕಂಡುಕೊಳ್ಳುತ್ತಾರೆ.

ಆದರೆ, ಮತ್ತೆ ಕೆಲವರು ತಮ್ಮ ಕುಟುಂಬದ ಜೊತೆಗೆ ಸಮಾಜದಲ್ಲೂ ತಾವು ಆಯ್ದುಕೊಂಡ ರಂಗದಲ್ಲಿ ಮುಕ್ತವಾಗಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡು ಒಟ್ಟು ಸಮಾಜದಲ್ಲಿ ಒಂದಾಗುತ್ತಾರೆ. ಇಂತಹವರಿಂದಲೇ ಸಾಹಿತ್ಯ, ಸಂಗೀತ, ಕಲೆ, ಸಮಾಜಸೇವೆ, ಆಂದೋಲನ, ಕ್ರಾಂತಿ ಮುಂತಾದವುಗಳು ನಡೆಯುತ್ತವೆ. ಇವರಲ್ಲಿ ತಮ್ಮ ವೈಯಕ್ತಿಕ ಸುಖಕ್ಕಿಂತ ಸಮಾಜದ ಸಮಗ್ರ ಒಳಿತು ಪ್ರಾಮುಖ್ಯತೆಯನ್ನು ಪಡೆದುಕೊಂಡಿರುತ್ತದೆ. ಅವರಿಗೆ ಜಗತ್ತೇ ಒಂದು ಕುಟುಂಬವಾಗಿರುತ್ತದೆ. ಅವರಿಗೆ ಭಾಷೆ, ಜಾತಿ, ಧರ್ಮದ ಬಂಧನಗಳಿರುವುದಿಲ್ಲ. ಹೀಗೆ ಮುಕ್ತವಾಗಿ ಸಮಾಜಮುಖಿಯಾಗಿರುವುದರಲ್ಲೇ ಇವರ ಶ್ರದ್ಧೆ ಮತ್ತು ಭಕ್ತಿ. ಅಂತಹ ಕೆಲಸಗಳಲ್ಲಿ ತೊಡಗಿಸಿಕೊಳ್ಳುವುದೇ ಇವರ ಭಕ್ತಿ ಮತ್ತು ಪೂಜೆ. ಇವರಿಗೆ ಇಡೀ ಜಗತ್ತೇ ಒಂದು ಪುಣ್ಯಕ್ಷೇತ್ರ, ಇವರು ಎಲ್ಲರಲ್ಲೂ ಬೆರೆತು ಒಂದಾಗಿ ಕರಗಿಹೋಗುತ್ತಾರೆ.

ವ್ಯಷ್ಟಿ ಸಾಧನೆ ಮತ್ತು ಸಮುಷ್ಟಿ ಸಾಧನೆಗಳೆರಡೂ ಸಾಧನೆಯೇ!!! ಆದರೆ ಮೊದಲನೆಯದು ಕೇವಲ ವೈಯಕ್ತಿಕ ಪ್ರಯೋಜನಕ್ಕಾಗಿ, ಎರಡನೆಯದು ಸಮಗ್ರ ಸಮಾಜದ ಒಳಿತಿಗಾಗಿ, ನಾವು ಇವೆರಡರಲ್ಲಿ ಏನಾಗಿದ್ದೇವೆ ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಕು ಮತ್ತು ಸಾಧ್ಯವಾದರೆ ಬದಲಾಗಬೇಕು.

**ಮುಕ್ತಕ – 539**

**ಬರಿಯ ಬುದ್ಧಿವಿಮರ್ಶೆಗರಿದು ಜೀವನಸತ್ತ್ವ ।**
**ಪರಿಶೋಧಿಸುವರಾರು ಬುದ್ಧಿಋಜುತೆಯನು? ॥**
**ಸುರಿಸುವುದದೆಂದೊ ತಾನೇ ಮಿಂಚುಬಳ್ಳಿವೊಲು ।**
**ಪರಸತ್ತ್ವ ಮನದೊಳಗೆ - ಮಂಕುತಿಮ್ಮ ॥**

ಬುದ್ಧಿವಿಮರ್ಶೆಗರಿದು=ಬುದ್ಧಿ+ವಿಮರ್ಶೆಗೆ+ಅರಿದು, ಪರಿಶೋಧಿಸುವರಾರು=ಪರಿಶೋಧಿಸುವವರು+ಆರು, ಸ್ಫುರಿಸುವುದದೆಂದೊ=ಸ್ಫುರಿಸುವುದು+ಅದು+ಎಂದೊ, ಮನದೊಳಗೆ-ಮನದ+ಒಳಗೆ ವಿಮರ್ಶೆಗೆ=ತರ್ಕಕ್ಕೆ, ಋಜುತೆ=ಪ್ರಾಮಾಣಿಕತೆ, ಸ್ಫುರಿಸುವುದು=ಹೊಳೆಯುವುದು, ಪರಸತ್ವ=ಪರಮಾತ್ಮ ತತ್ವದ ಸತ್ವ

ಕೇವಲ ಬುದ್ಧಿಯ ತರ್ಕಕ್ಕೆ ಸಿಗುವುದಿಲ್ಲ ಜೀವನದ ಸತ್ವ, ಬುದ್ಧಿಯ ಪ್ರಾಮಾಣಿಕತೆಯನ್ನು ಪರಿಶೋಧಿಸುವವರಾರು? ಪ್ರತಿಯೊಬ್ಬನಿಗೂ ಆ ಪರತತ್ವವು ಮತ್ತು ಆ ಪರತತ್ವದ ಸತ್ವವು ಎಂದೋ ಒಂದು ದಿನ ತಾನೇ ತಾನಾಗಿ ಒಂದು ಮಿಂಚ ಬಳ್ಳಿಯಂತೆ ಸ್ಫುರಿಸುವುದು, ಎಂದು ಒಂದು ಅದ್ಭುತ ಸತ್ಯವನ್ನು ಅರುಹಿದ್ದಾರೆ ನಮಗೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಜಗತ್ತಿನ ಅಗಾಧ ಸೃಷ್ಟಿಗೆ ಕಾರಣವಾದ ಆ ಪರಸತ್ವವನ್ನು, ಇಡೀ ಸೃಷ್ಟಿಯ ಹೋಲಿಕೆಯಲ್ಲಿ ಒಂದು ಧೂಳಿನ ಕಣದ ಕೋಟಿಯಲ್ಲಿ ಒಂದು ಭಾಗವೂ ಅಲ್ಲದ ನಮಗೆ, ಅರ್ಥಮಾಡಿಕೊಳ್ಳುವುದಕ್ಕೆ ನಮ್ಮ ಮಿತ ಬುದ್ಧಿಯ ಸಾಮರ್ಥ್ಯದಿಂದ ಸಾಧ್ಯವೇ? ಈ ಬುದ್ಧಿಯೂ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದೆ ಎಂದು ತಿಳಿಯುವ ಬಗೆಯಾದರೂ ಹೇಗೆ? ಮೊದಲಿನದು ಸಾಧ್ಯವಾದರೂ ಎರಡನೆಯದು ಅಸಾಧ್ಯ. ಮೊದಲ ಕಾರ್ಯಕ್ಕೆ ನಮಗೆ ಆ ಪರಮಾತ್ಮ ಶಕ್ತಿಯನ್ನು ನೀಡಿದ್ದಾನೆ, ಆದರೆ ಎರಡನೆಯದಕ್ಕೆ ಇಲ್ಲ. ಆ ಪರಸತ್ವದ ಪರಿಕಲ್ಪನೆ ಯಾರು ಎಷ್ಟೆಷ್ಟು ಯೋಚಿಸಲು ಸಾಧ್ಯವೋ ಅವರವರಿಗೆ ಅಷ್ಟಷ್ಟು. ಹೇಗೆ ಮತ್ತೊಬ್ಬರ ಮನದಿಂಗಿತವನ್ನು ಅರಿಯಲು ಸಾಧ್ಯವಿಲ್ಲವೋ, ಹಾಗೆಯೇ ಮತ್ತೊಬ್ಬರ ಬುದ್ಧಿಯ 'ಋಜು ಎಂದರೆ ಪ್ರಾಮಾಣಿಕತೆಯನ್ನು ಅರಿಯಲೂ ಸಾಧ್ಯವಿಲ್ಲ, "ಪರಿಶೋಧಿಸುವರಾರು ಬುದ್ಧಿಋಜುತೆಯನು?" ಎಂದು ಗುಂಡಪ್ಪನವರು ಹೇಳಿದಹಾಗೆ, ಎಲ್ಲ ಜೀವಿಗಳಿಗೂ ಆ 'ಭಗವದ್ದರ್ಶನ' ಮಾಡಿಕೊಳ್ಳಬೇಕೆಂಬುವ ಆಸೆ ಇರುತ್ತದೆ. ಇಲ್ಲಿ 'ಭಗ' (ಭರ್ಗಃ) ಎಂದರೆ ತೇಜಸ್ಸು ಎಂದು ಅರ್ಥ. ಇದನ್ನೇ ಮಾನ್ಯ ಗುಂಡಪ್ಪನವರು "ಮಿಂಚುಬಳ್ಳಿವೊಲು ಪರಸತ್ವ ಮನದೊಳಗೆ" ಎಂದಿದ್ದಾರೆ. ಈ ಜಗತ್ತಿನ ಎಲ್ಲ ಜಂಜಾಟಗಳಿಂದ ಮುಕ್ತಿ ಸಿಗುವುದೆಂದರೆ ಯಾರಿಗೆ ಬೇಡ? ಆದರೆ ಇದರ ಮೂಲಕವೇ ಅದನ್ನು ಪಡೆಯಬೇಕಾದರೂ, ಇದರಲ್ಲೇ ಇದ್ದುಕೊಂಡು ಅದನ್ನು ಸಂಪೂರ್ಣತಯ ಪಡೆಯಲು ಸಾಧ್ಯವಿಲ್ಲ. ಬಿಡಬೇಕು, ಬಿಡಲು ಮನಸ್ಸು ಬರಬೇಕು. ಮೇಲಿನ ಸ್ವರೂಪ ಹೇಗಿದ್ದರೂ ಅಂತರಂಗದಲ್ಲಿ ರಕ್ತಿಯ ಮತ್ತು ವಿರಕ್ತಿಯ ಪ್ರಮಾಣ ಹೇಗಿದೆ ಎಂದು ಅರಿಯುವುದು ಕಷ್ಟ.

ಆ ಪರಸತ್ವವನ್ನು ಅರಿಯಲು ಉತ್ಸುಕತೆ ಬೇಕು, ದೃಢವಾದ ಆಸೆ ಬೇಕು. ಈ ಉತ್ಸುಕತೆ ಮತ್ತು ಆಸೆ ಎರಡೂ ಸಹ ನಮ್ಮನ್ನು ಪರಸತ್ವವನ್ನು ಅರಿಯುವ ದಾರಿಯಲ್ಲಿ ಕೊಂಡುಹೋಗಬೇಕು. ಇದನ್ನೇ 'ಆಭಿಮುಖ್ಯ'ವೆನ್ನುತ್ತಾರೆ, ಹಾಗೆ ನಮಗೆ ಆಭಿಮುಖ್ಯವಿದ್ದರೆ ಗುಂಡಪ್ಪನವರು "ಸ್ಫುರಿಸುವುದದೆಂದೊ" ಎಂದು ಹೇಳುವಂತೆ ಎಂದೋ ಒಂದು ದಿನ ನಮಗೆ ಆ ಪರಸತ್ವ ಸ್ಫುರಿಸಬಹುದು. ಆದರೆ ಅದು ಆ ದಾರಿಯಲ್ಲಿದ್ದರೆ ಮಾತ್ರ ಸಾಧ್ಯ. ಮೈಸೂರಿಗೆ ಹೋಗುವ ಇಚ್ಚೆಯಿದ್ದರೂ ಹುಬ್ಬಳ್ಳಿಗೆ ಹೋಗುವ ಬಸ್ ಹತ್ತಿ ಕುಳಿತರೆ ಮೈಸೂರು ಸೇರುವುದು ಸಾಧ್ಯವೇ?

ಈ 'ಪರಸತ್ವಾಭಿಮುಖ'ವನ್ನು ಪಡೆಯಲು ನಿರಂತರ ಪ್ರಯತ್ನಬೇಕು. ಮನಸ್ಸು ಬುದ್ಧಿಗಳನ್ನು ಆ ದಿಕ್ಕಿನಲ್ಲೇ





ಇಟ್ಟುಕೊಳ್ಳಬೇಕು. ಭಗವಾನ್ ಆದಿ ಶಂಕರರು 'ಸತ್ಸಂಗ ನಿಸ್ಸಂಗತ್ವಂ, ನಿಸ್ಸಂಗ ನಿರ್ಮೋಹತ್ವಂ. ನಿರ್ಮೋಹತ್ವ ನಿಶ್ಚಲ ತತ್ವಂ, ನಿಶ್ಚಲ ತತ್ವ ಜೀವನ್ಮುಕ್ತಿ' ಎಂದರು. ಹಾಗಾಗಿ ಇದೊಂದು ಕ್ರಮದಲ್ಲೇ ನಡೆಯಬೇಕು. ಬಾಹ್ಯ ಮತ್ತು ಅಂತರಂಗದಲ್ಲಿ 'ಸತ್ತಿನ ಸಂಗ ಮಾಡಿದರೆ ಅದು ನಮ್ಮನ್ನು 'ಮುಕ್ತಿಯ' ತನಕ ಕೊಂಡುಹೋಗುತ್ತದೆ. ಸತ್ತನ ಮಾರ್ಗದಲ್ಲಿದ್ದರೆ ಅದು ಎಂದೋ ಒಂದು ದಿನ ನಮಗೆ 'ಸತ್ವದ' ದರ್ಶನ ಮಾಡಿಸುತ್ತದೆ. ಅಂತಹ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡಬೇಕು.

**ಮುಕ್ತಕ – 540**

**ನರವಿವೇಕವದೇನು ಬರಿಯ ಮಳೆನೀರಲ್ಲ।**
**ಕೆರೆಯ ನೀರ್ ಊರ ಮೈಸೋಂಕುಗಳ ಬೆರಕೆ॥**
**ಧರೆಯ ರಸವಾಸನೆಗಳಾಗಸದ ನಿರ್ಮಲದ।**
**ವರವ ಕದಡಾಗಿಪುವು – ಮಂಕುತಿಮ್ಮ॥**

ನರವಿವೇಕವದೇನು= ನರ+ವಿವೇಕವು+ಅದೇನು, ರಸವಾಸನೆಗಳಾಗಸದ=ರಸ+ವಾಸನೆಗಳು+ಆಗಸದ,

ಕದಡಾಗಿಸುವು=ಕದಡು+ಆಗಿಪುವು,

ನರ=ಮನುಷ್ಯ, ಸೋಂಕು=ಅಂಟು, ಬೆರಕೆ=ಮಿಶ್ರಣ, ಧರೆಯ=ಭೂಮಿಯ, ಆಗಸದ=ಆಕಾಶದ, ನಿರ್ಮಲ-ಶುದ್ಧ,

ಕದಡು=ಅಶುದ್ಧಗೊಳಿಸು

ಮನುಷ್ಯನ ವಿವೇಕವು ಮಳೆಯ ನೀರಿನಂತೆ ಶುದ್ಧವಲ್ಲ. ಕೆರೆಯ ನೀರಲ್ಲಿ ಊರ ಜನರ ಮೈಲಿಗೆಯಲ್ಲ ಕಲೆತಂತೆ, ಪರಮಾತ್ಮನ ವರದಂತೆ, ಧರೆಗಿಳಿದ ನಿರ್ಮಲ ವರ್ಷಧಾರೆ ಭೂ ಸ್ಪರ್ಶವಾದೊಡನೆ ಭೂಮಿಯ ಮೇಲಿನ ರಸ ಮತ್ತು ಗಂಧಗಳ ಸಂಪರ್ಕದಿಂದ ಮಲಿನವಾಗುವಂತೆ, ಮನುಷ್ಯನ ವಿವೇಕವೂ ಸಹ ಇಲ್ಲಿನ ರಸ ವಾಸನೆಗಳ ಪರಿಣಾಮಗಳಿಂದ ತನ್ನ ಶುದ್ಧತೆಯನ್ನು ಉಳಿಸಿಕೊಳ್ಳಲಾಗದೆ ಮಲಿನವಾಗುತ್ತದೆ, ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮೋಡಗಳ ಸೆರೆಯಿಂದ ಧರೆಗಿಳಿವ ನೀರ ಹನಿಗಳು ಮಳೆಯಾಗಿ, ಭೂಸ್ಪರ್ಷವಾಗುವತನಕ ಪರಿಶುದ್ಧವಾಗಿದ್ದು, ಭೂಮಿಗೆ ಬಿದ್ದೊಡನೆಯೇ ಈ ನೆಲದ ರುಚಿ ಮತ್ತು ಗಂಧಗಳನೆಲ್ಲ ತನ್ನೊಳಗೆ ಸೇರಿಸಿಕೊಂಡು, ಕಲುಷಿತವಾಗುವಂತೆ, ಮನುಷ್ಯನ ವಿವೇಕವೂ ಸಹ ಈ ಜಗತ್ತಿನ ಅಂಟಿನಿಂದ ಕಲುಷಿತವಾಗುತ್ತದೆ. ಶಬ್ದ, ಸ್ಪರ್ಶ, ರೂಪ, ರಸ, ಗಂಧಾದಿಗಳಿಂದ ಸೋಂಕಿತ ನಮ್ಮ ವಿವೇಕದಲ್ಲಿ ಪರಿಶುದ್ಧತೆ ಇರಲು ಸಾಧ್ಯವೇ ಇಲ್ಲ. ಹುಟ್ಟಿದಾರಭ್ಯ, ಮಾತು ಮತ್ತು ವಿಷಯಗಳನ್ನು ಕಂಡು, ಕೇಳಿ, ನೋಡಿದ, ನಮ್ಮ ವಿವೇಕವೂ ಅದರ ಪ್ರಭಾವಕ್ಕೆ ಒಳಗಾಗಿ ಪ್ರೇರಿತವಾಗುತ್ತದೆ. ನಮ್ಮ ಅನುಕೂಲಕ್ಕೆ ತಕ್ಕಂತೆ ತಪ್ಪು ಸರಿಗಳ ವಿಶ್ಲೇಷಣೆ ನಡೆದು ಕೆಲವನ್ನೋ ಅಥವಾ ಹಲವನ್ನೋ ಬಿಡುತ್ತದೆ ಮತ್ತು ಕೆಲವನ್ನು ಉಳಿಸಿಕೊಂಡು ತನ್ನ ಸ್ವಭಾವವಾಗಿಸಿಕೊಳ್ಳುತ್ತದೆ. ಹಾಗೆ ಮನುಷ್ಯನ ವಿವೇಕವು ಕಲುಷಿತಗೊಳ್ಳುತ್ತದೆ. ಈ ಕಾಲುಷ್ಯದಲ್ಲಿ ಏನೆಲ್ಲಾ ಬಂದು ಸೇರಿಕೊಳ್ಳುತ್ತದೆ

ಎನ್ನುವುದು ಅವರವರು ಹುಟ್ಟಿ ಬಂದ ಪರಿಸರ, ಅವರಿಗೆ ಸಿಕ್ಕ ವಿದ್ಯಾಭ್ಯಾಸ, ಅವರ ಅನುವಂಶಿಕ ಸ್ವಭಾವಗಳು ಮತ್ತು ಬೆಳೆಸಿಕೊಂಡ ಸಾಂಗತ್ಯಗಳ ಮೇಲೆ ಆಧಾರಿತವಾಗಿರುತ್ತದೆ.

ವಿವೇಕದ ಅಶುದ್ಧತೆ ಎಂದರೆ, ಅಜ್ಞಾನದ ಕತ್ತಲು ಎಂದರ್ಥ. ವಿಚಾರಗಳ ತಿಳುವಳಿಕೆ (ಎಂದರೆ ಯಾವುದೇ ವಿಚಾರದ ಸತ್ಯದರಿವಾಗಿ ಆ ವಿಚಾರದ ತಿಳಿಯಾದ ಸ್ಪಷ್ಟತೆ ಉಂಟಾಗುವುದು) ಮತ್ತು ಸ್ವಚ್ಚತೆ ಇಲ್ಲದ ಮಾನಸಿಕ ಮತ್ತು ವಿವೇಕದ ಅಭಾವವೇ ತಮಸ್ಸು. ಈ ತಮಸ್ಸಿನಿಂದ ಬೆಳಕಿನೆಡೆಗೆ ಹೋಗುವ ಪ್ರಯತ್ನವೇ ನಮ್ಮ ಎಲ್ಲ ಓದು, ವಿದ್ಯಾಭ್ಯಾಸ, ಕಲಿಕೆ, ಸಂಸ್ಕಾರ, ಸತ್ಸಂಗಗಳು. ಇಂತಹ ಪ್ರಯತ್ನದಿಂದ ನಮ್ಮ ಪ್ರಮೇಯವೇ ಇಲ್ಲದೆ ಕಲುಷಿತವಾದಂತಹ ನಮ್ಮ ಮನಸ್ಸು, ಬುದ್ಧಿ ಮತ್ತು ವಿವೇಕಗಳು, ಬಗ್ಗಡವೆಲ್ಲಾ ಅಡಗಿ ಕೊಳದ ನೀರು ತಿಳಿಯಾದಂತೆ, ತಿಳಿಯಾಗಬೇಕು. ಹಾಗೆ ತಿಳಿಯಾದ ಮನೋಭಾವದಿಂದ ನಮ್ಮ ವೈಯಕ್ತಿಕ ಉದ್ಧಾರವೂ ಆಗುತ್ತದೆ ಮತ್ತು ಸಮಾಜಕ್ಕೂ ಒಳಿತಾಗುತ್ತದೆ.

“ನರವಿವೇಕವದೇನು ಬರಿಯ ಮಳೆನೀರಲ್ಲ” ಎಂದು ಮಾನ್ಯ ಗುಂಡಪ್ಪನವರು ಹೇಳುವುದನ್ನು ನಾವು ಒಪ್ಪುವುದಾದರೆ, ಸ್ವ-ವಿಮರ್ಶೆಗೆ ನಾವು ಸಿದ್ಧರಾಗಿ ಆತ್ಮಾವಲೋಕನ ಮಾಡಿಕೊಂಡರೆ ನಮ್ಮ ವಿವೇಕ ಎಷ್ಟು ಶುದ್ಧವಾಗಿದೆ ಅಥವಾ ಎಷ್ಟು ಕಲುಷಿತವಾಗಿದೆ ಎಂದು ಅರ್ಥವಾಗಿ, ನಮ್ಮನ್ನು ನಾವೇ ಶುದ್ದೀಕರಿಸಿಕೊಳ್ಳುವ ಪ್ರಕ್ರಿಯೆಯನ್ನು ಆರಂಭಿಸಿದರೆ, ಇಂದೋ ಅಥವಾ ಮುಂದೆ ಎಂದೋ ಒಂದು ದಿನ ನಾವೂ ಸಹ ಗುಂಡಪ್ಪನವರು ಹೇಳುವ 'ನಿರ್ಮಲದ ವರ' ವನ್ನು ನಮ್ಮದಾಗಿಸಿಕೊಂಡು ಬದುಕನ್ನು ಸಾರ್ಥಕ ಮಾಡಿಕೊಳ್ಳಬಹುದು.

**ಮುಕ್ತಕ – 541**

**ಪ್ರಾಕ್ತನದ ವಾಸನೆಯೆ ಮನಕೆ ಮೊದಲಿನ ಮಂತ್ರಿ।**
**ಯುಕ್ತಿಗಳ ತನಗೊಪ್ಪುವಂತೆ ತಿರುಗಿಸುದು**
**ಸೂಕ್ತವೆನಿಪುದು ಸಹಜರುಚಿ ತನ್ನ ತರ್ಕವನೆ।**
**ಗುಪ್ತದೊಳು ಕುಟಿಲವಿದು - ಮಂಕುತಿಮ್ಮ॥**

ತನಗೊಪ್ಪುವಂತೆ =ತನಗೆ+ಒಪ್ಪುವಂತೆ,ಸೂಕ್ತವೆನಿಪುದು=ಸೂಕ್ತವು+ಎನಿಪುದು,ಕುಟಿಲವದು=ಕುಟಿಲವು+ಅದು, ಪ್ರಾಕ್ತನ=ಪೂರ್ವ, ಕುಟಿಲ=ಮೋಸ

ನಮ್ಮ ಪೂರ್ವ ಜನ್ಮದ ವಾಸನೆಗಳೇ, ನಮ್ಮ ಮನಸ್ಸು, ಬುದ್ಧಿಗಳಿಗೆ, ತನಗೆ ಅನುಗುಣವಾಗಿ ಸಲಹೆಗಳನ್ನು ನೀಡುವ ಮಂತ್ರಿಯಿದ್ದ ಹಾಗೆ. ಈ ವಾಸನೆಗಳೇ ತನ್ನ ಸಹಜವಾದಂತಹ ಅಭಿರುಚಿಗೆ ಸರಿಯಾದ ತರ್ಕವನ್ನು ಮಂಡಿಸಿ, ತನಗೆ ಹೇಗೆ ಬೇಕೋ ಹಾಗೆ ನಮ್ಮನ್ನು ತಿರುಗಿಸಿಕೊಳ್ಳುತ್ತದೆ. ಇದು ನಮ್ಮನ್ನು ಅವುಗಳಿಂದ





ಮುಕ್ತರಾಗಿ ಪರತತ್ತ್ವದೆಡೆಗೆ ಹೋಗದಂತೆ ತಡೆಯುವ ಕುಟಿಲತೆ ಎಂದು, ನಮ್ಮ ಪೂರ್ವ ವಾಸನೆಗಳಿಗೂ ಮತ್ತು ಇಂದಿನ ನಮ್ಮ ಬದುಕಿಗೂ ಇರುವ ಸಂಬಂಧವನ್ನು ವಿಶ್ಲೇಷಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಒಂದು ಜೀವಿ ಒಂದು ದೇಹವನ್ನು ತೊರೆದು ಮತ್ತೊಂದು ದೇಹವನ್ನು ಧಾರಣೆಮಾಡುವಾಗ ತನ್ನ ಪೂರ್ವ ದೇಹದಲ್ಲಿ ಆರ್ಜಿಸಿದ ಮತ್ತು ಕಟ್ಟಕಡೆಯದಾಗಿ ಉಳಿಸಿಕೊಂಡ ಗುಣ ಅಥವಾ ವಾಸನೆಯನ್ನು ನಂತರ ಧಾರಣೆ ಮಾಡಿದ ದೇಹದೊಳಕ್ಕೆ ತನ್ನ ಸುತ್ತ ಒಂದು ಸೂಕ್ಷ್ಮ ಶರೀರದೊಂದಿಗೆ ತೆಗೆದುಕೊಂಡು ಹೋಗುತ್ತದೆ ಎನ್ನವುದು ನಮ್ಮ ಸನಾತನದ ನಂಬಿಕೆ. ಆದರೆ ನಮ್ಮ ಅನುಭವದಲ್ಲಿ ನಾವು ಎಷ್ಟೋ ಭಿನ್ನ ಭಿನ್ನವಾದ ಗುಣಗಳನ್ನು ಹೊಂದಿರುವ ವ್ಯಕ್ತಿಗಳನ್ನು ನೋಡುತ್ತೇವಲ್ಲವೇ? ಈ ಭಿನ್ನತೆಗೆ ಕಾರಣವೇನು ಎಂದು ಯೋಚಿಸಿದರೆ ಮತ್ತು ಅದರ ಆಳಕ್ಕೆ ಹೋದರೆ ನಮಗೆ ಮಾನ್ಯ ಗುಂಡಪ್ಪನವರು ಹೇಳುವ ಪ್ರಾಕ್ತನ, ಎಂದರೆ ಪೂರ್ವ ವಾಸನೆಗಳ ಪರಿಚಯವಾಗುತ್ತದೆ.

ಹಾಗೆ ನಾವು ಹೊತ್ತು ತಂದ, ನಮ್ಮದೇ ಆದ ಪೂರ್ವ ಗುಣಗಳು ಮತ್ತು ವಾಸನೆಗಳೇ ನಮ್ಮ ಮೂಲ ವ್ಯಕ್ತಿತ್ವವನ್ನು ರೂಪಿಸುತ್ತವೆ. ನಮ್ಮ ಮನಸ್ಸು ಬುದ್ಧಿಗಳನ್ನು ಯಾವುದೋ ಒಂದು ದಿಕ್ಕಿನಲ್ಲಿ ಕೊಂಡು ಹೋಗುವುದೇ ಈ ಪೂರ್ವ ವಾಸನೆಗಳು. ಹಾಗಾಗಿಯೇ ಮಾನ್ಯ ಗುಂಡಪ್ಪನವರು ಈ ಗುಣಗಳನ್ನು 'ಮೊದಲಿನ ಮಂತ್ರಿ' ಎಂದಿದ್ದಾರೆ. ಹಾಗಾದರೆ ಇವು ನಮ್ಮ ಶಾಶ್ವತ ಗುಣಗಳೇ? ಎಂದು ಆಲೋಚಿಸಿದರೆ ಖಂಡಿತ ಅಲ್ಲ ಎಂಬ ಉತ್ತರವೂ ಸಿಗುತ್ತದೆ. ಏಕೆಂದರೆ ತನ್ನ ಪೂರ್ವ ಗುಣಗಳನ್ನು ಹೊತ್ತು ತಂದ ಜೀವಿ, ಇಲ್ಲಿ ಹೊಸ ದೇಹವನ್ನು ಧಾರಣೆ ಮಾಡಿದ ಮೇಲೆ, ಇಲ್ಲಿನ ಈಗಿನ ತಂದೆ ತಾಯಿಗಳು, ಬಂಧು ಮಿತ್ರರು, ಸಮಾಜ, ವಾತಾವರಣ ಮತ್ತು ಪರಿಸರಕ್ಕನುಗುಣವಾಗಿ ತನ್ನನ್ನು ತಾನು

ಅಳವಡಿಕೊಳ್ಳಲು ಮಾಡುವ ಪ್ರಯತ್ನದಲ್ಲಿ, ಹೊಸ ಹೊಸ ವಿಚಾರಗಳನ್ನು ಅರಿಯುತ್ತದೆ. ಈ ಹೊಸ ವಿಚಾರಗಳು ಹೊತ್ತು ತಂದ ಗುಣಗಳ ಮೇಲೆ ತನ್ನ ಪ್ರಭಾವ ಬೀರಿ, ಅವುಗಳನ್ನು ಬದಲಾಯಿಸಿಕೊಂಡು ಹಳೆಯ ಗುಣಗಳನ್ನು ಬೆಳೆಸಿಕೊಳ್ಳುವುದೋ, ಬದಲಾಯಿಸಿಕೊಳ್ಳುವುದೋ, ಅಳಿಸಿಕೊಳ್ಳುವುದೋ ಮಾಡುತ್ತಾ ತನ್ನ ಸ್ವಭಾವವನ್ನು ರೂಪಿಸಿಕೊಳ್ಳುತ್ತದೆ. ಕಡೆಗೆ ಈ ದೇಹವನ್ನು ಬಿಡುವಾಗ ಯಾವ ಯಾವ ಗುಣಗಳನ್ನು ಉಳಿಸಿ, ಬೆಳೆಸಿ, ರೂಪಿಸಿಕೊಂಡಿರುತ್ತದೆಯೋ, ಅವುಗಳನ್ನೆಲ್ಲ ಹೊತ್ತು ಮತ್ತೊಂದು ದೇಹವನ್ನು ಧಾರಣೆ ಮಾಡುತ್ತದೆ. ಇದು ನಿರಂತರ ಪ್ರಕ್ರಿಯೆ.

ಆದರೆ ಈ ವಾಸನೆಗಳಿಂದ ಮುಕ್ತಿಯೇ ಇಲ್ಲವೇ? ಎಂದರೆ, ಇದೆ. ನಮ್ಮಲ್ಲಿರುವ ವಾಸನೆಗಳನ್ನು ಸಂಪೂರ್ಣವಾಗಿ ತೊಳೆದು, ಕಳೆದುಕೊಂಡರೆ ಇದೆ. ಅದಷ್ಟು ಸುಲಭವೇ? ಅಲ್ಲ, ಮಾನ್ಯ ಗುಂಡಪ್ಪನವರು ಹೇಳುವಂತೆ ಇದೊಂದು ಕುಟಿಲತೆ. ಏಕೆಂದರೆ ಎಲ್ಲ ಮನುಜರೂ ತಮ್ಮ ವಾಸನೆಗಳನ್ನು ಕಳೆದುಕೊಂಡು ಮುಕ್ತರಾಗಿಬಿಟ್ಟರೆ, ಈ ಜಗದ್ವ್ಯಾ ಪಾರ ನಡೆಯುವುದು ಹೇಗೆ? ಹಾಗಾಗಿ ಜಗನ್ನಿಯಾಮಕನು ತನ್ನ ಜಗನ್ನಾಟಕವನ್ನು ಮುಂದುವರೆಸಿಕೊಂಡು ಹೋಗಲು ನಮಗೆ ನಮ್ಮ ವಾಸನೆಗಳನ್ನು ಸಂಪೂರ್ಣವಾಗಿ ತೊಳೆದುಕೊಳ್ಳಲು ಬಿಡುವುದೇ ಇಲ್ಲ. ನಾವು ಈ ವಾಸನೆಗಳ ವಿಷವೃತ್ತದಲ್ಲಿ ಬಂಧಿಗಳಾಗಿಬಿಟ್ಟಿದ್ದೇವೆ. ಅವುಗಳ

ತರ್ಕವೇ ನಮ್ಮನ್ನು ಈ ನಾಟಕದ ಪಾತ್ರ ಧರಿಸುವಂತೆ ಮಾಡುತ್ತದೆ. ಇದರಿಂದ ಬಿಡಿಸಿಕೊಳ್ಳಬೇಕಾದರೆ ಬಹು ಕಷ್ಟದ ಸಾಧನೆ ಅಗತ್ಯ. ನಾವು ನಮ್ಮ ವಾಸನೆ, ಗುಣಗಳನ್ನು ಅರಿತರೆ ಅದರಿಂದ ಬಿಡಿಸಿಕೊಳ್ಳುವ ಪ್ರಯತ್ನವನ್ನು ಮಾಡಬಹುದು, ಈ ವಾಸನೆಗಳ ಕುಟಿಲತೆಯ ವೃತ್ತದಿಂದ ಹೊರಬರಬಹುದು.

**ಮುಕ್ತಕ – 542** **ಆಶೆ ಮಂಥರೆ, ನರವಿವೇಚನೆಯೆ ಕೈಕೇಯಿ |**
**ಬೀಸೆ ಮನದುಸಿರು ಮತಿದೀಪವಲೆಯುವುದು ||**
**ವಾಸನೆಗಳನುಕೂಲ ಸತ್ಯತರ್ಕಕೆ ಶೂಲ |**
**ಶೋಷಿಸಾ ವಾಸನೆಯ - ಮಂಕುತಿಮ್ಮ ||**

ಮನದುಸಿರು=ಮನದ+ ಉಸಿರು, ಮತಿದೀಪವಲೆಯುವುದು=ಮತಿದೀಪವು+ಅಲೆಯುವುದು,
ವಾಸನೆಗಳನುಕೂಲ=ವಾಸನೆಗಳ+ಅನುಕೂಲ,
ಶೋಷಿಸಾ=ಶೋಷಿಸು+ಆ, ಸತ್ಯತರ್ಕಕೆ=ತರ್ಕದಿಂದ ಸತ್ಯ ಶೋಧನೆಗೆ, ಶೋಷಿಸು=ಖಾಲಿಮಾಡು (drain up) ವಾಸನೆಯ=ನಮ್ಮ ಪೂರ್ವ ಗುಣಗಳನ್ನು ಶೂಲ=ಇರಿಯುವ ಸಾಧನ

ನಮ್ಮ ಮನದಲ್ಲಿ ಉದ್ಭವವಾಗುವ ಆಸೆಗಳನ್ನು ಮಂಥರೆಗೆ ಮತ್ತು ಮನುಷ್ಯರ ವಿವೇಚನೆಯನ್ನು ಕೈಕೇಯಿಗೆ ಹೋಲಿಸಿದ್ದಾರೆ ಮಾನ್ಯ ಗುಂಡಪ್ಪನವರು. ಮನಸ್ಸಿನಲ್ಲಿ ಉದ್ಭವವಾಗುವ ಆಸೆಗಳು ತನ್ನ ಹೂಂಕಾರದ ರಭಸದಿಂದ ಮತಿ ಎಂದರೆ, ವಿವೇಕವನ್ನು ತಲ್ಲಣಗೊಳಿಸುತ್ತದೆ. ನಮ್ಮ ಪೂರ್ವ ವಾಸನೆಗಳಿಗನುಕೂಲವಾಗುವಂತೆ ಓಲಾಡುವ ನಮ್ಮ ಆಸೆಗಳ ವಿಶ್ಲೇಷಣೆ ಮಾಡಿದರೆ, ಸತ್ಯಕ್ಕೆ ಇರಿತವಾಗುತ್ತದೆ. ಹಾಗಾಗಿ ಸತ್ಯದ ಪಥದಿಂದ ದೂರಾಗಿಸುವಂತಹ ಈ ವಾಸನೆಗಳನ್ನು ನಿನ್ನ ಸ್ವಭಾವ ಮತ್ತು ಗುಣದಿಂದ ದೂರಾಗಿಸು ಅಥವಾ ಇಲ್ಲವಾಗಿಸು ಎಂದು, ಒಂದು ಸೂಕ್ತ ಆದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಶ್ರೀಮದ್ರಾಮಾಯಣದಲ್ಲಿ ಕೈಕೇಯಿಯ ದಾದಿ ಮಂಥರೆ. ಈ ಪಾತ್ರಕ್ಕೆ ಮಂಥರೆ ಎಂದು ಬಹುಶಃ ಅವಳ ಮನೋ ಮಂಥನ ಪ್ರಕ್ರಿಯೆಯ ತೀವ್ರತೆಯಿಂದ ಆ ಹೆಸರನ್ನು ಕೊಟ್ಟಿರಬಹುದು. ರಾಮನನ್ನೂ ತನ್ನ ಮಗನೆಂದೇ

ಭಾವಿಸುತ್ತಿದ್ದ ಮತ್ತು ರಾಮನ ಯುವರಾಜ ಪಟ್ಟಾಭಿಷೇಕವಾಗುತ್ತದೆ ಎಂದು ಸಂತೋಷದಿಂದ ಇದ್ದ ಕೈಕೇಯಿಗೆ, 'ದಶರಥನು ನಿನಗೆ ಮೂರು ವರಗಳನ್ನು ಹಿಂದೆ ನೀಡಿದ್ದಾನೆ. ಒಂದು ವರ ಬೇಡಿ ನಿನ್ನ ಮಗ ಭರತನೇ ಯುವರಾಜನಾಗುವಂತೆ ಬೇಡು. ಆಗ ನೀನೇ ರಾಜಮಾತೆಯಾಗುವೆ' ಎಂದು ಅವಳ ಮನದಲ್ಲಿ ತನ್ನ (ಆಸೆಯ) ಇಂಗಿತವನ್ನು ನೆಟ್ಟು ಅವಳ ಮತಿ ಚಲಿಸುವಂತೆ ಮಾಡಿದಳು ಮಂಥರೆ. ಹೀಗೆ ನಮ್ಮ ಮನಸ್ಸಿನಲ್ಲಿ ಉದ್ಭವವಾಗುವ ಆಸೆಗಳೂ ಸಹ ನಮ್ಮ ಪೂರ್ವ ವಾಸನೆಗಳಿಂದ ಪ್ರೇರಿತವಾಗಿ ಸತ್ಯಾಸತ್ಯ ವಿವೇಚನೆಗಳನ್ನು ತೊರೆದು ನಮ್ಮ ಮನಸ್ಸಿನ ಮೇಲೆ ಪ್ರಭಾವ ಬೀರುತ್ತದೆ. ಹಾಗೆ ಪ್ರೇರಿತವಾದ





ನಮ್ಮ ಮನಸ್ಸು ಸತ್ಯವನ್ನರಿಯದೆ ಏನೇನನ್ನೋ ಮಾಡುತ್ತಾ, ಮತ್ತಷ್ಟು ವಾಸನೆಗಳನ್ನು, ಗುಣಗಳನ್ನು ಸಂಚಯನ ಮಾಡುತ್ತಾ ಆತ್ಮವನ್ನು ಸೊರಗಿಸುತ್ತದೆ.

ನಮ್ಮ ಆಸೆಗಳೇನು? ಮತ್ತು ನಮಗೆ ಏನು ಬೇಕು? ಎಂದು ಮೊತ್ತಮೊದಲಿಗೆ ನಿಶ್ಚಯಿಸಿಕೊಳ್ಳಬೇಕು. ನಮಗೆ ಯಾವುದು ಒಳಿತು, ಯಾವುದು ಕೆಡುಕು ಎಂದು ಅರಿತಿಕೊಂಡರೆ ಮತ್ತು ಒಳಿತನ್ನೇ ಪಡೆಯುವ ಉತ್ಕಟ ಅಪೇಕ್ಷೆ ಹೊಂದಿದ್ದಾದರೆ, ಆಗ ನಮ್ಮ ಆಸೆಗಳನ್ನು ನಿಯಂತ್ರಿಸಿಕೊಳ್ಳಬಹುದು. ಇದಕ್ಕೆ ನಮ್ಮ ಪೂರ್ವ ಅನುಭವ ಮತ್ತು ನಾವು ಕೇಳಿ, ಕಂಡ ವಿಚಾರಗಳನ್ನೂ ಆಶ್ರಯಿಸಬಹುದು. ಈ ರೀತಿ ನಮ್ಮನ್ನು ನಾವು ನಿಯಂತ್ರಿಸಿಕೊಳ್ಳುವುದರಿಂದ, ಮಾನ್ಯ ಗುಂಡಪ್ಪನವರು 'ಶೋಷಿಸಾ ವಾಸನೆಯ' ಎಂದು ಹೇಳುವಂತೆ ನಮ್ಮ ವಾಸನೆಗಳನ್ನು ಕಡಿಮೆ ಮಾಡಿಕೊಳ್ಳಬಹುದು. ನಮ್ಮ ಗುಣಗಳು ಮತ್ತು ವಾಸನೆಗಳು ಮತ್ತೆ ಮತ್ತೆ ಚಿಗುರುವ ಬೇರುಗಳಂತೆ. ಅದನ್ನು ಬೇರಿನಿಂದ ಕಿತ್ತರೆ ಮಾತ್ರ ಮತ್ತೆ ಚಿಗುರಲು ಸಾಧ್ಯವಾಗುವುದಿಲ್ಲ.

ಒಂದು ಕಡಲೆ ಬೀಜವನ್ನು ನೆಲದಲ್ಲಿ ನೆಟ್ಟು ಪೋಷಿಸಿದರೆ, ಅದರೊಳಗಿನ ಜೀವ ಕಣ ಮೊಳೆತು ಗಿಡವಾಗುತ್ತದೆ. ಆದರೆ ಆ ಕಡಲೆ ಬೀಜವನ್ನು ಹುರಿದುಬಿಟ್ಟರೆ, ಅದು ಮೊಳೆಯಲಾಗುವುದಿಲ್ಲ. ಇದೇ ರೀತಿ ನಮ್ಮ ಅಂತರಂಗಡಲ್ಲದಗಿರುವ ಸಂಚಿತ ವಾಸನೆ ಮತ್ತು ಗುಣಗಳನ್ನು ಸಂತ್ಸಂಗ, ಧ್ಯಾನ, ಸದ್ವಿದ್ಯೆ ಸದಾಚಾರ, ಮುಂತಾದವುಗಳಿಂದ 'ಶೋಷಿಸಿ ಕೊಂಡರೆ ಈ ಜಗತ್ತಿನಲ್ಲಿನ ನಮ್ಮ ಆಸೆಗಳನ್ನು ಇಲ್ಲವಾಗಿಸಿ, ಇಲ್ಲಿನ ಅಂಟನ್ನು ಇಲ್ಲವಾಗಿಸಿಕೊಂಡು ಆನಂದ ಪಡಬಹುದು. ಆದರೆ ಎಲ್ಲಕ್ಕಿಂತ ಮುಂಚೆ ನಮಗೆ ಈ ಜಗತ್ತಿನೊಂದಿಗಿನ ನಂಟು ಬೇಕೋ ಅಥವಾ ಇಲ್ಲಿಂದ ಮುಕ್ತಿ ಬೇಕೋ ಎನ್ನುವುದನ್ನು ನಿರ್ಧರಿಸಿಕೊಳ್ಳಬೇಕು.

**ಮುಕ್ತಕ – 543**

**ಭಾವಾವೇಶದಿಂ ಮನವಶ್ವದಂತಿರಲಿ |**
**ಧೀವಿವೇಚನೆಯದಕ್ಕೆ ದಕ್ಷರಾಹುತನು ||**
**ತೀವಿದೊಲವಿನ ದಂಪತಿಗಳಾಗೆ ಮನಬುದ್ಧಿ |**
**ಜೀವಿತವು ಜೈತ್ರಕಥೆ – ಮಂಕುತಿಮ್ಮ ||**

ಭಾವಾವೇಶದಿಂ=ಭಾವದ+ಆವೇಶದಿಂ, ಮನವಶ್ವದಂತಿರಲಿ=ಮನವು+ಅಶ್ವದಂತೆ+ಇರಲಿ,
ಧೀವಿವೇಚನೆಯದಕೆ=ಧೀ+ವಿವೇಚನೆಯು+ಅದಕೆ, ತೀವಿದೊಲವಿನ=ತೀವಿದ+ಒಲವಿನ,
ದಂಪತಿಗಳಾಗೆ=ದಂಪತಿಗಳು+ಆಗೆ,
ಧೀ=ಬುದ್ಧಿ, ರಾಹುತ=ಕುದುರೆ ಸವಾರ,ತೀವಿದ=ತುಂಬಿದ, ಜೈತ್ರಕಥೆ=ಗೆಲುವಿನ ಕಥೆ (ಯಶೋಗಾಥೆ)

ಭಾವದ ಆವೇಶದಲ್ಲಿ ಮನಸ್ಸು ಕುದುರೆಯಂತಿರಲಿ, ನಮ್ಮ ಬುದ್ಧಿ ಮತ್ತು ವಿವೇಕಗಳು ದಕ್ಷತೆಯ ಸವಾರನಾಗಲಿ, ಮನಸ್ಸು ಬುದ್ಧಿಗಳು ತುಂಬಿದ ಒಲವಿನ ದಂಪತಿಗಳಂತಿದ್ದರೆ ನಮ್ಮ ಬದುಕೇ ಯಶಸ್ಸಿನ ಕಥೆಯಾಗುತ್ತದೆ, ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮ ಮನಸ್ಸು ಸಾವಿರಾರು ಭಾವಗಳ ಆಗರ, ಸಮುದ್ರದ ಅಲೆಗಳಂತೆ ಈ ಭಾವಗಳು ಕ್ಷಣಕ್ಷಣಕ್ಕೆ ಮೇಲೆ ಬರುತ್ತವೆ ಮತ್ತೆ ಇಳಿಯುತ್ತವೆ. ಎಷ್ಟೋ ಭಾವಗಳ ಏರಿಳಿತಗಳಿಗೆ ಕಾರಣ ನಮಗೆ ಅರ್ಥವಾಗುವುದಿಲ್ಲ. ಈ ಭಾವಗಳ ಆವೇಶದಿಂದ ಮನಸ್ಸು ವಿಚಲಿತವಾಗಿ ಕುಣಿಯುತ್ತದೆ. ಆಸೆ ನಿರಾಸೆಗಳ, ರಾಗ ದ್ವೇಷಗಳ, ಕೋಪ ತಾಪಗಳ, ಕರುಣೆ ವಿಹ್ವಲತೆಗಳ, ಪ್ರೇಮ ಪ್ರೀತಿಗಳ ಹತ್ತು ಹಲವಾರು ಭಾವಗಳು ಮನಸ್ಸಿನ ಘಟಲದಲ್ಲಿ ಕುಣಿಯುತ್ತವೆ. ಇವುಗಳನ್ನು ಹತೋಟಿಯಲ್ಲಿಡದೆ ಹರಿಬಿಟ್ಟರೆ, ಅನಾಹುತವಾಗುತ್ತದೆ ಮತ್ತು ಬದುಕು ದುರ್ಭರವಾಗುತ್ತದೆ. ಹಾಗಾಗಿ ನಮ್ಮ ಬುದ್ಧಿ ಮತ್ತು ವಿವೇಕ ಈ ಮನಸ್ಸಿನಲ್ಲಿ ಕುಣಿಯುವ ಭಾವನೆಗಳ ಕುದುರೆಗೆ ದಕ್ಷತೆಯ ಸವಾರನಂತಾಗಬೇಕು ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ಮನಸ್ಸು ಸಾವಿರಾರು ಭಾವಗಳು ಬಂದುಹೋಗುವ ತಾಣ. ಆದರೆ 'ಬುದ್ಧಿ' ಅವುಗಳನ್ನು ಶೋಧಿಸಿ ತನಗೆ ಹಿತವಾದದ್ದನ್ನು ಅಂತರಂಗಕ್ಕೆ ಇಳಿಸಿಕೊಂಡರೆ ಅದೇ ವಿವೇಕ. ಇದನ್ನೇ 'ಧೀವಿವೇಚನೆ' ಎನ್ನುವುದು. ಈ 'ಧೀ-ವಿವೇಚನೆ'ಗಳು ದಕ್ಷತೆಯಿಂದ ಮನಸ್ಸಿನಮೇಲೆ ಅಧಿಕಾರ ನಡೆಸಿದರೆ ಆಗ ಆಂತರ್ಯಕ್ಕೆ ಇಳಿಯುವುದೆಲ್ಲ, ಒಳ್ಳೆಯದೇ ಆಗಿರುತ್ತದೆ. ಅಂತಹ ಅಂತಃಸತ್ವವನ್ನು ನಾವು ರೂಢಿಸಿಕೊಂಡರೆ ನಮ್ಮ ಮನಸ್ಸು ತಿಳಿಯಾಗಿ, ನಾವು ಮಾಡುವ ಯೋಚನೆ 'ಆತ್ಮಹಿತ'ವಾಗಿ, ತದನುಗುಣವಾಗಿ ನಾವು ಮಾಡುವ ಕೆಲಸಗಳು ಶುಭಪ್ರದವಾಗಿ ಬದುಕು ಗುಂಡಪ್ಪನವರು ಹೇಳುವಹಾಗೆ 'ಜೈತ್ರಯಾತ್ರೆ'ಯಾಗುವುದು.

ಆದರೆ ಈ ಪ್ರಕ್ರಿಯೆಯಲ್ಲಿ ಮೊದಲು ನಮಗೆ ಯಾವುದು ಹಿತ ಎಂದು ಅರಿತುಕೊಳ್ಳಬೇಕು, ಆ ಅರಿವಿನಿಂದ ಅದನ್ನು ಮಾತ್ರ ಗ್ರಹಿಸಿ, ಅಂತರಂಗದಲ್ಲಿ ತುಂಬಿಕೊಳ್ಳುವ ಕಾರ್ಯ ನಡೆಯಬೇಕು. ಹಾಗೆ ತುಂಬಿಕೊಂಡದ್ದನ್ನು ಸೂಕ್ತವಾಗಿ ಉಪಯೋಗಿಸಿಕೊಳ್ಳುವುದನ್ನೂ ಕಲಿಯಬೇಕು. ಹಾಗಾದಾಗ ನಾವು ಜೀವನದಲ್ಲಿ ಬರುವ ಹತ್ತು ಹಲವಾರು ಸಮಸ್ಯೆಗಳನ್ನು ಗೆಲ್ಲಬಹುದು, ಭಾವಾವೇಶಕ್ಕೆ ಒಳಗಾಗದೆ ಧೀ ಮತ್ತು ವಿವೇಚನೆಯಿಂದ ನಡೆದುಕೊಂಡಾಗ ಮಾತ್ರ ಬದುಕು ಸಾರ್ಥಕವಾಗುತ್ತದೆ, ಎನ್ನುವುದೇ ಈ ಮುಕ್ತಕದ ಹೂರಣ.

ಮುಕ್ತಕ - 544 ಅನುಭವದ ಪಾಲ್ಗೊಳುವಿಚಾರ ಮಂಥನವಾಗೆ ।
ಜನಿಯಿಕುಂ ಜ್ಞಾನನವನೀತವದೆ ಸುಖದಂ ॥
ಗಿಣಿಯೋದು ಪುಸ್ತಕಜ್ಞಾನ; ನಿನ್ನನುಭವವೆ ।
ನಿನಗೆ ಧರುಮದ ದೀಪ - ಮಂಕುತಿಮ್ಮ ॥

ಮಂಥನವಾಗೆ=ಮಂಥನವು+ಆಗೆ, ಜ್ಞಾನನವನೀತವದೆ=ಜ್ಞಾನ+ನವನೀತವು+ಅದೆ,ಗಿಣಿಯೋದು=ಗಿಣಿಯ +ಓದು,ನಿನ್ನನುಭವವೆ=ನಿನ್ನ+ಅನುಭವವೆ,

ಪಾಲೊಳು=ಹಾಲೊಳು, ನವನೀತ= ಬೆಣ್ಣೆ, ಸುಖದಂ=ಆನಂದದಾಯಕ, ಗಿಣಿಯೋದು=ಗಿಳಿಪಾಠ, ಧರುಮದ=ಧರ್ಮದ





ಅನುಭವವೆಂಬ ಹಾಲು ವಿಚಾರವೆಂಬ ಕಡಗೋಲಿನಿಂದ ಮಥನಗೊಂಡು, ಜ್ಞಾನವೆಂಬ ಬೆಣ್ಣೆ ಹೊರಬಂದಾಗ, ಅದು ಸುಖವನ್ನು ನೀಡುತ್ತದೆ. ಪುಸ್ತಕದ ಜ್ಞಾನ ಗಿಳಿಪಾಠವಿದ್ದಂತೆ, ಹಾಗಾಗಿ ನಿನಗೆ ನಿನ್ನ ಜೀವನಾನುಭವವೇ ಧರ್ಮದ ದರ್ಶನ ಮಾಡಿಸುವಂತಹ ದೀಪ ಎಂದು, ಬಾಳಿನ ಪರಮ ಸತ್ಯವನ್ನು ಅರುಹಿದ್ದಾರೆ ನಮಗೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಎಲ್ಲರೂ ಬದುಕುತ್ತಾರೆ, ಆದರೆ ಕೆಲವರು ಬದುಕನ್ನು ಅನುಭವಿಸುತ್ತಾರೆ, ಎಂದರೆ ಅನುಭವಗಳನ್ನು ಪಡೆಯುತ್ತಾರೆ. ನಮ್ಮ ಬದುಕಿನುದ್ದಕ್ಕೂ ನಮಗೆ ಹಲವಾರು ಅನುಭವಗಳಾಗುತ್ತವೆ. ನಮಗೆ ಕಷ್ಟಗಳನ್ನು ನೀಡಿದ ಮತ್ತು ಸುಖವನ್ನು ಉಣಿಸಿದ ಬದುಕಿನ ಅನುಭವಗಳು ನಮಗೆ ಏನನ್ನೋ ಹೇಳುತ್ತವೆ, ಅದೇ ನಮಗೆ ಬದುಕಿನ ಪಾಠ, ಪ್ರತೀ ಘಳಿಗೆಯೂ ನಮಗೆ ಇಂತಹ ಪಾಠದ ಧಾರೆ ಸಿಗುತ್ತಲೇ ಇರುತ್ತದೆ. ಆದರೆ ಈ ಪಾಠದಿಂದ ನಾವು ಏನನ್ನಾದರೂ ಕಲಿತರೆ, ಅದು ನಮ್ಮ ಜ್ಞಾನವಾಗುತ್ತದೆ. ಅಂತಹ ಜ್ಞಾನವನ್ನು ಸಂದರ್ಭೋಚಿತವಾಗಿ ನಾವು ಬಳಸಿಕೊಂಡರೆ, ಜೀವನವನ್ನು ಹಸನಾಗಿಸಿಕೊಳ್ಳಬಹುದು.

ನಾವು ಶಾಲಾ ಕಾಲೇಜುಗಳಲ್ಲಿ ಓದುವುದು ಪುಸ್ತಕದ ಜ್ಞಾನ, ಗಿಳಿಪಾಠದಂತೆ ಓದಿದ್ದನ್ನು ಪರೀಕ್ಷೆಯಲ್ಲಿ ಒಪ್ಪಿಸಿ ಮತ್ತೆ ಮರೆತುಬಿಡುವಂತಹ ಜ್ಞಾನ, ಅಲ್ಲಿ ಅನುಭವವಿಲ್ಲ. ಅದು ಹೊಟ್ಟೆಪಾಡಿಗೆ ಮಾರ್ಗವಷ್ಟೇ. ಆದರೆ ಬದುಕಲ್ಲ. ಅವುಗಳಿಂದ ಬದುಕನ್ನು ಪಡೆದು ಜೀವಿಸುವಾಗ ಆಗುವ ಅನುಭವಗಳೇ ಬದುಕು, ಅನುಭವಗಳು ನೀಡುವ ಪಾಠವೇ ನಿಜವಾದ ಜ್ಞಾನ, ಬದುಕುವಾಗ ನಮಗೆ ಆಗುವ ಅನುಭವಗಳಿಗೆ ನಮ್ಮನ್ನು ನಾವು ಒಡ್ಡಿಕೊಳ್ಳಬೇಕು, ಹಾಗೆ ಒಡ್ಡಿಕೊಂಡಾಗ ಆ ಅನುಭವಗಳಲ್ಲಿ ನಾವೂ ಬೆರೆತು ಆ ಅನುಭವಗಳ ಸಾರ ನಮ್ಮ ಅಂತರಂಗಕ್ಕೆ ಇಳಿಯುತ್ತದೆ. ಅಂತರಂಗದಲ್ಲಿ ಆ ಅನುಭವಗಳನ್ನು ನಮ್ಮ ವಿಚಾರ, ವಿವೇಕ ಮತ್ತು ವಿಮರ್ಶೆಗೆ ಒಳಪಡಿಸಿದರೆ, ಅಲ್ಲಿ ಮಂಥನವಾಗಿ ಶುದ್ಧ ಜ್ಞಾನ, ಮೊಸರು ಕಡೆದಾಗ ಸಿಗುವ ಬೆಣ್ಣೆಯಂತೆ, ನಮಗೆ ಲಭ್ಯವಾಗುತ್ತದೆ, ಹಾಗೆ ಲಭ್ಯವಾದ ಜ್ಞಾನ ನಮ್ಮೊಳಗೆ ಉಳಿದು ನಮ್ಮ ಸ್ವಭಾವವಾಗುತ್ತದೆ. ಆದರೆ ಒಂದೇ ವಿಚಾರ ಬೇರೆ ಬೇರೆಯವರಲ್ಲಿ ಭಿನ್ನಭಿನ್ನ ಅನುಭವವನ್ನು ನೀಡಬಹುದು, ಹಾಗೆ ಅವರವರು ಪಡೆದ ಭಿನ್ನವಾದ ಅನುಭವಗಳು ಮತ್ತು ಅದರಿಂದುಂಟಾಗುವ ಜ್ಞಾನವು ಭಿನ್ನವಾದರೂ ಸತ್ಯದಿಂದ ದೂರವಾಗಿರಬಾರದು.

ವಿಪರ್ಯಾಸವೆಂದರೆ ಇಂದು ಯಾರಿಗೂ ಸಮಯವಿಲ್ಲ. ಬದುಕಿನ ಓಟದಲ್ಲಿ ಯಾವುದನ್ನೂ ನಾವು ಅನುಭವಿಸುವುದೇ ಇಲ್ಲ. ಒಂದು ಪುಸ್ತಕವನ್ನು ಓದಿದಾಗಲೋ, ಒಬ್ಬರೊಡನೆ ವಿಚಾರ ವಿನಿಮಯ ಮಾಡಿಕೊಂಡಾಗಲೋ, ಒಂದು ನೈಸರ್ಗಿಕ ದೃಶ್ಯವನ್ನು ನೋಡಿದಾಗಲೋ, ಅಷ್ಟೇಕೆ ಒಂದು ರುಚಿಕರವಾದ ತಿನಿಸನ್ನು ತಿಂದಾಗಲೋ, ಅದರ ಸಾರವನ್ನು ಅನುಭವಿಸಿದರೆ ಅದರ ರುಚಿ ಮತ್ತಷ್ಟು ಹೆಚ್ಚಾಗಿ ಅದೊಂದು ಅನುಭವವಾಗುತ್ತದೆ. ಹಾಗಲ್ಲದೆ ಕೇವಲ ಕಾಟಾಚಾರಕ್ಕೆ ಬಲಿಯಾದರೆ ನಮಗೆ ಅನುಭವವಾಗುವುದೇ ಇಲ್ಲ. ಅನುಭವವೇ ಇಲ್ಲದಮೇಲೆ ಜ್ಞಾನವಿಲ್ಲವೆಂದೇ ಅರ್ಥ. ಹಾಗಾಗಿ ಅನುಭವಿಸಬೇಕು ಮತ್ತು ಅನುಭವದಿಂದ ಜ್ಞಾನ ಪಡೆಯಬೇಕು. ಆಗ ಬದುಕು ಸಾರ್ಥಕವಾಗುತ್ತದೆ.

**ಮುಕ್ತಕ – 545**

**ಬುದ್ಧಿಪ್ರಕಾಶದಿಂದಂತರನುಭವಶೋಧೆ ।**
**ಸಿದ್ಧ ವಾ ಶೋಧೆಯಿಂ ಸತ್ಯಸಂವೀಕ್ಷೆ ॥**
**ಶುದ್ಧಸತ್ಯವ ಜೀವಿತಪ್ರಶ್ನೆಗನ್ವಯಿಪ ।**
**ಪದ್ಧತಿಯೆ ಧರ್ಮವೆಲೊ - ಮಂಕುತಿಮ್ಮ ॥**

ಬುದ್ಧಿಪ್ರಕಾಶದಿಂದಂತರನುಭವಶೋಧೆ= ಬುದ್ಧಿಪ್ರಕಾಶದಿಂದ+ಅಂತರ+ಅನುಭವ+ಶೋಭೆ, ಸಿದ್ಧವಾ=ಸಿದ್ಧವು+ಆ, ಜೀವಿತಪ್ರಶ್ನೆಗನ್ವಯಿಪ= ಜೀವಿತ+ಪ್ರಶ್ನೆಗೆ+ಅನ್ವಯಿಪ, ಧರ್ಮವೆಲೊ= ಧರ್ಮವು+ಎಲೋ, ಶೋಭೆ=ಪ್ರಭೆ ಬೆಳಕು, ಸತ್ಯಸಂವೀಕ್ಷೆ=ಸತ್ಯದ ವಿಚಾರಮಂಥನ, ಅನ್ವಯಿಪ=ಅನ್ವಯಿಸಿಕೊಳ್ಳುವ

ನಮ್ಮ ಅಂತರಂಗದ ಅನುಭವವು ಬುದ್ಧಿಯಿಂದ ಜಿಜ್ಞಾಸೆಗೆ ಒಳಪಟ್ಟಾಗ, ಅದು ಬೆಳಗಿ ಆ ಬೆಳಕಿನಲ್ಲಿ ಅರಿವು ಅರಳಿ, ಮತ್ತಷ್ಟು ಶೋಧನೆ ನಡೆದಾಗ ಸತ್ಯವು ಗೋಚರವಾಗುತ್ತದೆ. ಆ ಶುದ್ಧ ಸತ್ಯವನ್ನು ನಮ್ಮ ಬದುಕಿನ ಹಲವಾರು ಪ್ರಶ್ನೆಗಳಿಗೆ ಅನ್ವಯಿಸುವ ಪದ್ಧತಿಯೇ ಧರ್ಮ, ಎಂದು, ನಮ್ಮ ಅಂತರಂಗದಲ್ಲಿ ನಡೆಯಬೇಕಾದ ಜಿಜ್ಞಾಸೆಗೆ ಒಂದು ಮಾರ್ಗವನ್ನು ತೋರಿದ್ದಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ. ನಮಗೆ ಆಗುವ ಹಲವಾರು ಅನುಭವಗಳು ನಮ್ಮಲ್ಲಿ ಜಿಜ್ಞಾಸೆಯನ್ನುಂಟುಮಾಡಬೇಕು. ಅಂತರಂಗದ ಜಿಜ್ಞಾಸೆಯಲ್ಲಿ ನಾವು ಆ ಅನುಭವಗಳ ಕಾರಣ, ಸ್ವರೂಪ, ವ್ಯಾಪ್ತಿ ಮತ್ತು ಪರಿಣಾಮಗಳನ್ನು ಕಂಡುಕೊಳ್ಳಬೇಕು. ಹಾಗೆ ಕಂಡುಕೊಂಡ ಅನುಭವಗಳ ಲಕ್ಷಣಗಳು ನಮ್ಮ ಬದುಕಿನಲ್ಲಿ ಉದ್ಭವವಾಗುವ ಹತ್ತು ಹಲವಾರು ಪ್ರಶ್ನೆಗಳಿಗೆ ಉತ್ತರವನ್ನು ಕೊಡುವಂತಿರಬೇಕು. ಹಾಗಾಗದೆ ಅನುಭವವು ಕೇವಲ ಮತ್ತೊಂದು ಘಟನೆಯಂತಾದರೆ, ಅದರಿಂದ ನಾವು ಏನನ್ನೂ ಕಲಿಯದೇ ಹೋದರೆ, ಆ ಅನುಭವವೂ ವ್ಯರ್ಥ ಮತ್ತು ಅದರಲ್ಲಿ ನಾವು ಕಳೆದ ನಮ್ಮ ಜೀವಿತ ಕಾಲವೂ ವ್ಯರ್ಥ. ವ್ಯರ್ಥ ಅನುಭವಗಳ ಸಾಲೇ ನಮ್ಮ ಜೀವನವಾದರೆ ಖಂಡಿತ ನಮ್ಮ ಬದುಕೇ ವ್ಯರ್ಥವೆನ್ನುವುದರಲ್ಲಿ ಸಂದೇಹವೇ ಇಲ್ಲ.

ಕಲಿಯಲು ಎಲ್ಲ ಅನುಭವಗಳೂ ನಮಗೇ ಆಗಬೇಕೆಂದೇನಿಲ್ಲ. ಹಾಗೆ ಎಲ್ಲ ಅನುಭವವೂ ನಮಗೇ ಆಗಲು ಸಾಧ್ಯವೂ ಇಲ್ಲ. ಹಾಗಾಗಿ ನಮಗೆ ಕಲಿಯಲು ನಮ್ಮ ಅನುಭವಗಳ ಜೊತೆಗೆ, ನಮ್ಮ ಪೂರ್ವಜರ ಅನುಭವಗಳು, ನಮ್ಮ ಸಮಕಾಲೀನರ ಅನುಭವಗಳೂ ಸಹ ಸಹಾಯಮಾಡುತ್ತವೆ. ಇದನ್ನು ನಾವು ಓದಿ, ಕೇಳಿ, ನೋಡಿ

ಅರಿತುಕೊಳ್ಳಬಹುದು. ಅದೂ ಸಹ ಕಲಿಕೆಯ ಒಂದು ಮಾರ್ಗವಷ್ಟೇ? ಅನುಭವದ ವಿಚಾರವನ್ನು ಅಂತರಂಗದಲ್ಲಿ ಇಳಿಸಿಕೊಂಡು ಮಂಥನ ಮಾಡಬೇಕು. ಹಾಗೆ ಮಥಿಸಿ ಗುಂಡಪ್ಪನವರು ಹೇಳುವ 'ಶುದ್ಧ ಸತ್ವ'ವನ್ನು ಅರಿತುಕೊಳ್ಳಬೇಕು. ಹಾಗೆ ಅರಿತ ಆ ಶುದ್ಧ ಸತ್ವವೇ ನಮಗೆ ಸತ್ಯದ ಬೆಳಕಾಗಿ, ನಮ್ಮ ಬದುಕಿನ ಹಾದಿಯಲ್ಲಿ ಎದುರಾಗುವ ಹಲವಾರು ಪ್ರಶ್ನೆಗಳಿಗೆ ಉತ್ತರವನ್ನೀಯುತ್ತದೆ. ಇದರಿಂದ ನಮ್ಮ ಜ್ಞಾನದ ಹರಿವು ವಿಶಾಲವಾಗುತ್ತದೆ. ಈ ಜ್ಞಾನದ ಬಲದಿಂದಲೇ ನಾವು 'ನಿವಾರ್ಯವನ್ನು' ನಿವಾರಿಸಿಕೊಳ್ಳುವುದು ಮತ್ತು 'ಅನಿವಾರ್ಯ'ವನ್ನು ಧೈರ್ಯದಿಂದ ಎದುರಿಸುವುದು.





ಅಂತರಂಗವನ್ನು ಸದಾ ತೆರೆದಿಟ್ಟುಕೊಳ್ಳಬೇಕು. ಏಕೆಂದರೆ ಯಾವ ಹೊತ್ತಿನಲ್ಲಿ, ಯಾವ ಅನುಭವ ಒಳಗೆ ಬರುತ್ತದೆಯೋ ನಮಗೆ ಗೊತ್ತಿರುವುದಿಲ್ಲ. ಮನಸ್ಸು ಬುದ್ಧಿಗಳ ಸಹಾಯದಿಂದ ಅವುಗಳನ್ನು ಅರಿತು, ಮಥಿಸಿ, ಸತ್ವವನ್ನು ನಮ್ಮದಾಗಿಸಿಕೊಂಡರೆ, ಆಗ ಬದುಕು ಕಷ್ಟವೋ ಅಥವಾ ಸುಖವೋ ಹೇಗಿದ್ದರೂ ತಾಳಿಕೊಂಡು ಬಾಳುವಂತಹ ಶಕ್ತಿ ನಮಗೆ ಬರುತ್ತದೆ ಮತ್ತು ಇದೇ ಬದುಕಬೇಕಾದ ಕ್ರಮ ಎನ್ನುವುದೇ ಈ ಮುಕ್ತಕದ ಹೂರಣ.

**ಮುಕ್ತಕ – 546**

**ಶ್ರೀಯನಾಯುವ ಬಲವ ಜಯವ ಬೇಡಿರ್ದೋಡಂ |**
**ಗಾಯತ್ರಿಯನೆ ಪರಮಮಂತ್ರವೆಂದಾರ್ಯರ್ ||**
**ಧೀಯಂ ಪ್ರಚೋದಿಸೆಂದನುದಿನದಿ ಬೇಡಿದರು |**
**ಶ್ರೇಯಸ್ಸು ಧೀಮಹಿಮೆ -ಮಂಕುತಿಮ್ಮ ||**

ಶ್ರೀಯನಾಯುವ = ಶ್ರೀಯನು+ಆಯುವ, ಪರಮಮಂತ್ರವೆಂದಾರ್ಯರ್=ಪರಮ+ಮಂತ್ರವು +ಎಂದು+ಆರ್ಯರ್. ಪ್ರಚೋದಿಸೆಂದನುದಿನದಿ=ಪ್ರಚೋದಿಸು+ಎಂದು+ಅನುದಿನದಿ, ಶ್ರೀ=ಶ್ರೇಯಸ್ಸು, ಆಯುವ=ಬಯಸುವ, ಬೇಡಿದೊರ್ಡಂ=ಬೇಡುವಾಗ, ಆರ್ಯ= ಸನಾತನದ ಪೂರ್ವಜರು, ಧೀಯಂ=ಬುದ್ಧಿಯನ್ನು, ಪ್ರಚೋದಿಸು=ತೀಕ್ಷ್ಯಗೊಳಿಸು, ಚೂಪಾಗಿಸು, ಅನುದಿನದಿ=ಪ್ರತಿನಿತ್ಯವೂ.

ಶ್ರೇಯಸ್ಸನ್ನು ಬಯಸಿ ಅದರಿಂದ ಬಲವನ್ನು ಮತ್ತು ಯಶಸ್ಸನ್ನು ಬೇಡುವುದಕ್ಕೆ 'ಗಾಯತ್ರಿ' ಮಂತ್ರವನ್ನೇ ಪರಮೋಚ್ಚ ಮಂತ್ರವೆಂದು ಕಂಡುಕೊಂಡ ನಮ್ಮ ಸನಾತನದ ಪೂರ್ವಜರು, ನಮ್ಮ ಬುದ್ಧಿ ತೀಕ್ಷ್ಣಗೊಳ್ಳಲಿ. ಮತ್ತಷ್ಟು ಮೊನಚಾಗಲಿ, ಎಂದು ಪ್ರತಿನಿತ್ಯವೂ ಬೇಡಿದರು. ಏಕೆಂದರೆ ಧೀ ಎಂದರೆ ಉತ್ತಮ ಬುದ್ಧಿಮತ್ತೆ, ಮನುಷ್ಯನ ಶ್ರೇಯಸ್ಸಿಗೆ ದಾರಿ ಎಂದು 'ಧೀ' ಮಹಿಮೆಯನ್ನು ಈ ಮುಕ್ತಕದಲ್ಲಿ ನಮಗೆ ಅರುಹಿದ್ದಾರೆ ಮಾನ್ಯ ಗುಂಡಪ್ಪನವರು.

ಜ್ಞಾನವು ತನ್ನಷ್ಟಕ್ಕೆ ತಾನೇ ಬರುವುದಿಲ್ಲ. ಅನುಭವಗಳ ಮಂಥನದಿಂದ ಅಂತರಂಗದಲ್ಲಿ ಉದ್ಭವವಾಗುವ ಸತ್ಯದ ಸತ್ವವೇ ಜ್ಞಾನ, ಅಂತಹ ಜ್ಞಾನವನ್ನು ಪಡೆಯುವುದೇ ಒಂದು ಸಾಧನೆ, ಆ ಸಾಧನೆಗೆ ಮಾರ್ಗವೇನು ಎಂದು ನಮ್ಮ ಪೂರ್ವಜರು ಧೀರ್ಘಕಾಲ ತಪಸ್ಸಿನಿಂದ ಕಂಡುಕೊಂಡದ್ದೇ 'ಗಾಯತ್ರಿ' ಮಂತ್ರ ಮಹರ್ಷಿ ವಿಶ್ವಾಮಿತ್ರನಿಗೆ ಸಾಕ್ಷಾತ್ ಸರಸ್ವತಿಯೇ ಬೋಧಿಸಿದ್ದು ಎಂದು ಪುರಾಣವೆನ್ನುತ್ತದೆ. 'ಭೂಃ ಭುವಃ ಮತ್ತು ಸುವಃ ಎನ್ನುವ ಮೂರು ಸ್ಥರಗಳಲ್ಲಿ ಪ್ರಭಾವವನ್ನು ಬೀರುವ, ಹೇ ಸೂರ್ಯನೇ ನಿನ್ನಲ್ಲಿರುವ ದಿವ್ಯ ತೇಜಸ್ಸಿಗೆ (ದೇವಸ್ಯ ಭರ್ಗಃ) ನಾನು ಶರಣಾಗುತ್ತೇನೆ. ಹೀಗೆ ನಾನು ಶರಣಾಗುವುದರಿಂದ ನನ್ನ ಬುದ್ಧಿ ಪ್ರಚೋದಿತವಾಗಲಿ ಮತ್ತು ಇನ್ನಷ್ಟು ತೀಕ್ಷ್ಣವಾಗಲಿ' ಎಂದು, ನಮ್ಮ ಮನಸ್ಸು ಬುದ್ಧಿಗಳನ್ನು ಶುದ್ದೀಕರಿಸಿಕೊಳ್ಳುವುದಕ್ಕೆ ಸಹಾಯ ಮಾಡುವುದೇ ಈ 'ಗಾಯತ್ರಿ' ಮಂತ್ರ ನಮ್ಮನ್ನು ನಾವೇ ತಿದ್ದಿಕೊಳ್ಳುವ

ಮಂತ್ರವಿದು. ಮತ್ತೊಬ್ಬರು ಹೇಳಿಕೊಡುವ ಪಾಠಕ್ಕಿಂತ, ನಮಗೆ ನಾವೇ ಹೇಳಿಕೊಳ್ಳುವ ಪಾಠ ಬಹಳ ಪ್ರಭಾವಿಯಾಗಿಯೂ ಮತ್ತು ಸೂಕ್ತವಾಗಿಯೂ ಇರುತ್ತದೆ.

ಪ್ರತಿನಿತ್ಯ ಹೇಳಬೇಕು ಎಂದು ಹೇಳಿದ್ದಾರೆ. ನಮ್ಮ ಪೂರ್ವಜರು, ಈ ಜಗತ್ತಿನ ಸಂಪರ್ಕದಲ್ಲಿರುವಾಗ ನಮ್ಮ ಮನಸ್ಸಿನೊಳಕ್ಕೆ ನಾವು ಕಂಡ, ಕೇಳಿದ ಎಲ್ಲ ವಿಷಯ ಮತ್ತು ವಿಚಾರಗಳು ಬಂದು ನುಗ್ಗುತ್ತಿರುವಾಗ ಮನಸ್ಸನ್ನು ಶುದ್ಧವಾಗಿಟ್ಟುಕೊಳ್ಳಲು, ಇದೊಂದೇ ಮಾರ್ಗ, ತೆರೆದ ಬಾಗಿಲು ಮತ್ತು ಕಿಟಕಿಗಳಿಂದ ಮನೆಯೊಳಕ್ಕೆ ಬರುವ ಧೂಳನ್ನು ನಾವು ಪ್ರತಿನಿತ್ಯ ಗುಡಿಸಿ ಸ್ವಚ್ಛಮಾಡುವುದಿಲ್ಲವೇ? ಅದೇ ರೀತಿ ನಮ್ಮ ಇಂದ್ರಿಯಗಳ ಮೂಲಕ ಮನಸ್ಸಿನೊಳಕ್ಕೆ ನುಗ್ಗುವ ವಿಚಾರಗಳಲ್ಲಿನ ಕಸವನ್ನು ತೆಗೆದು ರಸವನ್ನು ಮಾತ್ರ ಉಳಿಸಿಕೊಳ್ಳಲು ಮತ್ತು ನಮ್ಮನ್ನು 'ನಾವೇ' ಸರಿಪಡಿಸಿಕೊಳ್ಳುವ ಏಕೈಕ ಮಾರ್ಗವೇ ನಮ್ಮ ಸನಾತನರು ಕಂಡುಕೊಂಡ ಈ 'ಗಾಯತ್ರಿ' ಮಂತ್ರ.

ಮನುಷ್ಯನಿಗೆ 'ಧೀ' ಎಂದರೆ ಬುದ್ಧಿಯೇ ಶ್ರೇಯಸ್ಸನ್ನು ಕೊಡುವುದು, ಆದರೆ ಆ ಬುದ್ಧಿ 'ಸದ್ಬುದ್ಧಿ'ಯಾಗಬೇಕು. ಸದಾಚಾರ ಮತ್ತು ಸದ್ವಿಚಾರಗಳನ್ನೊಳಗೊಂಡ ಬುದ್ಧಿಯಾಗಬೇಕು. ಅಂತಹ ಬುದ್ಧಿಯೇ ನಮಗೆ ಶ್ರೇಯಸ್ಸನ್ನು ತರಬಲ್ಲದು, ಇದನ್ನೇ ಮಾನ್ಯ ಗುಂಡಪ್ಪನವರು 'ಶ್ರೇಯಸ್ಸು ಧೀಮಹಿಮೆ' ಎಂದರು. ಕಳ್ಳನಿಗೆ ಅಥವಾ ಕೊಲೆಗಡುಕನಿಗೂ ಬುದ್ಧಿ ಇರುತ್ತದೆ. ಆದರೆ ಅದು ರಜಸ್ತಮೋಗುಣ ಪ್ರಚೋದಿತವಾಗಿ, ಅನ್ಯರಿಗೆ ಹಾನಿಕರವಾಗಿ ಮತ್ತು ಆತ್ಮಘಾತಕವಾಗಿರುತ್ತದೆ. ಸತ್ವಗುಣ ಪ್ರಧಾನವಾದ 'ಧೀ' ನಮಗೆ ಬೇಕೆಂದರೆ, ನಾವು ಆ 'ಪರಮಪ್ರಭೆ' ಗೆ ಅಥವಾ ದೈವೀ ತೇಜಸ್ಸಿಗೆ ಶರಣಾಗಬೇಕು. ಜಗತ್ತಿನ ಕಣ್ಣು ಕುಕ್ಕುವ ಆಕರ್ಷಣೆಯಲ್ಲಿ ಅದು ಸುಲಭವಲ್ಲ ಆದರೆ ಪ್ರಯತ್ನವನ್ನು ಮಾಡಬೇಕು.

**ಮುಕ್ತಕ – 547**

**ಮತಿ ನಯನದಂತೆ ಮುಂದಿರ್ಪುದನು ನೋಡುವುದು |**
**ಮಿತವದರ ಕೆಲಸ, ಹೆಳವನ ಚಲನೆಯಂತೆ ||**
**ಗತಿಶಕ್ತಿಯದಕೆ ಮನವೆಂಬ ಚರಣದ ಬಲದೆ |**
**ಮತಿಬಿಟ್ಟ ಮನ ಕುರುಡು ಮಂಕುತಿಮ್ಮ ||**

ಮುಂದಿರ್ಪುದನು= ಮುಂದೆ+ಇರ್ಪುದನು, ಮಿತವದರ= ಮಿತವು+ಅದರ,ಗತಿಶಕ್ತಿಯದಕೆ= ಗತಿಶಕ್ತಿಯು+ಅದಕೆ, ಮತಿ=ಬುದ್ಧಿ ನಯನ= ಕಣ್ಣು, ಹೆಳವನ=ಅಂಗವಿಕಲನ

ನಮ್ಮ ಬುದ್ಧಿಯು, ಕಣ್ಣುಗಳ ಮೂಲಕ ಮುಂದಿರುವುದನ್ನು ನೋಡುತ್ತದೆ. ಕುಂಟನ ಚಲನೆಯಂತೆ ಬುದ್ಧಿಯ ಕೆಲಸವೂ ಮಿತವಾದದ್ದು. ಮನಸ್ಸೇ ಅದಕ್ಕೆ ಕಾಲು. ಮನಸ್ಸಿನ ಶಕ್ತಿಯಿಂದಲೇ ಬುದ್ಧಿಯೂ ನಡೆಯುತ್ತದೆ. ಆದರೆ ಬುದ್ಧಿಯ ಬಲವಿಲ್ಲದ ಮನಸ್ಸು ಕೇವಲ ಕುರುಡು ಎಂದು ಮನಸ್ಸು ಬುದ್ಧಿಗಳ ಪರಸ್ಪರ ಸಂಬಂಧವನ್ನು ನಮಗೆ ಅರುಹಿದ್ದಾರೆ ಈ ಮುಕ್ತಕದಲ್ಲಿ.





ನಮ್ಮ ಇಂದ್ರಿಯಗಳ ಮೂಲಕ ಮನಸ್ಸು, "ವಸ್ತು, ವ್ಯಕ್ತಿ ಮತ್ತು ವಿಷಯಗಳನ್ನು" ಅರಿತುಕೊಳ್ಳುತ್ತದೆ. ಹಾಗೆ ನಮ್ಮ ಅರಿವಿಗೆ ಬಂದ ವಿಷಯಗಳು ಬುದ್ಧಿಯಲ್ಲಿ ಶೇಖರಣೆಯಾಗುತ್ತವೆ. ಹಾಗೆ ಶೇಖರಣೆಯಾದ ವಿಷಯಗಳನ್ನು ಬುದ್ಧಿ ಸಮರ್ಪಕವಾಗಿ ಸಮಯೋಚಿತವಾಗಿ ಉಪಯೋಗಿಸುತ್ತದೆ. ಇದನ್ನೇ ನಮ್ಮ ಅಂತರಂಗದ ಜ್ಞಾನವೆನ್ನಬಹುದು. ಈ ಜ್ಞಾನದ ಬಲದಿಂದಲೇ ಬುದ್ಧಿಯು ವಿಷಯಗಳ ಸೂಕ್ತಾಸೂಕ್ತತೆ, ಯುಕ್ತಾಯುಕ್ತತೆಯನ್ನು ನಿರ್ಧರಿಸುತ್ತದೆ. ಇದೇ ವಿವೇಕ, ಪಂಚೇಂದ್ರಿಯಗಳ ಸಹಾಯದಿಂದ ನಮ್ಮ ಮನಸ್ಸಿನ ಘಟಲಕ್ಕೆ ಸಾವಿರಾರು ವಿಷಯಗಳ ಪರಿಚಯವಾಗುತ್ತದೆ. ಅವುಗಳಲ್ಲಿ ಕೇವಲ ಕೆಲವನ್ನು ಮಾತ್ರ ಬುದ್ಧಿಯ ಅಂಗಳಕ್ಕೆ ಹಾಕಲಾಗುತ್ತದೆ. ಬುದ್ದಿಯೊಂದು ಪೆದ್ದು, ಏನನ್ನು ಹಾಕಿದರೂ ತೆಗೆದುಕೊಳ್ಳುತ್ತದೆ. ಆದರೆ ವಿವೇಚನೆ ಇದು ಸರಿ ಇದು ತಪ್ಪು' ಎನ್ನುವ ವಿಶ್ಲೇಷಣೆ ಮಾಡುತ್ತದೆ. ನಮ್ಮ ಒಳಿತು-ಕೆಡುಕುಗಳು, ಸರಿ-ತಪ್ಪುಗಳು ಈ ವಿವೇಚನೆಯ ಮೇಲೆ ಆಧಾರಪಟ್ಟಿರುತ್ತದೆ.

ಹೀಗೆ ಬುದ್ಧಿ, ಮನಸ್ಸು ಏನನ್ನು ಕಳುಹಿಸುತ್ತದೋ ಅದನ್ನು ಇಟ್ಟುಕೊಳ್ಳುತ್ತದೆ ಮತ್ತು ಮನಸ್ಸು ಮತ್ತು ವಿವೇಚನೆ ಹೇಗೆ ಹೇಳುತ್ತದೋ ಹಾಗೆ ಮಾಡುತ್ತದೆ, ಹಾಗಾಗಿ ಮಾನ್ಯ ಗುಂಡಪ್ಪನವರು ಹೇಳುವಂತೆ "ಮಿತವದರ

ಕೆಲಸ", ಮನಸ್ಸು ಚುರುಕಾದರೆ ಬುದ್ಧಿಯೂ ಚುರುಕಾಗುತ್ತದೆ. ಹಾಗಾಗಿ ಮನದ ಶಕ್ತಿಯೇ ಅದಕ್ಕೆ ಬಲ. ಈ ಮನಸ್ಸು ಬುದ್ಧಿ ಮತ್ತು ವಿವೇಚನೆಗಳ ಕ್ರಿಯಾಶೀಲತೆ ಮತ್ತು ಶುದ್ಧತೆಗಳು ವ್ಯಕ್ತಿಯ ಸಮಗ್ರ ಸಂಸ್ಕಾರದ ಮೇಲೆ ನಿರ್ಭರವಾಗುತ್ತದೆ, ಈ ಮನಸ್ಸಿನ ಪ್ರವೃತ್ತಿಯನ್ನು ನಿಗ್ರಹಿಸಿ ಸಂಸ್ಕರಿಸುವುದೇ ನಮ್ಮೆಲ್ಲ ಓದು ವಿಧ್ಯಾಭ್ಯಾಸ ಮತ್ತು ಕಲಿಕೆಯ ಮೂಲ ಧ್ಯೆಯ. ಹೀಗೆ ಸಂಸ್ಕರಣಗೊಂಡ ಮನಸ್ಸಿನಲ್ಲಿ ಉತ್ತಮ ವಿವೇಚನೆ ಇರುತ್ತದೆ.

ಮನಸ್ಸಿನ ಶುದ್ಧತೆ ಬುದ್ಧಿಯ ಶುದ್ಧತೆಯನ್ನು ಕಾಯುತ್ತದೆ, ಬುದ್ಧಿಯ ಶುದ್ಧತೆ ವಿವೇಚನೆಯನ್ನು ಬೆಳೆಸುತ್ತದೆ. ವಿವೇಚನೆಯಿರುವ ವ್ಯಕ್ತಿಯಲ್ಲಿ ವಿವೇಕದಿಂದ ಕೂಡಿದ ಕಾರ್ಯಕ್ಷಮತೆಯಿದ್ದು, ಕಷ್ಟ ಮತ್ತು ದುಃಖದಿಂದ ದೂರವಿಡುತ್ತದೆ. ಆದರೆ ಈ ವಿವೇಚನೆ ಬರುವುದು ಅನುಭವದಿಂದ. ಬದುಕಿನಲ್ಲಿ ಎಡವಿ, ಬಿದ್ದು, ಎದ್ದು, ಕಲಿತದ್ದನ್ನು ಮರೆತು, ಹೊಸತನ್ನು ಕಲಿತು, ಹೀಗೆ ನಾನಾ ಮಜಲುಗಳಿಂದ ಹಾದು ಬಂದಾಗ ಪಡೆದ ಅನುಭವ, ಜೀವನದ ಮುಂದಿನ ಹಾದಿಯನ್ನು ಸುಗಮಗೊಳಿಸುತ್ತದೆ. ಪ್ರತಿ ವ್ಯಕ್ತಿಗೂ "ವಸ್ತು ವಿಷಯ ಮತ್ತು ವ್ಯಕ್ತಿ" ಗಳನ್ನು ಆಯ್ದುಕೊಳ್ಳುವ ಸಂಪೂರ್ಣ ಸ್ವಾತಂತ್ರ್ಯವಿದೆಯಾದ್ದರಿಂದ, ನಾವು ನಮ್ಮ ಮನಸ್ಸುಗಳಿಗೆ ತಂದುಕೊಳ್ಳುವ ವಿಚಾರ ಶುದ್ಧತೆಯನ್ನು ಕಾದುಕೊಂಡರೆ ಬುದ್ಧಿ, ವಿವೇಚನೆ ಮತ್ತು ಸಂಸ್ಕಾರಗಳನ್ನು ಕಾದುಕೊಂಡತಾಗುತ್ತದೆ. ಮಾನ್ಯ ಗುಂಡಪ್ಪನವರು 'ಮತಿಬಿಟ್ಟ ಮನ ಕುರುಡು' ಎಂದು ಹೇಳುವಂತೆ ಬುದ್ಧಿ ಬಲವಾದರೆ ಮನಸ್ಸೂ ಸಹ ಬಲವಾಗುತ್ತದೆ, ಇಲ್ಲದಿದ್ದರೆ ಮನಸ್ಸು ಬಲಹೀನವಾಗಿ ವ್ಯಕ್ತಿಯ ಪತನಕ್ಕೆ ಕಾರಣವಾಗುತ್ತದೆ.

**ಮುಕ್ತಕ – 548** **ಪುರುಷ ಬುದ್ಧಿಯೆ ಸಾಕು ವರಸಿದ್ಧಿಗೆಂದಲ್ಲ ।**
**ಪರಮೇಶಕರುಣೆಯನವಶ್ಯವೆಂದಲ್ಲ ॥**
**ಚರಣ ನಡೆವನಿತು ಕಣ್ಣರಿವನಿತು ದೂರ ನೀಂ ।**
**ಚರಿಸದಿರೆ ಲೋಪವಲ? – ಮಂಕುತಿಮ್ಮ ॥**

ವರಸಿದ್ಧಿಗೆಂದಲ್ಲ=ವರಸಿದ್ಧಿಗೆ+ಎಂದಲ್ಲ,ಪರಮೇಶಕರುಣೆಯನವಶ್ಯವೆಂದಲ್ಲ=ಪರಮೇಶ+ಕರುಣೆ+ಅನವಶ್ಯವು+ಎಂದಲ್ಲ, ನಡೆವನಿತು=ನಡೆವ+ಅನಿತು,ಕಣ್ಣರಿವನಿತು=ಕಣ್ಣು+ಅರಿವ+ಅನಿತು, ಚರಿಸದಿರೆ=ಚರಿಸದೆ+ಇರೆ, ಲೋಪವಲ=ಲೋಪವು+ಎಲ,
ಪುರುಷ ಬುಧ್ಧಿಯೆ=ಮನುಷ್ಯನ ಬುಧ್ಧಿ ಅಥವಾ ಜ್ಞಾನ, ವರಸಿದ್ಧಿಗೆ=ಪರಮಾನುಭವಕ್ಕೆ (ವರ=ಶ್ರೇಷ್ಠ)

ಜಗತ್ಸೃಷ್ಟಿಯ ಕರ್ತೃವನ್ನು ಅರಿಯಲು ನಮ್ಮ ಬುಧ್ಧಿಯಷ್ಟೆ ಸಾಕು ಎಂದುಕೊಳ್ಳಲಾಗುವುದಿಲ್ಲ, ಅಥವಾ ಆ ಪರಮೇಶ್ವ ರನ ಕೃಪೆಯ ಅವಶ್ಯಕತೆ ಇಲ್ಲವೆಂದು ಅಂದುಕೊಳ್ಳಲಾಗುವುದಿಲ್ಲ. ದೇಹದಲ್ಲಿ ಶಕ್ತಿಯಿರುವಷ್ಟು ಮತ್ತು ವಸ್ತು ವಿಷಯಗಳನ್ನು ನಮ್ಮ ದೃಷ್ಟಿಯಿಂದ ಎಷ್ಟು ಅರ್ಥಮಾಡಿಕೊಳ್ಳಲಾಗುವುದೋ ಅಷ್ಟನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಪಡದಿದ್ದರೆ, ಅದು ನಮ್ಮ ಕರ್ತವ್ಯದಲ್ಲಿ ಲೋಪವಾಗುತ್ತದೆ ಎಂದು, ಪುರುಷ ಪ್ರಯತ್ನ ಮತ್ತು ಪರಮಾತ್ಮನ ಕೃಪೆಗಳ ವಿಶ್ಲೇಷಣೆ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಆ ಪರಮ ಚೇತನವೇ ಇತ್ತಂತಹ ಬುಧ್ಧಿಶಕ್ತಿಯಿಂದ ನಮಗೆ ಯೋಚಿಸಲು ಸಾಧ್ಯವಲ್ಲವೇ? ಆದರೆ ಆ ಯೋಚನೆ, ಮನಸ್ಸು, ಬುಧ್ದಿ, ದೇಹಗಳ ಸಮಗ್ರತೆಯಿಂದಲೇ ಆಗಬೇಕು. ಮನಸ್ಸು, ಬುಧ್ದಿ, ದೇಹಗಳು ಒಂದನ್ನೊಂದನ್ನು ಅಗಲಿ, ಸ್ವತಂತ್ರವಾಗಿ ಇರಲು ಸಾಧ್ಯವೇ ಇಲ್ಲ. ಹಾಗಾಗಿ ಇವುಗಳನ್ನೆಲ್ಲವನ್ನೂ, ಅವುಗಳು ಆ ಪರಮಾತ್ಮನನ್ನು ಅರಿಯಲು ಎಷ್ಟು ಕ್ಷಮತೆಯನ್ನು ಹೊಂದಿವೆಯೋ, ಆ ಕ್ಷಮತೆಯನ್ನು ಪೂರ್ಣತಯಾ ತೊಡಗಿಸಬೇಕು. ಇದನ್ನೇ ಏಕಾಗ್ರತೆಯೆನ್ನುವುದು. ಹಾಗಾಗದೆ, "ಎಲ್ಲವನ್ನೂ ಆ ಪರಮಾತ್ಮನೇ ಮಾಡುತ್ತಾನೆ ಹಾಗಾಗಿ ನನಗೆ ಆ ಜ್ಞಾನವನ್ನು ಅವನೇ ಕೊಡಲಿ" ಎಂದರೆ, ಅದು ನಮ್ಮ ಕರ್ತವ್ಯದ ಲೋಪವಾಗುತ್ತದೆ.

ನಮಗಿರುವ ಸ್ವಲ್ಪ ಶಕ್ತಿಯನ್ನು ನಾವು ಅರಿವನ್ನು ಬೆಳೆಸಿಕೊಳ್ಳಲು ತೊಡಗಿಸಿಕೊಳ್ಳಬೇಕು, ಹಾಗೆ ತೊಡಗಿಸಿಕೊಂಡಾಗ ಅದು ವೃದ್ಧಿಯಾಗುತ್ತದೆ. ಈ ರೀತಿ ವೃದ್ಧಿಯಾದ ಅರಿವಿನಿಂದ ಮತ್ತಷ್ಟು ಅರಿವನ್ನು ಪಡೆಯಬೇಕು. ಈ ಪ್ರಕ್ರಿಯೆ ನಿರಂತರವಾಗಿ ನಡೆದಾಗ ನಮ್ಮ ಪ್ರಯತ್ನ ಸಂಪೂರ್ಣವಾದಾಗ, ಪರಮಾತ್ಮನ ಕೃಪೆಯೂ ಲಭ್ಯವಾಗಿ, ಎಂದೋ ಒಂದು ದಿನ 'ವರ' ಎಂದರೆ ಶ್ರೇಷ್ಠತಮ ಜ್ಞಾನವುಂಟಾಗಿ, ಆ ಪರತತ್ವದ ದರ್ಶನವಾಗುತ್ತದೆ.

ಪ್ರತಿಯೊಬ್ಬರಿಗೂ ಆ ಪರಮಾತ್ಮನನ್ನು ಮತ್ತು ಪರತತ್ವವನ್ನು ಅರಿಯುವ ಶಕ್ತಿ ಮತ್ತು ಯೋಗ್ಯತೆಯಿದ್ದೇ





ಇರುತ್ತದೆ, ಪ್ರಯತ್ನಪಟ್ಟರೆ ಸಿಗುತ್ತದೆ. ನಮ್ಮ ಜ್ಞಾನೇಂದ್ರಿಯಗಳನ್ನು ಉದ್ದೀಪನಗೊಳಿಸಿ, ಮೊದಲು ನಮ್ಮ ಮನಸ್ಸು, ಬುದ್ಧಿ, ದೇಹಗಳನ್ನು ಆ ಜ್ಞಾನವನ್ನು ಬರಮಾಡಿಕೊಳ್ಳಲು ಸಿದ್ಧಪಡಿಸಿಕೊಂಡು (setting the receiver) ಪರಮಾತ್ಮನೊಡನೆ ಧ್ಯಾನದಿಂದ ಸಂಪರ್ಕ ಕಲ್ಪಿಸಿದರೆ, (contact with the transmitter) ಆಗ ಪರತತ್ವದ ಸತ್ವ ನಮ್ಮೊಳಗೆ ಪ್ರವಹಿಸಬಹುದು. ಆದರೆ ಮೊದಲು ನಮಗೆ ಆದ ಬೇಕು ಎನ್ನಿಸಬೇಕು, ಅದನ್ನು ಪಡೆಯಬೇಕೆಂಬ ಇಚ್ಛೆಯನ್ನು ಪ್ರಭಲವಾಗಿಸಿಕೊಳ್ಳಬೇಕು ಮತ್ತು ಶುದ್ಧ ಪ್ರಯತ್ನ ಮಾಡಬೇಕು. ಹಾಗಾದಾಗ ಸತ್ವ ದರ್ಶನ ಖಂಡಿತವಾಗುತ್ತದೆ. ಪ್ರಯತ್ನವೇ ಮಾಡದಿದ್ದರೆ ಅದು ಲೋಪವಾಗುತ್ತದೆ. ನಮಗೆ ಏನು ಬೇಕು ಎನ್ನುವುದನ್ನು ನಿರ್ಧರಿಸಲು ನಾವು ಸಂಪೂರ್ಣ ಸ್ವತಂತ್ರರಲ್ಲವೇ?

**ಮುಕ್ತಕ – 549**

**ವಿಧಿಗೆ ನೀಂ ಕಾರ್ಯ ನಕ್ಷೆಯ ವಿಧಿಸ ಹೊರಡದಿರು ।**
**ಅಧಿಕಾರಿ ನೀನಲ್ಲ; ವಿಧಿ ಬೆಪ್ಪನಲ್ಲ ॥**
**ಹದವರಿತು ವಿಧಿ ತಾನೆ ಕುದುರಿಸುವನೆಲ್ಲವನು ।**
**ಅದಟದಿರು ನೀನವನ -ಮಂಕುತಿಮ್ಮ ॥**

ಹದವರಿತು= ಹದವ+ಅರಿತು, ಕುದುರಿಸುವನೆಲ್ಲವನು=ಕುದಿರಿಸುವ+ಎಲ್ಲವನು,ಅದಟದಿರು=ಅದಟದೆ+ಇರು,

ನೀನವನ=ನೀನು+ಅವನ,

ಅದಟದೆ=ಗದರಿಸದೆ.

ವಿಧಿಗೆ ತನ್ನದೇ ಆದ ಕಾರ್ಯದ ಒಂದು ನಕ್ಷೆಯಿದೆ. ನೀನು ನಿನ್ನ ವಿಧಿಗೆ ಅಧಿಕಾರಿಯಲ್ಲ. ಆ ವಿಧಿ ಬೆಪ್ಪನಲ್ಲ. ವಿಧಿ ನಿನ್ನ ಜೀವನವನ್ನು ಹದವರಿತು ಸೂಕ್ತವಾಗಿ ಸರಿಪಡಿಸುವ (ಕುದುರಿಸುವ). ನೀನು ಅವನನ್ನು ಗದರಿಸದೆ ಇರು ಎಂದು ವಿಧಿಯಾಟದ ಲಕ್ಷಣವನ್ನು ನಮಗೆ ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ವಿಧಿಯೆಂದರೆ, ವಿಧಾತನ ಕಾರ್ಯ ವಿಧಾನ, ಸರ್ವ ಸ್ವತಂತ್ರನಾದ ಆ ವಿಧಾತನ ವಿಧಿಗೆ ಅಧೀನರಾದ ನಾವು ವಿಧಾತನಿಗೆ ಸಲಹೆಗಳನ್ನು ಹೇಳಲಾಗುವುದೇ? ಸಾಧ್ಯವೇ ಇಲ್ಲ. ನಮ್ಮ ಮಾತನ್ನು ಕೇಳುವಂತಹ ಬೆಪ್ಪನೇನಲ್ಲ ಆ ವಿಧಿ. ನಮ್ಮನ್ನು ವಿಧಿಗನುಸಾರವಾಗಿ ನಡೆಸಿಕೊಂಡು, ನಾವು ಹದಗೊಂಡಾಗ ನಮ್ಮ ಬಾಳನ್ನು, ಅವನೇ ಸರಿಪಡಿಸುವನು. ನಾವು ಮಾಡುವ ಪೂಜೆ, ಪುನಸ್ಕಾರ, ಹೋಮ, ಹವನ, ಯಜ್ಞ, ಯಾಗಾದಿಗಳಿಂದಲೋ ಅಥವಾ ಧ್ಯಾನ, ಜಪ ಮುಂತಾದ ವ್ಯಕ್ತಿಗತ ಸಾಧನೆಗಳಿಂದಲೋ, ಆ ಪರಮಾತ್ಮನನ್ನು ಬೆದರಿಸಿ ನಮ್ಮ ವಿಧಿಯನ್ನು ಬದಲಾಯಿಸಿಕೊಳ್ಳಲು ಸಾಧ್ಯವಿಲ್ಲ. ನಮ್ಮ ಪೂರ್ವ ಕರ್ಮಾನುಸಾರ ನಮಗೆ ಏನೇನು ನಡೆಯಬೇಕೋ ಅದನ್ನೆಲ್ಲ ತಪ್ಪಿಸಲು ಸಾಧ್ಯವೇ ಇಲ್ಲ. ನಮ್ಮನ್ನು ನಾವು ಸಂಪೂರ್ಣವಾಗಿ

ಆ ವಿಧಿಗೆ ಒಡ್ಡಿಕೊಳ್ಳದೆ ಬೇರೆ ದಾರಿಯೇ ಇಲ್ಲ. ನಮಗೆ ಆ ವಿಧಿಯ ವಿನ್ಯಾಸವನ್ನು ತಿದ್ದುವ ಅಥವಾ ಪ್ರಶ್ನಿಸುವ ಅಧಿಕಾರವೇ ಇಲ್ಲ. ಅಷ್ಟೇ ಅಲ್ಲ ನಮ್ಮ ಪೂರ್ವಕರ್ಮಗಳಿಂದ ನಾವೇ ನಿರ್ಮಿಸಿಕೊಂಡ ನಮ್ಮ ಹಣೆಯ ಬರಹವನ್ನು ನಾವೇ ಅನುಭವಿಸಬೇಕು.

ಹಾಗೆ ಅನುಭವಿಸುವಾಗ ನಮ್ಮ ಇಂದಿನ ಕರ್ಮವನ್ನು ಸರಿಯಾದ ಮಾರ್ಗದಲ್ಲಿ ನಾವು ನಡೆಸಿಕೊಂಡು ಹೋದರೆ, ಹಿಂದಿನ ಕರ್ಮದಿಂದ ಉಂಟಾದ ವಿಧಿಯ ವಿನ್ಯಾಸದಿಂದ ಬರಬಹುದಾದ ಕಷ್ಟ ಸುಖಗಳನ್ನು ಅನುಭವಿಸಲು ನಮಗೆ ಶಕ್ತಿ ಮತ್ತು ತಾಳ್ಮೆ ಎರಡೂ ಸಿಗಬಹುದು ಮತ್ತು ಮುಂದಿನ ನಮ್ಮ ವಿಧಿ ವಿನ್ಯಾಸವನ್ನು ನಮಗೆ ಅನುಕೂಲವಾಗಿ ತಿದ್ದಿಕೊಳ್ಳಲು ಶಕ್ತಿ ಬರಬಹುದು. ಈ ಮಾರ್ಗದಲ್ಲಿ ನಾವು ಸತ್ಸಂಗ, ಸನ್ಮಾರ್ಗ, ಸದಾಚಾರ, ಸದ್ವಿಚಾರಗಳನ್ನು ಪಾಲಿಸಿದರೆ, ನಮ್ಮನ್ನು ನಾವು ತಿದ್ದಿಕೊಳ್ಳುವ ಮಾರ್ಗದಲ್ಲಿ ಕೊಂಡುಹೋದಂತೆ ಅಲ್ಲವೇ? ಹಾಗೆ ತಿದ್ದಿಕೊಂಡರೆ ನಾವೂ ಸಹ ಆ ಪರಮ ಕೃಪೆಗೆ ಪಾತ್ರರಾಗಿ ನಮ್ಮ ವಿಧಿಯೂ ಬದಲಾಗಬಹುದು.

ಆದರೆ ಸತ್ಪ್ರಯತ್ನ, ತಾಳ್ಮೆ ಮತ್ತು ಸಹನೆ ಬೇಕು. ಅಲ್ಪಮತಿಗಳಾದ ನಾವು ಆ ವಿಧಿಯ ಆಟವನ್ನು ಅರಿಯಲು ಸಾಧ್ಯವೇ ಇಲ್ಲವೆಂದಾದ ಮೇಲೆ ಸುಮ್ಮನೆ ಅದಕ್ಕೆ ಶರಣಾಗುವುದೇ ಲೇಸು. ಹಾಗೆ ಆಗುವುದರಿಂದ ಮನಸ್ಸಿಗೆ ನೆಮ್ಮದಿ ಖಂಡಿತ ಸಿಗುತ್ತದೆ.

**ಮುಕ್ತಕ – 550**

**ತಾಳಿ ಮೆಲಮೆಲನೊಮ್ಮೆ ಧಾಳಿ ರಭಸದಿನೊಮ್ಮೆ|**
**ಹೇಳದೆಯೆ ಕೇಳದೆಯೆ ಬಹನು ವಿಧಿರಾಯ ||**
**ಕೀಳ ಮೇಲಾಗಿಪನು ಮೇಲ ಕೀಳಾಗಿಪನು |**
**ತಾಳುಮೆಯನಿರು ನೀನು - ಮಂಕುತಿಮ್ಮ ||**

ಮೆಲಮೆಲನೊಮ್ಮೆ=ಮೆಲಮೆಲನೆ +ಒಮ್ಮೆ, ರಭಸದಿನೊಮ್ಮೆ=ರಭಸದಿನೆ+ಒಮ್ಮೆ,
ಮೇಲಾಗಿಪನು=ಮೇಲು + ಆಗಿಪನು, ಕೀಳಾಗಿಪನು=ಕೀಳು+ಆಗಿಪನು,
ತಾಳುಮೆಯನಿರು=ತಾಳುಮೆ+ಎನೆ+ಇರು ಮೆಲಮೆಲನೆ=ನಿಧಾನವಾಗಿ, ರಭಸದಿ=ಜೋರಾಗಿ,
ಬಹನು=ಬರುವನು, ವಿಧಿರಾಯ=ವಿಧಾತ, ಕೀಳ=ಕೆಟ್ಟದ್ದನ್ನು, ಮೇಲ=ಒಳಿತನ್ನು, ತಾಳುಮೆ=ತಾಳ್ಮೆ, ಸಹನೆ.

ಆ ವಿಧಿರಾಯ ಪ್ರತಿಯೊಬ್ಬರ ಬದುಕಿನಲ್ಲೂ ನಮ್ಮ ಅರಿವಿಗೆ ಬಾರದಂತೆಯೇ, ಹೇಳಿ ಕೇಳದೆಯೇ ಕೆಲವು ಬಾರಿ ತಡೆದು ಮೆಲ್ಲ ಮೆಲ್ಲನೆ ತನ್ನ ಪ್ರಭಾವವನ್ನು ತೋರಿದರೆ, ಮತ್ತೆ ಕೆಲವು ಬಾರಿ ರಭಸದಿಂದ ಬದುಕನ್ನು ಬುಡಮೇಲಾಗಿಸುವನು. ಅದನ್ನು ತಡೆಯಲು ನಮ್ಮಿಂದಾಗುವುದಿಲ್ಲವಾದ್ದರಿಂದ, ಸಹನೆಯಿಂದ ಇರುವುದೇ ಸರಿಯಾದ ದಾರಿ ಎಂದು, ವಿಧಿಯ ಆಟವನ್ನು ಮತ್ತು ಅದನ್ನು ಸಹಿಸುವ ಪರಿಯನ್ನು ವಿಶ್ಲೇಷಣೆ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

(122)

| | |
|---|---|
| ಕಗ್ಗರಸಧಾರೆ | ಸಮನ್ವಯ ನ್ಯಾಯ 549 - 553 |

ಹೌದಲ್ಲವೇ! ಈ ವಿಧಿಯಾಟದಿಂದ ನಮಗೆ ಎಂದು ಏನಾಗುವುದೋ ಅರ್ಥವೇ ಆಗುವುದಿಲ್ಲ. ಆಗುವುದೆಲ್ಲದಕ್ಕೂ ಕಾರಣವನ್ನೂ ಹುಡುಕಲಾಗುವುದಿಲ್ಲ. ನಮ್ಮಲ್ಲಿ ಕೆಲವರ ಜೀವನ ಶಾಂತವಾಗಿ ನಡೆದುಹೋಗುತ್ತದೆ ಮತ್ತೆ ಕೆಲವರ ಜೀವನ ತೀವ್ರತಮ ಹೊಯ್ದಾಟದಿಂದ ಕೂಡಿರುತ್ತದೆ. ಏಕೆಂದರೆ ನಮಗೆ ನಮ್ಮ ಪೂರ್ವ ಕರ್ಮಗಳ ವಾಸನೆ ಇದ್ದರೂ, ಅದರ ಅರಿವಿರುವುದಿಲ್ಲ. ಹಾಗಾಗಿ ನಮ್ಮ ಆಲೋಚನೆ ಮತ್ತು ಕೆಲಸ ಕಾರ್ಯಗಳು, ನಮ್ಮ ಪೂರ್ವ ಕರ್ಮಾಧಾರಿತ ವಿಧಿಗನುಸಾರವಾಗಿದ್ದರೂ, ಅದರ ಅರಿವು ನಮಗಿರುವುದಿಲ್ಲ. ಹಾಗಾಗಿ ನಾವು ಪರದಾಡುತ್ತೇವೆ. "ಬುದ್ಧಿಃ ಕರ್ಮಾನುಸಾರಿಣೀ" ಎನ್ನುವುದು ಉಕ್ತಿ. ಎಂದರೆ ಹಿಂದಿನ ಕರ್ಮಗಳ ವಾಸನೆಗಳಿಂದ ಪ್ರೇರಿತವಾಗಿ ಬುದ್ಧಿ ಮುಂದಿನ ಕೆಲಸಗಳನ್ನು ಮಾಡಿಸುತ್ತದೆ ಎಂದು ಅರ್ಥ. ಹಾಗೆ ನಮ್ಮ ಹಿಂದಿನ ಕರ್ಮಕ್ಕೂ ಇಂದಿನ ಕರ್ಮಕ್ಕೂ ನಂಟನ್ನು ಕಲ್ಪಿಸುವುದೇ ಈ 'ವಿಧಿ',

ನಮ್ಮ ಸುತ್ತಲಿನ ಜನರಲ್ಲಿ ನಾವು ಎಷ್ಟೊಂದು ವೈವಿಧ್ಯತೆಯನ್ನು ಕಾಣುತ್ತೇವೆ. ಸುಖವಾಗಿ, ಶಾಂತವಾಗಿ ಸಂತೋಷದಿಂದ ಇದ್ದವರ ಜೀವನದಲ್ಲಿ ಇದ್ದಕ್ಕಿಂದತೆಯೇ 'ಸುನಾಮಿ' ರೀತಿಯ ಅಲ್ಲೋಲಕಲ್ಲೋಲವಾಗುತ್ತದೆ. ಕಷ್ಟ ಕಾರ್ಪಣ್ಯಗಳ ಕಡಲಲ್ಲಿ ಮುಳುಗಿ ನರಳುವವರ ಬಾಳಲ್ಲಿ ಸಮಸ್ಯೆಗಳೆಲ್ಲ ಬಗೆಹರಿದು ಸುಖ, ಶಾಂತಿಗಳು ಬರುತ್ತವೆ. "ಓಹ್ ಇನ್ನೇನು ನಮ್ಮ ಕಷ್ಟಗಳೆಲ್ಲಾ ತೀರಿತು' ಎನ್ನುವಷ್ಟರಲ್ಲಿ, ದುತ್ತೆಂದು ಮತ್ತೇನೋ ಆಗಿ ಮತ್ತೆ ಕಷ್ಟಗಳ

ಸಂಕೋಲೆಗಳಲ್ಲಿ ಸಿಕ್ಕುವಂತಾಗುತ್ತದೆ. ಈ ರೀತಿಯ ತೂಗುಯ್ಯಾಲೆಯಾಟ ಅವರವರ ವಿಧಿಯ ವಿನ್ಯಾಸದ ಆಟವಾಗಿರುತ್ತದೆ.

ಇದಕ್ಕೆ ನಮ್ಮಲ್ಲಿ ಗ್ರಹಚಾರ ಎಂದೂ ಕರೆಯುತ್ತಾರೆ, ಈ ವಿಧಿ ಗ್ರಹಗಳ ಮೂಲಕ ನಮ್ಮ ಮೇಲೆ ಪ್ರಭಾವ ಬೀರುತ್ತದೆ ಎಂದೇ ನಮ್ಮ ನಂಬಿಕೆ. ಸರಿ, ಅದಕ್ಕೆ ಏನು ಮಾಡಬೇಕು? "ಸಕಲ ಗ್ರಹ ಬಲ ನೀನೆ ಸರಸಿಜಾಕ್ಷ ಎನ್ನುತ್ತಾರೆ ಪುರಂದರದಾಸರು. ಇಡೀ ಜಗತ್ತಿಗೆ ಬಲ ನೀಡುವ ಪರಮಾತ್ಮನೇ, ಈ ವಿಧಿಗೆ ಒಡೆಯನಾದ್ದರಿಂದ, 'ಬಂದದ್ದೆಲ್ಲಾ ಬರಲಿ ಆ ಗೋವಿಂದನ ದಯೆ ಇರಲಿ' ಎಂದು ಆ ಪರಮಾತ್ಮನಲ್ಲಿ ಶರಣಾಗಿ ತಾಳ್ಮೆಯಿಂದ ಬಂದದ್ದನ್ನೆಲ್ಲಾ ಅನುಭವಿಸಬೇಕು ಮತ್ತು ಅನುಭವಿಸಿಯೇ ತೀರಿಸಬೇಕು. ವಿಧಿಯೊಡನೆ ಹೋರಾಡಲು ಸಾಧ್ಯವೇ ಇಲ್ಲ. ಹಾಗಾಗಿ ಅದರೊಂದಿಗೆ ಒಡಂಬಡಿಕೆ ಮಾಡಿಕೊಂಡು ಬದುಕುವುದೇ ಜಾಣತನ.

**ಮುಕ್ತಕ – 551**

**ನಿನ್ನ ಹೆಗಲಿನ ಹೊರೆಯ ದೈವಭುಜಕೇರಿಸುವ ।**
**ಸನ್ನಾಹ ಸಾಗೀತೆ? ದೈವವೊಪ್ಪೀತೆ? ॥**
**ಮನ್ನಿಸಲಿ ವಿಧಿ ನಿನ್ನ ಬೇಡಿಕೆಯ, ಭಿನ್ನಿಸಲಿ ।**
**ನಿನ್ನ ಬಲವನ್ನು ಮೆರೆಸೋ - ಮಂಕುತಿಮ್ಮ ॥**

ದೈವಭುಜಕೇರಿಸುವ=ದೈವಭುಜಕೆ+ಏರಿಸುವ, ದೈವವೊಪ್ಪೀತೆ=ದೈವ+ಒಪ್ಪಿತೆ
ಸನ್ನಾಹ = ಪ್ರಯತ್ನ, ಭಿನ್ನಿಸಲಿ=ತಿರಸ್ಕರಿಸಲಿ,

ನಾವು ಹೊತ್ತು ತಂದ ವಿಧಿಯ ಹೊರೆಯನ್ನು ನಾವು ಹೊರದೆ ದೈವದ ಭುಜಕ್ಕೆ ಏರಿಸುವ ಪ್ರಯತ್ನ ಸರಿಯಾದೀತೆ? ಅದನ್ನು ದೈವವಾದರೂ ಒಪ್ಪಿತೆ? ನಾವು ನಮ್ಮ ಭಾರವನ್ನು ದೈವಕ್ಕೆ ಹೊರಿಸಲು ಪ್ರಯತ್ನಿಸಿದಾಗ, ಅದನ್ನು ದೈವ ಮನ್ನಿಸಲಿ ಅಥವಾ ತಿರಸ್ಕರಿಸಲಿ, ನಾವು ಮಾತ್ರ ನಮಗೆ ದೈವವಿತ್ತಿರುವ ಶಕ್ತಿಯನ್ನು ಉಪಯೋಗಿಸಿ ನಮ್ಮ ಭಾರವನ್ನು ಹೊರುವ ಪ್ರಯತ್ನವನ್ನು ಮಾಡಬೇಕು ಎಂದು, ವಿಧಿ, ಪುರುಷ ಪ್ರಯತ್ನ ಮತ್ತು ದೈವ ಕೃಪೆಗಳನ್ನು ವಿಶ್ಲೇಷಣೆ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮಗೆ ಗೊತ್ತಿಲ್ಲದ ನಮ್ಮ ವಿಧಿಯ ವಿನ್ಯಾಸದ ಪ್ರಕಾರ ನಮ್ಮ ಬದುಕು ನಡೆಯುತ್ತದೆ. 'ಎಲ್ಲವನ್ನೂ ಅವನೇ ಕೊಡುತ್ತಾನೆ, ಅವನೇ ನಡೆಸುತ್ತಾನೆ ಇದರಲ್ಲಿ ನಮ್ಮ ಪ್ರಮೇಯವೇನೂ ಇಲ್ಲ, ಆ ನಡೆಸುವವನೇ ಎಲ್ಲ ಭಾರವನ್ನೂ ಹೊರಲಿ' ಎಂದು ಎಲ್ಲವನ್ನೂ ಆ ದೈವದ ಹೆಗಲಿಗೆ ಹೊರಿಸಲು ಸಾಧ್ಯವಿಲ್ಲ. ಅದನ್ನು ಆ ದೈವ ಒಪ್ಪುವುದೂ ಇಲ್ಲ. ಪ್ರತಿಯೊಂದು ಸಂದರ್ಭವನ್ನೂ ಧೈರ್ಯವಾಗಿ ತಾಳ್ಮೆಯಿಂದ ಎದುರಿಸುವ ಶಕ್ತಿ ಮತ್ತು ಬುದ್ಧಿವಂತಿಕೆಯನ್ನು ವಿಧಾತನಾದ ಆ ಪರಮಾತ್ಮ ನಮಗೆ ಕೊಟ್ಟಿದ್ದಾನೆ. ಅದನ್ನು ಉಪಯೋಗಿಸುವುದೇ ವಿವೇಕ. ಅದನ್ನು ಬಿಟ್ಟು ಎಲ್ಲವನ್ನೂ ವಿಧಿಗೆ ಬಿಟ್ಟುಬಿಡುವುದು ನಮ್ಮ ಕರ್ತವ್ಯಲೋಪವಾಗುತ್ತದೆ.

“ನನ್ನಿಂದ ತಪ್ಪಾಗಿದೆ, ಹಾಗಾಗಿ ನನ್ನನ್ನು ಮನ್ನಿಸು, ಕ್ಷಮಿಸು ಕಾಪಾಡು” ಎಂದರೆ ಸಾಲದು. ಮಾಡಿದ ತಪ್ಪನ್ನು ತಿದ್ದಿಕೊಳ್ಳುವ ಮಾರ್ಗವನ್ನು ನಮ್ಮ ಪ್ರಯತ್ನದಿಂದಲೇ ಕಂಡುಕೊಳ್ಳಬೇಕು. ಆ ಮಾರ್ಗವನ್ನು ತೋರುವುದಕ್ಕಾಗಿಯೇ ನಮ್ಮ ಎಲ್ಲ ಕಲಿಕೆಯಾಗಬೇಕು, ಎಂದರೆ ಬದುಕಿನಲ್ಲಿ ಧೈರ್ಯವನ್ನು, ತಾಳ್ಮೆಯನ್ನು, ಸಹಿಸುವ ಮತ್ತು ಭರಿಸುವ ಶಕ್ತಿಯನ್ನು ಮೈಗೂಡಿಸಿಕೊಳ್ಳಲು ಸಹಕರಿಸುವುದೇ, ನಮ್ಮೆಲ್ಲ ಕಲಿಕೆ. ತೀವ್ರತಮ ಕಷ್ಟಗಳನ್ನು ಎದುರಿಸಬೇಕಾದ ಸಂಧರ್ಭಗಳು ನಮಗೆ ಬದುಕಿನಲ್ಲಿ ಬೇಕಾದಷ್ಟು ಬರಬಹುದು. ಆ ಸಂದರ್ಭಗಳಲ್ಲಿ ನಾವೆಷ್ಟು ಗಟ್ಟಿಯಾಗಿದ್ದರೆ ಬಂದ ಕಷ್ಟವನ್ನು ಎದುರಿಸಲು ಅಷ್ಟು ಸಾಧ್ಯವಾಗುತ್ತದೆ. ನಮ್ಮ ಮನೋಬಲದಿಂದಲೇ ನಾವು ಪರಿಸ್ಥಿತಿಗಳನ್ನು ಎದುರಿಸಬೇಕಾಗುತ್ತದೆ. ಇದನ್ನೇ ಮಾನ್ಯ ಗುಂಡಪ್ಪನವರು “ನಿನ್ನ ಬಲವನ್ನು ಮೆರೆಸೋ' ಎಂದಿದ್ದಾರೆ ಈ ಮುಕ್ತಕದಲ್ಲಿ.

ಆದರೆ ಗುಂಡಪ್ಪನವರು ಹೇಳುವ ಆ 'ಬಲ'ವನ್ನು ಪಡೆಯುವುದಾದರೂ ಹೇಗೆ? ಆ ಬಲವನ್ನು ಪಡೆಯಲು ನಮ್ಮ ಪೂರ್ವಜರು ನಮಗೆ ಹತ್ತು ಹಲವಾರು ಮಾರ್ಗಗಳನ್ನು ತೋರಿದ್ದಾರೆ. ಅವರುಗಳು ತೋರಿದ ಮಾರ್ಗ ಮತ್ತು ನಮಗೆ ನಾವೇ ಕಂಡುಕೊಂಡ ಮಾರ್ಗದಲ್ಲಿ ನಡೆದು ಬಲವನ್ನು ವೃದ್ಧಿಸಿಕೊಂಡು 'ಸ್ವಪ್ರಯತ್ನ' ದಿಂದ ವಿಧಿಯ

ವಿನ್ಯಾಸವನ್ನು ಎದುರುಗೊಂಡರೆ, ನಮ್ಮ ಪ್ರಯತ್ನಕ್ಕೆ ದೈವವೂ ಸಹಾಯಮಾಡುತ್ತದೆ. 'ತನ್ನಂಬಿಕೆ' ಅಥವಾ 'ಆತ್ಮವಿಶ್ವಾಸ" ಬಹಳ ಮುಖ್ಯ. ಅದೇ ಬಲ. ಈ ಬಲಕ್ಕೆ ದೈವ ಬಲದ ಒತ್ತಾಸೆಯೂ ಸೇರಿದಾಗ ವಿಧಿಯೊಡ್ಡುವ ಎಲ್ಲವನ್ನೂ ಸಾಮರ್ಥ್ಯದಿಂದ ಸಮರ್ಪಕವಾಗಿ ಎದುರಿಸುವ ಶಕ್ತಿ ಬಂದೇ ಬರುತ್ತದೆ.





**ಮುಕ್ತಕ – 552**

**ಶೃತಿಯರ್ಥ ವಿಶದವಪ್ಪುದು ಪುರುಷಭಾಷ್ಯದಿಂ |**
**ಶೃತಿಮತಿಗಳನ್ಯೋನ್ಯ ಪರಿಪೂರಕಂಗಳ್ ||**
**ಯುತಿಯೊಳವು ಸೇರಿರಲು ಸತ್ಯದರ್ಶನ ನಿನಗೆ |**
**ಕೃತಸಮನ್ವಯನಾಗು - ಮಂಕುತಿಮ್ಮ ||**

ಶೃತಿಯರ್ಥ=ಶೃತಿಯ+ಅರ್ಥ, ವಿಶದವಪ್ಪುದು=ವಿಶದ+ಅಪ್ಪುದು, ಶೃತಿಮತಿಗಳನ್ಯೋನ್ಯ=ಶೃತಿ+ಮತಿಗಳ+ಅನ್ಯೋನ್ಯ, ಯುತಿಯೊಳವು=ಯುತಿಯ+ಒಳವು, ಕೃತಸಮನ್ವಯನಾಗು=ಕೃತ ಸಮನ್ವಯನು+ಆಗು
ಶೃತಿ= ಕೇಳಿ ಪಡೆದ ಜ್ಞಾನ (ವೇದಗಳು ಈ ಗುಂಪಿಗೆ ಸೇರುತ್ತವೆ) ಪುರುಷಭಾಷ್ಯ= ವ್ಯಾಖ್ಯಾನ

ಶೃತಿಯ (ವೇದದ) ಅರ್ಥವು, ಅದನ್ನು ಜಿಜ್ಞಾಸೆಗೊಳಪಡಿಸಿದಾಗ ತಿಳಿಯಾಗುತ್ತದೆ. ಹಾಗೆ, ಕೇಳಿದ ವಿಷಯ, ನಮ್ಮ ಮನಸ್ಸಿನಲ್ಲಿ ಜಿಜ್ಞಾಸೆಯನ್ನುಂಟುಮಾಡಿದಾಗ ಮತ್ತು ಕೇಳಿದ ವಿಷಯ ಮತ್ತು ನಾವು ಅರಿತುಕೊಂಡದ್ದು ಒಂದಕ್ಕೊಂದು ಪೂರಕವಾಗಿ ಸೇರಿದರೆ, ನಮಗೆ ಸತ್ಯದ ದರ್ಶನವಾಗುತ್ತದೆ. ಹಾಗೆ ನಮಗೆ ದೃಗ್ಗೋಚರವಾದ ಸತ್ಯವನ್ನು ನಾವು ಕೃತಿಯಲ್ಲಿ ಅಳವಡಿಸಿಕೊಂಡು, 'ಕೃತಸಮನ್ವಯ'ರಾಗಬೇಕು ಎಂದು ಮಾನ್ಯ ಗುಂಡಪ್ಪನವರು ನಮಗೆ ತಿಳಿಸಿದ್ದಾರೆ ಈ ಮುಕ್ತಕದಲ್ಲಿ.

ಕಣ್ಣಿಗೆ ಕಾಣುವ ವಿಚಾರಗಳು ಮನಸ್ಸಿಗೆ ಬರುತ್ತದೆ, ಮನಸ್ಸಿಗೆ ಬಂದ ವಿಚಾರಗಳು ಬುದ್ದಿಗೆ ಬರುತ್ತವೆ. ಕಣ್ಣಿಗೆ ಕಾಣದ ಅತೀಂದ್ರಿಯ ವಿಚಾರಗಳನ್ನು ಕೇಳಿ ತಿಳಿಯುತ್ತೇವೆ, ಹಾಗೆ ನಮ್ಮ ಪುರಾಣ ಮತ್ತು ವೇದ ಕಾಲದ ಋಷಿ ಮುನಿಗಳು ದೈವ ವಾಣಿಯಿಂದ ಕೇಳಿದ ವಿಚಾರಗಳೇ ವೇದೋಪನಿಷತ್ತುಗಳು. ಅವುಗಳನ್ನೇ ಶೃತಿ ಎಂದಿದ್ದಾರೆ ನಮ್ಮ ಸನಾತನರು. ವೇದಗಳಲ್ಲಿ ಬರುವ ಜಗತ್ತಿನ ಮತ್ತು ಜಗತ್ತಿಗೂ ಅತೀತವಾದ ವಿಚಾರಗಳನ್ನು ಮತಿಯೊಳಕ್ಕೆ ಇಳಿಸಿಕೊಂಡು ಮಂಥನವಾದಾಗ ಸತ್ಯದರ್ಶನವಾಗುತ್ತದೆ. ಹಾಗೆ ಕಂಡುಕೊಂಡ ಸತ್ಯವನ್ನು ನಿಜ ಜೀವನದಲ್ಲಿ ಕೃತಿಗೆ ನಾವು ಇಳಿಸಿಕೊಂಡರೆ, ಆಗ ಶೃತಿ ಮತ್ತು ಮತಿಗಳ ಸಮನ್ವಯವಾಗುತ್ತದೆ. ಇಂದ್ರಿಯಾತೀತವಾದ ಜ್ಞಾನವನ್ನು ನಮಗೆ ಕೊಡುವುದು ವೇದ, ಪುರಾಣ, ಶಾಸ್ತ್ರ, ಆಚಾರ ಮತ್ತು ವಿಚಾರಗಳು. ಅವುಗಳಲ್ಲಿರುವ ಸತ್ವವನ್ನು ಅರಿತುಕೊಳ್ಳುವುದೇ ನಮ್ಮ ಕಲಿಕೆಯ ಗುರಿಯಾಗಬೇಕು.

ಕೇವಲ ತರ್ಕ ಮತ್ತ ನಮ್ಮ ಬುದ್ಧಿವಂತಿಕೆಯ ಬಲ ಮಾತ್ರ ಇದ್ದರೆ ಸಾಲದು. ನಮ್ಮ ಬುದ್ಧಿವಂತಿಕೆಗೆ ಜ್ಞಾನದ ಬಲ ಬೇಕು. ಆದರೆ ಆ ಜ್ಞಾನದ ಬಲ ನಮಗೆ ನಮ್ಮ ಪೂರ್ವಜರ ಅನುಭವಗಳನ್ನು ಕೇಳಿ, ನೋಡಿ ಅರ್ಥೈಸಿಕೊಂಡಾಗ ಸಿಗುವುದು.

ಹಾಗೆ ಜಿಜ್ಞಾಸೆಯಿಂದ ನಮ್ಮ ಅಂತರಂಗದಲ್ಲಿ ಸ್ಪುರಿಸಿದ ಅರ್ಥವು, ಪರತತ್ವದ ತತ್ವಕ್ಕೆ ಹತ್ತಿರವಾಗಿರಬೇಕು. ಆ ಸತ್ವವನ್ನು, ಜ್ಞಾನದ ತಿರುಳನ್ನು, ನಾವು ನಮ್ಮ ದೈನಂದಿನ ಕೃತಿಯಲ್ಲಿ ಇಳಿಸಿಕೊಂಡು ನಡೆದರೆ ನಾವು ಕೃತಸಮನ್ವಯರಾಗುತ್ತೇವೆ. ಹಾಗಲ್ಲದೆ, ನಮ್ಮ ಹಿಂದಿನವರ ಅಂದರೆ ನಮ್ಮ ಪುರಾತನರ ಅಥವಾ ಸನಾತನರ

ಜ್ಞಾನವನ್ನು ಬದಿಗಿಟ್ಟು, ಕೇವಲ ನಮ್ಮ ಇಂದಿನ ಬುದ್ಧಿವಂತಿಕೆಯನ್ನು ನಂಬಿದರೆ, ಅದು ಕೇವಲ ಇಂದ್ರಿಯ ಜ್ಞಾನವಾಗುತ್ತದೆ. ಆ ಜ್ಞಾನ, ಇಂದ್ರಿಯಗಳ ಸೀಮಿತ ಕ್ಷಮತೆಯಿಂದ, ಸೀಮಿತವಾಗಿರುತ್ತದೆ.

ಜೀವಿಕೆಗೆ ಬೇಕಾದ ಅರಿವು ಕೇವಲ ಲೌಕಿಕಕ್ಕೆ ಸಾಧನ. ಆದರೆ ಜಗತ್ಸತ್ಯವನ್ನು ನಮಗೆ ಅರುಹುವ ಪಾರಮಾರ್ಥಿಕ ಜ್ಞಾನವನ್ನು ಪಡೆದು ಲೌಕಿಕದ ಬದುಕನ್ನು ಮತ್ತಷ್ಟು ಅರ್ಥಪೂರ್ಣವಾಗಿಸಿಕೊಂಡು, ಒಂದು ತೃಪ್ತ, ಸಾರ್ಥಕ ಬದುಕನ್ನು ನಡೆಸುವುದೇ 'ಕೃತಿ ಸಮನ್ವಯತೆ'ಗೆ ಮಾರ್ಗ. ಅಂತಹ ಕೃತಿಸಮನ್ವಯತೆಯನ್ನು ನಾವು ಸಾಧಿಸಲಾದರೆ, ಬದುಕಿನ ಬೇಧಗಳೆಲ್ಲ ನಶಿಸಿ, ಮುಕ್ತಭಾವ ಮನದಲ್ಲಿ ಮೂಡಿ, ನಾವು ಬದುಕನ್ನು ನೋಡುವ ಪರಿಯೇ ಬದಲಾಗಿ ಜಗತ್ತೆಲ್ಲ ನಮಗೆ ಸುಂದರವಾಗಿ ತೋರುತ್ತದೆ.

**ಮುಕ್ತಕ – 553** **ಚೂರುಗಳು ಹದಿನಾರು ಚಂದ್ರಮಂಡಲಕಂತೆ |**
**ನೂರಾರು ಚೂರುಗಳು ಸತ್ಯಚಂದ್ರನವು ||**
**ಸೇರಿಸುತಳವುಗಳನು ಬಗೆಯರಿತು ಬೆಳೆಸುತಿರೆ |**
**ಸಾರ ಋತಪೂರ್ಣಿಮೆಯೊ - ಮಂಕುತಿಮ್ಮ ||**

ಚಂದ್ರಮಂಡಲಕಂತೆ =ಚಂದ್ರಮಂಡಲಕೆ+ಅಂತೆ, ಸೇರಿಸುತಳವುಗಳನು=ಸೇರಿಸುತ+ಅವುಗಳನು,
ಬಗೆಯರಿತು=ಬಗೆಯ +ಅರಿತು, ಬೆಳೆಸುತಿರೆ=ಬೆಳೆಸುತ+ಇರೆ,
ಋತ=ಅಂತಃಸತ್ಯ

ಚಂದಿರ ಅಮಾವಾಸ್ಯೆಯಿಂದ ಹಿಡಿದು ಹುಣ್ಣಿಮೆಯ ತನಕ ಹದಿನಾರು ದಿನ ಪ್ರತಿನಿತ್ಯ ನಮಗೆ ಒಂದೊಂದು ಚೂರಾಗಿ ಕಂಡು ಮತ್ತು ಪ್ರತಿನಿತ್ಯ ಆ ಚೂರುಗಳು ಬೆಳೆದು ಹುಣ್ಣಿಮೆಯಂದಿಗೆ ಪೂರ್ಣಚಂದ್ರನಾಗಿ ಬೆಳಗುವಂತೆ, ನಾವು ಕಂಡುಕೊಳ್ಳುವ ಸಾವಿರಾರು ಚಿಕ್ಕ ಚಿಕ್ಕ ಸತ್ಯಗಳನ್ನು ಒಟ್ಟುಗೂಡಿಸುತ್ತಾ ಹೋದರೆ, ಎಂದೋ ಒಂದು ದಿನ ನಮಗೂ ಅಂತರಂಗದಲ್ಲಿ ಪೂರ್ಣರೂಪದಲ್ಲಿ ಸತ್ಯದರ್ಶನವಾದೀತು ಎಂದು ಸತ್ಯಾನ್ವೇಷಣೆಯ ಮಾರ್ಗವನ್ನು ನಮಗೆ ತಿಳಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

“ಋತಂಚ ಸ್ವಾಧ್ಯಾಯ ಪ್ರವಚನೇ ಚ” ಎಂದು ಹೇಳುತ್ತದೆ ತೈತ್ತರೀಯ ಉಪನಿಷತ್ತು. ಋತವೆಂದರೆ ಅಂತರಂಗದ ಭಾವ. ಸತ್ಯವೆಂದರೆ ಆ ಭಾವದ ವ್ಯಕ್ತ ರೂಪ. ನಮ್ಮ ಮನಸ್ಸು ಬುದ್ಧಿಗಳಲ್ಲಿ ಋತದ ಪೂರ್ಣತ್ವವಾಗಬೇಕಾದರೆ, ಹಂತ ಹಂತವಾಗಿ ಸಣ್ಣ ಸಣ್ಣ ಸತ್ಯಗಳನ್ನು ಮನವರಿಕೆ ಮಾಡಿಕೊಳ್ಳುತ್ತಾ ಹೋಗಬೇಕು. ನಮ್ಮ ಬದುಕಿನಲ್ಲೂ ಸಹ ನಾವು ಎಷ್ಟೋ ವಿಷಯಗಳನ್ನು ಕೇಳುತ್ತೇವೆ, ನೋಡುತ್ತೇವೆ. ಹಾಗೆ ನಾವು ಕೇಳಿದ ವಿಷಯಗಳು ನಮ್ಮ ಒಳಕ್ಕೆ ಹೊಕ್ಕು, ಸತ್ಯಾಸತ್ಯತೆಗಳನ್ನು ನಾವು ಮನಗಂಡು, ಅಂತಹ ಸತ್ಯದಲ್ಲಿನ ಸತ್ವವನ್ನು ಗ್ರಹಿಸಬೇಕು, ಹಾಗೆ ಗ್ರಹಿಸಿದ ಸತ್ವಗಳು ನಮ್ಮಲ್ಲಿ ಬೇರೂರಬೇಕು.





ಪರಮಾತ್ವ ತತ್ವವನ್ನು ತೋರುವ ಸತ್ಯಗಳು ನಮಗೆ ನೋಡಿದಲ್ಲೆಲ್ಲಾ ಕಾಣಸಿಗುತ್ತವೆ. ಕಾಣುವ ಮನಸ್ತತ್ವವನ್ನು ಬೆಳೆಸಿಕೊಳ್ಳಬೇಕು. ಒಂದು ಬೀಜ ಮೊಳಕೆಯಾಗುವಲ್ಲಿ, ಗಿಡ ಹೆಮ್ಮರವಾಗುವಲ್ಲಿ, ಹಕ್ಕಿಗಳ ಮಧುರವಾದ ಗಾನದಲ್ಲಿ, ಮನುಜರ ಶುದ್ಧ ಅಂತಃಕರಣದಲ್ಲಿ, ಜಗತ್ತಿನ ಪ್ರತೀ ವಸ್ತುವಿನಲ್ಲೂ ನಾವು ಪರತತ್ವದ ಪ್ರಭಾವವನ್ನು ಕಾಣಬಹುದು. ಹೀಗೆ ಕಂಡ ಪ್ರತೀ ಸತ್ಯವನ್ನು ಮನದೊಳಕ್ಕೆ ಇಳಿಸಿಕೊಂಡು, ಮಂಥನ ಮಾಡಿ, ಸತ್ವವನ್ನು ಗಟ್ಟಿಯಾಗಿಸಿಕೊಳ್ಳಬೇಕು. ಅದು ಸ್ಥಿರವಾಗಿ ನಮ್ಮ ಅಂತರಂಗದಲ್ಲಿ ನಿಲ್ಲಬೇಕು. ಹಾಗೆ ನಿಂತ ಸತ್ಯದ ದರ್ಶನ ವಿಶಾಲವಾಗಬೇಕು. ವಿಸ್ಕೃತ ರೂಪದಲ್ಲಿ ಅದು ಪೂರ್ಣ ಚಂದ್ರನಂತೆ ಬೆಳಗುತ್ತದೆ. ಇದನ್ನೇ ಮಾನ್ಯ ಗುಂಡಪ್ಪನವರು ಸೇರಿಸುತಳವುಗಳನ್ನು ಬಗೆಯರಿತು ಬೆಳೆಸುತಿರೆ” ಎಂದಿದ್ದಾರೆ.

ಎಷ್ಟೋ ಬಾರಿ ಗಳಿಸಿದ್ದು ಅಳಿಸಿಹೋಗುತ್ತದೆ. ಮತ್ತೆ ಪಡೆದುಕೊಳ್ಳುವ ಪ್ರಯತ್ನವನ್ನು ಮಾಡುತ್ತಲೇ ಇರಬೇಕು. ಗಳಿಸಿದ್ದನ್ನು ಕಳೆದುಕೊಳ್ಳದೆ, ಉಳಿಸಿಕೊಂಡು ಅದನ್ನು ವಿಸ್ತಾರಗೊಳಿಸಿಕೊಂಡಾಗ ನಮ್ಮ ಮನದಂತರಾಳದಲ್ಲಿ ಅದು ಬೆಳಗುತ್ತದೆ. ಸ್ವಪ್ರಯತ್ನದಿಂದ ಗಳಿಸಿಕೊಳ್ಳಬೇಕು, ಗಳಿಸಿದ್ದನ್ನು ಉಳಿಸಿಕೊಳ್ಳಬೇಕು, ಉಳಿಸಿದ್ದನ್ನು ಬೆಳೆಸಿಕೊಳ್ಳಬೇಕು,

ಬೆಳೆಸಿಕೊಂಡದ್ದನ್ನು ಸ್ಥಿರವಾಗಿಸಿಕೊಳ್ಳಬೇಕು. ಹಾಗಾದಾಗ ನಾವೂ ಜ್ಞಾನದಿಂದ ಬೆಳಗಬಹುದು. ಚಂದ್ರನಂತೆ ಬೆಳಕು ಮತ್ತು ಪ್ರಶಾಂತತೆ ಎರಡನ್ನೂ ಹೊಂದಬಹುದು.

**ಮುಕ್ತಕ – 554**

**ತಿಳಿವಿಕೊಳಿತೆನಿಸಿದುದು ನಡೆಯೊಳೇತಕ್ಕಿರದು |**
**ಕುಳಿ ಮೇಡು ದೂರ ಮತಿಮನಸುಗಳ ನಡುವೆ ||**
**ಒಳಗಿನಾಯೆಣ್ಣೆ ಬತ್ತಿಗಳೆರಡುಮೊಡವೆರೆಯೆ |**
**ಬೆಳಕು ಜೀವೋನ್ನತಿಗೆ – ಮಂಕುತಿಮ್ಮ ||**

ತಿಳಿವಿಕೊಳಿತೆನಿಸಿದುದು=ತಿಳಿವಿಗೆ+ಒಳಿತು+ಎನಿಸಿದುದು, ನಡೆಯೊಳೇತಕ್ಕಿರದು=ನಡೆಯೊಳು+ಏತಕ್ಕೆ+ಇರದು, ಒಳಗಿನಾಯೆಣ್ಣೆ ಬತ್ತಿಗಳೆರಡುಮೊಡವೆರೆಯೆ= ಒಳಗಿನಾ+ಎಣ್ಣೆ+ಬತ್ತಿಗಳು+ಎರಡುಂ +ಒಡವೆರೆಯೆ, ಜೀವೋನ್ನತಿಗೆ=ಜೀವ+ಉನ್ನತಿಗೆ, ಮತಿ=ಅರಿವು, ತಿಳುವಳಿಕೆ,

ನಮ್ಮ ಅರಿವಿಗೆ ಒಳಿತು ಎನಿಸಿದ್ದು, ನಮ್ಮ ನಡತೆಯಲ್ಲಿರುವುದಿಲ್ಲ ಏಕೆ? ನಮಗಿರುವ ತಿಳುವಳಿಕೆ ಮತ್ತು ಮನಸ್ಸಿನ ನಡುವೆ ಬೆಟ್ಟ ಮತ್ತು ಕಮರಿಗಳಷ್ಟು ಅಂತರವಿದೆ. ನಮ್ಮ ಅರಿವು ಮತ್ತು ಮನಸ್ಸುಗಳು ದೀಪದ ಎಣ್ಣೆ ಮತ್ತು ಬತ್ತಿಗಳಂತೆ ಒಂದಕ್ಕೊಂದು ಪೂರಕವಾಗಿದ್ದರೆ ನಮ್ಮ ಜೀವದ ಉನ್ನತಿಗೆ ಬೆಳಕಾಗುತ್ತದೆ ಎಂದು, ಮತಿ ಮನಸ್ಸುಗಳ ಪೂರಕತೆಯ ಅವಶ್ಯಕತೆಯನ್ನು ವಿಶ್ಲೇಷಣೆ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮ ಮನಸ್ಸಿನೊಳಕ್ಕೆ ನಾವೇ ಹೊಕ್ಕು ನೋಡಿದರೆ ನಮಗೆ ಆಶ್ಚರ್ಯವಾಗುತ್ತದೆ. ಸತ್ಯದ ಒರೆಗೆ ಹಚ್ಚಿ

ಆತ್ಮಾವಲೋಕನ ಮಾಡಿಕೊಂಡರೆ ಗಾಭರಿ ಮತ್ತು ಹೆದರಿಕೆಯೂ ಆಗುತ್ತದೆ. ನಾವು ಯೋಚಿಸುವುದೇನು? ನಾವು ಅರಿತಿರುವುದೇನು ಮತ್ತು ನಾವು ಮಾಡುವುದೇನು ಎಂದು ನೋಡಿದರೆ, ನಮ್ಮ ಮಾತಿಗೂ, ಮತಿಗೂ ಕೃತಿಗೂ ಎಷ್ಟೊಂದು ಅಂತರ ಎಂದು ಅರ್ಥವಾಗುತ್ತದೆ. ಆದರೆ ಅದನ್ನು ಒಪ್ಪಿಕೊಳ್ಳಲು ನಮ್ಮ ಅಹಂಕಾರ ಅಡ್ಡ ಬರುತ್ತದೆ.

ಮನಃ ಘಟಲದೊಳಕ್ಕೆ ಸಾವಿರಾರು ವಿಚಾರಗಳು ಬರುತ್ತವೆ. ಅವುಗಳಲ್ಲಿ ಹಲವು ಮಾತ್ರ ಮನಸ್ಸಿನಲ್ಲಿ ನಿಲ್ಲುತ್ತವೆ. ಆ ಹಲವಲ್ಲಿ ಕೆಲವು ಮಾತ್ರ ಬುದ್ಧಿಗೆ ಸೇರುತ್ತವೆ. ಆ ಕೆಲವಲ್ಲಿ ಒಂದೋ ಎರಡೋ ವಿವೇಕವಾಗಿ ಪರಿಣಮಿಸುತ್ತದೆ. ಆ ವಿವೇಕದ ಬಲದಿಂದಲೇ ನಾವು ಸರಿಯಾದ ಕೆಲಸವನ್ನು ಮಾಡಲಾಗುತ್ತದೆ. ಮಿಕ್ಕೆಲ್ಲ ಸಮಯಗಳಲ್ಲಿ ನಮ್ಮ ಅರಿವಿಗೆ ನಾವು ಮಾಡುವುದು ಸರಿಯಲ್ಲ ಎಂದು ಎನಿಸಿದರೂ 'ಕೋತಿ' ಯಂತೆ ಕ್ಷಣಕ್ಷಣಕ್ಕೂ ವಿಷಯಾಂತರವಾಗಿ, ಮಾಡುವ ಕೆಲಸವು ಬೇರೆಯೇ ಆಗಿರುತ್ತದೆ. ಇದನ್ನೇ ಮಾನ್ಯ ಗುಂಡಪ್ಪನವರು "ಕುಳಿ ಮೇಡು ದೂರ ಮತಿಮನಸುಗಳ ನಡುವೆ" ಎಂದಿದ್ದಾರೆ. 'ಬಲಹೀನ ಮನಸ್ಸು, ಇಂದ್ರಿಯಗಳ ಪ್ರಾಬಲ್ಯ, ವಿಷಯಾಸಕ್ತಿ ಮತ್ತು ಶ್ರದ್ಧೆಯ ಕೊರತೆ' ಮುಂತಾದವುಗಳೇ, ಇದಕ್ಕೆ ಕಾರಣ.

ಹಾಗಾಗಿ, ನಮ್ಮ ಮಾತು-ಮತಿ ಮತ್ತು ಕೃತಿಗಳಲ್ಲಿನ ಅಂತರವನ್ನು ಕಡಿಮೆಯಾಗಿಸಿಕೊಳ್ಳಲು ಮನಸ್ಸನ್ನು ಒಂದು ದೀಪದಂತೆ ಮಾಡಿಕೊಳ್ಳಬೇಕು. ಆ ದೀಪದಲ್ಲಿ ಅರಿವಿನ ಎಣ್ಣೆಯನ್ನು ಸುರಿದು ವಿವೇಕದ ಬತ್ತಿ ಸದಾ ಉರಿಯುತ್ತಿರುವಂತೆ ಮಾಡಿಕೊಂಡರೆ, ನಮ್ಮ ಬಾಳೆಲ್ಲಾ ಬೆಳಕಾಗುತ್ತದೆ. ಅಂತರಂಗದ ಬೆಳಕು ಹೊರಗಿನ ತಳುಕಿಗಿಂತ ಉತ್ತಮವಾಗಿರುತ್ತದೆ. ಇಂತಹ ಸ್ಥಿತಿಗೆ ತಲುಪಲು ನಮಗಿರುವುದು ಒಂದೇ ಮಾರ್ಗ, ಸತ್ಸಂಗ 'ಸತ್' ನ ಸಂಗದಲ್ಲಿದ್ದರೆ 'ಅಸತ್' ದೂರವಾಗಿ ನಮ್ಮ ಮನಸ್ಸು ಬುದ್ಧಿಗಳು ಶುದ್ಧವಾಗಿ, ವಿವೇಕ ಹೆಚ್ಚಾಗಿ ಮತಿ-ಕೃತಿಗಳ ನಡುವಿನ ಅಂತರ ಕಡಿಮೆಯಾದೀತು.

**ಮುಕ್ತಕ – 555**

**ಧರ್ಮಸಂಕಟದಿ ಮನ ತಲ್ಲಣಿಸುತಿರುವಂದು? |**
**ನಿರ್ಮಥಿಸು ನಿನ್ನಾತ್ಮವನೆ ಮಮತೆ ಬಿಟ್ಟು ||**
**ನಿರ್ಮಮದ ಸದ್ವಿವೇಕದ ದೀಪಕಿಂತ ನೀಂ |**
**ನೆಮ್ಮಲಿನ್ನೇನಿಹುದೋ? – ಮಂಕುತಿಮ್ಮ ||**

ತಲ್ಲಣಿಸುತಿರುವಂದು=ತಲ್ಲಣಿಸುತ+ಇರುವಂದು,ನಿನ್ನಾತ್ಮವನೆ=ನಿನ್ನ+ಆತ್ಮವನೆ, ಸದ್ವಿವೇಕದ=ಸತ್+ವಿವೇಕದ ನೆಮ್ಮಲಿನ್ನೇನಿಹುದೋ=ನೆಮ್ಮಲು+ಇನ್ನೇನು+ಇಹುದೋ, ಇರುವಂದು=ಇರುವಾಗ, ನಿರ್ಮಥಿಸು=ಮಥನಮಾಡು, ಚೆನ್ನಾಗಿ ಆಲೋಚಿಸು, ಮಮತೆ=ಮಮಕಾರ, ನಿರ್ಮಮದ=ಮಮಕಾರ ರಹಿತವಾದ, ನೆಮ್ಮಲು=ನಂಬಲು, ನೆಚ್ಚಲು.

ಮನದಲ್ಲಿ ಮೂಡುವ ಭಾವಗಳಲ್ಲಿ, ಅದೋ-ಇದೋ, ಹೀಗೊ-ಹಾಗೋ ಎಂದು ದ್ವಂದ್ವಗಳಲ್ಲಿ ಸಿಲುಕಿದಾಗ,





ವಿಷಯದ ಮಂಥನ ಅಂತರಂಗದಲ್ಲಿ ಮಾಡಿ, ಸರಿಯಾದ ನಿರ್ಣಯವನ್ನು ತೆಗೆದುಕೋ, ಮಮತೆಯನ್ನು ತೊರೆದು ವಿವೇಕದಿಂದ ತೆಗೆದುಕೊಂಡ ನಿರ್ಣಯಗಳನ್ನು ನೀನು ನೆಚ್ಚಿಕೋ ಮತ್ತು ನಂಬಿಕೋ ಎಂದು, ಒಂದು ಕ್ರಮವನ್ನು ಆದೇಶಿಸಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಆತುರದಲ್ಲಿ ತೆಗೆದುಕೊಂಡ ನಿರ್ಣಯಗಳು ಸದಾ ನಮಗೆ ದುಷ್ಪರಿಣಾಮಗಳನ್ನೇ ನೀಡುತ್ತದೆ ಎನ್ನುವುದಕ್ಕೆ, ನಮ್ಮ ಬದುಕಿನಲ್ಲಿ ಸಾಕಷ್ಟು ಉದಾಹರಣೆಗಳು ಸಿಗುತ್ತವೆ. ನಾವು ನಮ್ಮ ತಪ್ಪನ್ನು ಒಪ್ಪಿಕೊಳ್ಳಲು ಸಿದ್ಧರಿದ್ದರೆ, ಹಾಗೆ ಆತುರಪಡದಿದ್ದರೆ ನಾವು ಒಂದು ವಿಷಯದ ಬಗ್ಗೆ ಚೆನ್ನಾಗಿ ವಿಚಾರಮಾಡಿ, ಎಲ್ಲ ವಿಕಲ್ಪಗಳನ್ನೂ (alternatives) ಪರೀಕ್ಷಿಸಿ, ಸಾಧಕ, ಬಾಧಕಗಳನ್ನು, ಆಲೋಚಿಸಿದಾಗ, ನಮಗೆ ನಿಚ್ಚಳವಾದ ದಾರಿ ಕಾಣುತ್ತದೆ. ಆದರೆ ಒಳಿತು ಕೆಡುಕುಗಳನ್ನು ಕೆದಕಿ ನೋಡುವಾಗ ಸರಿಯಾದದ್ದನ್ನೇ ಆಯ್ಕೆಮಾಡುವ ಕ್ಷಮತೆ ನಮ್ಮಲ್ಲಿ ಎಷ್ಟಿದೆ ಎನ್ನುವುದೇ ಪ್ರಶ್ನೆ. ವಸ್ತು, ವಿಷಯ ಅಥವಾ ವ್ಯಕ್ತಿಯ ಮೇಲಿನ ವ್ಯಾಮೋಹ ಅಥವಾ ಮಮಕಾರದಿಂದ ತೆಗೆದುಕೊಳ್ಳುವ ನಿರ್ಧಾರಗಳು ನಿರೀಕ್ಷಿತ ಫಲಗಳನ್ನು ನೀಡುವುದಿಲ್ಲ.

ಹಾಗಾಗಿ ಒಂದು ವಿಷಯವನ್ನು ಮಥಿಸಿ ನೋಡುವಾಗ, ನಮ್ಮ ಮನಸ್ಸು ಬುದ್ಧಿಗಳಲ್ಲಿ ನಡೆಯುವ ಕ್ರಿಯೆಯನ್ನು ನಾವು 'ಸಾಕ್ಷಿ'ಭೂತವಾಗಿ ವೀಕ್ಷಿಸಿದಾಗ, ಮಮಕಾರ ಮತ್ತು ಮಮತೆಗಳನ್ನು ತೊರೆದು ನೋಡಿದಾಗ ನಮಗೆ ಸಾಧ್ಯಾಸಾಧ್ಯತೆಗಳ, ಜಯಾಪಜಯಗಳ, ಸಫಲತೆ ಮತ್ತು ವೈಫಲ್ಯಗಳ ನಿಚ್ಚಳತೆ ಕಾಣುತ್ತದೆ. ಇಲ್ಲಿ ವಿವೇಕ ಪ್ರಾಜ್ವಲ್ಯವಾಗಿ ನಾವು ತೆಗೆದುಕೊಳ್ಳುವ ಯಾವುದೇ ನಿರ್ಧಾರಗಳು ಸೂಕ್ತ ಫಲವನ್ನು ನೀಡುತ್ತವೆ. ಇದನ್ನೇ ನಂಬಬೇಕು. ಹಾಗಾಗಿ ಮಾನ್ಯ ಗುಂಡಪ್ಪನವರು "ನಿರ್ಮಮದ ಸದ್ವಿವೇಕದ ದೀಪಕಿಂತ ನೀಂ ನೆಮ್ಮಲಿನ್ನೇನಿಹುದೋ" ಎಂದು ಹೇಳಿ ಅಂತರಂಗದಲ್ಲಿ ಚೆನ್ನಾಗಿ ಮಥಿಸಿ ಕಂಡುಕೊಂಡ ಸತ್ಯವನ್ನೇ ನಂಬಬೇಕು ಮತ್ತು ಅದನ್ನು ತೊರೆದು ಬೇರೇನೂ ಇಲ್ಲ ಎಂದು ಹೇಳಿದ್ದಾರೆ.

ಹೇಳುವುದು ಸುಲಭ. ಆದರೆ ಇಂದಿನ ಸಡಗರದ ಜೀವನದಲ್ಲಿ, ಒತ್ತಡದ ಜೀವನದಲ್ಲಿ, ಪೈಪೋಟಿಯ ಬದುಕಿನಲ್ಲಿ, ಸಾವಿರಾರು ಸೆಳೆತಗಳ ಕಾಡಿನಲ್ಲಿ ಸಿಲುಕಿರುವ ನಮಗೆ ಚೆನ್ನಾಗಿ ಆಲೋಚಿಸುವ' ವ್ಯವಧಾನವೇ ಇಲ್ಲದಂತಾಗಿದೆ. "ಹೇಗೋ ಒಂದು-ಏನೋ ಒಂದು" ಎಂದು ಬದುಕುತ್ತಿದ್ದೇವೆ. ಸ್ವಲ್ಪ ಪಕ್ಕಕ್ಕೆ ನಿಂತು ಜಗತ್ತಿನ ವಿಧ್ಯಮಾನಗಳನ್ನು, ಸಾಕ್ಷಿಭಾವದಿಂದ ದೂರನಿಂತು,
ಒಂದು ಮೆರವಣಿಗೆಯಂತೆ ನೋಡಿದರೆ,
ನಮಗೆ ನಮ್ಮ ಕೊರತೆಗಳು ಅರಿವಾಗುತ್ತದೆ. ಕೊರತೆಗಳ ಅರಿವಾಗಿ, ತಿದ್ದಿಕೊಳ್ಳುವ ಪ್ರಯತ್ನವಾದರೆ ಸಾಕು. ಮಿಕ್ಕೆಲ್ಲವೂ ತಾನೇ ತಾನಾಗಿ ಸರಿಯಾಗುತ್ತದೆ ಮತ್ತು ಬದುಕು ಹಸನಾಗುತ್ತದೆ. ಆತ್ಮದ ವಾಣಿಯನ್ನೇ ನೆಚ್ಚುವಂತಾಗುತ್ತದೆ.

**ಮುಕ್ತಕ – 556**

**ಶಕ್ತಿಮೀರ್ದ ಪರೀಕ್ಷೆಗಳನ್ನು ವಿಧಿ ನಿಯಮಿಸಿರೆ ।**
**ಯುಕ್ತಿಮೀರ ಪ್ರಶ್ನೆಗಳನ್ನು ಕೇಳುತಿರೆ ॥**
**ಚಿತ್ತವನು ತಿರುಗಿಸೊಳಗಡೆ; ನೋಡು ನೋಡಲ್ಲಿ ।**
**ಸತ್ವದಚ್ಚಿನ್ನ ಝುರಿ - ಮಂಕುತಿಮ್ಮ ॥**

ತಿರುಗಿಸೊಳಗಡೆ=ತಿರುಗಿಸು+ಒಳಗಡೆ, ಸತ್ವದಚ್ಛಿನ್ನ=ಸತ್ವದ+ಅಚ್ಛಿನ್ನ+ಝರಿ, ಶಕ್ತಿಮೀರ=ಶಕ್ತಿಯನ್ನು ಮೀರಿದ, ಯುಕ್ತಿಮೀರ್=ಯುಕ್ತಿಯನ್ನು ಮೀರಿದ, ಚಿತ್ತವನು=ಮನಸ್ಸನ್ನು, ಅಚ್ಛಿನ್ನ=ಸದಾ ಹರಿಯುವ, ನಿರಂತರ

ಬದುಕಿನಲ್ಲಿ ನಮ್ಮ ಶಕ್ತಿಗೆ ಮೀರಿದ ಪರೀಕ್ಷೆಯಾದರೆ ಮತ್ತು ನಾವು ಎದುರಿಸುವ ವಿಷಮ ಪರಿಸ್ಥಿತಿಗಳಿಂದ ನಮ್ಮ ಮನದಲ್ಲಿ ನಮಗೆ ಅರ್ಥವಾಗದ ಮತ್ತು ಉತ್ತರವೇ ಸಿಗದ "ಏಕೆ ಹೀಗೆ?' 'ಇದು ಏನು?' "ಪರಿಹಾರವೇನು?" ಎಂಬಂತಹ ಪ್ರಶ್ನೆಗಳು ಉದ್ಭವವಾದಾಗ, ಅಂತರ್ಮುಖಿಗಳಾದರೆ ನಮಗೆ ಅಲ್ಲಿ ನಿರಂತರ ಹರಿಯುವ ಜ್ಞಾನದ ಝರಿ ಕಾಣುತ್ತದೆ ಮತ್ತು ಆ ಜ್ಞಾನದ ಝರಿಯಲ್ಲಿ ಮಿಂದಾಗ, ಚಿತ್ತ ಹರ್ಷಿತವಾಗುತ್ತದೆ ಎಂದು, ಅಂತರಂಗದ ಶಾಂತಿಯ ಉಪಾಯವನ್ನು ನಮಗೆ ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಪ್ರತಿಯೊಬ್ಬರ ಬದುಕೂ ಒಂದು ಪರೀಕ್ಷೆಯೇ ಆಗಿರುತ್ತದೆ. ಏಕೆಂದರೆ ನಮಗೆ ಏನೋ ಬೇಕು. ಆದರೆ ನಮಗೇನು ಬೇಕು ಎಂಬುದು ನಮಗೇ ಗೊತ್ತಿಲ್ಲ. ಹಾಗಾಗಿ ನಮ್ಮ ಮನಗಳಲ್ಲಿ ಉತ್ತರವೇ ಸಿಗದ ಪ್ರಶ್ನೆಗಳು ಸದಾ ಏಳುತ್ತಲೇ ಇರುತ್ತವೆ. ನಮ್ಮ ಆಲೋಚನಾ ಶಕ್ತಿ ಮತ್ತು ನಮ್ಮ ಅರಿವಿನ ಪರಿಧಿಯನ್ನು ಮೀರಿ ನಡೆಯುವ ವಿಧ್ಯಮಾನಗಳು ನಮಗೆ ಅರ್ಥವೇ ಆಗುವುದಿಲ್ಲ. ಇಂತಹ ಸ್ಥಿತಿಗೆ ಬಡವ ಬಲ್ಲಿದನೆಂಬ ಬೇಧವಿಲ್ಲ. ಇದು ಸರ್ವೇ ಸಾಮಾನ್ಯವಾಗಿ ಎಲ್ಲರಲ್ಲೂ ಉದ್ಭವವಾಗುವ ಪ್ರಶ್ನೆಗಳ ಸರಮಾಲೆ. ಬಹುಶಃ ಇಂತಹ ಸ್ಥಿತಿ ಎಂತಹ ಮಹಾಮಹಿಮರನ್ನೂ ಬಿಟ್ಟಿಲ್ಲ. ಇದಕ್ಕೆ ನಿವಾರಣೆಯೇ ಇಲ್ಲವೆ? ಎಂದರೆ, ಮಾನ್ಯ ಗುಂಡಪ್ಪನವರು ಇದಕ್ಕೊಂದು ಪರಿಹಾರ ಸೂಚಿಸಿದ್ದಾರೆ.

ಎಲ್ಲರ ಅಂತರಂಗದಲ್ಲೂ ಜ್ಞಾನದ ಪ್ರತೀಕವಾದ ಶುದ್ಧ ಸತ್ವವನ್ನು ಹೊಂದಿದ ಮತ್ತು ಪರಮಾತ್ಮನ ನೇರ ಸಂಪರ್ಕವನ್ನು ಹೊಂದಿದ 'ಆತ್ಮ' ಒಂದಿದೆ. ಪಾಪ ಅದು ನಾವು ಮಾಡುವ ಯೋಚನೆ ಮತ್ತು ಕ್ರಿಯೆಗಳನ್ನು ಸಾಕ್ಷೀಭೂತವಾಗಿ ನೋಡುತ್ತಿರುತ್ತದೆ. ಈ ದೇಹ, ಮನಸ್ಸು ಬುದ್ಧಿಗಳ ಸಂಸರ್ಗದಲ್ಲಿರುವುದರಿಂದ ಇವುಗಳ ಹುಚ್ಚಾಟದಲ್ಲಿ ಅದೂ ಸೊರಗುತ್ತಿರುತ್ತದೆ. "ಚಿತ್ತವನು ತಿರುಗಿಸೊಳಗಡೆ; ನೋಡು ನೋಡಲ್ಲಿ ಸತ್ವದಚ್ಛಿನ್ನ ಝರಿ" ಎಂದಿದ್ದಾರೆ ಗುಂಡಪ್ಪನವರು. ಪ್ರಾಪಂಚಿಕ ಸೆಳೆತಗಳಿಂದ ವಿಮುಖರಾಗಿ ಅಂತರ್ಮುಖಿಗಳಾಗಬೇಕು, ನಮ್ಮನ್ನು ನಾವು ಇಂದ್ರಿಯಾಕರ್ಷಣೆಯಿಂದ ಬಿಡಿಸಿಕೊಂಡು 'ಆತ್ಮ'ನಲ್ಲಿ ನಿಂತರೆ ನಮಗೆ ಆ ಶುದ್ಧ ಸ್ವತ್ವದ ದರ್ಶನವಾದೀತು. ಅದೇ ಬೆಳಕು, ಅದೇ ಜ್ಞಾನ, ಅದೇ ಸತ್ಯ ಮತ್ತು ಅದೇ ನಿತ್ಯ.

ಅಂತಹ 'ಸಚ್ಚಿದಾನಂದ' ಸ್ವರೂಪವಾದ ಆತ್ಮಜ್ಞಾನದಲ್ಲಿ ನಾವು ಮುಳುಗಿದರೆ ನಮ್ಮಲ್ಲಿನ ದ್ವಂದ್ವಗಳು, ಅನುಮಾನಗಳು, ಸಂಶಯಗಳು ನೀಗಿ, ಪ್ರಶ್ನೆಗಳ ತರಂಗಗಳು ಅಡಗಿ, ಮನಸ್ಸು, ಬುದ್ಧಿಗಳು ಅಲೆಯೇ ಇಲ್ಲದ ಕಡಲಂತೆ ಶಾಂತವಾಗುವುದು. ಅದು ಆನಂದದ ಮತ್ತು ಶಾಂತಿಯ ಸ್ಥಿತಿ. ಬಾಹ್ಯ ಪ್ರಪಂಚದೊಂದಿಗೆ 'ಅಂಟಿಲ್ಲದ ನಂಟು' ಹೊಂದಿ, ಅಂತರ್ಮುಖಿಗಳಾದರೆ ಅಂತಹ ಆನಂದದ ಸ್ಥಿತಿ ನಮ್ಮದಾಗಬಹುದು. ಪ್ರಯತ್ನ ಪಟ್ಟರೆ ಅದು ಸರ್ವರಿಗೂ ಸಾಧ್ಯ.

(130)

ಕಗ್ಗರಸಧಾರೆ ಅಂತರ್ಜ್ಯೋತಿ 554 - 558

**ಮುಕ್ತಕ – 557**

**ಅಂತರಂಗದ ಗವಾಕ್ಷಗಳ ತೆರೆದಿಡಲಲ್ಲಿ ।**
**ಚಿಂತೆ ಕುಮುಲುವುದು, ಹೊಗೆಗಳೊತ್ತವಾತ್ಮವನು ||**
**ಶಾಂತಿ ಬೇಳ್ಪೊಡೆ ಮನೆಗೆ ಗೋಡೆವೊಲೆ ಕಿಟಕಿಯೂ |**
**ಸಂತತದಪೇಕ್ಷಿತವೋ – ಮಂಕುತಿಮ್ಮ ||**

ತೆರೆದಿಡಲಲ್ಲಿ =ತೆರೆದು+ಇಡಲು+ಅಲ್ಲಿ, ಹೊಗೆಗಳೊತ್ತವಾತ್ಮವನು= ಹೊಗೆಗಳು+ಒತ್ತ +ಆತ್ಮವನು, ಸಂತತದಪೇಕ್ಷಿತವೋ=ಸಂತತದ+ಅಪೇಕ್ಷಿತವೋ, ಗವಾಕ್ಷ+ಕಿಟಕಿ,
ಬೇಳ್ಪೊಡೆ =ಬೇಕಿದ್ದರೆ, ಸಂತತ=ನಿರಂತರ

ಅಂತರ್ಮುಖಿಗಳಾದಾಗ, ನಮಗೆ ನಮ್ಮ ಅಂತರಂಗದಲ್ಲಿ ನಡೆಯುವ ವಿದ್ಯಮಾನಗಳ ಅರಿವಾಗುತ್ತದೆ. ಮನವನ್ನು ಮುಕ್ತವಾಗಿಡದೆ ಎಲ್ಲ ಕದ-ಕಿಟಕಿಗಳನ್ನು ಮುಚ್ಚಿಕೊಂಡುಬಿಟ್ಟರೆ ನಮ್ಮ ಚಿಂತೆ ಒಳಗೊಳಗೇ ಸುಟ್ಟು ಹೊಗೆಯಾಡುತ್ತದೆ ಮತ್ತು ಆ ಹೊಗೆಯ ದಟ್ಟತೆಯಲ್ಲಿ ಅಶಾಂತಿಯಿಂದ ಮನಸ್ಸು, ಬುದ್ಧಿ, ಆತ್ಮಗಳು ಸೊರಗುತ್ತವೆ. ಹಾಗಾಗಿ ನಮಗೆ ನಿರಂತರದ ಶಾಂತಿ ಬೇಕಿದ್ದಲ್ಲಿ ಮನದ ಗೋಡೆಯಲ್ಲಿ ಕಿಟಕಿಗಳಿರಬೇಕು ಎಂದು ಒಂದು ಸಂದೇಶವನ್ನು ನೀಡಿದ್ದಾರೆ ನಮಗೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮನಸ್ಸನ್ನು ಚಿಂತೆಗಳಿಂದ ಒಳಗೊಳಗೇ ಹೊಗೆಯಾಡಬಿಟ್ಟರೆ ಚಿಂತೆಗಳು ಅಧಿಕವಾಗಿ ಮನವು ಕೊಳೆಯುತ್ತದೆ. ನಾವು ಮಾಡುವ ಚಿಂತೆ ಸರಿಯೋ ತಪ್ಪೋ ಎಂಬುದರ ಅರಿವೂ ಆಗುವುದಿಲ್ಲ. ಅಶಾಂತಿ ಹೆಚ್ಚಾಗುತ್ತದೆ. ನಮಗೆ ನಿರಂತರ ಶಾಂತಿ ಬೇಕಿದ್ದರೆ ಅಂತರ್ಮುಖಿಗಳಾಗಿ ಮನದ ಸುತ್ತ ಗೋಡೆ ನಿರ್ಮಿಸಿದ್ದರೂ ಆ ಗೋಡೆಯಲ್ಲಿ ಕಿಟಕಿಗಳನ್ನು ಅಳವಡಿಸಿಕೊಂಡರೆ ಮತ್ತು ಹೊರ ಪ್ರಪಂಚದ ವಿಷಯಗಳು ಒಳಬಂದರೆ, ನಮ್ಮ ಒಳಗಿನ ವಿಚಾರಗಳು ಮತ್ತು ಹೊರಗಿನ ವಿಚಾರಗಳ ನಡುವೆ ತುಲನೆಯಾಗಿ ಸತ್ಯಾಸತ್ಯಗಳನ್ನು ನಿಚ್ಚಳವಾಗಿ ಅರಿಯಲು ಸಾಧ್ಯವಾಗುತ್ತದೆ.

ಹಾಗಲ್ಲದೆ ನಾವು ಕಲಿತ, ಅರಿತ ಮತ್ತು ನಂಬಿದ ವಿಚಾರಗಳೇ ಸರಿ, ಅನ್ಯರ ವಿಚಾರಗಳು ನಮಗೆ ಬೇಕಿಲ್ಲ ಎಂದು ಮನದ ಎಲ್ಲ ಕದಗಳನ್ನೂ ಮುಚ್ಚಿಬಿಟ್ಟರೆ, ಮಾನ್ಯ ಗುಂಡಪ್ಪನವರು “ಚಿಂತೆ ಕುಮುಲುವುದು, ಹೊಗೆಗಳೊತ್ತವಾತ್ಮವನು” ಎಂದು ಹೇಳುವಂತೆ ಮನಸ್ಸು ಸೊರಗುವುದು. ಆದ್ದರಿಂದ ನಾವು ಅಂತರ್ಮುಖಿಗಳಾದರೂ ಮನಸ್ಸನ್ನು ಪೂರ್ವಾಗ್ರಹವಿಲ್ಲದೆ ಮುಕ್ತವಾಗಿಟ್ಟುಕೊಂಡರೆ ಸತ್ಯವನ್ನು ಅರಿಯುವುದು ಸುಲಭವಾಗುತ್ತದೆ. ನಮ್ಮ ಸಮಸ್ಯೆ ದೊಡ್ಡದೋ, ಸಣ್ಣದೋ, ನಮ್ಮ ವಿಚಾರ ಸರಿಯೋ, ತಪ್ಪೋ ಎಂಬುದರ ಅರಿವು ಮೂಡುತ್ತದೆ. ಆ ಅರಿವಿನಲ್ಲಿ ನಮ್ಮಲ್ಲಿ ಸದ್ವಿಚಾರ ಅಧಿಕವಾಗಿ, ಮನಸ್ಸು ಶಾಂತವಾಗುತ್ತದೆ.

ಆದರೆ ಜೀವನದ ಸಮಸ್ಯೆಗಳಿಗಿಂತ ಮನದಲ್ಲಿರುವ 'ಅಹಂಕಾರ' ಅಥವಾ 'ಮಮಕಾರ' ಗಳ ಗೋಡೆಗಳು

ಹೊರ ಮತ್ತು ಹೊಸ ವಿಚಾರಗಳನ್ನು ಒಳಬರದೆ ತಡೆಯುತ್ತದೆ, ಮತ್ತು ಹಾಗೂ ಒಳಬಂದ ವಿಚಾರಗಳನ್ನು ನಿರಾಕರಿಸುತ್ತದೆ. ಹಾಗಾಗಿ ನಾವು ನಮ್ಮ ಅಹಂಕಾರದ ಗೋಡೆಯನ್ನು ಮೊದಲು ಕೆಡವಿ ತಳ್ಳಬೇಕು. ಅದನ್ನು ತಳ್ಳಿದರೆ ಖಂಡಿತವಾಗಿಯೂ ನಮ್ಮ ಮನದಲ್ಲಿ ಗುಂಡಪ್ಪನವರು ಹೇಳುವ 'ಸಂತತದ ಶಾಂತಿ' ಯನ್ನು ಪಡೆಯಬಹುದು. ಸತ್ವದ ಮತ್ತು ಸತ್ಯದ ವಿಚಾರಗಳು ಮನದಲ್ಲಿ ನೆಲೆನಿಂತು ಆತ್ಮಾನಂದವನ್ನು ಪಡೆಯಬಹುದು.

**ಮುಕ್ತಕ – 558**

**ಆಳವನು ನೋಡಿ ಬಗೆದಾಡುವಾ ಮಾತಿಂಗೆ |**
**ರೂಢಿಯರ್ಥವದೊಂದು ಗೂಢಾರ್ಥವೊಂದು ||**
**ವಾರಿಧಿಯ ದಾಂಟುವುಡುಪಕೆ ಗಾಳಿಪಟವೊಂದು |**
**ಕೋಲು ಹುಟ್ಟೊದು ಬಲ – ಮಂಕುತಿಮ್ಮ ||**

ಬಗೆದಾಡುವಾ=ಬಗೆದು+ಆಡುವಾ, ರೂಢಿಯರ್ಥವದೊಂದು=ರೂಢಿಯ+ಅರ್ಥವು+ಅದೊಂದು,
ಗೂಢಾರ್ಥವೊಂದು=ಗೂಢ+ಅರ್ಥವು+ಒಂದು, ದಾಂಟುವುದುಪಕೆ-ದಾಂಟುವ+ಉಡುಪಕೆ,
ಹುಟ್ಟೊಂದು=ಹುಟ್ಟು+ಒಂದು, ಬಗೆದು+ಪರೀಕ್ಷಿಸಿ,
ದಾಂಟುವ=ದಾಟುವ, ಉಡುಪ =ತೆಪ್ಪ, ದೋಣಿ, ಹಡಗು, ದ್ವೀಪ (ಸುತ್ತ ನೀರಿರುವುದರಿಂದ)

ನಾವು ಕೇಳುವ ಮಾತನ್ನು ಆಳವಾಗಿ ಪರೀಕ್ಷಿಸಿ ನೋಡಿದರೆ, ಮೇಲುನೋಟಕ್ಕೆ ಒಂದು ಅರ್ಥ ಕಂಡರೆ, ಒಳನೋಟಕ್ಕೆ ಬೇರೆ ಅರ್ಥವಿರುವುದು, ಸಾಗರವ ದಾಟುವ ಹಡಗಿಗೆ ಮೇಲಿಂದ ದಿಕ್ಕನ್ನು ಸೂಚಿಸುವ ಹಾಯಿ ಅಥವಾ ಗಾಳಿಪಟದ ಮತ್ತು ಅಡಿಯಲ್ಲಿ ಬಲದಿಂದ ಹಾಕುವ ಹುಟ್ಟಿನ ಬಲವಿದ್ದಂತೆ, ನಾವು ಆಡುವ ಅಥವಾ ಕೇಳುವ ಮಾತಿಗೆ ರೂಢಿಯಲ್ಲಿರುವ ಅರ್ಥವು ಒಂದಿದ್ದರೆ, ಗಹನವಾದ ವಿಚಾರದಿಂದ ಕೂಡಿದ ಮತ್ತೊಂದು ಅರ್ಥವಿರುತ್ತದೆ ಎಂದು, ಮಾತು ಮತ್ತು ಅದರ ಅರ್ಥದ ವಿಶ್ಲೇಷಣೆ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು.

ಅಂತರಂಗದ ಭಾವವನ್ನು ಮಾತು ಮತ್ತು ಕೃತಿ ಮತ್ತು ಸಂಜ್ಞೆಗಳಿಂದ ವ್ಯಕ್ತಪಡಿಸಬಹುದು. ವ್ಯಕ್ತಪಡಿಸುವ ಮಾಧ್ಯಮವು ಯಾವುದೇ ಆದರೂ ಅದಕ್ಕೆ ಎರಡು ಅರ್ಥಗಳಿರುತ್ತವೆ. ಮೇಲುನೋಟಕ್ಕೆ ಕಾಣುವ ಅರ್ಥವೇ ಒಂದಾದರೆ, ಒಳಗಿನ ಅಂತರ್ಯವೇ ಬೇರೆಯಾಗಿರುತ್ತದೆ, ನಾವು ಕೇಳಿದ ಮಾತುಗಳಿಗೆ ಪ್ರತಿಕ್ರಿಯಿಸುತ್ತೇವೆ, ನಾವು

ಕೇಳಿದ ಮಾತನ್ನು, ನಾವು ಹೇಗೆ ಅರ್ಥೈಸಿಕೊಂಡಿದ್ದೇವೆ ಎನ್ನುವುದರ ಮೇಲೆ ನಮ್ಮ ಪ್ರತಿಕ್ರಿಯೆ ಆಧರಿಸಿರುತ್ತದೆ, ಆದರೆ ಅರ್ಥವನ್ನು ಬಗೆಯದೆ ಅಥವಾ ಬಗೆಯಲು ಕ್ಷಮತೆಯ ಕೊರತೆಯಿಂದ, ನಾವು ಬಹಳಷ್ಟು ಬಾರಿ ಅಪಾರ್ಥಮಾಡಿಕೊಂಡು ಪ್ರತಿಕ್ರಿಯಿಸುತ್ತೇವೆ. ಅಲ್ಲಿ ನಮ್ಮ ಪ್ರತಿಕ್ರಿಯೆಗೆ ಆ ಮಾತಿನ ನಿಜಾರ್ಥದ ಬಲವಿರುವುದಿಲ್ಲ. ಅಂತಹ ಸಂದರ್ಭದಲ್ಲಿ ನಮ್ಮ ಪ್ರತಿಕ್ರಿಯೆ ಸೂಕ್ತವಾಗಿರುವುದಿಲ್ಲ.

(132)

| ಕಗ್ಗರಸಧಾರೆ | ಜಗದಶ್ವತ್ಥ 559 - 563 |
| --- | --- |

ಮೇಲುನೋಟಕ್ಕೆ ಕಾಣುವ ಮಾತಿನ ಅರ್ಥವನ್ನು ಬಗೆದು ನೋಡಿ ಗೂಢಾರ್ಥವನ್ನು ಅರಿತು, ನಮ್ಮ ಪೂರ್ವ ಅನುಭವದಿಂದ ನಮ್ಮ ಮನದಲ್ಲಿ ಮನೆಮಾಡಿರುವ ಅರ್ಥವನ್ನು ತುಲನೆ ಮಾಡಿದಾಗ, ನಮಗೆ ಸತ್ಯದ ಅರಿವಾಗಬಹುದು. ನಮ್ಮ ಗುರಿ ಸತ್ಯವನ್ನು ಅರಿಯುವುದಾದರೆ ಈ ಪ್ರಯತ್ನ ಸಫಲವಾಗುತ್ತದೆ. ಹಾಗಲ್ಲದೆ ಪೂರ್ವಾಗ್ರಹ ಪೀಡಿತರಾಗಿ 'ಅಪಾರ್ಥ' ವನ್ನು ಕಲ್ಪಿಸಿಕೊಂಡರೆ, ಅನರ್ಥವಾಗುತ್ತದೆ. ಒಂದು ಹಡಗು ಅಥವಾ ದೋಣಿ ಮುಂದೆ ಹೋಗಲು ಹೇಗೆ 'ವಸ್ತ್ರಪಟ' ಮತ್ತು 'ಹುಟ್ಟು' ಎರಡರ ಬಲವೂ ಬೇಕೋ ಹಾಗೆ ಸತ್ಯವನ್ನು ಅರಿಯುವ ಪ್ರಯತ್ನದಲ್ಲಿ ನಮಗೆ ಸಾಮಾನ್ಯ ಅರ್ಥ ಮತ್ತು ಗೂಢಾರ್ಥ ಎರಡರ ಬಲವಿರಬೇಕು ಎಂಬುದೇ ಈ ಮುಕ್ತಕದ ಹೂರಣ.

ಸತ್ಯವರಿಯಬೇಕಾದರೆ 'ಅಹಂಕಾರ'ವನ್ನು ಮತ್ತು ಆ ಅಹಂಕಾರ ಜನಿತವಾದ ಪೂರ್ವಾಗ್ರಹವನ್ನು ತ್ಯಜಿಸಬೇಕು. ಆದರೆ ಇವುಗಳನ್ನೆಲ್ಲ ಹೇಳುವುದು ಸುಲಭವಾದರೂ ಆಚರಣೆಯಲ್ಲಿ ತರುವುದು ಕಷ್ಟ ಸಾಧ್ಯವೇ!!! ನಮ್ಮ ನಮ್ಮ ಜೀವನದಲ್ಲಿ ಸತ್ಯವರಿಯುವ ದಿಕ್ಕಿನಲ್ಲಿ ಮುಂದುವರೆಯಬೇಕಾದರೆ ಅಪಾರ್ಥವನ್ನು ಬಿಟ್ಟು ಇಂಗಿತಾರ್ಥವನ್ನು ಅರಿತು ನಡೆದುಕೊಂಡರೆ, ನಾವು ಶಾಂತರಾಗಿರಬಹುದು. ಪೂರ್ವಾಗ್ರಹದಿಂದ ಅಪಾರ್ಥ ಮಾಡಿಕೊಂಡರೆ ಕ್ಲೇಶ, ಕಲಹ ಮತ್ತು ಜಿಗುಪ್ಸೆ ತಪ್ಪಿದ್ದಲ್ಲ. ಆಯ್ಕೆ ಮಾಡಲು ನಾವು ಸಂಪೂರ್ಣ ಸ್ವತಂತ್ರರಲ್ಲವೆ?

**ಮುಕ್ತಕ – 559**

**ಪರಮಪದದಲಿ ನೋಡು; ಬೇರುಗಳ ವ್ಯೋಮದಲಿ ।**
**ಧರೆಗಿಳಿದ ಕೊಂಬುರೆಂಬೆಗಳು, ಬಿಳಲುಗಳು ।**
**ಚಿರಜೀವಿವೃಕ್ಷವಿದು ವಿಶ್ವಜೀವಾಶ್ವತ್ಥ ।**
**ಪರಿಕಿಸಿದರರ್ಥವನು - ಮಂಕುತಿಮ್ಮ ॥**

ಧರೆಗಿಳಿದ=ಧರೆಗೆ+ಇಳಿದ, ಚಿರಜೀವಿವೃಕ್ಷವಿದು=ಚಿರಜೀವಿ+ವೃಕ್ಷವು +ಇದು, ವಿಶ್ವಜೀವಾಶ್ವತ್ಥ=ವಿಶ್ವ+ಜೀವ+ಅಶ್ವತ್ಥ, ಪರಿಕಿಸಿದರರ್ಥವನು= ಪರಿಕಿಸು+ಇದರ+ಅರ್ಥವನು, ವ್ಯೋಮ=ಆಕಾಶ, ಧರೆ=ಭೂಮಿ, ಬಿಳಲು=ಮರದಿಂದ ಹೊರಗಡೆ ಭೂಮಿಗಿಳಿಯುವ ಬೇರುಗಳು, ಪರಿಕಿಸು= ಪರೀಕ್ಷಿಸಿ ನೋಡು

ನಿಸರ್ಗದಲ್ಲಿ ಮರವು ಮೇಲಿದ್ದರೆ ಬೇರುಗಳು ಭೂಮಿಯ ಒಳಗೆ ಇರುತ್ತದೆ. ಆದರೆ ಜಗದ್ವೃಕ್ಷದ ಬೇರುಗಳು ಆಕಾಶದಲ್ಲಿ ಅಥವಾ ಪರಮ ಪದದಲ್ಲಿ ಇರುತ್ತದೆ, ಅವು ಪರಮ ಪದದ ಬೇರುಗಳಾದ್ದರಿಂದ, ಬದುಕು ಚಿರಂತನ ಮತ್ತು ನಿರಂತರ. ಇದನ್ನು ವಿಶ್ವ ಜೀವಾಶ್ವತ್ಥ ಎಂದು ಕರೆದು ಬದುಕಿನ ಮೂಲ ಮತ್ತು ಅಗಾಧತೆಯನ್ನು ಅರುಹಿ, ಅದರ ಅರ್ಥವನ್ನು ಪರೀಕ್ಷಿಸಿ ನೋಡು ಎಂದು, ನಮಗೆ ಅರುಹಿದ್ದಾರೆ ಮಾನ್ಯ ಗುಂಡಪ್ಪನವರು





'ಆಕಾಶಾದ್ವಾಯುಃ ವಾಯೋರಗ್ನಿಃ ಅರಾಪಃ ಅದ್ಭಃ ಪೃಥಿವೀ,ಪೃಥಿವ್ಯಾ ಓಷದಯಃ, ಓಷದೀಭೋನ್ನಂ, ಅನ್ನಾತ್ ಪುರುಷಃ' ಎನ್ನುತದೆ ತೈತ್ತರೀಯ ಉಪನಿಷದ್. ಹಾಗಾಗಿ ಈ ಜಗತ್ತಿನ ವೃಕ್ಷದಂತಿರುವ ಬದುಕಿನಲ್ಲಿ ಎಲ್ಲಕ್ಕೂ ಮೂಲವೇ ನಭೋಮಂಡಲ, ಜ್ಞಾನ, ಗಾಳಿ, ಮಳೆ, ಸೂರ್ಯ, ಬೆಳಕು, ಶಾಖ, ಋತುಮಾನಗಳು ಎಲ್ಲವೂ ಆ ನಭೋಮಂಡಲಕ್ಕೆ ಸೇರಿದ್ದು, ಮತ್ತು ಈ ಭೂಮಿಯಲ್ಲಿನ ಬದುಕಿಗೆ ಪೂರಕವಾಗಿರುವುದು. ಎಂದೋ ಆರಂಭಗೊಂಡ ಈ ಜೀವನ್ ವೃಕ್ಷ, ಒಂದು ಬೃಹತ್ ಅಶ್ವತ್ಥ ವೃಕ್ಷದಂತೆ, ಕವಲು ಕವಲಾಗಿ ಹರಡಿ, ಹೊಸ ಹೊಸ ಚಿಗುರು ಮತ್ತು ರೆಂಬೆ

ಕೊಂಬೆಗಳನ್ನು, ಬಗೆ ಬಗೆಯ ಹೂ ಹಣ್ಣುಗಳನ್ನು ತಳೆದು ಕೋಟ್ಯಾಂತರ ವರ್ಷಗಳಿಂದ ಕೋಟಿ ಕೋಟಿ ಬಾರಿ ಬದಲಾಗುತ್ತಾ ಇಂದಿನ ರೂಪಕ್ಕೆ ಬಂದಿದೆ.

ಪೃಥ್ವಿಯ ಮೇಲಿನ ಎಲ್ಲ ಜೀವರಾಶಿಗಳೂ ತಮ್ಮೆಲ್ಲ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ವ್ಯೋಮವನ್ನೇ, ಎಂದರೆ ಆಕಾಶವನ್ನೇ ಆಧರಿಸುತ್ತವೆ. ನಾವು ಕೇವಲ ಬದುಕುತ್ತೇವೆ, ನಮ್ಮ ಅಸ್ತಿತ್ವದ ಮೂಲ ಮತ್ತು ನಮ್ಮ ಬದುಕಿನ ಆಧಾರದ ಬಗ್ಗೆ ಯೋಚಿಸುವುದಿಲ್ಲ. ನಮ್ಮ ಅವಶ್ಯಕತೆಗಳನ್ನು ಮತ್ತು ನಮ್ಮ ಅಸ್ತಿತ್ವಕ್ಕೆ ಪೂರಕವಾದ ಎಲ್ಲವನ್ನೂ ನೀಡುವ ಆ ಪರಮಾತ್ಮನ ಸಮರ್ಪಕವಾದ ವ್ಯವಸ್ಥೆಯ ಬಗ್ಗೆ ನಮಗರಿವಿರುವುದಿಲ್ಲ.

ಒಂದು ಬೀಜ ಮೊಳಕೆಯೊಡೆದು, ಸಿಸಿಯಾಗಿ, ಗಿಡವಾಗಿ, ಮರವಾಗಿ, ಹೆಮ್ಮರವಾಗಿ ಬೃಹತ್ ವೃಕ್ಷವಾಗುವ ವ್ಯವಸ್ಥೆಯನ್ನು ನೋಡಿದರೆ, ಸೃಷ್ಟಿಯ ಅದ್ಭುತತೆ ನಮಗೆ ಅರ್ಥವಾಗುತ್ತದೆ. ಇದೇ ರೀತಿ ಈ ಜಗದಕ್ಷವೂ ವಿಕಸನ ಗೊಂಡಿದೆ. ಇದಕ್ಕೆಲ್ಲ ಮೂಲ ಪರಮ ಪದ, ಆ ಪರಮ ಶಕ್ತಿಯ ನಿವಾಸಸ್ಥಾನ. ಈ ಜಗತ್ತಿನ ಎಲ್ಲ ವಿದ್ಯೆಗಳ ಗುರಿಯೇ ಈ ಸೃಷ್ಟಿ ಮತ್ತು ಸೃಷ್ಟಿಕರ್ತನನ್ನು ಅರಿಯುವುದು. 'ವಿಶ್ವಜೀವಾಶ್ವತ್ಥ ಪರಿಕಿಸಿದರರ್ಥವನು ಎಂದು ಹೇಳುತ್ತಾ ಪರಮಾರ್ಥವನ್ನು ಅರಿಯುವ ಆದೇಶವನ್ನು ನಮಗೆ ಮಾನ್ಯಗುಂಡಪ್ಪನವರು ನೀಡಿದ್ದಾರೆ. ಜಗತ್ತನ್ನು ಮತ್ತು ಇದರ ಸೃಷ್ಟಿಕರ್ತನನ್ನು ಅರಿಯಬೇಕಾದರೆ ಜಗತ್ತಿನಲ್ಲೇ ಇದ್ದು, ಜಗತ್ತಿನ ಮೂಲಕವೇ, ಜಗತ್ತಿನಿಂದ ವಿಮುಖರಾಗಬೇಕು. ಇದು ಅಸಾಧ್ಯವಲ್ಲ, ಆದರೆ ಕಷ್ಟಸಾಧ್ಯ.

**ಮುಕ್ತಕ – 560** **ಜೀವನದ ಮೂಲ ಮೇಲಿಹುದು ಪರಮೋರ್ಧ್ವದಲಿ |**
**ತೀವಿರ್ಪುದದು ಕೆಳಗೆ ನಮ್ಮ ಲೋಕದಲ್ಲಿ ||**
**ನಾವದರ ಕಡ್ಡಿಯಿಲೆ, ಚಿಗುರುವೆವು, ಬಾಡುವೆವು |**
**ಸಾವು ಮರಕೇನಿಲ್ಲ - ಮಂಕುತಿಮ್ಮ ||**

ಪರಮೋರ್ಧ್ವದಲಿ = ಪರಮ+ಊರ್ಧ್ವದಲಿ, ತೀವಿರ್ಪುದದು=ತೀವಿ +ಇರ್ಪುದು+ಅದು, ಕಡ್ಡಿಯಲೆ= ಕಡ್ಡಿ+ಎಲೆ, ಮರಕೇನಿಲ್ಲ= ಮರಕೆ+ಏನೂ+ಇಲ್ಲ,

ಪರಮೋರ್ಧ್ವ=ಅತ್ಯಂತ ಎತ್ತರ, ತೀವಿರ್ಪುದು=ತುಂಬಿಕೊಂಡಿದೆ, ವ್ಯಾಪಿಸಿದೆ,

ಜೀವನದ ಮೂಲ ಅಥವಾ ಅಧಾರ ಎಲ್ಲೋ ಮೇಲಿದೆ. ಅದು ಇರುವ ಸ್ಥಳ ಪರಮ ಊರ್ಧ್ವ ಅದಕ್ಕಿಂತ ಮೇಲೆ ಯಾವುದೂ ಇಲ್ಲ. ಆದರೆ ಅದು ಜಗತ್ತಿನಲ್ಲಿ ಎಲ್ಲೆಲ್ಲೂ ಎಂದರೆ, ನಮ್ಮ ಲೋಕದಲ್ಲೂ ವ್ಯಾಪಿಸಿಕೊಂಡಿದೆ. ನಾವುಗಳು ಈ ಜಗತ್ವಕ್ಷದ ಕಡ್ಡಿ ಮತ್ತು ಎಲೆಗಳು. ನಾವು ಒಣಗಿ ಬಾಡಿ ಉದುರಿದರೂ ಈ ಜಗತ್ವೃಕ್ಷಕ್ಕೆ ಸಾವು ಎಂಬುದು ಇರುವುದಿಲ್ಲ, ಎಂದು ಸೃಷ್ಟಿಯ ಸೂಕ್ಷ್ಮತೆಯನ್ನು, ವ್ಯಾಪ್ತಿಯನ್ನು ಮತ್ತು ನಿರಂತರತೆಯನ್ನು ವಿಶ್ಲೇಸಿದ್ದಾರೆ ಮಾನ್ಯ ಗುಂಡಪ್ಪನವರು, ಈ ಮುಕ್ತಕದಲ್ಲಿ.

ಈ ಜಗತ್ತಿನ ಸೃಷ್ಟಿ ಮತ್ತು ಸ್ವರೂಪವನ್ನು ವಿವರಿಸುವ ಪುರುಷಸೂಕ್ತ, 'ಸ ಭೂಮಿಂ ವಿಶ್ವತೋ ವೃತ್ವಾ ಅತ್ಯತ್ ತಿಷ್ಠತ್ ದಶಾಂಗುಲಂ' ಎಂದು ಹೇಳುವ ಈ ಸೂಕ್ತ, ಈ ಜಗತ್ತನ್ನು ಸೃಷ್ಟಿಸಿ, ಪೋಷಿಸಿ ಧಾರಣೆ ಮಾಡಿರುವ ಆ ಪರಮ ಶಕ್ತಿ, ನಾವಿರುವಂತಹ ಲಕ್ಷಾಂತರ ಭೂಮಿಗಳನ್ನೂ ಸೇರಿ, ಇಡೀ ವಿಶ್ವವನ್ನು ಆವರಿಸಿಕೊಂಡು, ಅದರ ಮೇಲೆ ಹತ್ತಂಗುಲದಲ್ಲಿ ನಿಂತಿದೆ ಎಂದು ಹೇಳುತ್ತದೆ. ಆದರೆ ಇದು ಹೇಳುವ ಆ 'ಮೇಲೆ' ಎನ್ನುವುದು ಎಷ್ಟು ಮೇಲಿದೆ ಎನ್ನುವುದು ನಮ್ಮ ಕಲ್ಪನೆಗೂ ನಿಲುಕದ ವಿಷಯ.

'ನಾನು-ನಾವು' ಎನ್ನುವ ನಾವುಗಳು ಈ ಜಗತ್ತೆಂಬ ಬೃಹತ್ ವೃಕ್ಷದ ಕೇವಲ ಒಂದು ಸಣ್ಣ ಎಲೆ ಅಥವಾ ಕಡ್ಡಿ, ಚಿಗುರಿ, ಪಲ್ಲವಿಸಿ, ಹೂತು, ಕಾತು, ಒಣಗಿ ಉದುರಿಹೋಗುವ ಎಲೆ ಅಥವಾ ಕಡ್ಡಿಗಳು. ಬಣ್ಣ, ಆಕಾರ, ಗಂಧ, ಅಥವಾ ರುಚಿಗಳು ಏನೇ ಇದ್ದರೂ, ನಾವೆಲ್ಲಾ ಆ ಜಗತ್ತೆಂಬ ಅಶ್ವತ್ಥ ವೃಕ್ಷದ ಅಂಗಗಳು. ಒಂದು ಮರ ಪ್ರತೀ ಶಿಶಿರದಲ್ಲಿ ತನ್ನೆಲ್ಲ ಎಲೆಗಳನ್ನೂ ಕೊಡವಿಕೊಂಡು ಮತ್ತೆ ಹೊಸ ಚಿಗುರ ತಳೆಯುವಂತೆ ನಾವು ಎಷ್ಟು ಬಾರಿ ಹುಟ್ಟಿ ಬೆಳೆದು ನಾಶಗೊಂಡರೂ, ಈ ವೃಕ್ಷ ಮಾತ್ರ ತನ್ನ ಹೊಸ ಹೊಸ ರೂಪಗಳನ್ನು ತಳೆಯುತ್ತಲೇ ಇರುತ್ತದೆ. ಇದು ಚಿರಾಯು, ಶಾಶ್ವತ. ನಾವು ಕೇವಲ ಬಂದುಹೋಗುವ ಯಾತ್ರಿಕರಂತೆ.

ಒಂದು ಬಾರಿ ಓದಿ, ಈ ಮೇಲಿನ ವಿಷಯ ಮತ್ತು ತತ್ವವನ್ನು ತಿಳಿದುಕೊಂಡರೂ, ನಾನು ಎಂಬ ಮಮಕಾರದಿಂದ ಜಗತ್ತಿನ ವೈಶಾಲ್ಯದಲ್ಲಿ ನಮ್ಮ ಅತೀ ಗೌಣ' ತೆ ನಮಗೆ ಅರ್ಥವಾಗುವುದೇ ಇಲ್ಲ. ಕೆಲಕಾಲ ತತ್ವ ಕಣ್ಣಿಗೆ ಕಂಡರೂ ವಿಷಯಾಸಕ್ತರಾದ ನಾವು, ಇಂದ್ರಿಯಲೋಲುಪರಾದ ನಾವು, ಅಹಂಕಾರದಿಂದ ಮರೆಯುತ್ತೇವೆ. ನಮಗೆ ನಾವು ಯಾರೆಂದು ಅರಿವಾಗುವುದೇ ಇಲ್ಲ. ನಮ್ಮನ್ನು ನಾವು ನಮ್ಮ ಬುದ್ಧಿಯಿಂದಲೋ, ರೂಪದಿಂದಲೋ, ಗುರುತಿಗಾಗಿ ಇಟ್ಟ ಹೆಸರಿನಿಂದಲೋ ಗುರುತಿಸಿಕೊಳ್ಳುತ್ತೇವೆ. ಆದರೆ ನಮ್ಮ ನಿಜವಾದ ಗುರುತು ಆ ಪರಮ ಆತ್ಮನ

ಒಂದು ಅಂಶವಾದ 'ಆತ್ಮ'ವೆಂದು ಅರಿಯುವುದೇ ಇಲ್ಲ. ಹಾಗೆ ಆ ತತ್ವ ನಮ್ಮ ಹೃನ್ಮನಸ್ಸುಗಳಲ್ಲಿ ಸ್ಥಿರವಾದರೆ ಈ ಪ್ರಾಪಂಚಿಕ ಸುಖ ದುಃಖಗಳ ಪೀಡನೆಯಿಂದ ನಾವು ಖಂಡಿತ ಮುಕ್ತಿಹೊಂದಬಹುದು.

ಮುಕ್ತಕ - 561

ಒಂದು ಕಡೆ ಚಿಗುರುತಲಿ, ಒಂದು ಕಡೆ ಬಾಡುತಲಿ ।
ಕಂದುತಿರೆ ಕೊಂಬೆ, ಮುಂಡದಲಿ ಹಬ್ಬುತಲಿ ॥
ಎಂದೆಂದುಮಶ್ವತ್ಥ ಹಳೆಹೊಸದು, ತಾನದಾ ।
ಸ್ಪಂದನವೋ ಬ್ರಹ್ಮನದು - ಮಂಕುತಿಮ್ಮ ॥





ಎಂದೆಂದುಮಶ್ವತ್ಥ=ಎಂದೆಂದುಂ+ಅಶ್ವತ್ಥ,
ತಾನದಾ=ಲಯದಿಂದ ಕೂಡಿದ

ಅಶ್ವತ್ಥ ವೃಕ್ಷವು ಒಂದು ಕಡೆ ಬಾಡಿದರೆ, ಒಂದುಕಡೆ ಚಿಗುರುವುದು, ಕೆಲ ಕೊಂಬೆಗಳು ಒಣಗುತ್ತಿದ್ದರೆ ಮತ್ತೊಂದು ಕಡೆ ಮೇಲೆ(ಮುಂಡದಲಿ) ಹೊಸ ಚಿಗುರು ತಳೆಯುತ್ತದೆ. ಅದೇ ರೀತಿ ಈ ಜಗದ್ವೃಕ್ಷವೂ ಸಹ ಒಂದು "ಲಯ"ದಲ್ಲಿ ಬದಲಾಗುತ್ತಾ, ಎಂದೆಂದೂ ಬಾಡದ, ಹಳೆಯದಾಗದ, ಮತ್ತೆ ಮತ್ತೆ ಹೊಸತನವನ್ನು ತಳೆಯುವ ರೀತಿಯಲ್ಲಿದೆ ಮತ್ತು ಚಲನ ರೂಪದಲ್ಲಿರುವ ಆ ಬ್ರಹ್ಮನೇ ಈ ಜಗತ್ತು ಎಂದು, ಸೃಷ್ಟಿಯ ಸ್ವರೂಪವನ್ನು ಎಳೆ ಎಳೆಯಾಗಿ ಬಿಡಿಸಿಟ್ಟಿದ್ದಾರೆ ಮಾನ್ಯ ಗುಂಡಪ್ಪನವರ ಈ ಮುಕ್ತಕದಲ್ಲಿ.

ಶ್ವಃ ಎಂದರೆ ನಾಳೆ, ಶ್ವತ್ಥ ವೆಂದರೆ ನಾಳೆಯಿರುವ ಸ್ಥಿತಿ. 'ಅ-ಶ್ವತ್ಥ' ವೆಂದರೆ ನಾಳೆ ಹೇಗಿರುವುದೋ ಮುಂದೆಯೂ ಹಾಗೆ ಇರುವುದಿಲ್ಲ ಎಂದು ಅರ್ಥ. (ಕೃಪೆಃ ಕಗ್ಗಕ್ಕೊಂದು ಕೈಪಿಡಿ - ಡಿ. ಆರ್. ವೆಂಕಟರಾಮನ್) ಎಂದರೆ ನಿರಂತರ

ಬದಲಾವಣೆಯಾಗುವುದು ಅಶ್ವತ್ಥ ವೃಕ್ಷದ ಗುಣ, ಒಂದು ಕಡೆ ಬಾಡುತ್ತಿದ್ದರೆ ಇನ್ನೊಂದು ಕಡೆ ಚಿಗುರುತ್ತಾ ತನ್ನ ನಿತ್ಯ ನೂತನ ಸ್ವರೂಪವನ್ನು ಕಾಯ್ದಿರಿಸಿಕೊಳ್ಳುವುದು. ಅದೇ ರೀತಿ ಈ ಜಗದ್ವೃಕ್ಷವೂ ಸಹ ನಿತ್ಯ ವಿನೂತನ. ನಿರಂತರ ರೂಪಾಂತರವಾಗುತ್ತಾ ಹೊಸತು ಹಳತುಗಳೆಲ್ಲವನ್ನೂ ಒಳಗೊಂಡಿದೆ. ಸೃಷ್ಟಿಕರ್ತನ ನಿಯಮದ ಪ್ರಕಾರ ಬದಲಾಗುತ್ತಾ ಹೋಗುವುದೇ ಸೃಷ್ಟಿಯ ಗುಣ. ಇಲ್ಲಿನ ಪ್ರತೀ ವಸ್ತುವಿನ ರೂಪ ಬದಲಾಗುತ್ತಾ ಹೋಗುತ್ತದೆ. ಆ ರೂಪ ಬದಲಾವಣೆಗೆ, ಈ ರೂಪವನ್ನು ಧಾರಣೆ ಮಾಡಿರುವ ಚೇತನವೇ ಕಾರಣ. ಈ ರೂಪ ಬದಲಾವಣೆಯೇ ಹಳತನ್ನು ಇಲ್ಲವಾಗಿಸಿ, ಹೊಸತನ್ನು ಉಂಟಾಗಿಸುತ್ತದೆ. ಆದರೆ ಈ ಪ್ರಕ್ರಿಯೆಯ ಹಿಂದಿರುವ ಶಕ್ತಿ ಮಾತ್ರ ಬದಲಾಗದೆ ಸ್ಥಿರವಾಗಿರುತ್ತದೆ.

ಈ ಜಗತ್ತಿನ ಆದಿಯಿಂದ ಸೃಷ್ಟಿಯಾದ ಪ್ರತಿ ಜಂತುವನ್ನೂ ವಿಶ್ಲೇಷಿಸಿದರೆ, ಹಲ ವಿಧವಾದ ಆಕಾರ, ಬಣ್ಣ, ಸ್ವಭಾವ ಮತ್ತು ಕ್ರಿಯೆಗಳನ್ನು ಅವು ಧರಿಸಿದ್ದರೂ, ಅವುಗಳನ್ನು ಧರಿಸಿದ ಆ ಪರಮಾತ್ಮ ಶಕ್ತಿ ಅಂದಿನಿಂದಲೂ ಇಂದಿನವರೆಗೂ ಬದಲಾಗದೆ ಹಾಗೇ ಇದೆ. ಆ ಪರಮ ಶಕ್ತಿ ತನ್ನ ಸ್ವರೂಪದಲ್ಲಿ ಬದಲಾಗದೆ ಇದ್ದರೂ ತಾನು ಧರಿಸಿದ ರೂಪಗಳು ಬದಲಾಗುತ್ತಾ ಇರುತ್ತದೆ. ಹಳೆಯ ರೂಪಗಳನ್ನು ತ್ಯಜಿಸಿ ಹೊಸ ಹೊಸ ರೂಪಗಳನ್ನು ಧರಿಸಿ ಇಡೀ ಜಗತ್ತೇ ಹೊಸದಾಗಿ ಕಾಣುವಂತೆ ನೋಡಿಕೊಳ್ಳುತ್ತದೆ. ಆ ಪರಬ್ರಹ್ಮ ವಸ್ತುವಿನ ಸ್ಪಂದನವೇ ಈ ಜಗತ್ತಿನ ಬಹುರೂಪ, ಹೊಸತನ ಮತ್ತು ನಿರಂತರ ಬದಲಾವಣೆ.

ನಾವೂ ಸಹ ಈ ದೈವೀಕ ವಿನ್ಯಾಸದ ಒಂದು ಅಂಶವಷ್ಟೇ. ಬದುಕಿನಲ್ಲಿ ನಾವು, ಸೃಷ್ಟಿಯ ಸಮಗ್ರತೆಯನ್ನು, ಪರಿಪೂರ್ಣತೆಯನ್ನು, ನಿರಂತರತೆಯನ್ನು ಮತ್ತು ನೂತನತೆಯನ್ನು ಕಾಣಬೇಕು. ಹಾಗೆ ಕಂಡರೆ ನಮಗೆ ನಮ್ಮ ಮಿತಿಗಳ ಅರಿವಾಗಿ, ನಾವು ಆ ಪರತತ್ವಕ್ಕೆ ಶರಣಾಗಿ ಶಾಂತವಾಗಿ ಜೀವಿಸಲಾದರೆ ಒಂದು ಧನ್ಯತೆಯನ್ನು ಪಡೆಯಬಹುದು. ಅಂತಹ ಪ್ರಯತ್ನ ನಮ್ಮದಾಗಬೇಕು.

**ಮುಕ್ತಕ – 562**

**ಎಲೆಗಳನು ಕಡ್ಡಿ, ಕಡ್ಡಿಯ ರೆಂಬೆಕೊಂಬೆಗಳು |**
**ತಳೆದು ಪೆರ್ಚಿಸುತಿಹವು ಮರದ ಬಾರಿಯ ||**
**ಸ್ಥಲವೊಂದು ನಿನಗಿಹುದು ವಿಶ್ವವೃಕ್ಷದೊಳಂತು |**
**ಹಳಿಯದಿರು ನಿನ್ನಿರವ - ಮಂಕುತಿಮ್ಮ ||**

ಪೆರ್ಚಿಸುತಿಹವು=ಪೆರ್ಚಿಸುತ+ಇಹವು, ಬಾಳ್ಸಿರಿಯ=ಬಾಳ್+ಸಿರಿಯ, ಸ್ಥಲವೊಂದು ಸ್ಥಲವು+ಒಂದು,
ನಿನಗಿಹುದು=ನಿನಗೆ+ಇಹುದು, ವಿಶ್ವವೃಕ್ಷದೊಳಂತು=ವಿಶ್ವ+ವೃಕ್ಷದೊಳು+ಅಂತು,
ಹಳಿಯದಿರು=ಹಳಿಯದೆ+ಇರು, ನಿನ್ನಿರವ=ನಿನ್ನ+ಇರವ,
ಪೆರ್ಚಿಸು=ಹೆಚ್ಚಿಸು, ಹಳಿಯದೆ= ಬಯ್ಯದೆ, ಇರವ=ಅಸ್ತಿತ್ವವನ್ನು

ಒಂದು ಅಶ್ವತ್ಥ ವೃಕ್ಷದಲ್ಲಿ ಎಲೆಗಳನ್ನು ಕಡ್ಡಿಗಳೂ, ಕಡ್ಡಿಗಳನ್ನು ರೆಂಬೆಗಳು, ರೆಂಬೆಗಳನ್ನು ಕೊಂಬೆಗಳೂ ತಳೆದು ಆ ಮರದ ಸೊಬಗನ್ನು ಹೆಚ್ಚಿಸುತ್ತದೆ. ಅದೇ ರೀತಿ ಈ ಜಗದ್ವೃಕ್ಷದ, ಎಂದರೆ ವಿಶ್ವಜೀವನದ ವೃಕ್ಷದಲ್ಲಿ ಮತ್ತು ಅದರ ಸೊಬಗಿನಲ್ಲಿ ನಿನಗೂ ಒಂದು ಪಾತ್ರವಿದೆ, ಹಾಗಾಗಿ ನಿನ್ನ ಬಾಳನ್ನು ನೀ ಜರಿಯದಿರು, ಹಳಿಯದಿರು ಎಂದು ಜಗತ್ತಿನಲ್ಲಿ ಜನಿಸುವ ಪ್ರತೀ ಜೀವಿಯ ಪಾತ್ರದ ಕುರಿತು ವಿಶ್ಲೇಷಣೆ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು.

ಅಶ್ವತ್ಥಮರದಲ್ಲಿ ಎಲೆಗೆ ಅಧಾರ ಕಡ್ಡಿ, ಕಡ್ಡಿಗೆ ಆಧಾರ ಕೊಂಬೆ, ಕೊಂಬೆಗಾಧಾರ ರೆಂಬೆ, ರೆಂಬೆಗಾಧಾರ ಕಾಂಡ, ಕಾಂಡಕ್ಕೆ ಬೇರು ಆಧಾರ, ಬೇರಿಗೆ ಭೂಮಿಯಾದಾರ, ಈ ಭೂಮಿಗೆ ಸೃಷ್ಟಿಯಾಧಾರ ಮತ್ತು ಸೃಷ್ಟಿಗೆ ಸೃಷ್ಟಿಕರ್ತನಾಧಾರ. ಹೀಗೆ ಎಲ್ಲವೂ ಒಂದಕ್ಕೊಂದು ಪೂರಕವಾಗಿ ಮತ್ತು ಪ್ರೇರಕವಾಗಿದ್ದು ಹೇಗೆ ಆ ಮರದ ಸೌಂದರ್ಯವನ್ನು ಹೆಚ್ಚಿಸುತ್ತದೋ, ಹಾಗೆಯೇ ಆ ಅಶ್ವತ್ಥವೃಕ್ಷದಲ್ಲಿನ ಆ ಎಲೆಯೆಂತೆ ನಮಗೂ ಸಹ ಈ ಬ್ರಹ್ಮಾಂಡದಲ್ಲಿ ಒಂದು ಸ್ಥಾನ ಮತ್ತು ಪಾತ್ರವಿದೆ ಎಂದು ಅರಿತು, ನಮ್ಮ ಹಳಿಯದೆ ಅಸ್ತಿತ್ವವನ್ನು ಬಾಳಬೇಕು ಎನ್ನುತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಅಶ್ವತ್ಥ ವೃಕ್ಷದ ಉಪಮೆಯನ್ನೇ ನಾವು ನಮ್ಮ ಅಸ್ತಿತ್ವಕ್ಕೂ ಅನ್ವಯಿಸಿಕೊಂಡರೆ, ನಮ್ಮ ಬದುಕಿನ ಆಧಾರಗಳನ್ನು ಮತ್ತು ಮೂಲವನ್ನು ಅರಿತರೆ, ನಾವೂ ಸಹ ಒಂದು ದಿನ ನಮ್ಮ ತಂದೆ ತಾಯಿ ಎನ್ನುವ ಕೊಂಬೆಗಳಿಂದ

ಚಿಗುರಿ ನವ ಪಲ್ಲವದಂತೆ ಈ ಧರೆಗೆ ಬಂದು, ಹೂತು, ಕಾತು, ಹಣ್ಣಾಗಿ ಮತ್ತೆ ಧರೆಗೆ ಸೇರುತ್ತೇವೆ ಎಂಬುದು ಅರಿವಾಗುತ್ತದೆ. ಆದರೆ ಆ ಮರದ ಸೊಬಗನ್ನು ಹೆಚ್ಚಿಸುವ ಚಿಗುರಂತೆ ನಾವು ಈ ಜಗದ್ವೃಕ್ಷದಲ್ಲಿ ಬಾಳುತ್ತಿದ್ದೇವೆಯೇ ಎಂದು ಅವಲೋಕಿಸಿಕೊಂಡರೆ, ಬಹುಶಃ ನಮಗೆ ತೀವ್ರ ನಿರಾಸೆ ಮತ್ತು ಜಿಗುಪ್ಸೆ ಉಂಟಾಗುತ್ತದೆ.

ಕೇವಲ ಮಮಕಾರ ಮತ್ತು ಅಹಂಕಾರಗಳ ದಾಸರಾಗಿ ಸದಾಕಾಲ ಸ್ವಾರ್ಥ ಸಾಧನೆಯ ದಾರಿಯಲ್ಲಿ ನಡೆಯುವ ನಮಗೆ ನಮ್ಮ ಮೂಲದ ಅರಿವಿಲ್ಲ ಮತ್ತು ನಾವು ವಹಿಸಬಹುದಾದ ಸತ್ಪಾತ್ರದ ಅರಿವೂ ಇಲ್ಲ.





ನಮ್ಮ ಸ್ವಭಾವದಲ್ಲಿ ಮನೆಮಾಡಿರುವ, ಈ ಅಹಂಕಾರ ಮತ್ತು ಮಮಕಾರಗಳನ್ನು ತೊರೆದರೆ ನಮಗೆ ನಮ್ಮ ಅಸ್ತಿತ್ವದ ಮೂಲ ಅರಿವಾಗಿ ನಮ್ಮ ಬದುಕನ್ನು ನಾವೇ ಜರಿಯದೇ ಸಕಲರಲ್ಲೂ ಪ್ರೀತಿ ಪ್ರೇಮದಿಂದ ಈ ಜಗದ್ವೃಕ್ಷದಲ್ಲಿನ ನಮ್ಮ ಪಾತ್ರವನ್ನು ಸೂಕ್ತವಾಗಿ ವಹಿಸಿ, ನಾವೂ ಸಂತೋಷದಿಂದ ಇದ್ದು ಅನ್ಯರ ಆನಂದಕ್ಕೆ ಕಾರಣರಾಗಬಹುದು.

**ಮುಕ್ತಕ – 563**

**ಬಿಳಲಲ್ಲ, ಬೇರಲ್ಲ, ಮುಂಡಕಾಂಡಗಳಲ್ಲ |**
**ತಳಿರಲ್ಲ, ಮಲರಲ್ಲ, ಕಾಯಿ ಹಣ್ಣಲ್ಲ**
**ಎಲೆ ನೀನು; ವಿಶ್ವವೃಕ್ಷದೊಳ್ ಎಲೆಯೊಳೊಂದು ನೀಂ |**
**ತಿಳಿದದನು ನೆರವಾಗು - ಮಂಕುತಿಮ್ಮ ||**

ತಳಿರಲ್ಲ=ತಳಿರು+ಅಲ್ಲ, ಮಲರಲ್ಲ=ಮಲರು+ಅಲ್ಲ, ವಿಶ್ವವೃಕ್ಷದೊಳ್=ವಿಶ್ವ+ವೃಕ್ಷದ+ಒಳ್,
ಎಲೆಯೊಳೊಂದು =ಎಲೆಯೊಳು+ಒಂದು,

ತಿಳಿದದನು=ತಿಳಿದು ಅದನು, ತಳಿರು=ಚಿಗುರು, ಮಲರು= ಹೂ,

ಈ ಜಗದ್ವೃಕ್ಷದಲ್ಲಿ ನೀನು ಬಿಳಲಲ್ಲ, ಬೇರಲ್ಲ, ಮುಂಡವಲ್ಲ, ಕಾಂಡವಲ್ಲ, ಚಿಗುರಲ್ಲ, ಹೂವಲ್ಲ, ಕಾಯಿ ಹಣ್ಣೂ ಅಲ್ಲ. ಆ ವೃಕ್ಷದ ಸಹಸ್ರಾರು ಎಲೆಗಳಲ್ಲಿ ನೀನೂ ಸಹ ಒಂದು ಎಲೆ. 'ನಾನೇ' ಎನ್ನುವ ಭಾವ ಬಿಟ್ಟು 'ನಾನೂ ಎಲ್ಲರಂತೆ' ಎಂದು ಈ ಬದುಕೆಂಬ ವೃಕ್ಷದಲ್ಲಿ ಒಂದಾಗಿ, ಆ ವೃಕ್ಷಕ್ಕೆ ನೆರವಾಗು ಎಂದರೆ, ಒಟ್ಟಾರೆ ಬದುಕಿಗೆ ಪೂರಕವಾಗಿ ಜೀವಿಸು ಎಂದು ಆದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಒಂದು ಮರದಲ್ಲಿ ಕೊಂಬೆ ರೆಂಬೆಗಳು, ಮುಂಡ ಕಾಂಡಗಳು ಇದ್ದಾಗ್ಯೂ ಆ ಮರದ ಅಸ್ತಿತ್ವಕ್ಕೆ ಪೂರಕವಾಗಿ ಒದಗುವುದು ಅದರ ಬೇರುಗಳು ಮತ್ತು ಎಲೆಗಳು. ಬೇರುಗಳು ಭೂಮಿಗೆ ಭದ್ರವಾಗಿ ಅಂಟಿಕೊಂಡು ಮರಕ್ಕೆ ಬೇಕಾದ ಸಾರವನ್ನು ಹೀರಿ, ಕಾಂಡದ ಮೂಲಕ ಮರದ ದೇಹಕ್ಕೆಲ್ಲ ಕಳುಹಿಸುತ್ತದೆ. ಎಲೆಗಳು ಸೂರ್ಯನ ಬೆಳಕು ಮತ್ತು ಶಾಖದಿಂದ 'ದ್ಯುತಿಸಂಶ್ಲೇಷಣೆ' (Photosynthesis)ಯ ಮೂಲಕ ಆ ಮರಕ್ಕೆ ಬೇಕಾದ ಆಹಾರವನ್ನು ತಯಾರಿಸಿ ಆ ಗಿಡಕ್ಕೆ ಪೂರಕವಾಗಿ ತನ್ನ ಕರ್ತವ್ಯವನ್ನು ಮಾಡುತ್ತದೆ. ಹೇಗೆ ಪ್ರತಿಯೊಂದು ಎಲೆಯೂ ಗಿಡಕ್ಕೆ ಪೂರಕವಾಗಿರುತ್ತದೆಯೋ ಹಾಗೆಯೇ ಈ ಜಗದ್ವೃಕ್ಷಕ್ಕೆ ಪೂರಕವಾಗಿ ನಾವೂ ಸಹ ಬದುಕಬೇಕು ಎನ್ನುವುದು ಈ ಮುಕ್ತಕದ ಸಂದೇಶ.

ನೂರಾರು ವರ್ಷಗಳಿಂದ ಇರುವ ಮರದಲ್ಲಿ ಹೊಸ ಎಲೆಗಳು ಚಿಗುರುವಂತೆ, ಸಹಸ್ರಾರು ಕೋಟಿವರ್ಷಗಳ ಈ ಜಗದ್ವೃಕ್ಷದಲ್ಲಿ ಪಲ್ಲವಿಸಿದ ಎಲೆಗಳು ನಾವು. ಈ ಜಗದ್ವೃಕ್ಷದ ಬೇರುಗಳೇ ಅಂದಿನಿಂದ ಬೆಳೆದು ಬಂದ ನಮ್ಮ ಸಂಸ್ಕೃತಿ, ಸಂಸ್ಕಾರಗಳು. ಅವುಗಳ ಬಲದಿಂದಲೇ ನಮ್ಮ ಅಸ್ತಿತ್ವ ಕೆಲಕಾಲ ಈ ಜಗದ್ವೃಕ್ಷದ ಮೇಲೆ

ನಲಿದಾಡಿ ಈ ವೃಕ್ಷಕ್ಕೆ ಪೂರಕವಾದ ಕೆಲಸಗಳನ್ನು ಮಾಡಿ ನಿರ್ಗಮಿಸುವುದೇ ನಮ್ಮ ಕರ್ತವ್ಯ. ನಮ್ಮ ಕರ್ತವ್ಯವನ್ನು ನಾವು ಸಮರ್ಪಕವಾಗಿ ನಿರ್ವಹಿಸಿದರೆ ವೃಕ್ಷವೂ ಸಮೃದ್ಧಿಯಾಗಿ ಇರುತ್ತದೆ, ಇಲ್ಲದಿದ್ದರೆ ಸೊರಗುತ್ತದೆ.

ಇಂದು ಆಗಿರುವುದೇ ಅದು, ಜಗದ್ವೃಕ್ಷ ಸೊರಗುತ್ತಿದೆ. ವಿಶ್ವದಾದ್ಯಂತ ಕೆಲ ಜನರ ದುರ್ಬುದ್ಧಿಯಿಂದ ಹಲ ಜನರ ಬದುಕು ದುರ್ಭರವಾಗುತ್ತಿದೆ. ಕೆಲವರ ಸ್ವಾರ್ಥ, ಅಹಂಕಾರ ಮುಂತಾದ ಬದುಕಿಗೆ ಮಾರಕವಾದ ಗುಣಗಳಿಂದ ಒಟ್ಟು ಸಮುದಾಯದ ಬದುಕು ದುರ್ಭರವಾಗುತ್ತಿದೆ. ಮಾನ್ಯ ಗುಂಡಪ್ಪನವರು ತಿಳಿದದನು ನೆರವಾಗು 'ಎಂದು ಹೇಳುವಂತೆ ನಾವು ಆತ್ಮಾವಲೋಕನ ಮಾಡಿಕೊಂಡು ಇಂದಿನ ಜಗದವೃಕ್ಷದಲ್ಲಿ ನಮ್ಮ ಪಾತ್ರವೇನು, ನಾವದನ್ನು ಹೇಗೆ ನಿರ್ವಹಿಸುತ್ತಿದ್ದೇವೆ, ಎನ್ನುವುದನ್ನು ಅರಿತು, ಕೊರತೆಗಳನ್ನು ನೀಗಿಕೊಂಡು, ಬಾಳಿದರೆ ಜಗತ್ತಿನ ಬದುಕಿಗೆ ಪೂರಕವಾಗಬಹುದು. ಎಲ್ಲರ ಒಳಿತಿಗೆ ನಮ್ಮ ಪ್ರಯತ್ನವಲ್ಲದಿದ್ದರೂ ಯಾರಿಗೂ ಕೆಡುಕನ್ನು ಮಾಡದೆ ಬದುಕಿದರೆ ಅದೇ ನಾವು ಈ ಜಗದ್ರಕ್ಷಕ್ಕೆ ಮಾಡುವ ಮಹದುಪಕಾರ ಎಂದುಕೊಳ್ಳಬೇಕು.

**ಮುಕ್ತಕ – 564**

**ಎತ್ತಲೋ ಕಾಡುಮಬ್ಬಿನ ಬಳ್ಳಿ ಮೊಗ್ಗಿನಲಿ |**
**ಚಿತ್ರರಚನೆಗದೇಕೆ ತೊಡಗುವಳ್ ಪ್ರಕೃತಿ? ||**
**ಕೃತ್ಯಕ್ಕೆ ತಾಂ ತರುವ ಶಕ್ತಿ ಗುಣ ಪೂರ್ಣತೆಯ |**
**ಸಾರ್ಥಕವೊ ಜೀವಿತಕ್ಕೆ – ಮಂಕುತಿಮ್ಮ ||**

ಚಿತ್ರರಚನೆಗದೇಕೆ=ಚಿತ್ರ +ರಚನೆಗೆ+ಅದೇಕೆ,

ಮಬ್ಬಿನ =ಕತ್ತಲಿನ

ಪ್ರಕೃತಿ ಮಾತೆ ಎಲ್ಲೋ ಒಂದು ಕತ್ತಲೆಯ ಕಾಡಿನಲ್ಲಿ ಒಂದು ಬಳ್ಳಿಯಲ್ಲಿ ಸುಂದರ ಹೂವನ್ನು ಚಿತ್ರದಂತೆ ರಚನೆ ಮಾಡಿ, ತನ್ನ ಶಕ್ತಿಯನ್ನು ಸಾರ್ಥಕಗೊಳಿಸುವಂತೆ, ನಾವು ಮಾಡುವ ಪ್ರತೀ ಕೆಲಸಕ್ಕೂ ಶಕ್ತಿಯನ್ನು ತುಂಬಿ ಪರಿಪೂರ್ಣತೆಯೆಡೆಗೆ ನಡೆದರೆ, ನಮ್ಮ ಬದುಕಿಗೂ ಅದು ಸಾರ್ಥಕ್ಯ ಎಂದು, ಬದುಕಿನ ಸಾರ್ಥಕತೆಯನ್ನು ಸಾಧಿಸುವ ಪರಿಯನ್ನು ಅರುಹಿದ್ದಾರೆ ನಮಗೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಾವು ಬಾಲ್ಯದಲ್ಲಿ ಅರಿವಿಲ್ಲದೆ ಹಲವಾರು ಕೆಲಸಗಳನ್ನು ಮಾಡುತ್ತೇವೆ. ಅವು ಬಾಲ್ಯದ ಕೃತ್ಯಗಳು, ಅವಕ್ಕೆ ಮಹತ್ವವಿಲ್ಲ. ಆದರೆ ಅರಿವು ಮೂಡಿದಮೇಲೆ ನಾವು ಮಾಡುವ ಕೆಲಸಗಳೆಲ್ಲವೂ ನಮ್ಮನ್ನು ಬದುಕಿನ ಸಾರ್ಥಕ್ಯದೆಡೆಗೆ ಕೊಂಡು ಹೋಗಬೇಕು. ಹಾಗೆ, ನಮ್ಮನ್ನು ರೂಪಿಸಲೆಂದೇ ನಮ್ಮ ತಂದೆ ತಾಯಿಯರು





ನಮಗೆ ಸೂಕ್ತ ವಿದ್ಯಾಭ್ಯಾಸವನ್ನು ಮಾಡಿಸುತ್ತಾರೆ. ಆ ವಿದ್ಯೆಯಿಂದ ನಮಗೆ ವಿವೇಕ ಮೂಡಬೇಕು, ಸರಿ-ತಪ್ಪುಗಳನ್ನು ವಿಶ್ಲೇಷಣೆ ಮಾಡುವ ಮತ್ತು ಸರಿಯಾದ ಮಾರ್ಗದಲ್ಲಿ ನಡೆಯುವ ವಿವೇಚನೆ ಮೂಡಬೇಕು. ಹಾಗೆ ಅದು ಮೂಡಿ, ನಾವು ಸನ್ಮಾರ್ಗದಲ್ಲಿದ್ದರೆ ನಮ್ಮ ಜೀವನ ಸಾರ್ಥಕವಾಗುತ್ತದೆ,

ಪರಮಾತ್ಮನು ಈ ಜಗತ್ತನ್ನು ಸುಂದರವಾಗಿಸಲು ಮತ್ತು ಇಲ್ಲಿರುವ ಎಲ್ಲರ ಉಪಯೋಗಕ್ಕೆ ಮತ್ತು ಅನುಕೂಲಕ್ಕೆ ಹೇಗೆಬೇಕೋ ಹಾಗೆ ಪ್ರಕಟವಾಗುತ್ತಾನೆ. ಅದು ಅವನ ಶಕ್ತಿ, ತಾನು ಪ್ರಕೃತಿ ರೂಪದಲ್ಲಿ ನಮಗೆ ಇಷ್ಟೊಂದು ವೈವಿಧ್ಯಮಯವಾಗಿ ತೋರುತ್ತಾನೆ. ಪ್ರಕೃತಿಯನ್ನು ಯಾವ ಕೋನದಿಂದ ನೋಡಿದರೂ ನಮಗೆ ಪರಿಪೂರ್ಣತೆ ಕಾಣುತ್ತದೆ. ಪ್ರತೀ ಪ್ರಾಣಿ, ಕೀಟ, ಪಕ್ಷಿ, ಗಿಡ, ಮರ, ಬಳ್ಳಿ, ಹೂ, ಹಣ್ಣು ಮತ್ತು ಅವುಗಳ ಆಕಾರ, ಬಣ್ಣ, ರುಚಿ, ಗಂಧ ಹೀಗೆ ಸಮಗ್ರವಾಗಿ ಎಲ್ಲದರಲ್ಲೂ ಆ ಪರಮಾತ್ಮನ ಶಕ್ತಿ, ಪ್ರಕೃತಿ ರೂಪದಲ್ಲಿ ಪ್ರಕಟವಾಗುತ್ತದೆ. ಪರಮಾತ್ಮ ತನ್ನ ಆನಂದಕ್ಕೆ ಹೀಗೆ ಪ್ರಕಟವಾಗುತ್ತಾನೆ, ಎಲ್ಲವೂ ಸುಂದರ ಮತ್ತು ಪರಿಪೂರ್ಣ. ಇದನ್ನೇ "ಈಶಾವಾಸ್ಯಮಿದಮ್ ಸರ್ವಂ ಯತ್ ಕಿಂಚಿದ್ ಜಗತ್ಯಾಂ ಜಗತ್ ಎಂದು ಆ ಪರಮೇಶ್ವರನ ಆವಾಸವನ್ನು, ಈ ಜಗತ್ತಿನಲ್ಲಿ ಎಲ್ಲೆಡೆಯಲ್ಲೂ ಕಂಡಿದ್ದಾರೆ ನಮ್ಮ ಋಷಿ ಮುನಿಗಳು. ಎಲ್ಲ ರೂಪಗಳಿಗೂ ಅವುಗಳದೇ ಆದಂತ ಅಂದ, ಚೆಂದ ಮತ್ತು ಆನಂದವಿದೆ.

ಜಗತ್ಸೃಷ್ಟಿಯಲ್ಲಿ ಎಲ್ಲವೂ ಒಂದಕ್ಕೊಂದು ಆಧಾರವಾಗಿ, ಪೂರಕವಾಗಿ ಇವೆ. ಅಪರಿಮಿತ ಕ್ರಿಯಾಶೀಲತೆಯ ಬುದ್ಧಿಯನ್ನು ಈ ಮನುಷ್ಯ ಪ್ರಾಣಿಗೆ ನೀಡಿದ್ದಾನೆ ಪರಮಾತ್ಮ, ಅದಕ್ಕಾಗಿ ಎಲ್ಲ ಪ್ರಾಣಿಗಳಿಗೂ ಕಿಂಚಿತ್ 'ಅಹಂಕಾರ' ವನ್ನೂ ನೀಡಿದ್ದಾನೆ. ಆದರೆ ಈ ಮನುಷ್ಯ ಪ್ರಾಣಿ, ಈ ಪ್ರಕೃತಿಯಲ್ಲಿ ತಾನೂ ಒಂದು ಅಂಶವಷ್ಟೇ ಎನ್ನುವುದನ್ನು ಮರೆತು "ಈ ಜಗತ್ತೆಲ್ಲಾ ತನಗಾಗಿಯೇ ಸೃಷ್ಟಿಸಲ್ಪಟ್ಟಿದೆ, ಎಲ್ಲವೂ ತನ್ನ ಉಪಯೋಗಕ್ಕೆ" ಎಂದು ತನ್ನ ಬುದ್ಧಿಯನ್ನು ಹರಿ ಬಿಟ್ಟು ಎಲ್ಲವನ್ನೂ ಹಾಳುಗೆಡುವುತ್ತಾ ಬದುಕುವ ನರ ಪ್ರಾಣಿಗೆ ಈ ಜಗತ್ತಿನ ಪರಿಪೂರ್ಣತೆ ಹೇಗೆ ಕಾಣಬೇಕು? ಇಂದ್ರಿಯ ಸುಖಗಳೇ ಇವನ ಗುರಿ. ಅತೀಂದ್ರಿಯವಾದ ಆ ಪರಮಾತ್ಮನ ಲೀಲಾ ವಿನೋದವನ್ನು ನೋಡಲು ಅಸಮರ್ಥನಾಗಿದ್ದಾನೆ. ಆ ನರ ಪ್ರಾಣಿ ಪ್ರಕೃತಿಯ ಪರಿಪೂರ್ಣತೆಯನ್ನು ಎಂದು ಮನಗಾಣುತ್ತಾನೋ ಮತ್ತು ಇವನು "ಪ್ರಕೃತಿಯಲ್ಲಿ ನಾನು ಒಂದು ಭಾಗ, ಇದಕ್ಕೆ ಪೂರಕವಾಗಿ ನಾನು ನಡೆದುಕೊಳ್ಳಬೇಕು" ಎಂದು ಅರಿತುಕೊಂಡು ತನ್ನ ಸ್ವಭಾವನ್ನು ತಿದ್ದಿಕೊಂಡು ತೃಪ್ತಿ, ಸಹನೆ, ಸಹಬಾಳ್ವೆಯ ಬಾಳನ್ನು ಬದುಕುತ್ತಾನೋ, ಅಂದು ಮಾನ್ಯ ಗುಂಡಪ್ಪನವರು 'ಸಾರ್ಥಕವೊ ಜೀವಿತಕೆ' ಎಂದು ಹೇಳುವಂತೆ ಇವನ ಜೀವನವೂ ಸಾರ್ಥಕವಾಗುತ್ತದೆ.

**ಮುಕ್ತಕ – 565**

**ಕಾಡು ಹಕ್ಕಿ ಹುಳಕ್ಕೆ ವರ್ಣಚಿತ್ರಗಳೇಕೆ |**
**ನೋಡುವರ ಕಣ್ಣೋಲವ ಬೇಡುವಳೆ ಸೃಷ್ಟಿ ||**
**ಮಾಡುವಾ ಮಾಟಗಳನಾದನಿತು ಬೆಳಗುವುದು |**
**ರೂಢಿಯಾ ಪ್ರಕೃತಿಯದು - ಮಂಕುತಿಮ್ಮ ||**

ವರ್ಣಚಿತ್ರಗಳೇಕೆ=ವರ್ಣಚಿತ್ರಗಳ+ಏಕೆ ಕಣ್ಣೊಲವ=ಕಣ್ಣ +ಒಲವ,

ಮಾಟಗಳನಾದನಿತು=ಮಾಟಗಳನ್+ಆದ+ಅನಿತು, ರೂಢಿಯಾ=ರೂಢಿ+ಆ,

ಮಾಟಗಳನ್=ಚಿತ್ರವಿಚಿತ್ರಗಳನ್ನು, ರೂಢಿ=ಅಭ್ಯಾಸ

ಕಾಡಿನ ಹಕ್ಕಿ, ಹುಳ, ಹುಪ್ಪಟೆಗಳಿಗೆ, ಚಿತ್ರ ವಿಚಿತ್ರವಾದ ಬಣ್ಣಗಳು ಏಕೆ ಇವೆ? ನೋಡುವವರು ಅವುಗಳನ್ನು ನೋಡಿ ಒಲವನ್ನು ತೋರಲಿ ಎಂದೇ? ಖಂಡಿತ ಅಲ್ಲ. ಕೋಟ್ಯಾಂತರ ರೂಪ ಮತ್ತು ಬಣ್ಣಗಳಲ್ಲಿ, ಚಿತ್ರ ವಿಚಿತ್ರವಾದ ವಿನ್ಯಾಸಗಳಲ್ಲಿ ಪ್ರಕಟಗೊಳ್ಳುವುದು ಪ್ರಕೃತಿಯ ಸ್ವಧರ್ಮ ಅಥವಾ ರೂಢಿ ಎಂದು, ಪ್ರಕೃತಿಯ ಸ್ವಾಭಾವಿಕ ವೈವಿಧ್ಯತೆಯನ್ನು ಎತ್ತಿ ತೋರಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಜಗತ್ತಿನಲ್ಲಿ ಎಷ್ಟೊಂದು ವೈವಿಧ್ಯಮಯ ಬಣ್ಣಗಳು, ಆ ಬಣ್ಣಗಳ ಮಿಶ್ರಣಗಳು, (combinations) ಮತ್ತು ವಿನ್ಯಾಸಗಳು (designs), ಇವುಗಳನ್ನೆಲ್ಲ ಯಾರೋ ಕುಳಿತು ಮಾಡಿದ ಕಲಾಕೃತಿಯಲ್ಲ. ಪ್ರಕೃತಿ ತನ್ನ ಒಡಲಿಂದಲೇ ಬಿಡಿಸಿದ ತನ್ನದೇ ಚಿತ್ರ ಈ ಚಿತ್ರವನ್ನು ಪ್ರಕೃತಿ ಎಲ್ಲರೂ ನೋಡಿ ಆನಂದಿಸಲಿ ಎಂದು ವಿನ್ಯಾಸಗೊಳಿಸಿಲ್ಲ, ಏಕೆಂದರೆ ಯಾರೂ ನೋಡದ ಸ್ಥಳಗಳಲ್ಲೂ ಈ ವಿನ್ಯಾಸಗಳು, ವೈವಿಧ್ಯತೆಗಳು ಇದೆಯೆಲ್ಲಾ! ಹಾಗಾಗಿ ತನಗೆ ಇಷ್ಟಬಂದ ಹಾಗೆ ಪ್ರಕಟವಾಗುವುದೇ ಪ್ರಕೃತಿಯ ಸ್ವಭಾವ, ಆ ಪರಮ ಶಕ್ತಿಯೇ ಪ್ರಕೃತಿಯ ಮೂಲಕ ಜಗತ್ತಿನಲ್ಲಿ ಹಲವಾರು ವಿಧವಾಗಿ ಪ್ರಕಟವಾಗಿ ಜಗತ್ತಿನ ಸುಂದರತೆಯನ್ನು ಹೆಚ್ಚಿಸುತ್ತಿದೆ ಎಂದು ನಂಬಲೇ ಬೇಕು. ಅದಕ್ಕೆ ಬೇರೆ ಪರಿಭಾಷೆಯೇ ಇಲ್ಲ.

ಪ್ರಕೃತಿಯಲ್ಲಿ ಹಲವಾರು ಬಣ್ಣಗಳು ಮತ್ತು ರೂಪಗಳು ಇವೆ. ಅವೆಲ್ಲಾ ನಿಜ ರೂಪಗಳು ಮತ್ತು ಬಣ್ಣಗಳು, ಅವು ಸ್ವಾಭಾವಿಕವಾಗಿಯೇ ಇರುವುದು. ಯಾರಿಗಾದರೂ ತೋರಲೆಂದಾಗಲೀ, ಯಾರನ್ನಾದರೂ ಮೆಚ್ಚಿಸಲಾಗಲೀ ಅರಳಿದ ರೂಪ ಬಣ್ಣಗಳಲ್ಲ. ಅದಕ್ಕೆ ಪ್ರೇರಕ ಮತ್ತು ಪೂರಕವಾದದ್ದು ಆ ಪರಮ ಆತ್ಮ ಶಕ್ತಿ, ಮನುಷ್ಯನೂ ಸಹ ಈ ಪ್ರಕೃತಿಯಲ್ಲಿ ಅರಳುವ ಒಂದು ರೂಪವಷ್ಟೇ. ಆದರೆ ಮನುಷ್ಯ ತನ್ನ ಸ್ವಾಭಾವಿಕ ರೂಪವನ್ನು ಬದಲಾಯಿಸಿಕೊಳ್ಳಲು ಸಾಧ್ಯವಿಲ್ಲವಾದರೂ, ಸಾವಿರಾರು ಬಣ್ಣಗಳಿಂದ ಜಗತ್ತಿನಲ್ಲಿ ಮೆರೆಯುತ್ತಾನೆ. ಅನ್ಯ ಯಾವ ಪ್ರಾಣಿಗೂ ಸಾಧ್ಯವಾಗದ ರೀತಿಯಲ್ಲಿ ಮನುಷ್ಯ ತನ್ನ ಬಣ್ಣಗಳನ್ನು ಕ್ಷಣ ಕ್ಷಣಕ್ಕೆ ಬದಲಾಯಿಸುತ್ತಾ ಇರುತ್ತಾನೆ. 'ಉದರ ನಿಮಿತ್ತಂ ಬಹು ಕೃತ ವೇಷಂ' ಎನ್ನುವುದನ್ನು ಎಲ್ಲರೂ ಕೇಳಿದ್ದಾರೆ. ಆದರೆ ಇಂದಿನ ಮನುಷ್ಯ 'ಉದರ ನಿಮಿತ್ತ ವಲ್ಲದೆ ಬೇರೆ ಬೇರೆ ಕಾರಣಗಳಿಗೆ ತನ್ನ ರೂಪವನ್ನು ಬದಲಾಯಿಸುತ್ತಾ ಇರುತ್ತಾನೆ.

ಪ್ರಕೃತಿಯ 'ಕೃತಿ'ಯಾದ ಮನುಷ್ಯ, ಸಹಜವಾಗಿರದೇ ಸಾವಿರಾರು ಅಸಹಜ ಬಣ್ಣಗಳನ್ನು ಧರಿಸಿ, ಅಂತರಂಗದಲ್ಲಿ ತನ್ನನ್ನು ತಾನು ಮೋಸ ಮಾಡಿಕೊಳ್ಳುತ್ತಾ, ಬಹಿರಂಗದಲ್ಲಿ ಜಗತ್ತನ್ನೂ ಮೋಸಗೊಳಿಸುತ್ತಾ ಬದುಕುತ್ತಾನೆ. ತಾನು ಏನಲ್ಲವೋ ಅದೇ ರೂಪವನ್ನು ತೋರುತ್ತಾ ಕಪಟ ವೇಷಧಾರಿಯಾಗಿದ್ದಾನೆ. ತನ್ನ ಸ್ವ-ರೂಪವೇನು ಎಂದು ಇವನಿಗೂ ಗೊತ್ತು. ಅದನ್ನು ತೋರದೆ ಹತ್ತು ಹಲವಾರು ವೇಷಗಳನ್ನು, ಬಣ್ಣಗಳನ್ನು ಧರಿಸಿ ತಾನು ಸಂತೋಷದಿಂದಿದ್ದೇನೆ ಎನ್ನುವ ಭ್ರಮೆಯಲ್ಲಿದ್ದಾನೆ. ಅಸಹಜತೆಯ ವೇಷವನ್ನು ತೊರೆದು, ಎಂದು ಇವನು ಸಹಜವಾಗಿ ಬಾಳುತ್ತಾನೋ, ಅಂದು ಅವನು ತಾನೂ ಆನಂದದಿಂದಿದ್ದು ಸುತ್ತಲೂ ಆನಂದವನ್ನು ಹಂಚಲು ಸಮರ್ಥನಾಗುತ್ತಾನೆ.





**ಮುಕ್ತಕ – 566**

**ಆರಣ್ಯಕದ ಪುಷ್ಪಗಳ ಮೂಸುವವರಾರು? ।**
**ಆರಿಹರು ಪತಗದುಡುಪನು ಹುಡುಕಿ ಮೆಚ್ಚಲ್? ॥**
**ಬೇರೊಬ್ಬರೆಣಿಕೆಯಿಲ್ಲದೆ ಪ್ರಕೃತಿ ತನಗೆಂದೆ ।**
**ಸ್ವಾರಸ್ಯಬೆಸಗುವ - ಮಂಕುತಿಮ್ಮ ॥**

ಮೂಸುವವರಾರು=ಮೂಸುವವರು+ಯಾರು, ಆರಿಹರು=ಆರು+ಇಹರು, ಪತಗದುಡುಪನು=ಪತಗದ+ಉಡುಪನು,
ಬೇರೊಬ್ಬರೆಣಿಕೆಯಿಲ್ಲದೆ=ಬೇರೆ+ಒಬ್ಬರ+ಎಣಿಕೆ+ಇಲ್ಲದೆ,ಮೂಸು+ವಾಸನೆ ನೋಡು,
ಆರಿಹರು=ಯಾರಿದ್ದಾರೆ, ಪತಗ=ಪತಂಗ, ಚಿಟ್ಟೆ

ಕಾಡಿನಲ್ಲಿನ ಪುಷ್ಪಗಳ ಸುಗಂಧವನ್ನು ಆಘ್ರಾಣಿಸುವವರು ಯಾರಿದ್ದಾರೆ? ಬಣ್ಣ ಬಣ್ಣಗಳ ಚಿತ್ತಾರಗಳನ್ನು ಹೊತ್ತ ಪತಂಗಗಳ ಹುಡುಕಿ, ಹುಡುಕಿ, ಮೆಚ್ಚುವವರಾರು? ಮತ್ತೊಬ್ಬರ ಮೆಚ್ಚುಗೆಗೆ ಆಸೆಪಡದೆ ಪ್ರಕೃತಿ ತಾನೇ ತೃಪ್ತಿಪಡಲು ಈ ಜಗತ್ತಿನಲ್ಲಿನ ಎಲ್ಲ ವಸ್ತುಗಳಲ್ಲೂ ಸುಂದರತೆಯನ್ನು ಪ್ರಕಟಿಸಿ, ಆಕರ್ಷಣೆಯನ್ನು ಇಟ್ಟು, ಜಗತ್ತನ್ನು ಮತ್ತಷ್ಟು ಸ್ವಾರಸ್ಯಕರವಾಗಿಸುತ್ತದೆ ಎಂದು, ಪ್ರಕೃತಿಯ ಸಹಜ ಗುಣವನ್ನು ಪ್ರಶಂಸಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಕೋಟಿ ಕೋಟಿ ಬಗೆಯ ಗಿಡ ಬಳ್ಳಿಗಳು, ಮರಗಳು, ಅವುಗಳಲ್ಲಿನ ಹೂಗಳು, ಆ ಹೂಗಳ ಬಣ್ಣಗಳು, ಆ ಬಣ್ಣಗಳ ಮಿಶ್ರಣಗಳು, ಮನಮೋಹಕ ವಿನ್ಯಾಸಗಳು, ಮತ್ತೇರಿಸುವ ಸುಗಂಧಗಳು ಇವುಗಳನ್ನೆಲ್ಲ 'ಪ್ರಕೃತಿ' ಯಾರಾದರೂ ಮೆಚ್ಚಲಿ ಎಂದು ಸೃಷ್ಟಿಸಿಲ್ಲ. ಹಾಗೆ ಸೃಷ್ಟಿಸುವುದು ಪ್ರಕೃತಿಯ ಸಹಜವಾದ ಗುಣ. ಪ್ರಕೃತಿಯ ಎಲ್ಲದರಲ್ಲಿಯೂ ಆ ಪರಮಾತ್ಮನೇ ರೂಪ, ಗುಣ, ರುಚಿ, ಬಣ್ಣ, ಸುಗಂಧ ಮತ್ತು ಶಕ್ತಿ ರೂಪದಲ್ಲಿ ಪ್ರಕಟವಾಗುವುದರಿಂದ, ಇದು ಯಾರಿಗಾಗಿಯೂ ಅಲ್ಲ ಮತ್ತು ಯಾರನ್ನೂ ಮೆಚ್ಚಿಸಲೂ ಅಲ್ಲ. ತನ್ನ 'ಸ್ವ- ಭಾವದಿಂದ ಅರಳುತ್ತದೆ.

ಹಾಗೆಯೇ ಪ್ರಕೃತಿಯಲ್ಲಿ ಅರಳಿದ ಪ್ರತೀ ವಸ್ತುವಿಗೂ ಒಂದು 'ಸ್ವ-ಭಾವ'ವಿರುತ್ತದೆ. ಅದೇ ಅದರ ಗುಣ ಅಥವಾ ಆ ವಸ್ತುವಿನ ಧರ್ಮ. ಆ ಧರ್ಮವನ್ನು ಮೀರದೆ ಪ್ರಕೃತಿ ತನಗೆ ವಿಧಿಸಿದ ರೀತಿಯಲ್ಲೇ ಇರುವುದು ಪ್ರತೀ ಸೃಷ್ಟಿಯ ಕರ್ತವ್ಯ. ಪ್ರಕೃತಿಯಲ್ಲಿ ಜನಿಸಿ, ಪ್ರಕೃತಿಯಲ್ಲಿ ಒಂದಾಗಿರುವ ಎಲ್ಲವೂ ಈ 'ಧರ್ಮ'ದ ಕಟ್ಟುಪಾಡಿನಲ್ಲೇ ಇರುತ್ತವೆ. ಆದರೆ ಮನುಷ್ಯ ಪ್ರಾಣಿ ಮಾತ್ರ ಇದಕ್ಕೆ ಅಪವಾದ. ಇವನಿಗೆ ಈ ಪ್ರಕೃತಿಯನ್ನು ನೋಡಿ ಅನುಭವಿಸಿ, ಆನಂದಿಸುವ ಗುಣವನ್ನೂ ಪರಮಾತ್ಮ ಇತ್ತಿದ್ದಾನೆ. ಇವನಿಗೆ ಅಪರಿಮಿತ ಮನಸ್ಸು ಮತ್ತು ಬುದ್ಧಿಯನ್ನು ಕೊಟ್ಟು ಪ್ರತಿಯೊಂದನ್ನೂ ವಿಮರ್ಶೆಮಾಡುವ ಶಕ್ತಿಯನ್ನೂ ಇತ್ತಿದ್ದಾನೆ. ಪ್ರಕೃತಿಯಲ್ಲಿನ ಬೇರೆ ಎಲ್ಲವೂ ತಮ್ಮ ತಮ್ಮ ಗುಣಗಳನ್ನು ಹಾಗೆಯೇ ಇರಿಸಿಕೊಂಡಿವೆ ಅಥವಾ ಅವುಗಳಿಗೆ ಬದಲಾಗಲು ಅವಕಾಶವಿಲ್ಲ. ಮಾನವನಿಗೆ ಮಾತ್ರ ಇಂತಹ ಅವಕಾಶವಿದೆ.





ಮನುಷ್ಯ ತನ್ನ ಸ್ವಾರ್ಥ ಮತ್ತು ಅಹಂಕಾರ ಪ್ರೇರಿತ ವಿಕೃತ ಮನಸ್ಸಿನಿಂದ ತನ್ನನ್ನೂ ಕೆಡಿಸಿಕೊಂಡು, ಪ್ರಕೃತಿಯನ್ನೂ ಹಾಳುಗೆಡುವಲು ಸದಾ ಹಾತೊರೆಯುತ್ತಿರುತ್ತಾನೆ. ಕಾರಣವಿಷ್ಟೇ ಪ್ರಕೃತಿಯಲ್ಲಿನ ಸೃಷ್ಟಿಯಲ್ಲಿ ಇವನೂ ಒಂದು ಭಾಗವಾದರೂ ಎಲ್ಲವನ್ನೂ ಆ ಪರಮಾತ್ಮನ ನನಗಾಗಿಯೇ ಸೃಷ್ಟಿಸಿದ್ದಾನೆ" ಎನ್ನುವ ದುರ್ಭಾವ ಇವನಲ್ಲಿ ಮನೆಮಾಡಿದೆ. ಪ್ರಕೃತಿಯ ಸೌಂದರ್ಯವನ್ನು ಹೆಚ್ಚಿಸಲು, ಅದರ ಸಹಜತೆಯನ್ನು ಕಾಪಾಡುವುದಕ್ಕಾಗಿಯೇ ಇವನಿಗೆ

'ಬುದ್ಧಿವಂತಿಕೆ'ಯನ್ನು ನೀಡಲಾಗಿದೆ. ವಿಪರ್ಯಾಸವೆಂದರೆ, ಮನುಷ್ಯ ಅದನ್ನು ವಿಕೃತಗೊಳಿಸಲು ಸದಾ ಉಪಾಯಗಳನ್ನು ಹುಡುಕುತ್ತಿರುತ್ತಾನೆ. ಹಾಗಾಗಿ ಪ್ರಕೃತಿ 'ಮಂಗನ ಕೈಯಲ್ಲಿನ ಮಾಣಿಕ್ಯ'ದಂತಾಗಿದೆ. ಇವನು ಎಷ್ಟೇ ವಿಕೃತಗೊಳಿಸಿದರೂ ತನ್ನನ್ನು ತಾನು ಸರಿಪಡಿಸಿಕೊಳ್ಳುವ ಮತ್ತು ಕಾಪಾಡಿಕೊಳ್ಳುವ ಶಕ್ತಿ ಪ್ರಕೃತಿಗಿದೆ. ಪ್ರಕೃತಿ ಮುನಿದರೆ ಮನುಷ್ಯನ ಬಾಳು ದುಸ್ತರವಾಗುತ್ತದೆನ್ನುವುದಕ್ಕೆ ಹಲವಾರು ನಿದರ್ಶನಗಳಿವೆ. ನಮಗೆ ಕಿಂಚಿತ್ತಾದರೂ ವಿವೇಕವಿದ್ದರೆ, ಪ್ರಕೃತಿಯಲ್ಲಿ ಒಂದಾಗಿ ಸಹಜತೆಯಿಂದ ಬಾಳಬೇಕು.

**ಮುಕ್ತಕ – 567** **ಮನದ ಭಾವಗಳ ಪೂರ್ಣದಿನೊರೆಯಲರಿತ ಕವಿ |**
**ಇನಿತನುಂ ಬಿಡದೆ ರೂಪಿಸಲರಿತ ಶಿಲ್ಪಿ ||**
**ಅನುರೂಪದಿಂದ ವಾಸ್ತವಗೊಳಿಪ ಕೃತಿಚತುರ |**
**ಧನಿಯರಿವರೆಲ್ಲಿಹರೊ | – ಮಂಕುತಿಮ್ಮ ||**

ಪೂರ್ಣದಿನೊರೆಯಲರಿತ=ಪೂರ್ಣದಿನೆ+ಒರೆಯಲು+ಅರಿತ, ರೂಪಿಸಲರಿತ= ರೂಪಿಸಲು+ಅರಿತ,
ಧನಿಯರಿವರೆಲ್ಲಿಹರೊ=ಧನಿಯರು+ಅವರು+ಎಲ್ಲಿಹರೊ,
ಒರೆಯಲು=ವ್ಯಕ್ತಪಡಿಸಲು, ಇನಿತನುಂ= ಸ್ವಲ್ಪವಾದರೂ, ಕೃತಿಚತುರ=ಕಾರ್ಯನಿಪುಣ,
ಧನಿಯರು=ಗುಣವಂತರು

ಮನಸ್ಸಿನಲ್ಲಿ ಬಂದ ಭಾವಗಳನ್ನು ಸಂಪೂರ್ಣವಾಗಿ ವ್ಯಕ್ತಪಡಿಸುವಂತಾ ಕವಿ, ಸ್ವಲ್ಪವೂ ಕೊರತೆಯಿಲ್ಲದೆ ಕೆತ್ತಬಲ್ಲ ಶಿಲ್ಪಿ, ಯಾವುದೇ ಕೆಲಸವನ್ನು ಹಿಡಿದರೂ ಯೋಜಿಸಿದ್ದನ್ನು ಮಾಡಿಯೇ ತೀರುವ ಕಾರ್ಯ ನೈಪುಣ್ಯತೆಯನ್ನು ಹೊಂದಿರುವ ಧನಿಗಳು, ಲೋಕದಲ್ಲಿ ಎಲ್ಲಿದ್ದಾರೆ ಎಂದು, ಅಂತಹ ನೈಮಣ್ಯತೆ ಇರುವವರೇ ಜಗತ್ತಿನಲ್ಲಿ ಧನ್ಯರು ಎಂದು ಉಲ್ಲೇಖಿಸಿದ್ದಾರೆ ಈ ಮುಕ್ತಕದಲ್ಲಿ.

ಮನಸ್ಸಿಗೆ ಎಂತೆಂತಹುದೋ ಭಾವಗಳು ಬರುತ್ತವೆ. ಬಂದ ಭಾವಗಳನ್ನೆಲ್ಲಾ ಕಾರ್ಯರೂಪಕ್ಕೆ ತರುವುದು ಸಾಧ್ಯವಿಲ್ಲ. ಹಾಗೆ ಸಾಧ್ಯವಾಗುವಂತಹ ಭಾವಗಳನ್ನು ಸಂಪೂರ್ಣ ಕಾರ್ಯರೂಪಕ್ಕೆ ತರುವ ನಿಪುಣತೆಯ ಧನವನ್ನು ಹೊಂದಿರುವವರು ಈ ಜಗತ್ತಿನಲ್ಲಿ ತೀರ ಕಡಿಮೆ. ಹಾಗೆ ಸಂಪೂರ್ಣ ನೈಪುಣ್ಯವನ್ನು ಹೊಂದಿದ ಧನಿಗಳಿಗೆ ತಮ್ಮ ಭಾವವನ್ನು ಪೂರ್ಣರೂಪದಲ್ಲಿ ಕೃತಿಗಿಳಿಸಲು ಬದುಕಿನಲ್ಲಿ ಹಲವಾರು ತೊಡಕುಗಳು ಬರುತ್ತವೆ. ಹಾಗೆ ಯಾವ

ತೊಡಕೂ ಇಲ್ಲದೆ, ತಾವಂದುಕೊಂಡ ಕೆಲಸವನ್ನು ಪೂರ್ಣರೂಪದಲ್ಲಿ ಮಾಡಿ ಮುಗಿಸಿ, ಧನ್ಯತೆಯ ಭಾವ ಲಕ್ಷಕ್ಕೊಬ್ಬರಿಗೆ ಸಿಕ್ಕಬಹುದು.

(143)

| ಗುಣ ವಿಕಾಸ 564 -568 | ಕಗ್ಗರಸಧಾರೆ |
|---|---|

ದೃಢ ಚಿತ್ತ, ಏಕಾಗ್ರತೆ, ಹಠ ಮತ್ತು ಒಂದು ಗುರಿ ಇದ್ದರೆ ಹಿಡಿದ ಕೆಲಸವನ್ನು ಕೊನೆ ಮುಟ್ಟಿಸಬಹುದು. "ದೃಢ ಚಿತ್ತ, ಏಕಾಗ್ರತೆ, ಹಠ ಮತ್ತು ಒಂದು ಗುರಿ ಎಂದರೆ ಏನು?" ಎನ್ನುವ ಸಮಯ ಇಂದು. ನಾವು ಬದುಕುವ ಸಮಾಜದಲ್ಲಿ ನಮ್ಮನ್ನು ದಿಕ್ಕು ದಿಕ್ಕುಗಳಿಗೆ ಸೆಳೆಯುವ ಸೆಳೆತಗಳು ಸಾವಿರಾರು. ಸಂಸಾರದಲ್ಲಿದ್ದರೆ ನಿರ್ವಹಿಸಲೇಬೇಕಾದ ಕರ್ತವ್ಯಗಳು, ನಮ್ಮ ಅವಶ್ಯಕತೆಗಳು, ಎಲ್ಲ ನಮಗೆ ಒಂದು ಗುರಿಯನ್ನಿಟ್ಟುಕೊಳ್ಳಲಾಗಲೀ ಅಥವಾ ಆ ಗುರಿ ಸಾಧನೆಗೆ ಛಲ ಅಥವಾ ಹಠವನ್ನಾಗಲೀ ಬೆಳೆಸಿಕೊಳ್ಳಲು ಸಾಧ್ಯವೇ ಇಲ್ಲ ಎನ್ನುವಂತಹ ಸ್ಥಿತಿಗೆ ನಾವು ತಲುಪಿದ್ದೇವೆ.

ಇಂತಹ ಸ್ಥಿತಿಯಲ್ಲೂ, ಯಾರಾದರೂ ತಾವಂದುಕೊಂಡ ಕೆಲಸವನ್ನು ಪೂರ್ಣರೂಪದಲ್ಲಿ ಮಾಡಿ ಒಂದು ಧನ್ಯತೆಯ ಭಾವವನ್ನು ಮತ್ತು ತೃಪ್ತಿಯನ್ನು ಪಡೆಯುವಂತವರಾದರೆ, ಅವರೇ ಈ ಜಗತ್ತಿನಲ್ಲಿ 'ಧನಿ' ಗಳು ಎನ್ನುವುದೇ ಈ ಮುಕ್ತಕದ ಹೂರಣ.

**ಮುಕ್ತಕ – 568**

**ಮನದ ಭಾವಿತಕೊಪ್ಪುವುಪಕರಣ ನಮಗಿಲ್ಲ |**
**ಎಣಿಕೆಗಳ ಪೂರಿಯಿಪ ಸಾಧನಗಳಿಲ್ಲ ||**
**ಜನುಮಜನುಗಳಿಂತು ಪೇಚಾಟ ತಿಣುಕಾಟ |**
**ಮುನಿವುದಾರಲಿ, ಹೇಳು? - ಮಂಕುತಿಮ್ಮ ||**

ಭಾವಿತಕೊಪ್ಪುವುಪಕರಣ ಭಾವಿತಕೆ+ಒಪ್ಪುವು+ಉಪಕರಣ, ಜನುಮಜನುಗಳಿಂತು+ಜನುಮ+ಜನುಮಗಳು +ಇಂತು, ಮುನಿವುದಾರಲಿ=ಮುನಿವುದು+ಆರಲಿ,

ಉಪಕರಣ=ಸಾಧನ, ಪೂರಿಯಿಪ=ಪೂರೈಸುವ, ಮುನಿವುದು =ಕೋಪಗೊಳ್ಳುವುದು,

ಮನಸ್ಸಿನಲ್ಲಿ ಮೂಡಿದ ಭಾವಗಳನ್ನು ಕಾರ್ಯರೂಪಕ್ಕೆ ತರಲು ನಮಗೆ ಅವಶ್ಯಕ ಸಾಧನಗಳಿಲ್ಲ. ಈ ಸಾಧನಗಳ ಅಥವಾ ಉಪಕರಣಗಳ ಕೊರತೆ ನಮಗೆ ಜನ್ಮ ಜನ್ಮಾಂತರದಿಂದಲೂ ಕಾಡುತ್ತಾ ಇದೆ. ಇದರಿಂದ ಪ್ರತೀ ಜನ್ಮದಲ್ಲೂ ನಮಗೆ ತಿಣುಕಾಟ ಮತ್ತು ಪೇಚಾಟಗಳು ಇದ್ದೇ ಇರುತ್ತವೆ. “ಇದು ಹೀಗೆ ಏಕಿದೆ?” ಎಂದು ನಾವು ಯಾರಲ್ಲಿ ದೂರುವುದು? ಎಂದು, ತಮ್ಮಲ್ಲಿ ತಾವೇ ಪ್ರಶ್ನಿಸುತ್ತಾ ನಮ್ಮ ಮುಂದೆ ಒಂದು ಗಹನವಾದ ವಿಚಾರವನ್ನು ಪ್ರಸ್ತಾಪಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮನಸ್ಸಿನಲ್ಲಿ ಮೂಡಿದ ಭಾವಗಳಿಗೆ ಒಂದು ಮೂರ್ತರೂಪ ಕೊಟ್ಟರೆ, ಆ ಭಾವ, ಸಾರ್ಥಕತೆಯನ್ನು ಕಂಡುಕೊಳ್ಳುತ್ತದೆ. ಆದರೆ ಮನಸ್ಸಿನಲ್ಲಿ ಮೂಡುವ ಎಲ್ಲಾ 'ಹುಚ್ಚು 'ಭಾವಗಳಿಗೂ ಮೂರ್ತರೂಪ ಕೊಡಲಾಗುವುದೇ ಎಂದರೆ, ಸಾಧ್ಯವೇ ಇಲ್ಲ. ಏಕೆಂದರೆ, ಹಾಗೆ ಸಾಧಿಸಲು ಬೇಕಾದ ಸಲಕರಣೆಗಳು

ನಮ್ಮಲ್ಲಿ ಇರುವುದಿಲ್ಲ, ಸಾಧನೆಗಳ ಅಸಾಧ್ಯತೆ ಮತ್ತು ಕ್ಲಿಷ್ಟತೆ, ಉಪಕರಣಗಳ ಕೊರತೆಯ ನಡುವೆ ನಾವು ನಲುಗಿ ಹೋಗುತ್ತೇವೆ. ಇಂತಹ ಕೊರತೆಯನ್ನು ಯಾರಲ್ಲಿಯೂ ಹೇಳಿಕೊಳ್ಳಲಾಗದೇ ಪರದಾಡುವ ಸ್ಥಿತಿಯಲ್ಲಿರುತ್ತೇವೆ, ಇದು ಬಹುತೇಕ ಎಲ್ಲರ ಜೀವನದಲ್ಲಿಯ ಜನ್ಮ ಜನ್ಮಾಂತರದ ಅನುಭವವೇ ಆಗಿರುತ್ತದೆ.

ಇಂತಹ ಸ್ಥಿತಿ ಬಹುಶಃ ಎಲ್ಲಾ ಪ್ರಾಣಿಗಳಿಗೂ ಅನ್ವಯವಾಗುತ್ತದೆ. ಮನುಷ್ಯ ಪ್ರಾಣಿಯ ಅಪರಿಮಿತ ಆಲೋಚನಾ ಶಕ್ತಿಗೆ ಅನುಗುಣವಾಗಿ, ಈ ರೀತಿಯ ಪರದಾಟ ಸೆಣೆಸಾಟಗಳು ಸ್ವಲ್ಪ ಅಧಿಕವಾಗೇ ಇರುತ್ತದೆ. ಆದರೆ ಮನುಷ್ಯನಿಗೆ “ವಿವೇಚನೆ” ಯನ್ನು ಆ ಪರಮಾತ್ಮ ಕರುಣಿಸಿದ್ದಾನೆ. ಈ ವಿವೇಚನೆಯನ್ನು ಸೂಕ್ತವಾಗಿ ಉಪಯೋಗಿಸಿ, ತಾನು ಸಾಧಿಸಬೇಕಾದ ಕೆಲಸವನ್ನು ಆಲೋಚಿಸಿ, ಅಳೆದು ಸುರಿದು, ತನ್ನ ಮಿತಿಗಳನ್ನು ಅರಿತು, ಸಿಕ್ಕ ಉಪಕರಣಗಳನ್ನು ಸೂಕ್ತವಾಗಿ ಪ್ರಯೋಗಿಸಿ ಪ್ರಯತ್ನಪಟ್ಟರೆ ಬಹುಶಃ ನಾವು ಏನನ್ನಾದರೂ ಸಾಧಿಸಬಹುದು. ಸಾಧನೆ ಪರಿಪೂರ್ಣವಾಗಿ ಆಗದಿದ್ದರೂ 'ಪ್ರಯತ್ನ'ಪಟ್ಟ ತೃಪ್ತಿಯಾದರೂ ಇರುತ್ತದೆ.

ನಮಗೆ ಬರುವ ಆಲೋಚನೆಗಳನ್ನು ವಿವೇಚನೆಯಿಂದ ವಿಶ್ಲೇಷಿಸಿ, ನಮ್ಮ ಕೊರತೆಗಳು, ಮಿತಿಗಳು ಮತ್ತು ಅವಶ್ಯಕತೆಗಳನ್ನು ತೂಗಿ ನೋಡಿ ನಮಗೆ ಹಿತವಾದ ಕೆಲಸಗಳನ್ನೇ ಮಾಡುತ್ತಾ, ಜೀವನದಲ್ಲಿ ಸಿಕ್ಕ ಅವಕಾಶಗಳನ್ನು, ಕಲಿತ ಬುದ್ಧಿಯನ್ನು, ವಿದ್ಯೆಯನ್ನು ಮತ್ತು ಸಹ ಜನರ ಸಹಯೋಗವನ್ನು ನಮ್ಮ ಪ್ರಯೋಜನಕ್ಕೆ ಉಪಯೋಗಿಸಿಕೊಂಡು, ಹಂತ ಹಂತವಾಗಿ ಸಾಧಿಸಲು ನಮಗೆ ಸಾಧ್ಯವಾದರೆ, ನಾವೂ ಸಹ ಬದುಕಿನ ಸಾರ್ಥಕ್ಯವನ್ನು ಪಡೆಯಬಹುದು. ಒಂದು ಜನ್ಮದಿಂದ ಮತ್ತೊಂದು ಜನ್ಮಕ್ಕೆ ನಾವು ಸುಧಾರಿತರಾಗಿ ಹೋಗಬಹುದು.

**ಮುಕ್ತಕ – 569**

**ಕ್ಷಿತಿರುಹಕೆ ಸುಮಫಲಮುಹೂರ್ತ ನಿಶ್ಚಿತವೇನು? |**
**ಮತಿಮನಂಗಳ ಕೃಷಿತಪಃಫಲವುಮಂತು ||**
**ಸತತ ಕೃಷಿ, ಬೀಜಗುಣ,ಕಾಲವರ್ಷಗಳೊದವೆ |**
**ಪ್ರತಿಭೆ ವಿಕಸಿತವಹುದೊ -ಮಂಕುತಿಮ್ಮ ||**

ಕೃಷಿತಪಃಫಲವುಮಂತು= ಕೃಷಿ+ತಪಃ+ಫಲವುಂ+ಅಂತು, ಕಾಲವರ್ಷಗಳೊದವೆ=ಕಾಲ+ವರ್ಷಗಳಒದವೆ
ವಿಕಸಿತವಹುದೊ=ವಿಕಸಿತವು+ಅಹುದೊ,

ಕ್ಷಿತಿರುಹಕೆ=ಗಿಡಮರಗಳಿಗೆ ಮತಿಮನಂಗಳು= ಬುದ್ಧಿ ಮತ್ತು ಮನಸ್ಸುಗಳು, ವಿಕಸಿತವು=ಅರಳುವಿಕೆ,

ಗಿಡಮರಗಳಿಗೆ, ಹೂವು ಹಣ್ಣುಗಳನ್ನು ಬಿಡಲು ಮುಹೂರ್ತವೇನಾದರೂ ನಿಶ್ಚಿತವಾಗಿದೆಯೇನು? ಮನಸ್ಸು ಬುದ್ಧಿಗಳ ಕೃಷಿ ಮತ್ತು ತಪಸ್ಸಿನ ಫಲವೂ ಅಂತೆಯೇ, ಬೀಜದ ಗುಣ ಉತ್ತಮವಾಗಿದ್ದು, ಸಕಾಲದಲ್ಲಿ ಮಳೆಯಾಗಿ, ಮಾಡುವ ಪರಿಶ್ರಮ ಸತತವಾಗಿದ್ದರೆ ಹೇಗೆ ಒಳ್ಳೆಯ ಫಲ ಲಭ್ಯವಾಗುತ್ತದೆಯೋ, ಹಾಗೆಯೇ





ನಮ್ಮ ಪ್ರತಿಭೆಯನ್ನೂ ಸಹ ಸನ್ಮಾರ್ಗ, ಸತ್ಸಂಗ, ಸದ್ಭಾವದಂತಹ ಸಲಕರಣೆಗಳಿಂದ ನಿರಂತರ ಕೃಷಿಮಾಡಿದರೆ, ನಮ್ಮ ಪ್ರತಿಭೆಯೂ ವಿಕಸಿತಗೊಂಡು ಸತ್ಫಲವನ್ನು ನೀಡುತ್ತದೆ ಎಂದು, ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಪ್ರಕೃತಿಯಲ್ಲಿ ವಿಕಸನಗೊಳ್ಳುವ ಸಸಿ, ಗಿಡ, ಮರ, ಬಳ್ಳಿಗಳಿಗೆ ತಮ್ಮದೇ ಆದಂತ ಒಂದು ನಿಯಮವಿದೆ. ಒಂದು ಬೀಜದಲ್ಲಿ ತನ್ನ ತಾಯಿ ಮರದಿಂದ ಹೊತ್ತು ತಂದ ಮತ್ತು ಅಂತರಂಗದಲ್ಲಿ ಅಡಕವಾಗಿರುವ ಆ ಗಿಡದ ಅಥವಾ ಮರದ ಗುಣಗಳನ್ನು ವಿಕಸಿತಗೊಳಿಸಲು ಸೂಕ್ತ ಮಣ್ಣು, ನೀರು ಮತ್ತು ಬೆಳಕಿದ್ದರೆ ಸಾಕು ಅದು ತನ್ನ ಎಲ್ಲ ಗುಣಗಳನ್ನೂ ಹೊರಚೆಲ್ಲುತ್ತದೆ. ಇದೇ ರೀತಿ ಪ್ರತೀ ಜೀವಿಯೂ ತನ್ನ ಸ್ವಭಾವ ಮತ್ತು ಗುಣಗಳನ್ನು ಜನ್ಮದಿಂದಲೇ ಹೊತ್ತು ತಂದಿರುತ್ತಾನೆ. ಅವುಗಳನ್ನು ಸೂಕ್ತ ಸಂಗ, ವಿದ್ಯೆ ಮತ್ತು ನಿರಂತರ ಕೃಷಿಯಿಂದ ವಿಕಸನಗೊಳಿಸಿ ಜನ್ಮ ಸಾರ್ಥಕ್ಯವನ್ನು ಪಡೆಯಬಹುದು.

ಗುಂಡಪ್ಪನವರು ಉಲ್ಲೇಖಮಾಡಿರುವ ಗಿಡಮರಗಳ ವಿಕಸನವು ಸೂಕ್ತ ವಾತಾವರಣ ಮತ್ತು ಕೃಶಿಯಿಂದಾಗುತ್ತದೆ. ಆದರೆ ಗಿಡ ಮರಗಳ ಗುಣವನ್ನು ಬದಲಾಯಿಸಲು ಸಾಧ್ಯವಿಲ್ಲ ಅಲ್ಲವೇ? ಬೇವಿನ ಮರವನ್ನು

ನಿರಂತರ ಕೃಷಿಯಿಂದ ಸಮೃದ್ಧವಾಗಿ ಬೆಳೆಸಬಹುದು. ಆದರೆ ಅದರಲ್ಲಿ ಮಾವಿನ ಕಾಯಿ ಬೆಳೆಯಲು ಸಾಧ್ಯವಿಲ್ಲವಲ್ಲವೇ? ಆದರೆ ಮನುಷ್ಯ ಇದಕ್ಕೆ ಸ್ವಲ್ಪ ಅಪವಾದ. ಕೆಟ್ಟ ಗುಣಗಳನ್ನು ಹೊತ್ತು ತಂದಿದ್ದರೂ 'ಹುಟ್ಟು ಗುಣ ಸುಟ್ಟರೂ ಹೋಗುವುದಿಲ್ಲ' ಎನ್ನುವ ಗಾದೆಯಿದ್ದರೂ, ಸತ್ಸಂಗ, ಸನ್ಮಾರ್ಗ, ಸದ್ವಿದ್ಯೆ, ಸತ್ಕಾರ್ಯಗಳಿಂದ ಮನುಷ್ಯನ ಗುಣ, ಸ್ವಭಾವ ಎಲ್ಲವನ್ನೂ ಸುಧಾರಿಸಬಹುದು. ಇಂತಹ ನಿದರ್ಶನಗಳು ನಮಗೆ ಹೇರಳವಾಗಿ ಸಿಗುತ್ತವೆ.

ಮೊದಲಿಗೆ ನಾವು ಏನಾಗಿದ್ದೇವೆ ಎಂದು ಅರಿತುಕೊಂಡರೆ ಮತ್ತು ನಾವು ಏನಾಗಬೇಕು ಎಂದು ನಿರ್ಧರಿಸಿಕೊಂಡರೆ, ಆ ನಿರ್ಧಾರ ದೃಢವಾದರೆ, ನಾವು ವಿಕಸಿತರಾಗಬೇಕಾದರೆ, ಮಾಡಬೇಕಾದ ಕೃಷಿಯನ್ನು ಮಾಡಿದರೆ, ನಮ್ಮಲ್ಲಿ ಅಡಗಿರುವ ಪ್ರತಿಭೆಯನ್ನು ವಿಕಸನಗೊಳಿಸಿಕೊಂಡು ನಾವೂ ಸಹ ಸುಧಾರಿತರಾಗಬಹುದು ಮತ್ತು ಬದುಕನ್ನು ಸಾರ್ಥಕಗೊಳಿಸಿಕೊಳ್ಳಬಹುದು.

**ಮುಕ್ತಕ – 570**

**ವಕ್ರವುಂಟೆಲ್ಲರಿಗೆ, ವರ್ಚಸೋರೋರ್ವರಿಗೆ ।**
**ಕತ್ತಿ ಪಣ್ಯದೊಳುಂಟು ಶಕ್ತಿ ಸಹಜದಲಿ ॥**
**ವ್ಯಕ್ತಿಪ್ರಭಾವವೀ ಲೋಕಚರಿತೆಯ ಕೀಲು ।**
**ಹಸ್ತವದು ದೈವಕೆಲೊ – ಮಂಕುತಿಮ್ಮ ॥**

ವಕ್ತ್ರವುಂಟೆಲ್ಲರಿಗೆ=ವಕ್ತ್ರವು+ಉಂಟು+ಎಲ್ಲರಿಗೆ, ವರ್ಚಸೋರೊರ್ವರಿಗೆ=ವರ್ಚಸು+ಒರೋರ್ವರಿಗೆ,
ಪಣ್ಯದೊಳುಂಟು=ಪಣ್ಯದೊಳು+ಉಂಟು,
ಹಸ್ತವದು=ಹಸ್ತವು+ಅದು, ದೈವಕ= ದೈವಕೆ+ಎಲೊ, ವಕ್ತ್ರ=ವದನ, ಮುಖ, ಪಣ್ಯ=ಹಣ ಲೋಕಚರಿತೆಯ = ಜಗತ್ತಿನ ಚರಿತ್ರೆಯ ಕೀಲು.

ಎಲ್ಲರಿಗೂ ಮುಖವಿದೆ. ಆದರೆ ಲಕ್ಷಣ ಅಥವಾ ವರ್ಚಸ್ಸು ಕೇವಲ ಕೆಲವರಿಗೆ ಇದೆ. ಹಾಗೆಯೇ ಕತ್ತಿಯನ್ನು ಹಣಕೊಟ್ಟು ಕೊಳ್ಳಬಹುದು. ಆದರೆ ಅದನ್ನು ಎತ್ತಿ ಹೋರಾಡುವ ಶಕ್ತಿ ಸಹಜವಾಗಿ ವ್ಯಕ್ತಿಯಲ್ಲಿರಬೇಕು. ಅಂತಹ ವ್ಯಕ್ತಿಗಳ ಸಹಜ ಶಕ್ತಿಯ ಪ್ರಭಾವವೇ ಜಗತ್ತಿನ ಚರಿತ್ರೆಗೆ ಕಾರಕವಾಗಿರುತ್ತದೆ. ಈ ಜಗತ್ತನ್ನು ರೂಪಿಸುವಲ್ಲಿ, ತಿದ್ದುವಲ್ಲಿ ಮತ್ತು ನಡೆಸಿಕೊಂಡು ಹೋಗುವಲ್ಲಿ, ಆ ದೈವವು ಮನುಷ್ಯನ ಪ್ರಭಾವೀ ಶಕ್ತಿಯನ್ನು ತನ್ನ ಕರಣದಂತೆ ಉಪಯೋಗಿಸುತ್ತದೆ, ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ಮುಖವೆಲ್ಲರಿಗೂ ಇದ್ದರೂ, ವರ್ಚಸ್ಸಿಲ್ಲದಿದ್ದರೆ ಬೆಳೆಸಿಕೊಳ್ಳಬಹುದು. ಕತ್ತಿಯನ್ನು ಹಣಕೊಟ್ಟು ಕೊಂಡರೂ, ಅದನ್ನುಪಯೋಗಿಸುವ ಶಕ್ತಿಯನ್ನು ವೃದ್ಧಿಸಿಕೊಳ್ಳಬಹುದು. ಹಾಗೆ ನಿರಂತರ ಕೃಷಿ, ಸಾಧನೆ, ಸ್ವಾಧ್ಯಾಯ, ಚಿಂತನೆ ಮುಂತಾದವುಗಳಿಂದ ತಮ್ಮ ಶಕ್ತಿ, ಪ್ರತಿಭೆ ಮತ್ತು ವರ್ಚಸ್ಸನ್ನು ಹೆಚ್ಚಿಸಿಕೊಂಡವರೇ ಈ ಜಗತ್ತಿನಲ್ಲಿ ಹೊಸತನ್ನು ಸೃಷ್ಟಿಸಿ, ಜನರ ಜೀವನ ಸುಧಾರಿಸಲು ಕೀಲಕರಾಗಿರುತ್ತಾರೆ ಮತ್ತು ಚರಿತ್ರೆಯಲ್ಲಿ ಉಳಿದುಹೋಗುತ್ತಾರೆ.

ಆದರೆ ಅಂತಹ ಜನರೆಷ್ಟು? ಕೇವಲ ಬೆರಳೆಣಿಕೆಯಷ್ಟು, ಕಾರಣವೇನೆಂದರೆ, ಬಹಳಷ್ಟು ಜನಕ್ಕೆ ತಮ್ಮ ಕ್ಷಮತೆ ಮತ್ತು ಯೋಗ್ಯತೆಯೇನು ಎಂದು ಅರಿವಿರುವುದಿಲ್ಲ. ಅರಿವಾದವರಿಗೆ ಅದನ್ನು ಹೇಗೆ ಉಪಯೋಗಿಸಿವುದು ಎಂಬುದು ಗೊತ್ತಿರುವುದಿಲ್ಲ. ಅದನ್ನು ವೃದ್ಧಿಸಿಕೊಳ್ಳುವ ಬಗೆಯನ್ನು ಕಂಡರೂ ಅದಕ್ಕೆ ಪೂರಕವಾದ ವಾತಾವರಣ ಮತ್ತು ಉಪಕರಣಗಳ ಕೊರತೆ ಕಾಡುತ್ತದೆ. ಹಾಗಾಗಿ ಪ್ರತಿಭೆ ಅರಳುವ ಮುನ್ನವೇ ಸೊರಗುತ್ತದೆ. ಇದು ಜಗತ್ತಿನ ಬಹುತೇಕ ಜನರ ಸ್ಥಿತಿ.

ಪ್ರತಿಭಾವಂತರಾಗಬೇಕಾದರೆ, ಮೊಟ್ಟಮೊದಲಿಗೆ ನಮ್ಮನ್ನು ನಾವು ಅರಿಯಬೇಕು. ನಮ್ಮ ಗುಣಗಳೇನು ಮತ್ತು ಅವಗುಣಗಳೇನು, ನ್ಯೂನತೆಗಳೇನು ಮತ್ತು ಶಕ್ತಿಗಳೇನು ಎಂದು ನಮ್ಮ ಅವಲೋಕನವನ್ನು ನಾವು

ಮಾಡಿಕೊಂಡರೆ, ಯಾವುದನ್ನು ಬಿಡಬೇಕು, ಮತ್ತು ಯಾವುದನ್ನು ಹಿಡಿದಿಟ್ಟುಕೊಂಡು ವೃದ್ಧಿಸಿಕೊಳ್ಳಬೇಕು ಎಂದು ಅರಿವಾಗುತ್ತದೆ. ಹಾಗೆ ಹಿಡಿದಿಟ್ಟುಕೊಂಡ ಗುಣಗಳನ್ನು ವೃದ್ಧಿಸಿಕೊಳ್ಳಲು ನಮಗೆ ಎಲ್ಲ ಸಲಕರಣೆಗಳು ಸಿಕ್ಕರೆ, ನಾವು ಅದನ್ನು ಸರಿಯಾಗಿ ಉಪಯೋಗಿಸಿಕೊಂಡರೆ, ನಾವೂ ಸಹ ಪ್ರತಿಭಾವಂತರಾಗಬಹುದು. ಜಗತ್ತಿನಲ್ಲಿ ನಮ್ಮದೇ ಛಾಪನ್ನು ಬಿಟ್ಟು ಹೋಗಬಹುದು. ಜಗತ್ತಿನ ಚರಿತ್ರೆಯಲ್ಲಿ ಕೆಲಕಾಲ ನಿಲ್ಲಬಹುದು. ಆದರೆ ಜಗನ್ನಾಟಕವನ್ನಾಡಿಸುವ ಆ ಪರಮಾತ್ಮನ ಕೈಯ ಗೊಂಬೆಗಳಾದ ನಾವು, ನಮ್ಮ ಪ್ರಯತ್ನದೊಟ್ಟಿಗೆ ಅವನ ಕೃಪೆಯನ್ನೂ ನಮ್ಮ ಪಾಲಿಗೆ ಸೇರಿಸಿಕೊಂಡರೆ, ನಾವು ಈ ಜಗತ್ತಿನಲ್ಲಿ ಖಂಡಿತ ಯಶಸ್ಸನ್ನು ಪಡೆದು ಚರಿತ್ರೆಯಲ್ಲೊಂದು ಸ್ಥಾನಕ್ಕೆ ಭಾಜನರಾಗಬಹುದು.





**ಮುಕ್ತಕ – 571**

**ನಿನಗಿರದ ಕಣ್ ಬಾಯಿ ವಾಲ್ಮೀಕಿಗೆಂತಾಯ್ತು |**
**ಮುನಿಕವಿತೆಗೆಂತು ನಿನ್ನೆದೆಯೊಳೆಡೆಯಾಯ್ತು ||**
**ಘನಮಹಿಮನೊಳ್ ಜ್ವಲಿಸುತಿತರರೊಳು ನಿದ್ರಿಸುತ |**
**ಅನಲನೆಲ್ಲರೊಳಿಹನು - ಮಂಕುತಿಮ್ಮ ||**

ನಿನಗಿರದ= ನಿನಗೆ+ಇರದ, ವಾಲ್ಮೀಕಿಗೆಂತಾಯ್ತು=ವಾಲ್ಮೀಕಿಗೆ+ಎಂತು+ಆಯ್ತು, ಮುನಿಕವಿತೆಗೆಂತು+ಮುನಿಕವಿತೆಗೆ+ ಎಂತು, ನಿನ್ನೆದೆಯೊಳೆಡೆಯಾಯ್ತು= ನಿನ್ನ+ಎದೆಯೊಳು+ಎಡೆಯಾಯ್ತು, ಘನಮಹಿಮನೊಳ್=ಘನ+ಮಹಿಮನ+ಒಳ್, ಜ್ವಲಿಸುತಿತರರೊಳು=ಜ್ವಲಿಸುತ+ಇತರರೊಳು.ಅನಲನೆಲ್ಲರೊಳಿಹನು=ಅನಲನು+ಎಲ್ಲರೊಳು+ಇಹನು.
ಜ್ವಲಿಸುತ= ಪ್ರಾಜ್ವಲ್ಯಮಾನವಾಗಿ, ಅನಲ= ಬೆಂಕಿ.

ನಿನಗೆ ಇರುವ ಕಣ್ಣು ಬಾಯಿಗಳೇ ಆ 'ವಾಲ್ಮೀಕಿ' ಗೂ ಇತ್ತು, ಬೇರೇನಲ್ಲ. ಆ ಮುನಿ ಬರೆದ ಕವಿತೆಗೆ ನಿನ್ನ ಮನದಲ್ಲೂ ಸ್ಥಳವಾಯಿತಲ್ಲವೇ? ಅಂತಹ ಘನ ಮಹಿಮನಲ್ಲಿ ಜ್ವಲಿಸುವ ಬೆಂಕಿ ಅಥವಾ ಜ್ಞಾನವೇ ಎಲ್ಲರೊಳೂ

ಇರುತ್ತದೆ. ಆದರೆ ಕೆಲವರಲ್ಲಿ ಜಾಗೃತವಾಗಿ ಮತ್ತೆ ಕೆಲವರಲ್ಲಿ ಸುಪ್ತವಾಗಿ ಇರುತ್ತದೆ ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ರಾಮಾಯಣವನ್ನು ಬರೆದ ಕವಿ 'ವಾಲ್ಮೀಕಿ' ಗೆ ನಮ್ಮಂತೆಯೇ ಕಣ್ಣು ಕಿವಿ ಮೂಗುಗಳಿರಲಿಲ್ಲವೇ? ಆ ಕವಿ ಬರೆದ ಆ ಮಹಾಕಾವ್ಯವನ್ನು ಓದುವ ಮನಸ್ಸು ನಮಗೆ ಬರಲಿಲ್ಲವೇ? ಒಬ್ಬ ವ್ಯಾಧನ ಬಾಣಕ್ಕೆ ಬಲಿಯಾದ ಕ್ರೌಂಚ ಪಕ್ಷಿಯ ಯಾತನೆಯನ್ನು ವಾಲ್ಮೀಕಿ ಅನುಭವಿಸಿದಾಗ, ಅವರ ಮನದಲ್ಲಿ ಉಂಟಾದ ವೇದನೆಯಿಂದ ಹೊರಹೊಮ್ಮಿದ ಮಹಾ ಕಾವ್ಯವೇ, " ರಾಮಾಯಣ " ನಮ್ಮಂತೆಯೇ ಮಾನವರಾದ ವಾಲ್ಮೀಕಿ ಬರೆದ " ಆ ಮಹಾ ಕಾವ್ಯವನ್ನು ಸಾವಿರಾರು ವರ್ಷಗಳಿಂದ ಲೋಕದ ಜನರು ಓದಲು ಇಚ್ಚೆಪಡುತ್ತಾರಲ್ಲ. ಹೀಗೆ ಜ್ಞಾನವನ್ನು ಹಂಚಿಕೊಳ್ಳುವ ಮತ್ತು ಪಡೆದುಕೊಳ್ಳುವ ಕ್ಷಮತೆ ಎಲ್ಲರಲ್ಲೂ ಉಂಟು. ಆದರೆ ಕೆಲವರಲ್ಲಿ ಸಕ್ರಿಯವಾಗಿ ಮತ್ತು ಕೆಲವರಲ್ಲಿ ಸುಪ್ತವಾಗಿ ಇರುತ್ತದೆ ಎನ್ನುವುದು ಸತ್ಯ.

ಎಲ್ಲರಲ್ಲೂ ಇರುವ ಜ್ಞಾನದ ಅಥವಾ ಪ್ರತಿಭೆಯ ದೀಪ ಬೆಳಗಬೇಕಾದರೆ ಸಾಧನೆ ಬೇಕು. ಈ ಸಾಧನೆ ಅಧ್ಯಯನ,ಚಿಂತನ,ಮನನ,ಜಿಜ್ಞಾಸೆ,ಮಂಥನ ಮುಂತಾದವುಗಳಿಂದ ಆಗುತ್ತದೆ. ಎಲ್ಲರೂ ಈ ರೀತಿಯ ಸಾಧನೆಗೆ ಯೋಗ್ಯರಾಗೇ ಇರುತ್ತಾರೆ. ಆದರೆ ಕೆಲವರಿಗೆ ಸೂಕ್ತ ಅವಕಾಶ, ವಾತಾವರಣ, ಮಾರ್ಗದರ್ಶನ, ಮತ್ತು ಮಾರ್ಗ ಸಿಕ್ಕಾಗ ಅವರು ಬೆಳಗುತ್ತಾರೆ. ಕೆಲವರಿಗೆ ಅವೆಲ್ಲವೂ ಸಿಕ್ಕದೆ ಜ್ಞಾನ ಸುಪ್ತವಾಗಿ ಬೆಳಗದೆ ಇರುತ್ತದೆ. ಬಹಳಷ್ಟು ಜನ ಸಿಕ್ಕ ಅವಕಾಶವನ್ನು ಗುರುತಿಸಲು ವಿಫಲರಾಗುತ್ತಾರೆ. ಗುರುತಿಸಲಾದರೆ ಸರಿಯಾದ ಪ್ರಯತ್ನ ಮಾಡದೆ ವಿಫಲರಾಗುತ್ತಾರೆ. ಮತ್ತೆ ಕೆಲವರು ಪಕ್ವವಾದ ಧೈಯವನ್ನಿಟ್ಟುಕೊಳ್ಳದೆ ಬದುಕಿನ ಸೆಳೆತಗಳಿಗೆ ಬಲಿಯಾಗಿ ವಿಚಲಿತರಾಗಿ ವಿಫಲರಾಗುತ್ತಾರೆ. ಹೀಗೆ ಪ್ರತಿಭೆಯ ಸಾಧನೆಯ ಮತ್ತು ಅಂತರಂಗದಲ್ಲಿ ಅಡಗಿರುವ ಪ್ರತಿಭೆಯನ್ನು ವಿಕಸನಗೊಳಿಸಿಕೊಳ್ಳಲು ಕೇವಲ ಬೆರಳೆಣಿಕೆಯಷ್ಟು ಜನಗಳಿಗೆ ಮಾತ್ರ ಸಾಧ್ಯವಾಗುತ್ತದೆ. ಹಾಗಾಗಿ ಎಲ್ಲರಲ್ಲೂ ಇರುವ 'ಅನಲ' ಎಂದರೆ ಬೆಂಕಿ ಕೆಲವರಲ್ಲಿ ಮಾತ್ರ ಪ್ರಕಾಶಕ್ಕೆ ಬಂದು ಅವರು ಲೋಕಕ್ಕೆ ಮಾದರಿಯಾಗುತ್ತಾರೆ ಮತ್ತು ಚರಿತ್ರೆಯನ್ನು ಸೃಷ್ಟಿಸುತ್ತಾರೆ.

ನಾವು ನಮ್ಮಲ್ಲಿರುವ ಪ್ರತಿಭೆಯನ್ನು ಮೊದಲು ಗುರುತಿಸಿಕೊಳ್ಳಬೇಕು. ಸಿಕ್ಕ ವಾತಾವರಣವನ್ನು ಉಪಯೋಗಿಸಿಕೊಳ್ಳಬೇಕು. ಪೂರ್ವಾಗ್ರಹವನ್ನು ಬಿಟ್ಟು ಮುಕ್ತರಾಗಿ ಶುದ್ಧ ಪ್ರಯತ್ನವನ್ನು ಮಾಡಿದರೆ ನಾವೂ ಸಹ ಪ್ರತಿಭಾವಂತರಾಗಬಹುದು. ಸತ್ಯವನ್ನರಿವ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡಿದರೆ ಎಲ್ಲರಲ್ಲಿಯ ಪ್ರತಿಭೆಯೂ ಲೋಕ ಕಲ್ಯಾಣಕ್ಕಾಗಿ ಪ್ರಯೋಜನಕ್ಕೆ ಬರುತ್ತದೆ.

**ಮುಕ್ತಕ – 572**

**ಪುರುಷಯೋಚನೆಯೆಲ್ಲ ಮುರಿದು ಮಣ್ಣಹುದೆಂದು |**
**ಕೊರಗದಿರು; ಕೆಟ್ಟೆನೆಂದೆಂದುಮೆನ್ನದಿರು ||**
**ಶರಧಿಯೊಳು ಮೀನೊಂದು ಪುಟ್ಟಲೇಂ ಸಾಯಲೇಂ? |**
**ಪರಿವೆಯೇನಿಲ್ಲವೆ – ಮಂಕುತಿಮ್ಮ ||**

ಮಣ್ಣಹುದೆಂದು=ಮಣ್ಣು+ಅಹುದು+ಎಂದು, ಕೆಟ್ಟೆನೆಂದೆಂದುಮೆನ್ನದಿರು=ಕೆಟ್ಟೆನು+ಎಂದು+ಎಂದೆಂದುಂ+ಎನ್ನದಿರು,
ಪರಿವೆಯೇನಿಲ್ಲವೆಲೋ=ಪರಿವೆ+ಎನ್+ಇಲ್ಲ+ಎಲೊ,
ಪರಿವೆ=ಜ್ಞಾನ ಅಥವಾ ಅರಿವು,

ಅಯ್ಯೋ, ನಾವು ಮಾಡುವ ಯೋಚನೆಯೆಲ್ಲಾ ಯಾವುದೂ ಫಲಿಸುವುದಿಲ್ಲ, ನಮ್ಮ ಪ್ರಯತ್ನವೆಲ್ಲಾ ಮಣ್ಣಾಗುವುದು ಎಂದು, ಕೊರಗದೆ ಇರು. 'ನಾ ಕೆಟ್ಟೆ' ಎನ್ನದಿರು. ಕಡಲಿನಲ್ಲಿ ಮೀನು ಒಂದು ಹುಟ್ಟಿದರೇನು, ಸತ್ತರೇನು, ಕಡಲಿಗೇನೂ ವ್ಯತ್ಯಾಸವಾಗುವುದಿಲ್ಲವಲ್ಲ. ಹಾಗೆಯೇ ನಿನ್ನ ಯೋಚನೆಗೆಲ್ಲ ಒಂದು ರೂಪ ಸಿಗಲೇಬೇಕೆಂದು ನೀ ಯೋಚಿಸಬೇಡ, ಎಂದು ನಮ್ಮ ಯೋಚನೆಗಳನ್ನು ಪರಿಪಕ್ವತೆಯೆಡೆಗೆ ಕೊಂಡೊಯ್ಯಲು ಒದಗುವ ವಿಚಾರ ಮಂಡಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮಾನ್ಯ ಗುಂಡಪ್ಪನವರು ಹೇಳುವಂತೆ ಎಲ್ಲರಲ್ಲೂ ಪ್ರತಿಭೆಯ "ಅನಲ" ಉಂಟು. ಕೆಲವರು ಬೆಳಗುತ್ತಾರೆ ಮತ್ತೆ ಕೆಲವರು ಬೆಳಗುವುದಿಲ್ಲ. ಕಾರಣಗಳು ಇದ್ದರೂ ವಾಸ್ತವ ಸತ್ಯ ಇದೇ. ಆದ್ದರಿಂದ ಬೆಳಗುವವರೆಲ್ಲಾ ಅಹಂಕಾರ ಪಡುವುದಾಗಲೀ ಅಥವಾ ಬೆಳಗದವರೆಲ್ಲಾ ಕೊರಗುವುದಾಗಲೀ ಸಲ್ಲ. ಪ್ರತಿಯೊಬ್ಬರೂ ಅವರವರ ಕರ್ಮಾನುಸಾರವಾಗಿ ಈ ಜಗತ್ತಿನಲ್ಲಿ ಪ್ರಕಾಶಿಸುತ್ತಾರೆ. ಸೊನ್ನೆ ಕ್ಯಾಂಡಲ್ ಬಲ್ಬಿಗೂ ನೂರು ಕ್ಯಾಂಡಲ್ ಬಲ್ಬಿಗೂ

ವ್ಯತ್ಯಾಸವೇನೆಂದರೆ, ಎರಡಕ್ಕೂ ಬೆಳಗಲು ಸಾಧ್ಯ. ಆದರೆ ಒಂದಕ್ಕೆ ಕ್ಷಮತೆ ಕಡಿಮೆ ಮತ್ತೊಂದಕ್ಕೆ ಹೆಚ್ಚು. ಅದು ಸೃಷ್ಟಿಸಿದವನ ಕೈವಾಡ. ಹಾಗಾಗಿ 'ಕೊರಗದಿರು' ಎಂದು ಒಂದು ಆದೇಶವನ್ನು ನೀಡಿದ್ದಾರೆ ಶ್ರೀ ಡಿ.ವಿ.ಜಿ.

ಹಾಗಾದರೆ ನಾವು ಹೀಗೇ ಇರುವುದೇ? ಎಂದರೆ, ಡಿ.ವಿ.ಜಿ. ಹೇಳಿರುವುದು 'ಕೊರಗದಿರು' ಎಂದು. ಮುನ್ನಡೆಯಬೇಡವೆಂದಲ್ಲವಲ್ಲ. ಅಲ್ಪ ಸ್ವಲ್ಪ ಪ್ರತಿಭೆಯನ್ನು ಹೊತ್ತುಕೊಂಡೇ ನಾವು ಈ ಜಗತ್ತಿಗೆ ಬರುತ್ತೇವೆ.





ಎಲ್ಲಿಯೋ ಹುಟ್ಟುತ್ತೇವೆ. ನಮ್ಮ ತಂದೆ, ತಾಯಿಗಳು, ಒಡಹುಟ್ಟಿದವರು, ಬಂಧು ಮಿತ್ರರು ಒಟ್ಟಾರೆ ಹೇಳಬೇಕೆಂದರೆ ನಮ್ಮ ಪರಿಸರದಿಂದ ನಾವು ಹೊತ್ತು ತಂದ ಕ್ಷಮತೆ ಪ್ರಭಾವಿತವಾಗಿ ಬೆಳಗಬೇಕು. ನಮ್ಮ ಸಂಪೂರ್ಣ ಮತ್ತು ಪ್ರಾಮಾಣಿಕ ಪ್ರಯತ್ನವಿದ್ದಲ್ಲಿ ಅದು ಬೆಳಗುವ ಸಾಧ್ಯತೆಗಳು ಖಂಡಿತ ಇವೆ.

ನಮ್ಮ ಕೊರತೆಗಳು ಅಥವಾ ನ್ಯೂನತೆಗಳನ್ನು ಪಕ್ಕಕ್ಕೆ ಸರಿಸಿ, ಕೊರಗದೆ ಜಗತ್ತಿನ ಸತ್ವವನ್ನು ಮುಕ್ತ ಮನಸ್ಸಿನಿಂದ ಒಳಬರಮಾಡಿಕೊಂಡರೆ, ಒಳಗಿನ ದೀಪ ಪ್ರಜ್ವಲ್ಯಮಾನವಾಗಿ ಬೆಳಗುತ್ತದೆ. ಪ್ರಯತ್ನವನ್ನೇ ಪಡದೆ "ಅಯ್ಯೋ" ಎನ್ನುತ್ತಾ ಗೋಳಾಡುವವರು, ಕೊನೆಯವರೆಗೂ ಬೆಳಗದೆ, ಜನ್ಮಜನ್ಮಾಂತರದಿಂದ ಹೊತ್ತು ತಂದಿದ್ದ ಪ್ರತಿಭೆಯೂ ಅರಳದೆ, ಸುರುಟಿ ಹೋಗುತ್ತದೆ ಮತ್ತು ಈ ಜನ್ಮದಲ್ಲಿ ಬೆಳಗುವ ಮತ್ತು ಬೆಳೆಯುವ ಸದವಕಾಶದಿಂದ ನಮ್ಮನ್ನು ನಾವೇ ವಂಚಿಸಿಕೊಂಡಂತೆ ಆಗುತ್ತದೆ.

**ಮುಕ್ತಕ – 573** **ಹೋರಾಡು ಬೀಳ್ವನ್ನಮೊಬ್ಬಂಟಿಯಾದೊಡಂ |**
**ಧೀರಪಥವನೆ ಬೆದಕು ಸಕಲಸಮಯದೊಳಂ ||**
**ದೂರದಲಿ ಗೊಣಗುತ್ತ ಬಾಳ್ವೆ ಬಾಳ್ಗೇನು ಬೆಲೆ? |**
**ಹೋರಿ ಸತ್ವವ ಮೆರೆಸು – ಮಂಕುತಿಮ್ಮ ||**

ಬೀಳ್ವನ್ನ ಮೊಬ್ಬಂಟಿಯಾದೊಡಂ=ಬೀಳ್ವನ್ನಂ+ಒಬ್ಬಂಟಿ+ಆದೊಡಂ, ಬಾಳ್ಗೇನು= ಬಾಳಿಗೆ+ಏನು, ಧೀರಪಥವನೆ =ಧೀರತನದ ಹಾದಿ, ಬೆದಕು=ಹುಡುಕು, ಹೋರಿ= ಹೋರಾಡಿ, ಮೆರೆಸು =ಬೆಳಗು.

ಬದುಕಿನಲ್ಲಿ ಸೋತು, ಬಿದ್ದು ಒಬ್ಬಂಟಿಯಾದರೂ, ಎಲ್ಲ ಸಮಯದಲ್ಲೂ ಧೈರ್ಯದ ಮಾರ್ಗವನ್ನೇ ಹುಡುಕಿ, ಹೋರಾಡು, ಸೋತೆನೆಂದು ಗೊಣಗುತ್ತ ಬಾಳುವ ಬಾಳಿಗೆ ಏನು ಬೆಲೆ? ಬದುಕಿನ ಹೋರಾಟವನ್ನು ಹೋರಾಡಿ, ಬದುಕಿನ ಸತ್ವವನ್ನು ಅರಿತು ಮೆರೆಸಬೇಕು ಎಂದು, ಬದುಕಿನ ಪರಿಯನ್ನು ಅರುಹಿದ್ದಾರೆ ನಮಗೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜಗತ್ತಿನಲ್ಲಿ ಕೇವಲ ಕೆಲವೇ ಕೆಲವರಿಗೆ ಯಾವ ಏರೂ-ಪೇರಿಲ್ಲದೆ ಬದುಕು ನಡೆದು ಹೋಗುತ್ತದೆ. ಆದರೆ ಬಹುತೇಕ ಜನರಿಗೆ ಬದುಕು ಏರು-ತಗ್ಗುಗಳ, ಎಡರು-ತೊಡರುಗಳ, ಮುಳ್ಳು- ಕಲ್ಲುಗಳ, ಕಷ್ಟ-ಕಾರ್ಪಣ್ಯಗಳ ಹಾದಿ, 'ಸಾಕಪ್ಪಾ ಸಾಕು-ಈ ಬದುಕೇ ಬೇಡ, ಎಂದು ಕೊನೆಯಾಗುತ್ತಾದೋ?' ಎಂದು, ತಮ್ಮನ್ನು ಮತ್ತು ತಮ್ಮ ಸ್ಥಿತಿಯನ್ನು ಹಳಿದುಕೊಳ್ಳುವವರೇ ಹೆಚ್ಚು. ಆದರೆ ಬದುಕಿನಲ್ಲಿ ಸೋತು ಸುಮ್ಮನಾಗುವುದಕ್ಕಿಂತ, ಹೋರಾಡುವುದೇ ಸರಿ. ಏಕೆಂದರೆ ಇಲ್ಲಿ ಕಡೆಯ ಪಕ್ಷ ಹೋರಾಡಿದ ತೃಪ್ತಿಯಾದರೂ ಇರುತ್ತದೆ. ಅದಕ್ಕೇ ಮಾನ್ಯ ಗುಂಡಪ್ಪನವರು 'ಬೆದು ಧೀರಪಥವನೆ' ಎಂದಿದ್ದಾರೆ.

ಸೋತು ಬಸವಳಿದವ ಧೈರ್ಯ ತಾಳುವುದು ಹೇಗೆ? ಧೀರ ಪಥವನ್ನು ಹುಡುಕುವುದು ಹೇಗೆ? ಎಂಬ ಪ್ರಶ್ನೆಗಳು ಸಹಜವಾಗೇ ಮೂಡುತ್ತವೆ. ಹೌದು ಧೈರ್ಯ ಪಥವನ್ನು ಹುಡುಕಲೇ ಬೇಕು ಮತ್ತು ಬಾಳಲೇ ಬೇಕು. ಏಕೆಂದರೆ ಅನ್ಯ ಮಾರ್ಗವಿಲ್ಲ. ನಾವು ಸೋತಿದ್ದೇವೆ ಎಂದು ಗೋಳಾಡುತ್ತಾ ಬದುಕಿದರೆ ಸಾಧಿಸುವುದೇನು? ಆ ದಾರಿಯಲ್ಲಿ ಏನನ್ನೂ ಸಾಧಿಸಲಾಗುವುದಿಲ್ಲವಾದ್ದರಿಂದ, ಧೀರನಾದವನು ಧೈರ್ಯದ ಮಾರ್ಗವನ್ನು ಹುಡುಕಬೇಕು. ಆ ಹಾದಿಯಲ್ಲಿ ಹೋಗಬೇಕು. ಸಂಪೂರ್ಣ ಪ್ರಯತ್ನವನ್ನು ಮಾಡಿ ಸತ್ವದ ಅನುಭವವನ್ನು ಪಡೆಯಬೇಕು. ಹಾಗಾದಾಗ ಮನಸ್ಸು ಬುಧ್ಧಿಗಳು ಪಕ್ವವಾಗುತ್ತವೆ, ಬದುಕಿನ ಸತ್ವದ ಅರಿವಾಗುತ್ತದೆ. ಅಂತಹ ಸ್ಥಿತಿಯಲ್ಲಿ ಆತ್ಮತೃಪ್ತಿಯ ಪ್ರಮಾಣ ಅಧಿಕವಾಗುತ್ತದೆ.

'ಈಸಬೇಕು ಇದ್ದು ಜಯಿಸಬೇಕು' ಎಂದು ದಾಸರು ಹೇಳಿದ್ದಾರಲ್ಲವೆ?. ಕಾರ್ಪಣ್ಯಗಳ ಸುಳಿಯಲ್ಲಿ ಸಿಕ್ಕು ತೊಳಲಾಡುವ, ದಾರಿ ಕಾಣದೆ ಪರಿತಪಿಸುವ ಜನರ ದುಃಖವನ್ನು ಕಡಿಮೆಯಾಗಿಸಲು ಮತ್ತು ಅವರಲ್ಲಿ ಧೈರ್ಯವನ್ನು ತುಂಬಿ, ಅವರ ಬದುಕೂ ಸಾರ್ಥಕವಾಗುವಂತೆ ಮಾಡುವ ಇಂತಹ ನುಡಿಗಳನ್ನು ಕೇವಲ ಮಹಾತ್ಮರು ನುಡಿಯಲು ಸಾಧ್ಯ. ಅಂತಹವರ ನುಡಿಮುತ್ತುಗಳನ್ನು ನಾವು ಪಾಲಿಸಿದರೆ ನಮ್ಮ ಬದುಕೂ ಸಾರ್ಥಕವಾಗುವುದರಲ್ಲಿ ಸಂದೇಹವೇ ಇಲ್ಲ.

**ಮುಕ್ತಕ – 574**

**ಹೋರು ಧೀರತೆಯಿಂದ, ಮೊಂಡುತನದಿಂ ಬೇಡ |**
**ವೈರ ಹಗೆತನ ಬೇಡ, ಹಿರಿ ನಿಯಮವಿರಲಿ ||**
**ವೈರಾಗ್ಯ ಕಾರುಣ್ಯ ಮೇಳನವೇ ಧೀರತನ |**
**ಹೋರುದಾತ್ತತೆಯಿಂದ – ಮಂಕುತಿಮ್ಮ ||**

ನಿಯಮವಿರಲಿ = ನಿಯಮವು+ಇರಲಿ, ಹೋರುದಾತ್ತತೆಯಿಂದ=ಹೋರು+ಉದಾತ್ತತೆಯಿಂದ
ಮೇಳನವೇ = ಸಮ್ಮಿಲನವೇ, ಹೋರು = ಹೋರಾಡು, ಉದಾತ್ತತೆ=ಮುಕ್ತ ಭಾವ,

ಬದುಕಿನಲ್ಲಿ ಧೈರ್ಯದಿಂದ ಹೋರಾಡು, ಆದರೆ ಆ ಹೋರಾಟ ಮೊಂಡುತನದಿಂದಾಗಿರಬಾರದು. ದ್ವೇಷ ಹಗೆತನದಿಂದಾಗಿರಬಾರದು. ಆ ಹೋರಾಟಕ್ಕೆ ಒಂದು ನಿಯಮವಿರಬೇಕು. ವೈರಾಗ್ಯ ಮತ್ತು ಕರುಣೆ ಎರಡರ ಸಮ್ಮಿಲನವೇ ಧೀರತನ. ಅದು ಒಂದು ವ್ಯಕ್ತಿಯಲ್ಲಿ ಉದಾತ್ತತೆಯನ್ನು ತುಂಬುತ್ತದೆ. ಹಾಗಾಗಿ ಬದುಕಿನ ಹೋರಾಟ

ಅಂತಹ ಉದಾತ್ತತೆಯಿಂದ ಆಗಬೇಕು ಎಂದು ಕಷ್ಟ ಕಾರ್ಪಣ್ಯಗಳ ಬದುಕನ್ನು ಹೇಗೆ ಎದುರಿಸಬೇಕು, ಬದುಕಿನ ಹೋರಾಟವನ್ನು ಹೇಗೆ ನಿಭಾಯಿಸಬೇಕು ಎಂದು, ಸೂಕ್ತ ಸಲಹೆಗಳನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ದ್ವೇಷ ಹಗೆತನ ಅಥವಾ ಮೊಂಡುತನವಿದ್ದರೆ ಪೂರ್ವಾಗ್ರಹವಿರುತ್ತದೆ. ಯುಕ್ತಾಯುಕ್ತದ





ವಿವೇಚನೆಯಿರುವುದಿಲ್ಲ. ಅಂತಹ ಸ್ಥಿತಿಯಲ್ಲಿ ಸಮರ್ಪಕವಾದ ನಿರ್ಣಯವನ್ನು ತೆಗೆದುಕೊಳ್ಳಲಾಗುವುದಿಲ್ಲ. ಅಂತಹ ಮನೋಭಾವವಿಟ್ಟುಕೊಂಡು ಬದುಕಿನ ಹೋರಾಟ ನಡೆಸಿದರೆ ಬಹುಪಾಲು 'ಪತನ' ವೇ ಫಲ. ಹಾಗಾಗಿ ಅದು ವ್ಯಕ್ತಿಯ ಸಗುಣಾತ್ಮಕ ಬೆಳವಣಿಗೆಗೆ ಪೂರಕವಲ್ಲ. ಆದ್ದರಿಂದ ಅವುಗಳನ್ನು ಬಿಡಬೇಕು. ಬಿಟ್ಟರೆ ಆ ಹೋರಾಟ ಧೀರತನದ ಹೋರಾಟವಾಗುತ್ತದೆ. ಧೀರತೆ ಎಂದರೆ ಧೈರ್ಯದಿಂದ ಕೂಡಿದ ಎಂದು ಅರ್ಥ. ಆದರೆ ಧೈರ್ಯವೆಂದರೆ ಏನು? ದೃಢ ಮನೋಭಾವವನ್ನು ಧಾರಣೆ ಮಾಡುವುದೇ ಧೈರ್ಯ. ಒಂದು ಕಾರ್ಯ ಸಾಧನೆಗೆ ಬೇಕಾದ ದೃಢತೆಯನ್ನು ಧಾರಣೆಮಾಡಿ, ಕಾರ್ಯಪ್ರವೃತ್ತನಾಗಿ, ಕಾರ್ಯಸಾಧನೆಯ ಹಾದಿಯಲ್ಲಿ ಬರುವ ಎಲ್ಲ ಅಡ್ಡಿ ಆತಂಕಗಳನ್ನು ಎದುರಿಸುತ್ತಾ, ಅನುಭವಿಸುತ್ತಾ, ಹಿಡಿದ ಕೆಲಸವನ್ನು ಬಿಡದೆ ಸಾಧಿಸುವುದೇ 'ಧೈರ್ಯ'.

ಮತ್ತೊಬ್ಬರಿಂದ ನಮಗಾದ ತೊಂದರೆಯನ್ನು ಮನಸ್ಸಲ್ಲಿಟ್ಟುಕೊಂಡು, ದ್ವೇಷ ಸಾಧನೆಗಾಗಿ ಹೋರಾಡುವುವಾಗ, ಕಾರ್ಯ ಸಾಧನೆಯ ಗುರಿಗಿಂತ ದ್ವೇಷ ಸಾಧನೆಯ ಧ್ಯೆಯವೇ ಪ್ರಧಾನವಾಗಿರುತ್ತದೆ. ಇಂತಹ ಸಾಧನೆಯಿಂದ ವ್ಯಕ್ತಿಯ ಪ್ರತಿಭೆ ಎಂದಿಗೂ ಪ್ರಕಾಶಿಸುವುದಿಲ್ಲ. ಆದರೆ ವ್ಯಕ್ತಿಯನ್ನು ಅವನತಿಗೆ ಖಂಡಿತ ತಳ್ಳುತ್ತದೆ. ಅದಲ್ಲದೆ ಪ್ರಾಪಂಚಿಕ ವಿಷಯಗಳ ಕಾಮನೆಯಿಲ್ಲದೆ, ಸಕಲರ ಒಳಿತಿಗಾಗಿ ಶ್ರಮ ಪಡುವುದು ಮತ್ತು ನಮಗಿಂತ

ಬಲಹೀನರ ಬಗ್ಗೆ 'ಕರುಣಾ' ಭಾವ ತಳೆದು ಅವರನ್ನೂ ನಮ್ಮೊಟ್ಟಿಗೆ ಔನ್ನತ್ಯಕ್ಕೆ ಕೊಂಡು ಹೋಗುವುದು ಉದಾತ್ತತೆ ಮತ್ತು ಉದಾರತೆ.

ಆ ಪರಮಾತ್ಮ ನಮಗೆ ಕೊಟ್ಟ ಪ್ರತಿಭೆಯನ್ನು ಅಭಿವೃದ್ಧಿಗೊಳಿಸಿಕೊಳ್ಳುತ್ತಾ, ಏಕ ಮುಖವಾದ ಧೈಯವನ್ನಿಟ್ಟುಕೊಂಡು, ಸ್ವಾರ್ಥ ಸಾಧನೆಗಲ್ಲದೆ ಲೋಕ ಕಲ್ಯಾಣಕ್ಕಾಗಿ ಕೃಷಿಸಿ ಒಂದು ಗುರಿ ಮುಟ್ಟುವುದೇ ಧೀರತನ, ಅದಲ್ಲದೆ 'ಅಯ್ಯೋ ನಮಗೇಕೆ ಬೇಕು ಈ ಲೋಕದ ಉಸಾಬರಿ' ಎನ್ನುವ ಭಾವ ತಳೆದು ಬದುಕಿದರೆ, ಅನ್ಯ ಕ್ರಿಮಿ, ಕೀಟ ಅಥವಾ ಪ್ರಾಣಿಗಳಿಗೂ ನಮಗೂ ಯಾವ ವ್ಯತ್ಯಾಸವೂ ಇರುವುದಿಲ್ಲ. ನಾವು ಅಂತಹ ಉದಾತ್ತ ಭಾವ ಬೆಳೆಸಿಕೊಂಡಾಗ ನಮ್ಮ ಪ್ರತಿಬೆ ಬೆಳಗುತ್ತದೆ, ಮತ್ತು ನಮ್ಮ ಪ್ರಯತ್ನದಲ್ಲಿ ನಮ್ಮ ಗುರಿ ತಲುಪಿ, ಜೀವನ ಸಾರ್ಥಕವಾಗುತ್ತದೆ.

**ಮುಕ್ತಕ – 575**

**ಕಕ್ಷಿಗಾರನವೊಲೇ ಪೋರುತ್ತೆ ನ್ಯಾಯಕ್ಕೆ |**
**ಸಾಕ್ಷಿಯವೊಲಿರು ಕಡೆಗೆ ತೀರ್ಪಾಗುವಂದು ||**
**ಬಿಕ್ಷುವೊಲು ಕಾಲ ಸವೆಯಿಸಿ ಲೋಕಯಾತ್ರೆಯಲಿ |**
**ಪಕ್ಷಿವೊಲು ಮನದೊಳಿರು - ಮಂಕುತಿಮ್ಮ ||**

ಕಕ್ಷಿಗಾರನವೊಲೇ=ಕಕ್ಷಿಗಾರನ+ಒಲೇ, ಸಾಕ್ಷಿಯವೊಲಿರು=ಸಾಕ್ಷಿ+ಒಲು+ಇರು,
ತೀರ್ಪಾಗುವಂದು=ತೀರ್ಪು+ಆಗುವ+ಅಂದು, ಬಿಕ್ಷುವೊಲು=ಭಿಕ್ಷು+ಒಲು, ಪಕ್ಷಿವೊಲು=ಪಕ್ಷಿ+ಒಲು,
ಮನದೊಳಿರು= ಮನದೊಳು+ಇರು,

ಕಕ್ಷಿಗಾರ=ಕೋರ್ಟು ಮೆಟ್ಟಿಲ ಹತ್ತಿದವ, (ತಮಿಳಿನಲ್ಲಿ ಕಕ್ಷಿ ಎಂದರೆ party ಎಂದರ್ಥ) ಒಲು=ಹಾಗೆ, ಅಂತೆ. ಬಿಕ್ಷು=ಭೌದ್ಧ ಬಿಕ್ಷು,

ನ್ಯಾಯಾಲಯವನ್ನು ನ್ಯಾಯಕ್ಕಾಗಿ ಹತ್ತಿ, ನ್ಯಾಯ ಸಿಕ್ಕುವವರೆಗೆ ಪ್ರತಿನಿತ್ಯ ಹೋರಾಡುವವನಂತೆ, ನೀನೂ ಸಹ ಬದುಕಿನಲ್ಲಿ ಹೋರಾಡು. ಆದರೆ ಸಾಕ್ಷಿ ಹೇಳುವವನು ನ್ಯಾಯದ ತೀರ್ಪಿನಿಂದ ವಿಚಲಿತನಾಗವುದಿರುವಂತೆ, ಬದುಕಿನಲ್ಲಿ ನಿರ್ಲಿಪ್ತನಾಗಿ ಸಾಕ್ಷಿಯಂತೆ ಇರು. ಬೌದ್ಧ ಬಿಕ್ಷು ಕಾಲನಡಿಗೆಯಲ್ಲೇ ಲೋಕಯಾತ್ರೆಮಾಡುವಂತೆ, ಮುಕ್ತವಾಗಿ ಆಗಸದಲ್ಲಿ ಹಾರಾಡುವ ಪಕ್ಷಿಯಂತೆ, ನಾವೂ ಸಹ ಬದುಕಿನಲ್ಲಿ ನಡೆಯಬೇಕು, ನಿಷ್ಠೆಯಿಂದ ನಡೆಯಬೇಕು, ಕರ್ತವ್ಯವನ್ನು ಮಾಡಬೇಕು ಮತ್ತು ಸಾಫಲ್ಯ ಅಥವಾ ವೈಪಲ್ಯದಿಂದ ವಿಚಲಿತರಾಗದೆ ಮುಕ್ತವಾಗಿ ಬಾಳಬೇಕು ಎಂದು, ಒಂದು ಆದೇಶವನ್ನು ಇತ್ತಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮನ್ನು ಪರಿಪೂರ್ಣತೆಗೆ ಕೊಂಡೊಯ್ಯುವ ಪ್ರಯತ್ನವನ್ನು ಮಾಡಿದ್ದಾರೆ ಮಾನ್ಯ ಗುಂಡಪ್ಪನವರು. ನಾವೆಲ್ಲಾ ನಮ್ಮ ನಮ್ಮ ಕೆಲಸಗಳನ್ನು ಮಾಡುವಾಗ ಅದಕ್ಕೆ ಭಾವನಾತ್ಮಕವಾಗಿ ತುಂಬಾ ಅಂಟಿಕೊಂಡುಬಿಟ್ಟಿರುತ್ತೇವೆ. ಆ 'ಅಂಟು' ಎಷ್ಟು ಗಾಢವಾಗಿರುತ್ತೆಂದರೆ, ಅದರಿಂದ ಸೋಲು ಅಥವಾ ಜಯ, ಯಾವುದನ್ನು ಪಡೆದರೂ ತೀರ ವಿಚಲಿತರಾಗಿ ಪರದಾಡುತ್ತೇವೆ. ಹಾಗಾಗಬಾರದೆಂದರೆ ಅಂಟಿಕೊಳ್ಳಬಾರದು. ಮಮಕಾರವೇ ಈ ಅಂಟಿಗೆ ಕಾರಣ. ಹಾಗಾಗಿ ಅಂಟಿರಬಾರದೆಂದರೆ 'ಮಮಕಾರವೂ ಇರಬಾರದು. ಸಾಕ್ಷಿಯಂತೆ ಬದುಕನ್ನು ನೋಡಿದಾಗ ಅಥವಾ ಕೇವಲ ಸಾಕ್ಷೀಭಾವದಿಂದ ಬದುಕನ್ನು ಅನುಭವಿಸಿದಾಗ ಮಾತ್ರ ಮಮಕಾರದ ಸುಳಿಯಿಂದ ಹೊರಬರಬಹುದು. ಇದನ್ನೇ ಮಾನ್ಯ ಗುಂಡಪ್ಪನವರು "ಸಾಕ್ಷಿಯವೊಲಿರು ಕಡೆಗೆ ತೀರ್ಪಾಗುವಂದು ಎಂದಿದ್ದಾರೆ".

ನಮ್ಮ ಕಾರ್ಯಗಳಿಗೆ ತೀರ್ಪನ್ನು ನೀಡುವುದು ನಮ್ಮ ವಿಧಿ ಅಥವಾ ಪರಮಾತ್ಮ. ಅದು ನಮಗೆ ಒಂದು ದೈವೀಕ ವಿನ್ಯಾಸ (DIVINE DESIGN) ದಿಂದ ದೊರೆಯುತ್ತದೆ. ನಮಗೆ ಅರ್ಥವೇ ಆಗುವುದಿಲ್ಲ. ಸಾಮಾನ್ಯವಾಗಿ, ನಮ್ಮ ಮಮಕಾರದ ಕಾರಣದಿಂದ 'ಇದು ನನ್ನ ಕಾರ್ಯಕ್ಕೆ ಸಂದ ಫಲ 'ಎಂದು ನಾವು ಗೆದ್ದಾಗಲೂ ಮತ್ತು 'ಅಯ್ಯೋ ನನ್ನ ಹಣೆಬರಹ' ಎಂದು ನಾವು ಸೋತಾಗಲೂ ಅಂದುಕೊಂಡು ಸಂತಸಪಡುತ್ತೇವೆ ಅಥವಾ ಹಳಹಳಿಸುತ್ತೇವೆ.

ಬಂದದ್ದೆಲ್ಲಾ ಆ ಪರಮಾತ್ಮನ ಪ್ರಸಾದವೆಂದು ನಂಬಿದಾಗ, ಒಳಿತು ಕೆಡುಕಿನ ವಿಶ್ಲೇಷಣೆಗೆ ಎಡೆಯಿಲ್ಲ. ಅಂತಹ ಭಾವ ಬರುವುದು ಪೂರ್ವಾಪೇಕ್ಷೆಯಿಲ್ಲದೆ ಒಂದು ತಾಟಸ್ಥ್ಯ ಭಾವ ನಮ್ಮ ಮನದಲ್ಲಿ ನೆಲೆಯೂರಿದಾಗ ಮಾತ್ರ ಸಾಧ್ಯ. ಅಂತಹ ಭಾವ ಬಂದು ನಮ್ಮ ಅಂತರಂಗದಲ್ಲಿ ನೆಲೆನಿಂತಾಗ ನಾವೂ ಸಹ ಬದುಕಿಗೆ ಸಾಕ್ಷಿಯಂತೆ, ಬದುಕುವಾಗ ಬಿಕ್ಷುವಿನಂತೆಯೂ, ಹೋರಾಡುವಾಗ ಹಾರಾಡುವ ಪಕ್ಷಿಯಂತೆಯೂ ಮುಕ್ತವಾಗಿ ಬದುಕಬಹುದು.

(153)

ಪೌರುಷ ಮಿತಿ 574 - 578 ಕಗ್ಗರಸಧಾರೆ

**ಮುಕ್ತಕ – 576** **ತನ್ನ ಶಕ್ತಿಯನಳೆದು, ತನ್ನ ಗುಣಗಳ ಬಗೆದು ।**
**ಸನ್ನಿವೇಶದ ಸೂಕ್ಷ್ಮವರಿತು, ಧೃದತಳೆದು ॥**
**ತನ್ನ ಕರ್ತವ್ಯಪರಿಧಿಯ ಮೀರದುಜ್ಜುಗಿಸೆ ।**
**ಪುಣ್ಯಶಾಲಿಯ ಪಾಡು – ಮಂಕುತಿಮ್ಮ ॥**

ಶಕ್ತಿಯನಳೆದು=ಶಕ್ತಿಯನು+ಅಳೆದು, ಸೂಕ್ಷ್ಮವರಿತು=ಸೂಕ್ಷ್ಮವ+ಅರಿತು, ಮೀರದುಜ್ಜುಗಿಸೆ= ಮೀರದೆ+ಉಜ್ಜುಗಿಸೆ ಧೃತಿ=ಧೈರ್ಯ, ಪರಿಧಿ=ವ್ಯಾಪ್ತಿ, ಮೀರದೆ= ದಾಟದೆ, ಉಜ್ಜುಗಿಸೆ=ಕೆಲಸ ಮಾಡಿದರೆ ಅಥವಾ ಮಾಡಲಾದರೆ

ಒಬ್ಬ ವ್ಯಕ್ತಿ, ತನ್ನ ಗುಣಾವಗುಣಗಳಿಂದ ಕೂಡಿದ 'ಶಕ್ತಿ'ಯನ್ನು ಅರಿತು, ಅವುಗಳಲ್ಲಿ ಗುಣಗಳನ್ನು ಮಾತ್ರ ತೋಡಿ ಹೊರತೆಗೆದು, ಸಮಯ ಸಂಧರ್ಭಗಳ ಸೂಕ್ಷ್ಮವನ್ನು ಅರಿತು, ತನ್ನ ಕಾರ್ಯವ್ಯಾಪ್ತಿಯನ್ನರಿತು, ಅದರ ಪರಿಧಿಯನ್ನು ಮೀರದೆ ತನ್ನ ಕರ್ತವ್ಯವನ್ನು ಮಾಡುವುದು, ಪುಣ್ಯಶಾಲಿಯ ಪಾಡು ಎನ್ನುತ್ತಾರೆ ಮಾನ್ಯ ಗುಂಡಪ್ಪನವರು. ಹಾಗೆ ಕಾರ್ಯಪ್ರವೃತ್ತನಾಗಲಾದರೆ ಅಂತಹವನೇ ಪುಣ್ಯಶಾಲಿ ಎನ್ನುವುದೇ ಈ ಮುಕ್ತಕದ ಹೂರಣ.

ಸಂಪೂರ್ಣವಾಗಿ ತನ್ನ ಶಕ್ತಿಯನ್ನು ಅರಿತುಕೊಳ್ಳುವುದು, ತನ್ನ ಗುಣಗಳ ಜ್ಞಾನವಿರುವುದು, ಸನ್ನಿವೇಶದ ಸೂಕ್ಷ್ಮವರಿಯುವುದು, ಧೈರ್ಯದಿಂದಿರುವುದು, ತನ್ನ ಕರ್ತವ್ಯವನ್ನರಿಯುವುದು ಮತ್ತು ಅದನ್ನು ಮೀರದೆ ವರ್ತಿಸುವುದು ಕೇವಲ ಆದರ್ಶವ್ಯಕ್ತಿಗಳಿಗೆ ಮಾತ್ರ ಸಾಧ್ಯ. ಇವುಗಳನ್ನು ಸಾಧಿಸಿದವರು ಪುಣ್ಯವಂತರು. ಅಂತಹ ವ್ಯಕ್ತಿಗಳನ್ನು ಪುರುಷೋತ್ತಮರೆನ್ನಬಹುದು. ಅಂತಹವರು ಈ ಜಗತ್ತಿನಲ್ಲಿ ಇದ್ದಾರೆಯೇ? ಎಂದರೆ, ಇರಬಹುದು. ಆದರೆ ಅಂತಹವರು ವಿರಳವಷ್ಟೇ ಅಲ್ಲ ದುರ್ಲಭ. ಏಕೆಂದರೆ ಸಾಮಾನ್ಯವಾಗಿ ತಮ್ಮ ಶಕ್ತಿಯ ಅರಿವು ಯಾರಿಗೂ ಇರುವುದಿಲ್ಲ. ಏಕೆಂದರೆ ನಾವು ಅದರ ಬಗ್ಗೆ ಯೋಚಿಸುವುದೇ ಇಲ್ಲ. ಹಾಗೆ ಇದ್ದರೂ ಆ ಶಕ್ತಿಯಲ್ಲಿ ಗುಣವಾವುದು, ಅವಗುಣವಾವುದು ಎಂದು ಅರಿವಾಗುವುದು ತೀರ ಕಷ್ಟ ಹಾಗೆ ಅವಗುಣಗಳು ಇದ್ದು, ಅವುಗಳ ಅರಿವಾದರೂ, ನಮ್ಮ ಅಹಂಕಾರ ಅದನ್ನು ಒಪ್ಪಿಕೊಳ್ಳಲು ಬಿಡುವುದಿಲ್ಲ.

ಹಾಗೆ ತಮ್ಮ ಗುಣಗಳ ಅರಿವಾದರೆ, ಬಹಳಷ್ಟು ಜನರಿಂದ ಸೃಷ್ಟಿಯಾದ ಒಂದು ಸನ್ನಿವೇಶದಲ್ಲಿ ಆ ಗುಣವನ್ನು ಸಮರ್ಪಕವಾಗಿ ಉಪಯೋಗಿಸುವುದು ತೀರ ಕಷ್ಟ. ಏಕೆಂದರೆ ನಮಗೆ ಅನ್ಯರ ಮನಸ್ಸು ಅರ್ಥವಾಗುವುದಿಲ್ಲ. ಹಾಗೆ ಅರ್ಥವಾದರೂ ನಾವು ಮಾಡುವ ಕೆಲಸ ಸಂದರ್ಭಾನುಸಾರವಿದೆಯೋ, ಬಯಸಿದ ಫಲ ಸಿಗುತ್ತದೆಯೋ ಇಲ್ಲವೋ ಎಂಬ ಸಂದೇಹಗಳಿಲ್ಲದೆ ಮುನ್ನುಗ್ಗಲು ಧೈರ್ಯವಿರಬೇಕು. ಅಂತಹ ಧೈರ್ಯವಿದ್ದಾಗ್ಯೂ ಕಾರ್ಯ ವ್ಯಾಪ್ತಿಯನ್ನು ಅರಿಯದೆ ಉಪಕ್ರಮಿಸಿದರೆ ಕೆಲಸ ಕೆಡುವ ಸಾಧ್ಯತೆಯುಂಟು. ಇವೆಲ್ಲವೂ ಸಮರ್ಪಕವಾಗಿ ಕೂಡಿಬಂದರೆ ನಾವು ಮಾಡಬೇಕೆಂದುಕೊಂಡ ಕೆಲಸ ಈ ಎಲ್ಲ ಸಕಾರಾತ್ಮಕವಾದ ಅಂಶಗಳಿಂದ ಕೂಡಿ, ಮಾಡಿ, ಗುರಿಮುಟ್ಟಲಾದರೆ, ನಾವು ಪುಣ್ಯಶಾಲಿಗಳು

ಎಂದು ಅಂದುಕೊಳ್ಳಬೇಕು. ಹಾಗಾದರೂ ಸಹ ನಮ್ಮ ಕೆಲಸದಲ್ಲಿ ದೋಷಗಳನ್ನು ಕಾಣುವ ಜನಕ್ಕೇನೂ ಕಡಿಮೆಯಿಲ್ಲ ಈ ಜಗತ್ತಿನಲ್ಲಿ.

ಆದರೆ ಇಂತಹ ಸಕಾರಾತ್ಮಕವಾದ ಅಂಶಗಳು ನಮ್ಮಲ್ಲಿ ಕೂಡಿ ಬರಬೇಕಾದರೆ, ನಮ್ಮ ಸಂಸ್ಕಾರಗಳು, ವಿದ್ಯೆ, ಆಚಾರ-ವಿಚಾರಗಳು, ಸಂಗ-ಸಂಬಂಧಗಳು ಹೀಗೆ ಎಲ್ಲವೂ ಪೂರಕವಾಗಿರಬೇಕು. ಅಲ್ಪ ಸ್ವಲ್ಪ ವ್ಯತ್ಯಾಸವಾದರೂ ಉದೇಷಿತ ಕಾರ್ಯ ಮಾಡಲೂ ಆಗುವುದಿಲ್ಲ ಮತ್ತು ಬಯಸಿದ ಫಲ ಸಿಗುವುದೂ ಇಲ್ಲ. ಹಾಗಾಗಿ ನಾವು ನಮ್ಮ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕು, ಆತ್ಮಾವಲೋಕನ ಮಾಡಿಕೊಳ್ಳಬೇಕು, ಪೂರ್ವಫಲಾಪೇಕ್ಷೆಯಿಲ್ಲದೆ, ರಕ್ತಿಯಿಂದಿರದೆ, ನಿರ್ಲಿಪ್ತರಾಗಿ ಉಜ್ಜುಗವನ್ನು ಮಾಡಿದರೆ, ಮಾನ್ಯ ಗುಂಡಪ್ಪನವರು ಹೇಳಿದ ಪುಣ್ಯಶಾಲಿಗಳು ನಾವಾಗುವ ಸಾಧ್ಯತೆಗಳು ಇವೆ. ಪ್ರಯತ್ನ ಪಡಬೇಕು ಅಷ್ಟೆ.

**ಮುಕ್ತಕ – 577**

**ಕಿಡಿ ಸಣ್ಣದನು ಮೇಲೆಬಿದ್ದ ಕೊರಡಾರಿಪುದು |**
**ಸುಡುವುದಾ ಕಿಡಿಯುರಿಯೆ ನೂರು ಕೊರಡುಗಳ ||**
**ಉಡುಗಿ ನಿನ್ನಾತ್ಮವಿದೆ ಬಿಡು ಹೆಗ್ಗೆಲಸಗಳನು |**
**ತೊಡಗಾತ್ಮ ಬಲಿತಂದು – ಮಂಕುತಿಮ್ಮ ||**

ಕೊರಡಾರಿಪುದು=ಕೊರಡು ಆರಿಪುದು,ಸುಡುವುದಾ=ಸುಡುವುದು+ಆ, ಕಿಡಿಯುರಿಯೆ=ಕಿದಿಯೂ+ಉರಿಯೆ,
ನಿನ್ನಾತ್ಮವಿರೆ=ನಿನ್ನ ಆತ್ಮವು+ಇರೆ, ತೊಡಗಾತ್ಮ=ತೊಡಗು+ಆತ್ಮ,
ಕೊರಡು=ಮರದ ತುಂಡು, ಉಡುಗಿ=ಸುಸ್ತಾಗಿ, ಆತ್ಮ=ಚೇತನ, ಹೆಗ್ಗೆಲಸ=ಬೃಹತ್ಕಾರ್ಯ

ಒಂದು ಸಣ್ಣ ಬೆಂಕಿಯ ಕಿಡಿಯ ಮೇಲೆ ಮರದ ಒಂದು ದಪ್ಪ ತುಂಡು ಬಿದ್ದರೆ, ಆ ಬೆಂಕಿಯ ಕಿಡಿ ಆರಿಹೊಗುತ್ತದೆ. ಆದರೆ ಆ ಕಿಡಿ ಆರದೆ ಹಾಗೆ ಉರಿದರೆ ಅಂತಹ ನೂರಾರು ಮರದ ತುಂಡುಗಳನ್ನು ಸುಟ್ಟು ಕರಕಲಾಗಿಸುವ ಶಕ್ತಿಯನ್ನು ಹೊಂದಿರುತ್ತದೆ. ಹಾಗಾಗಿ ನಿನ್ನ ಆತ್ಮಶಕ್ತಿ, ಧೈರ್ಯ ಎಲ್ಲವೂ ಅಡಗಿರುವಾಗ ಸುಮ್ಮನಿರು ಮತ್ತು ನಿನಗೆ ಶಕ್ತಿ ಬಲವಂದು ಆತ್ಮಸ್ಥೆರ್ಯ ಕೂಡಿದಾಗ, ಬೃಹತ್ಕಾರ್ಯಗಳನ್ನು ಕೈಗೊಳ್ಳು ಎಂದು ಒಂದು ವಿವೇಚನೆಯ ಮಾತನ್ನು ನಮಗೆ ಹೇಳಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ,

ನಮ್ಮ ದೈಹಿಕ, ಮಾನಸಿಕ ಮತ್ತು ಭೌದ್ಧಿಕ ಶಕ್ತಿ ಕಡಿಮೆಯಾಗಿಯೋ ಅಥವಾ ಅಡಗಿಯೋ ಇದ್ದರೆ, ಮಹತ್ತರ ಕೆಲಸಗಳನ್ನು ಮಾಡಲು ಉಧ್ಯುಕ್ತರಾಗಬಾರದು. ಕಾರಣ, ಆ ಕಾರ್ಯದ ಭಾರಕ್ಕೆ ನಾವು ನಲುಗಿ ಹೋಗುತ್ತೇವೆ. ಸೋತರೆ ಖಿನ್ನರಾಗುತ್ತೇವೆ. ಆ ಕಾರ್ಯ ನಿರ್ವಹಣೆಗೆ ಬೇಕಾದ ಶಕ್ತಿ ಸಾಮರ್ಥ್ಯಗಳಿಗಿಂತ ನಮ್ಮ ಶಕ್ತಿ ಅಧಿಕವಾದರೆ ಮತ್ತು ಸೂಕ್ತ ರೀತಿಯಲ್ಲಿ ನಾವು ಪ್ರಯತ್ನಪಟ್ಟರೆ, ಆ ಕಾರ್ಯ ಸುಲಭ ಸಾಧ್ಯ.





ಇದಕ್ಕೆ ಎರಡು ವಿಷಯಗಳನ್ನು ನಾವು ಅರಿಯಬೇಕು. ಆ ಕಾರ್ಯದ ವ್ಯಾಪ್ತಿಯನ್ನು ಅರಿಯಬೇಕು ಮತ್ತು ನಮ್ಮ ಶಕ್ತಿಯ ಸತ್ಯವಾದ ಮತ್ತು ಸಂಪೂರ್ಣ ಪರಿಚಯವಿರಬೇಕು. ಅಹಂಕಾರವನ್ನು ತೊರೆದು ಇವೆರಡನ್ನೂ ಅರಿತು ಒಪ್ಪಿಕೊಂಡಾಗ, ನಾವು ಆ ಕಾರ್ಯವನ್ನು ಮಾಡಬಹುದೇ ಇಲ್ಲವೇ ಎಂದು ನಿರ್ಣಯಿಸಬಹುದು.

ಆದರೆ ನಮಗೆ ನಮ್ಮ ಸಾಮರ್ಥ್ಯದ ಅರಿವೇ ಇರುವುದಿಲ್ಲ. ನಮ್ಮನ್ನು ನಾವು ಎಂದಿಗೂ ಪರೀಕ್ಷೆಗೆ ಒಡ್ಡಿಕೊಳ್ಳುವುದಿಲ್ಲ ಅಥವಾ ನಮ್ಮ ಅಹಂಕಾರ ಹಾಗೆ ಒಡ್ಡಿಕೊಳ್ಳಲು ಬಿಡುವುದಿಲ್ಲ. ಹಾಗೆ ನಾವು ನಮ್ಮನ್ನು ಆತ್ಮಾವಲೋಕನದ ಪರೀಕ್ಷೆಗೆ ಒಡ್ಡಿಕೊಂಡರೆ ಮತ್ತು ಮನಗಂಡ ವಿಷಯಗಳನ್ನು ಮುಕ್ತ ಮನಸ್ಸಿನಿಂದ ಒಪ್ಪಿಕೊಂಡರೆ, ನಮ್ಮ ಶಕ್ತಿ ಸಾಮರ್ಥ್ಯಗಳ ಮತ್ತು ನಮ್ಮ ನ್ಯೂನತೆಗಳ ಪರಿಚಯ ನಮಗೆ ಆಗುತ್ತದೆ. ಆ ಬೆಳಕಿನಲ್ಲಿ ನಾವು ಏನನ್ನು ಮಾಡಬಹುದು, ಏನು ಮಾಡಲು ನಮ್ಮಲ್ಲಿ ಸಾಮರ್ಥ್ಯದ ಕೊರತೆ ಇದೆ, ಯಾವುದು ಸೂಕ್ತ, ಯಾವುದು ಅಲ್ಲ ಎಂದು ಅರ್ಥವಾಗುತ್ತದೆ. ನಮಗಿರುವ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಮತ್ತು ನಮ್ಮಲ್ಲಿರುವ ನ್ಯೂನತೆಗಳನ್ನು, ಕೊರತೆಗಳನ್ನು ನೀಗಿಕೊಳ್ಳಲು, ಧ್ಯಾನ, ಅಧ್ಯಯನ, ಸದ್ವಿಚಾರ, ಸತ್ಸಂಗ ಮುಂತಾದವುಗಳಿಂದ ಪ್ರಯತ್ನಪಟ್ಟಾಗ, ಕೊರತೆಗಳು ಕಡಿಮೆಯಾಗಿ, ನಮ್ಮ ಶಕ್ತಿ ಹೆಚ್ಚಾಗುತ್ತದೆ.

ಅಂತಹ ಹೆಚ್ಚಿದ ಶಕ್ತಿಯಿಂದ ನಾವು ಯಾವುದೇ ಮಹತ್ಕಾರ್ಯವನ್ನು ಮಾಡಲು ಉತ್ಸುಕರಾಗಬಹುದು. ಇದನ್ನೇ ಮಾನ್ಯ ಗುಂಡಪ್ಪನವರು "ತೊಡಗಾತ್ಮ ಬಲಿತಂದು" ಎಂದು ಹೇಳುತ್ತಾ ನಮ್ಮ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು ಎನ್ನುವ ಕಿವಿಮಾತನ್ನು ಹೇಳುತ್ತಾರೆ. ಅಂತಹ ಪ್ರಯತ್ನವನ್ನು ನಾವೂ ಸಹ ಮಾಡಿದರೆ ನಮಗೂ ಶಕ್ತಿ ವರ್ಧನೆಯಾಗಿ, ವರ್ಧಿತ ಶಕ್ತಿಯಿಂದ ಮಹತ್ಕಾರ್ಯಗಳನ್ನು ಮಾಡುವಂತಾದರೆ ಬದುಕು ಸಾರ್ಥಕವಾಗುತ್ತದೆ.

ಮುಕ್ತಕ - 578

ಬೆಟ್ಟಕ್ಕೆ ಸನ್ನೆ ಹಾಕಿರುವ ಮಹದಾಸಿಗನೆ ।
ಗಟ್ಟಿಯೇ? ಸೊಟ್ಟಾಗದೇ ಸನ್ನೆಗೋಲು? ॥
ರಟ್ಟೆಯೇ ಮುರಿದೀತು ಮೈಮರೆತ ಸಾಹಸದಿ ।
ಎಷ್ಟುಚಿತವೋ ನೋಡು - ಮಂಕುತಿಮ್ಮ ॥

ಮಹದಾಸಿಗನೆ = ಮಹತ್+ಆಸಿಗನೆ, ಸೊಟ್ಟಾಗದೇ=ಸೊಟ್ಟ+ಆಗದೆ, ಎಷ್ಟುಚಿತವೋ=ಎಷ್ಟು+ಉಚಿತವೋ
ಮಹದಾಸಿಗ=ಮಹತ್ತಾದ ಆಸೆ ಹೊತ್ತಿರುವವನು, ಸನ್ನೆಗೋಲು=ಕಲ್ಲ ಚಪ್ಪಡಿಯನ್ನೋ ಅಥವಾ ಬಂಡೆಯನ್ನೋ ಎತ್ತಲು ಉಪಯೋಗಿಸುವ ಕೋಲು, ಹಾರೆ, ರಟ್ಟೆ=ತೋಳು, ಭುಜ

ಬೆಟ್ಟವನ್ನೇ ಎತ್ತಿಡಲು ಸನ್ನೆ ಕೋಲನ್ನು ಹಾಕಿರುವ, ಹೇ! ಅತಿ ಸಾಹಸಿಯೇ, ಮೊದಲು ನಿನ್ನ ಸನ್ನೆ ಕೋಲು ಗಟ್ಟಿಯೇ ಎಂದು ನೋಡಿಕೋ, ಇಲ್ಲದಿದ್ದರೆ ಅದು ಬೆಟ್ಟದ ಭಾರದಿ ಸೊಟ್ಟಗಾಗುವುದು. ಬೆಟ್ಟ

ಮತ್ತು ಕೋಲು ಎರಡೂ ಗಟ್ಟಿಯಾಗಿದ್ದರೆ, ಮೈಮರೆತ ಅತಿ ಸಾಹಸದಿ ನಿನ್ನ ಬುಜವೇ ಮುರಿದೀತು. ಹಾಗಾಗಿ ನಿನ್ನ ಶಕ್ತಿಯ ಔಚಿತ್ಯವನ್ನು ನೋಡಿಕೊಂಡು ಕೆಲಸವನ್ನು ಮಾಡು, ಎಂದು ನಮಗೆ ಆದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು.

ಈ ಹಿಂದಿನ ಎರಡೂ ಮುಕ್ತಕಗಳಲ್ಲಿ ಮಾನ್ಯ ಗುಂಡಪ್ಪನವರು ನಮಗೆ, ನಮ್ಮ ಕ್ಷಮತೆಯ ಮತ್ತು ಕಾರ್ಯಗಳ ಸೂಕ್ತಾಸೂಕ್ತತೆಯ ಬಗ್ಗೆ ಎಚ್ಚರಿಕೆ ನೀಡಿದ್ದಾರೆ. ನಾವು ಬಹಳಷ್ಟು ಬಾರಿ ಮಾಡಬೇಕೆಂದುಕೊಂಡ ಕೆಲಸವನ್ನು ಸಮಗ್ರವಾಗಿ ಆಲೋಚಿಸದೆ ಕೈಗೆತ್ತಿಕೊಂಡುಬಿಡುತ್ತೇವೆ. ಹಾಗೆ ಕಾರ್ಯವನ್ನು ಮೊದಲಿಟ್ಟ ನಂತರವೇ ನಮಗೆ ಆ ಕಾರ್ಯದ ಕ್ಲಿಷ್ಟತೆ ಮತ್ತು ನಮ್ಮ ಶಕ್ತಿಯ ಕೊರತೆಯ ಪರಿಚಯವಾಗುತ್ತಾ ಹೋಗುತ್ತದೆ. ನಾವು ಇಕ್ಕಟ್ಟಿನಲ್ಲಿ ಬೀಳುತ್ತೇವೆ. ಹಿಡಿದ ಕೆಲಸ ಬಿಡಲಾಗದೆ ಮತ್ತು ನಮ್ಮ ಶಕ್ತಿ ಸಾಮರ್ಥ್ಯಗಳ ಕೊರತೆಯಿಂದ ಮುಂದುವರೆಸಲಾಗದೆ ತೊಳಲಾಡುತ್ತೇವೆ.

“ಮಾಡದ ಹೊರತು ಕಾರ್ಯದ ಕ್ಲಿಷ್ಟತೆ ಮತ್ತು ನಮ್ಮ ಸಾಮರ್ಥ್ಯದ ಪರಿಚಯ ನಮಗೆ ಹೇಗೆ ಅರ್ಥವಾಗುವುದು?” ಎಂದು ಕೇಳುವವರೂ ಇದ್ದಾರೆ. ಹಳ್ಳಕ್ಕೆ ಬಿದ್ದೇ ಹಳ್ಳದ ಆಳ ಅರಿಯಬೇಕೆಂದೇನೂ ಇಲ್ಲ. ಹಾಗಾಗಿ ನಾವು ಯಾವುದೇ ಕೆಲಸವನ್ನು ಕೈಗೆತ್ತುಕೊಳ್ಳುವ ಮುನ್ನ ಆ ಕಾರ್ಯದ ವ್ಯಾಪ್ತಿ, ವಿಸ್ತಾರ ಮತ್ತು ಅದನ್ನು ನಿರ್ವಹಿಸುವಲ್ಲಿನ ಕ್ಲಿಷ್ಟತೆಗಳ ಸಮಗ್ರ ಪರಿಚಯನ್ನು ಮಾಡಿಕೊಳ್ಳಬೇಕು. ಅಷ್ಟೇ ಅಲ್ಲ, ಅವುಗಳು ಅರ್ಥವಾದಲ್ಲಿ, ಅವುಗಳನ್ನು ನಿಭಾಯಿಸಲು ಬೇಕಾದ ಶಕ್ತಿ ಸಾಮರ್ಥ್ಯಗಳು ನಮ್ಮಲ್ಲಿ ಇವೆಯೇ ಎಂದು ಆಲೋಚಿಸಬೇಕು. ಸಮುದ್ರವನ್ನು ಈ ದಡದಿಂದ ಆ ದಡಕ್ಕೆ ಈಜುವ ಸಾಹಸಿಗಳು ಇದ್ದಾರೆ. ಆದರೆ ಅವರಿಗೆ ಸಮುದ್ರದ ವಿಸ್ತಾರ ಮತ್ತು ಕ್ಲಿಷ್ಟತೆಯ ಪರಿಚಯ ಮತ್ತು ಈಜುವ ಸಾಮರ್ಥ್ಯದ ಬಗ್ಗೆ ಸಂಪೂರ್ಣ ನಂಬಿಕೆಯುಂಟು. ಅವರು ಮಾಡಿದರೆಂದು ಎಲ್ಲರೂ ಆ ಸಾಹಸ ಮಾಡಲಾದೀತೇ?

ಮೊದಲು ನಮ್ಮ ಯೋಗ್ಯತೆ (ಕ್ಷಮತೆ)ಯನ್ನು ಅರಿತುಕೊಳ್ಳಬೇಕು. ಕೊರತೆಗಳೇನಾದರೂ ಇದ್ದರೆ, ಒಪ್ಪಿಕೊಳ್ಳಬೇಕು, ತಿದ್ದಿಕೊಳ್ಳಬೇಕು, ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕು. ನಾವು ಮಾಡಬೇಕೆಂದುಕೊಂಡ ಕೆಲಸದ ಸಮಗ್ರ ಪರಿಚಯ ನಮಗೆ ಆಗಬೇಕು. ನಮ್ಮ ಸಾಮರ್ಥ್ಯಕ್ಕೆ ಮೀರಿದ ಕೆಲಸ ಕಾರ್ಯಗಳನ್ನು ಕೈಗೆತ್ತಿಕೊಂಡು

ಮಾಡಲಾಗದೆ ಅದರ ಭಾರದಲ್ಲಿ ನಲುಗುವುದಕ್ಕಿಂತ ಮಾನ್ಯ ಗುಂಡಪ್ಪನವರು "ಎಷ್ಟುಚಿತವೋ ನೋಡು" ಎಂದು ಹೇಳಿದಂತೆ ಔಚಿತ್ಯವನ್ನು ಅರಿತು ನಡೆದುಕೊಳ್ಳುವುದೇ ಉತ್ತಮವಲ್ಲವೇ?

**ಮುಕ್ತಕ – 579**

**ಬೆನ್ನಿನಗಲವನಳೆದು ಹೊರಗೆ ನೀನದನೊಡ್ಡು ।**
**ತನ್ನದೆವುದನು ವಿಧಿ ತಾನೆ ಕೊಳಲಿ ಬಿಡು ॥**
**ಬನ್ನ ನಿನಗೊದಗಲದನಾತ್ಮಶಿಕ್ಷಣವನ್ನು ।**
**ಮಾನ್ಯದೊಪ್ಪಂದವಿದು - ಮಂಕುತಿಮ್ಮ ॥**





ಬೆನ್ನಿನಗಲವನಳೆದು=ಬೆನ್ನಿನ+ಅಗಲವನು+ಅಳೆದು, ನೀನದನೊಡ್ಡು=ನೀನು+ಅದನು+ಒಡ್ಡು,
ತನ್ನದೆವುದನು=ತನ್ನದು+ಎನ್ನುವುದನು,ನಿನಗೊದಗಲದನಾತ್ಮಶಿಕ್ಷಣವನ್ನು=ನಿನಗೆ+ಒದಗಲು+ಅದನು+ಆತ್ಮ+ಶಿಕ್ಷಣ+
ಎನ್ನು, ಮಾನ್ಯದೊಪ್ಪಂದವಿದು=ಮಾನ್ಯದ+ಒಪ್ಪಂದ+ಇದು,
ಬನ್ನ=ಭಂಗ, ಮಾನ್ಯದ=ಒಪ್ಪುವಂತಹ,

ಬದುಕಿನಲ್ಲಿ ಜೀವನದ ದೈನಂದಿನ ಕಾರ್ಯಕೆಲಸಗಳಲ್ಲಿ, ಎಷ್ಟು ಭಾರವನ್ನು ನಿನಗೆ ಹೊರಲು ಆಗುವುದೋ, ಅಷ್ಟನ್ನು ಮಾತ್ರ ಹೊತ್ತುಕೋ! ನಿನ್ನ ಪೂರ್ವ ಕರ್ಮದನುಸಾರ ನಿನ್ನಿಂದ ಏನೇನು ಆಗಬೇಕೋ ಅದನ್ನೆಲ್ಲ ಆ ವಿಧಿ ಮಾಡಿಸಿಕೊಳ್ಳಲಿ ಬಿಡು. ಹಾಗೆ ಕರ್ಮ ಮಾಡುವಾಗ ಭಂಗವುಂಟಾದರೆ ಅದನ್ನು ಬದುಕಿನಲ್ಲಿ ನಿನಗೆ ಸಿಗುವ ಶಿಕ್ಷಣವೆಂದು ತಿಳಿ. ಅದೇ ಸರಿಯಾದ ಒಡಂಬಡಿಕೆ (Compromise) ಎಂದು ಬದುಕನ್ನು ಬದುಕುವ ಮತ್ತೊಂದು ಪರಿಯನ್ನು ಉಪದೇಶಮಾಡಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಒಬ್ಬೊಬ್ಬರಿಗೆ ಒಂದೊಂದು ಪ್ರತಿಭೆ, ಶಕ್ತಿ, ಕ್ಷಮತೆ ಇರುತ್ತದೆ. ಎಲ್ಲರಿಗೂ ಒಂದೇ ಸಮನಾದ ಶಕ್ತಿಯಿರುವುದಿಲ್ಲವೆಂಬುದು ಸರ್ವವಿಧಿತ. ಹಾಗಾಗಿ ಎಲ್ಲರೂ ಎಲ್ಲ ಕೆಲಸವನ್ನೂ ಸಮನಾಗಿ ಮಾಡಲಾಗುವುದಿಲ್ಲ. ನಮ್ಮ 'ಬೆನ್ನಿನಗಲ' ಎಂದರೆ ನಮಗೆ ಎಷ್ಟು ಹೊರೆಯನ್ನು ಹೊರಲು ಸಾಧ್ಯವಿದೆ ಎಂದು ತಿಳಿದುಕೊಳ್ಳಬೇಕು. ನಾವೆಲ್ಲರೂ ವಿಧಿಯನುಸಾರ ಶಕ್ತಿಯನ್ನು ಮತ್ತು ಆ ಶಕ್ತಿಯ ಮಿತಿಯನ್ನು ಪಡೆದ್ದಿದ್ದೇವೆ ಮತ್ತು ನಾವು ನಮ್ಮ ನಮ್ಮ ಪೂರ್ವಕರ್ಮಗಳಿಗನುಸಾರ ಕೆಲಸಮಾಡುತ್ತೇವೆ ಎಂಬ ಅರಿವು ನಮಗಾದರೆ, ನಾವು ಮಾಡುವುದು ಫಲಾಪೇಕ್ಷೆಯಿಲ್ಲದ ನಮ್ಮ ಕೈಲಾಗುವಂತಹ ಕರ್ಮವಾಗುತ್ತದೆ. ಹಾಗಾದಾಗ, ಮಾನ್ಯ ಗುಂಡಪ್ಪನವರು "ತನ್ನದೆನುವುದನು ವಿಧಿ ತಾನೆ ಕೊಳಲಿ ಬಿಡು" ಎಂದು ಹೇಳುವಂತೆ ನಮ್ಮಿಂದ ಆ ವಿಧಿ ತನಗೆ ಏನು ಬೇಕೋ ಮತ್ತು ಹೇಗೆ ಬೇಕೋ ಹಾಗೆ ಕೆಲಸ ಮಾಡಿಸಿಕೊಳ್ಳುತ್ತದೆ.

ಶ್ರೀ ಕೃಷ್ಣ ಭಗವದ್ಗೀತೆಯಲ್ಲಿ "ಕರ್ಮಣ್ಯ ವಾ ಅಧಿಕಾರಸ್ತೇ ಮಾ ಫಲೇಶು ಕದಾಚನ' ಎನ್ನುವ ಅರ್ಥದಲ್ಲಿ ನಮ್ಮ ಕರ್ಮಗಳನ್ನು ಮಾಡಿದರೆ ಆ ಕರ್ಮ ಫಲದಿಂದ ಬರುವ ಸುಖ ದುಃಖಗಳ ಪರಿಣಾಮ ನಮ್ಮ ಮೇಲೆ ಆಗದೆ, ನಾವು ನಿರ್ಲಿಪ್ತತೆಯಿಂದ ಇದ್ದರೆ, ನಿಜವಾದ ಆನಂದವನ್ನು ಪಡೆಯಬಹುದು ಎನ್ನುವುದು ತತ್ವ. ಆದರೆ ಆ ರೀತಿ ಇರಲು ಎಷ್ಟು ಜನರಿಗೆ ಸಾಧ್ಯ. ಆ ಸ್ಥಿತಿಗೆ ತಲುಪಲು ಯಾವ ಯಾವ ರೀತಿಯ ಸಿದ್ಧತೆಗಳು ಆಗಬೇಕು, ಏನನ್ನು ಕಲಿಯಬೇಕು (Learning) ಮತ್ತು ಕಲಿತ ಏನನ್ನು ಬಿಡಬೇಕು (unlearning) ಎನ್ನುವುದು ಆ ಸ್ಥಿತಿಗೆ ಹೋಗಬೇಕೆಂದು ಇಚ್ಚಿಸುವವರ ಮುಂದೆ ಬರುವ ಪ್ರಶ್ನೆಗಳು. ಉತ್ತರವನ್ನು ನಮ್ಮ ರೀತಿಯಲ್ಲೇ ಕಂಡುಕೊಂಡು ಆ ಮಾರ್ಗದಲ್ಲಿ ಹೊರಟರೆ ಬನ್ನ" ಎಂದರೆ, ಭಂಗಗಳು ಎಂದರೆ ಹಲವಾರು ಅಡ್ಡಿ ಆತಂಕಗಳು ಒದಗುತ್ತವೆ. ನಾವಿರುವ ಸ್ಥಿತಿಯಿಂದ ಮತ್ತೊಂದು ಸ್ಥಿತಿಗೆ ತಲುಪುವ ಪ್ರಯತ್ನದಲ್ಲಿ ನಮಗೆ ವಿಘ್ನಗಳು ಬಂದೇ ಬರುತ್ತವೆ. ಧೃತಿಗೆಡದೆ ಇರಬೇಕಾದರೆ, ಹಿಡಿದ ಕೆಲಸವನ್ನು ಮುಂದುವರೆಸಿಕೊಂಡು ದಡ ಮುಟ್ಟಬೇಕಾದರೆ ಆ ವಿಘ್ನಗಳನ್ನು ಅನುಭವಿಸಿ ಪಾರಾಗಬೇಕು. ಆ ಪ್ರಯಾಣದಲ್ಲಿ ನಾವು ಕಲಿಯುವುದು ಅನೇಕ ವಿಷಯಗಳು. ಅದೇ ಶಿಕ್ಷಣ. ಅನುಭವಗಳ ಮೂಸೆಯಿಂದ ನಮಗೆ ಎರೆಯಲ್ಪಡುವ ಬದುಕಿನ ಶಿಕ್ಷಣ, ಪಾಠ.

ನಮ್ಮ ಇತಿಮಿತಿಗಳನ್ನೂ ಅರಿತು, ಕೈಲಾದಷ್ಟು ಕರ್ಮಗಳನ್ನು ಮಾಡುತ್ತಾ, ನಿರ್ಲಿಪ್ತತೆಯಿಂದ ವಿಧಿಗೆ ನಮ್ಮನ್ನು ನಾವು ಒಡ್ಡಿಕೊಂಡು ಕೆಲಸಗಳನ್ನು ಮಾಡುತ್ತಾ ಹೋಗುವುದೇ ಜಾಣತನವೆನ್ನುವಂತೆ "ಮಾನ್ಯದೊಪ್ಪಂದವಿದು" ಎಂದಿದ್ದಾರೆ ಗುಂಡಪ್ಪನವರು. ಯಾವುದೋ ಒಂದು ನಿರ್ಧಿಷ್ಟ ಅಪೇಕ್ಷೆಯಿಂದ ಮಾಡುವ ಕೆಲಸಗಳಿಗೆ, ಸಾಮಾನ್ಯವಾಗಿ 'ನಿರಾಶೆಯೇ ಫಲ. ಆದ್ದರಿಂದ ವಿಧಿಯೊಡನೆ ಒಪ್ಪಂದ ಮಾಡಿಕೊಂಡು ಬದುಕಿದರೆ ನಮ್ಮ ಜೀವನವೂ ಸುಖ ಸಂತೋಷ ಮತ್ತು ಸಾರ್ಥಕ್ಯದಿಂದ ಕೂಡಿರಬಹುದು.

**ಮುಕ್ತಕ – 580** **ದೊರೆಯ ವೇಷ ಧರಿಸಿ ಮರೆಯುವೆಯ ಮೀಸೆಯನು |**
**ತಿರುಕಹಾರುವನಾಗಿ ಮೀಸೆ ತಿರಿಚುವೆಯ? ||**
**ಇರುವುದವನವನಿಗವನವನ ತಾಣದ ಧರ್ಮ |**
**ಅರಿವೆ ಋತುಗತಿಯಂತೆ - ಮಂಕುತಿಮ್ಮ ||**

ಇರುವುದವನವನಿಗವನವನ=ಇರುವುದು+ಅವನವನಿಗೆ+ಅವನವನ, ತಾಣದ=ಸ್ಥಳದ,
ಋತುಗತಿ=ಋತು ಬದಲಾವಣೆ, ಧರ್ಮ= ಇರಬೇಕಾದ ರೀತಿ ಮತ್ತು ಮಾಡಬೇಕಾದ ಕರ್ಮ.

ನಾಟಕದಲ್ಲಿ ರಾಜನ ಪಾತ್ರ ಧರಿಸಿ ಮೀಸೆಯನ್ನು ಮರೆಯಬಹುದೇ? ಭಿಕ್ಷಾರ್ಥಿಯಾದ ಬಡ ಬ್ರಾಹ್ಮಣನ ವೇಷ ಧರಿಸಿ ದಪ್ಪ ದಪ್ಪ ಮೀಸೆಯನ್ನು ಇಟ್ಟುಕೊಂಡರೆ ಬಿಕ್ಷೆ ಸಿಕ್ಕೀತೆ? ಜಗತ್ತಿನಲ್ಲಿರುವ ಪ್ರತಿಯೊಬ್ಬನಿಗೂ ಅವನವನದೇ ಆದಂತ ಒಂದು ಪಾತ್ರವಿರುತ್ತದೆ ಮತ್ತು ಆ ಪಾತ್ರಕ್ಕೊಂದು ಧರ್ಮವಿರುತ್ತದೆ. ಋತು ಬದಲಾದಂತೆ ನಮ್ಮ ಉಡುಗೆ ತೊಡುಗೆಗಳೂ ಬದಲಾಗುವುದಿಲ್ಲವೇ? ಹಾಗೆ ಸಮಯ ಸಂಧರ್ಭದ ಔಚಿತ್ಯಕ್ಕನುಸಾರವಾಗಿ ನಮ್ಮ ವೇಷ, ನಡೆ, ನುಡಿ ಇರಬೇಕು ಎನ್ನವುದೇ ಈ ಮುಕ್ತಕದ ಹೂರಣ.

ಔಚಿತ್ಯವೆಂದರೆ ನಮ್ಮ ಪಾತ್ರ, ಸಮಯ, ಸ್ಥಳ ಮತ್ತು ಸಂದರ್ಭಕ್ಕೆ ಉಚಿತವಾಗಿ ನಡೆದುಕೊಳ್ಳುವುದು ಎಂದು ಅರ್ಥ. ನಾವು ನಮ್ಮ ಜೀವನದಲ್ಲಿ ಹಲವಾರು ವೇಷಗಳನ್ನು ಹಾಕುತ್ತೇವೆ. ಮನೆಯಲ್ಲಿನ ವ್ಯಕ್ತಿಗಳಿಗೊಂದು ಬೇರೊಂದು ವೇಷ, ಸ್ನೇಹಿತರೊಂದಿಗೊಂದು ವೇಷ, ನಾವು ಕೆಲಸಮಾಡುವ ಸ್ಥಳದಲ್ಲಿ ಒಂದು ವೇಷ, ಅಂತರಂಗದ ವೇಷ, ಹೀಗೆ

ದಿನ ನಿತ್ಯ ಹತ್ತು ಹಲವಾರು ವೇಷಗಳನ್ನು ಹಾಕುವ ನಾವು, ಆಯಾಯಾ ಸಂದರ್ಭಕ್ಕೆ ತಕ್ಕಂತೆ ನಡೆದುಕೊಂಡರೆ, ನಾವು ಔಚಿತ್ಯವನ್ನು ಕಾಪಾಡಿಕೊಂಡು ಪಾಲಿಸಿದಂತಾಗುತ್ತದೆ. ಇಲ್ಲದಿದ್ದರೆ ಅಸಾಂದರ್ಭಿಕ ಮಾತು, ನಡೆ, ನುಡಿಗಳಿಂದ ನಾವು ಅಭಾಸಕ್ಕೆ ಗುರಿಯಾಗುತ್ತೇವೆ. ಸಿಪಾಯಿಯಂತೆ ನಡೆಯುವ ನಾರದ ಅಥವಾ ಹೆಣ್ಣಿನಂತೆ ನಡೆಯುವ ಭೀಮನಂತೆ ಪಾತ್ರಕ್ಕನುಚಿತ ನಟನೆಯಿಂದ ಪ್ರೇಕ್ಷಕರ ಅವಹೇಳನಕ್ಕೆ ಗುರಿಯಾಗುವ ನಟನಂತೆ.

ನಮ್ಮ ನೆಲೆಯನ್ನು ಅರಿಯಬೇಕು ಮತ್ತು ನಮ್ಮ ತತ್ಕಾಲದ ಪಾತ್ರದ ಧರ್ಮವನ್ನರಿಯಬೇಕು. ನಮ್ಮ ಇತಿ





ಮಿತಿಗಳನ್ನರಿಯಬೇಕು. ಹಾಗೆ ಅರಿತರೆ ಮತ್ತು ಅದಕ್ಕನುಗುಣವಾಗಿ ನಡೆದುಕೊಂಡರೆ ನಮ್ಮ ವ್ಯಕ್ತಿತ್ವಕ್ಕೆ ಒಂದು ಪಕ್ವತೆ ಸಿಗುತ್ತದೆ. ಅದು ಸಿಗುವ ತನಕ ಅದನ್ನು ಪಡೆದುಕೊಳ್ಳುವ ನಮ್ಮ ಪ್ರಯತ್ನ ಸಾಗಬೇಕು. ಆದರೆ ಇದರಲ್ಲಿ ಒಂದು ತೊಡಕಿದೆ. ಒಬ್ಬ ವ್ಯಕ್ತಿ ಒಂದು ವೃತ್ತಿಯಿಂದ ಕಾರಣಾಂತರಗಳಿಂದ ಮತ್ತೊಂದು ವೃತ್ತಿಗೆ ಬದಲಾಗುವ ಪ್ರಮೇಯ ಬರಬಹುದು. ಬ್ಯಾಂಕಿನ ನೌಕರಿ ಬಿಟ್ಟು ವಕೀಲನಾಗುವ ಅಥವಾ ಎಂಜಿನಿಯರ್ ಆಗಿದ್ದವ ಉಪಾಧ್ಯಾಯನಾಗಬಹುದು. ಹೀಗೆ ಹಲವಾರು ವಿಧದ ಮಾರ್ಪಾಡುಗಳು ನಮಗೆ ದೃಷ್ಟಾಂತದ ರೂಪದಲ್ಲಿ ಸಿಗುತ್ತವೆ. ಇಲ್ಲಿ ಕಲಿತದ್ದನ್ನು ತೊರೆದು ಹೊಸತನ್ನು ಕಲಿಯುವ ಸಂದರ್ಭವೊದಗುತ್ತದೆ. ರಾಮಾಯಣ ನಾಟಕದ ರಾವಣನ ಪಾತ್ರದವ, ಮಹಾಭಾರತದ ನಾಟಕದಲ್ಲಿ ಕೃಷ್ಣನಾಗಬಹುದು, ಬದಲಾದ ಸಂದರ್ಭಕ್ಕೆ ಒಪ್ಪುವಂತೆ ಕಲಿತು ನಡೆಯುವುದೇ ಜಾಣತನ.

ನಾವು ಏನೇ ಆಗಿರಲಿ ನಮ್ಮ ಪಾತ್ರದ ಔಚಿತ್ಯ ಮತ್ತು ಧರ್ಮವನ್ನು ಅಳವಡಿಸಿಕೊಂಡರೆ ಒಳ್ಳೆಯದು. ನಾಟಕದಲ್ಲಿ ಒಬ್ಬ ವ್ಯಕ್ತಿಗೆ ಒಂದೇ ಪಾತ್ರ. ಆದರೆ ನಿಜ ಜೀವನದಲ್ಲಿ ಒಬ್ಬ ವ್ಯಕ್ತಿಗೆ ಒಂದೇ ಸಮಯಕ್ಕೆ ಹಲವಾರು

ಪಾತ್ರಗಳು, ಪರಸ್ಪರ ಸಂಬಂಧಗಳ ಔಚಿತ್ಯವನ್ನರಿತು, ನಮ್ಮ ಸಂಪರ್ಕಕ್ಕೆ ಬರುವ ಪ್ರತಿಯೊಬ್ಬರೊಡನೆ ನಮ್ಮ ಪಾತ್ರಕ್ಕನುಗುಣವಾಗಿ ನಡೆದುಕೊಂಡರೆ ಬಾಳು ಸುಖ.

**ಮುಕ್ತಕ – 581**

**ದೇವರದಿದೆಲ್ಲ ದೇವರಿಗೆಲ್ಲವೊಂದೊರಲು- |**
**ತಾವುದನುಮವನ ನಿರ್ಣಯಕ್ಕೆ ಬಿಡದೆಯೆ ತಾಂ ||**
**ದಾವಂತಬಡುತ ತನ್ನಿಚ್ಛೆಯನೆ ಘೋಷಿಸುವ |**
**ಭಾವವೆಂತಹ ಭಕುತಿ? - ಮಂಕುತಿಮ್ಮ ||**

ದೇವರದಿದೆಲ್ಲ=ದೇವರದು+ಇದೆಲ್ಲ, ದೇವರಿಗೆಲ್ಲವೊಂದೊರಲುತಾವುದನುಮವನ=ದೇವರಿಗೆ+ಎಲ್ಲವು+ಎಂದು+ ಒರಳುತಾ+ಆವುದನುಂ+ಅವನ,ದಾವಂತಬಡುತ-ದಾವಂತ+ಪಡುತ,ತನ್ನಿಚ್ಛೆಯನೆ=ತನ್ನ+ಇಚ್ಛೆಯನೆ,
ಭಾವವೆಂತಹ=ಭಾವವು+ಎಂತಹ,
ದಾವಂತಬಡುತ=ಪರದಾಡುತ್ತಾ

ಈ ಜಗತ್ತೆಲ್ಲವೂ ಆ ದೇವರದು ಮತ್ತು ಇಲ್ಲಿರುವುದೆಲ್ಲವೂ ಆ ದೇವರಿಗಾಗಿಯೇ ಇದೆ, ಎಂದು ವಟಗುಟ್ಟುತ್ತಾ ಯಾವುದನ್ನೂ ಅವನ ನಿರ್ಣಯಕ್ಕೆ ಬಿಡದೆ, ತಾನೇ ಎಲ್ಲದಕ್ಕೂ ಧಾವಂತಪಡುತ್ತಾ, ತನ್ನದೇ ಆದ ನಿರ್ಣಯಗಳನ್ನು ಸದಾಕಾಲ ಘೋಷಿಸುತ್ತಾ ಇರುವುದು ಯಾವ ರೀತಿಯ ಭಕ್ತಿ ಎಂದು ಪ್ರಶ್ನಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಎಲ್ಲವೂ ಆ ದೇವರಿಂದ ಆದದ್ದು, ಆ ದೇವರೇ ಎಲ್ಲವೂ ಆಗಿ ಪ್ರಕಟಗೊಂಡಿದ್ದಾನೆ. ಈ ಜಗತ್ತಿನಲ್ಲಿರುವುದೆಲ್ಲವೂ ಅವನೇ ಆಗಿ, ಅವನಿಗಾಗಿಯೇ ಆಗಿದೆ. ಇಂತಹ ಭಾವವನ್ನು ಈಶಾವಾಸ್ಯೋಪನಿಷತ್ತು 'ಈಶಾವಾಸ್ಯಮಿದಂ ಸರ್ವಂ ಯತ್ ಕಿಚಂತ್ ಜಗತ್ಯಾಮ್ ಜಗತ್, ತೇನ ತ್ಯಕ್ತೇನ ಭುಂಜೀತಾ ಮಾ ಗೃದಃ ಕಸ್ಯಸ್ವಿದ್ಧನಂ" ಎನ್ನುತ್ತದೆ. ನಾವೂ ಸಹ, ಈ ಜಗತ್ತಿನ ಎಲ್ಲವೂ ಅವನಿಗೆ ಸೇರಿದ್ದು, ನಾವು ಉಡುವ ಮತ್ತು ಉಣ್ಣುವುದೆಲ್ಲವೂ ಆ ಪರಮಾತ್ಮನ ಪ್ರಸಾದವೆಂಬಂತೆ ಇರಬೇಕು, ಎಂದು ಬಾಯಲ್ಲಿ ಹೇಳುತ್ತೇವೆ, ಸುಮ್ಮನೆ ವಟಗುಟ್ಟುತ್ತೇವೆ. ಸತ್ಯವಾಗಿ ಆತ್ಮಾವಲೋಕನ ಮಾಡಿಕೊಂಡರೆ, ನಮ್ಮ ಆಲೋಚನೆಯ ಟೊಳ್ಳುತನದ ಅರಿವಾಗುತ್ತದೆ. ಏಕೆಂದರೆ, ನಾವು ಸದಾಕಾಲ ಮಾಡುವ ಎಲ್ಲ ಕೆಲಸಗಳನ್ನೂ "ನಾನು ಮಾಡುತ್ತೇನೆ, ನಾನು ಸಾಧಿಸಿದೆ, ನಾನು ಪಡೆದುಕೊಂಡೆ, ನಾ ಗಳಿಸಿದೆ. ನಾ ಜಯಿಸಿದೆ" ಇತ್ಯಾದಿಯಾಗಿ ಹೇಳಿಕೊಳ್ಳುತ್ತೇವೆ. ಒಂದು ಕಡೆ ಎಲ್ಲವೂ ಪರಮಾತ್ಮನೇ, ಪರಮಾತ್ಮನಿಂದ ಮತ್ತು ಪರಮಾತ್ಮನಿಗೆ ಎಂದು ಎನ್ನುವ ನಾವು ಹಾಗೆ ಹೇಳಿಕೊಳ್ಳುವುದು "ಆಭಾಸ' ವಲ್ಲವೇ? ಇದು ಪರಮಾತ್ಮನಲ್ಲಿ ಸರಿಯಾದ ಭಕ್ತಿಯೇ ಎಂದು ಪ್ರಶ್ನಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಭಕ್ತಿಗೆ ಸಮರ್ಪಣಾ ಭಾವ ಬೇಕು. ಸಮರ್ಪಣೆ ಎಂದರೆ ಸಕಲವನ್ನೂ ಆ ಪರಮಾತ್ಮನ ಚರಣಗಳಿಗೆ ಅರ್ಪಿಸಿಬಿಡುವುದು. ಇದಕ್ಕೆ 'ಪ್ರಪತ್ತಿ' ಎನ್ನುತ್ತಾರೆ. ಸಂಪೂರ್ಣ ಶರಣಾಗತಿಯ ಅರ್ಥದಲ್ಲಿ. ಆದರೆ ಹಾಗೆ ಸಂಪೂರ್ಣ ಶರಣಾಗತಿಯ ಹಂತಕ್ಕೆ ಹೋಗಬೇಕಾದರೆ ಬಹಳ ದೊಡ್ಡ ಸಾಧನೆ ಬೇಕು. ಆ ಭಗವಂತನಿಂದ ಸೃಷ್ಟಿಸಲ್ಪಟ್ಟ ಈ ಜಗತ್ತಿನಲ್ಲಿ ನಾವೂ ಒಂದು ಭಾಗವಷ್ಟೇ? ನಮಗೆ ಒಂದು ಪ್ರಮಾಣದ ಶಕ್ತಿಯಿದೆ. ಆ ಶಕ್ತಿಗೆ ಮೂಲ ಮತ್ತು ಪ್ರೇರಕವಾದ ಶಕ್ತಿಯೇ ಆ ಪರಮಾತ್ಮ. ನಾವು ಮಾಡುವ ಕೆಲಸವನ್ನು ಆ ಪರಮಾತ್ಮನಿಂದ ನಿಯಮಿಸಲ್ಪಟ್ಟ ಕರ್ತವ್ಯವೆಂದು ಭಾವಿಸಿ, ಪೂರ್ವ ಅಥವಾ ಉತ್ತರದ ಫಲಾಪೇಕ್ಷೆಯಿಲ್ಲದೆ, ಅಹಂಕಾರ ರಹಿತರಾಗಿ ಆ ಕೆಲಸವನ್ನು ಮಾಡಿ, ಸಂದ ಫಲವನ್ನು ಪರಮಾತ್ಮನ ಪ್ರಸಾದವೆಂದು ಸ್ವೀಕರಿಸಿ, ತೃಪ್ತಿಹೊಂದಿದರೆ ಅದು ನಿಜವಾದ ಭಕ್ತಿಭಾವವಾಗುತ್ತದೆ. ಇಂತಹ ಅನನ್ಯವಾದ ಭಕ್ತಿಯ ಭಾವವನ್ನು ಭಾರತದ ಎಲ್ಲಾ ಮಹನೀಯ ಸಂತರುಗಳೂ ಸಹ ಪ್ರತಿಪಾದಿಸಿದ್ದಾರೆ.

ನಮ್ಮ ನಿರ್ಣಯಗಳು ಮತ್ತು ನಮ್ಮ ಭಾವನೆಗಳಿಗೂ, ನಾವು ಮಾಡುವ ಕೆಲಸಗಳು ಮತ್ತು ಅದರಿಂದ ನಮಗೆ ಸಿಗುವ ಫಲಗಳು, ಹೀಗೆ ಎಲ್ಲಕ್ಕೂ ಆ ದೇವರೇ ಕಾರಣನೆಂದು, ನಾವು ನಿಮಿತ್ತ ಮಾತ್ರರೆಂದು ದೃಢವಾದ ನಂಬಿಕೆ ನಮ್ಮಲ್ಲಿ ಎಂದು ಬರುತ್ತದೋ, ಅಂದು ನಾವು ನಿಜ ಭಕ್ತಿಯೆಡೆಗೆ ಹೆಜ್ಜೆ ಹಾಕುತ್ತಿದ್ದೇವೆ ಎಂದು ಅರ್ಥ. ಎಷ್ಟು ಪೂಜೆ,

ಪುನಸ್ಕಾರಗಳನ್ನು ಮಾಡಿದರೂ ಅಂತಹ ದೃಢಭಾವ ನಮ್ಮಲ್ಲಿ ನೆಲೆಯಾಗದಿದ್ದರೆ ಭಕ್ತಿ ಪೂರ್ಣವಾಗುವುದಿಲ್ಲ. ಅಂತಹ ಅಪರಿಪೂರ್ಣ ಭಕ್ತಿಯಿಂದ ಪರಿಪೂರ್ಣ ಭಕ್ತಿಯೆಡೆಗೆ ನಮ್ಮ
ಪ್ರಯಾಣ ಸಾಗಬೇಕು.

(161)

| ಕಗ್ಗರಸಧಾರೆ | ಬೆನ್ನಿಗೆ ತಕ್ಕ ಭಾರ 579 583 |
|---|---|

ಎಂದು ಕೊರಗುತ್ತಲೋ ಅಥವಾ ಬಯಸಿದ್ದಕ್ಕಿಂತ ಅಧಿಕವಾಗಿ ಸಿಕ್ಕರೆ ಅಹಂಕಾರಪಡುತ್ತಲೋ ಮನಸ್ಸಿನ ನಿರ್ಮಲತೆಯನ್ನು ಹಾಳು ಮಾಡಿಕೊಂಡರೆ, ಹೆಚ್ಚೋ, ಕಡಿಮೆಯೋ, ಒಟ್ಟಾರೆ ಹೇಳಬೇಕೆಂದರೆ, ಬಯಕೆಗಳ ಪೂರೈಕೆಯಿಂದ ಮನಸ್ಸಿಗೆ ಕಿರಿಕಿರಿಯೇ ಹೊರತು ಬೇರೇನೂ ಅಲ್ಲ. ಅಂತಹ ಬದುಕು ನಯವಾಗಿರದೆ ಒರಟಾಗಿರುತ್ತದೆ ಎನ್ನುತ್ತಾರೆ ಶ್ರೀ ಡಿ.ವಿ.ಜಿ.ಯವರು.

ವಸ್ತು, ವಿಷಯ ಅಥವಾ ವ್ಯಕ್ತಿಗಳೊಂದಿಗೆ ನಮ್ಮ ನಂಟಿನ ಅಂಟು ಎಷ್ಟು ಗಾಢವಾಗಿರುತ್ತದೆಯೋ ಅದರಿಂದಾಗುವ ಮಾನಸಿಕ ಕಿರಿಕಿರಿಯೂ ಅಷ್ಟೇ ತೀವ್ರವಾಗಿರುತ್ತದೆ. ಹಾಗಾಗದೆ ನಮಗೆ ಶಾಂತಿಯ ಅಥವಾ ನೆಮ್ಮದಿಯ ಬದುಕು ಬೇಕಾದರೆ ನಮ್ಮ ನಂಟನ್ನು ಮತ್ತು ಆ ನಂಟನ್ನುಂಟು ಬೆಸೆಯುವ ಅಂಟನ್ನು ಕಡಿಮೆ ಮಾಡಿಕೊಳ್ಳಬೇಕು, ಮಾಡುವ ಕೆಲಸ ಮಾಡುತ್ತಿರಬೇಕು. ಒಳ್ಳೆಯ ಅಪೇಕ್ಷೆ ಇಟ್ಟುಕೊಳ್ಳಬೇಕು, ಆದರೆ ನಮಗೆ ಸಿಕ್ಕಿದ್ದರಿಂದ ತೃಪ್ತರಾಗಬೇಕು. ಮನಸ್ಸಿನಲ್ಲಿ ಕೊರತೆಯ ಕೊರೆತ ಹೆಚ್ಚಾದರೆ 'ಬದುಕು ಒರಟಾಗುತ್ತದೆ'. ಅಪೇಕ್ಷೆಗಳನ್ನು ಮತ್ತು ನಮ್ಮ ಬೇಕುಗಳನ್ನು ಕಡಿಮೆ ಮಾಡಿಕೊಳ್ಳುವುದು ಸಾಧನೆಯಿಂದ ಮಾತ್ರ ಸಾಧ್ಯ. ಪ್ರಯತ್ನಪಟ್ಟರೆ ಬದುಕು ನಯವಾಗಿ ಸಾಗುತ್ತದೆ. ನಮ್ಮ ಆಯ್ಕೆಯಂತೆ ನಮಗೆ ಫಲ ಸಿಗುತ್ತದೆ.

**ಮುಕ್ತಕ – 583**

**ಅಷ್ಟದಿಗ್ಗಜವೆ ನೀನ್? ಆದಿಶೇಷನೆ ನೀನು? |**
**ಕಷ್ಟ ಭಾರವಿದೆಂದು ನಿಟ್ಟುಸಿರ ಬಿಡುವೆ! ||**
**ನಿಷ್ಠುರದ ನಿನ್ನ ಕನಿಕರ ಜಗಕೆ ಬೇಕಿಲ್ಲ |**
**ಎಷ್ಟಾದರಷ್ಟೆ ಸರಿ - ಮಂಕುತಿಮ್ಮ ||**

ಅಷ್ಟದಿಗ್ಗಜವೆ=ಅಷ್ಟ+ದಿಕ್+ಗಜವೆ, ಭಾರವಿದೆಂದು=ಭಾರಾವು+ಇದು+ಎಂದು,ಎಷ್ಟಾದರಷ್ಟೆ=ಎಷ್ಟು+ಆದರೆ+ಅಷ್ಟು, ಅಷ್ಟದಿಗ್ಗಜವೆ=ಎಂಟು ದಿಕ್ಕುಗಳನ್ನು ಹೊತ್ತ ಎಂಟು ಆನೆಗಳು, ಆದಿಶೇಷ=ಶ್ರೀಮನ್ಮಹಾವಿಷ್ಣುವಿಗೆ ಹಾಸಿಗೆಯಾದ ಸರ್ಪ (ಪುರಾಣದಲ್ಲಿ ಉಲ್ಲೇಖಿತ)

ಬದುಕಿನ ಬವಣೆಯನ್ನು ಪಡುವಾಗ "ಅಯ್ಯೋ ಇದು ಕಷ್ಟ ಮತ್ತು ಇದು ಭಾರ" ಎಂದು ನಿಟ್ಟುಸಿರು ಬಿಡುವೆಯಲ್ಲಾ, ನೀನೇನು ಎಂಟು ದಿಕ್ಕುಗಳನ್ನು ಹೊತ್ತ ಆನೆಗಳಷ್ಟು ಭಾರವನ್ನೂ ಹೊತ್ತಿಲ್ಲ ಅಥವಾ ಆ ಆನೆಗಳನ್ನು ಹೊತ್ತ ಆದಿಶೇಷನಷ್ಟು ಭಾರವನ್ನೂ ಹೊತ್ತಿಲ್ಲವಲ್ಲ. ಸುಮ್ಮನೆ "ನಾನು ಬಹಳ ಕಷ್ಟಪಡುತ್ತಿದ್ದೇನೆ ಎನ್ನುತ್ತಾ ಅನ್ಯರ ಅನುಕಂಪವನ್ನು ಆಕರ್ಷಿಸುವ ನಿನ್ನನ್ನು ಯಾರೂ ಈ ಜಗತ್ತಿನಲ್ಲಿ ಗಮನಿಸುವುದಿಲ್ಲ. ನಿನಗೆ ಎಷ್ಟು ಹೊರಲಾದರೆ ಅಷ್ಟು ಹೊತ್ತುಕೋ, ಸುಮ್ಮನೆ ಅಲವತ್ತುಕೊಳ್ಳಬೇಡ ಎಂದು ಕಿವಿಮಾತನ್ನು ಹೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮ ಜೀವನದಲ್ಲಿ ಸಾಮಾನ್ಯವಾಗಿ ನಾವು ನಮ್ಮ ಶಕ್ತಿ ಮತ್ತು ಸಾಮರ್ಥ್ಯವನ್ನು ಮೀರಿ ಸಾಧಿಸುವುದಕ್ಕೆ ಪ್ರಯತ್ನಿಸುತ್ತೇವೆ. ಅಕಾಶಕ್ಕೆ ಏಣಿ ಹಾಕುವ ಪ್ರಯತ್ನ ನಮ್ಮದು. ಸಾಧ್ಯಾಸಾಧ್ಯತೆಗಳ ವಿವೇಚನೆಯಿಲ್ಲದೆ ದಾಪುಗಾಲು ಹಾಕುವ ಹುಂಬತನ ನಮ್ಮದು. ಆದರೆ, ನಮಗೆ ನಮ್ಮ ಸಾಮರ್ಥ್ಯದ ಸ್ವರೂಪ ಗೊತ್ತಿರುವುದಿಲ್ಲ. ನಮ್ಮ ಸಾಮರ್ಥ್ಯಕ್ಕೆ ಮೀರಿದ ಪ್ರಯತ್ನವನ್ನು ನಾವು ಮಾಡಿದಾಗ, ಸಾಮಾನ್ಯವಾಗಿ ನಾವು ಎಡವುತ್ತೇವೆ ಮತ್ತು ಸೋಲುತ್ತೇವೆ. ಆ ದಾರಿಯಲ್ಲಿ ಬರುವ ಬವಣೆಗಳನ್ನು ಭರಿಸಲು ನಮಗೆ ಶಕ್ತಿಯಿರುವುದಿಲ್ಲ. ಎಡವಿದ್ದು ಮತ್ತು ಸೋತಿದ್ದು ಅರಿವಾಗುತ್ತದೆ. ಆದರೆ, ಅದರ ಕಾರಣವನ್ನು ನಾವು ಅರಿಯಲಾಗುವುದಿಲ್ಲ. ನಾವು ನಮ್ಮ ವಿಧಿಯನ್ನೋ ಅಥವಾ ಅನ್ಯರನ್ನೋ ದೂಷಿಸುತ್ತಾ ಸಮಾಧಾನಪಟ್ಟುಕೊಳ್ಳುವ ಪ್ರಯತ್ನವನ್ನು ಮಾಡುತ್ತೇವೆ. ನಮ್ಮ ಸಮಸ್ಯೆಗಳಿಗೆ ನಾವೇ ಕಾರಣರೆಂದು ನಮಗೆ ಅನ್ನಿಸುವುದೇ ಇಲ್ಲ.

“ಯಾರಾದರೂ ನಮ್ಮ ಸಹಾಯಕ್ಕೆ ಬರಬಾರದೇ? ನೋಡಿ, ನಮ್ಮವರು ಎಲ್ಲರೂ ಎಷ್ಟು ಆನಂದವಾಗಿದ್ದಾರೆ. ಬಿದ್ದ ನಮ್ಮನ್ನು ಮೇಲೆತ್ತಲು ಯಾರಾದರೂ ಬರಬಾರದೇ” ಎಂದು ಎಲ್ಲರಿಂದ ನಾವು ಕನಿಕರ ಅನುಕಂಪವನ್ನು ಅಪೇಕ್ಷಿಸುತ್ತೇವೆ. ಆದರೆ ಜಗತ್ತಿನಲ್ಲಿರುವ ಎಲ್ಲರಿಗೂ ಅವರವರದೇ ಕಷ್ಟಗಳು, ಸಮಸ್ಯೆಗಳು ಇರುವಾಗ ನಮ್ಮನ್ನು ನೋಡಲು ಯಾರಿಗೆ ತಾನೇ ಸಮಯವಿರುತ್ತದೆ. ನಮ್ಮ ಅಪೇಕ್ಷೆಗೆ ಅವರಿಂದ ಯಾವ ಪ್ರತಿಕ್ರಿಯೆಯೂ ಬರುವುದಿಲ್ಲ. ಅವರು ನಮ್ಮೆದುರು ಬಂದಾಗ ಕೇವಲ ಅನುಕಂಪ ತೋರಬಹುದು. ನಮ್ಮ ದೀನ ಸ್ಥಿತಿಯನ್ನು ತೋರಿ ಅನ್ಯರಿಂದ ಅನುಕಂಪದ ಅಪೇಕ್ಷೆಯನ್ನು ಬಿಟ್ಟು ಮಾನ್ಯ ಗುಂಡಪ್ಪನವರು “ಎಷ್ಟಾದರಷ್ಟೆ ಸರಿ” ಎನ್ನುವಂತೆ, ನಾವು ಯಾವುದೇ ಕಾರ್ಯವನ್ನು ಕೈಗೆತ್ತಿಕೊಳ್ಳುವಾಗ, ಆ ಕಾರ್ಯದ ಸಂಪೂರ್ಣ ಪರಿಚಯ ಮಾಡಿಕೊಳ್ಳಬೇಕು ಮತ್ತು ನಮ್ಮ ಸಾಮರ್ಥ್ಯವನ್ನು ಆ ಕಾರ್ಯದ ವ್ಯಾಪ್ತಿಯೊಂದಿಗೆ ತುಲನೆ ಮಾಡಿಕೊಳ್ಳಬೇಕು. ನಮ್ಮ 'ಸಾಮರ್ಥ್ಯಕ್ಕನುಗುಣವಾಗಿ ಮುಂದಕ್ಕೆ ಸರಿದರೆ ಕಾರ್ಯವೂ ಸಂಪೂರ್ಣವಾಗುತ್ತದೆ, ಸಫಲತೆಯೂ ಸಿಗುತ್ತದೆ.

ಹಾಗಲ್ಲದೆ ಹುಂಬತನದಿಂದ ಕೈಗೆತ್ತಿಕೊಂಡ ಕಾರ್ಯದಲ್ಲಿ ಸೋತರೆ, ಖಿನ್ನನಾಗದೆ, ಅನ್ಯರಿಂದ ಕನಿಕರವನ್ನು ಅಪೇಕ್ಷಿಸದೆ, ಬಂದ ಕಷ್ಟವನ್ನು ಅನುಭವಿಸಬೇಕು ಮತ್ತು ಆ ಸ್ಥಿತಿಯಿಂದ ಹೊರಬರಲು ಪ್ರಾಮಾಣಿಕ ಪ್ರಯತ್ನಪಟ್ಟರೆ, ಒಂದಲ್ಲ ಒಂದು ದಿನ ನಮ್ಮ ದೀನ ಸ್ಥಿತಿಯ ಸಂಕೋಲೆಯಿಂದ ಹೊರಬರಬಹುದು. ಆಗ ನಾವು ಅನುಭವಿಗಳಾಗಿರುತ್ತೇವೆ, ಜ್ಞಾನಿಗಳಾಗಿರುತ್ತೇವೆ, ಮುಂದಿನ ನಮ್ಮ ಪ್ರಯತ್ನಗಳಲ್ಲಿ ಜಾಗರೂಕರಾಗಿರುತ್ತೇವೆ.

**ಮುಕ್ತಕ – 584**

**ಎಲ್ಲಕಂ ನಿನಗಿಲ್ಲ ಕರ್ತವ್ಯದಧಿಕಾರ ।**
**ಇಲ್ಲದೆಯುಮಿಲ್ಲ ನಿನಗಾ ಹೊರೆಯ ಪಾಲು ॥**
**ಸಲ್ಲಿಸಾದನಿತ, ಮಿಕ್ಕುದು ಪಾಲಿಗನ ಪಾಡು ।**
**ಒಲ್ಲನವನ್ ಅರೆನಚ್ಚ - ಮಂಕುತಿಮ್ಮ ॥**





ಕರ್ತವ್ಯದಧಿಕಾರ= ಕರ್ತವ್ಯದ+ಅಧಿಕಾರ, ಇಲ್ಲದೆಯುಮಿಲ್ಲ=ಇಲ್ಲದೆಯುಂ+ಇಲ್ಲ,
ಸಲ್ಲಿಸಾದನಿತ=ಸಲ್ಲಿಸು+ಆದ+ಅನಿತ, ಒಲ್ಲನವನ್= ಒಲ್ಲನು+ಆವನ್,

ಇಲ್ಲದೆಯುಂ=ಇಲ್ಲದೆಯು, ಸಲ್ಲಿಸಾದನಿತ= ಸಲ್ಲಿಸು ಆದಷ್ಟು, ಪಾಲಿಗನ=ಪಾಲಿಸುವವನು,
ಒಲ್ಲನವನ್=ಒಪ್ಪುವುದಿಲ್ಲ, ಅರೆನಚ್ಚ= ಅರ್ಧಂಬರ್ಧ ನಂಬಿಕೆಯ.

ಜಗತ್ತಿನ ಎಲ್ಲ ಕೆಲಸದ ಹೊರೆಯನ್ನು ಹೊರುವ ಅಧಿಕಾರ ನಿನಗಿಲ್ಲ. ಆದರೆ, ನಿನಗೆ ಹೊರೆಯೇ ಇಲ್ಲವೆಂದಲ್ಲ! ನೀನು ಮಾಡಲೇ ಬೇಕಾದ ಕರ್ತವ್ಯದ ಹೊರೆ ನಿನಗಿದೆ. ನಿನ್ನ ಕೈಲಾದಷ್ಟನ್ನು ನಿಷ್ಠೆಯಿಂದ ಮಾಡು ಮತ್ತು ಮಿಕ್ಕದ್ದನ್ನು ನಿನ್ನನ್ನು ಪಾಲಿಸುವ ಆ ದೈವದಲ್ಲಿ ದೃಢ ನಂಬಿಕೆ ಇಟ್ಟು ಬಿಟ್ಟುಬಿಡು, ನಂಬಿಕೆ ಪೂರ್ಣವಾಗಿರಲಿ. ಏಕೆಂದರೆ, ಅವನು ಅರೆಬರೆ ನಂಬಿಕೆಯನ್ನು ಒಪ್ಪುವುದಿಲ್ಲ.

ಕೆಲವರಿಗೆ ಜಗತ್ತಿನ ಎಲ್ಲಾ ಭಾರವನ್ನೂ ತಾವೇ ಹೊತ್ತಿದ್ದೇವೆ ಎನ್ನುವಂತಹ ಭಾವ. ಇದೊಂದು ಭ್ರಮೆಯ ಸ್ಥಿತಿ. ಇನ್ನೂ ಕೆಲವರಿಗೆ ಆಗುವುದು ಆಗುತ್ತದೆ. ಹೋಗುವುದು ಹೋಗುತ್ತದೆ, ನಾನೇಕೆ ತಲೆ ಕೆಡಿಸಿಕೊಳ್ಳಲಿ ಎನ್ನುವಂತಹ ಕರ್ತವ್ಯಹೀನತೆಯ ಭಾವ. ಎರಡೂ ಸರಿಯಲ್ಲ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು. ಎಲ್ಲರೂ ಎಲ್ಲ ಕೆಲಸವನ್ನೂ

ಮಾಡಲಾಗದು. ಪ್ರತಿಯೊಬ್ಬರೂ ತಮ್ಮ ತಮ್ಮ ಪ್ರತಿಭೆ, ಯೋಗ್ಯತೆ, ಅವಶ್ಯಕತೆ ಮತ್ತು ಸಾಧ್ಯತೆಗಳನ್ನರಿತು ಕಾರ್ಯೋನ್ಮುಖರಾಗಬೇಕು. ಅಸಾಧ್ಯವಾದ ಕೆಲಸಗಳನ್ನು ಮಾಡಲು ಹೋಗಿ, ಕಡೆಗೆ ಯಾವುದನ್ನೂ ಸಮರ್ಪಕವಾಗಿ ಮಾಡಲಾಗದೆ 'ಎಡಬಿಡಂಗಿ' ಸ್ಥಿತಿಗೆ ತಲುಪಬಾರದು. ಸದಾಕಾಲ ಸಚೇತರಾಗಿದ್ದು ಸೂಕ್ತ ಕೆಲಸಗಳನ್ನು ಸೂಕ್ತ ಪ್ರಮಾಣದಲ್ಲಿ ಮಾಡಿದರೆ ನಾವು ಕಾರ್ಯ ಸಫಲರಾಗಬಹುದು.

ಜಗತ್ತಿನ ಎಷ್ಟೋ ಕೆಲಸಗಳಲ್ಲಿ ನಮಗೆ ಒಂದು ಪಾಲಿದೆ. ನಾವು ಎಷ್ಟು ಹೊರಬಹುದೋ ಅದೇ ನಮ್ಮ ಪಾಲು. ನಾವು ಯಾವುದನ್ನು ತಪ್ಪದೆ ಮಾಡಬೇಕೋ ಅದೇ ನಮ್ಮ ಕರ್ತವ್ಯ. ಅದು ನಮ್ಮ ಪಾಲಿಗೆ ಬಂದ ಕರ್ತವ್ಯ ಅದನ್ನು ನಾವು ಮಾಡಲೇಬೇಕು. ನಮ್ಮ ಎಲ್ಲ ಪ್ರತಿಭೆ ಮತ್ತು ಕ್ಷಮತೆಗಳನ್ನು ಪ್ರೋಡೀಕರಿಸಿಕೊಂಡು ಏಕಾಗ್ರತೆಯಿಂದ ನಮ್ಮ ಪಾಲಿಗೆ ಬಂದ ಕರ್ತವ್ಯವನ್ನು ಮಾಡಲೇಬೇಕು. ಅದು ಧರ್ಮ. ಆದರೆ ನಮಗೆ ನಮ್ಮ ಪ್ರತಿಭೆಯೇನು, ಕ್ಷಮತೆಯೇನು ಎಂದು ಸಂಪೂರ್ಣ ಅರಿವಿರುವುದಿಲ್ಲವಾದ್ದರಿಂದ ನಿಷ್ಠೆಯಿಂದ ನಮ್ಮ ಕೆಲಸವನ್ನು ಮಾಡಬೇಕು. ಆ ಕೆಲಸದಲ್ಲಿ ನಾವು ಯಶಸ್ವಿಗಳಾಗುತ್ತೇವೆಯೋ, ಇಲ್ಲವೋ ಎಂಬ ಶಂಕೆ ಮನದಲ್ಲಿ ಇಟ್ಟುಕೊಳ್ಳದೆ ಕೆಲಸ ಮಾಡಬೇಕು. “ಸಲ್ಲಿಸಾದನಿತ, ಮಿಕ್ಕುದು ಪಾಲಿಗನ ಪಾಡು” ಎಂದು ಗುಂಡಪ್ಪನವರು ಹೇಳುವಂತೆ, ಸಾಧ್ಯವಾದಷ್ಟು ಮಾಡಿ ಮಿಕ್ಕದನ್ನು ನಮ್ಮನ್ನು ಪಾಲಿಸುವ ಪರಮಾತ್ಮನಿಗೆ ಬಿಡಬೇಕು.

ಲೌಕಿಕ ಬದುಕಿನಲ್ಲಿ ಇದನ್ನು ಒಪ್ಪುವುದು ಸ್ವಲ್ಪ ಕಷ್ಟವೇ. “ನಾವು ಮಾಡಿದ ಕೆಲಸದಿಂದ ಫಲವನ್ನು ಅಪೇಕ್ಷಿಸಬೇಡ ಎಂದರೆ ಹೇಗೆ? ಹಾಗಾದರೆ ನಾವು ಏತಕ್ಕಾಗಿ ಕೆಲಸಮಾಡಬೇಕು?” ಎನ್ನುವವರೂ ಇದ್ದಾರೆ. ಆದರೆ ಈ ಜಗತ್ತನ್ನು ನಡೆಸುವ ಆ ಪರಮ ಶಕ್ತಿ ತನ್ನದೇ ರೀತಿಯಲ್ಲಿ ನಮ್ಮಿಂದ ಕೆಲಸಗಳನ್ನು ಮಾಡಿಸುತ್ತದೆ ಮತ್ತು ಅದರ ಫಲವನ್ನು ನಮಗೆ ನೀಡುತ್ತದೆ. ಹಾಗಾಗಿಯೇ ನಾವು ನಮ್ಮ ಮಾನುಷಿ

ಭಾವದಿಂದ ಏನನ್ನೋ ಬಯಸಿದರೆ ನಮಗೆ ಬೇರೇನೋ ಸಿಗುತ್ತದೆ. ಆ ಪರಮಾತ್ಮನ ಆಟವನ್ನು ನಂಬಬೇಕು, ಆ ನಂಬಿಕೆಯೂ ಸಂಪೂರ್ಣವಾಗಿರಬೇಕು. ಏಕೆಂದರೆ ಮಾನ್ಯ ಗುಂಡಪ್ಪನವರು "ಒಲ್ಲನವನ್ ಅರೆನಚ್ಚ"ಎಂದು ಹೇಳುವಂತೆ ನಮ್ಮ ಅರ್ದಂಬರ್ಧ ನಂಬಿಕೆಯಿಂದ ನಮಗೆ ತೊಂದರೆಗಳೇ ಹೆಚ್ಚಾಗುತ್ತವೆ. ಅರೆ ನಂಬಿಕೆಯಿಂದ ನಾವು ಮಾನಸಿಕವಾಗಿ ಹೆಚ್ಚು ತೊಲಳಾಡಬೇಕಾಗುತ್ತದೆ. ಒಂದು ಕಚೇರಿಯ ದೃಷ್ಟಾಂತವನ್ನು ತೆಗೆದುಕೊಂಡರೆ, ಎಲ್ಲರಿಗೂ ಒಂದಿಷ್ಟು ಕೆಲಸದ ಹೊರೆ ಇರುತ್ತದೆ. ಅವರವರ ಯೋಗ್ಯತೆಗನುಸಾರ ಕೆಲಸವನ್ನು ಹಂಚಲಾಗಿರುತ್ತದೆ. ಅವರವರು ಅವರವರ ಕೆಲಸವನ್ನು ಮಾಡಿದರೆ ಕಚೇರಿಯ ಕೆಲಸ ಸಮಗ್ರವಾಗಿ ಆಗುತ್ತದೆ. ಅಲ್ಲವೇ? ಹಾಗೆಯೇ ಈ ಜಗತ್ತಿನಲ್ಲಿ ನಮ್ಮ ಪಾಲಿಗೆ ಬಂದ ಕೆಲಸವನ್ನು ನಾವು ಒಮ್ಮನಸ್ಸಿನಿಂದ ಮಾಡಿದರೆ ನಮ್ಮ ಬದುಕು ಸಾರ್ಥಕವಾಗುತ್ತದೆ.

**ಮುಕ್ತಕ – 585**

**ಫಲವೇನು ಹೆಣಗಾಡಿ ಹೋರಾಡಿ ಧರೆಯೊಳಗೆ? |**
**ಸಲಿಸದೊಂದನುಮೊಂದನು ದೈವ ಬಿಡದು ||**
**ಹೊಲಸೆಲ್ಲವೆಲ್ಲಪಾಳ್, ಬಾಳ್ಗೆ ತಳಹದಿಯಿಲ್ಲ |**
**ಗಲಿಬಿಲಿಯಿದೆನಬೇಡ - ಮಂಕುತಿಮ್ಮ ||**

ಸಲಿಸದೊಂದನುಮೊಂದನು=ಸಲಿಸದೆ+ಒಂದನುಂ +ಒಂದನು, ಹೊಲಸೆಲ್ಲವೆಲ್ಲಪಾಳ್=ಹೊಲಸು+ಎಲ್ಲ+ಪಾಳ್, ತಳಹದಿಯಿಲ್ಲ=ತಳಹ್ಡೈ+ಇಲ್ಲ, ಗಲಿಬಿಲಿಯಿದೆನಬೇಡ=ಗಲಿಬಿಲಿ+ಇದು+ಎನಬೇಡ, ಸಲಿಸದೆ=ಸಲ್ಲಿಸದೆ, ಮಾಡದೆ, ತಳಹದಿ=ಅಡಿಪಾಯ, ಗಲಿಬಿಲಿ=ಅಯೋಮಯ ಸ್ಥಿತಿ (Confused state of mind )

ಆ ದೈವ, ತಾನು ನಮ್ಮಿಂದ ಏನನ್ನು ಮಾಡಿಸಬೇಕೆಂದಿದೆಯೋ ಅದನ್ನು ಮಾಡಿಸದೆ ಬಿಡದು. ನಾವು 'ನಾನು ಮಾಡುತ್ತೇನೆ' ಎಂದು ಎಷ್ಟು ಹೋರಾಡಿ, ಹೆಣಗಾಡಿದರೂ ಏನೂ ಪ್ರಯೋಜನವಿಲ್ಲ. ಹಾಗಿರುವಾಗ ನಮ್ಮ ಮತ್ತು ಈ ದೈವ ಅಥವಾ ವಿಧಿಯ ನಡುವಿನ ಹೋರಾಟದಲ್ಲಿ ಸೋತು, ಒಂದು ಅಯೋಮಯ ಸ್ಥಿತಿಯಲ್ಲಿ "ಛೇ! ಈ ಬದುಕಿನಲ್ಲಿ ನಾವಂದುಕೊಂಡದ್ದನ್ನು ಮಾಡಲಾಗುವುದೇ ಇಲ್ಲ, ಈ ಬಾಳಿಗೆ ತಳಹದಿಯಿಲ್ಲ, ಈ ಬಾಳೆಲ್ಲ ಹೊಲಸು" ಎಂದು ಹೇಳಬೇಡ ಎಂದು, ನಮ್ಮ ಬದುಕು ಮತ್ತು ದೈವದ ನಡುವಿನ ಸಮನ್ವಯದ ಅವಶ್ಯಕತೆಯನ್ನು ಸೂಚಿಸಿದ್ದಾರೆ ನಮಗೆ ಈ ಮುಕ್ತಕದಲ್ಲಿ.

ನಮ್ಮ ಶಕ್ತಿ ಮಿತ, ಮತ್ತು ದೈವದ ಶಕ್ತಿ ಅಪರಿಮಿತ. ನಮ್ಮ ಶಕ್ತಿ ಮಿತವಾದರೂ ನಮ್ಮ ಕಲ್ಪನೆಗೆ ಮಿತಿಯೇ ಇಲ್ಲ. ಅಪರಿಮಿತ ಕಲ್ಪನೆಯನ್ನು ಪರಿಮಿತ ಶಕ್ತಿಯಿಂದ ಸಾಧಿಸುವುದಾದರೂ ಹೇಗೆ? ನಮ್ಮ ಮಿತ ಶಕ್ತಿಯ ಮತ್ತು ಸಾಮರ್ಥ್ಯದನುಗುಣವಾಗಿ ಆಸೆಪಟ್ಟು, ಅಂತಹ ಆಸೆಗಳನ್ನು ಪೂರೈಸಿಕೊಳ್ಳಲು ನಮ್ಮ ಪ್ರಯತ್ನ





ನಡೆದರೆ ಅದನ್ನು ಸೂಕ್ತ ಪ್ರಯತ್ನವೆನ್ನಬಹುದು. ಅಂತಹ ಪ್ರಯತ್ನವನ್ನು ಮಾಡಬೇಕಾದರೆ ನಮಗೆ ನಮ್ಮ ಪ್ರತಿಭೆಯ ಮತ್ತು ಸಾಮರ್ಥ್ಯದ ಅರಿವಿರಬೇಕು. ಅಂತಹ ಪ್ರಯತ್ನವನ್ನು ಮಾಡಲಾಗದೆ ಸರಿಯಾದ ಫಲ ಸಿಗುವ ಸಾಧ್ಯತೆಗಳಿರುವುದಿಲ್ಲ.

ಆ ವಿಧಿ ನಮಗೆ ವಿಧಿಸಿದ ವಿನ್ಯಾಸದ ಪ್ರಕಾರವೇ ನಮ್ಮ ಕರ್ಮವು ಆಗಬೇಕು. "ನಾವು ಮಾಡುತ್ತೇವೆ" ಎಂದು ನಾವಂದುಕೊಳ್ಳುವುದು ಪ್ರಾಕೃತ ಅಥವಾ ಮಾನುಷೀ ಭಾವ. ದೈವ ನಮ್ಮಿಂದ ಏನೇನೆಲ್ಲಾ ಮಾಡಿಸ ಬೇಕೋ, ಅದನ್ನು ಮಾಡಿಸಿಯೇ ತೀರುತ್ತದೆ. ಇದಕ್ಕೆ ವಿನಾಯತಿಯೇ ಇಲ್ಲ. ಒಂದು ಕಡೆ ನಮ್ಮ ಮಿತವಾದ ಶಕ್ತಿಯಿಂದ ಪ್ರಚೋದಿತವಾದ ನಮ್ಮ ಇಚ್ಛೆ, ಮತ್ತೊಂದು ಕಡೆ ನಮ್ಮನ್ನು ನಿಯಂತ್ರಿಸುವ ಅಪರಿಮಿತವಾದ ಪರಮ ಚೇತನದ ದೈವೀ ವಿನ್ಯಾಸ, ಇವೆರಡರ ನಡುವೆ ನಮ್ಮ ಹೋರಾಟ. ನಮ್ಮ ಇಚ್ಛೆಗಳನ್ನು ಬದಿಗಿಟ್ಟು ಆ "ಸತ್'ಗೆ ಶರಣಾದರೆ, ಬಂದದ್ದನ್ನೆಲ್ಲಾ ಅನುಭವಿಸುವ ಶಕ್ತಿ ಮತ್ತು ಮನೋಭಾವ ನಮಗೆ ಉಂಟಾಗಿ, ಬದುಕು ನಿರಾಳವಾಗಬಹುದು, ಅಲ್ಲವೇ? ಯಾವುದು ಅನಿವಾರ್ಯವೋ ಅದನ್ನು ಅನುಭವಿಸಿಯೇ ತೀರಿಸಬೇಕು ಹೋರಾಡಿ ಪ್ರಯೋಜನವಿಲ್ಲ. ಹಾಗಲ್ಲದೆ ನಾನು ಹೋರಾಡುತ್ತೇನೆ ಎಂದರೆ ಮಾನಸಿಕ ಗೊಂದಲ, ಬದುಕಿನಲ್ಲಿ ಗಲಿಬಿಲಿ ಬಿಟ್ಟರೆ ಬೇರೇನೂ ಸಾಧಿಸಿದಂತಾಗುವುದಿಲ್ಲ. ಹಾಗಾಗಿ ನಮ್ಮ ಹೋರಾಟ ನಿರಂತರ, ಯಾವುದು ಅನಿವಾರ್ಯವೋ ಅದರ ವಿರುದ್ಧ ಹೋರಾಡುವುದು ಮೂರ್ಖತನ. (What cannot be cured has to be endured).

ನಮಗೆ ಸಂದ ಕೆಲಸವನ್ನು ಮಾಡುವುದು, ಫಲಾಫಲಗಳನ್ನು ಆ ದೈವದ ವಿನ್ಯಾಸಕ್ಕೆ ಬಿಟ್ಟುಬಿಡುವುದೇ ಪ್ರಾಜ್ಞರು ಮಾಡುವ ಕೆಲಸ, ರಕ್ತಿಯಿಂದ 'ನಾನು' ಎನ್ನುವುದನ್ನು ಬಿಟ್ಟು ವಿರಕ್ತಿಯಿಂದ ಇರುವುದೇ, ಎಂದರೆ ಮಾಡುವ ಕೆಲಸವನ್ನು ಮಾಡುತ್ತಾ, ಅದಕ್ಕೆ ಅಂತರಂಗದಿಂದ ಅಂಟಿಕೊಳ್ಳದೆ ಇದ್ದರೆ ಶಾಂತಿಯಿಂದಿರಬಹುದು.

**ಮುಕ್ತಕ – 586**

**ಕೆಂಡ ಮುಸುಡಿಯ ದೈವವೆಲ್ಲವನು ದಹಿಸುತಿರೆ |**
**ದಂಡಧರನತ್ತಲೆಲ್ಲವನು ಕೆಡಹುತಿರೆ ||**
**ಮೊಂಡುಘಾಸಿಯ ಲಾಭ ಪಿಂಡಮಾತ್ರವು ತಾನೆ? |**
**ಭಂಡಬಾಳಲೆ ನಮದು? – ಮಂಕುತಿಮ್ಮ ||**

ದೈವವೆಲ್ಲವನು=ದೈವವು+ಎಲ್ಲವನು, ದಹಿಸುತಿರೆ=ದಹಿಸುತ+ಇರೆ,
ದಂಡಧರನತ್ತಲೆಲ್ಲವನು+ದಂಡಧರನು+ಅತ್ತ+ಎಲ್ಲವನು,
ಕೆಡಹುತಿರೆ=ಕೆಡುಹುತ+ಇರೆ, ಭಂಡಬಾಳಲೆ+ಬಂಡಬಾಳು+ಎಲೆ,
ಕೆಂಡ ಮುಸುಡಿಯ ದೈವ =ಅಗ್ನಿ, ಕೆಡಹು=ಉರುಳಿಸು, ಎಲೆ=ಲೋ (ಎನ್ನುವಂತಹ ಸಂಭೋದನೆ)

ಜಗತ್ತಿನ ಪ್ರತಿ ಜೀವಿಯನ್ನೂ ಆ ಯಮನು ಕೆಡವಿ ಬೀಳಿಸುತ್ತಿರುವಾಗ ಮತ್ತು ಹಾಗೆ ಬಿದ್ದ ಪ್ರತಿಯೊಂದನ್ನೂ

ಅಗ್ನಿದೇವನು ದಹಿಸಿ ಬೂದಿ ಮಾಡುತ್ತಿರುವಾಗ, ಜಗತ್ತಿನಲ್ಲಿ ಬದುಕುವಾಗ ಮೊಂಡುತನಮಾಡಿ, ಪೆಟ್ಟು ತಿಂದು ಕೇವಲ ತುತ್ತು ಹಿಟ್ಟಿಗಾಗಿ ಹೋರಾಡುವ ನಮ್ಮದು ಕೇವಲ ಬಂಡ ಬಾಳು ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಹಿಂದೋ, ಮುಂದೋ, ಹುಟ್ಟಿದ ಪ್ರತಿ ಜೀವಿಗೂ ಒಂದು ಅಂತ್ಯವಿರುತ್ತದೆ. "ಅಂತಕ" ನ ಕರೆ ಬಂದಾಗ ಹೊರಡಬೇಕು. ಯಾವುದಾದರೂ ಊರಿಗೆ ಪ್ರಯಾಣ ಮಾಡಿದರೆ, ಪ್ರಯಾಣದಲ್ಲಿ ಬೇಕಾದ ಸಕಲವನ್ನು ಗಂಟು ಮೂಟೆ ಕಟ್ಟಿಕೊಂಡು ಹೊರಡಬೇಕು. ಆದರೆ ನಮ್ಮ ಅಂತಿಮ ಯಾತ್ರೆಗೆ ಏನನ್ನೂ ಹೊತ್ತುಕೊಂಡು ಹೋಗುವಂತಿಲ್ಲ. ಎಲ್ಲವನ್ನೂ ಇಲ್ಲೇ ಬಿಟ್ಟು ಹೋಗಬೇಕು. ದೇಹದ ಅಂತ್ಯ ಸುಟ್ಟೋ, ಹೂತೋ ಆಗಲೇ ಬೇಕು. ನಾವು ಗಳಿಸಿದ ಯಾವುದನ್ನೂ ಕಡೆಗೆ, ಕಿಲುಬು ಕಾಸನ್ನೂ ಹೊತ್ತುಕೊಂಡು ಹೋಗುವ ಹಾಗಿಲ್ಲ. ಹೀಗೆ ಅಂತ್ಯವಾಗುವ ಬಾಳಲ್ಲಿ, ಎಂದರೆ ಹುಟ್ಟು-ಸಾವುಗಳ ನಡುವೆ ನಾವು ಆಡುವ ನಾಟಕ, ಇದನ್ನೇ ಗುಂಡಪ್ಪನವರು 'ಬಂಡಬಾಳಲೆನಮದು' ನಮದು ಎಂದಿದ್ದಾರೆ.

ನಮ್ಮದು ಈ ಜಗತ್ತಿನೊಂದಿಗೆ ಬಿಡಿಸಲಾಗದ ನಂಟು. ಭಾವ ಎಂಬ ಗಟ್ಟಿ ಅಂಟಿಂದ ಬೆಸೆದ ನಂಟು. ಈ ನಂಟಿನ ಕಾರಣ ಹುಟ್ಟಿದಾರಭ್ಯ ಯಾವುದಕ್ಕಾದರೂ ಒಂದಕ್ಕೆ ಹೋರಾಡುತ್ತೇವೆ. ಈ ಹೋರಾಟದಲ್ಲಿ ನಾವು ಧರಿಸುವ ಭಾವಗಳ ಕೊನೆ ಮೊದಲಿಲ್ಲ. ಕೋಪ ತಾಪಗಳು, ರಾಗ ದ್ವೇಷಗಳು, ಅಸೂಯೆ ಹೊಟ್ಟೆಯುರಿಗಳು, ಮೋಸಗಳು, ಪ್ರೀತಿ ವಿಶ್ವಾಸಗಳು, ಪ್ರೇಮ ಅನುರಾಗಗಳಂತಹ ಭಾವಗಳಿಂದ ಮನಸ್ಸಿಗೆ ಸಂತೋಷವೋ ದುಃಖವೋ ಆಗುತ್ತದೆ. ಇದರಿಂದ ಮನಸ್ಸಿಗೇನೂ ನೆಮ್ಮದಿಯಿರುವುದಿಲ್ಲ. ಆದರೂ ನಾವು ಏನನ್ನೋ ಸಾಧಿಸಿದೆವೆಂಬ ಬೀಗು ಬೀಗುತ್ತೇವೆ. ಸತ್ಯದರಿವಾದರೂ, ಅದನ್ನು ಒಪ್ಪಿಕೊಳ್ಳದೆ, ಬಂಡ ಬಾಳು ಬಾಳುತ್ತೇವೆ. ನಾವು ಎಂದಾದರೂ ಒಂದು ದಿನ ಕಾಲನ ಕಬಳಿಕೆಗೆ ತುತ್ತಾಗುತ್ತೇವೆ ಎಂಬ ಕಟು ಸತ್ಯವನ್ನು ಅರಿತೂ ಸಹ ಬದುಕಿನಲ್ಲಿ ಕಳ್ಳಾಟವಾಡುತ್ತೇವೆ. "ಮೊಂಡುಘಾಸಿಯ ಲಾಭ ಪಿಂಡಮಾತ್ರವು ತಾನೇ?" ಎಂದು ಹೇಳುತ್ತಾ ನಾವಾಡುವ ಬಂಡತನದ ನಾಟಕವೆಲ್ಲಾ ಕೇವಲ ಹೊಟ್ಟೆಪಾಡಿಗೆ ಅಲ್ಲದೆ ಮತ್ತೇನು ಎಂದು ಪ್ರಶ್ನಿಸುತ್ತಾರೆ ಮಾನ್ಯ ಗುಂಡಪ್ಪನವರು.

ಹಾಗಾದರೆ ಬದುಕಬಾರದೆ? ಎಂದರೆ, ಖಂಡಿತ ಬದುಕಬೇಕು. ಭಂಡತನ ಬಿಟ್ಟು ಬದುಕಬೇಕು, ಅಂಟದೆ ಬದುಕಬೇಕು ಇದ್ದೂ ಇಲ್ಲದಂತಿರಬೇಕು. ಕರ್ಮವನ್ನು ನಿಷ್ಠೆಯಿಂದ ಮಾಡಬೇಕು. ಫಲಾಪೇಕ್ಷೆಯಿಲ್ಲದೆ ಮಾಡಬೇಕು.

ಇದೆಲ್ಲ ಹೇಳುವುದಕ್ಕೆ ಮತ್ತು ಕೇಳುವುದಕ್ಕೆ ಬಹಳ ಸುಲಭ. ನಿಜ ಜೀವನದಲ್ಲಿ ಪಾಲಿಸುವುದು ಕಷ್ಟ, ಆದರೆ ಅಸಾಧ್ಯವಲ್ಲ. ನಾವು ಮಾಡುವ ಕೆಲಸವನ್ನು ಕರ್ತವ್ಯ ಎಂದು ಭಾವಿಸಿ ನಮ್ಮ ಪಾಲಿಗೆ ಬಂದ ಕೆಲಸವನ್ನು ನಿರ್ವಂಚನೆಯಿಂದ ಮಾಡಿ, ನಮ್ಮನ್ನು ಕಾಯುವ (ಪಾಲಿಗನು) ಆ ಪರಮಾತ್ಮನಲ್ಲಿ ಸಂಪೂರ್ಣ ನಂಬಿಕೆಯನ್ನಿಟ್ಟು, ಸಂದ ಕರ್ಮಫಲವನ್ನು ಅವನ ಪ್ರಸಾದವೆಂದು ಸ್ವೀಕರಿಸಿದರೆ, ನಮ್ಮ ಜೀವನ ಶಾಂತವಾಗಿ ಸುಖದಿಂದ ಇರಬಹುದು. ಅಂತಹ ಸ್ಥಿತಿಗೆ ತಲುಪಲು ದೃಢವಾದ ಇಚ್ಛೆ, ಸಾಧನೆ ಮತ್ತು ಪ್ರಯತ್ನಬೇಕು.





**ಮುಕ್ತಕ – 587**

**ಅಹುದು ಬಾಳ್ ಭಂಡತನವಿಹದಿ ಬಾಳ್ ಮುಗಿಯುವೊಡೆ ।**
**ಕಹಿಯೊಗರು ಕಾಯಿ, ಮಿಡಿತನದೊಳದು ಮುಗಿಯೆ ॥**
**ಸಿಹಿಯಹುದು ಕಾಯಿ ಹಣ್ಣಾಗೆ, ಜೀವಿತವಂತು ।**
**ಮಹಿಮೆಗೊಳುವುದು ಮಾಗೆ – ಮಂಕುತಿಮ್ಮ ॥**

ಭಂಡತನವಿಹದಿ=ಬಂಡತನವು+ಇಹದಿ, ಮಿಡಿತನದೊಳದು=ಮಿಡಿತನದೊಳ್ +ಅದು,
ಸಿಹಿಯಹುದು =ಸಿಹಿ+ಅಹುದು, ಹಣ್ಣಾಗೆ=ಹಣ್ಣು+ಆಗೆ, ಜೀವಿತವಂತು=ಜೀವಿತವು+ಅಂತು
ಇಹದಿ=ಇಲ್ಲಿನ ಜೀವನದಲ್ಲಿ, ಮಿಡಿತನ+ಮಾಗದ ಸ್ಥಿತಿ, ಅಹುದು=ಆಗುತ್ತದೆ, ಅಂತು=ಹಾಗೆಯೇ

ಒಂದು ಮರದಲ್ಲಿ ಬಿಟ್ಟ ಕಾಯಿ ಮಾಗದೆ, ಹಣ್ಣೆ ಆಗದೆ ಉದುರಿಹೋದರೆ ಅದು ಮಧ್ಯಂತರವಾಗಿ ಮುಗಿದುಹೋದ ಬಾಳಾಗುತ್ತದೆ. ಪರಿಪೂರ್ಣ ಸಾರ್ಥಕ ಬದುಕಿಗೆ ಅದು ಮಾಗಿ ಹಣ್ಣಾದರೆ, ಅದರೊಳಗೆ ಸವಿ ಸೇರಿ, ಸಿಹಿಯಾಗುತ್ತದೆ. ನಮ್ಮ ಜೀವಿತವೂ ಸಹ ಹಾಗೆಯೇ, ಬಂಡತನದ ಬಾಳಲ್ಲೇ ಅಂತ್ಯವಾಗದೆ, ಅನುಭವಿಸಿ, ಕಲಿತು,

ಪಕ್ವವಾಗಬೇಕು ಎಂದು, ಬಾಳಿನ ಸಾರ್ಥಕ್ಯಕ್ಕೊಂದು ಮಾರ್ಗವನ್ನು ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮಗೆ ಬದುಕಿನಲ್ಲಿ ಯಾವುದೂ ಅಥವಾ ಯಾರೂ ಸರಿಯಾಗಿರುವುದೇ ಇಲ್ಲ. ಪ್ರತಿಯೊಂದರಲ್ಲೂ ಏನಾದರೂ ಒಂದು ಕೊರತೆ ಕಾಣುತ್ತಲೇ ಇರುತ್ತದೆ. ಇದಕ್ಕೆ ಕಾರಣ ನಾವು ನೋಡುವ ನೋಟದಲ್ಲಿನ ದೋಷ, ಹಾಗಾಗಿ ನಮಗೆ ಎಲ್ಲವೂ ದೋಷಪೂರಿತಾಗಿ ತೋರುತ್ತದೆ. ಅಂದರೆ ನಾವು ನೋಡುವ ಪರಿ ಬದಲಾದರೆ ನಮಗೆ ಎಲ್ಲವೂ ಸರಿಯಾಗುತ್ತದೆ. ಅಂತಹ ಬದಲಾವಣೆ ನಮ್ಮಲ್ಲಿ ಬರಬೇಕಾದರೆ ನಾವು ಮೊದಲು ಬದಲಾಗಬೇಕು, ಪಕ್ವವಾಗಬೇಕು.

ಒಂದು ಮಾವಿನ 'ಕಾಯಿ'ನ್ನು ಕಿತ್ತು, ಕಡಿದು, "ಅಯ್ಯೋ ಇದು ಒಗಚು, ಇದು ಕಹಿ" ಎಂದರೆ ಹೇಗೆ ? ಅದನ್ನು ಮಾಗಲು ಬಿಟ್ಟರೆ ಅದೂ ಸಹ ಮಾಗಿ ಹಣ್ಣಾಗಿ ತನ್ನ ಬಣ್ಣ ಬದಲಾಯಿಸಿಕೊಂಡು, ಸಿಹಿಯನ್ನು ತುಂಬಿಕೊಂಡು ಸವಿಯಲು ಸೊಗಸಾಗಿರುತ್ತದೆ. ಹಾಗೆಯೇ ನಮ್ಮ ಬಾಳೂ ಸಹ. ನಾವು ಅನುಭವಗಳಿಂದ ಪಾಠ ಕಲಿತು, ಹಂತ ಹಂತವಾಗಿ ಬೆಳೆಯಬೇಕು, ಜಗತ್ತನ್ನು ಮುಕ್ತ ಮನಸ್ಸಿನಿಂದ ಅವಲೋಕಿಸಿ, ನಮ್ಮ ಮತ್ತು ಅನ್ಯರ ಅನುಭವಗಳನ್ನೂ ನೋಡುತ್ತಾ ಕಲಿಯಬೇಕು. ನಾವು ಕಲಿತು ಬೆಳೆದಾಗ ಅನ್ಯರಲ್ಲಿನ ದೋಷಗಳು ನಮಗೆ ಗುಣಗಳಾಗಿ ಕಾಣುತ್ತವೆ. ಇದು ನಮ್ಮಲ್ಲಿ ಬರುವ ಪಕ್ವತೆ. ಅಂತಹ ಪಕ್ವತೆಯಿಂದ ನಮ್ಮ ಬಾಳು ಸವಿಯಾಗುತ್ತದೆ, ಸಿಹಿಯಾಗುತ್ತದೆ.

ಸತ್ಯ ಮತ್ತು ಸತ್ವವನ್ನರಿತು, ಸುಖ ದುಃಖಗಳ ರೇಖೆಗಳನ್ನು ದಾಟಿ, ನಿಜ ಸುಖದ ಸವಿಯನ್ನು ಬಾಳಲ್ಲಿ ತಂದುಕೊಳ್ಳುವುದೇ ಪಕ್ವತೆ. ಹೇಗೆ ಒಂದು ಕಾಯಿ ಮಾಗಿದಂತೆ ತನ್ನ ಒಗಚನ್ನು, ಕಹಿಯನ್ನು ತೊರೆದು

ಸಿಹಿಯಾಗುತ್ತದೆಯೋ, ಹಾಗೆಯೇ ನಮ್ಮಲ್ಲಿರುವ ಅಹಂಕಾರ ಮತ್ತು ಸ್ವಾರ್ಥವೆಂಬ ಕಹಿ, ಒಗಚುಗಳನ್ನು ತೊರೆದರೆ, ನಾವೂ ಸಹ ಸತ್ಯ ಮತ್ತು ಸತ್ವವನ್ನು ಅರಿತು ಪಕ್ವವಾಗಿ ಸಿಹಿಯಾಗಬಹುದು ಮತ್ತು ನಾವು ನಮ್ಮಲ್ಲಿ ತಂದುಕೊಂಡ ಸವಿಯನ್ನು ಜಗತ್ತಿಗೆ ಹಂಚಬಹುದು. ಹಾಗಾದರೆ ನಮ್ಮ ಜೀವನವೂ ಸಾರ್ಥಕವಾಗುತ್ತದೆ.

**ಮುಕ್ತಕ – 588**

**ಜಟ್ಟಿ ಕಾಳಗದಿ ಗೆಲ್ಲದೊಡೆ ಗರಡಿಯ ಸಾಮು |**
**ಪಟ್ಟುವರಸೆಗಳೆಲ್ಲ ವಿಫಲವೆನ್ನುವೆಯೇಂ? ||**
**ಮುಟ್ಟಿ ನೋಡವನ ಮೈಕಟ್ಟು ಕಬ್ಬಿಣ ಗಟ್ಟಿ |**
**ಗಟ್ಟಿತನ ಗರಡಿ ಫಲ ಮಂಕುತಿಮ್ಮ ||**

ಜಟ್ಟಿ = ಮಲ್ಲ, ಪೈಲ್ವಾನ್, ಸಾಮು + ತರಬೇತಿ, ವ್ಯಾಯಾಮ, ಪಟ್ಟು=ಕಾಳಗದ ಚತುರತೆ,

ಜಟ್ಟಿಯಾದವನು ಮಲ್ಲ ಯುದ್ಧದಲ್ಲಿ ಸೋತರೆ, ಅವನು ಮಲ್ಲನಾಗುವತನಕ ಮಾಡಿದ ಸಾಮು ಮತ್ತು ಅಭ್ಯಾಸಗಳು ಮತ್ತು ಕಲಿತ ಪಟ್ಟು ವರಸೆಗಳೆಲ್ಲಾ ವ್ಯರ್ಥವೆನ್ನುತ್ತೀಯೇನು? ಅವನು ಸೋತಿದ್ದರೂ ಅವನನ್ನು ಒಮ್ಮೆ ಮುಟ್ಟಿ ನೋಡು, ಅವನ ಮೈ ಕಬ್ಬಿಣದಂತೆ ಗಟ್ಟಿಯಾಗಿರುತ್ತದೆ. ಅವನಿಗೆ ಆ ಗಟ್ಟಿತನ ಬಂದದ್ದು ಆ ಗರಡಿಯ ಸಾಮು ಮತ್ತು ವ್ಯಾಯಾಮದಿಂದ ಅಲ್ಲವೇ? ಹಾಗಾಗಿ ಸೋಲು, ಗೆಲುವಲ್ಲ, ಗಟ್ಟಿತನವೇ ಗರಡಿಯ ಸಾಮಿನ ಮತ್ತು ಅಭ್ಯಾಸದ ಫಲ ಎಂದು, ಒಂದು ಉಪಮೆಯ ಮೂಲಕ ನಾವು ಬದುಕಿನಲ್ಲಿ ಸೋಲಬಹುದು ಅಥವಾ ಗೆಲ್ಲಬಹುದು, ಆದರೆ ನಾವು ಪಕ್ವವಾಗುವುದೇ ನಮ್ಮ ಜೀವನದ ಫಲ ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಬದುಕೇ ಒಂದು ಮಲ್ಲಯುದ್ಧದಂತೆ. ನಾವೆಲ್ಲಾ ಜಟ್ಟಿಗಳು. ನಾವು ಕಲಿತ ವರಸೆ ಪಟ್ಟುಗಳ ವಿದ್ಯೆಯನ್ನೆಲ್ಲಾ ಅನೇಕ ರೀತಿಯಲ್ಲಿ ಉಪಯೋಗಿಸಿ ಹೋರಾಡಬೇಕು. ಕೆಲವರಿಗೆ ಶಕ್ತಿ ಹೆಚ್ಚು, ಕೆಲವರಿಗೆ ಕಡಿಮೆ. ಕೆಲವರಿಗೆ ತಾಳ್ಮೆ ಹೆಚ್ಚು, ಕೆಲವರಿಗೆ ಅತಿ ಆತುರ. ಕೆಲವರಿಗೆ ಅತಿ ಉತ್ಸುಕತೆ, ಮತ್ತೆ ಕೆಲವರಿಗೆ ನಿರುತ್ಸಾಹ. ಇಂತಹ ಮಿಶ್ರ ಭಾವಗಳಿಂದ ಜಗತ್ತಿನ ಎಲ್ಲ ಪ್ರಾಣಿಗಳೂ ಸಹ 'ಜಟ್ಟಿ' ಗಳ ರೀತಿ ಹೋರಾಡುತ್ತಲೇ ಇರುತ್ತವೆ. ಹೋರಾಡಲೇ ಬೇಕು, ಬೇರೆ ದಾರಿಯೇ ಇಲ್ಲ. ಆದರೆ ಹೋರಾಡುವಾಗ ಸಂತೋಷದಿಂದ ಹೋರಾಡುವುದು ಹೇಗೆ ಎಂದು ಕಲಿಯುವುದೇ

ಬದುಕಿನ ಸಾಮು, ಈ ಜಗತ್ತೆಂಬ ಗರಡಿಯಲ್ಲಿ ನಾವು ಸೋತರೂ ಜಟ್ಟಿಯಂತೆ ಗಟ್ಟಿಯಾಗಿರುವುದು ಹೇಗೆ ಎಂದು ಕಲಿಯಬೇಕು. ಏಕೆಂದರೆ, ಗಟ್ಟಿತನವನ್ನು ರೂಢಿಸಿಕೊಳ್ಳುವುದೇ ಬದುಕೆಂಬ 'ಗರಡಿ' ಯಲ್ಲಿನ ಸಾಮಿನ ಫಲ.

ಬದುಕಿನಲ್ಲಿ ಸೋಲು-ಗೆಲುವುಗಳು ಕೇವಲ ಜಗತ್ತಿಗೆ ತೋರಲು ಅಷ್ಟೇ, ಅಂತರಂಗದಲ್ಲಿ ಸೋಲೂ ಇಲ್ಲ, ಗೆಲುವೂ ಇಲ್ಲ. ಸೋಲು-ಗೆಲುವಿನ ಭಾವದಿಂದ ಮೇಲೆದ್ದು, ಗಟ್ಟಿಯಾಗಿ ಜಟ್ಟಿಯಂತೆ ನಿಲ್ಲುವುದೇ

(170)

| ಕಗ್ಗರಸಧಾರೆ | ಪುರುಷತನವೇ ವಿಜಯ 589 – 593 |
|---|---|

ಬದುಕಿನಲ್ಲಿನ ಸಾರ್ಥಕತೆ, ಬದುಕಿನ ಹೋರಾಟದಲ್ಲಿ ನಾವು ಎಷ್ಟೋ ಪೆಟ್ಟು ತಿನ್ನುತ್ತೇವೆ, ಮತ್ತೊಬ್ಬರನ್ನು ಸೋಲಿಸಿದೆ ಎಂದು ಬೀಗುತ್ತೇವೆ, ಬೀಳುತ್ತೇವೆ ಮತ್ತೆ ಏಳುತ್ತೇವೆ. ಹೀಗೆ ಬಿದ್ದು ಏಳುವಾಗ, ಗೆದ್ದು ಸೋಲುವಾಗ, ನಕ್ಕು ಕಣ್ಣೀರಿಡುವಾಗ, ಬದುಕಿನ ಎಲ್ಲ ಬವಣೆಯನ್ನೂ ಅನುಭವಿಸಿದಾದಮೇಲೆ ಅರಿವು ಮೂಡಬೇಕು. ಈ ಎಲ್ಲ ಹೋರಾಟದ ನಿರುಪಯೋಗದ ಅರಿವು ಮೂಡಬೇಕು. ಕಷ್ಟ ಸುಖಗಳಿಂದ ವಿಚಲಿತನಾಗದೆ ದೃಢವಾಗಿ ನಿಲ್ಲುವಂಥಾ ಅರಿವು ಮೂಡಬೇಕು. ಆ ಅರಿವೇ ಬದುಕಿನ ಗರಡಿಯ ಸಾಮಿನಫಲ.

ಸೋಲು ಗೆಲುವುಗಳ, ಕಷ್ಟ ಸುಖಗಳ, ನೋವು ನಲಿವುಗಳ, ಪ್ರೀತಿ ಪ್ರೇಮಗಳ, ರಾಗ ದ್ವೇಷಗಳ ಭಾವನೆಗಳಿಂದ ವಿಚಲಿತರಾಗದೆ ಗಟ್ಟಿಯಾಗಿ ನಿಲ್ಲುವುದೇ ಬದುಕಿನ ಸಾರ್ಥಕ್ಯದ ಸಂಕೇತ. ಅಂತಹ ಸಾರ್ಥಕತೆಯನ್ನು ನಾವು ಪಡೆಯಬೇಕಾದರೆ, ಒಳಗಿನಿಂದ ಪಕ್ವವಾಗಬೇಕು. ಆ ಪಕ್ವತೆ ನಮ್ಮನ್ನು ಮಲ್ಲ ಯುದ್ಧದ 'ಜಟ್ಟಿ' ಯಂತೆ ಗಟ್ಟಿಯಾಗಿಸುತ್ತದೆ. ಅಂತಹ ಗಟ್ಟಿತನವನ್ನು ನಾವು ಪಡೆದುಕೊಳ್ಳುವ ಪ್ರಯತ್ನವನ್ನು
ಮಾಡಬೇಕು.

**ಮುಕ್ತಕ - 589** **ಪರಿಪರಿ ಪರೀಕ್ಷೆಗಳು, ಪರಿಭವದ ಶಿಕ್ಷೆಗಳು |**
**ಗರಡಿಯ ವ್ಯಾಯಾಮ ಮನ ಬುದ್ಧಿಗಳಿಗೆ ||**
**ಪುರುಷತೆಗೆ ಪೆಟ್ಟುಗಳಿನಾದ ಗಂತಿಯೇ ವಿಜಯ |**
**ಬಿರಿದ ನನೆ ಫಲಕೆ ಮನೆ – ಮಂಕುತಿಮ್ಮ ||**

ಪೆಟ್ಟುಗಳಿನಾದ = ಪೆಟ್ಟುಗಳಿನ್+ಆದ, ಗಂತಿಯೆ= ಗತಿಯೇ.

ಗರಡಿಯ ಮನೆಯಲ್ಲಿ ಜಟ್ಟಿಗೆ ವ್ಯಾಯಾಮವಾದಂತೆ, ನಮಗೆ ಬದುಕಿನಲ್ಲಿ ಪರಿ ಪರಿಯಾದ ಪರೀಕ್ಷೆಗಳು. ಅ ಪರೀಕ್ಷೆಗಳಿಂದಾಗುವ ಸೋಲು. ಸೋಲಿನಿಂದಾಗಿ ಅನುಭವಿಸಬೇಕಾದ ವ್ಯಾಕುಲತೆಯ ಶಿಕ್ಷೆ, ಇವುಗಳೆಲ್ಲ ನಮ್ಮ ಮನಸ್ಸು ಬುದ್ಧಿಗಳಿಗೆ ಆಗುವ ವ್ಯಾಯಾಮದಂತೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು, ಗಿಡದಲ್ಲಿನ ಒಂದು ಹೂ ಅರಳಿನಿಂತರೆ ಅದು ಮುಂಬರುವ ಹಣ್ಣಿಗೆ ನಾಂದಿಯಾದಂತೆ, ಬದುಕಿನಲ್ಲಿ ನಮಗೆ ಸಿಗುವ ಈ ಪೆಟ್ಟುಗಳಿಂದಲೇ ಮನಸ್ಸು ಬುದ್ಧಿಗಳು ಪಕ್ವವಾಗಿ, ಬಾಳಿನಲ್ಲಿ ನಮಗೆ ಜಯ ಸಿಗುತ್ತದೆ ಎಂದು, ನಮ್ಮ ಅನುಭವಗಳಿಂದ ಸಿಗುವ ಫಲದ ವಿಶ್ಲೇಷಣೆ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮ ಪೂರ್ವ ಕರ್ಮಗಳಿಗನುಸಾರ, ವಿಧಿ ನಮ್ಮನ್ನು ಪರಿಪರಿಯ ಪರೀಕ್ಷೆಗಳಿಗೆ ಒಡ್ಡುತ್ತದೆ. ಪೆಟ್ಟು ನೀಡುತ್ತಲೇ ಪಾಠ ಕಲಿಸುತ್ತದೆ. ನಾವು ಪಕ್ವವಾಗುವುದಕ್ಕೆ ಪೂರಕವಾದ ಪರಿಪರಿಯ ಅನುಭವಗಳನ್ನು ನೀಡುತ್ತದೆ. ಅದನ್ನು ಹಾಗೆಯೇ ಸ್ವೀಕರಿಸಬೇಕು. ಜೀವನದಲ್ಲಿ ಒದಗುವ ಕಷ್ಟಗಳಿಗೆ ವಿನಾಕಾರಣ

ಕಾರಣಗಳನ್ನು ಹುಡುಕುತ್ತಾ, ನಮ್ಮ ಕಷ್ಟ ಕಾರ್ಪಣ್ಯಗಳಿಗೆ ಅನ್ಯರನ್ನು ದೂಷಿಸುವುದು ಸಾಮಾನ್ಯವಾಗಿ ನಮಗೆ ಕಾಣಸಿಗುತ್ತದೆ. ಕಾರಣವೇನೆಂದರೆ, ನಮಗೆ ಸತ್ಯದ ಅರಿವು ಆಗಿರುವುದಿಲ್ಲ.

ಬದುಕಿನ ಹೋರಾಟದಲ್ಲಿ, ಮಲ್ಲ ಶಾಲೆಯ ಜಟ್ಟಿ ವ್ಯಾಯಾಮದಿಂದ ಗಟ್ಟಿಯಾದಂತೆ, ಮನಸ್ಸು ಬುದ್ಧಿಗಳಿಗೆ ಅನುಭವಗಳು ನೀಡುವ ಕಸರತ್ತಿನಿಂದ ಗಟ್ಟಿಯಾಗಬೇಕು. ಹೇಗೆ ಒಂದು ಗಿಡದಲ್ಲಿ ಸ್ವಶಕ್ತಿಯಿಂದಲೇ ಚೇತನ ಚಿಗುರೊಡೆದು, ಮೊಗ್ಗಾಗಿ, ಅರಳಿ ಹೂವಾದರೆ ಮಾತ್ರ ಮುಂಬರುವ ಕಾಯಿಗೆ, ತನ್ಮೂಲಕ ಹಣ್ಣಿಗೆ ದಾರಿಯಾಗುತ್ತದೆಯೋ, ಹಾಗೆಯೇ ನಾವೂ ಸಹ ಜೀವನದ ತೋಟದಲ್ಲಿ ಹೂತು, ಕಾತು, ಪಕ್ವವಾಗಿ, ಹಣ್ಣಾಗಿ ಬದುಕಿನ ಸವಿಯನ್ನು ನಮ್ಮೊಳಗೆ ತುಂಬಿಕೊಳ್ಳಬೇಕು. ಹಾಗೆ ನಮ್ಮಲ್ಲಿ ಸವಿ ತುಂಬ ಬೇಕಾದರೆ, ಪಕ್ವತೆ ಬರಬೇಕು, ಅಂತಹ ಪಕ್ವತೆ ಬರಲು ನಮಗೆ ಅನುಭವವಾಗಬೇಕು. ನಮ್ಮ ಕಷ್ಟ ಕಾರ್ಪಣ್ಯಗಳಿಗೆ ನಾವೇ ಕಾರಣವೆಂದು ನಾವು ಅರಿತುಕೊಳ್ಳಬೇಕು. ವಿಧಿಯ ವಿನ್ಯಾಸದ ಪ್ರಕಾರವೇ ನಮ್ಮ ಜೀವನವೂ ಸಾಗುತ್ತದೆ ಎಂದು ಅರಿತುಕೊಳ್ಳಬೇಕು ಮತ್ತು ನಿರ್ಲಿಪ್ತತೆಯಿಂದ ಆ ವಿಧಿಗೆ ಶರಣಾಗಬೇಕು. ಅಂತಹ ಅರಿವು ನಮ್ಮಲ್ಲಿ ಮೂಡಿದರೆ, ನಾವು ಎಂತಹ ಪರಿಸ್ಥಿತಿಯಲ್ಲೂ ವಿಚಲಿತರಾಗದೆ, ದೃಢವಾಗಿ ಬಂದದ್ದನ್ನೆಲ್ಲಾ ಅನುಭವಿಸುವ ಮತ್ತು ಆ ಅನುಭವದಿಂದ ಕಲಿಯುವಂತಾಗುತ್ತದೆ.

ಅಂತಹ ಕಲಿಕೆ ನಮಗಾಗದಿದ್ದರೆ, ವಾಸ್ತವವನ್ನು ಅರಿಯದೆ, ನಮ್ಮ ಹಣೆಯ ಬರಹವನ್ನೋ, ಅದನ್ನು ಬರೆದ ದೈವವನ್ನೋ, ಅನ್ಯರನ್ನೋ ದೂಷಿಸುತ್ತಲೋ ಅಥವಾ ನಮಗೆ ನಾವೇ ಕೊರಗುತ್ತಲೋ ಬದುಕ ದೂಡಿದರೆ ಕಲಿಕೆ ಶೂನ್ಯವಾಗಿ ಬದುಕಿನಲ್ಲಿ ಬರುವ ಕಷ್ಟಗಳಿಂದ ಉದ್ಭವವಾಗುವ ಪ್ರಶ್ನೆಗಳಿಗೆ ಉತ್ತರವೇ ಸಿಗದೇ ಸೋಲುತ್ತೇವೆ. ಕಡೆಗೆ ಉಳಿಯುವುದು ಕೇವಲ ಕಹಿ. ಅದಲ್ಲದೆ ಅನುಭವಗಳಿಂದ ಕಲಿತು ಪಕ್ವವಾದರೆ ಬದುಕು ಸವಿಯಾಗುತ್ತದೆ. ಆಯ್ಕೆ ನಮ್ಮದೇ ಅಲ್ಲವೇ?

**ಮುಕ್ತಕ – 590**

**ಪುರುಷನ ಸ್ವಾತಂತ್ರ್ಯವವನ ತೋಳ್ಗಿರುವಷ್ಟು |**
**ಪರಿಧಿಯೊಂದರೊಳದರ ಯತ್ನಕೆಡೆಯುಂಟು ||**
**ತಿರುಗುವುದು ಮಡಿಸುವುದು ನಿಗುರುವುದು ನೀಳುವುದು |**
**ತೊರೆದು ಹಾರದು ತೋಳು - ಮಂಕುತಿಮ್ಮ ||**

ಸ್ವಾತಂತ್ರ್ಯವವನ=ಸ್ವಾತಂತ್ರ್ಯ ವು+ಅವನ, ತೋಳ್ಗಿರುವಷ್ಟು=ತೋಳ್ಗೆ +ಇರುವಷ್ಟು,
ಪರಿಧಿಯೊಂದರೊಳದರ=ಪರಿಧಿ+ಒಂದರೊಳು+ಅದರ, ಯತ್ನಕೆಡೆಯುಂಟು=ಯತ್ನಕೆ+ಎಡೆ+ಉಂಟು,
ಪರಿಧಿ=ಎಟುಕುವ ಮಿತಿ,

ಮನುಷ್ಯನ ಸ್ವಾತಂತ್ರ್ಯ, ಅವನ ಬಾಹುಗಳನ್ನು ಎಷ್ಟು ತಿರುಗಿಸಬಹುದೋ, ಎಷ್ಟು ಮಡಿಸಬಹುದೋ, ಎಷ್ಟು





ನೆಟ್ಟಗಾಗಿಸಬಹುದೋ, ಎಷ್ಟು ನೀಟಬಹುದೋ, ಅಷ್ಟು, ಬಾಹುಗಳು ದೇಹಕ್ಕಂಟಿಕೊಂಡಿರುವುದರಿಂದ, ಅವನ ಬಾಹುಗಳ ಕಾರ್ಯ ಬಾಹುಳ್ಯಕ್ಕೆ ಒಂದು ಮಿತಿ ಇದೆ. ಆ ಬಾಹುಗಳು ದೇಹದಿಂದ ಬೇರ್ಪಟ್ಟು ಹಾರಲು ಸಾಧ್ಯವಿಲ್ಲ ಎಂದು ಹೇಳುತ್ತಾ, ಪ್ರತೀ ಮಾನವನ ಕಾರ್ಯಕ್ಷಮತೆ ಅಥವಾ ಸಾಮರ್ಥ್ಯಕ್ಕೆ ಒಂದು ಮಿತಿ ಇರುತ್ತದೆ ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಇಲ್ಲಿ ಬಾಹುಗಳನ್ನು ಬಲದ ಅಥವಾ ಶಕ್ತಿಯ ಪ್ರತೀಕವಾಗಿಟ್ಟುಕೊಂಡರೆ, ನಮ್ಮ ಬಾಹುಗಳಿಗೆ ಹೇಗೆ ತಿರುಗಿಸಲು, ನೀಟಲು, ಮಡಿಸಲು ಒಂದು ಮಿತಿಯಿದೆಯೋ ಹಾಗೆಯೇ, ಪ್ರತಿಯೊಬ್ಬರ ಶಕ್ತಿಗೂ ಒಂದು ಮಿತಿಯಿದೆ. ನಮ್ಮೆಲ್ಲ ಕೆಲಸ ಕಾರ್ಯಗಳು ಆ ಮಿತಿಯಲ್ಲೇ ಆಗಬೇಕು ಎನ್ನುವುದು ಇಲ್ಲಿನ ಭಾವ. ಇದು ವಾಸ್ತವವಾದ ವಿಷಯ. ಪ್ರತಿಯೊಬ್ಬರಿಗೂ ಅವರವದೇ ಶಕ್ತಿ, ಮಾತಿನ, ಕುಶಲತೆಯ, ಬುದ್ಧಿಯ, ಯೋಚನೆಯ, ಯೋಜನೆಯ ಮುಂತಾದ ಶಕ್ತಿಗೆಲ್ಲಾ ಒಂದು ಮಿತಿಯುಂಟು. ಅದನ್ನು ಮೀರಿ ನಾವು ಏನನ್ನೂ ಮಾಡಲಾಗುವುದಿಲ್ಲ.

ಆ ಮಿತಿಯಲ್ಲಿ ಏನನ್ನಾದರೂ ಮಾಡಲು ನಮ್ಮ ಶಕ್ತಿಗೆ ಸ್ವಾತಂತ್ರ್ಯವುಂಟು. ಆ ಪರಿಧಿಯನ್ನು ದಾಟಿ ನಮ್ಮ ಶಕ್ತಿಗೂ ಏನೂ ಮಾಡಲು ಸಾಧ್ಯವಿಲ್ಲವೆನ್ನುವುದೇ ಈ ಮುಕ್ತಕದ ಹೂರಣ. ನಮ್ಮ ಸ್ವಾತಂತ್ರ್ಯಕ್ಕೆ, ನಮ್ಮ ಶಕ್ತ್ಯಾನುಸಾರ ಒಂದು ಮಿತಿ ಇದೆ. ಹಾಗೆ ನಮಗಿರುವ ಮಿತಿಯನ್ನು ನಾವು ಬಹಳಷ್ಟು ಬಾರಿ ಅರಿತಿರುವುದೇ ಇಲ್ಲ. ಹಾಗಾಗಿಯೇ

ನಮ್ಮ ಶಕ್ತಿಯ ಮಿತಿಯನ್ನು ದಾಟುವಂತಹ ಪ್ರಯತ್ನ ನಮ್ಮಿಂದ ಆಗುತ್ತದೆ. ಶಕ್ತಿಯ ಕೊರತೆಯಿಂದಾಗಿ ನಾವು ಸೋಲುವಂತಾಗುತ್ತದೆ. ಅದು ನಮ್ಮನ್ನು ಕುಗ್ಗಿಸಿ ಕೊರಗುವಂತೆ ಮಾಡುತ್ತದೆ. ಕೆಲಬಾರಿ ಅನ್ಯರ ಶಕ್ತಿಯ ಒತ್ತಾಸೆಯನ್ನು ತೆಗೆದುಕೊಂಡು ನಾವು ಜಯ ಗಳಿಸಬೇಕಾಗುತ್ತದೆ. ಅದು ಸ್ವಾತಂತ್ರ್ಯವಲ್ಲ, ಅದು ಪರಾವಲಂಬನೆ ಅಥವಾ ಪರತಂತ್ರ

ನಮ್ಮ ಶಕ್ತಿಯ ಮಿತಿ ಅಥವಾ ಪರಿಧಿಯಲ್ಲಿ ನಾವು ಇದ್ದರೆ, ಸ್ವತಂತ್ರವಾಗಿ ನಮ್ಮ ಕೆಲಸಗಳನ್ನು ಮಾಡಿಕೊಳ್ಳುತ್ತಾ ನಿರಾತಂಕವಾಗಿ ಜೀವಿಸಬಹುದು. ಆದರೆ ಹಾಗೆ ನಮ್ಮ ಮಿತಿಯಲ್ಲಿ ಇರಬೇಕಾದರೆ, ನಾವು ನಮ್ಮ ಮಿತಿಯನ್ನು ಅರಿಯಬೇಕು. ನಾವು ಮಾಡುವ ಪ್ರತೀ ಕೆಲಸದಲ್ಲೂ ನಮ್ಮ ಮಿತಿಯರಿತು ಮಾಡಿದರೆ ಸೋಲುವ ಸಾಧ್ಯತೆಗಳು ಬಹಳ ಕಡಿಮೆ. ಮಿತಿಯರಿಯದೆ, ಹುಂಬತನದಿಂದ ಮುನ್ನುಗ್ಗಿ ಮುಗ್ಗರಿಸುವುದಕ್ಕಿಂತ, ಮಿತಿಯರಿತು ಹಿತವಾದ ಕಾರ್ಯಗಳನ್ನು ಮಾಡುತ್ತಾ, ಮಾಡಿದ ಕೆಲಸದಿಂದ ಆನಂದವನ್ನು ಪಡೆಯುವ ಪ್ರಯತ್ನ ನಮ್ಮಿಂದಾಗಬೇಕು.

**ಮುಕ್ತಕ – 591**

**ಬದುಕು ಕದನದ ತೆರನೆ; ನೋಡೆ ಲೀಲೆಯ ಕದನ |**
**ಮೊದಲುಮುಗಿವುಗಳಿರದ ಚಿತ್ರಲೀಲೆಯದು ||**
**ಇದರೊಳೆಂದಿಗುಮಿರದು ಸೋಲ್ಗೆಲುವು ಕಡೆಯೆಣಿಕೆ |**
**ಸದರದಾಟವೆ ಮುಖ್ಯ – ಮಂಕುತಿಮ್ಮ ||**

ಮೊದಲುಮುಗಿವುಗಳಿರದ=ಮೊದಲು+ಮುಗಿವುಗಳು+ಇರದ,ಇದರೊಳೆಂದಿಗುಮಿರದು=ಇದರೊಳಗೆ+ಎಂದಿಗುಂ+ಇರದು, ಸೋಲ್ಗೆಲುವು-ಸೋಲ್+ಗೆಲುವು, ಕಡೆಯೆಣಿಕೆ=ಕಡೆಯ+ಎಣಿಕೆ, ಸರದಾಟವೆ=ಸರಸದ+ಆಟವೆ, ಕದನ=ಹೋರಾಟ, ತೆರನೆ=ರೀತಿಯಲ್ಲಿ, ಲೀಲೆ=ವಿಧಿಯಾಟ, ಕಡೆಯೆಣಿಕೆ=ಕಡೆಯ ಲೆಕ್ಕಾಚಾರ, ಸದರದಾಟ-ನಿರಾಳದಿಂದ ಕೂಡಿದ ಆಟ.

ಜೀವನ ಒಂದು ಹೋರಾಟದಂತೆ ಅಥವಾ ಯುದ್ಧದಂತೆ. ಆದರೆ ಅದನ್ನು ಸೂಕ್ಷ್ಮವಾಗಿ ನೋಡಿದರೆ ಪರಮಾತ್ಮನು ತನ್ನ ಸಂತೋಷಕ್ಕಾಗಿ ಸೃಷ್ಟಿಸಿದ ಪ್ರಕೃತಿ ಮತ್ತು ತನ್ನ ಶಕ್ತಿ ಮತ್ತು ಪ್ರಕೃತಿಗಳ ಸಮ್ಮಿಲನದಿಂದ ಸೃಷ್ಟಿಸಿಕೊಂಡ, ಕೋಟ್ಯಾಂತರ ರೂಪಗಳನ್ನು ಹೊತ್ತ ಜೀವಿಗಳ 'ಜೀವನ' ವೆನ್ನುವ, ಲೀಲಾ ವಿನೋದವೆಂದು ನಮಗೆ ತಿಳಿಯುತ್ತದೆ. ಇದೊಂದು ಅಂತ್ಯವಿಲ್ಲದ ಜಗನ್ನಾಟಕದ ಹೋರಾಟ. ಈ ಹೋರಾಟದಲ್ಲಿ ಸೋಲು ಅಥವಾ ಗೆಲುವು ಎಂಬುದೇ ಇಲ್ಲ. ಸರಸದಿಂದ ಬದುಕುವುದೇ ಇಲ್ಲಿ ಮುಖ್ಯ ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು.

ಹಲವಾರು ವೈವಿಧ್ಯತೆಗಳಿಂದ ಕೂಡಿದ, ಒಂದಕ್ಕೊಂದು ಪೂರಕವಾಗಿ ಇರುವುದೇ ಈ ಜಗತ್ತು. ಪಂಚಭೂತಗಳಿಂದಾದ ಜೀವಕೋಟಿ, ಸತ್ವ, ರಜಸ್ ಮತ್ತು ತಮೋ ಎಂಬ ಮೂರು ಗುಣಗಳಿಂದಾಗಿದೆ. ಈ ಮೂರೂ ಗುಣಗಳು ಬೇರೆ ಬೇರೆ ಪ್ರಮಾಣದಲ್ಲಿರುವುದರಿಂದಲೇ ಈ ಜಗತ್ತಿನಲ್ಲಿ ಇಷ್ಟೊಂದು ವೈವಿಧ್ಯತೆ. ಈ ಮೂರೂ ಗುಣಗಳು ಸಮನಾಗಿದ್ದಿದ್ದರೆ, ಜಗನ್ನಾಟಕದಲ್ಲಿ ಸ್ವಾರಸ್ಯವೇ ಇರುತ್ತಿರಲಿಲ್ಲ. ಪ್ರತಿಯೊಂದು ಪ್ರಾಣಿಯೂ ಈ ಮೂರೂ ಗುಣಗಳನ್ನು ಹೊಂದಿ, ಆ ಗುಣಗಳ ಪ್ರಮಾಣಬೇಧಕ್ಕನುಗುಣವಾಗಿ ತನ್ನ ಪಾತ್ರವನ್ನು ವಹಿಸುತ್ತದೆ.

ಆದಿ ದಂಪತಿಗಳಾದ ಪುರುಷ ಮತ್ತು ಪ್ರಕೃತಿಗಳಿಂದ ಆರಂಭವಾದ ಈ ಬದುಕಿನ ಹೋರಾಟಕ್ಕೆ ಮೊದಲೂ ಇಲ್ಲ, ಕೊನೆಯೂ ಇಲ್ಲ. ನಾವೆಲ್ಲಾ ಬೇರೆ ಬೇರೆ ರೂಪಗಳನ್ನು ತೊಟ್ಟ ಜೀವಿಗಳು. ಮೇಲೆ ಹೇಳಿದ ಮೂರೂ ಗುಣಗಳನ್ನು ಧರಿಸಿ ನಮ್ಮ ನಮ್ಮ ಪಾತ್ರಗಳನ್ನು ವಹಿಸಿ ನೇಪಥ್ಯಕ್ಕೆ ಸರಿದು ಮತ್ತೆ ಹೊಸ ಪಾತ್ರ ಧರಿಸುವ ಜೀವಿಗಳು. ನಮ್ಮ ಈ ಹೋರಾಟ ಎಂದು ಮೊದಲಾಯಿತು ಮತ್ತು ಎಂದು ಕೊನೆಯಾಗುತ್ತದೆ ಎಂಬುದರ ಅರಿವೆಯೇ ಇಲ್ಲದೆ, ಬಂದು ಹೋಗುವ ಪಾತ್ರಗಳು. ಬದುಕಿನ ಹೋರಾಟದಲ್ಲಿ ಪಾಲ್ಗೊಳ್ಳುವುದೇ ನಮ್ಮ ಪಾಲಿನ ಕರ್ತವ್ಯ. ಇಲ್ಲಿ ಸೋಲು ಗೆಲುವುಗಳ ಲೆಕ್ಕಾಚಾರವಿಲ್ಲ.

ಹಾಗೆ ಹೋರಾಡುವಾಗ ಅಥವಾ ಬದುಕಿನ ಪಾತ್ರವಹಿಸುವಾಗ, ಇದನ್ನು ಆ ಭಗವಂತನ ಲೀಲಾವಿನೋದದ ಆಟವೆಂದೂ, ಇದನ್ನು ವಿಶ್ಲೇಷಣೆ ಮಾಡುವ ಅಧಿಕಾರ ಮತ್ತು ಯೋಗ್ಯತೆ ನಮಗೆ ಇಲ್ಲವೆಂದೂ ಭಾವಿಸಿ, ಆ ವಿಧಿ ನಮಗೆ ವಿಧಿಸಿದ ಪಾತ್ರವನ್ನು ಚೊಕ್ಕವಾಗಿ ನಿರ್ವಸುವುದೇ ನಮ್ಮ ಕರ್ತವ್ಯವೆಂದು ಅರಿತು, ಡಿ.ವಿ.ಜಿ.ಯವರು "ಸದರದಾಟವೆ ಮುಖ್ಯ" ಎನ್ನುವಂತೆ ಸದರದಿಂದ ಬದುಕಿನ ಸ್ವಾರಸ್ಯವನ್ನು ಅನುಭವಿಸುತ್ತಾ ಬಾಳಿದರೆ ಹಿತ, ಸಂತೋಷದಿಂದ ಬಾಳಬಹುದು. ಸೋಲು ಗೆಲುವುಗಳ ಲೆಕ್ಕಾಚಾರ ಮಾಡುತ್ತಾ" ನಾನು ಬದುಕುತ್ತಿದ್ದೇನೆ, ಇದು ನನ್ನ ಬದುಕು, ನನ್ನ ಹೋರಾಟ" ಎಂದು ಬಾಳಿದರೆ "ಸದರ'ವಿಲ್ಲದೆ ಕೇವಲ ದುಃಖವನ್ನು ಅನುಭವಿಸಬೇಕಾಗುವುದು.





**ಮುಕ್ತಕ 592**

**ನರಜೀವನದ ರಣದಿ ವಿಧಿಯ ಬಲವೊಂದು ಕಡೆ |**
**ಚಿರವಿವೇಕದಿ ಬೆಳೆದ ನಲುಮೆಯೊಂದು ಕಡೆ ||**
**ಉರುಬುತಿರೆ ಪುರುಷಂಗೆ ನಲುಮೆಯುಳಿತವೆ ಗೆಲುವು |**
**ಪುರುಷತನವೇ ವಿಜಯ - ಮಂಕುತಿಮ್ಮ ||**

ಬಲವೊಂದು=ಬಲವು+ಒಂದು, ನಲುಮೆಯೊಂದು=ನಲುಮೆ+ಒಂದು ಉರುಬುತಿರೆ=ಉರುಬುತ+ಇರೆ, ನಲುಮೆಯುಳಿತವೆ =ನಲುಮೆಯ+ಉಳಿತವೆ, ಉರುಬುತಿರೆ = ಉಸಿರಾಡುತ್ತಿರೋ ಅಥವಾ ಓಡುತ್ತಿರೆ

ಮನುಷ್ಯನ ಬದುಕಿನ ಹೋರಾಟದಲ್ಲಿ ವಿಧಿಯ ಬಲವು ಒಂದು ಕಡೆ ಇವನನ್ನು ಸೆಳೆಯುತ್ತಿದ್ದರೆ, ಮನುಷ್ಯ ತನ್ನ ಸಾಮರ್ಥ್ಯದಿಂದ ಬೆಳೆಸಿಕೊಂಡ ವಿವೇಕವು ಇವನಿಗೆ ಬೇರೆ ದಾರಿಯನ್ನು ತೋರುತ್ತಿರುತ್ತದೆ. ಹೀಗೆ ಇವನ ಹೋರಾಟದ ಓಟದಲ್ಲಿ ಅಥವಾ ಇವನ ಬದುಕಿನಲ್ಲಿ ಇವನು ಕಡೆಗೆ ತನ್ನ ಜೀವದಲ್ಲಿ ಸತ್ವವನ್ನು ಬೆಳೆಸಿಕೊಂಡು ಉಳಿಸಿಕೊಂಡರೆ,

ಅವನಿಗೆ ನಲುಮೆ ಎಂದರೆ, ಸಂತೋಷವನ್ನು ಪಡೆದುಕೊಂಡರೆ, ಅದೇ ಅವನಿಗೆ ಜಯ ಸಿಕ್ಕಂತೆ ಎಂದು, ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಭಿನ್ನ ಭಿನ್ನ ಪ್ರಮಾಣದಲ್ಲಿ ಸೇರಿಕೊಂಡ 'ಸತ್ವರಜಸ್ತಮೋಗುಣ' ಗಳಿಂದಾದ ರೂಪವನ್ನು ಹೊತ್ತ ನಾವು ಮತ್ತು ನಮ್ಮನ್ನು ಆಡಿಸುವ ವಿಧಿ, ಇವೆರಡರ ನಡುವೆ ನಮ್ಮ ಜೀವನದ ಹೋರಾಟ, ಮೂರೂ ಗುಣಗಳನ್ನು ಬೇರೆ ಬೇರೆ ಪ್ರಮಾಣಗಳಲ್ಲಿ ನಾವು ನಮ್ಮ ಪೂರ್ವ ಕರ್ಮಗಳಿಂದ ಹೊತ್ತು ತರುತ್ತೇವೆ, ಎನ್ನುತ್ತದೆ ನಮ್ಮ ಸನಾತನ. ಹಾಗೆ ತಂದ ಗುಣಗಳ ಸಹಾಯದಿಂದಲೇ ಇಲ್ಲಿನ ಬಾಳನ್ನು ಬಾಳುತ್ತೇವೆ. ಈ ಗುಣಗಳಿಂದ ಉಂಟಾಗುವ ಕೋಪ ತಾಪಗಳು, ಪ್ರೀತಿ ಪ್ರೇಮಗಳು, ರಾಗ ದ್ವೇಷಗಳು, ನಲುಮೆ ಅನುರಾಗಗಳಂತಹ ಭಾವಗಳ ಬಲದಿಂದಲೇ ನಮ್ಮ ಬದುಕಿನ ಹೋರಾಟ ನಡೆಸುತ್ತೇವೆ. ಇಲ್ಲಿ ನಾವು ನಮ್ಮ ವಿದ್ಯೆ, ಸಂಗ, ಮುಂತಾದವುಗಳಿಂದ ವಿವೇಕವನ್ನು ಪಡೆದು ಹೊತ್ತು ತಂದ
ಅನುಭವ, ಅಂತರಂಗದ ಮಂಥನ ಸತ್ವಗುಣದ ಪ್ರಮಾಣವನ್ನು ಬೆಳೆಸಿಕೊಂಡರೆ, ನಾವು ಸಾತ್ವಿಕರಾಗುತ್ತೇವೆ. ಅದು ನಮ್ಮಲ್ಲಿರುವ ಶಕ್ತಿಯ ಜಯ. ನಮ್ಮಲ್ಲಿ ನಲುಮೆ, ಸಂತೋಷ, ಆನಂದ ಬೆಳೆಯುತ್ತದೆ.

ಅಲ್ಲದೆ ಅನ್ಯ ಗುಣಗಳಾದ ರಜ ಮತ್ತು ತಮೋ ಗುಣಗಳನ್ನು ಬೆಳೆಸಿಕೊಂಡರೆ ಅವುಗಳಿಂದ ಪ್ರಭಾವಿತರಾಗಿ, ನಮ್ಮ ವ್ಯಕ್ತಿತ್ವ ರೂಪುಗೊಂಡು, ಈ ಪ್ರಾಪಂಚಿಕ ಬದುಕಿಗೆ ಅಂಟಿಕೊಂಡು ಹೋರಾಡುತ್ತೇವೆ, ನರಳುತ್ತೇವೆ. ಇದು ನಮ್ಮ ಶಕ್ತಿಯ ಸೋಲು. ಆದರೆ ಇದು ಅಂತಿಮ ಜಯವೂ ಅಲ್ಲ, ಅಂತಿಮ ಸೋಲೂ ಅಲ್ಲ. ಹೋರಾಟ ಮುಂದುವರೆದು ಹೋರಾಟದ ಸ್ವರೂಪ ಬದಲಾಗುತ್ತದೆ ಮತ್ತು ಬೇರೊಂದು ರೂಪವನ್ನು ಹೊತ್ತು ಹೋರಾಡಲು ಸಿದ್ಧರಾಗುತ್ತೇವೆ.

ಆದರೆ ಈ ನಮ್ಮ ಹೋರಾಟದಲ್ಲಿ ನಾವು ಸತ್ವವನ್ನು ಅರಿತುಕೊಳ್ಳಬೇಕಾದರೆ, ನಮ್ಮೊಳಗಿನ ಗುಣಗಳಲ್ಲಿ

ಸತ್ವಗುಣವನ್ನು ಹೆಚ್ಚಿಸಿಕೊಂಡಾಗ, ವಿವೇಕವೂ ಬೆಳೆದು ನಮ್ಮಲ್ಲಿರುವ "ಪುರುಷ" ಎಂದರೆ ಆತ್ಮಶಕ್ತಿ ತನ್ನ ಮೂಲವನ್ನು ಅರಿಯುವ ಪ್ರಯತ್ನದಲ್ಲಿ ಹತ್ತು ಹೆಜ್ಜೆ ಮುಂದೆ ಹೋಗುವುದರಿಂದ, ಇದೇ ಪುರುಷತನದ ವಿಜಯ" ಎಂದಿದ್ದಾರೆ ಮಾನ್ಯ ಗುಂಡಪ್ಪನವರು. ಈ ಸತ್ವವನ್ನು ಬೆಳೆಸಿಕೊಳ್ಳಲು ನಮ್ಮ ಪುರಾತನರು ನಮಗೆ ಹಲವಾರು ಮಾರ್ಗಗಳನ್ನು ತೋರಿದ್ದಾರೆ. ನಾವು ಆತ್ಮಾವಲೋಕನ ಮಾಡಿಕೊಂಡು ನಮ್ಮಲ್ಲಿರುವ "ತ್ರಿಗುಣಗಳ ಪರಿಮಾಣ ಮತ್ತು ಪ್ರಮಾಣವನ್ನು ಅರಿತು, ಸತ್ವವನ್ನು ಹೆಚ್ಚಿಸಿಕೊಳ್ಳಲು ಪ್ರಾಮಾಣಿಕ ಪ್ರಯತ್ನ ಪಟ್ಟರೆ, ಬದುಕು ಸಾರ್ಥಕವಾಗುತ್ತದೆ. ಅದೇ ನಮ್ಮೊಳಗಿನ ಪರಮಾತ್ಮ ಶಕ್ತಿಯ ಜಯ.

**ಮುಕ್ತಕ – 593**

**ಸತ್ತೆನೆಂದೆನಬೇಡ; ಸೋತೆನೆಂದೆನಬೇಡ |**
**ಬತ್ತಿತೆನ್ನೊಳು ಸತ್ವದೂಟೆಯೆನಬೇಡ ||**
**ಮೃತ್ಯುವೆನ್ನುವುದೊಂದು ತೆರೆಯಿಳಿತ; ತೆರೆಯೇರು |**
**ಮತ್ತೆ ತೋರ್ಪುದು ನಾಳೆ- ಮಂಕುತಿಮ್ಮ ||**

ಸತ್ತೆನೆಂದೆನಬೇಡ = ಸತ್ತೆನ್+ಎಂದು+ಎನಬೇಡ, ಸೋತೆನೆಂದೆನಬೇಡ = ಸೋತೆನ್+ಎಂದು ಎನಬೇಡ,
ಬತ್ತಿತೆನ್ನೊಳು=ಬತ್ತಿತು+ಎನ್ನೊಳು, ಸತ್ವದೂಟೆಯೆನಬೇಡ = ಸತ್ವದ+ಊಟೆ+ಎನಬೇಡ,
ಮೃತ್ಯುವೆನ್ನುವುದೊಂದು=ಮೃತ್ಯುವು+ಎನ್ನುವುದು+ಒಂದು, ತೆರೆಯಿಳಿತ+ ತೆರೆಯ+ಇಳಿತ,
ತೆರೆಯೇರು=ತೆರೆಯ+ಏರು,
ಊಟೆ=ಒರತೆ, ತೆರೆ=ಕಡಲ ಅಲೆ, ಏರು= ಮೇಲೆ ಏಳುವುದು.

"ನಾನು ಸೋತೆ, ನನ್ನಲ್ಲಿ ಇನ್ನು ಶಕ್ತಿಯಿಲ್ಲ, ನನ್ನಲ್ಲಿ ಶಕ್ತಿಯ ಒರತೆ ಬತ್ತಿ ಹೋಗಿದೆ, ಹಾಗಾಗಿ ನಾನು ಸತ್ತೆನೆಂದೇ ತಿಳಿಯುತ್ತೇನೆ" ಎಂದು ಬದುಕಿನ ಹೋರಾಟದಲ್ಲಿ ಹತಾಶೆಯನ್ನು ತಾಳಬೇಡ. ಸಾವು ಎನ್ನುವುದು ಕಡಲ ಮೇಲಿನ ಅಲೆಯಂತೆ, ಒಮ್ಮೆ ಮೇಲೆದ್ದರೆ, ಒಮ್ಮೆ ಇಳಿಯುತ್ತದೆ ಮತ್ತು ಮತ್ತೆ ಮೇಲೇಳುತ್ತದೆ. ಹಾಗಾಗಿ ನಿರಾಶೆ ಹತಾಶೆಗಳಿಗೆ ಬಲಿಯಾಗಬೇಡ ಎಂಬ ಬುದ್ಧಿವಾದವನ್ನು ನೀಡಿದ್ದಾರೆ ನಮಗೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಾವೆಲ್ಲಾ ಹುಟ್ಟಿದಾರಭ್ಯ ಏನಾದರೊಂದು ಕೆಲಸ ಮಾಡುತ್ತಲೇ ಇರುತ್ತೇವೆ. ಬಾಲ್ಯದಲ್ಲಿ ಆಟ ಮತ್ತು ಚೇಷ್ಟೆ, ಯವ್ವನದಲ್ಲಿ ಸಾಧನೆಯ ಓಟ, ಪ್ರೌಢಾವಸ್ಥೆಯಲ್ಲಿ ಕರ್ತವ್ಯ ನಿರ್ವಹಣೆಗೆ ಸಕ್ರಿಯತೆಯ ಪ್ರವೃತ್ತಿ, ಹೀಗೆ ಬದುಕಿನ್ನುದ್ದಕ್ಕೂ ಏನಾದರೊಂದು ಮಾಡುತ್ತಲೇ ಇರುವ ಪ್ರವೃತ್ತಿ ನಮ್ಮದು. ಇದು ಸಹಜವಾಗೇ ಇದೆ. ಆದರೆ ವಾರ್ಧಕ್ಯದಲ್ಲಿ ದೈಹಿಕ ಶಕ್ತಿಯುಡುಗಿ, ಮನಸ್ಸಿನಲ್ಲಿ ಓಡುವ ವಿಚಾರಗಳಿಗೆ ಪೂರಕವಾಗಿ ದೇಹದ ಶಕ್ತಿ ಇರದಿದ್ದರೆ, ಆಗ ಅಯ್ಯೋ ಕೈಲಾಗುತ್ತಿಲ್ಲವಲ್ಲ" ಎಂಬ ಒಂದು ರೀತಿಯ ಹತಾಶೆಯ ಭಾವ





ಬರುತ್ತದೆ. ಇದೂ ಕೂಡ ಸಹಜವಾಗೇ ಇದೆ. ಆದರೆ ಈ ಹತಾಶೆ ನಮಗೆ ಕೊರಗನ್ನು ಹಚ್ಚಬಾರದು ಮತ್ತು ನಾವು ಕೊರಗುವಂತಾಗಿ ಮಾನಸಿಕವಾಗಿ ಕುಗ್ಗಬಾರದು. ಹಾಗಾಗಬೇಕಾದರೆ ನಾವು ನಮ್ಮ ಬಾಲ್ಯ, ಕೌಮಾರ್ಯ, ಯೌವ್ವನ ಮತ್ತು ಪ್ರೌಢಾವಸ್ಥೆಯಲ್ಲಿ ಈ ಜಗತ್ತಿನೊಂದಿಗೆ ಅಂಟಿಸಿಕೊಂಡಿದ್ದ ನಂಟನ್ನು ಕ್ರಮೇಣ ಕಡಿಮೆ ಮಾಡಿಕೊಳ್ಳುತ್ತಾ ಬರಬೇಕು. ಆಗ ಮನಸ್ಸಿನ ಕಾಮನೆಗಳ ಓಟವೂ ಕಡಿಮೆಯಾಗಿ ಮನಸ್ಸು ಮತ್ತು ದೇಹಗಳ ಪರಸ್ಪರ ಶಕ್ತಿ ಒಂದು ಸಮನ್ವಯಕ್ಕೆ ಬಂದು, ನಿರಾಶೆ ಹತಾಶೆಗಳಿಲ್ಲದ, ಒಂದು ನಿರಾಳ ಅಥವಾ ಶಾಂತ ಭಾವ ಮೂಡುತ್ತದೆ. ಮನಸೆಂಬ ಕಡಲು ಉದ್ವೇಗದಿಂದ ಪುಟಿಯುವ ವಿಚಾರಗಳ ಅಲೆಗಳ ಏರಿಳಿತವಿಲ್ಲದೆ ಶಾಂತವಾಗುತ್ತದೆ.

ಮನಸ್ಸು, ಬುದ್ಧಿ, ದೇಹ ಮತ್ತು ಆತ್ಮಗಳ ಸಮ್ಮಿಲನದಿಂದಾದ ನಮ್ಮ ಅಸ್ತಿತ್ವಕ್ಕೆ, ನಾವು "ನಾನು" ಎಂಬುದನ್ನು ಸೇರಿಸಿಕೊಂಡು, ಅಹಂಕಾರದಿಂದ ಈ ಜಗತ್ತಿಗೆ ಅಂಟಿಕೊಂಡು ತೊಳಲಾಡುತ್ತೇವೆ. ಈ ಮನಸ್ಸು, ಬುದ್ಧಿ, ದೇಹ ಮತ್ತು ಆತ್ಮಗಳು ಅದೆಷ್ಟು ಬಾರಿ ಒಂದುಗೂಡಿ ಮತ್ತೆ ಬೇರಾಗಿವೆಯೋ ನಮಗೆ ಗೊತ್ತಿಲ್ಲ. ಪ್ರತೀ ಬಾರಿ ಅವು ಒಂದುಗೂಡಿದಾಗಲೂ, ನಮಗೆ ಒಂದು ಹೊಸತನದ ಅನುಭವ, ಈ ಜಗತ್ತಿನೊಂದಿಗೆ ನಂಟಿನ ಅಂಟು. "ಮೃತ್ಯುವೆನ್ನುವುದೊಂದು ತೆರೆಯಿಳಿತ" ಎಂದು ಹೇಳುತ್ತಾ ಮಾನ್ಯ ಡಿವಿಜಿಯವರು, ಈ ಹುಟ್ಟು ಸಾವುಗಳೆಂಬುದು ಸಮುದ್ರದ ಅಲೆಗಳಂತೆ, ಮೇಲೆದ್ದು ಕೆಳಬೀಳುತ್ತಾ ಮತ್ತೆ ಮೇಲೇಳುತ್ತವೆ. ಇದು ಪ್ರಕೃತಿಯಲ್ಲಿ ಸಕಲ

ಜೀವರಾಶಿಗಳಲ್ಲೂ ಸಹಜವಾಗೇ ನಡೆಯುವ ಪ್ರಕ್ರಿಯೆ. ಹಾಗಾಗಿ "ಕೊರಗಬೇಡ" ಎನ್ನುವ ಕಿವಿ ಮಾತನ್ನು ನಮಗೆ ಹೇಳುತ್ತಾರೆ.

ಹೇಗೆ ಹುಟ್ಟು ನಮ್ಮ ಕೈಯಲ್ಲಿಲ್ಲವೋ, ಹಾಗೆಯೇ ಸಾವೂ ಸಹ ನಮ್ಮ ಕೈಯಲ್ಲಿಲ್ಲ. "ನಾನು ಹುಟ್ಟಿದ್ದೇನೆ, ನಾನು ಮಾಡುತ್ತೇನೆ, ಇದು ನನ್ನ ಶಕ್ತಿ, ನಾನು ಬದುಕುತ್ತೇನೆ. ನಾನು ಸಾಯುತ್ತೇನೆ" ಎನ್ನುವಂತಹ ಮಾನುಷಿ ಮತ್ತು ಪ್ರಾಕೃತ ಭಾವನೆಗಳನ್ನು ತೊರೆದು ಸಕಲವೂ ಆ ಪರಮಾತ್ಮನ ಲೀಲಾ ವಿನೋದದ ಒಂದು ಜಗನ್ನಾಟಕ, ನಾವು ಪಾತ್ರಧಾರಿಗಳು, ಸೂತ್ರಧಾರ ನಮಗೆ ಇತ್ತ ಪಾತ್ರವನ್ನು ಮತ್ತು ಅದನ್ನು ನಿರ್ವಹಿಸಲು ನಮಗಿತ್ತ ಶಕ್ತಿಯನ್ನು ಸದುಪಯೋಗಪಡಿಸುತ್ತಾ ಜಗತ್ತಿಗೆ ಅಂಟದೆ, ತನ್ನ ಪ್ರಮೇಯವೇ ಇಲ್ಲದೆ ಸಮುದ್ರದಲ್ಲಿ ಮೇಲೆದ್ದು ಬೀಳುವ ಅಲೆಗಳಂತೆ, ನಾವೂ ಸಹ ಹುಟ್ಟಿ, ಬದುಕಿ ಅಂತ್ಯಗೊಳ್ಳುವುದೂ ಸಹ ಆ ಪರಮಾತ್ಮನ ಇಚ್ಛೆಯಂತೆ ಎಂದು, ಮನಗಂಡು ಬದುಕಬೇಕು. ಹಾಗಾದರೆ, ನಾವು ನೋವು ನಿರಾಶೆ ಮತ್ತು ಹತಾಶೆಗಳಿಂದ ಮುಕ್ತರಾಗಬಹುದು.

**ಮುಕ್ತಕ – 594**

**ಬಿಡುವಿಲ್ಲದೀ ಜೀವಿತಾಪಣದ ಸರಕೆಣಿಸೆ |**
**ಕಡೆಯೆಂದು | ಮುಗಿಯದಿಹ ಲಾಭನಷ್ಟಗಳ ||**
**ಕಡತದೊಳ್ ಅಂದೆದಿನಾ ಲೆಕ್ಕವೇ ತೀರ್ಮಾನ? |**
**ಬಿಡು ಲಾಭದಾತುರವ - ಮಂಕುತಿಮ್ಮ ||**

ಬಿಡುವಿಲ್ಲದೀ= ಬಿಡುವು+ಇಲ್ಲದ+ಈ, ಜೀವಿತಾಪಣದ=ಜೀವಿತ+ಆಪಣದ, ಸರಕೆಣಿಸೆ=ಸರಕ+ಎಣಿಸೆ, ಕಡೆಯೆಂದು=ಕಡೆ+ಎಂದು, ಮುಗಿಯದಿಹ=ಮುಗಿಯದೆ+ಇಹ, ಲಾಭದಾತುರವ=ಲಾಭದ+ಆತುರವ. ಆಪಣದ=ವ್ಯಾಪಾರದ, ಕಡತದೊಳ್ = ಕಟ್ಟಿನಲ್ಲಿ, ಅಂಡೆದಿನಾ =ಅವತ್ತಿನ

ಬಿಡುವಿಲ್ಲದೆ ನಡೆಯುವ ಈ ಜಗತ್ತಿನ ಮಾರುಕಟ್ಟೆಯಲ್ಲಿ, ನಮಗೆ ನಮ್ಮ ಸರಕನ್ನೂ ಎಣಿಸಿ ಕಡೆಗೆ ಇಳಿಸಿ "ಇಂದಿನ ವ್ಯಾಪಾರ ಮುಗಿಯಿತು" ಎಂದು, ಅಂದಿನ ಲಾಭ ನಷ್ಟಗಳ ಲೆಕ್ಕ ಹಾಕಲಾಗುವುದೆ? ಸಾಧ್ಯವಿಲ್ಲ. ಹಾಗಾಗಿ ನೀನು ನಿನ್ನ ಜೀವನವೆಂಬ ವ್ಯಾಪಾರದಲ್ಲಿ ಲಾಭದ ಆಸೆಯನ್ನು ಬಿಡು ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜನ್ಮ ಜನ್ಮಾಂತರದ ಜೀವನದ ವ್ಯಾಪಾರದ ಲೆಕ್ಕಾಚಾರವನ್ನು ಹೊಂದಿರುವ ನಮಗೆ ಒಂದು ಜನ್ಮದ ಲೆಕ್ಕಾಚಾರವನ್ನು "ಇದು ಬಂದದ್ದು, ಇದು ಹೋದದ್ದು ಮತ್ತು ಇದು ಲಾಭ, ಇದು ನಷ್ಟ, ಇಲ್ಲಿಗೆ ಕೊನೆ" ಎಂದು ನಿಖರವಾಗಿ ಹೇಳಲಾದೀತೆ? ಏಕೆಂದರೆ ಇಂದಿನ, ಎಂದರೆ ಈ ಜನ್ಮದ ನಮ್ಮ ಜೀವನದ ವ್ಯಾಪಾರದಲ್ಲಿ, ನಾವು ಹಿಂದಿನಿಂದ ಹೊತ್ತು ತಂದ ಸರಕೆಷ್ಟು, ಇಲ್ಲಿ ಗಳಿಸಿದ್ದೆಷ್ಟು, ಕಳಕೊಂಡಿದ್ದೆಷ್ಟು, ಮುಂದಿನ ವ್ಯಾಪಾರಕ್ಕೆ ಉಳಿಸಿಕೊಂಡದ್ದೆಷ್ಟು ಎಂದು ಲೆಕ್ಕಾಚಾರ ಹಾಕಲು ನಮಗೆ ಸಾಧ್ಯವೇ ಇಲ್ಲ. ಪೂರ್ವ ಜನ್ಮದಿಂದ ಹೊತ್ತು ತಂದು ಇಲ್ಲಿ ಬೆಳಸಿ, ಗಳಿಸಿ, ಕಳೆದು ಮತ್ತು ಉಳಿಸಿಕೊಂಡ, ಹಲವಾರು ಸ್ವರೂಪದ ಭಾವನೆಗಳು, ನೆನಪುಗಳು, ಯೋಚನೆಗಳು ಮತ್ತು ಯೋಜನೆಗಳೇ ನಮ್ಮ ಜಗದ್ವ್ಯಾ ಪಾರದ ಸರುಕುಗಳಲ್ಲವೇ? ಮನಸ್ಸಿನೊಳಕ್ಕೆ ವಿಚಾರದ ಸರುಕುಗಳು ನಿರಂತರವಾಗಿ ಬರುತ್ತಲೇ ಇರುತ್ತದೆಯಲ್ಲವೆ? ಹಾಗಾಗಿ ಈ ಜಗದ್ವ್ಯಾ ಪಾರದ ಅಂಗಡಿ ಎಂದೆಂದಿಗೂ ಮುಗಿಯುವುದೇ ಇಲ್ಲ ಎಂದು ಅನಿಸುತ್ತದೆ.

ಜೀವನವೇ ಒಂದು ಅಂಗಡಿಯಂತೆ. ಇರುವ ಎಲ್ಲಾ ಸರುಕುಗಳನ್ನೂ ಶಿಸ್ತಿನಿಂದ ಜೋಡಿಸಲ್ಪಟ್ಟಿದೆ. ಆದರೆ ನಮಗೆ ಒಂದು ಉಗ್ರಾಣ (godown) ಇದೆ. ಬಂದದ್ದನ್ನೆಲ್ಲಾ ಅಲ್ಲಿ ಶೇಖರಿಸಿಟ್ಟುಕೊಳ್ಳುತ್ತೇವೆ. ನಮ್ಮ ನೆನಪಿನ ಉಗ್ರಾಣದಲ್ಲಿ ಎಂದು ಎಲ್ಲ ವಸ್ತುಗಳೂ ಖಾಲಿಯಾಗುತ್ತವೆಯೋ, ಅಂದು ನಾವು ಈ ಅಂಗಡಿ ವ್ಯಾಪಾರದಿಂದ ಮುಕ್ತಿಯನ್ನು ಪಡೆಯಬಹುದು. ಆದರೆ ಹಾಗೆ ನಮ್ಮೊಳಗಿನ ವಿಚಾರಗಳ, ಭಾವನೆಗಳ, ನೆನಪುಗಳ ಅಂಗಡಿಯನ್ನು ಖಾಲಿ ಮಾಡುವುದು ಸಾಧನೆಯ ವಿನಃ ಸಾಧ್ಯವಾಗುವುದೇ ಇಲ್ಲ. ನಿರಂತರ ನಡೆಯುವ ಈ ಜಗತ್ತಿನ ವ್ಯಾಪಾರದಲ್ಲಿ

ನಮ್ಮ ಅಂಗಡಿಯಲ್ಲಿ ಬರುವುದು ಬರುತ್ತದೆ, ಹೋಗುವುದು ಹೋಗುತ್ತದೆ ಅಷ್ಟೇ. ಇಲ್ಲಿ ಲಾಭವೂ ಇಲ್ಲ ನಷ್ಟವೂ ಇಲ್ಲ. ಹಾಗಾಗಿ ನಾವು ಲಾಭದ ಆತುರ ಪಡಬಾರದು ಎಂದು ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು.

ಹೊತ್ತು ತಂದದ್ದನ್ನು ಸಂಸ್ಕರಿಸಿಕೊಳ್ಳಬೇಕು, ಗಳಿಸಿದ್ದನ್ನೂ ಸಂಸ್ಕರಿಸಿಕೊಳ್ಳಬೇಕು. ಹಾಗೆ ಸಂಸ್ಕರಿಸಿಕೊಂಡದ್ದನ್ನು ಉಳಿಸಿಕೊಂಡು ಬೆಳೆಸಿಕೊಂಡರೆ, ನಮ್ಮ ವ್ಯಾಪಾರ ಶುದ್ಧವಾಗಿ ಲಾಭದಾಸೆ ಕ್ಷೀಣಿಸುತ್ತದೆ. ಹಾಗೆ ಲಾಭಕ್ಕೆ ಲೋಭಪಡದೆ, ನಷ್ಟಕ್ಕೆ ಕೊರಗದೆ, ಒಂದು ನಿರ್ಲಿಪ್ತ ವ್ಯಾಪಾರವನ್ನು ನಡೆಸಿದರೆ ಬದುಕಿನಂತ್ಯದಲ್ಲಿ ಲೆಕ್ಕಾಚಾರ ಚುಕ್ತಾ ಆಗುವ ಸಾಧ್ಯತೆಗಳಿವೆ. ತಂದುಕೊಳ್ಳುವುದನ್ನು ನಿಯಂತ್ರಿಸುತ್ತಾ, ಬಂದದ್ದನ್ನು ಸಂಸ್ಕರಿಸಿಕೊಳ್ಳುತ್ತಾ,





ಇರುವುದನ್ನು ಖಾಲಿಮಾಡುವುದೇ ಈ ಜಗದ್ವ್ಯಾಪಾರದಲ್ಲಿನ ಜಾಣತನ. ಪ್ರತಿನಿತ್ಯದ ವ್ಯಾಪಾರವನ್ನು ಅಂದಂದಿಗೆ ತೀರಿಸಿಕೊಳ್ಳುತ್ತಾ ತೃಪ್ತ ಜೀವನ ನಡೆಸಬೇಕು ಎನ್ನುವುದೇ, ಈ ಮುಕ್ತಕದ ಹೂರಣ.

**ಮುಕ್ತಕ – 595**

**ಎನಿತು ನೀಂ ಗೆಲಿದೆಯೆಂದೆನರು ಬಲ್ಲವರೆಂದು |**
**ಮೆನಿತು ನೀಂ ಪೋರ್ದೆ ಯೆನಿತನು ಪೊತ್ತೆಯೆನುವರ್ ||**
**ಗಣನೆ ಸಲುವುದು ತೋರ್ದ ಪೌರುಷಕೆ, ಜಯಕಲ್ಲ |**
**ದಿನದಿನದ ಗರಡಿಯಿದು - ಮಂಕುತಿಮ್ಮ ||**

ಗೆಲಿದೆಯೆಂದೆನರು=ಗಲಿದೆ+ಎಂದು+ಎನರು, ಬಲ್ಲವರೆಂದುಮೆನಿತು=ಬಲ್ಲವರು+ಎಂದು+ಎನಿತು, ಪೊತ್ತೆಯೆನುವ=ಮೊತ್ತೆ+ಎನುವರ್, ಗರಡಿಯಿದು=ಗರಡಿ+ಇದು, ಎನಿತು=ಎಷ್ಟು, ಗೆಲಿದೆ=ಗೆದ್ದೆ, ಬಲ್ಲವರು=ಜ್ಞಾನಿಗಳು, ಪೋರ್ದೆ =ಹೋರಾಡಿದೆ, ಯೆನಿತನು=ಎಷ್ಟನ್ನು, ಹೊತ್ತೆ=ಹೊತ್ತೆ ಗಣನೆ=ಲೆಕ್ಕಾಚಾರ, ತೋರ್ದ=ತೋರಿದ, ಪೌರುಷಕೆ =ಧೈರ್ಯಕ್ಕೆ, ಗರಡಿ=ಸಾಮಿನ ಅಥವಾ ವ್ಯಾಯಾಮದ ಅಂಗಳ

ಅರಿತವರು, ನೀ ಏನನ್ನು ಅಥವಾ ಎಷ್ಟು ಗೆದ್ದೆಯೆಂದು ಕೇಳುವುದಿಲ್ಲ. ನೀ ಎಷ್ಟುಹೋರಾಡಿದೆ ಎಂದೋ ಅಥವಾ ನೀ ಎಷ್ಟು ಭಾರವನ್ನು ಹೊತ್ತೆ ಎಂಬುದನ್ನು ನೋಡುತ್ತಾರೆ. ಏಕೆಂದರೆ, ಬದುಕಿನ ಹೋರಾಟದಲ್ಲಿ ನಾವೆಷ್ಟು ಧೈರ್ಯದಿಂದ, ತಾಳ್ಮೆಯಿಂದ, ಹೋರಾಡಿದ್ದೇವೆ ಎನ್ನುವುದೇ ಗಣನೆಗೆ ಬರುವುದು. ನಾವು ಪಡೆದ ಜಯಕ್ಕಲ್ಲ. ಈ ಜಗತ್ತಿನ ಹೋರಾಟ ಒಂದು ಪ್ರತಿ ನಿತ್ಯದ ಗರಡಿಮನೆಯಂತೆ. ಪ್ರತಿ ನಿತ್ಯ ವ್ಯಾಯಾಮ ಮಾಡಬೇಕು, ಪ್ರತಿ ನಿತ್ಯವೂ ಕುಸ್ತಿ ಮಾಡಬೇಕು. ಇಲ್ಲಿ ಎಷ್ಟು ಕಸರತ್ತು ಮಾಡಿದ್ದೇವೆ ಎನ್ನುವುದೇ ಮುಖ್ಯವಾಗುತ್ತದೆ ಹೊರತು ಗೆಲುವಲ್ಲ, ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ನಮ್ಮ ಬದುಕಿನ ಹೋರಾಟವು ಯಾವುದನ್ನೋ ಸಾಧಿಸುವುದಕ್ಕೋ ಅಥವಾ ಏನನ್ನೋ ದಕ್ಕಿಸಿಕೊಳ್ಳುವುದಕ್ಕೋ ಆಗಿರುತ್ತದೆ. ಬಯಕೆಗಳ ಮಡುವಾಗಿರುವ ನಮ್ಮ ಮನಸ್ಸಿನಲ್ಲಿ, ಒಂದು ಬಯಕೆ ಪೂರ್ಣವಾದರೆ ಮತ್ತೊಂದರ ಬುಗ್ಗೆ ಏಳುತ್ತದೆ. ನಿಲ್ಲದ ನಿರಂತರ ಕಾಮನೆಗಳ ಬುಗ್ಗೆ, ಒಂದು ತಣಿದರೆ ಮತ್ತೊಂದರ ಅಲೆಯೇಳುತ್ತದೆ. ಹಾಗಾಗಿ ಬದುಕು ನಿತ್ಯ ನಿರಂತರ ಹೋರಾಟ. ಈ ಹೋರಾಟದಲ್ಲಿ ನಾವು ಆಸೆಪಟ್ಟ ವಸ್ತು, ವಿಷಯ, ವ್ಯಕ್ತಿ ಅಥವಾ ಒಂದು ಸಾಧನೆ ಯಾವುದೂ ನಮಗೆ ದಕ್ಕದೇ ಹೋಗಬಹುದು. ಜಯ ಸಿಗದೆಯೇ ಹೋಗಬಹುದು.

ಹಾಗಂದು ನಮ್ಮ ಪ್ರಯತ್ನಕ್ಕೆ ಬೆಲೆಯೇ ಇಲ್ಲವೇ? ಎಂದರೆ, "ಗಣನೆ ಸಲುವುದು ತೋರ್ದ ಪೌರುಷಕೆ" ಎಂದು ಮಾನ್ಯ ಗುಂಡಪ್ಪನವರು ಹೇಳುವಂತೆ, ನಾವು ಮಾಡಿದ ಪ್ರಯತ್ನಕ್ಕೆ ಖಂಡಿತ ಬೆಲೆ ಉಂಟು. ನಾವು ಪಡೆದ ಜಯ ಅಥವಾ ಅನುಭವಿಸಿದ ಸೋಲಿಗಲ್ಲ. ಗೆಲ್ಲುತ್ತೇವೆ ಎಂದು ಅತಿ ಉತ್ಸುಕತೆಯನ್ನೋ ಅಥವಾ ಸೋಲುತ್ತೇವೆ ಎಂದು ನಿರುತ್ಸಾಹವನ್ನೊ ತೋರದೆ ಕೇವಲ ಕರ್ತವ್ಯವನ್ನು ಮಾಡಬೇಕು.

यत्न ದೈವಿಕ 594 – 598 ಕಗ್ಗರಸಧಾರೆ

ಹೀಗೆ ಕರ್ತವ್ಯವನ್ನು ಮಾಡುವಾಗ ನಾವು ಪಟ್ಟ ಶ್ರಮ, ತೋರಿದ ಧೈರ್ಯ ಮತ್ತು ತಾಳ್ಮೆಗಳು ನಮ್ಮನ್ನು ಅನುಭವಿಗಳನ್ನಾಗಿಸುತ್ತವೆ. ಅದು ಆತ್ಮಾನುಭವ, ಅದೇ ಪ್ರಯತ್ನದ ಗಳಿಕೆ.

ಬದುಕಿನಲ್ಲಿ ಹೋರಾಡಬೇಕು. ಗೆಲುವು ಸೋಲುಗಳ ಪರಿವೆಯಿಲ್ಲದೆ ಕರ್ತವ್ಯವೆಂದು ನಿರ್ಲಿಪ್ತತೆಯಿಂದ ಹೋರಾಡಬೇಕು. ಹಾಗೆ ಹೋರಾಡುವಾಗ ನಾವು ಪಟ್ಟ ಪ್ರಯತ್ನ, ಅನುಭವಿಸಿದ ಕಷ್ಟ-ನಷ್ಟಗಳು, ನೋವು-ಆಯಾಸಗಳು, ಸಂತಸ ಆನಂದಗಳೆಲ್ಲ ನಮ್ಮ ಪ್ರಯತ್ನದ ಫಲವಾಗಿ ನಮಗೆ ಸಂದ ಅನುಭವಗಳು. ಆ ಅನುಭವಗಳೇ ನಮ್ಮ ಗಳಿಕೆ. ಆ ಅನುಭವಗಳಿಂದ ಅರಿತದ್ದೆ ನಮ್ಮ ಕಲಿಕೆ, ಅಂತಹಾ ಕಲಿಕೆಗಾಗಿ ಹೋರಾಡಬೇಕೇ ವಿನಃ ಗೆಲುವಿಗಲ್ಲ.

**ಮುಕ್ತಕ – 596** **ಗರಡಿ ಸಾಮಿಂದೆ ನೀನೆದುರಾಳ ಗೆಲುದೊಡೇಂ? |**
**ಬರದಿಹುದೆ ನಿನಗಿನಿತು ಕಾಯಾಂಗಪಟುತೆ?**
**ವರ ಸದ್ಯಕಿಲ್ಲದೊಡೆ ಬರಿದಾಗುವುದೆ ಪೂಜೆ |**
**ಪರಿಶುದ್ಧ ಮನವೇ ವರ – ಮಂಕುತಿಮ್ಮ ||**

ಸಾಮಿಂದೆ+ಸಾಮು+ಇಂದೆ, ನೀನೆದುರಾಳ=ನೀನು+ಎದುರು+ಆಳ, ಬರದಿಹುದೆ=ಬರದೆ+ಇಹುದೆ,
ನಿನಗಿನಿತು=ನಿನಗೆ+ಇನಿತು, ಕಾಯಾಂಗಪಟುತೆ=ಕಾಯ+ಅಂಗ +ಪಟುತೆ,
ಸದ್ಯಕಿಲ್ಲದೊಡೆ=ಸದ್ಯಕ್ಕೆ+ಇಲ್ಲದೊಡೆ, ಬರಿದಾಗುವುದೆ=ಬರಿದು+ಆಗುವುದೆ,
ಸಾಮಿಂದೆ=ವ್ಯಾಯಾಮದಿಂದ, ಗೆಲುದೊಡೇಂ=ಗೆಲ್ಲದಿದ್ದರೆ ಏನು, ಕಾಯಾಂಗಪಟುತೆ=ದೇಹದಾರುಢ್ಯ, ದೈಹಿಕ ಶಕ್ತಿ,

ನೀನು ಗರಡಿಯ ಸಾಮನ್ನು ಮಾಡಿ, ಕುಸ್ತಿಯಲ್ಲಿ ಎದುರಾಳಿಯಮೇಲೆ ಗೆಲ್ಲದಿದ್ದರೆ ಏನಂತೆ, ನಿನ್ನ ದೇಹವಂತೂ ಗಟ್ಟಿಯಾಗುವುದಲ್ಲವೆ? ಪೂಜೆ ಮಾಡಿದ ಕೂಡಲೇ ವರ ಸಿಗದಿದ್ದರೆ, ಪೂಜೆಯನ್ನು ವ್ಯರ್ಥವೆನ್ನುತ್ತೀಯೇನು? ಗರಡಿ ಸಾಮಿಂದ ದೇಹ ಗಟ್ಟಿಯಾಗುವುದು ಹೇಗೆ ಸಂದ ಫಲವೋ, ಹಾಗೆ ಮನಸ್ಸು ಶುದ್ಧವಾಗುವುದೇ ಪೂಜೆಯಿಂದ ಸಲ್ಲುವ ಉತ್ತಮ ಫಲವೆಂದು, ಜಗತ್ತಿನ ಬದುಕಿನಲ್ಲಿ ನಮ್ಮೆಲ್ಲರ ಹೋರಾಟದ ಫಲಶ್ರುತಿಯ ರೂಪವನ್ನು ನಮಗೆ ತೋರಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮ ಬದುಕಿನ ಹೋರಾಟದ ಪರಿಯನ್ನು ಗರಡಿಯ ಸಾಮಿಗೆ ಹೋಲಿಸಿದ್ದಾರೆ ಮಾನ್ಯ ಗುಂಡಪ್ಪನವರು. ಗರಡಿಯ ಸಾಮನ್ನು ಮಾಡಿದ ಮಲ್ಲನಿಗೆ, ಮಲ್ಲ ಯುದ್ಧದಲ್ಲಿ ಹೋರಾಡಿದಾಗಲೆಲ್ಲಾ ಜಯ ಸಿಗುತ್ತದೆಂದು ಹೇಳಲಾಗುವುದಿಲ್ಲ. ಆದರೆ ಅವನು ಅದಕ್ಕಾಗಿ ಮಾಡುವ ಸಾಮಿನ ಸಿದ್ಧತೆಯಿಂದ ಅವನ ದೇಹದ ಅಂಗಾಂಗಗಳು ಗಟ್ಟಿಯಾಗುವುದರಲ್ಲಿ ಸಂದೇಹವೇ ಇಲ್ಲ, ಅಲ್ಲವೇ? ಹಾಗೆಯೇ ನಾವು ನಮ್ಮ ಬದುಕಿನ





ಹೋರಾಟಕ್ಕಾಗಿ ನಡೆಸುವ ಸಿದ್ಧತೆಯಿಂದ ನಮಗೆ ಅರಿವು ಉಂಟಾಗುತ್ತದೆ. ವಿಷಮ ಪರಿಸ್ಥಿತಿಗಳನ್ನು ಎದುರಿಸುವ ಧೈರ್ಯ ಮತ್ತು ಸಾಮರ್ಥ್ಯ ಎರಡೂ ಲಭಿಸುತ್ತದೆ. ತಾಳ್ಮೆಯಿಂದ ಹೋರಾಡಿದಾಗ, ಧೈರ್ಯದೊಂದಿಗೆ ವಿವೇಕವೂ ಹೆಚ್ಚುತ್ತದೆ, ಮನಸ್ಸು ಪಕ್ವವಾಗುತ್ತದೆ. ಇದೇ ಬದುಕಿನ ಹೋರಾಟಕ್ಕೆ ಸಲ್ಲುವ ಲಾಭ ಎನ್ನುವ ಅರ್ಥದಲ್ಲಿ "ಪರಿಶುದ್ಧ ಮನವೇ ವರ" ಎಂದು ಹೇಳಿದ್ದಾರೆ ಮಾನ್ಯ ಗುಂಡಪ್ಪನವರು.

ಮತ್ತೊಂದು ಸ್ವಾರಸ್ಯಕರ ದೃಷ್ಟಾಂತವನ್ನು ನೀಡುತ್ತಾ, ನಾವು ಪೂಜೆ ಮಾಡಿದಾಕ್ಷಣವೇ ನಮಗೆ ವರಸಿಗುವುದೇ? ಎಂದು ಕೇಳುತ್ತಾ, ಹಾಗಾಗುವುದಿಲ್ಲ ಎನ್ನುವ ಅರ್ಥದಲ್ಲಿ ಹೇಳಿದ್ದಾರೆ ಡಿ.ವಿ.ಜಿ ಯವರು. ನಾವು ಮಾಡುವ ಪೂಜೆಯೆಲ್ಲಾ ನಮ್ಮ ಬಯಕೆಗಳನ್ನು ಪೂರೈಸಿಕೊಳ್ಳುವುದಕ್ಕಾಗಿಯೇ. ಆದರೆ ಪೂಜೆ ಮಾಡಿದಾಕ್ಷಣ ವರ ಸಿಗುವುದೇ ಇಲ್ಲ. ಶ್ರದ್ಧೆಯಿಂದ ಪೂಜೆ ಮಾಡುವಾಗ ಮನಸ್ಸು ಪ್ರಫುಲ್ಲವಾಗುತ್ತದೆ. ಬೇಡಲೆಂದೇ ಮೊದಲಾದ ಪೂಜೆ, ಮನಸ್ಸನ್ನು ಪಕ್ವಗೊಳಿಸಿ, ಬೇಡಿಕೆಗಳ ಬದಿಗಿರಿಸಿ ಪರಮಾತ್ಮ ತತ್ವಕ್ಕೆ ಶರಣಾಗುವುದಕ್ಕೆ ಮನಸ್ಸನ್ನು ತಿರುಗಿಸುತ್ತದೆ. ವರ ಸಿಕ್ಕಿತೋ ಇಲ್ಲವೋ, ಮನಸ್ಸಂತೂ ಪಕ್ವವಾಯಿತಲ್ಲ. ಇದೇ ಪೂಜೆಗೆ ಸಿಕ್ಕ ಫಲವೆಂದು ತೃಪ್ತರಾಗಬೇಕು.

ಹಾಗೆಯೇ ಜಗತ್ತಿನಲ್ಲಿ ನಮ್ಮ ಬದುಕಿನಲ್ಲಿ ನಾವು ಪಡುವ ಪಾಡು, ಪ್ರಯತ್ನಗಳು, ಒಳಹೊಕ್ಕು ಹೊರಬರುವ ಕಷ್ಟಗಳ ಸರಮಾಲೆ, ನಮಗಾಗುವ ಅನುಭವಗಳು. ಆ ಅನುಭವಗಳಿಂದ ನಾವು ಕಲಿಯುವ ಪಾಠ, ಆ ಕಲಿಕೆಯಿಂದ

ಪಕ್ವವಾಗುವ ಮನಸ್ಸು ಬುದ್ಧಿಗಳು ಹೀಗೆ ಎಲ್ಲವೂ ಸೇರಿ ಸಮಗ್ರವಾಗಿ ನಮ್ಮನ್ನು ವಿವೇಕಿಗಳನ್ನಾಗಿ ತಿದ್ದಿ ರೂಪಿಸಿದರೆ ಮತ್ತು ನಾವು ವಿವೇಕಿಗಳಾದರೆ, ಅದೇ ನಾವು ಬದುಕಿನಲ್ಲಿ ಪಟ್ಟ ಬವಣೆಗೆ ಸಂದ ಫಲವೆಂದು ಅರಿತು ತೃಪ್ತಿಪಡಬೇಕು. ಸೋಲು-ಗೆಲುವುಗಳ ಮತ್ತು ಲಾಭ ನಷ್ಟಗಳ ಲೆಕ್ಕಾಚಾರದಿಂದ ಹೊರಬಂದು ವಾಸ್ತವವನ್ನು ಒಪ್ಪಿಕೊಂಡು ಶಾಂತವಾಗಿ ಬಾಳಲಾದರೆ, ಅದೇ ಸಿಗುವ ವರ ಅಥವಾ ಗೆಲುವಾಗುತ್ತದೆ.

**ಮುಕ್ತಕ – 597**

**ಬಿತ್ತ ಮಳೆಗಳವೋಲು ಯತ್ನ ದೈವಿಕ ನಮಗೆ |**
**ಯುಕ್ತದೊಳಗೆರಡುಮನುವಾಗೆ ಬೆಳೆ ಹುಲುಸು ||**
**ಯತ್ನ ಬಿಟ್ಟರೆ ಲೋಪ, ದೈವ ತಾಂ ಬಿಡೆ ತಾಪ |**
**ಗೊತ್ತಿಲ್ಲ ಫಲದ ಬಗೆ – ಮಂಕುತಿಮ್ಮ ||**

ಮಳೆಗಳವೋಲು=ಮಳೆಗಳ +ವೋಲು, ಯುಕ್ತದೊಳಗೆರಡುಮನುವಾಗೆ=ಯುಕ್ತದೊಳಗೆ+ಎರಡುಂ+ಅನುವಾಗೆ, ವೋಲು=ರೀತಿ, ಯುಕ್ತದೊಳಗೆ= ಆಗುವುದರಲ್ಲಿ, ಹುಲುಸು=ಸಮೃದ್ಧ, ಅನುವಾಗೆ=ಹೊಂದಿಕೊಂಡರೆ,

ಸಕಾಲಕ್ಕೆ ಬಿತ್ತುವ ಬೀಜ ಮತ್ತು ಬರುವ ಮಳೆಯಿಂದಾಗಿ ಬೆಳೆ ಬರಬೇಕು. ಸಕಾಲಕ್ಕೆ ಸರಿಯಾದ ಬೀಜವನ್ನು

ಬಿತ್ತುವುದು ನಮ್ಮ ಯತ್ನ, ಸಕಾಲಕ್ಕೆ ಸರಿಯಾದ ಹದದಲ್ಲಿ ಬರುವ ಮಳೆ, ದೈವ ಕೃಪೆಯಿಂದಾಗಬೇಕು. ನಮ್ಮ ಪ್ರಯತ್ನ ಮತ್ತು ದೈವ ಕೃಪೆಗಳು ಸೇರಿದರೆ ಬೆಳೆ ಹುಲುಸಾಗಿ ಬೆಳೆಯುತ್ತದೆ. ನಮ್ಮ ಪ್ರಯತ್ನವನ್ನು ಮಾಡದಿದ್ದರೆ, ಅದು ನಮ್ಮ ಕರ್ತವ್ಯ ಲೋಪ, ದೈವ ಕೃಪೆಯಾಗದಿದ್ದರೆ ದೈವ ಮುನಿಸಿಕೊಂಡಿದೆ ಎಂದೇ ತಿಳಿಯಬೇಕು. ಹಾಗಾಗಿ ನಮಗೆ ನಮ್ಮ ಕೆಲಸಕಾರ್ಯಗಳಿಗೆ ಸೂಕ್ತ ಫಲ ಸಿಗುವುದೋ ಇಲ್ಲವೋ ಎಂಬ ಅರಿವಿಲ್ಲ ಎಂದು, ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮಗೆ ಜೀವನದಲ್ಲಿ ಏನೇನೋ ಆಸೆಗಳು. ತೃಪ್ತಿಯೇ ಆಗುವುದಿಲ್ಲ. ಒಂದು ಆಸೆ ಪೂರೈಸಿದರೆ ಮತ್ತೊಂದು ಮೇಲೆ ಏಳುತ್ತದೆ. ಈ ಆಸೆಗಳ ಮಹಾಪೂರದ ಒರತೆ ಎಂದಿಗೂ ಬತ್ತುವುದೇ ಇಲ್ಲ. ಈ ಬತ್ತದ ಆಸೆಗಳನ್ನು ಪೂರೈಸಿಕೊಳ್ಳಲು ನಮ್ಮ ಅವಿರತ ಪ್ರಯತ್ನ, ಕೆಲವು ಆಸೆಗಳಿಗೆ ಫಲ ಸಿಗುತ್ತದೆ, ಬಹುತೇಕ ಆಸೆಗಳು ನಿರಾಸೆಯಲ್ಲಿಯೇ ಕೊನೆಗೊಳ್ಳುತ್ತವೆ. ಕಾರಣಗಳು ಹಲವಾರಿರಬಹುದು. ಪಟ್ಟ ಆಸೆಯೇ ತಪ್ಪಾಗಿರಬಹುದು, ಪ್ರಯತ್ನದ ಕೊರತೆಯಿರಬಹುದು, ನಾವು ಆ ರೀತಿಂಯ ಆಸೆಪಡಲು ಯೋಗ್ಯರಲ್ಲದೆ ಇರಬಹುದು, ಇವೆಲ್ಲವೂ ಸರಿಯಿದ್ದರೂ ನಮ್ಮ ವಿಧಿಗನುಸಾರವಾಗಿ ಆ ದೈವ ಕೃಪೆಯ ಕೊರತೆಯಾಗಿ ನಮ್ಮ ಆಸೆ ಫಲಿಸದೇ ಇರಬಹುದು. ಹೀಗಾಗಿ ನಾವು ಏನೇ ಆಸೆ ಪಟ್ಟರೂ ಫಲ ಸಿಗುವುದೋ ಇಲ್ಲವೋ ಎಂಬುದು ನಮಗೆ ಗೊತ್ತಿಲ್ಲ. ಇದನ್ನೇ ಮಾನ್ಯ ಗುಂಡಪ್ಪನವರು "ಗೊತ್ತಿಲ್ಲ ಫಲದ ಬಗೆ" ಎನ್ನುತ್ತಾರೆ.

ಸಕಾಲದಲ್ಲಿ ಸೂಕ್ತವಾದ ಬೀಜವನ್ನು ಬಿತ್ತಿದರೆ ಮತ್ತು ಅದಕ್ಕೆ ಪೂರಕವಾಗಿ ಮಳೆ ಬಿದ್ದರೆ ಬೀಜ ಮೊಳೆತು ಫಸಲು ಹುಲುಸಾಗಿ ಬೆಳೆಯುತ್ತದೆ. ಕಣ್ಣೋಟಕ್ಕೆ ಸರಿಯಾಗಿದೆ ಎಂದು ಅನ್ನಿಸುವ ಬೀಜ ಒಳಗಿನಿಂದ ಟೊಳ್ಳಾಗಿದ್ದರೆ ಅಥವಾ ಬೀಜ ಗಟ್ಟಿಯಾಗಿದ್ದು ಸಕಾಲಕ್ಕೆ ಸರಿಯಾದ ಪ್ರಮಾಣದಲ್ಲಿ ಮಳೆಯಾಗದಿದ್ದರೆ, ಬೆಳೆಯಾಗುವುದಿಲ್ಲ. ಆದರೆ ಇವೆರಡೂ ಸರಿಯಾಗಿರಬೇಕಾದರೆ ಪರಮಾತ್ಮನ ಕೃಪೆಯಿರಬೇಕು. ಹಾಗೆಯೇ ನಮ್ಮ ಆಸೆಗಳು ಫಲಿಸಬೇಕಾದರೂ, ನಾವೆಷ್ಟೇ ಸೂಕ್ತ ಪ್ರಯತ್ನಪಟ್ಟರೂ ಮಿಕ್ಕೆಲ್ಲಾ ಸ್ಥಿತಿಗಳೂ ಸೂಕ್ತವಾಗಿದ್ದರೂ, ಆ ದೈವ ಕೃಪೆಯೊಂದಿಲ್ಲದಿದ್ದರೆ ಬಯಸಿದ ಫಲ ಸಿಗುವುದಿಲ್ಲ. ಆಗ ಮನಸ್ಸಿಗೆ ನೋವಾಗುತ್ತದೆ. ಅಂತಹ ನೋವಿಂದ ಮುಕ್ತರಾಗಬೇಕಾದರೆ ಒಂದೇ ಮಾರ್ಗ,

ಮಾಡುವ ಕೆಲಸವನ್ನು ಕರ್ತವ್ಯವೆನ್ನುವಂತೆ ಮಾಡಿ, ಫಲಾಫಲಗಳಿಗೆ ಅಪೇಕ್ಷೆ ಪಡದೆ, ಮಾಡಿದ ಕೆಲಸವನ್ನು ಆ ದೈವಕ್ಕೆ ಸಮರ್ಪಿಸಿ, ಬಂದ ಫಲವನ್ನು ಆ ಪರಮಾತ್ಮನ ಪ್ರಸಾದವೆಂದು ಸ್ವೀಕರಿಸಿ ತೃಪ್ತಿಪಟ್ಟರೆ, ಸುಖ ನೆಮ್ಮದಿ.

ಹಾಗಿರುವುದು ಅಥವಾ ಇಲ್ಲದೆ ಇರುವುದು ನಮ್ಮ ನಮ್ಮ ಆಯ್ಕೆಗೆ ಬಿಟ್ಟದ್ದು, ಅಲ್ಲವೇ? ಯಾವ ಆಸೆ ಫಲಿಸುತ್ತದೆ ಮತ್ತು ಯಾವುದು ಫಲಿಸುವುದಿಲ್ಲ ಎಂಬುದು ದೈವ ರಹಸ್ಯ. ಅದನ್ನು ಭೇಧಿಸಲು ಪ್ರಯತ್ನಪಟ್ಟು ಬವಣೆಯನ್ನನುಭವಿಸುವ ಬದಲು ಆ ದೈವಕ್ಕೆ ಶರಣಾಗುವುದೇ ಲೇಸು.





**ಮುಕ್ತಕ – 598**

**ಬದುಕೊಂದು ಕದನವೆಂದಂಜಿ ಬಿಟ್ಟೋಡುವನು |**
**ಬಿದಿಯ ಬಾಯಿಗೆ ಕವಳವಾಗದುಳಿಯುವನೆ? ||**
**ಎದೆಯನುಕ್ಕಾಗಿಸುತ, ಮತಿಗದೆಯ ಪಿಡಿದು ನೀ- |**
**ನೆದುರು ನಿಲೆ ಬಿದಿಯೊಲಿವ ಮಂಕುತಿಮ್ಮ ||**

ಬದುಕೊಂದು=ಬದುಕು+ಒಂದು, ಕದನವೆಂದಂಜಿ=ಕದನವು+ಎಂದು+ಅಂಜಿ, ಬಿಟ್ಟೋಡುವನು=ಬಿಟ್ಟು+ಓಡುವನು, ಕವಳವಾಗದುಳಿಯುವನೆ=ಕವಳ+ಆಗದೆ+ಉಳಿಯುವನೆ? ಎದೆಯನುಕ್ಕಾಗಿಸುತ,=ಎದೆಯನು+ಉಕ್ಕು+ಆಗಿಸುತ, ಬಿದಿಯೊಲಿವ=ಬಿದಿ+ಒಲಿವ, ಕದನ=ಹೋರಾಟ, ಬಿದಿ=ವಿಧಿ, ಕವಳ=ಆಹಾರ, ಉಕ್ಕು=ಕಬ್ಬಿಣ, ಮತಿಗದೆ=ವಿವೇಕವೆಂಬ ಗದೆ, ಒಲಿವ=ಕಾಪಾಡುವ.

ಜೀವನವನ್ನು ಒಂದು ಕದನವೆಂದು, ಅದಕ್ಕೆ ಹೆದರಿ ಬಿಟ್ಟು ಓಡಿಹೋಗುವವನು, ವಿಧಿಯ ವಿನ್ಯಾಸದಿಂದ ಹೊರಗುಳಿಯಲು ಸಾಧ್ಯವೇ? ಹಾಗೆ ಹೆದರಿ ಹೋದರೆ, ವಿಧಿಯು ವಿಧಿಸಿದ ಕರ್ಮವ ಸವೆಸದೆ, ಈ ಬದುಕಿನಿಂದ ಹೋಗಲು ಸಾಧ್ಯವೇ? ಹಾಗಾಗಿ ಮನಸ್ಸಿನಲ್ಲಿ ಧೈರ್ಯವನ್ನು ತುಂಬಿಕೊಂಡು, ವಿವೇಕವನ್ನೇ ಆಯುಧವನ್ನಾಗಿಸಿಕೊಂಡು, ಬಂದದ್ದನ್ನೆಲ್ಲಾ ಎದುರಿಸುತ್ತೇನೆ ಮತ್ತು ಸಹಿಸುತ್ತೇನೆ ಎಂದು ಗಟ್ಟಿಯಾಗಿ ನಿಂತರೆ, ಭವ

ಸಾಗರವನ್ನು ಈಜಲು ನಮ್ಮ ಪ್ರಯತ್ನಕ್ಕೆ ಆ ವಿಧಿಯೂ ಸಹ ಸಹಾಯಮಾಡುತ್ತದೆ ಎಂದು, ನಮಗೆ ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಾವು ಬದುಕಿಗೆ ಒಂದು ರೂಪವನ್ನು ಹೊತ್ತು ಬಂದಿದ್ದೇವೆ ಎಂದರೆ, ನಮ್ಮ ಪೂರ್ವ ನಿರ್ಧಾರಿತ ಕರ್ಮಗಳನ್ನು ಹೊತ್ತು ತಂದಿದ್ದೇವೆ ಮತ್ತು ಅದನ್ನು ಸವೆಸಲು ಬದುಕಲೇ ಬೇಕು ಎಂದೇ ಅರ್ಥ. ನಮ್ಮ ಆಲೋಚನೆಗಳು, ಅದಕ್ಕನುಸಾರವಾಗಿ ನಮ್ಮ ಯೋಜನೆಗಳು, ಕಾರ್ಯಗಳು, ಸಾಧನೆಗಳು ಮತ್ತು ತತ್ಪರಿಣಾಮವಾಗಿ ಸಿಗುವ ಫಲಗಳು ಎಲ್ಲವೂ ಪೂರ್ವನಿರ್ಧಾರಿತ. ಆದರೆ, ವಿಧಿಯ ಕಾರ್ಯವಿಧಾನ ನಮಗೆ ಗೊತ್ತಾಗುವುದಿಲ್ಲವಾದ್ದರಿಂದ ಎಲ್ಲವೂ ನಮಗೆ ಹೊಸದಾಗಿ ಕಾಣುತ್ತದೆ. ಕೇವಲ ಕೆಲವರನ್ನು ಬಿಟ್ಟರೆ ಬಹುತೇಕ ಎಲ್ಲರ ಜೀವನವೂ ಒಂದು ಹೋರಾಟವೇ ಇದನ್ನು ಧೈರ್ಯದಿಂದ ಎದುರಿಸಬೇಕು. ಬಿಟ್ಟು ಹೋಗಲು ಸಾಧ್ಯವಿಲ್ಲ.

"ಬಿದಿಯ ಬಾಯಿಗೆ ಕವಳವಾಗದುಳಿಯುವನೆ" ಎಂದು ಹೇಳುತ್ತಾ ವಿಧಿಯ ವಿನ್ಯಾಸದಲ್ಲಿ ನಮಗಾಗಿ ಬರೆದ ಬರಹಗಳನ್ನು ನಾವು ಅನುಭವಿಸಿಯೇ ತೀರಬೇಕು, ಅನ್ಯಥಾ ದಾರಿಯೇ ಇಲ್ಲ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು. "ಈಸಬೇಕು ಈಸಿ ಜಯಿಸಬೇಕು" ಎಂದು ದಾಸರು ಹೇಳುವಂತೆ ಧೈರ್ಯದಿಂದ ಬಂದದ್ದನ್ನೆಲ್ಲಾ ಎದುರಿಸಬೇಕು. ವಿಧಿಲಿಖಿತ ಕರ್ಮವನ್ನು ಸವೆಸಲೇ ಬೇಕು. ಇಲ್ಲಿಗೆ ಬಂದ ಮೇಲೆ ಅದರಿಂದ ತಪ್ಪಿಸಿಕೊಂಡು ಪಲಾಯನ ಮಾಡುವುದು "ಸಮಸ್ಯೆಯನ್ನು ಮುಂದೂದುವುದಷ್ಟೇ" . ಎಂದಾದರೂ ಒಂದು ದಿನ ನಾವು ವಿಧಿಗೆ ಕವಳವಾಗಲೇಬೇಕೆಂದಮೇಲೆ ಇಂದೇ ಏಕೆ ಆಗಬಾರದು. ಕಷ್ಟವನ್ನು ಅನುಭವಿಸುವುದನ್ನು ಮುಂದೂಡುವುದಕ್ಕಿಂತ ಅನುಭವಿಸಿ ತೀರಿಸಿಬಿಡುವುದೇ ಲೇಸು.

ಹಾಗೆ ವಿಧಿಲಿಖಿತದಿಂದ ಪಲಾಯನ ಮಾಡದೆ "ಬಂದದ್ದೆಲ್ಲಾ ಬರಲಿ, ನೋಡಿಯೇ ಬಿಡುವ" ಎಂದು ಗಟ್ಟಿಯಾಗಿ, ಧೈರ್ಯದಿಂದ ಅನುಭವಿಸಲು ನಿಂತರೆ, ಆ ವಿಧಿಯು ಕರಗಿ ತಾನೇ ಒಡ್ಡಿದ ಸಮಸ್ಯೆಗಳನ್ನು ನಮಗೆ ಸಹಾಯ ಮಾಡುತ್ತಾನೆ. ನಮ್ಮ ಜೀವನದ ಗತಿ ವಿಧಿಯ ಅಧೀನವಾದ್ದರಿಂದ ಅವನನ್ನು ನಂಬಿ ಧೈರ್ಯದಿಂದ ಮುನ್ನುಗಿದರೆ ಸಮಸ್ಯೆಗಳೂ ತೀರುವುದು, ಬದುಕಿನಲ್ಲಿ ನೆಮ್ಮದಿಯೂ ಸಿಗುವುದು.
ಅನುಭವಿಸಿ ಸುಲಭವಾಗಿ ದಡ ಸೇರಲು,

**ಮುಕ್ತಕ – 599**

**ತಿರುಗಿಸಲಿ ವಿಧಿರಾಯನಿಷ್ಠೆಯಿಂ ಯಂತ್ರವನು |**
**ಚರಿಕೆ ತಾರಾಗ್ರಹಗಳಿಷ್ಟವೋದಂತೆ ||**
**ಪರಿಹಾಸದಿಂ ಕರ್ಮ ದೈವ ಕೇಕೆಗಳಿಡಲಿ |**
**ಸ್ಥಿರ ಚಿತ್ರ ನಿನಗಿರಲಿ - ಮಂಕುತಿಮ್ಮ ||**

ವಿಧಿರಾಯನಿಚ್ಚೆಯಿಂ=ವಿಧಿರಾಯನ+ಇಚ್ಛೆಯಿಂ, ತಾರಾಗ್ರಹಗಳಿಷ್ಟವೋದಂತೆ=ತಾರ+ಗ್ರಹಗಳ+ಇಷ್ಟ+ವೋದಂತೆ, ಕೇಕೆಗಳಿಡಲಿ=ಕೇಕೆಗಳ+ಇಡಲಿ, ನಿನಗಿರಲಿ =ನಿನಗೆ ಇರಲಿ ವಿಧಿರಾಯ= ನಿಯಂತ್ರಕ, ಚರಿಕೆ=ಚಲನೆ, ಪರಿಹಾಸ=ಕುಹಕ, ಸ್ಥಿರ ಚಿತ್ರ = ದೃಢ ಮನಸ್ಸು.

ನಿನ್ನ ನಿಯಂತ್ರಿಸುವ ಆ ವಿಧಿರಾಯನು, ತನ್ನ ಇಚ್ಛೆಯಂತೆ ನಿನ್ನ ಬದುಕಿನ ಚಕ್ರವನ್ನು ಹೇಗಾದರೂ ತಿರುಗಿಸಲಿ ಮತ್ತು ನಿನ್ನ ಜಾತಕದ ರೀತ್ಯಾ, ನಕ್ಷತ್ರ, ಗ್ರಹಗಳು ನಿನ್ನ ಬದುಕಿನ ಗತಿಯನ್ನು ಬದಲಾಯಿಸುತ್ತಾ ಇರಲಿ, ನಿನ್ನ ಕರ್ಮಕ್ಕೆ ನಿಯಂತ್ರಕರಾದ ದೇವತೆಗಳು ಅಟ್ಟಹಾಸದಿಂದ ಅಥವಾ ಪರಿಹಾಸದಿಂದ "ನೋಡಿದೆಯಾ ಇವನನ್ನು ಹೇಗೆ ಆಡಿಸುತ್ತಿದ್ದೇವೆ" ಎಂದು ಕುಹಕದ ನಗೆ ನಗಲಿ, ಏನೇ ಆದರೂ ನಿನ್ನ ಮನಸ್ಸು ದೃಢವಾಗಿರಲಿ, ವಿಚಲಿತವಾಗದೆ ಇರಲಿ ಎಂದು, ಒಂದು ಉಪದೇಶವನ್ನು ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಮುಕ್ತಕ 366ರಲ್ಲಿ "ಗ್ರಹಗತಿಯ ತಿದ್ದುವನೆ ಜೋಯಿಸನು?" ಎಂದು ಒಂದು ಪ್ರಶ್ನೆಯನ್ನು ಕೇಳಿ "ಸಹನೆ ವಜ್ರದ ಕವಚ" ಎಂಬ ಪರಿಹಾರವನ್ನೂ ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು, "ಬ್ರಹ್ಮಾಂಡವೇ ಆ ದೇವನಾಡುವ

ಬೊಂಬೆಯಾಟವಯ್ಯಾ" ಎಂದಿದ್ದಾರೆ ಪುಣ್ಯಾತ್ಮರು. ನಾವೆಲ್ಲಾ ನಮ್ಮನ್ನಾಡಿಸುವ ಆ ವಿಧಿರಾಯನ ಕೈಗೊಂಬೆಗಳು. ನಮ್ಮ ಜೀವನ ಅವನಿಚ್ಛೆಯಂತೆ ನಡೆಯಬೇಕು. ಅಷ್ಟೇ ಅಲ್ಲ ಈ ಜಗತ್ತಿನ ಆಗುಹೋಗುಗಳಿಗೆ ಕಾರಣವಾದ ನಕ್ಷತ್ರ ಗ್ರಹಗಳ ಚಲನೆಯೂ ಸಹ, ನಮ್ಮ ಜೀವನದ ಗತಿಯಲ್ಲೊಂದು ಪಾತ್ರ ವಹಿಸುತ್ತದೆ. ಆದರೆ, ಅವು ಹೇಗೆ ಕೆಲಸ ಮಾಡುತ್ತವೆ ಅಥವಾ ಅವು ಹೀಗೇ ಏಕೆ ಕೆಲಸ ಮಾಡುತ್ತವೆ. ಎಂದು ನಮಗೆ ಅರ್ಥವಾಗುವುದಿಲ್ಲವಾದ್ದರಿಂದ, ಈ ವಿಧಿ ಮತ್ತು ನಮ್ಮ ಗ್ರಹಚಾರ ನಮ್ಮನ್ನು ಆಡಿಸುತ್ತದೆ ಎಂದು ನಮಗೆ ಅನಿಸುತ್ತದೆ. ಆ ಆಟವನ್ನೂ ನಾವೇ ಪಡೆದುಕೊಂಡು ಬಂದದ್ದಲ್ಲವೇ?

(184)

ಕಗ್ಗರಸಧಾರೆ ಬ್ರಹ್ಮ ನಾಯಕ 599 – 602

ಕೆಲವರಿಗೆ ಜೀವನ ಸುಗಮವಾಗಿರುತ್ತದೆ. ಕೆಲವರು ಕಷ್ಟಗಳ ಸರಮಾಲೆಗಳನ್ನೇ ಹಾಕಿಕೊಂಡು ಬಂದಿರುತ್ತಾರೆ. ಕೆಲವರು ಮುಟ್ಟಿದ್ದೆಲ್ಲ ಚಿನ್ನ, ಕೆಲವರು ಮುಟ್ಟಿದ್ದೆಲ್ಲಾ ಮಣ್ಣು, ಕೆಲವರಿಗೆ ತಾಳುವ ಶಕ್ತಿಯಿರುತ್ತದೆ, ಕೆಲವರಿಗದಿರುವುದಿಲ್ಲ. ಇದಕ್ಕೆಲ್ಲಾ ಆ ವಿಧಿರಾಯನ ವಿನ್ಯಾಸವೇ ಕಾರಣ. "ಆದರೆ ನಮ್ಮ ಬದುಕಿನಲ್ಲಿ ನಮ್ಮ ಪಾತ್ರವೇ ಇಲ್ಲವೇ?" ಎಂದು ಒಂದು ಪ್ರಶ್ನೆ. ಖಂಡಿತ ನಮಗೆ ಒಂದು ಪಾತ್ರವಿದೆ. ಆ ವಿಧಿರಾಯನೊಡ್ಡಿದ ಎಲ್ಲಕ್ಕೂ ತಲೆಬಾಗಿ ಅನುಭವಿಸುವುದೇ ನಮ್ಮ ಕರ್ತವ್ಯ. ಸಹನೆಯಿಂದ ಅನುಭವಿಸಬೇಕು. ಅನುಭವಿಸಿಯೇ ತೀರಿಸಬೇಕು. ಅಡ್ಡದಾರಿಗಳು ಇಲ್ಲವೇ ಇಲ್ಲ. ಬದುಕಿನಲ್ಲಿ ಸುಖವೂ ಶಾಶ್ವತವಲ್ಲ ದುಃಖವೂ ಶಾಶ್ವತವಲ್ಲ, ಎಲ್ಲವೂ "ಬಂದು-ಹೋಗುವ" ಬದುಕಿನ ಅಂಕ (scenes)ಗಳೇ. ಪಾತ್ರವನ್ನು ಧರಿಸಿದ್ದೇವೆ, ಸಂಪೂರ್ಣವಾಗಿ ನಟಿಸಿ ಹೋಗಬೇಕು, ಅದೂ ಸಹ ಸೂತ್ರದಾರನ ಇಚ್ಚೆಯಂತೆ.

ಹಾಗೆ ವಿಧಿ ನಿಗಧಿಪಡಿಸಿದ ಬದುಕನ್ನು ಅನುಭವಿಸುವಾಗ, 'ತಾಳ್ಮೆ'ಯಿಂದ ಅನುಭವಿಸಿದರೆ ಒಳ್ಳೆಯದು. ಗೋಳಾಡುತ್ತಾ, ಪರದಾಡುತ್ತಾ, ನಮ್ಮ ಗ್ರಹಚಾರವನ್ನು ದೂಷಿಸುತ್ತಾ ಬದುಕಿದರೆ ನಮ್ಮ ಮನಸ್ಸಿಗೆ ಕ್ಲೇಷೆ ಬಿಟ್ಟರೆ ಮತ್ತೇನೂ ಲಾಭವಿಲ್ಲ. ಅದನ್ನು ಬಿಟ್ಟು, "ಸ್ಥಿರ ಚಿತ್ತ" ದಿಂದ ಬಂದದ್ದನ್ನೆಲ್ಲಾ ತಾಳ್ಮೆಯಿಂದ ಅನುಭವಿಸಿದರೆ, ಸುಖ

ದುಃಖಗಳ ಪ್ರಭಾವದಿಂದ ಮುಕ್ತರಾಗಿ, ಶಾಂತವಾಗಿ ಜೀವನವನ್ನು ಸಾಗಿಸಬಹುದು. ಕೇಶಬೇಡವೆಂದರೆ, ತಾಳ ಬೇಕು. ತಾಳಿದರೆ ಬಾಳಬಹುದು. ತಾಳಲಾಗದಿದ್ದರೆ ಗೋಳಬಹುದು. ಆಯ್ಕೆ ನಮ್ಮದೇ ಅಲ್ಲವೇ?

**ಮುಕ್ತಕ – 600** **ಬದುಕು ಜಟಕಾಬಂಡಿ, ವಿಧಿಯದರ ಸಾಹೇಬ ।**
**ಕುದುರೆ ನೀನ್, ಅವನು ಪೇಳ್ವಂತೆ ಪಯಣಿಗರು ॥**
**ಮದುವೆಗೋ ಮಸಣಕೋ ಹೋಗೆಂದ ಕಡೆಗೋಡು ।**
**ಪದ ಕುಸಿಯೆ ನೆಲವಿಹುದು - ಮಂಕುತಿಮ್ಮ ॥**

ಕೆಡೆಗೋಡು=ಕಡೆಗೆ+ಓಡು, ನೆಲವಿಹುದು=ನೆಲವು+ಇಹುದು.

ಒಂದು ಕುದುರೆಯನ್ನು ಕಟ್ಟಿ ಎಳೆಯಲ್ಪಡುವ, ನಾಲ್ಕು ಜನ ಕುಳಿತುಕೊಳ್ಳಬಹುದಾದ ಬಂಡಿಗೆ, "ಜಟಕಾ" ಎಂದು ಕರೆಯುತ್ತಿದ್ದರು. ಆ ಕಾಲಕ್ಕೆ ಸಾಮಾನ್ಯವಾಗಿ ಮುಸ್ಲಿಮರು ಅದನ್ನು ಓಡಿಸುವ ಕೆಲಸದಲ್ಲಿ ತಮ್ಮನ್ನು ಅಧಿಕವಾಗಿ ತೊಡಗಿಸಿಕೊಳ್ಳುತ್ತಿದ್ದರು. ಹಾಗಾಗಿ ಅದನ್ನು ಓಡಿಸುವವರಿಗೆ 'ಸಾಹೇಬ' ಎಂದು ಕರೆಯುತ್ತಿದ್ದರು. ಅವರು ಅಪಭ್ರಂಶವಾಗಿ "ಜಟಕಾ ಸಾಬಿ" ಎಂದೂ ಸಂಬೋಧಿಸಲ್ಪಡುತ್ತಿದ್ದರು.

ಇದನ್ನೇ ಒಂದು ದೃಷ್ಟಾಂತವಾಗಿ ಇಟ್ಟುಕೊಂಡು, ನಮ್ಮ ಬದುಕೇ ಒಂದು ಜಟಕಾ ಬಂಡಿ, ಅದನ್ನೆಳೆದುಕೊಂಡು ಹೋಗುವ ನಾವೇ ಕುದುರೆಗಳು, ಈ ಬದುಕೆಂಬ ಜಟಕಾ ಬಂಡಿಯನ್ನು ಓಡಿಸುವವನೇ ವಿಧಿ, ಎಂದರೆ

ಪರಮಾತ್ಮ. ಬಂಡಿಗೆ ಕಟ್ಟಿದ ಕುದುರೆಗೆ ಆ ಬಂಡಿ ಓಡಿಸುವವನು ಹೇಳಿದಲ್ಲಿಗೆ ಹೋಗಬೇಕು. ಅದು ಮದುವೆಗಾದರೂ ಆಗಬಹುದು ಅಥವಾ ಸ್ಮಶಾನಕ್ಕಾದರೂ ಆಗಬಹುದು. ಬದುಕೆಂಬ ಜಟಕಾ ಬಂಡಿಯನ್ನು ಎಳೆಯುವ ಕುದುರೆಗಳಾದ ನಮಗೆ, ಬದುಕ ಬಂಡಿಯನ್ನು ಎಳೆದೂ ಎಳೆದೂ ಸುಸ್ತಾಗಿ ಕಾಲು ಸೋತು ಕುಸಿದರೆ ವಿಶ್ರಮಿಸಿಕೊಳ್ಳಲು ನೆಲವುಂಟು ಎಂದು ಬದುಕಿನ ಓಟದ ಸತ್ಯವನ್ನು ನಮ್ಮ ಮುಂದಿಟ್ಟಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮನಸ್ಸು, ಬುದ್ಧಿ, ದೇಹಾತ್ಮ ಸಂಗಮದಿಂದ ಆದ ನಮ್ಮ ಅಸ್ತಿತ್ವಕ್ಕೆ, ಹುಟ್ಟಿದಾರಭ್ಯ ಸಾಯುವ ತನಕ ಬದುಕಿನ ಓಟ, ಈ ಓಟದ ದಿಶೆ ಮತ್ತು ದಿಕ್ಕನ್ನು ನಿರ್ದೇಶಿಸುವವನು ಆ ಪರಮಾತ್ಮ ಅಥವಾ ವಿಧಿ. ನಾವು ಹೋಗುವ ಸ್ಥಳವನ್ನು ದಿಗ್ದರ್ಶಿಸುವವನೂ ಸಹ ಆ ಪರಮಾತ್ಮನೇ. ಹಾಗಾಗಿ ಅವನು ಎಲ್ಲಿಗೆ ಹೋಗೆಂದರೆ ಅಲ್ಲಿಗೆ ಹೋಗುವುದಷ್ಟೇ ನಮ್ಮ ಕರ್ತವ್ಯ. ಬೇರೆ ದಾರಿಯೂ ಇಲ್ಲ. ಹಾಗೆ ಓಡಿ ಓಡಿ, ನಡೆದು, ಸುಸ್ತಾದಾಗ, ಮುಂದೆ ನಡೆಯಲಾಗದೆ ಕಾಲು ಕುಸಿದಾಗ, ಬದುಕಿನ ಓಟ ಅಂತ್ಯಗೊಂಡಾಗ, ನಮಗೆ ಆಸರೆಯಾಗಿ ನೆಲವು ಇರುತ್ತದೆ. ಎಂದರೆ ಬದುಕಿನ ಓಟ ನಿಂತಾಗ ನಮ್ಮನ್ನು ಹೂಳಲು 'ಆರಡಿ ಮೂರಡಿ' ನೆಲವೋ ಅಥವಾ ದಹನ ಕ್ರಿಯೆಗೆ ಒಂದಿಷ್ಟು ಸ್ಥಳವೋ ಇದ್ದೇ ಇರುತ್ತದೆ ಎನ್ನುತ್ತಾರೆ 'ಪದ ಕುಸಿಯೆ ನೆಲವಿಹುದು' ಎನ್ನುತ್ತಾ ಮಾನ್ಯ ಗುಂಡಪ್ಪನವರು.

ಒಳ್ಳೆಯದಕ್ಕೋ (ಮದುವೆಗೋ) ಕೆಟ್ಟದ್ದಕ್ಕೂ (ಮಸಣಕೋ) ಒಟ್ಟಾರೆ ನಮ್ಮ ಜೀವನದ ಗತಿ ಆ ಪರಮಾತ್ಮನ ಆಣತಿಯಂತೆ ನಡೆಯುತ್ತದೆ. ಇದು ತತ್ವ ಇದ್ದನ್ನರಿತು, ಪುರಂದರ ದಾಸರು 'ನಾನು ಎಂಬುದ ಬಿಟ್ಟು ಜ್ಞಾನಿಗಳೊಳಗೂಡಿ ಏನೆಲ್ಲಕೆ ದೇವ ಪ್ರೇರಣೆಯೆಂದು' ಎಂದು ಹೇಳುವಂತೆ, ದೈವದ ನಿರ್ದೇಶನದಂತೆ ನಡೆಯಬೇಕು. ನಮ್ಮ ಅಹಂಕಾರವನ್ನು ತೊರೆದು, ತಾಳ್ಮೆಯಿಂದ ಎಲ್ಲವನ್ನೂ ಅನುಭವಿಸುತ್ತಾ, ಬದುಕಿನ ಹಾದಿಯಲ್ಲಿ ನಮಗೆ ಸಿಕ್ಕದ್ದನ್ನು ಆ ಪರಮಾತ್ಮನ ಪ್ರಸಾದವೆಂದು ಬಗೆದು ತೃಪ್ತಿಯಿಂದ ಬಾಳಿದರೆ, ಕಷ್ಟವಾಗಲಿ, ಸುಖವಾಗಲಿ, ನೆಮ್ಮದಿಯ ಶಾಂತ ಜೀವನ ನಮ್ಮದಾಗುತ್ತದೆ, ಎನ್ನುವುದೇ ಈ ಮುಕ್ತಕದ ಹೂರಣ.

**ಮುಕ್ತಕ – 601** **ಇರುವ ಕೆಲಸವ ಮಾಡು ಕಿರಿದೆನದೆ ಮನವಿಟ್ಟು |**
**ದೊರೆತುದು ಹಸಾದವೆಂದುಣ್ಣು ಗೊಣಗಿಡದೆ ||**
**ಧರಿಸು ಲೋಕದ ಭಾರವ ಪರಮಾರ್ಥವನು ಬಿಡದೆ |**
**ಹೊರಡು ಕರೆ ಬರಲ್ ಅಳದೆ - ಮಂಕುತಿಮ್ಮ ||**

ಕಿರಿದೆನದೆ=ಕಿರಿದು+ಎನದೆ, ಮನವಿಟ್ಟು=ಮನವ+ಇಟ್ಟು, ಹಸಾದವೆಂದುಣ್ಣು=ಹಸಾದ+ಎಂದು+ಉಣ್ಣು, ಗೊಣಗಿಡದೆ=ಗೊಣಗು=ಇಡದೆ, ಕಿರಿದು=ಸಣ್ಣದು, ಹಸಾದ=ಪ್ರಸಾದ





ಬದುಕಿನಲ್ಲಿ ನಿನಗೆ ಸಿಕ್ಕ ಕೆಲಸವನ್ನು "ಇದು ಸಣ್ಣದು- ಇದು ಸರಿಯಲ್ಲ" ಎನ್ನದೆ ಮನವಿಟ್ಟು ಮಾಡು ಮತ್ತು ಆ ಕೆಲಸದಿಂದ ನಿನಗೆ ದೊರೆತ ಫಲವನ್ನು ಗೊಣಗಾಡದೆ, ಆ ಪರಮಾತ್ಮನ ಪ್ರಸಾದವೆಂದು ಬಗೆದು ಸ್ವೀಕರಿಸು. ನಿನ್ನ ಮೇಲೆ ಹೊರಿಸಿದ ಲೋಕದ ಭಾರದ ಭಾಗವನ್ನು ಭರಿಸುವಾಗ ಪಾರಮಾರ್ಥಿಕ ಭಾವವನ್ನು ಬಿಡದೆ ಬದುಕಿ, ಅಂತಕನ ಕರೆ ಬಂದಾಗ ಅಳದೆ, ಬೇಸರಿಸದೆ ಹೊರಡು ಎಂದು, ಬದುಕನ್ನು ಹೇಗೆ ಬಾಳಬೇಕು ಎನ್ನುವ ಉಪದೇಶವನ್ನು ನೀಡುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಪ್ರತಿಯೊಬ್ಬರೂ ಈ ಬದುಕಿನಲ್ಲಿ, ನಮಗರ್ಥವಾಗದ ವಿಧಿಯ ವಿನ್ಯಾಸದ ಪ್ರಕಾರ ನಮಗೆ ದೊರೆತ ಕೆಲಸವನ್ನು ಮಾಡುತ್ತಲೇ ಇರಬೇಕು. ಇದು ಸಣ್ಣದು, ಇದು ದೊಡ್ಡದು, ಎಂಬ ಭಾವವನ್ನು ಬಿಟ್ಟು ನಮಗೆ ದೊರೆತ ಕೆಲಸವನ್ನು ಮಾಡಲೇ ಬೇಕು. ಅನ್ಯಥಾ ದಾರಿ ಇಲ್ಲ. ಹಾಗೆ ಕೆಲಸ ಮಾಡುವುದರಿಂದ ನಮಗೆ ಲಭಿಸುವ ಫಲವನ್ನು "ಇದು ಹೆಚ್ಚು- ಇದು ಕಡಿಮೆ" ಎನ್ನುವ ಭಾವದಿಂದ ಅಲ್ಲದೆ, ಇದು ನಮಗೆ ಸಿಕ್ಕ ಆ ಪರಮಾತ್ಮನ ಪ್ರಸಾದವೆಂದು

ಬಗೆದು ಸ್ವೀಕರಿಸಬೇಕು. ಅಷ್ಟೇ ಅಲ್ಲ, ಆ ಜಗತ್ತಿನಲ್ಲಿ ನಮ್ಮ ಪಾತ್ರ ಮುಗಿದು ಹೊರಡುವ ಸಮಯ ಬಂದಾಗ, ಗೋಳಾಡದೆ ಹೊರಡಬೇಕು ಎನ್ನುವುದೇ ಈ ಮುಕ್ತಕದ ಹೂರಣ.

ಆದರೆ ಹೀಗೆ ಇರುವುದು ಎಲ್ಲರಿಗೂ ಸಾಧ್ಯವೇ? ಎಂದರೆ ಸಾಧ್ಯ. ನಾವು ಈ ಬದುಕಿಗೆ ಬಂದಿದ್ದೇವೆ, ಆ ವಿಧಿರಾಯ, ನಮಗೆ ನಾವು ಇಲ್ಲಿರುವ ತನಕ ನಮಗೊಂದು ಕೆಲಸವನ್ನಿತ್ತಿದ್ದಾನೆ. ಅದನ್ನು ನಿಷ್ಠೆಯಿಂದ ಮತ್ತು ಸಂತೋಷದಿಂದ ನಿರ್ವಹಿಸುವುದೇ ನಮ್ಮ ಕರ್ತವ್ಯ ಎಂದು ಅರಿವು ಮೂಡಿ, ನಾವು ಈ ಬದುಕಿಗೆ ಅಂಟದೆ ಬದುಕಿದರೆ, "ಇದು ನಮ್ಮದು, ಅಯ್ಯೋ ಇದನ್ನು ಬಿಟ್ಟು ಹೇಗೆ ಹೋಗುವುದು" ಎನ್ನುವಂಥಾ ಪ್ರಾಕೃತ ಭಾವದಿಂದ ಮುಕ್ತರಾಗಿ ಜಗತ್ತಿಗೆ ಬಂದು ಹೋಗುತ್ತಿರಬಹುದು. ಅದನ್ನು ಬಿಟ್ಟು ಇದನ್ನು ನಾನು ಮಾಡುತ್ತಿದ್ದೇನೆ, ನಾನು ಸಾಧಿಸಿದ್ದೇನೆ, ಇದು ನನ್ನದೇ ಶ್ರಮದ ಫಲ, ನಾನು ಹಾಗೆ, ನಾನು ಹೀಗೆ, ನಾನೇ ಸರಿ' ಎನ್ನುವ 'ನಾನತ್ವದ ಭಾವದಿಂದ ಈ ಜಗತ್ತಿಗೆ ಅಂಟಿಕೊಂಡು ಬಿಟ್ಟರೆ 'ಗಾಯದ ಮೇಲೆ ಅಂಟಿಸಿದ ಪಟ್ಟಿ ' (bandage)'ಯನ್ನು ಗಾಯ ಮಾಗುವವರೆಗೆ ಹೇಗೆ ತೆಗೆಯಲಾಗುವುದಿಲ್ಲವೋ ಹಾಗೆ ಈ ಜಗತ್ತಿನ ಅಂಟಿಂದ ಬಿಡಿಸಿಕೊಳ್ಳಲಾಗುವುದಿಲ್ಲ.

ಈ ಬಾಳು, ಆ ಪರಮಾತ್ಮನ ಕೊಡುಗೆ, ಇಲ್ಲಿ ನಾವು ಮಾಡುವುದೆಲ್ಲವೂ ಆ ವಿಧಿಯ ನಿಯಮದಂತೆ, ನಮಗೆ ಸಿಗುವುದೆಲ್ಲವೂ ಆ ಪರಮಾತ್ಮನ ಪ್ರಸಾದ, ಈ ಪ್ರಪಂಚ ನಮ್ಮದಲ್ಲ, ಇದನ್ನು ನಾವು ಎಂದಾದರೂ ಒಂದು ದಿನ ಬಿಟ್ಟು ಹೋಗಲೇಬೇಕು ಎಂದಾದಮೇಲೆ ಬಿಡುವಾಗ ನಾವು ದುಃಖಿಸಬಾರದು ಎಂದು ಅರಿತುಕೊಂಡು ಬಾಳಿದರೆ, ಬಾಳುವಾಗ ಮತ್ತು ಈ ಬಾಳನ್ನು ತೊರೆಯುವಾಗಲೂ ನೆಮ್ಮದಿಯಾಗಿ ಇರಬಹುದು. ಇದು ಎಲ್ಲರಿಗೂ ಸಾಧ್ಯ. ಪ್ರಯತ್ನ ಪಡಬೇಕು ಅಷ್ಟೇ. ವಿರಕ್ತ ಭಾವದಿಂದ ಅಂಟಿಕೊಂಡಿರಬೇಕು. ಇದ್ದೂ ಇಲ್ಲದಂತಿರಬೇಕು. ಹಾಗಿದ್ದರೆ ಸುಖ. ಹಾಗಿದ್ದರೆ ನೆಮ್ಮದಿ.

**ಮುಕ್ತಕ – 602** **ಮಾಯೆಯೆಂಬಳ ಸೃಜಿಸಿ, ತಾಯನಾಗಿಸಿ ಜಗಕೆ |**
**ಆಯಸಂಗೊಳುತ ಸಂಸಾರಿಯಾಗಿರುವಾ ||**
**ನಾಯಕ ಬ್ರಹ್ಮನ್ ಅನುಯಾಯಿಗಳು ನಾವೆಲ್ಲ |**
**ಹೇಯವದರೊಳಗೇನೊ - ಮಂಕುತಿಮ್ಮ ||**

ಮಾಯೆಯೆಂಬಳ=ಮಾಯೆ+ಎಂಬಳ, ತಾಯನಾಗಿಸಿ=ತಾಯನು+ಆಗಿಸಿ, ಸಂಸಾರಿಯಾಗಿರುವಾ=ಸಂಸಾರಿ+ಆಗಿರುವಾ, ಹೇಯವದರೊಳಗೇನೊ=ಹೇಯವು+ಅದರೊಳಗೆ+ಏನೋ, ಆಯಸಂಗೊಳುತ= ಆಯಾಸಗೊಳ್ಳುತ್ತಾ, ಹೇಯವು=ಹೀನಾಯ ಅಥವಾ ಅಸಹ್ಯ.

"ಸುಮ್ಮನೊಬ್ಬಂಟಿಯೆಂತಿಹುದು, ಹೊಮ್ಮುವನು ಕೋಟಿರೂಪದಲಿ ನಾನು" ಎಂದು ಆ ಪರಬ್ರಹ್ಮ ಎಣಿಸಿದನಂತೆ "ಆ ಏಳಸಿಕೆಯೇ ಮಾಯೆ" ಎಂದು ಗುಂಡಪ್ಪನವರು ಮುಕ್ತಕ 74ರಲ್ಲಿ ಬರೆಯುತ್ತಾರೆ. ಅದನ್ನೇ ಮುಂದುವರೆಸುತ್ತಾ ಈ ಮಾಯೆಯನ್ನು ಸೃಷ್ಟಿಸಿ, ಅದನ್ನು ಆ ಜಗತ್ತಿಗೆ ತಾಯಿಯಾಗಿಸಿ, ತಂದೆಯ ರೂಪದಲಿ ಆ ಪರಮಾತ್ಮ, ಜಗತ್ಸಂಸಾರಿಯಾಗಿದ್ದಾನೆ. ನಾವೆಲ್ಲಾ ಅವನ ಈ ಮಾಯಾ ಸಂಸಾರದ ವಾಸಿಗಳು ಮತ್ತು ಅವನ ಅನುಯಾಯಿಗಳು, ಹಾಗಿರುವಾಗ ಈ ಜಗತ್ತಿನಲ್ಲಿ ಇದ್ದೂ ಈ ಜಗತ್ತನ್ನು ಅಸಹ್ಯಪಟ್ಟುಕೊಳ್ಳುವುದು ಸರಿಯೇನೋ? ಎಂದು ಒಂದು ಪ್ರಶ್ನೆಯನ್ನು ನಮ್ಮ ಮುಂದಿಟ್ಟಿದ್ದಾರೆ.

ಈ ಜಗತ್ತಿನ ಮಾಯಾವಿಲಾಸದ ನಾಟಕದ ಪಾತ್ರಧಾರಿಗಳಾದ ನಾವು, ವಿಧಿಸಿದ ಪಾತ್ರವನ್ನು ನಿರ್ವಹಿಸಲೇ ಬೇಕು. ಅಸಹ್ಯ ಪಟ್ಟುಕೊಳ್ಳುವುದರಲ್ಲಿ ಅರ್ಥವೇ ಇಲ್ಲ. ನಾವು ಮಾಡುವ ಪ್ರತೀ ಕೆಲಸವೂ, ನಾವು ಆಸೆಯಿಂದ ವಿಷಯ ವಸ್ತು ಮತ್ತು ವ್ಯಕ್ತಿಗಳಿಗೆ ಅಂಟಿಕೊಂಡಿರುವುದರಿಂದಷ್ಟೇ ನಡೆಯುತ್ತದೆ. ನಮ್ಮ ಮನಸ್ಸುಗಳಲ್ಲಿ ಆಸೆಯು, ಪಂಚ ಸ್ಪರ್ಶೇಂದ್ರಿಯಗಳು ಮತ್ತು ಪಂಚ ಜ್ಞಾನೇಂದ್ರಿಯಗಳ ಮೂಲಕ. ಉಂಟಾಗುತ್ತದೆ. ಹಾಗೆ ಉಂಟಾದ ಆಸೆಯೇ ನಮ್ಮನ್ನು ಕಾರ್ಯ ಪ್ರವೃತ್ತರನ್ನಾಗಿಸುತ್ತದೆ. ಈ ಇಂದ್ರಿಯಗಳನ್ನು ಪ್ರಚೋದಿಸುವುದು, ಮಾಯೆಯಿಂದ ಕೂಡಿದ ಪ್ರಕೃತಿ. ಹಾಗಾಗಿ ನಮ್ಮೆಲ್ಲಾ ಕಾರ್ಯ ಕಲಾಪಗಳಿಗೆ, ಭಾಷೆ ಭಾವಗಳಿಗೆ ನಮಗರ್ಥವಾಗದ ಮಾಯೆಯೇ ಕಾರಣ. ಈ ಮಾಯೆ, ನಮ್ಮನ್ನು ತನ್ನ ಸೆಳೆತಕ್ಕೆ ಎಳೆದುಕೊಂಡು ಈ ಜಗತ್ತಿಗೆ ಅಂಟಿಸಿಬಿಟ್ಟಿದೆ. ಅದು ತನ್ನ ಕೆಲಸವನ್ನು ಹೇಗೆ ಮಾಡುತ್ತದೆ ಎಂದು ನಮಗೆ ಅರಿವಾಗುವುದೇ ಇಲ್ಲ. ಹಾಗಾಗಿ ಅದು ಮಾಯೆ.

ನಮ್ಮ ಅಸ್ತಿತ್ವಕ್ಕೆ ನಮ್ಮ ತಾಯಿ ಹೇಗೆ ಮೂಲವೋ ಹಾಗೆಯೇ ಈ ಜಗತ್ತಿಗೆ ಮೂಲವಾಗಿ ತಾಯಿಯ ಸ್ಥಾನದಲ್ಲಿರುವುದು 'ಮಾಯೆ', ನಾವೆಲ್ಲಾ ಈ ಮಾಯಾಪೂರಿತ ಜಗತ್ತಿನ ಪಾತ್ರಗಳು. ಈ ಮಾಯೆಯ ಮೂಲಕ ನಮ್ಮ ಪಾತ್ರಗಳನ್ನೂ ರಚಿಸಿ, ಪರಮಾತ್ಮ ಈ ಜಗತ್ತಿನ ನಾಟಕವನ್ನು ಆಡಿಸುತ್ತಿದ್ದಾನೆ. ಅವನ ಈ ಆಟದಲ್ಲಿ ನಾವೆಲ್ಲಾ ಆಟಕರು' ಅಥವಾ ಪಾತ್ರಧಾರಿಗಳು. ಅವನು ನಾಯಕ, ನಾವೆಲ್ಲಾ ಅನುಯಾಯಿಗಳು. ಅವನ ದೈವೀ ವಿನ್ಯಾಸದ ರೀತ್ಯಾ ನಾವೆಲ್ಲಾ ನಡೆದುಕೊಳ್ಳಲೇಬೇಕು.





ಹಾಗೆ ನಡೆದುಕೊಳ್ಳುವಾಗ, "ಇದು ಸರಿ, ಇದು ಸರಿಯಿಲ್ಲ, ಇದು ಸಹ್ಯ, ಇದು ಅಸಹ್ಯ, ಇದು ಚೆನ್ನ ಇದು ಚೆನ್ನಿಲ್ಲ" ಮುಂತಾಗಿ ನಾವು ಹೇಳುವುದೆಲ್ಲ ನಮ್ಮ ಮಾನುಷೀ ಭಾವದ ರೂಪಗಳಷ್ಟೇ. ಹೀಗೆ ಹೇಳುವುದರಿಂದ ನಾವು ಆ ಪರಮಾತ್ಮನ ಲೀಲೆಯನ್ನೇ ವಿಮರ್ಶಿಸಿದ ಹಾಗೆ ಆಗುತ್ತದಲ್ಲವೆ? ಈ ಮಾನುಷಿ ಭಾವದ ಪ್ರಾಕೃತ ಭಾವಗಳು ಮಾಯಾ ರೂಪದ ಪ್ರಕೃತಿಗೆ ಮತ್ತು ಪ್ರಕೃತಿಯಿಂದಾದ ಈ ಜಗತ್ತಿಗೆ ನಾವು ಅಂಟಿರುವುದರಿಂದ. ಇದನ್ನು ನಾವು ಮೀರಿ ಬೆಳೆದಾಗ, ಅಂದರೆ ಅಂತರಂಗದಿಂದ ಪಕ್ವವಾದಾಗ, ಎಲ್ಲವನ್ನೂ ಸಮಭಾವದಿಂದ ನೋಡಿ ಯಾವುದೂ 'ಹೇಯ'ವಲ್ಲ ಎಂಬ ಮತ ಮನದಲ್ಲಿ ಗಟ್ಟಿಯಾಗುತ್ತದೆ. ಆ ರೀತಿಯ ಸಮಭಾವ, ಗಟ್ಟಿತನವೇ, ನಮ್ಮೆಲ್ಲಾ ಓದು ವಿದ್ಯಾಭ್ಯಾಸಕ್ಕೆ ಸಿಗಬೇಕಾದ ಫಲ. ಆ ಸ್ಥಿತಿಗೆ ತಲುಪಲು ಪ್ರತಿಯೊಬ್ಬರೂ ಪ್ರಯತ್ನ ಪಡಬೇಕು.

**ಮುಕ್ತಕ – 603**

**ಧರಣಿಗೋಳವು ಮೂಸೆ ; ಜೀವಗಳನದರೊಳಗೆ |**
**ಪರಿಶುದ್ಧಿಗೊಳಿಸುವುದು ಸಂಸಾರ ತಾಪ ||**
**ಪರಿಪರಿಯ ಬಂಧುಧರ್ಮದಿನ್ ಅಹಂಮತಿ ಕರಗೆ |**
**ಹರಡಿ ಹಬ್ಬುವುದಾತ್ಮ - ಮಂಕುತಿಮ್ಮ ||**

ಜೀವಗಳನದರೊಳಗೆ = ಜೀವಗಳನು+ಅದರೊಳಗೆ, ಬಂಧುಧರ್ಮದಿನ್=ಬಂಧು+ಧರ್ಮದಿನ್,

ಹಬ್ಬುವುದಾತ್ಮ=ಹಬ್ಬುವುದು+ಆತ್ಮ, ಮೂಸೆ=ಲೋಹವನ್ನು ಕರಗಿಸುವ ಒಂದು ಪಾತ್ರೆ

ಇಡೀ ಜಗತ್ತೇ ಒಂದು ಲೋಹಗಳನ್ನು ಕಾಯಿಸಿ, ಕರಗಿಸಿ, ಶುದ್ದೀಕರಿಸುವ ಪಾತ್ರೆ, ನಾವೆಲ್ಲಾ ಬದುಕನ್ನು ಪಡೆದು ಅದರೊಳಕ್ಕೆ ಬಿದ್ದಿದ್ದೇವೆ. ಪರಿಪರಿಯಾದ ಬಂಧಗಳ ಧರ್ಮಗಳನ್ನು ಪಾಲಿಸುತ್ತಾ ನಾವಿರುವಾಗ, ಸಂಸಾರದ ತಾಪ, ನಮ್ಮನ್ನು ಅದರೊಳಗೆ ಕಾಯಿಸಿ, ಕಲ್ಮಷಗಳನ್ನು ಸುಟ್ಟು, ಪರಿಶುದ್ಧಗೊಳಿಸುತ್ತದೆ. ಹಾಗೆ ಪರಿಶುದ್ಧಗೊಂಡ ನಮ್ಮಲ್ಲಿ ಅಹಂಕಾರವು ನಶಿಸಿದರೆ, ಭೇದಗಳು ಅಳಿಸಿ ಜಗದಾತ್ಮತೆಯ ಭಾವ ಅರಳಿದರೆ, ನಾವು ವಿಶ್ವಮಾನವರಾಗುತ್ತೇವೆ, ಎನ್ನುವ ಭಾವವನ್ನು ವ್ಯಕ್ತಪಡಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಬದುಕಿನಲ್ಲಿ ನಮಗೆ ಹಲವಾರು ರೀತಿಯ ಬಂಧಗಳು. ಪ್ರತೀ ಬಂಧನಕ್ಕೂ ಅದರದೇ ಆದಂತಹ ಒಂದು ಧರ್ಮ. ಅವುಗಳನ್ನು ಸೂಕ್ತವಾಗಿ ಪಾಲಿಸಿದರೆ, ಆ ಬಂಧಕ್ಕೆ ನ್ಯಾಯ ಮಾಡಿದ ಹಾಗೆ ಆಗುತ್ತದೆ. ತಂದೆ ತಾಯಿಯರೊಂದಿಗಿನ, ಒಡಹುಟ್ಟಿದವರೊಟ್ಟಿಗಿನ, ಸಂಬಂಧಿಕರೊಂದಿಗಿನ, ಮಿತರೊಂದಿಗಿನ, ಹೆಂಡತಿ ಮಕ್ಕಳೊಂದಿಗಿನ ಹೀಗೆ ಜಗತ್ತಿನಲ್ಲಿ ನಮ್ಮ ಸಂಪರ್ಕ ಸಂಬಂಧಗಳ ಪರಿಧಿಯೊಳಕ್ಕೆ ಬರುವ ಪ್ರತಿಯೊಬ್ಬರೊಂದಿಗೂ ನಮಗೆ ಬೇರೆ ಬೇರೆ ರೀತಿಯ ಬಂಧ ಮತ್ತು ಆ ಬಂಧಕ್ಕೊಂದು ಧರ್ಮ ಇರುತ್ತದೆ. ಪ್ರತಿಯೊಂದು ಬಂಧವೂ ಒಂದಕ್ಕೊಂದು ಪೂರಕವಾಗಿಯೂ ಇರಬಹುದು ಅಥವಾ

ಇಲ್ಲದೆಯೂ ಇರಬಹುದು. ನಾವು ಬಂಧುತ್ವಹೊಂದಿರುವ ಆ ವಿಷಯ, ವಸ್ತು ಅಥವಾ ವ್ಯಕ್ತಿಗಳೊಂದಿಗಿನ ನಮ್ಮ ಸಂಬಂಧಗಳನ್ನು ಪಾಲಿಸಲು ನಾವು ಪಡುವ ಪಾಡನ್ನು ನೋಡಿದರೆ, ಶತಕೋಟಿ ಮಂಗನಾಟದಂತೆ ಇರುತ್ತದೆ.

ಗುಂಡಪ್ಪನವರು ಹೇಳುವ ಈ "ಪರಿಪರಿಯ ಬಂಧುಧರ್ಮಗಳನ್ನು ಪಾಲಿಸುವಾಗ ನಾವು ನೋವು, ನಲಿವು, ಸಂತೋಷ, ದುಃಖ, ಪ್ರೀತಿ, ದ್ವೇಷ, ಕೋಪ, ಅಸೂಯೆ, ದರ್ಪ, ಗರ್ವ ಮುಂತಾದ ಭಾವಗಳನ್ನು ಅನುಭವಿಸುವಾಗ 'ಅಹಂಕಾರವನ್ನು ತೋರುತ್ತೇವೆ, ಎಂದರೆ 'ನಾನು ಅನುಭವಿಸುತ್ತಿದ್ದೇನೆ ಎನ್ನುವ ಭಾವದಿಂದಲೇ ಅನುಭವಿಸುತ್ತೇವೆ. ಇದು ಮಾನುಷೀ ಭಾವ ಅಥವಾ ಪ್ರಾಕೃತ ಭಾವ. ಆ ರೀತಿಯ ಭಾವ ನಮಗೆ ಈ ಜಗತ್ತಿನೊಂದಿಗಿನ ಬಂಧನದಿಂದಲೇ ಬರುತ್ತದೆ. ಜನ್ಮದಿಂದ ನಾವು ಈ ಜಗತ್ತಿಗೆ ಅಂಟಿಕೊಂಡು ಬಂಧನದಲ್ಲಿ ಸಿಲುಕಿಕೊಂಡಿದ್ದರೂ, ಕಾಲಾನುಕಾಲಕ್ಕೆ ನಮಗಾಗುವ ಅನುಭವಗಳು ನಮಗೆ ಈ ಅಂಟಿನ ಮತ್ತು ಬಂಧನದ ಸಂಕುಚಿತತೆಯನ್ನೂ, ನಿಷ್ಪ್ರಯೋಜಕತೆಯನ್ನೂ ಸೂಚಿಸಿ, ನಮ್ಮನ್ನು ಈ ಅಂಟಿನಿಂದ ಬಿಡಿಸಿಕೊಳ್ಳುವ ಉಪಾಯಗಳನ್ನು ಸೂಚಿಸುತ್ತವೆ.

ಹಾಗೆ ನಾವು ಅನುಭವಗಳ ಮೂಸೆಯಲ್ಲಿ ಕಾದು, ನೊಂದು, ಬೆಂದು, ಅನುಭವಗಳನ್ನು ಪಡೆದು ಸತ್ಯವನ್ನರಿತು, ಗುಂಡಪ್ಪನವರು "ಅಹಂಮತಿ ಕರಗೆ" ಎಂದು ಹೇಳುವಂತೆ ನಮ್ಮ ಅಹಂಕಾರ ಕರಗಿ ಮಾನಸಿಕ ಸಂಕುಚಿತತೆಯನ್ನು ತೊರೆದು ವಿಶಾಲ ಜಗತ್ತಿನಲ್ಲಿ ನಾವೂ 'ಒಂದು' ಎಂದು ಅನಿಸಿದರೆ, ನಮಗೆ ಈ ಜಗತ್ತಿನ ಏಕಾತ್ಮಭಾವ ಗೋಚರಿಸುತ್ತದೆ. ಆಗ ನಮ್ಮ ಆತ್ಮ 'ಹರಡಿ ಹಬ್ಬುತ್ತದೆ' . ನಾವು ಬೆಳೆಯಬೇಕು, ಬೆಳೆದು ವಿಶಾಲವಾಗಬೇಕು, ಜಗತ್ತಿನಷ್ಟು ವಿಶಾಲವಾಗಬೇಕು, ಆಗ ಜಗತ್ತಿನ ಆನಂದ ನಮ್ಮ ಆನಂದವಾಗುತ್ತದೆ.

**ಮುಕ್ತಕ – 604**

**ಹೊಸಹೊಸಬನಾಗುವನನುಕ್ಷಣಂ ಮಾನವನು |**
**ವಸುಧೆಯಾ ಮೂಸೆಯಲಿ ಪುಟಪಾಕವಾಂತು ||**
**ರಸಮೂರ್ತಿಯಾಗುವನು ಜಗದಾತ್ಮಮತಿ ಬೆಳೆಯೆ |**
**ಕಸವೆಲ್ಲ ಕಳೆದವನು - ಮಂಕುತಿಮ್ಮ ||**

ಹೊಸಹೊಸಬನಾಗುವನನುಕ್ಷಣಂ=ಹೊಸ+ಹೊಸಬನು+ಆಗುವನು+ಅನುಕ್ಷಣಂ, ಪುಟಪಾಕವಾಂತು=ಪತಪಾಕವು+ಅಂತು, ಜಗದಾತ್ಮಮತಿ=ಜಗದಾತ್ಮ+ಮತಿ, ಕಳೆದವನು=ಕಳೆದು+ಅವನು, ವಸುಧೆ=ಭೂಮಿ, ಮೂಸೆ=ಲೋಹ ಕರಗಿಸುವ ಪಾತ್ರೆ, ಪುಟ=ಶುದ್ಧ, ರಸ=ಸತ್ವ, ಬೆಳೆಯೆ=ವೃದ್ಧಿ ಯಾಗೆ, ಕಸ=ಕಲ್ಮಶ,

ಮಾನವನು ಈ ಜಗತ್ತಿನ ಬದುಕಿನ ಮೂಸೆಯಲ್ಲಿ ಮತ್ತೆ ಮತ್ತೆ ಕಾಯಿಸಲ್ಪಟ್ಟು, ಶುದ್ಧಿಕರಿಸಲ್ಪಟ್ಟು,





'ಅಪರಂಜಿ'ಯಂತೆ, ಕಸವನ್ನೆಲ್ಲ ಕಳೆದುಕೊಂಡು, ಸತ್ವವನ್ನು ತುಂಬಿಕೊಂಡು, ಹೊಸತನವನ್ನು ಮೆರೆಯುತ್ತಾ ಶುದ್ಧನಾಗುತ್ತಾನೆ. ಅವನು ರಸಮೂರ್ತಿಯಾಗಿ ಸತ್ವವನ್ನು ಬೆಳಗುತ್ತಾ, ಸಂಕುಚಿತತೆ ಕಳೆದು, ಜಗತ್ತಿನಲ್ಲಿ ಏಕಾತ್ಮಭಾವದಿಂದ ಬೆಳಗುತ್ತಾನೆ ಎಂದು, ಉಲ್ಲೇಖಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ದೇಹ, ಮನಸ್ಸು, ಬುದ್ಧಿ, ದೇಹಗಳ ಸಂಸರ್ಗದಿಂದ, ಜನ್ಮಜನ್ಮಾಂತರದಲ್ಲಿ, ಆತ್ಮಕ್ಕಾಗುವ ಸಂಸ್ಕರಣದ ವಿಚಾರವನ್ನು ಮಂಡಿಸಿದ್ದಾರೆ ಮಾನ್ಯ ಗುಂಡಪ್ಪನವರು. ಒಂದು ಬಾರಿ ಮನುಷ್ಯ ಜನ್ಮವೆತ್ತಿ ಒಂದೇ ಬಾರಿಗೆ ಎಲ್ಲ ಕಸವನ್ನೂ ಕಳೆದುಕೊಂಡು, ಸತ್ವಗುಣ ಸಂಪನ್ನನಾಗಿ ಮುಕ್ತಿಯನ್ನು ಪಡೆಯಲು ಸಾಧ್ಯವೇ ಇಲ್ಲ. “84 ಲಕ್ಷ ಬಾರಿ ಬೇರೆ ಬೇರೆ ದೇಹಗಳಲ್ಲಿ ಹೊಕ್ಕು ಹೊರಬಂದ ಮೇಲೆಯೇ, ಆತ್ಮಕ್ಕೆ ಮನುಷ್ಯ ದೇಹದಲ್ಲಿ ಜನ್ಮ” ಎಂದು ದಾಸರು ಹೇಳುತ್ತಾರೆ. ಪ್ರತಿಬಾರಿ ಈ ಭೂಮಿಯಲ್ಲಿ ಜನ್ಮವೆತ್ತಿದಾಗಲೂ 'ಆತ್ಮ' ಆಯಾಯಾ ದೇಹಗಳಿಗೆ ಅನುಗುಣವಾಗಿ ಗುಣಗಳನ್ನು ಪಡೆದುಕೊಳ್ಳುತ್ತದೆ, ಬೇರೆ ಬೇರೆ ದೇಹಗಳನ್ನು ಪಡೆದಾಗ ಹಳೆಯ ಗುಣಗಳನ್ನು ಕಳೆದುಕೊಳ್ಳುತ್ತಾ, ಹೊಸ ಗುಣಗಳನ್ನು ಪಡೆದುಕೊಳ್ಳುತ್ತಾ ಮುಂದುವರೆಯುತ್ತದೆ. ಹೀಗೆ ಮುಂದೆ ಮಾನವನ ದೇಹವನ್ನು ಪಡೆದುಕೊಂಡಾಗ, ಹಿಂದೆ ತಳೆದ ದೇಹಗಳಲ್ಲಿ ಆರ್ಜಿಸಿದ ಗುಣಗಳ ಶೇಷವನ್ನು ಉಳಿಸಿಕೊಂಡು ಬಂದಿರುತ್ತದೆ.

ತನ್ನ ಪೂರ್ವ ಜನ್ಮದ ವಾಸನೆಗಳನ್ನು ಮತ್ತು ಗುಣಗಳನ್ನು ಹೊತ್ತು ತಂದ ಮಾನವ ತನ್ನ ಬದುಕಿನಲ್ಲಿ ಪಡುವ ಮತ್ತು ಅನುಭವಿಸುವ ಕಷ್ಟ-ಸುಖಗಳ ಅನುಭವಗಳಿಂದ ಕಲಿಯುತ್ತಾನೆ. ಆದರೆ ಈ ಕಲಿಕೆಯ ಗತಿ ತೀರ ನಿಧಾನ. ಹತ್ತು ಹೆಜ್ಜೆ ಮುಂದಕ್ಕೆ ನಡೆದು ೨ ಹೆಜ್ಜೆ ಹಿಂದಕ್ಕೆ ಹೋಗುವ ರೀತಿಯಲ್ಲಿ ನಡೆದು ಮತ್ತೆ ಮತ್ತೆ ಅನುಭವಗಳ ಮೂಸೆಯಲ್ಲಿ ಬಿದ್ದು, ನೊಂದು, ಬೆಂದು, ಕಾದು, ಅಂತಿಮವಾಗಿ ಬಂಗಾರವನ್ನು ಕರಗಿಸಿದಾಗ ಅದರಲ್ಲಿನ ಕೊಳೆಯಲ್ಲಿ ಕಳೆದು 'ಅಪರಂಜಿ' ಹೊರಬರುವಂತೆ, ಮಾನವನೂ ಶುದ್ಧನಾಗಿ ಹೊರಬರುತ್ತಾನೆ. ಅಂತಹ ಮಾನವನಲ್ಲಿ, ಸತ್ವ (ಗುಣ) ತುಂಬಿರುತ್ತದೆ, ಜಗತ್ತೆಲ್ಲ ಆ ಪರಮಾತ್ಮನಿಂದಲೇ ಆಗಿ, ಪರಮಾತ್ಮನಿಂದಲೇ ಆವೃತವಾಗಿದೆಯೆಂಬ 'ಏಕಾತ್ಮ' ಭಾವ ತುಂಬಿ, ಬೇಧಗಳು, ದ್ವಂದ್ವಗಳು ನಶಿಸಿಹೋಗುತ್ತದೆ. ಆಗ ಮಾನವ ಶುದ್ಧಾತ್ಮನಾಗುತ್ತಾನೆ. ಯಾವುದೇ ರೀತಿಯ ಬೇಧಾಬೇಧಗಳ ಭಾವಗಳ ಬಂಧನದಿಂದ 'ಮುಕ್ತ'ನಾಗುತ್ತಾನೆ.

ನಾವೂ ಹಾಗಾಗಬೇಕಾದರೆ, ಹಾಗಾಗ ಬೇಕೆಂಬ ದೃಢ ನಿರ್ಧಾರ ಬೇಕು ಮತ್ತು ನಮ್ಮ ನೆಲೆ ಅಥವಾ ಸ್ತರವೇನು ಎಂದು ಅರಿಯಬೇಕು. ನಾವು ಏನು? ನಮ್ಮಲ್ಲಿ ಏನಿದೆ? ಏನಿರಬೇಕು? ಏನಿಲ್ಲ? ಅದನ್ನು ಪಡೆಯಲು ಏನು ಮಾಡಬೇಕು? ಎಂಬ ಪ್ರಶ್ನೆಗಳು ನಮ್ಮಲ್ಲಿ ಸಹಜವಾಗಿ ಮೂಡಿ, ಅದಕ್ಕೆ ಸೂಕ್ತವಾದ ಉತ್ತರಗಳನ್ನು ನಮ್ಮ ವಿದ್ಯೆ, ಸಂಗ, ಸಮಾಜ ಮತ್ತು ತೀವ್ರತಮ ಪ್ರಯತ್ನದಿಂದ ಕಂಡುಕೊಂಡು, ನಮ್ಮ ಪ್ರಯತ್ನವೂ ಸರಿಯಾದ ರೀತಿಯಲ್ಲಿ ಆದರೆ ನಾವೂ ಸಹ, ಜನ್ಮ ಜನ್ಮಾಂತರದಿಂದ ಶೇಖರಿಸಿಕೊಂಡು ಬಂದಿರುವ ಅವಗುಣಗಳನ್ನೆಲ್ಲಾ ಕಳೆದುಕೊಂಡು, ಸತ್ವವನ್ನು ತುಂಬಿಕೊಂಡು, ಶುದ್ಧರಾಗಿ, ನಮ್ಮ ಮನಸ್ಸುಗಳಲ್ಲೂ ಬೇಧಗಳನ್ನು ಅಳಿಸಿಕೊಂಡು ಮಾನ್ಯ ಗುಂಡಪ್ಪನವರು ಹೇಳುವಂತೆ "ರಸಮೂರ್ತಿಯಾಗಬಹುದು. ಇದು ನಿರಂತರ ಪ್ರಯತ್ನದಿಂದ ಮಾತ್ರ ಸಾಧ್ಯ.

**ಮುಕ್ತಕ – 605**

**ಉದರಶಿಖಿಯೊಂದುಕಡೆ, ಹೃದಯಶಿಖಿಯೊಂದುಕಡೆ |**
**ಕುದಿಸದಿರೆ ಜೀವಶಿಲೆ ಮೃದುವಪ್ಪುದೆಂತು ||**
**ಬದುಕಿನುರಿಯಲಿ ಕರಗಿ ತಿಳಿಯಾಗದಿಹ ಜೀವ |**
**ಪುದಿಯದಾತ್ಮಾರ್ಣವದಿ ಮಂಕುತಿಮ್ಮ ||**

ಉದರಶಿಖಿಯೊಂದುಕಡೆ=ಉದರ+ಶಿಖಿಯು+ಒಂದುಕಡೆ, ಹೃದಯಶಿಖಿಯೊಂದುಕಡೆ=ಹೃದಯ++ಶಿಖಿಯು+ಒಂದುಕಡೆ, ಕುದಿಸದಿರೆ=ಕುದಿಸದೆ +ಇರೆ, ಮೃದುವಪ್ಪುದೆಂತು=ಮೃದು+ಅಪ್ಪುವುದು+ಎಂತು, ಬದುಕಿನುರಿಯಲಿ =ಬದುಕಿನ+ಉರಿಯಲಿ, ತಿಳಿಯಾಗದಿಹ=ತಿಳಿ+ಆಗದೆ+ಇಹ, ಪುದಿಯದಾತ್ಮಾರ್ಣವದಿ=ಪುದಿಯದು+ಆತ್ಮ+ಆರ್ಣವದಿ, ಶಿಖಿ=ಬೆಂಕಿ, ಅಗ್ನಿ, ಅಪ್ಪುವುದು=ಆಗುವುದು, ಜೀವಶಿಲೆ=ಕರುಡುಗಟ್ಟಿದ ಆತ್ಮ, ಆರ್ಣವದಿ=ಕಡಲಲ್ಲಿ, ಪುದಿಯದು=ತುಂಬಲಾರದು, ಸೇರಲಾರದು

ಹೊಟ್ಟೆಯ ಶಾಖವೊಂದು ಕಡೆ, ಹೃದಯದ ಶಾಖವೊಂದು ಕಡೆ, "ಇವೆರಡು ಶಾಖಗಳ ನಡುವೆ ಕಲ್ಲಾದ ಆತ್ಮ ಮೃದುವಾಗುವುದೆಂತು? ಜೀವನದ ಬೇಗೆಯಲ್ಲಿ ಬೆಂದು ಕರಗದ ಆತ್ಮ ಜಗದಾತ್ಮಸಾಗರವ ಸೇರುವುದೆಂತು?" ಎಂದು ಹೇಳುತ್ತಾ, ಆತ್ಮ ತನ್ನ ಬೇಧಗಳನ್ನು ಕಳೆದುಕೊಂಡು ವೈಶಾಲ್ಯವನ್ನು ಪಡೆಯಬೇಕಾದರೆ ಕರಗಬೇಕು ಎಂದು, ಹೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಬದುಕಿನಲ್ಲಿ ನಮಗೆ ದೈಹಿಕಾವಶ್ಯಕತೆಗಳು ಮತ್ತು ಭೌದ್ಧಿಕಾವಶ್ಯಕತೆಗಳು ಬೇರೆ ಬೇರೆ. ಒಂದಕ್ಕೊಂದು ಪೂರಕವಾಗಿಯೂ, ಅಲ್ಲದೆಯೂ ಇರುತ್ತವೆ. ಈ ಎರಡು ಅವಶ್ಯಕತೆಗಳನ್ನು ವಿಶ್ಲೇಷಣೆ ಮಾಡಿ ನೋಡಿದರೆ, ಅವುಗಳು ನಮ್ಮ ಗುಣಗಳ ಬೆಳವಣಿಗೆ ಮತ್ತು ವ್ಯತ್ಯಯಗಳಲ್ಲಿ ಎಷ್ಟು ಪ್ರಭಾವ ಬೀರುತ್ತದೆಂದು ಅರ್ಥವಾಗುತ್ತದೆ. ನಾವು ಉಣ್ಣುವ ಆಹಾರ ಮತ್ತು ವಸ್ತು, ವಿಷಯ ಮತ್ತು ವ್ಯಕ್ತಿಗಳೊಂದಿಗಿನ ನಮ್ಮ ಸಂಬಂಧದ ಗುಣಗಳ ಮೇಲೆ ನಮ್ಮ ಗುಣ ಬದಲಾಗುತ್ತಾ ಹೋಗುತ್ತದೆ. ಆದರೆ ಯಾವುದರಿಂದ ಯಾವ ಗುಣ ಅಧಿಕ ಅಥವಾ ಕಡಿಮೆಯಾಗುತ್ತಿರುತ್ತದೆ ಎಂದು ಹೇಳುವುದು ಸುಲಭವಲ್ಲ.ಏಕೆಂದರೆ ಅಂತರಂಗದ ಕ್ರಿಯೆ ಆ ಪರಮಾತ್ಮನಿಗೇ ಗೊತ್ತು.

ಆದರೆ ಈ ಎಲ್ಲ ರೀತಿಯ ಬಂಧನಗಳಿಂದ ನಮಗಾಗುವ ಅನುಭವ ನಮ್ಮನ್ನು ಪಕ್ವವಾಗಿಸಬೇಕು. ಹಾಗೆ ಪಕ್ವವಾಗಲು ಈ ಜೀವನದ ಅನುಭವಗಳು ನಮ್ಮನ್ನು ಹಿಂಡಿ ಹಿಪ್ಪೆ ಮಾಡಿದರೆ ಮಾತ್ರ ಸಾಧ್ಯ. ಹೇಗೆ ಕಬ್ಬಿನ ಜಲ್ಲೆಯನ್ನು ಯಂತ್ರದಲ್ಲಿ ತಳ್ಳಿ ಎರಡು ಕಬ್ಬಿಣದ ಗುಂಡುಗಳ ಮಧ್ಯೆ ಹೊರಹಾಕಿದರೆ ಸಿಹಿಯಾದ ರಸ ಸಿಗುತ್ತದೋ ಹಾಗೆಯೇ ನಾವೂ ಸಹ ಬದುಕಿನ ಘಟನೆಗಳಿಂದಾಗುವ ಅನುಭವಗಳಿಂದ ಕಲಿತು 'ರಸ'ವಂತರಾಗಬೇಕು.

ರಸವಂತರಾದರೆ, ನಮ್ಮ ಸ್ವಭಾವ ಮೃದುವಾಗುತ್ತದೆ. ನಮ್ಮ ಆತ್ಮಗುಣ ಮೃದುವಾಗುತ್ತದೆ. ಹಾಗಾದಾಗ





ನಮ್ಮೊಳಗಿನ ಅಹಂಕಾರ ಕರಗಿ, ಬೇಧಗಳು ಅಳಿಸಿ, ಈ ಸೃಷ್ಟಿಯಲ್ಲಿ ಆ ಪರಮಾತ್ಮನೇ ಎಲ್ಲವೂ ಎಂಬ ಭಾವ ಗಟ್ಟಿಯಾಗುತ್ತದೆ. ಎಂದರೆ ಹೃದಯ ಮತ್ತು ಮನಸ್ಸು ಮೃದುವಾದಾಗ ಭಾವ ಮತ್ತು ಗುಣ ಗಟ್ಟಿಯಾಗುತ್ತದೆ. ಗಟ್ಟಿಯಾಗಿದ್ದು, ಈ ಜಗತ್ತಿಗೆ ಅಂಟಿಕೊಂಡಿದ್ದ ಆತ್ಮ ಸತ್ವದ ಒತ್ತಾಸೆಯಿಂದ ಕರಗಿ ಜಗದಾತ್ಮ ಸಾಗರದಲ್ಲಿ ಕರಗಿ ಲೀನವಾಗುತ್ತದೆ. ಅಂತಹ ಸ್ಥಿತಿಗೆ ತಲುಪಲು ನಾವು ಪ್ರಯತ್ನಪಟ್ಟರೆ, ಇಂದಲ್ಲ ಎಂದೋ ಒಂದು ದಿನ, ಈ ಜನ್ಮದಲ್ಲಿ ಅಲ್ಲದೆ, ಜನ್ಮ ಜನ್ಮಾಂತರದಲ್ಲಿ ಎಂದೋ ಒಂದು ದಿನ 'ಜಗದಾತ್ಮಾರ್ಣವದಿ' ಲೀನವಾಗಬಹುದು.

**ಮುಕ್ತಕ -606**

**ತ್ರಾಸಿನಲಿ ಕಪ್ಪೆಗಳ ಸರಿಕೂಡಿಸುವ ಚತುರಿ |**
**ಸಂಸ್ಕೃತಿ ದ್ವಂದ್ವಗಳ ಸಮತೂಗಲರಿವಂ ||**
**ಬೀಸುಕತ್ತಿಗಳ ಮಧ್ಯದಿ ನೂಲಮೇಲ್ ನಡೆವ |**
**ಸಾಸವೀ ಗೃಹಧರ್ಮ - ಮಂಕುತಿಮ್ಮ ||**

ಸಮತೂಗಲರಿವಂ=ಸಮತೂಗಲ್+ಅರಿವಂ, ತ್ರಾಸು=ತಕ್ಕಡಿ,

ಒಬ್ಬ ಗೃಹಸ್ಥ ತನ್ನ ದಾಯಿತ್ವವನ್ನು ನಿರ್ವಹಿಸಲು ಪಡುವ ಪರದಾಟದ ಚಿತ್ರಣವನ್ನು ನೀಡುತ್ತಾ, ತಕ್ಕಡಿಯಲ್ಲಿ ಕಪ್ಪೆಗಳನ್ನು ಸಮರ್ಪಕವಾಗಿ ತೂಗಬಹುದಾದ, ಎರಡು ಸಂಸ್ಕೃತಿಗಳ ಅಥವಾ ಒಂದೇ ಸಂಸ್ಕೃತಿಯಲ್ಲಿರುವ ದ್ವಂದ್ವಗಳ ನಡುವೆ ಸಮತೋಲನವನ್ನು ಕಾಯಬಲ್ಲ ಮತ್ತು ಅಕ್ಕಪಕ್ಕದಲ್ಲಿ ಬೀಸುಕತ್ತಿಗಳು ತೂಗುತ್ತಿರುವಾಗ, ಅವುಗಳನ್ನು ತಪ್ಪಿಸಿಕೊಂಡು ಹಗ್ಗದ ಮೇಲೆ ನಡೆಯುವ ಚತುರತೆಯಂತೆಯೇ ಗೃಹಧರ್ಮವನ್ನು ಸಮರ್ಪಕವಾಗಿ ನಿಭಾಯಿಸಬಲ್ಲ ಸಾಹಸಕ್ಕೂ ಬೇಕಾಗಿದೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಗೃಹಸ್ಥನಿಗೆ ತನ್ನ ಗೃಹವನ್ನು ನಡೆಸಲು ಬಹಳಷ್ಟು ಪರದಾಡಬೇಕಾಗುತ್ತದೆ, ಸಾಹಸ ಮಾಡಬೇಕಾಗುತ್ತದೆ. ಇದು ಎಲ್ಲರ ಅನುಭವಕ್ಕೂ ಬಂದಿರುವ ವಿಷಯವೇ. ಈ ಜಗತ್ತಿನಲ್ಲಿ ನಮ್ಮ ಯಾವುದೇ ಕೆಲಸ ಸುಲಭವಾಗಿ ಆಗಬೇಕಾದರೆ 'ಭಗವಂತನ ಕೃಪೆ ಇರಬೇಕು. ಅದೊಂದಿದ್ದರೆ ಗೃಹ ಸಂಬಂಧಿತ ಕೆಲಸಗಳನ್ನು ಸುಲಭವಾಗಿ ಪಾರು ಮಾಡಬಹುದು. ನಮ್ಮ ಪೂರ್ವಕರ್ಮದ ಪ್ರಕಾರ ಭಗವತ್ಕೃಪೆಯ ಕೊರತೆಯಾದಲ್ಲಿ ನಾವು ಪಡುವ ಪರದಾಟಕ್ಕೆ ಎಣೆಯೇ ಇರುವುದಿಲ್ಲ. ಭಾವಗಳ ಸಮತೋಲನ, ಅವಶ್ಯಕತೆಗಳ ಪೂರೈಕೆ, ಆರೋಗ್ಯ, ಮಕ್ಕಳ ಸಂಸ್ಕಾರ ಮತ್ತು ವಿದ್ಯಾಭ್ಯಾಸ, ಬಂಧು ಮಿತ್ರರೊಂದಿಗಿನ ಸಮರ್ಪಕವಾದ ಸಂಪರ್ಕ ಒಟ್ಟಾರೆ ಸಮಾಜದಲ್ಲಿ ನಮ್ಮ ಅಸ್ತಿತ್ವವನ್ನು ಕಾಯ್ದುಕೊಳ್ಳುವುದು ಬಹಳ ಕಷ್ಟ.

ಮಾನ್ಯ ಗುಂಡಪ್ಪನವರು ಹೇಳುವಂತೆ "ಎಲ್ಲರೊಳಗೊಂದಾದರೆ ನೀರು ಯಾವ ಪಾತ್ರೆಯಲ್ಲಿ ಸುರಿದರೆ ಆ ಪಾತ್ರೆಯ ಆಕಾರವನ್ನು ಪಡೆಯುವಂತೆ, ನಾವೂ ಸಹ ಎಲ್ಲ ಸಮಯ ಸಂಧರ್ಭಗಳಲ್ಲೂ ಸಮತೋಲನವನ್ನು

ಕಾಪಾಡಿಕೊಳ್ಳಬಹುದು. ಆದರೆ ನಾವು ಜನ್ಮತಃ ಪಡೆದುಕೊಂಡು ಬಂದ ಸಂಸ್ಕಾರಗಳು, ಜಾತಿ, ಧರ್ಮ, ಭಾಷೆ, ಊರು, ಮತ, ಉಡುಗೆ, ತೊಡುಗೆ, ಆಹಾರ ಮುಂತಾದವುಗಳ, ನಾವೇ ಎಳೆದುಕೊಂಡ ಅಥವಾ ಅನೂಚಾನವಾಗಿ ನಮ್ಮ ಮೇಲೆ ಹೇರಲ್ಪಟ್ಟ, ಎಲ್ಲೆಗಳನ್ನು ಮೀರಲಾಗದೆ, ಹೊರ ಜಗತ್ತಿಗೆ ಹೆಜ್ಜೆಯಿಡಲಾಗದೆ, ಇದ್ದಲ್ಲೇ ಸಂಸಾರವನ್ನು ಸಮತೂಗಿಸುವ ಪರದಾಟದ ಪ್ರಯತ್ನವನ್ನು ಮಾಡುತ್ತಲೇ ಇರಬೇಕು. ಈ ಎಲ್ಲವುದರ ಗೆರೆಗಳನ್ನು ದಾಟಿ ಮುಕ್ತವಾಗಿ ಮುಂದೆ ಹೆಜ್ಜೆ ಇಟ್ಟರೆ, ಬಹುಶಃ ಗೃಹ ಧರ್ಮವನ್ನು ಪಾಲಿಸುವುದು ಸುಲಭವಾಗಬಹುದು. ಆದರೆ ಅದನ್ನು ಮೀರಲು ನಮ್ಮ "ಅಹಂಕಾರ" "ಕೀಳರಿಮೆ" 'ಭಯ" ಮುಂತಾದವುಗಳು ಅಡ್ಡ ಬರುತ್ತವೆ. ಇದನ್ನೇ ಮಾನ್ಯ ಗುಂಡಪ್ಪನವರು "ದ್ವಂದ್ವ" ಎಂದಿದ್ದಾರೆ. ಈ ದ್ವಂದ್ವಗಳ ನಡುವೆ ಇರುವ ಗೆರೆಗಳನ್ನು ನಾವು ಅಳಿಸಲಾದರೆ ಮುಕ್ತ ಜೀವನಕ್ಕೆ ನಾಂದಿಯಾಗುತ್ತದೆ.

'ಸುಮನಸರಾದ ಸದಸ್ಯರಿಂದ ಒಂದು ಗೃಹ, ಅಂತಹ ಹತ್ತಾರು ಗೃಹಗಳ ಸಮೂಹದ ಒಂದು ಬೀದಿ, ಅಂತಹ ಹತ್ತಾರು ಬೀದಿಗಳಿಂದಾದ ಒಂದು ಊರು ಅಂತಹ ಹತ್ತಾರು ಊರುಗಳಿಂದಾದ, ನಾಡು. ಆಹಾ! ಎಂತಹ ಸುಂದರ ಕಲ್ಪನೆ. ಈ ಕಲ್ಪನೆ ಸಾಕಾರವಾಗಬೇಕಾದರೆ, ನಮ್ಮ ಅಹಂಕಾರವನ್ನು ತೊರೆದು, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಹೇಳಿದ "ದ್ವಂದ್ವಗಳನ್ನು ಮೀರಿ ಬೆಳೆದರೆ ಮಾತ್ರ ಸಾಧ್ಯ. ಅಂತಹ ಚತುರತೆಯನ್ನು ಪಡೆಯಲು ಸಾಧನೆ ಬೇಕು. ಅಸಾಧ್ಯವಲ್ಲ.

**ಮುಕ್ತಕ – 607**

**ಪ್ರೇಮಾತಿಶಯವಿರದ ದಾಂಪತ್ಯ ವರ್ಧಿಸದು |**
**ವ್ಯಾಮೋಹಕೆಡೆಗೊಟ್ಟೊಡದು ನಿಗಳವಹುದು ||**
**ಸಾಮರಸ್ಯವನೆಂತು ಕಾಣ್ಬುದೀ ವಿಷಮದಲಿ? |**
**ಆಮಿಷದ ತಂಟೆಯಿದು ಮಂಕುತಿಮ್ಮ ||**

ಪ್ರೇಮಾತಿಶಯವಿರದ=ಪ್ರೇಮಾತಿಶಯವು+ಇರದ,ವ್ಯಾಮೋಹಕೆಡೆಗೊಟ್ರೊಡದು=ವ್ಯಾಮೋಹಕೆ+ಎಡೆ+ಕೊಳ್ಕೊಡೆ+ಅದು ,ನಿಗಳವಹುದು=ನಿಗಳವು+ಅಹುದು,ಸಾಮರಸ್ಯವನೆಂತು=ಸಾಮರಸ್ಯವನು +ಎಂತು, ಕಾಣ್ಬುದೀ=ಕಾಣ್ಬುದು+ಈ,
ತಂಟೆಯಿದು= ತಂಟೆ + ಇದು, ವರ್ಧಿಸದು-ಅಭಿವೃದ್ಧಿಯಾಗದು,
ನಿಗಳ=ಸಂಕೋಲೆ, ಬಂಧನ, ವಿಷಮ ಕ್ಲಿಷ್ಟ ಸ್ಥಿತಿ, ಆಮಿಷದ= ಪ್ರಲೋಭನೆಯ

ದಾಂಪತ್ಯದಲ್ಲಿ ಸಾಮರಸ್ಯವಿರಬೇಕು, ಇಲ್ಲದಿದ್ದರೆ ಅದು ವೃದ್ಧಿಯಾಗುವುದಿಲ್ಲ. ಕೌಟುಂಬಿಕ ಜೀವನದಲ್ಲಿ ಪರಸ್ಪರ ಅತಿಶಯದ ಪ್ರೇಮವಿರಬೇಕು, ಪ್ರೇಮದ ಸ್ಥಾನದಲ್ಲಿ ವ್ಯಾಮೋಹವಿದ್ದರೆ ಅದು ನಮಗೆ ಬಂಧನದ ಸಂಕೋಲೆಗಳಾಗಿ ಬದುಕು ಕ್ಲಿಷ್ಟವಾಗಿ ಪರಿಣಮಿಸುತ್ತದೆ. ಅಂತಹ ಸ್ಥಿತಿಯಲ್ಲಿ ಸಾಮರಸ್ಯವನ್ನು ಕಾಣಲು ಸಾಧ್ಯವಿಲ್ಲ. ಈ ರೀತಿ ನಮಗೆ ಮೋಹ ಅಥವಾ ವ್ಯಾಮೋಹ ಉಂಟಾಗುವುದಕ್ಕೆ ನಮ್ಮ ಮನದಲ್ಲುಂಟಾಗುವ ಆಸೆಗಳೇ ಕಾರಣ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

(194)

| ಕಗ್ಗರಸಧಾರೆ | ಸಂಸಾರ ಪಾಕ 609 - 612 |
|---|---|

ದಾಂಪತ್ಯವೆಂದರೆ ಕೇವಲ ಗಂಡ ಹೆಂಡತಿಯಲ್ಲ, ಮಕ್ಕಳು ಮತ್ತು ಮನೆ ಮಂದಿಯಲ್ಲಾ ಸೇರುತ್ತಾರೆ. ಗಂಡು ಹೆಣ್ಣು ದಂಪತಿಗಳಾಗುವುದು, ಕುಟುಂಬದ ವ್ಯವಸ್ಥೆಯ ಸುಸ್ಥಿತಿಗಾಗಿ, ಕುಟುಂಬದಲ್ಲಿ ಪರಸ್ಪರ ಪ್ರೇಮವಿರಬೇಕು. ಪ್ರೇಮವೆಂದರೆ, ಬಿಟ್ಟುಕೊಡುವುದು (giving space) ಎಂದು ಅರ್ಥ. ಒಬ್ಬರು ಮತ್ತೊಬ್ಬರ ಅಭಿಪ್ರಾಯ ಮತ್ತು ವಿಚಾರಗಳನ್ನು ಗೌರವಿಸುವುದು ಎಂದು ಅರ್ಥ. ಯಾವುದೇ ಪೂರ್ವಾಗ್ರಹವಿಲ್ಲದೆ ವಿಷಯಗಳನ್ನು ವಿಚಾರ ಮಾಡುವುದು ಎಂದು ಅರ್ಥ. ಅಂತಹ ಸೌಹಾರ್ದತೆ ಇಲ್ಲದಿದ್ದರೆ ಅದನ್ನು ಪ್ರೇಮ ಅಥವಾ ಪ್ರೀತಿ ಎನ್ನಲಾಗುವುದಿಲ್ಲ. ಇನ್ನು ನಮಗೆ ವಿಷಯ, ವಸ್ತು ಮತ್ತು ವ್ಯಕ್ತಿಗಳೊಂದಿಗೆ ಮೋಹವಿರುತ್ತದೆ. ಆ ಮೋಹ ಅಧಿಕವಾದರೆ ಅದು ವ್ಯಾಮೋಹವಾಗಿ ಪರಿಣಮಿಸುತ್ತದೆ. ವ್ಯಾಮೋಹಕ್ಕೆ ತೀವ್ರತಮ ಭಾವನೆಗಳಿರಬೇಕು. ಅಂತಹ ತೀವ್ರತಮ ಭಾವಗಳನ್ನಿಟ್ಟುಕೊಂಡ ಮನಸ್ಸು, ಪ್ರೀತಿಸಲಾಗಲೀ, ಪ್ರೇಮಿಸಲಾಗಲೀ, ಸಾಧ್ಯವಿಲ್ಲ. ಏಕೆಂದರೆ ಪೂರ್ವಾಗ್ರಹವೇ ಈ ತೀವ್ರತಮ ಭಾವನೆಗಳಿಗೆ ಅಧಾರ.

ತಮ್ಮ ಪಟ್ಟು ಬಿಡದ ದಂಪತಿಗಳಿಗೆ ಬಿಟ್ಟುಹೋಗುವುದೇ ಗತಿ. ಒಂದು ಕಾಲದಲ್ಲಿ ಇದ್ದ ಕುಟುಂಬ ವ್ಯವಸ್ಥೆ ಇಂದು ಸಂಪೂರ್ಣ ಬದಲಾಗಿದೆ. ತಮ್ಮ ಮತವೇ ಉತ್ಕೃಷ್ಟವೆಂಬ ಅಹಂಕಾರದ ಭಾವದಿಂದ ಮನಸ್ಸುಗಳು ಮುರಿದು, ಮನೆಗಳು ಮುರಿಯುವಂತಾಗಿದೆ. ತಂದೆ ತಾಯಿಗಳನ್ನು ಮನೆಯಿಂದ ಹೊರಗಟ್ಟುವ ಸಂಸ್ಕೃತಿ, ಮಕ್ಕಳ ವಿಕಸನಕ್ಕೆ

ಸೂಕ್ತವಲ್ಲದ ವಾತಾವರಣ, ಪರಸ್ಪರ ಪೈಪೋಟಿಯಿಂದ ದಾಂಪತ್ಯಗಳಲ್ಲಿ ಸಮರಸ ಮತ್ತು ಸರಸಕ್ಕಿಂತ, ಸಮರ ಮತ್ತು ವಿರಸಗಳೇ ಎದ್ದು ಕಾಣುತ್ತಿವೆ. ಇದು ಕಾಲ ಮಹಿಮೆ. ಇದಕ್ಕೆಲ್ಲ ಕಾರಣವೆಂದರೆ ಮಾನ್ಯ ಗುಂಡಪ್ಪನವರು "ಆಮಿಷದ ತಂಟೆಯಿದು" ಎಂದು ಹೇಳುವಂತೆ, ನಮ್ಮ ಮುಂದೆ ನಮ್ಮ ಬದುಕನ್ನು ಕೆಡಿಸುವಂತ ಪ್ರಲೋಭನೆಗಳು ಹೇರಳವಾಗಿ ಇವೆ. ಅವಗಳನ್ನು ಪಡೆಯುವ ಆಸೆ ಮತ್ತು ಪಡೆದದ್ದನ್ನು ತಮ್ಮದಾಗಿಸಿಕೊಳ್ಳುವ ಮೋಹದಿಂದ ಬದುಕಿನ ಸಾಮರಸ್ಯವನ್ನು ನಾವು ಕಳೆದುಕೊಂಡಿದ್ದೇವೆ. ಏನೋ ಕೊರತೆ, ಏನೋ ಕಸಿವಿಸಿ, ಏನೋ ಅಪೂರ್ಣತೆ, ಯಾವುದಕ್ಕೋ ಅಸಹನೆ ಮುಂತಾದವುಗಳು ನಮ್ಮ ಮನಸ್ಸುಗಳಲ್ಲಿ ತುಂಬಿ ಬದುಕಿನ ಸ್ವಾರಸ್ಯ ಕಳೆದು ಹೋಗುತ್ತಿದೆ.

ಸತ್ವ ಮತ್ತು ಸತ್ಯದೊಡನೆ ಬಾಳಿದರೆ, "ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು" ಎಂದು ಸರ್ವಜ್ಞ ಹೇಳುವಂತೆ ಬಾಳಿದರೆ, ನಮ್ಮ ಬದುಕುಗಳಲ್ಲಿ ಮತ್ತು ಈ ಬದುಕಿಗೆ ಆಧಾರವಾದ ನಮ್ಮ ದಾಂಪತ್ಯ ಜೀವನ ಮತ್ತು ಕೌಟುಂಬಿಕ ವ್ಯವಸ್ಥೆಯಲ್ಲಿ ಸಾಮರಸ್ಯವನ್ನು ತಂದುಕೊಳ್ಳಬಹುದು. ಆತುರವಿಲ್ಲದ ಆಲೋಚನೆಯಿಂದ, ಅನುನಯದಿಂದ ಮತ್ತು ಬಿಟ್ಟು ಕೊಡುವುದರಿಂದ ಈ ಸಾಮರಸ್ಯವನ್ನು ಕಾಪಾಡಿಕೊಳ್ಳಬಹುದು.

**ಮುಕ್ತಕ – 608**

**ಕೈಕಯಿಯವೊಲು ಮಾತೆ, ಸತ್ಯಭಾಮೆಯವೊಲು ಸತಿ |**
**ಸಾಕಿ ಸಂತಸವೆರೆಯೆ ಸಂಸಾರ ಲೀಲೆ ||**
**ಬೇಕು ಮತ್ಸರ ಮಮತೆ ಮೋಹಂಗಳಾವೇಶ |**
**ಲೋಕನಾಟಕಕಾಗ - ಮಂಕುತಿಮ್ಮ ||**

ಕೈಕಯಿಯವೊಲು=ಕೈಕಯಿಯ+ಒಲು, ಸತ್ಯಭಾಮೆಯವೊಲು=ಸತ್ಯಭಾಮೆಯ+ಒಲು, ಸಂತಸವೆರೆಯೆ= ಸಂತಸವ+ಎರೆಯೆ, ಮೋಹಂಗಳಾವೇಶ+ಮೋಹಂಗಳ+ಆವೇಶ, ಲೋಕನಾಟಕಕಾಗ= ಲೋಕ ನಾಟಕಕೆ+ಆಗ

ಕೈಕೇಯಿಯಂತಹ ತಾಯಿ ಇರಬೇಕು ಮತ್ತು ಸತ್ಯಭಾಮೆಯಂತಹ ಹೆಂಡತಿ ಇರಬೇಕು. ಅವರಂತೆ ಪ್ರೀತಿ ತೋರಿದರೆ ನಡೆಯುವುದು ಸಂಸಾರದ ಲೀಲಾವಿನೋದ. ಈ ಜಗನ್ನಾಟಕದ ಲೀಲೆಗೆ ಮೋಹ, ಮಮತೆ, ಮತ್ಸರ ಮುಂತಾದವುಗಳು ಬೇಕು ಎಂದು, ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ರಾಮಾಯಣದಲ್ಲಿ ರಾಮನನ್ನು ಬಹಳವಾಗಿ ಪ್ರೀತಿಸುವ ಚಿಕ್ಕಮ್ಮ(ಮಲ ತಾಯಿ) ಕೈಕೇಯಿ, ಮಂಥರೆಯ ಕುಟಿಲ ಬೋಧನೆಯಿಂದ, ರಾಜ ದಶರಥನನ್ನು ತನ್ನ ಮಗ ಭರತನಿಗೆ ಪಟ್ಟ ಕಟ್ಟಬೇಕೆಂದು ಕೇಳಿ, ರಾಮನನ್ನು 14 ವರ್ಷ ವನವಾಸಕ್ಕೆ ಕಳುಹಿಸುವಂತೆ ಆಗ್ರಹ ಮಾಡುತ್ತಾಳೆ. ಇಲ್ಲಿ ಅವಳಿಗೆ "ಅತೀ ಪುತ್ರ ವಾತ್ಸಲ್ಯ". ರಾಮನಿಗೆ ಪಟ್ಟಾಭಿಷೇಕ ಮಾಡಲು ಸಕಲ ಸಿದ್ಧತೆಗಳನ್ನೂ ಮಾಡಿಕೊಂಡಿದ್ದ ದಶರಥ, ಕೈಕೇಯಿಯ ಮಾತನ್ನು, ಇಷ್ಟವಿಲ್ಲದಿದ್ದರೂ ಒಪ್ಪಿಕೊಳ್ಳುತ್ತಾನೆ. ಇಲ್ಲಿ ಅವನಿಗೆ "ಪತ್ನಿಯಲ್ಲಿ ಅತೀ ವ್ಯಾಮೋಹ". ನಮಗೆ ಕಾಣುವುದು ಕೇವಲ ಕೈಕೇಯಿಯ ಅತೀ ವಾತ್ಸಲ್ಯ ಅಥವಾ ದಶರಥನ ಪತ್ನಿ ವ್ಯಾಮೋಹ. ಆದರೆ ವಾಸ್ತವದಲ್ಲಿ ಇವೆರಡೂ ಸಹ ಮುಂದೆ ನಡೆಯಬೇಕಾಗಿದ್ದ ರಾವಣ-ಕುಂಭಕರ್ಣರ ಸಂಹಾರಕ್ಕೆ ನಾಂದಿ ರಾವಣ ಕುಂಭಕರ್ಣರ ಸಂಹಾರವೆಂದರೆ ಶಾಪಗ್ರಸ್ತ ಜಯವಿಜಯರಿಗೆ ಎರಡನೆಯ ಜನ್ಮದಿಂದ ಮುಕ್ತಿ ಮತ್ತು ಅವರ ಅಹಂಕಾರದ ದಮನ,

ಸತ್ಯಭಾಮೆ ಕೃಷ್ಣನ ಪತ್ನಿ, ತನ್ನ ಪತಿ ಕೇವಲ ತನ್ನವನಾಗಿರಬೇಕೆಂಬ ವ್ಯಾಮೋಹ. ತನ್ನ ಸವತಿ ರುಕ್ಮಿಣಿಯೊಂದಿಗೆ ಪೈಪೋಟಿ. ತತ್ಕಾರಣವಾಗಿ ನಡೆಯುವುದೇ "ಕೃಷ್ಣ ತುಲಾಭಾರ" ಈ ಘಟನೆಯಿಂದ ಲೋಕಕ್ಕೆ "ಭಕ್ತಿಯ ನಿಜ ಸ್ವರೂಪದ ಪರಿಚಯ, ಸತ್ಯಭಾಮೆಯ ಗರ್ವ ಭಂಗ, ಇದಕ್ಕೆ ತುಲಾಭಾರವೊಂದು ಕೇವಲ ನಾಟಕ.

ಪುರಾಣಗಳಲ್ಲಿ ಬರುವ ಈ ಎರಡೂ ಘಟನೆಗಳು ಸತ್ಯವಾಗಿ ಕಂಡರೂ, ಅಲ್ಲಿ ಬರುವ ದ್ವೇಷ, ಅಸೂಯೆ, ವ್ಯಾಮೋಹ ಮುಂತಾದ ಗುಣಗಳೆಲ್ಲಾ ಯಾವುದೋ ಒಂದು ಮಹತ್ತರ ಕಾರ್ಯ ಸಾಧನೆಗೆ ಪೂರಕವಾದ ಸಾಧನಗಳಾಗಿ ಪರಿಣಮಿಸುತ್ತವೆ. ಇದೇ ರೀತಿ ಜಗತ್ತಿನ ನಾಟಕದ ನಿರ್ವಹಣೆಗೆ ಪರಮಾತ್ಮ ನಮ್ಮ ಮನಸ್ಸುಗಳಲ್ಲೂ ಅಂತಹ ಭಾವನೆಗಳನ್ನು ಇಟ್ಟು ತನಗೆ ಹೇಗೆ ಬೇಕೋ ಹಾಗೆ ಈ ಜಗತ್ತಿನ ನಾಟಕವನ್ನು ನಿರ್ದೇಶಿಸುತ್ತಿದ್ದಾನೆ ಎನ್ನುವುದು

ಸತ್ಯ. ಆದರೆ ಯಾವ ಕಾರ್ಯ ಸಾಧನೆಗೆ ಯಾವ ಘಟನೆ ಎಂದು "ಅವನ ಲೀಲೆಯನ್ನು ಅರಿಯಲಾಗದ ನಮಗೆ ಅರ್ಥವೇ ಆಗುವುದಿಲ್ಲ.

ವಿವೇಕವನ್ನು ಪಡೆದ ನಾವು ಸಾಧ್ಯವಾದಷ್ಟು ಮಟ್ಟಿಗೆ ಸತ್ಯ ಮತ್ತು ಸತ್ಯಕ್ಕೆ ಅಂಟಿಕೊಂಡರೆ, ಮೋಹ, ಮಮತೆ, ಮತ್ಸರಗಳಂತಹ ನಕಾರಾತ್ಮಕ ಭಾವಗಳು ನಮ್ಮಿಂದ ದೂರವಾಗಬಹುದು. ಅದು ನಮ್ಮ ಆಶಯವಾಗಿಬೇಕು. ಆದರೆ ಅದಕ್ಕೂ ಮೀರಿದ "ಶರಣಾಗತಿಯ ಭಾವ" ನಮ್ಮಲ್ಲಿದ್ದರೆ, ಆ ಪರಮಾತ್ಮನ





ಇಚ್ಛೆಯಂತೆ ಈ ಜಗನ್ನಾಟಕದಲ್ಲಿ ನಮ್ಮ ಪಾತ್ರವನ್ನು "ದೈವೇಚ್ಛೆ" ಯ ಅನುಗುಣವಾಗಿ ನಿರ್ವಹಿಸಲು ಸಾಧ್ಯವಾಗುತ್ತದೆ. ನಮಗೆ ಇಷ್ಟವೋ ಇಲ್ಲವೋ ನಮ್ಮ ಪಾತ್ರವನ್ನು ನಾವು ನಿರ್ವಹಿಸಲೇಬೇಕು. ಇಷ್ಟಪಟ್ಟು ನಿರ್ವಹಿಸಿದರೆ ಜೀವನ ಶಾಂತವಾಗಿರಬಹುದು.

**ಮುಕ್ತಕ – 609**

**ಆವ ಜೀವದ ಪಾಕವಾವನುಭವದಿನಹುದೋ ! |**
**ಆವ ಪಾಪಕ್ಷಯವದಾವ ಪುಣ್ಯದಿನೋ ||**
**ಕಾವಿರದೆ ಪಕ್ವವಹ ಜೀವವಿಳೆಯೊಳಗಿರದು |**
**ನೋವೆಲ್ಲ ಪಾವಕವೋ - ಮಂಕುತಿಮ್ಮ ||**

ಪಾಕವಾವನುಭವದಿನಹುದೋ=ಪಾಕವು+ಆವ+ಅನುಭವದಿನ್+ಅಹುದೋ,
ಪಾಪಕ್ಷಯವದಾವ=ಪಾಪ+ಕ್ಷಯವು+ಆವ, ಕಾವಿರದೆ=ಕಾವು+ಇರದೆ, ಪಕ್ವವಹ=ಪಕ್ವವು+ಅಹ,
ಜೀವವಿಳೆಯೊಳಗಿರದು=ಜೀವವು+ಇಳೆಯೊಳಗೆ+ಇರದು, ಅಹುದೋ=ಆಗುತ್ತದೋ, ಆವ=ಯಾವ,
ಅಹ=ಆಗುವ, ಇಳೆ=ಭೂಮಿ, ಪಾವಕ = ಅಗ್ನಿ

ಜಗತ್ತೆಂಬುದು ಒಂದು ಮೂಸೆ. ಆ ಮೂಸೆಯನ್ನು ಕಾಯಿಸುವುದೇ ತಾಪತ್ರಯಗಳು ಮತ್ತು ಅದರೊಳಗೆ ಕಾದು ಶುದ್ಧವಾಗುವುದೇ ಜೀವ ಅಥವಾ ಆತ್ಮ ಎಂದು, ಈ ಹಿಂದಿನ ಮುಕ್ತಕಗಳಲ್ಲಿ ಹೇಳಿದ್ದಾರೆ. ಆದರೆ ಬದುಕಿನ ಈ ಮೂಸೆಯಲ್ಲಿ ನಾವು ಅನುಭವಿಸುವ ಯಾವ ಕರ್ಮ, ನಮಗೆ ನಮ್ಮ ಪಾಪಗಳನ್ನು ತೊಳೆದುಕೊಳ್ಳಲು ಮತ್ತು ಹೇಗೆ ಒದಗುತ್ತದೆ ಎಂದು ಅರ್ಥವಾಗುವುದಿಲ್ಲ. ನಾವು ಮಾಡುವ ಯಾವ ಕೆಲಸದಿಂದ ನಮಗೆ ಪುಣ್ಯವುಂಟಾಗುತ್ತದೋ ಗೊತ್ತಿಲ್ಲ. ಆದರೆ ಕಾಯದೆ,ಸುಲಭವಾಗಿ ಪಕ್ವವಾಗುವ ಜೀವಗಳು ಈ ಜಗತ್ತಿನಲ್ಲಿರುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಾ, ನಾವು ಅನುಭವಿಸುವ ನೋವುಗಳೇ ನಮ್ಮನ್ನು ಶುದ್ಧೀಕರಿಸುವ ಅಗ್ನಿ ಎಂದು, ಜೀವಿಗಳ ಸಂಸ್ಕಾರದ ಪರಿಯನ್ನು ವಿಮರ್ಶಿಸಿದ್ದಾರೆ ಮಾನ್ಯ ಗುಂಡಪ್ಪನವರು.

ಬದುಕನ್ನು ಪಡೆದ ಮೇಲೆ ಪ್ರತಿಯೊಬ್ಬರೂ ಅನುಭವಸಲೇಬೇಕು. ಆ ಅನುಭವದಿಂದಲೇ ಸತ್ಯದ ಮತ್ತು ಸತ್ವದ ಅರಿವಾಗಬೇಕು. ಅನುಭವವಿಲ್ಲದೆ, ಸತ್ಯದ ಅರಿವಾಗದೆ, ಸತ್ವ ಅಂತರಂಗದೊಳಗೆ ಇಳಿಯಲು ಸಾಧ್ಯವೇ ಇಲ್ಲ. ಇದನ್ನೇ ಮಾನ್ಯ ಗುಂಡಪ್ಪನವರು "ಕಾವಿರದೆ ಪಕ್ವವಹ ಜೀವವಿಳೆಯೊಳಗಿರದು" ಎಂದಿದ್ದಾರೆ. ಆದರೆ ಯಾವ ರೀತಿಯ ಅನುಭವವನ್ನು ಪಡೆದರೆ ಯಾವ ರೀತಿಯ ಫಲ ಸಿಗುತ್ತದೆ ಎಂದು ಹೇಳುವುದು ಕಷ್ಟವಷ್ಟೇ ಅಲ್ಲ ಅಸಾಧ್ಯ ಕೂಡ. ನಾವು ಮಾಡುವ ಪಾಪ ಕರ್ಮಗಳಿಂದ ನಮಗೆ ಬದುಕಿನಲ್ಲಿ ತೊಂದರೆಗಳುಂಟಾಗುತ್ತವೆ. ಆ ಪಾಪದ ತೀವ್ರತೆಯನ್ನು ಕಡಿಮೆ ಮಾಡಿಕೊಳ್ಳಲು ನಾವು, ಮತ್ತಷ್ಟು ಪಾಪ ಸಂಚಯನ ಮಾಡದೆ ಸತ್ಕರ್ಮಗಳನ್ನೇ ಮಾಡುತ್ತಾ ಹೋದರೆ ಎಂದೋ ಒಂದು ದಿನ ಯಾವುದೋ ಒಂದು ಜನ್ಮದಲ್ಲಿ ನಮಗೆ ಈ ಪಾಪ ಕರ್ಮಗಳ ಬಂಧನದಿಂದ ಮುಕ್ತಿ ಸಿಗಬಹುದು.

ಒಬ್ಬ ಅತೀ ದುಷ್ಟ, ಮಹಾ ಪಾಪಿ, ಧನವಂತನಾಗಿ ಸುಖದ ಸುಪ್ಪತ್ತಿಗೆಯಲ್ಲಿ ಓಲಾಡುತ್ತಿರುತ್ತಾನೆ. ಅವನ ಇಂದಿನ ಸುಖ ಮುಂದಿನ ದುಃಖಕ್ಕೆ ಕಾರಣವಾಗಬಹುದು. ಮತ್ತೊಬ್ಬ ಸಾಧು, ತುಂಬಾ ಸಜ್ಜನ, ಸತ್ಯವಂತ ಅತಿಯಾದ ಕಷ್ಟಗಳನ್ನು ಅನುಭವಿಸುತ್ತಿರುತ್ತಾನೆ. ಅವನ ಇಂದಿನ ಕಷ್ಟ ಮುಂದಿನ ಶಾಂತ ಬದುಕಿಗೆ ಕಾರಣವಾಗಬಹುದು. ಇಂತಹ ದೃಷ್ಟಾಂತಗಳು ನಮಗೆ ನಮ್ಮ ಮಹಾಕಾವ್ಯಗಳಾದ ರಾಮಾಯಣ ಮಹಾಭಾರತಗಳಲ್ಲಿ ಹೇರಳವಾಗಿ ಸಿಗುತ್ತವೆ. ಆದರೆ ಏಕೆ ಹೀಗೆ ಎನ್ನುವ ಪ್ರಶ್ನೆಗೆ ಉತ್ತರ ಸಿಗುವುದಿಲ್ಲ. ಇದು ದೈವ ರಹಸ್ಯ ಮತ್ತು ತೀರಾ ಗುಹ್ಯ.

ಅತೀ ಸುಖ ಪಡುವವನು ತನ್ನ ಪುಣ್ಯವನ್ನು ಕರಗಿಸುತ್ತಾನೆಂದೂ, ಅತೀ ಕಷ್ಟ ಪಡುವವನು ತನ್ನ ಪಾಪ ಕರ್ಮವನ್ನು ಕರಗಿಸುತ್ತಾನೆಂದೂ ಒಂದು ಅಭಿಮತವಿದೆ. ಅರ್ಥಾತ್ ಪಾಪವೋ ಪುಣ್ಯವೋ ಕರಗಬೇಕಾದರೆ ಈ ಜಗತ್ತಿನ ಮೂಸೆಯಲ್ಲಿ ಕಾದು ಬೇಯಬೇಕು, ಬೆಂದು ಬೆಂಡಾಗಬೇಕು. ಆಗ ಜೀವಿ ಪುಣ್ಯ ಪಾಪಗಳ ಲೆಕ್ಕಾಚಾರಗಳಿಂದ ಮುಕ್ತನಾಗಿ ಶುದ್ಧನಾಗುತ್ತಾನೆ. ನಾವೂ ಸಹ ನಮ್ಮ ಕರ್ಮಗಳನ್ನು ಈ ಅನುಕ್ರಮದಲ್ಲೇ ಅನುಭವಿಸಬೇಕು. ಜಗತ್ತಿನ ದುಗುಡ ದುಮ್ಮಾನಗಳನ್ನು ಅನುಭವಿಸಲು ಅಡ್ಡ ದಾರಿಗಳಿಲ್ಲ, (no short cuts). ಈ ಜಗತ್ತಿನ ಅನುಭವಗಳನ್ನು ಪಡೆಯಲೇ ಬೇಕು, ಪಡೆದು ಅನುಭವಿಗಳಾಗಿ ಮುಕ್ತರಾಗಬೇಕು

**ಮುಕ್ತಕ – 610** **ಕ್ಷುತ್ತುಮಮತೆಗಳು ಜೀವಕೆ ಕುಲಿಮೆ ಸುತ್ತಿಗೆಗಳ್ |**
**ಉತ್ತಮವದೆನಿಸುವುವು ಕಿಟ್ಟಗಳ ಕಳೆದು ||**
**ಚಿತ್ತಸಂಸ್ಕಾರಸಾಧನವಯ್ಯ ಸಂಸಾರ |**
**ತತ್ತ್ವ ಪ್ರವೃತ್ತಂಗೆ - ಮಂಕುತಿಮ್ಮ ||**

ಕ್ಷುತ್ತು = ಕ್ಷುತ್ತು+ಮಮತೆಗಳು, ಕುಲಿಮೆ ಸುತ್ತಿಗೆಗಳ್= ಕುಲಿಮೆ+ಸುತ್ತಿಗೆಗಳು,
ಉತ್ತಮವದೆನಿಸುವುವು=ಉತ್ತಮವು+ಅದು+ ಎನಿಸುವು+ಅವು,
ಕ್ಷುತ್ತು=ಹಸಿವು, ಕುಲಿಮೆ= ಕಮ್ಮಾರನ ಕಾರ್ಯಕ್ಷೇತ್ರ, ತತ್ತ್ವ-ಸತ್ಯಾಧಾರಿತ ಸತ್ವ, ಕಿಟ್ಟಗಳ=ಕಶ್ಮಲಗಳ

ಕಮ್ಮಾರನ ಕುಲುಮೆಯಲ್ಲಿ ಲೋಹವನ್ನು ಕಾಯಿಸಿದಾಗ, ಕಲ್ಮಶಗಳು ಕಳೆದ ಮತ್ತು ಶುದ್ಧವಾದ ಲೋಹವನ್ನು ಸುತ್ತಿಗೆಗಳಿಂದ ಬಡಿದಾಗ, ಅದು ಬಯಸಿದ ಆಕಾರವನ್ನು ಪಡೆಯುವಂತೆ, ಬದುಕಿನಲ್ಲೂ, ದೇಹದ ಹಸಿವಿನ

ಅವಶ್ಯಕತೆಯಾದ ಆಹಾರವನ್ನು ಪಡೆಯುವ ಪ್ರಯತ್ನ ಮತ್ತು ಬೌದ್ಧಿಕ ಹಸಿವನ್ನು ಪೂರೈಸುವ ಮಮತೆ ಮುಂತಾದವುಗಳ ಸುಳಿಯಲ್ಲಿ ಬಿದ್ದು, ಹಾದು, ಅನುಭವವನ್ನು ಪಡೆದು, ಪರತತ್ವವನ್ನು ಮನೋಗತಮಾಡಿಕೊಳ್ಳಲು ಈ ಸಂಸಾರದ ಕಶಲಗಳನ್ನು ತೊಳೆದುಕೊಳ್ಳಲು ಮಾರ್ಗವೇ ಈ ಸಂಸಾರ ಎಂದು ಉಲ್ಲೇಖ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.





ಅನುಭವವಿಲ್ಲದೆ ಜ್ಞಾನಪ್ರಾಪ್ತಿ ಸಾಧ್ಯವೇ ಇಲ್ಲ ಎಂಬುವುದು ಎಲ್ಲರಿಗೂ ಗೊತ್ತಿರುವ ಸತ್ಯ. ಎಲ್ಲರೂ ಒಂದಲ್ಲ ಒಂದು ರೀತಿಯ ಅನುಭವವನ್ನು ಪಡೆಯುತ್ತಿದ್ದರೂ, ಎಲ್ಲರಿಗೂ ಜ್ಞಾನ ಪ್ರಾಪ್ತಿಯಾಗುವುದು ಎಂದು ಹೇಳಲಾಗುವುದಿಲ್ಲ. ಜ್ಞಾನಪ್ರಾಪ್ತಿಗೆ ಆಭಿಮುಖ್ಯ ಬೇಕು. ಅರಿಯಬೇಕು ಎನ್ನುವ ತುಡಿತ ಬೇಕು. ಪ್ರಶ್ನೆಗಳು ಮತ್ತು ಜಿಜ್ಞಾಸೆ ಮನದಲ್ಲಿ ಹುಟ್ಟಬೇಕು. ಅನುಭವದಿಂದುಂಟಾದ ಭಾವಗಳ ಮಥನ ಅಂತರಂಗದಲ್ಲಿ ಆಗಬೇಕು. ಪೂರ್ವಾಗ್ರಹವಿಲ್ಲದೆ ಅನ್ಯರ ಅನುಭವ, ಅನ್ಯರ ಹಿತವಚನ, ಓದಿದ, ಕಂಡ ಮತ್ತು ಕೇಳಿದ ವಿಚಾರಗಳನ್ನು ನಮ್ಮ ಒಳಗಿನ ಜಿಜ್ಞಾಸೆಯ ಒರೆಗೆ ಹಚ್ಚಿ, ಸತ್ಯವನ್ನು ಕಾಣುವ ಮತ್ತು ಒಪ್ಪಿಕೊಳ್ಳುವ ಧೈರ್ಯ ಬೇಕು. ಹಾಗೆ ಅರಿತ ಸತ್ಯವನ್ನು ಸತ್ವದ ರೂಪದಲ್ಲಿ ದೇಹ ಮನಸ್ಸು ಬುದ್ಧಿ ಮತ್ತು ಆತ್ಮಗಳೊಂದಿಗೆ ಅನುಸಂಧಾನ ಮಾಡಿಕೊಂಡರೆ, ಅದು ಮಾನ್ಯ ಗುಂಡಪ್ಪನವರು ಹೇಳುವ "ತತ್ವ ಪ್ರವೃತ್ತಿ"ಯಾಗುತ್ತದೆ. ಅಂತಹ ತತ್ವ ಪ್ರವೃತ್ತಿಯಿದ್ದರೆ ಸಂಸಾರದ ಅನುಭವಗಳು ಆತ್ಮೋನ್ನತಿಗೆ ಸಾಧನವಾಗುತ್ತದೆ ಎನ್ನುವುದೇ ಈ ಮುಕ್ತಕದ ಹೂರಣ.

ಆದರೆ ಇಂದಿನ ವೇಗದ ಬದುಕಿನಲ್ಲಿ ಬದುಕುವುದು ಅಧಿಕ, ಅನುಭವಿಸುವುದು ಕಡಿಮೆ. ಅನುಭವವೇ ಇಲ್ಲದಮೇಲೆ ಜ್ಞಾನ ಒಳಬರುವುದು ಸಾಧ್ಯವೇ ಇಲ್ಲ. ನಾವು ನೋಡುವುದು, ಕೇಳುವುದು, ಉಣ್ಣುವುದು, ಆಡುವುದು ಎಲ್ಲವೂ 'ಜೀವ'ನ ಉನ್ನತಿಗೆ ಪೂರಕವಾಗಿಲ್ಲ, ಅಲ್ಲವೇ? ನಮ್ಮ ಆಸೆ ಅಕಾಂಕ್ಷೆಗಳು, ಬಯಕೆಗಳು, ವಾಸನೆಗಳು, ಸಂಗಗಳು ಮತ್ತು ವ್ಯಾಸಂಗಗಳೂ ಸಹ ಮಾನ್ಯ ಗುಂಡಪ್ಪನವರು ಹೇಳುವ 'ತತ್ವ ಪ್ರವೃತ್ತಿಗೆ ದೂರವಾಗಿದೆ, ಅಲ್ಲವೇ?

ಹಾಗಿರುವಾಗ ತತ್ವ ಒಳ ಹೊಗುವುದೆಂತು? ಜ್ಞಾನ ಬರುವುದೆಂತು? ಇವೆಲ್ಲವೂ ಇಲ್ಲದಮೇಲೆ ಆತ್ಮೋದ್ಧಾರ ಬಹಳ ದೂರವಲ್ಲವೇ?

ಭಗವಾನ್ ಶ್ರೀಕೃಷ್ಣ 'ಉದ್ಧರೇತ್ ಆತ್ಮನಾತ್ಮಾನಂ' ಎನ್ನುತ್ತಾನೆ ಗೀತೆಯಲ್ಲಿ. ಎಂದರೆ, ನಮ್ಮ ಉದ್ಧಾರವನ್ನು ನಾವೇ ಮಾಡಿಕೊಳ್ಳಬೇಕು ಎಂದರ್ಥ. ಹಾಗಾಗಿ ನಮಗೆ ಸತ್ವ ಬೇಕಾದರೆ, ತತ್ವ ಬೇಕಾದರೆ, ಪರತತ್ವದ ಹಾದಿಯಲ್ಲಿ ಸಾಗಬೇಕಾದರೆ, ಸಂಸಾರದ ಅನುಭವಗಳಿಗೆ ನಮ್ಮನ್ನು ನಾವು ಒಡ್ಡಿಕೊಂಡು, ಅನುಭವಗಳನ್ನು ಪಡೆಯಬೇಕು ಅಥವಾ ಅನುಭವಿಸಿ ಜೀವಿಸಬೇಕು. ನಾವೆಲ್ಲಾ 'ಜಿಜ್ಞಾಸು' ಗಳಾದರೆ ಇಂದೋ ಅಥವಾ ಮುಂದೆಂದೋ ಒಂದು ದಿನ ಸುಧಾರಿತ 'ಆತ್ಮ'ಗಳಾಗಬಹುದು.

**ಮುಕ್ತಕ – 611** **ಮನೆಯ ಮಠವೆಂದು ತಿಳಿ, ಬಂದು ಬಳಗವೆ ಗುರುವು ।**
**ಅನವರತಪರಿಚರ್ಯೆಯವರೊರೆವ ಪಾಠ ॥**
**ನಿನಗುಳಿದ ಜಗವ ಮುಟ್ಟಿಪ ಸೇತು ಸಂಸಾರ ।**
**ಮನಕೆ ಪುಟ ಸಂಸ್ಕಾರ – ಮಂಕುತಿಮ್ಮ ॥**

ಅನವರತಪರಿಚರ್ಯೆಯವರೊರೆವ= ಅನವರತ+ಪರಿಚರ್ಯೆ+ಅವರು+ಒರೆವ, ನಿನಗುಳಿದ=ನಿನಗೆ+ಉಳಿದ, ಅನವರತ=ಸದಾಕಾಲ, ಪರಿಚರ್ಯೆ= ಸೇವೆ,ಮುಟ್ಟಿಪ=ತಲುಪಿಸುವ, ಸೇತು=ಸೇತುವೆ, ಪುಟ=ಪಟುತ್ವ

ಜ್ಞಾನಕ್ಕಾಗಿ ಅಲೆಯದೆ, ಮನೆಯನ್ನೇ ಮಠವೆಂದು ತಿಳಿ, ನಿನ್ನ ಮನೆಗೆ ಬಂದುಹೋಗುವ ಬಂಧು ಮಿತ್ರರೇ ನಿನ್ನ ಗುರುಗಳು. ನಿರಂತರವಾಗಿ ಅವರೊಂದಿಗಿನ ನಿನ್ನ ಪರಿಚಯ ಮತ್ತು ಅವರಿಗೆ ನೀನು ಮಾಡುವ ಸೇವೆಯೇ ನೀನು ಕಲಿಯುವ ಪಾಠ, ನಿನಗೆ ಹೊರ ಜಗತ್ತಿನೊಂದಿಗೆ ಸಂಪರ್ಕವನ್ನು ಕಲ್ಪಿಸುವ ಸೇತುವೆಯೇ ಈ ಸಂಸಾರ. ಈ ಸಂಸಾರದಲ್ಲಿ ಕಲಿತ ಪಾಠಗಳೇ ಮನಕ್ಕೆ ಪಟುತ್ವವನ್ನು ನೀಡಿ ನಿನ್ನನ್ನು ಸಂಸ್ಕಾರವಂತನನ್ನಾಗಿಸುತ್ತದೆ ಎಂದು, ಬದುಕಿನಲ್ಲಿ ಬದುಕುವುದರಿಂದಲೇ ಕಲಿಯುವ ಪಾಠವನ್ನು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು.

ಗುಂಡಪ್ಪನವರು “ಸದಾಕಾಲಕ್ಕೂ ಮನೆಯೇ ಒಂದು ಪಾಠಶಾಲೆ, ಬಂದುಹೋಗುವ ಬಂಧು ಬಳಗವೇ ನಮ್ಮ ಗುರುಗಳು” ಎನ್ನುತ್ತಾರೆ. ಜಗತ್ತಿನೊಡನೆ ನಮಗೆ ಸಂಪರ್ಕ ಕಲ್ಪಿಸುವವರೇ ಇವರು. ಇವರ ಒಡನಾಟದಿಂದಲೇ ನಮಗೆ ಬದುಕಿನ ಅನುಭವವಾಗುತ್ತದೆ. ಆ ಅನುಭವ ನಮಗೆ ಕಲಿಸುತ್ತದೆ. ಆ ಕಲಿಕೆ ನಮ್ಮನ್ನು ಪಕ್ವವಾಗಿಸುತ್ತದೆ. ನಮ್ಮ ಸಂಪರ್ಕಕ್ಕೆ ಬರುವ ಪ್ರತಿಯೊಬ್ಬರದೂ ಒಂದೊಂದು ಮನಸ್ತತ್ವ ಅವರನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳುವುದೇ ಬಹಳ ಕ್ಲಿಷ್ಟವಾದ ಕೆಲಸ, ಏಕೆಂದರೆ ಪರರನ್ನು ಅರ್ಥಮಾಡಿಕೊಳ್ಳುವಾಗ ನಮಗೆ ನಮ್ಮ ಪೂರ್ವಾಗ್ರಹಗಳು, ಪೂರ್ವ ಪರಿಕಲ್ಪನೆಗಳು, ಅಹಂಕಾರ ಎಲ್ಲವೂ ಅಡ್ಡಬರುತ್ತವೆ. ಅವುಗಳನ್ನು ಮೀರಿ ನಾವು ಅರಿತುಕೊಂಡು ನಡೆದುಕೊಂಡರೆ, ಅಂತರಂಗದಲ್ಲಿ ನಡೆಯುವ ವಿಶ್ಲೇಷಣೆ ನಮ್ಮನ್ನು ಮತ್ತಷ್ಟು ಪಕ್ವವಾಗಿಸುತ್ತದೆ.

ಪರರಂತೆಯೇ ನಮಗೂ ಒಂದು ಮನೋಭಾವ ಅಥವಾ ಮನಸ್ತತ್ವವುಂಟು. ಇದರೊಡನೆಯೂ ನಮ್ಮ ನಿರಂತರ ಅಂತರ್ಮಂಥನ ನಡೆಯುತ್ತಿರುತ್ತದೆ. ಈ ಅಂತರ್ಮಂಥನದ ಮೂಲಕ ಸತ್ಯವನ್ನು ಕಾಣುವ ಮನೋಭಾವ ಬೆಳೆಸಿಕೊಂಡರೆ ಮತ್ತು ಕಂಡ ಸತ್ಯವನ್ನು ಒಪ್ಪಿಕೊಳ್ಳುವ ಧೈರ್ಯ ನಮಗೆ ಇದ್ದರೆ, ಆಗ ಪರರನ್ನೂ ಅರಿತುಕೊಳ್ಳುವ ಮಾರ್ಗಗಳು ತೆರೆದುಕೊಳ್ಳುತ್ತವೆ. ಹೀಗೆ ನಮ್ಮನ್ನು ನಾವು ಅರಿತುಕೊಳ್ಳುವುದು, ವಿಶ್ಲೇಷಣೆ ಮಾಡಿಕೊಳ್ಳುವುದು, ಒಪ್ಪಿಕೊಳ್ಳುವುದು ಮತ್ತು ಪರರ ಸಂಪರ್ಕದಿಂದ ಜಗತ್ತಿನೊಡನೆ ಬೆರೆತು ಜಗತ್ತಿನ ಸಕಲವನ್ನೂ ಅರಿತುಕೊಳ್ಳುವ ಮತ್ತು ಅವು ಹೇಗೆ ಇವೆಯೋ ಹಾಗೆ ಅರ್ಥಮಾಡಿಕೊಂಡು ಒಪ್ಪಿಕೊಳ್ಳುವ ಕಾರ್ಯಕ್ರಮ ನಮ್ಮೊಳಗೆ ನಡೆದಾಗ, ನಾವು ಅಂತರಂಗದಲ್ಲಿ ಪಕ್ವವಾಗಬಹುದು. ಆ ಪಕ್ವತೆ ನಮಗೆ ಸಂಸ್ಕಾರವನ್ನು ನೀಡುತ್ತದೆ ಮತ್ತು 'ಆಲೇಪಿತ ಸಂಸ್ಕಾರ' ಆತ್ಮೋದ್ಧಾರಕ್ಕೆ ದಾರಿಮಾಡಿಕೊಡುತ್ತದೆ.

ಎಲ್ಲ ಕಲಿಕೆಯ ಮೂಲ ಗುರಿಯೇ "ಸಂಸ್ಕಾರ ಸಂಚಯನ", ಅಂತಹ ಗುರಿಯಿಲ್ಲದ ಯಾವುದೇ ಕಲಿಕೆಯೂ ವ್ಯರ್ಥ ಕಲಿಕೆಯಾಗುತ್ತದೆ. ಹಾಗಾಗಿ ಅಂತರ್ಮಂಥನದಿಂದಲೂ ಕಲಿಯಬೇಕು ಪರರ ಸಂಪರ್ಕದಿಂದಲೂ ಕಲಿಯಬೇಕು, ಪೂರ್ವಾಗ್ರಹವಿಲ್ಲದೆ ಕಲಿಯಬೇಕು, ಸತ್ಯವನ್ನರಿಯುವ ಮೂಲಕ 'ಸತ್ಯಗ್ರಾಹಿ'ಗಳಾಗಬೇಕು. ಆ ಸತ್ವವೇ ನಮ್ಮನ್ನು ಸಂಸ್ಕರಿಸುತ್ತದೆ. ಅಂತಹ ಕಲಿಕೆಗೆ ನಮ್ಮನ್ನು ನಾವು ಒಡ್ಡಿಕೊಂಡಾಗ, ನಮ್ಮ ಆತೋದ್ಧಾರದ ಪ್ರಯತ್ನದಲ್ಲಿ ಮತ್ತೊಂದು ಹೆಜ್ಜೆ ಮುಂದಿಟ್ಟಂತಾಗುತ್ತದೆ, ಮಾನ್ಯ ಗುಂಡಪ್ಪನವರು ಹೇಳುವ 'ಮನಕೆ ಪುಟ ಸಂಸ್ಕಾರ' ದೊರೆಯುತ್ತದೆ.





**ಮುಕ್ತಕ – 612**

**ಕಾಷಾಯವೇಂ ತಪಸು ಗೃಹಲೋಕನಿರ್ವಾಹ |**
**ವೇಷತಾಳದ ತಪಸು, ಕಠಿಣತರ ತಪಸು ||**
**ಲೇಸಿನಿಂದದು ಸಾಗೆ ಬೇಕು ಶಮ ದಮ ಸಮತೆ |**
**ಅಸಿಧಾರವ್ರತವೋ – ಮಂಕುತಿಮ್ಮ ||**

ಲೇಸಿನಿಂದದು= ಲೇಸಿನಿಂದ+ಅದು

ಕಾಷಾಯ=ಕಾವಿವಸ್ತ್ರ, ವೇಷತಾಳದ=ವೇಷ ಧರಿಸದ, ಲೇಸಿನಿಂದ=ಸುಗಮವಾಗಿ, ಶಮ=ಶಾಂತತೆ, ದಮ=ದಮನ, ಅಸಿಧಾರ=ಕತ್ತಿಯಲುಗು

ಕಾವಿ ಬಟ್ಟೆಗಳನ್ನು ಧರಿಸಿ ಕಾಡಿನಲ್ಲಿ ಕುಳಿತರೆ ಮಾತ್ರ ತಪಸ್ಸಾಗುತ್ತದೇನು? ಸಂಸಾರ ನಿರ್ವಹಣೆಯಲ್ಲಿ ಆಗುವುದಿಲ್ಲವೇನು? ತಪಸ್ವಿಯ ವೇಷವನ್ನು ಧರಿಸದಿದ್ದರೂ ಗೃಹ ನಿರ್ವಹಣೆ ಮಾಡುವುದೂ ಸಹ ಒಂದು ತಪಸ್ಸು, ಬಹಳ ಕಠಿಣ ತಪಸ್ಸು. ಅದು ಚೆನ್ನಾಗಿ ನಡೆಯಬೇಕಾದರೆ ಮಾನವರು ಶಮ ದಮದ ಸಮತೆಯನ್ನು

ಕಾಯ್ದುಕೊಳ್ಳಬೇಕು. ಈ ಗೃಹ ನಿರ್ವಹಣೆ ಅಥವಾ ಸಂಸಾರವನ್ನು ತೂಗಿಸುವುದು ಕತ್ತಿಯ ಅಲುಗಿನ ಮೇಲಿನ ನಡೆಯಂತೆ ಎಂದು, ಸಂಸಾರ ನಿರ್ವಹಣೆಯೂ ಸಹ ಒಂದು ತಪಸ್ಸು ಎನ್ನುವ ವಿಚಾರವನ್ನು ದೃಢಪಡಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜೀವನ ನಿರ್ವಹಣೆಯೇ ಒಂದು ವ್ರತ. ಆದರೆ ಆ ವ್ರತ ಬಹಳ ಕಷ್ಟತರವಾದ ವ್ರತ, ಕತ್ತಿಯ ಅಲುಗಿನ ಮೇಲಿನ ನಡೆಯಂತಹ ವ್ರತ. ಈ ವ್ರತ ಸಮರ್ಪಕವಾಗಿ ಆಗಬೇಕಾದರೆ ಎಲ್ಲವೂ ಸಮರ್ಪಕವಾಗಿರಬೇಕು. ಅಂತರಂಗದ ಅಂಗಗಳು ಮತ್ತು ಬಾಹ್ಯ ಅಂಗಗಳು ಎಲ್ಲವನ್ನೂ ಸಮತೆಯಿಂದ ಸಾಧಿಸಿದರೆ ನಿರ್ವಹಣೆ ಸೂಕ್ತವಾಗಬಹುದು. ಮಾನ್ಯ ಗುಂಡಪ್ಪನವರು ಮುಖ್ಯವಾಗಿ ಮೂರು ವಿಚಾರಗಳ ಪ್ರಾಮುಖ್ಯತೆಯನ್ನು ಉಲ್ಲೇಖಮಾಡಿದ್ದಾರೆ.

ಒಂದು ಶಮ. ಶಮವೆಂದರೆ ಶಮನಮಾಡುವುದು ಎಂದು ಅರ್ಥ. ಅಂತರಂಗದ ಅಂಗಗಳಾದ ಮನಸ್ಸು ಬುದ್ಧಿಗಳನ್ನು, ಅಂತರಂಗದ ಪ್ರಯತ್ನದಿಂದಲೇ ಶಾಂತಗೊಳಿಸಿ ನಮ್ಮ ಹಾದಿಗೆ ತಂದುಕೊಳ್ಳಬೇಕು. ಎರಡನೆಯದು ದಮ, ಎಂದರೆ ದಮನಮಾಡುವುದು ಎಂದು ಅರ್ಥ. ಅಂತರಂಗದ ಅಂಗಗಳು ಹೇಗೆ ಹತ್ತು ಕಡೆ ಹರಿದು ನಮ್ಮನ್ನು ಕಂಗಾಲಾಗಿಸುತ್ತವೆಯೋ ಅದೇ ರೀತಿ ಇಂದ್ರಿಯಾನುಸಂಧಿತವಾದ ಬಾಹ್ಯ ಅಂಗಗಳೂ, ತಮ್ಮ ಪ್ರಾಬಲ್ಯ ತೋರಿ, ನಮ್ಮನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತವೆ. ಇವುಗಳನ್ನು ಪ್ರಯತ್ನಪೂರ್ವಕವಾಗಿ ದಮನಗೊಳಿಸಬೇಕು. ಮೂರನೆಯದು ಇವೆರಡರ ನಡುವೆ ಒಂದು ಸಮನ್ವಯವನ್ನು, ಸಮತೆಯನ್ನು ಕಂಡುಕೊಳ್ಳುವುದು. ಹೀಗೆ ಬಾಹ್ಯಾಂತರಂಗಗಳಲ್ಲಿನ ಅಂಗಾಗಗಳೆಲ್ಲಾ ಶಾಂತವಾದಾಗ, ಮನಸ್ಸು ಬುದ್ಧಿಗಳು ಸಂಪೂರ್ಣ ಶಾಂತವಾದಾಗ, ಗೃಹ ನಿರ್ವಹಣೆ ಸುಲಭವಾಗುತ್ತದೆ ಮತ್ತು ಸಮರ್ಪಕವಾಗುತ್ತದೆ. ಇದನ್ನು ಸಾಧಿಸುವುದೇ ಒಂದು ವ್ರತ ಅಥವಾ ತಪಸ್ಸು.

ತಪಸ್ಸು ಮಾಡಲು ಕಾಡಿಗೆ ಹೋಗಬೇಕಾಗಿಲ್ಲ, ಕಾಷಾಯ ತೊಡಲೂ ಬೇಕಾಗಿಲ್ಲ. 'ಶಮ ದಮ'ನದ ಮೂಲಕ ಸಮತೆ ಮತ್ತು ಸಮರ್ಪಕತೆಯಿಂದ ಜೀವನ ಅಥವಾ ಸಂಸಾರ ನಿರ್ವಹಣೆಯನ್ನು ಮಾಡಿದರೆ ಅದೇ ಒಂದು ದೊಡ್ಡ ತಪಸ್ಸು ಯಾವುದೇ ಉನ್ನತ ಶಾಸ್ತ್ರಗಳ ಅಭ್ಯಾಸವನ್ನು ಮಾಡದೆ ಇದ್ದರೂ, ಸಂಸಾರದಲ್ಲಿ ಇದ್ದರೂ, 'ಸನ್ಯಾಸಿ'ಗಳಂತೆ ಅಥವಾ 'ತಪಸ್ವಿ'ಗಳಂತೆ ಜೀವಿಸಿದ ಮತ್ತು ಇಂದಿಗೂ ಜೀವಿಸುತ್ತಿರುವ ಬಹಳ ಜನರು ನಮ್ಮ ಸಂಪರ್ಕಕ್ಕೆ ಬರುತ್ತಾರೆ. ಎಲ್ಲವೂ ಇದ್ದು ಯಾವುದಕ್ಕೂ ಅಂಟದೆ, ಏನೂ ಇಲ್ಲದವರಂತೆ ಬದುಕುವುದು ಬಹಳ ಕಷ್ಟ. ಹಾಗೆ ಬದುಕಲು ನಿರಂತರ ಪ್ರಯತ್ನ ಬೇಕು, ಅಂತರಂಗ ಮತ್ತು ಬಹಿರಂಗದ ಶುದ್ಧತೆ ಬೇಕು, ಅಭ್ಯಾಸ ಬೇಕು. ವಿರಕ್ತರಲ್ಲದೇ ಇದ್ದರೂ ರಕ್ತಿಯಿಲ್ಲದೆ ಇರುವವರು ಇದ್ದಾರಲ್ಲವೇ । ಅಂತಹ ಗುಣಗಳನ್ನು ನಾವೂ ಅಳವಡಿಸಿಕೊಂಡರೆ ಸಮರ್ಪಕ ಗೃಹ ನಿರ್ವಹಣೆಗೆ ಸೂಕ್ತ ಸಾಧನವಾಗಬಹುದು.

**ಮುಕ್ತಕ – 613**

**ನಯನಯುಗದಿಂ ಜಗವ ಪೊರೆದು, ನಿಟಿಲಾಕ್ಷಿಯಿಂ ।**
**ಲಯಪಡಿಸುವುದದೇನು ಶಿವಯೋಗಲೀಲೆ? ॥**
**ಜಯಿಸಿ ಮದನನ ಬಳಿಕ ತನ್ನೊಡಲೊಳ್ ಉಮೆಯನ- ।**
**ನ್ವಯಿಸಿಕೊಂಡಿಹುದೇನು? - ಮಂಕುತಿಮ್ಮ ॥**

ನಯನಯುಗದಿಂ=ನಯನ+ಯುಗದಿಂ, ಲಯಪಡಿಸುವುದದೇನು=ಲಯಪಡಿಸುವುದು+ಅದು+ಏನು, ತನ್ನೊಡಲೊಳ್=ತನ್ನೊಡಲ+ಒಳ್, ಉಮೆಯನನ್ವಯಿಸಿಕೊಂಡಿಹುದೇನು=ಉಮೆಯನು+ಅನ್ವಯಿಸಿಕೊಂಡು+ ಇಹುದೇನು

ನಯನಯುಗದಿಂ=ಎರಡು ಕಣ್ಣುಗಳಿಂದ, ಲಯಪಡಿಸುವುದು=ಸಮನ್ವಯಗೊಳಿಸಿಕೊಂಡು, ನಿಟಿಲಾಕ್ಷ=ಹಣೆಗಣ್ಣ, ಮುಕ್ಕಣ್ಣ, ಮದನ=ಮನ್ಮಥ, ಕಾಮದೇವ.ಉಮೆ=ಪಾರ್ವತಿ,

ಈ ಜಗತ್ತನ್ನು ತನ್ನ ಎರಡೂ ಕಣ್ಣುಗಳಿಂದ ಶಾಂತನೋಟದಿಂದ ನೋಡುತ್ತಾ, ಪೊರೆಯುತ್ತಾ, ಹಣೆಯ ಕಣ್ಣಿಂದ ಲಯ ಕಾರ್ಯದಲ್ಲಿ ನಿರತನಾಗಿರುವವನು ಶಿವ. ಎರಡೂ ಕೆಲಸಗಳನ್ನು ಸಮತೆಯಿಂದ ಸಮಭಾವದಿಂದ ಮಾಡುವುದೇ ಶಿವಯೋಗಲೀಲೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು. ಒಂದು ಕಡೆ ಕಾಮನನ್ನು ತನ್ನ ಒಳಗಣ್ಣಿಂದ ಸುಟ್ಟು, ಅದೇ ರೀತಿ ಪಾರ್ವತಿಯನ್ನು ತನ್ನ ಅರ್ಧಾಂಗಿಯನ್ನಾಗಿಸಿಕೊಂಡು "ಅರ್ಧನಾರೀಶ್ವರ'ನೆಂದು ಕರೆಯಲ್ಪಟ್ಟಿದ್ದಾನೆ.

ಒಂದರೊಳಗಿದ್ದುಕೊಂಡು ಅದನ್ನೇ ಜಯಿಸಿ ಬದುಕಿನಲ್ಲಿ ಸಮನ್ವಯವನ್ನು ಕಂಡುಕೊಳ್ಳುವ ವಿಧಾನವನ್ನು ದೃಷ್ಟಾಂತ ಸಹಿತ ನಮಗೆ ತೋರಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಸಂಸಾರದಲ್ಲಿ ಇದ್ದು, ಅದಕ್ಕೆ ಅಂಟದೆ ಹೇಗೆ ಇರುವುದು? ಎನ್ನುವುದೇ ಪ್ರಶ್ನೆ. ಇಲ್ಲಿ ಶಿವನ ಅರ್ಧನಾರೀಶ್ವರ ರೂಪ, ಕಾಮ ದಹನದ ಪ್ರಸ್ತಾಪ, ಮುಕ್ಕಣ್ಣನ ಮಹೋನ್ನತ ಲೀಲೆಗಳ ಪ್ರಸ್ತಾಪವೆಲ್ಲವೂ ಕೇವಲ ದೃಷ್ಟಾಂತಕ್ಕಾಗಿಯಷ್ಟೇ. ನಮ್ಮಲ್ಲಿ ಪ್ರತಿಯೊಬ್ಬರೂ ಈ ಅರ್ಧನಾರೀಶ್ವರ ರೂಪವನ್ನು ಹೊತ್ತವರಲ್ಲವೇ?

(202)

| ಕಗ್ಗರಸಧಾರೆ | ಹೃದಯ ಮಂಥನ 613 - 618 |
|---|---|

'ಸಂಸಾರ' ಸಂಸಾರವಾಗಿರಬೇಕೇ ಹೊರತು ನಿಸ್ಸಾರವಾಗಬಾರದು. ಹಾಗೆ ನಿಸ್ಸಾರವಾಗದೆ ಇರಲು ಇದರ ಭಾರ ಹೊತ್ತ ನಾವು ಸುಖ, ದುಃಖ, ನೋವು, ನಲಿವುಗಳನ್ನು ಸಮಾನತೆಯಿಂದ ತೂಗಿಸಿಕೊಂಡು ಹೋಗಬೇಕು. ಲಯಕರ್ತನಾಗಿ, ಶಿವನಾಗಿ, ಶಾಂತನಾಗಿ, ರುದ್ರನಾಗಿ, ನಟರಾಜನಾಗಿ ಮತ್ತು ಪಾರ್ವತಿಯ ಪ್ರೀತಿಯ ಪರಮೇಶ್ವರನಾಗಿ ಇದ್ದರೂ, ಕೈಲಾಸದ ಪರ್ವತದಲ್ಲಿ ಧ್ಯಾನಮಗ್ನನಾಗಿಯೂ ಇದ್ದು, ಭಾವ ಸಮನ್ವಯತೆಯನ್ನು ಕಾಯ್ದುಕೊಳ್ಳುವ ಶಿವನಂತೆ ಎಂಬುದೇ ಈ ಮುಕ್ತಕದ ಹೂರಣ.

ಒಬ್ಬ ಸಂಸಾರಿಗನೂ ಸಹ ಗೃಹ ಸಂಬಂಧವಾದ ಉದ್ಯೋಗ, ಸಮಾಜ, ಸಂತತಿ ಮುಂತಾದವುಗಳಿಂದ ಉಂಟಾಗುವ ಭಾವ ವೈಪರೀತ್ಯಗಳನ್ನು ಎದುರಿಸುವಾಗ ಮಾಡುವ ಸಾಹಸ, ಪಡುವ ತುಮುಲಗಳನ್ನು ಕಂಡರೆ "ಅಯ್ಯೋ ಪಾಪ'ಎಂದು ಆನಿಸುತ್ತದೆ ಅಲ್ಲವೇ? ಅಂತಹ ಪರಿಸ್ಥಿತಿಯಲ್ಲೂ ಮಾನಸಿಕ ಸಂತುಲನೆಯನ್ನು ಉಳಿಸಿಕೊಂಡರೆ ಆ ಸಾಹಸ 'ಶಿವ' ಸಾಹಸದಂತೆಯೇ ಆಗುತ್ತದೆ. ಬದುಕಿನಲ್ಲಿ ನಮಗೆ ಎದುರಾಗುವ ಕಷ್ಟಗಳ ಸಂಕೋಲೆಗಳು, ಸುಖ ದುಃಖಗಳ ಸರಮಾಲೆಗಳು, ಸಂತೋಷ ಸಮಾರಂಭಗಳ ನಲುಮೆಯು, ಭಾವ ವೈಪರೀತ್ಯಗಳ ತೀವ್ರತೆಗಳನ್ನು ಎದುರಿಸಬೇಕು. ಆದರೂ ಯಾವುದರಿಂದಲೂ ವಿಚಲಿತರಾಗದೆ, ಅಸೆ ಮತ್ತು ಮೋಹವನ್ನು ಜಯಿಸಿದರೆ 'ಕಾಮ'ನನ್ನು ದಹಿಸಿ ಜಯಿಸಿದಂತೆ, ಸಂಸಾರದಲ್ಲಿ ಇದ್ದೂ ಅಂಟದ ಇದ್ದರೆ 'ಮೋಹ'ವನ್ನು ಗೆದ್ದಂತೆ ಆಗುತ್ತದೆ.

ಅಂತಹ ಸ್ಥಿತಿಗೆ ನಾವು ತಲುಪಲು ಬಹಳ ಸಾಧನೆ ಬೇಕು. ಹಾಗೆ ನಾವು ಸಾಧಿಸಿ ಆ ಸ್ಥಿತಿಗೆ ತಲುಪಿದರೆ ಬದುಕು ಶಾಂತವಾಗಿರಬಹುದು. ಹೇಳುವುದು ಬಹಳ ಸುಲಭ, ದಶೇಂದ್ರಿಯ ಪ್ರಚೋದಿತ ಮತ್ತು ಪ್ರಭಾವಿತ ನಮ್ಮ ಮನಸ್ಸು, ಬುದ್ಧಿ ಮತ್ತು ದೇಹಗಳನ್ನು ಮಣಿಸುವ ಸಾಧನೆ ಬಹಳ ಕಷ್ಟ. ಇದಕ್ಕೆ 'ಶಮ'ದ ಮತ್ತು 'ದಮ'ದ ಪ್ರಯೋಗ ಮತ್ತು ಪ್ರಯೋಜನ ಎರಡೂ ಆಗಬೇಕು. ಅದು ಕಷ್ಟವಾದರೂ ಅಸಾಧ್ಯವಲ್ಲ.

**ಮುಕ್ತಕ – 614**

**ಮಾರನಂ ದಂಡಿಸಿರೆ ಗೌರಿಯಿಂ ಭಯವೇನು? |**
**ಚಾರುಸಹಕಾರಿಯವಳೆಂದು ಶಿವನೊಲಿದನ್ ||**
**ಮೀರೆ ಮೋಹವನು ಸಂಸಾರದಿಂ ಭಯವೇನು? |**
**ದಾರಿ ಕೆಳೆಯದು ನಿನಗೆ – ಮಂಕುತಿಮ್ಮ ||**

ಚಾರುಸಹಕಾರಿಯವಳೆಂದು= ಚಾರು+ಸಹಕಾರಿ+ಅವಳು+ಎಂದು,
ಶಿವನೊಲಿದನ್=ಶಿವನು+ಒಲಿದನ್, ಕೆಳೆಯದು-ಕೆಳೆಯು+ಅದು
ಮಾರನಂ=ಕಾಮನನ್ನು, ಚಾರು=ಮನೋಹರ, ಮೀರೆ =ಗೆದ್ದರೆ, ಕೆಳೆ =ಸ್ನೇಹ,

ಮನ್ಮಥನನ್ನು ಸುಟ್ಟರೆ ಗೌರಿಯಿಂದ ಭಯವೇನು? ಮನೋಹರ ಮಾನಸಳು ಅವಳೆಂದು ಪಾರ್ವತಿಗೆ

ಒಲಿದಿಹನು, ಶಂಕರ, ಹಾಗೆಯೇ ಸಂಸಾರದಲ್ಲಿರುವವರಿಗೆ ಮೋಹವನ್ನು ತೊರೆದ ಮೇಲೆ ಭಯವಿರುವುದಿಲ್ಲ. ಮೋಹರಹಿತವಾದ ಮಾರ್ಗವು ನಮಗೆ ಸನ್ನಿಹಿತವಾಗಿ ಸ್ನೇಹಿತನಂತೆ ಭವದ, ಅಂದರೆ ಸಂಸಾರದ ಹಾದಿಯನ್ನು ಸವೆಸಲು ಸಹಕಾರಿಯಾಗಿರುತ್ತದೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮ ಮನಸ್ಸಿನ ಮೋಹ, ಎಂದರೆ ಇಲ್ಲಿನ ವಸ್ತು, ವಿಷಯ ಮತ್ತು ವ್ಯಕ್ತಿಗಳ ಮೇಲಿನ ನಮ್ಮ ನಂಟಿಂದ ನಾವು ಈ ಜಗತ್ತಿಗೆ ಅಂಟಿಕೊಂಡಿದ್ದೇವೆ. ಸ್ಪರ್ಶದ ಪಂಚ ಇಂದ್ರಿಯಗಳು ಮತ್ತು ಜ್ಞಾನದ ಪಂಚ ಇಂದ್ರಿಯಗಳು, ನಮಗೆ ಮತ್ತು ಈ ಜಗತ್ತಿಗೆ ನಂಟನ್ನು ಬೆಸೆಯಲು ಮೋಹವೆಂಬ ಅಂಟನ್ನು ಸೃಷ್ಟಿಸಿ ನಮಗದನ್ನು ಲೇಪಿಸಿ, ನಾವು ಈ ಜಗತ್ತನ್ನು ಮೋಹಿಸುವಂತೆ ಮಾಡುತ್ತದೆ. “ಆಹಾ! ನಾವು ಸಿಕ್ಕಿಬಿದ್ದಿದ್ದೇವೆ” ಎಂಬ ಅರಿವು ಮೂಡುವಷ್ಟರಲ್ಲಿ, ನಾವು ಬಿಡಿಸಲಾರದ ಅಂಟಿಂದ ಈ ಜಗತ್ತಿಗೆ ಅಂಟಿಕೊಂಡಿರುತ್ತೇವೆ. ನಮ್ಮ ಪ್ರಮೇಯವೇ ಇಲ್ಲದೆ ನಾವು ಈ ಜಗತ್ತೆಂಬ ಕೆಸರ ಹೊಂಡದೊಳಕ್ಕೆ ಬಿದ್ದು, ಒದ್ದಾಡುತ್ತಾ ಎದ್ದು ಬರಲಾರದ ಸ್ಥಿತಿಯಲ್ಲಿದ್ದೇವೆ. ಜಗತ್ತಿನ ಅತ್ಯುನ್ನತ ಶಕ್ತಿ ಎಂದರೆ ಪರಮ ಶಕ್ತಿಯ ಸ್ವರೂಪನಾದ ಶಿವನು ಮಾತ್ರ, ನಮ್ಮನ್ನು ಈ ಜಗತ್ತಿಗೆ ಅಂಟಿಸಲು ಕಾರಣವಾದ ಮತ್ತು ಮೋಹಕ್ಕೆ ತಳ್ಳುವ 'ಕಾಮ'ನನ್ನು ಸುಟ್ಟುಹಾಕಿರುವಾಗ, ಉಮೆಯನ್ನು ವಿವಾಹವಾಗಲು ಭಯಪಡಬೇಕಾದುದೇನಿಲ್ಲ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ಬೆಂಕಿಯಲ್ಲಿ ಕೈಯಿಟ್ಟರೂ, ಸುಡದಂತಹ ಶಕ್ತಿ ನಮ್ಮಲ್ಲಿದ್ದರೆ ಆಗ ನಿರ್ಭಯವಾಗಿ ನುಗ್ಗಬಹುದು. ಆದರೆ ಈ ಜಗತ್ತಿನ ಮೋಹವೆಂಬ ಬೆಂಕಿ ನಮ್ಮನ್ನು ನಿರಂತರ ಸುಡುತ್ತಲೇ ಇರುತ್ತದೆ. ಒಂದು ಸುಟ್ಟಗಾಯ ಮಾಗುವ ವೇಳೆಗೆ ಮತ್ತೊಂದು ಕಡೆ ಸುಟ್ಟಿರುತ್ತದೆ. ಈ ಮೋಹವೆಂಬ ಬೆಂಕಿ ನಮಗೆ ತೊಂದರೆ ಮಾಡಬಾರದೆಂದರೆ, ಅದಕ್ಕೆ ಎರಡು ಮಾರ್ಗಗಳಿವೆ, ಒಂದು ಬೆಂಕಿಯಿಂದ ದೂರವಿರುವುದು, ಅದು ಸಾಧ್ಯವಾಗದಿದ್ದರೆ ಅದರ ತೀವ್ರತೆಯನ್ನು ತಡೆದುಕೊಂಡು ಬದುಕುವ ಶಕ್ತಿಯನ್ನು ನಮಲ್ಲಿ ನಾವು ಹೆಚ್ಚಿಸಿಕೊಳ್ಳುವುದು. ವಸ್ತು, ವಿಷಯ ಅಥವಾ ವ್ಯಕ್ತಿಗಳ ಸಂಸರ್ಗದಲ್ಲಿದ್ದರೂ ಯಾವುದೇ ರೀತಿಯ ಸಂಬಂಧವನ್ನು ಬೆಳೆಸಿಕೊಳ್ಳದೆ ಇರುವುದು ಬಾಹ್ಯ ನಿರ್ಲಿಪ್ತತೆ. ಅಲ್ಲದೆ ಅನಿವಾರ್ಯವಾಗಿ ಅವುಗಳ ಸಂಗದಲ್ಲಿರಬೇಕಾದಾಗ, ಅವುಗಳಿಗೆ ಅಂಟದೆ ಇರುವಂತಹ ಮನೋಭಾವವನ್ನು ಬೆಳೆಸಿಕೊಳ್ಳುವುದು ಅಂತರಂಗದ ನಿರ್ಲಿಪ್ತತೆ, ಆ ರೀತಿಯ ಮನೋಭಾವ ಬೆಳೆಸಿಕೊಂಡರೆ, ಈ ಸಂಸಾರವೆಂಬ ಬೆಂಕಿ ಸುಡುವುದೂ ಇಲ್ಲ, ಹಾಗೆ ಸುಟ್ಟರೂ ನಮ್ಮ 'ಅಂತರಂಗದ ನಿರ್ಲಿಪ್ತತೆಯ' ಮುಲಾಮಿನ ಲೇಪನ ನಮ್ಮನ್ನು ಕಾಯುತ್ತದೆ.

ಜಗನ್ನಾಟಕವನ್ನು ಮುಂದುವರೆಸಿಕೊಂಡು ಹೋಗಲು, 'ಮೋಹ'ವನ್ನು ಒಂದು ಸಾಧನದಂತೆ ಸೃಷ್ಟಿಸಿದ್ದಾನೆ ಆ ಪರಮಾತ್ಮ, ಅವನನ್ನು ಸೇರಲು ನಮಗೆ ಅಡ್ಡಿಯಾಗಿರುವುದೇ ಈ ಮೋಹ. ಇದರಿಂದ ಬಿಡಿಸಿಕೊಳ್ಳುವ ಮಾರ್ಗವನ್ನು ನಮ್ಮ ನಮ್ಮ ರೀತಿಯಲ್ಲೇ ಕಂಡುಕೊಳ್ಳಬೇಕು. ಹಾಗೆ ಆರಿಸಿಕೊಂಡ ಹಾದಿಯಲ್ಲಿ ಅನನ್ಯಭಾವದಿಂದ ಮುಂದೆ ಸಾಗಿದರೆ ಮಾನ್ಯ ಗುಂಡಪ್ಪನವರು "ದಾರಿ ಕೆಳೆಯದು ನಿನಗೆ' ಎಂದು ಹೇಳುವಂತೆ ಆ ದಾರಿಯೇ ನಮ್ಮನ್ನು ದಡ ಮುಟ್ಟಿಸುತ್ತದೆ. ವಿಚಲಿತರಾಗದೆ, ಮುಂದಕ್ಕೆ ಸಾಗಿದರೆ ಗಮ್ಯ ಸೇರಬಹುದು.

(204)



**ಮುಕ್ತಕ – 615**

**ಹಾಲ ಕಾಯಿಸಿ ಹೆಪ್ಪನಿಕ್ಕಿ ಕಡೆದೊಡೆ, ಮೊದಲು |**
**ಮೇಲೆ ಕಾಣದ ಬೆಣ್ಣೆ ತೇಲಿ ಬರುವಂತೆ ||**
**ಬಾಳನೀ ಜಗದ ಮಂತುವು ಕಡೆಯಲೇಳುವುದು |**
**ಅಳದಿಂದಾತ್ಮಮತಿ - ಮಂಕುತಿಮ್ಮ ||**

ಹೆಪ್ಪನಿಕ್ಕಿ=ಹೆಪ್ಪನು + ಇಕ್ಕಿ, ಬಾಳನೀ=ಬಾಳನು+ಈ, ಕಡೆಯಲೇಳುವುದು=ಕಡೆಯಲು+ಏಳುವುದು, ಅಳದಿಂದಾತ್ಮಮತಿ=ಆಳದಿಂದ+ಆತ್ಮಮತಿ, ಮಂತು = ಕಡಗೋಲು.

ಹಾಲನ್ನು ಕಾಯಿಸಿ, ಅದಕ್ಕೆ ಹೆಪ್ಪನ್ನು ಸೇರಿಸಿ, ಅದು ಮೊಸರಾದಮೇಲೆ ಕಡೆದರೆ, ಮೊದಲು ಕಾಣದೆ ಇದ್ದ ಬೆಣ್ಣೆ, ತೇಲಿ ಮೇಲೆ ಬರುವಂತೆ, ನಮ್ಮ ಬದುಕನ್ನು ಈ ಜಗತ್ತಿನಲ್ಲಿ ನಮಗಾಗುವ ಅನುಭವಗಳೆಂಬ ಕಡಗೋಲಿನಿಂದ ಕಡೆದಾಗ, ನಮ್ಮೊಳಗಿಂದಲೇ 'ಆತ್ಮಮತಿ' ಹೊರಬರುತ್ತದೆ ಎಂದು, ಬದುಕಿನ ಬವಣೆಗಳಿಂದ ನಾವು ಪಡೆಯಬಹುದಾದ ಜ್ಞಾನದ ವಿಚಾರವನ್ನು ಮಂಡಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಹಸುವಿನ ಹಾಲಿನಲ್ಲಿ ಮೊದಲೇ ಹಾಲು, ಮೊಸರು, ಬೆಣ್ಣೆ, ಮತ್ತು ತುಪ್ಪದ ಗುಣಗಳು ಅಡಕವಾಗಿರುವ ಹಾಗೆ ಪ್ರತೀ ಪ್ರಾಣಿಯೂ ಈ ಜಗತ್ತಿಗೆ ಬರುವಾಗಲೇ ಹಲವಾರು ಗುಣಗಳನ್ನು ಹೊತ್ತು ತರುತ್ತದೆ. ಆದರೆ ಆ ಗುಣಗಳು ಪೂರ್ಣತಯಾ ರೂಪುಗೊಳ್ಳಬೇಕಾದರೆ ಅನುಭವಗಳೆಂಬ ಕಡಗೋಲಿಂದ ಮಂಥನವಾಗಬೇಕು. ಹಾಗಾಗಬೇಕಾದರೆ ನಾವು ನಮ್ಮನ್ನು ಆ ರೀತಿಯ ಮಂಥನಕ್ಕೆ ಒಡ್ಡಿಕೊಳ್ಳಬೇಕು. ಅಂತರಂಗದಲ್ಲಿ ಸತ್ಯದ ಅನುಭವವಾಗಬೇಕು. ಆ ಅರಿವಿನಿಂದ ಸತ್ವದ ಅನುಭವವಾಗಬೇಕು. ಹೀಗೆ ಬದುಕಿನ ನಮ್ಮ ಅನುಭವಗಳೇ ನಮಗೆ ಗುರುವಾಗಬೇಕು.

ಸುಖ, ದುಃಖ, ನೋವು, ನಲಿವು, ಪ್ರೇಮ, ಪ್ರೀತಿ, ಸ್ನೇಹ, ದ್ವೇಷ, ಮೋಹ-ಮತ್ಸರ ಹೀಗೆ ನಮ್ಮ ಭಾವಗಳೇ ನಮಗೆ ಅನುಭವಗಳನ್ನು ನೀಡುತ್ತವೆ. ಆ ಅನುಭವಗಳು ನಮ್ಮ ಮನಸ್ಸು ಬುದ್ಧಿಗಳ ಮೇಲೆ ತಮ್ಮ ಪರಿಣಾಮ ಬೀರಿ, ನಮಗೆ ಅನುಭವಗಳ ಉಣಬಡಿಸುತ್ತದೆ. ಆ ಅನುಭವಗಳನ್ನು ನಾವು ಅಂತರಂಗಕ್ಕೆ ಇಳಿಸಿಕೊಂಡು ವಿಚಾರದ ಒರಗೆ ಹಚ್ಚಿ ಅಲ್ಲಿ ಸತ್ಯಾಸತ್ಯತೆಯ, ಸೂಕ್ತಾಸೂಕ್ತತೆಯ ವಿಚಾರ ನಡೆದಾಗ ಸತ್ವದ ಅನುಭವವಾಗುತ್ತದೆ. ಸತ್ವದ ಪರಿಚಯ ಮತ್ತು ಅನುಭವ ಧೀರ್ಘಕಾಲ ನಮ್ಮಲ್ಲಿ ಉಳಿದಾಗ ಮತ್ತು ಸ್ಥಿರವಾದಾಗ ಅದು ಆತ್ಮದ ಗುಣವಾಗುತ್ತದೆ.

ಹಸಿಯ ಹಾಲಿನಂತಿದ್ದ ನಮ್ಮ ಗುಣಗಳು, ಬದುಕಿನ ಬವಣೆಗಳೊಂದಿಗೆ ಸೇರಿ, ಕದಡಿ, ಒಡೆದು ಮೊಸರಾಗುತ್ತದೆ. ಬವಣೆಗಳಿಂದುಂಟಾದ ಅನುಭವಗಳ ಮಂಥನದಿಂದ ಮನಸ್ಸು ಬುದ್ಧಿಗಳು, ಬೆಣ್ಣೆಯಂತೆ ಮೃದುವಾಗುತ್ತದೆ ಮತ್ತು ಮಂಥನ ನಿಂತು ಶಾಂತವಾಗುತ್ತದೆ. ಆ ಶಾಂತ ಸ್ಥಿತಿಯಲ್ಲಿ 'ತಪನ'ವುಂಟಾಗಿ

ಆ ತಪನದ ಬಿಸಿಯಲ್ಲಿ ಬೆಣ್ಣೆ ಕರಗಿ ಘಮಘಮಿಸುವ ತುಪ್ಪವಾಗುವಂತೆ, ಮನಸ್ಸು ಬುದ್ಧಿಗಳಲ್ಲಿ ಸತ್ಯದ ಅರಿವಾಗಿ ಆ ಅರಿವಿನಿಂದ ತತ್ವಗೋಚರವಾಗಿ, ಸತ್ವ ಮತ್ತು ತತ್ವವೇ ಆತ್ಮದ ಗುಣವಾಗುತ್ತದೆ. ನಮ್ಮನ್ನು ನಾವು ಮಂಥನಕ್ಕೆ ಒಡ್ಡಿಕೊಂಡಾಗ ಮಾತ್ರ, ಹಸಿ ಹಸಿಯಾಗಿದ್ದ ಆತ್ಮದ ಗುಣ ಪಕ್ವವಾಗುತ್ತದೆ. ಸುಮ್ಮನೆ ಪ್ರಾಣಿಗಳಂತೆ ತಿಂದುಂಡು ನಿದ್ರಾ ಮೈಥುನದಲ್ಲೇ ನಿರತರಾಗಿದ್ದರೆ, ನಿರಂತರವಾಗಿ ಅಪಕ್ವತೆಯಲ್ಲೇ ಬಳಲಬೇಕಾಗುತ್ತದೆ. ಪ್ರತಿಯೊಬ್ಬರೂ ಅಪಕ್ವತೆಯಿಂದ ಪಕ್ವತೆಯೆಡೆಗೆ ಹೆಜ್ಜೆ ಹಾಕುವ ಪ್ರಯತ್ನವನ್ನು
ಮಾಡಲೇಬೇಕು.

**ಮುಕ್ತಕ – 616** **ಭುಕ್ತಿಪಥ ಮುಕ್ತಿಪಥ ಬೇರೆಬೇರೆಯವಲ್ಲ |**
**ಯುಕ್ತದಿಂದೆರಡುಮಂಚುಗಳೊಂದೆ ಪಥಕೆ ||**
**ಸತ್ವಶೋಧನೆ ಲೋಕಸಂಸ್ಕಾರದಿಂ ನಿನಗೆ |**
**ಶಕ್ತಿಯುಧ್ಯಾತ್ಮಕದು - ಮಂಕುತಿಮ್ಮ ||**

ಯುಕ್ತದಿಂದೆರಡುಮಂಚುಗಳೊಂದೆ =ಯುಕ್ತದಿಂದ+ಎರಡುಂ+ಅಂಚುಗಳು+ಒಂದೆ, ಶಕ್ತಿ+ಆಧ್ಯಾತ್ಮಕೆ+ಅದು, ಭುಕ್ತಿಪಥ = ಹೊಟ್ಟೆಪಾಡಿನ ದಾರಿ. ಮುಕ್ತಿಪಥ=ಪರಮಾರ್ಥದ ಹಾದಿ, ಯುಕ್ತದಿಂದ=ಮೂಲ ರೂಪದಿಂದ,

ಹೊಟ್ಟೆಪಾಡಿನ ದಾರಿ ಮತ್ತು ಪರಮಾರ್ಥದ ಹಾದಿ ಎರಡೂ ಬೇರೆಬೇರೆಯಲ್ಲ. ಬೇರೆಬೇರೆಯಂತೆ ಕಂಡರೂ ಈ ಹಾದಿಗೆ ಅಂಚುಗಳೊಂದೆ. ಲೋಕದ ಬದುಕಿನಿಂದಲೇ ಸತ್ಯ ಶೋಧನೆಯಾಗಬೇಕು. ಅಂತಹ ಪ್ರಯತ್ನದಿಂದ ನಮ್ಮ ಆಧ್ಯಾತ್ಮಿಕ ಬದುಕಿಗೆ ಶಕ್ತಿ ಹೆಚ್ಚಾಗುತ್ತದೆ ಎಂದು, ಉಲ್ಲೇಖ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಜಗತ್ತಿನಲ್ಲಿ ಅಸ್ತಿತ್ವಕ್ಕೆ ಹೋರಾಡುವುದು ಭುಕ್ತಿ ಮಾರ್ಗ. ಎಲ್ಲಾ ರೀತಿಯ ಬಂಧನಗಳಿಂದ ಬಿಡಿಸಿಕೊಂಡು ಎಲ್ಲವನ್ನೂ ತೊರೆಯುವುದು ಮುಕ್ತಿಮಾರ್ಗ, ಇವೆರಡೂ ಬೇರೆ ಬೇರೆಯಾಗಿ ಇರಲು ಸಾಧ್ಯವೇ ಇಲ್ಲ, ಏಕೆಂದರೆ ಒಂದಕ್ಕೊಂದು ಪೂರಕ ಮತ್ತು ಒಂದರೊಳಗೆ ಮತ್ತೊಂದು ಹಾಸುಹೊಕ್ಕಿದೆ. ಬದುಕಿನ ದಾರಿಯಲ್ಲಿ ಪಾರಮಾರ್ಥದ ಗುರಿಯಿದ್ದರೆ, ಲೌಕಿಕದ ಹಾದಿಯೂ ಸುಗಮವಾಗಿರುತ್ತದೆ. ಬಾಳಿನ ಬವಣೆಗಳ ನಡುವೆ ಊರ್ಧ್ವಮುಖವಾದ ಚಿಂತನೆ ಇದ್ದರೆ, ಆ ಬವಣೆಗಳ ತೀವ್ರತೆಯು ಕಡಿಮೆಯಾಗಿ, ಅವುಗಳಿಂದ ಬಿಡಿಸಿಕೊಳ್ಳುವ ಪ್ರಯತ್ನವು ನಡೆಯುತ್ತದೆ. ಹಾಗಾಗಿ ಭುಕ್ತಿಯ ಮಾರ್ಗದಲ್ಲೇ ಮುಕ್ತಿಯನ್ನು ಕಂಡುಕೊಳ್ಳುವ ಪ್ರಯತ್ನ ಮಾಡಬೇಕು.

ನಾವು ಕಾಣುವುದೇನೆಂದರೆ ಲೌಕಿಕದ ಅಂಟನ್ನು ಬಿಡಿಸಿಕೊಳ್ಳದ ಹೊರತು, ಪಾರಮಾರ್ಥದ ಹಾದಿ ತುಳಿಯಲಾಗುವುದಿಲ್ಲ ಎನ್ನುವ ಅಭಿಮತ. ಅಷ್ಟೇ ಅಲ್ಲ ಪಾರಮಾರ್ಥದ ಹಾದಿ ತುಳಿದರೆ, ಲೌಕಿಕ ಬದುಕು





ಹಾಳಾಗುತ್ತದಲ್ಲ ಎನ್ನುವ ಭಯ.

ಆದರೆ ಮಾನ್ಯ ಗುಂಡಪ್ಪನವರು ಹೇಳುವ ಹಾಗೆ, ಲೌಕಿಕ ಮತ್ತು ಪಾರಮಾರ್ಥದ ಹಾದಿಯಲ್ಲಿ ಸಮನಾಗಿ ತೂಗಿಸಿಕೊಂಡು ಹೋದರೆ, ಬದುಕಿನಲ್ಲಿ ಆಗುವ ಅನುಭವದಿಂದ, ಮನಸ್ಸು ಬುದ್ಧಿಗಳು ಸಂಸ್ಕರಣಗೊಂಡು ಸತ್ಯದ ಅರಿವಾಗುತ್ತದೆ. ಸತ್ಯದ ಅರಿವಾದರೆ ಪರತತ್ವದ ಹಾದಿಯಲ್ಲಿನ ನಮ್ಮ ನಡಿಗೆ ಸುಲಭವಾಗುತ್ತದೆ. ಒಂದು ಊರಿಂದ ಮತ್ತೊಂದು ಊರಿಗೆ ಹೋಗಲು ಬಸ್ಸಿನಲ್ಲಿ ಪ್ರಯಾಣ ಮಾಡುವಾಗ, ನಿರಂತರ ಪ್ರಯಾಣ ಮಾಡುವುದು ನಮ್ಮ ಗುರಿಯಾಗಿರುವುದಿಲ್ಲ. ನಮ್ಮ ಊರನ್ನು ಸೇರುವುದೇ ನಮ್ಮ ಗುರಿಯಾಗಿರುತ್ತದೆ ಮತ್ತು ಆಗಿರಬೇಕು. ಬಸ್ಸಿನ ಪ್ರಯಾಣ ಕೇವಲ ಸಾಧನವಷ್ಟೇ. ಹಾಗೆಯೇ ಲೌಕಿಕದ ಬದುಕಿನಿಂದಲೇ ನಾವು ಪಾರರ್ಮಾರ್ಥವನ್ನು ಸಾಧಿಸಬೇಕು. ಹಾಗಾದಾಗ ಮಾತ್ರ ಆಧ್ಯಾತ್ಮ ಸಾಧನೆಯೂ ಶಕ್ತಿಯುತವಾಗುತ್ತದೆ

ವಾಚಕರೆ, ಹೇಳುವುದು ಬಹಳ ಸುಲಭ. ಈ ಜಗತ್ತಿನ ಅಂಟನ್ನು ಬಿಡಿಸಿಕೊಂಡು ಪಾರಮಾರ್ಥವನ್ನು ಸಾಧಿಸುವುದು ಬಹಳ ಕಷ್ಟ ಮತ್ತು ಕ್ಲಿಷ್ಟ, ಆದರೆ ಸಂಕಲ್ಪ ದೃಢವಾಗಿ, ಶುದ್ಧ ಪ್ರಯತ್ನ ನಮ್ಮದಾದರೆ, ಜನ್ಮ ಜನ್ಮಾಂತರದಲ್ಲಿ ಆತ್ಮ ಸಂಸ್ಕರಣಗೊಂಡು ನಾವು ಸೇರಬೇಕಾದ ಗಮ್ಯವನ್ನು ಖಂಡಿತ ಸೇರುವ ಸಾಧ್ಯತೆ ಇದೆ. ಪ್ರಯತ್ನ ಪಡಬೇಕು.

**ಮುಕ್ತಕ – 617**

**ಧ್ವನಿತ ಪ್ರತಿಧ್ವನಿತ ಮನುಜಜೀವಿತವೆಲ್ಲ ।**
**ಕುಣಿವುದವನೆದೆ ಜಗತ್ಪ್ರಕೃತಿ ಪಾಡುವವೊಲ್ ॥**
**ಇನಿದಕೊಲವಳಲಿಗನುತಾಪ; ಸೆಣಸಿಗೆ ಬೀರ ।**
**ಘನಗರ್ಜಿತಗೆ ದೈನ್ಯ - ಮಂಕುತಿಮ್ಮ ॥**

ಮನುಜಜೀವಿತವೆಲ್ಲ=ಮನುಜ+ಜೀವಿತವು+ಎಲ್ಲ, ಕುಣಿವುದವನೆದೆ=ಕುಣಿವುದು+ಅವನ+ಎದೆ, ಜಗತ್ಪ್ರಕೃತಿ=ಜಗತ್+ಪ್ರಕೃತಿ, ಇನಿದಕೊಲವಳಲಿಗನುತಾಪ=ಇನಿದಕೆ+ಒಲವ+ಅಳಲಿಗೆ+ಅನುತಾಪ, ಪಾಡುವವೊಲ್=ಹಾಡುವಂತೆ, ಇನಿದಕೆ= ಪ್ರೀತಿಗೆ, ಅಳಲಿಗೆ=ದುಃಖಕ್ಕೆ, ಅನುತಾಪ=ಅನುಕಂಪ, ಕರುಣೆ.

ಜಗತ್ತಿನ ಪ್ರಕೃತಿ ಜನ್ಯವಾದ ತ್ರಿಗುಣಗಳಿಗನುಸಾರವಾಗಿ ಮನುಷ್ಯನ ಎದೆಯಲ್ಲಿ ಉಂಟಾಗುವ ಭಾವನೆಗಳಿಂದ ಇವನು ಧ್ವನಿಗೆ ಪ್ರತಿಧ್ವನಿ ಎಂದರೆ, ಕ್ರಿಯೆಗೆ ಒಂದು ಪ್ರತಿಕ್ರಿಯೆ ತೋರುತ್ತಾನೆ. ಪ್ರೀತಿ ತೋರಿದರೆ ಪ್ರೀತಿ, ದುಃಖದಲ್ಲಿ ಮರುಕ ಅಥವಾ ಅನುಕಂಪ, ಹೋರಾಟದಲ್ಲಿ ಧೈರ್ಯ, ಘೋರ ಘರ್ಜನೆಗೆ ದೈನ್ಯತೆಯನ್ನು ತೋರುತ್ತಾನೆ ಎಂದು, ವಸ್ತು ವಿಷಯ ಮತ್ತು ವ್ಯಕ್ತಿಗಳ ಕುರಿತು ಮನುಷ್ಯನ ಪ್ರತಿಕ್ರಿಯೆಯ ವಿಷಯವನ್ನು ಪ್ರಸ್ತಾಪಮಾಡಿದ್ದಾರೆ ಮಾನ್ಯ ಗುಂಡಪ್ಪನವರು, ಈ ಮುಕ್ತಕದಲ್ಲಿ.

ಪ್ರಕೃತಿಯಲ್ಲಿನ ಕೋಟಿ ಕೋಟಿ ಜೀವ ಸಮೂಹದಲ್ಲಿ ಮಾನವನೂ ಒಂದು. ಪ್ರಕೃತಿಯಲ್ಲಿನ ತ್ರಿಗುಣಗಳಿಂದಲೇ

ಇವನ ಸ್ವಭಾವವೂ ಆಗಿದೆ. ಆದ್ದರಿಂದ ಇವನ ಪ್ರತಿಕ್ರಿಯೆಯೂ ತ್ರಿಗುಣಾತ್ಮಕವಾಗಿಯೇ ಇದೆ. ಈ ಗುಣಗಳ ಪ್ರಮಾಣ ಭೇದವಿದ್ದರೂ ಮಾನವನ ಎಲ್ಲಾ ಪ್ರತಿಕ್ರಿಯೆಯೂ, ಈ ತ್ರಿಗುಣ ಪ್ರಚೋದಿತವೇ ಆಗಿದೆ. ಒಂದು ಧ್ವನಿಗೆ ಒಂದು ಧ್ವನಿ, ಒಂದು ಕ್ರಿಯೆಗೆ ಒಂದು ಪ್ರತಿಕ್ರಿಯೆ, ಪ್ರೀತಿ ಪ್ರೇಮ ತೋರಿದರೆ ಒಲವ ತೋರುವುದು, ದುಃಖಕ್ಕೆ ಅನುಕಂಪ ತೋರುವುದು, ಹೋರಾಟದಲ್ಲಿ ಧೈರ್ಯವನ್ನು ಮತ್ತು ವಿಷಮ ಪರಿಸ್ಥಿತಿಯಲ್ಲಿ ಅತೀ ಶಕ್ತಿಯುತ ಘರ್ಜನೆಯನ್ನು ಎದುರಿಸಬೇಕಾದಾಗ, ದೈನ್ಯತೆಯನ್ನು ತೋರುವುದು ಮನುಷ್ಯನಿಗೆ ಸಹಜವೆಂದು ಮಾನ್ಯ ಗುಂಡಪ್ಪನವರು ಹೇಳುತ್ತಾರೆ.

ಇದು ಸಹಜವಾಗಿ ಇರುವ ಅಥವಾ ಇರಬೇಕಾದ ಸ್ಥಿತಿ. ಜಗತ್ಸೃಷ್ಟಿಯ ಸಕಲ ಜೀವರಾಶಿಗಳಲ್ಲೂ ಈ ಗುಣಗಳನ್ನು ನೋಡಬಹುದು. ತಿಳುವಳಿಕೆ ಮತ್ತು ಬುದ್ಧಿವಂತಿಕೆ ಸ್ವಲ್ಪ ಅಧಿಕವಾಗಿರುವ ಮಾನವ ಪ್ರಾಣಿ ಮಾತ್ರ ಲೌಕಿಕಾಸಕ್ತಿ ಅಧಿಕವಾಗಿ, ಸ್ವಾರ್ಥ ಹೆಚ್ಚಾಗಿ, ಲೋಭಿಯಾಗಿ ತನ್ನ ಸಹಜ ಗುಣಗಳನ್ನು ಮರೆತು, ಸ್ವಲ್ಪ ವಿಭಿನ್ನವಾಗಿ ವರ್ತಿಸುತ್ತಿದ್ದಾನೆ. ಪರರ ಸಂತೋಷ ಅಥವಾ ಅಭ್ಯುದಯವನ್ನು ಕಂಡು ಅಸಹನೆ, ಸಾಧು ಸಜ್ಜನರನ್ನು ಅವಹೇಳನ ಮಾಡುವುದು, ಅನ್ಯರ ದುಃಖಕ್ಕೆ ಸ್ಪಂದಿಸದೇ ಇರುವುದು, ಎಲ್ಲ ಪರಿಸ್ಥಿತಿಯನ್ನೂ ತನ್ನ ಸ್ವಾರ್ಥಕ್ಕೆ ಮತ್ತು ಸ್ವಹಿತಕ್ಕೆ ಹೇಗೆ ಬಳಸಿಕೊಳ್ಳುವುದು ಎಂದು ಯೋಚನೆ ಮಾಡುವುದರಲ್ಲಿಯೇ ನಿರತನಾಗಿರುತ್ತಾನೆ. ರಜೋಗುಣ ಮತ್ತು ತಮೋಗುಣಗಳ ಆಧಿಪತ್ಯ ಅಧಿಕವಾದಾಗ ಇಂತಹ ಪರಿಸ್ಥಿತಿ ಏರ್ಪಡುತ್ತದೆ.

ಗುಣತ್ರಯದಲ್ಲಿ ಯಾವುದರ ಆಧಿಕ್ಯವಿರುತ್ತದೋ, ನಮ್ಮ ಗುಣ ಮತ್ತು ತದನುಸಾರವಾಗಿ ನಮ್ಮ ನಡವಳಿಕೆ ಏರ್ಪಟ್ಟು ಮಾರ್ಪಡುತ್ತದೆ. "ಹೇಗೋ ಬದುಕಿದರಾಯ್ತು" ಎಂದುಕೊಳ್ಳುವವರಿಗೆ ಏನೂ ಮಾಡಲಾಗುವುದಿಲ್ಲ. ಆದರೆ "ನನ್ನ ಸ್ಥಿತಿಯನ್ನು ಸುಧಾರಿಸಿಕೊಳ್ಳಬೇಕು, ನನ್ನ ಬದುಕು ಉತ್ತಮವಾಗಬೇಕು" ಎಂದು ಬಯಸುವವರಿಗೆ ಅನೇಕ ಮಾರ್ಗಗಳಿವೆ. ಸತ್ಸಂಗ, ಸದಾಚಾರ, ಸದ್ವಿಚಾರಗಳಿಂದ ಸತ್ವಗುಣ ಪರಿಪೂರ್ಣರಾದರೆ, ನಮಗೂ ಒಳಿತು ಮತ್ತು ನಾವಿರುವ ಈ ಜಗತ್ತಿಗೂ ಒಳಿತು.

**ಮುಕ್ತಕ – 618**

**ಜಗದ ಸಂತಾಪ ಸಂತಸ ಸಂಭ್ರಮಂಗಳುಲಿ |**
**ಬಗಿದು ನರನೆದೆಯ, ಜೀವವ ಪಿಡಿದು ಕುಲುಕೆ ||**
**ಸೊಗಯಿಪುದು ಮನಸಿಗದು ಕವಿಕಲಾರಸಿಕರ್ಗೆ? |**
**ಜಗ ಸೂರ್ಯ ನೀಂ ಕಮಲ - ಮಂಕುತಿಮ್ಮ ||**

ಸಂಭ್ರಮಗಳುಲಿ=ಸಂಭ್ರಮಂಗಳಉಲಿ, ನರನೆದೆಯ=ನರನ+ಎದೆಯ,
ಮನಸಿಗದು=ಮನಸಿಗೆ+ಅದು ಕವಿಕಲಾರಸಿಕರ್ಗೆ=ಕವಿ+ಕಲಾರಸಿಕರ್ಗೆ
ಉಲಿ=ಶಬ್ದ, ಸೊಗಯಿಪುದು=ಸೊಗಸ ನೀಡುವುದು, ಕಲಾರಸಿಕರ್ಗೆ=ಕಳೆಯ ರಸಿಕರಿಗೆ,

ಈ ಜಗತ್ತಿನ ಬದುಕಿನಲ್ಲಿ ಮನುಷ್ಯರು ಅನುಭವಿಸುವ ದುಃಖ, ಸಂತೋಷ ಮತ್ತು ಸಂಭ್ರಮಗಳ ಭಾವಗಳು,





ನರನ ಹೃದಯದೊಳಕ್ಕೆ ನುಗ್ಗಿ, ಅವನನ್ನು ಹಿಗ್ಗಿಸಿ, ಸಂಭ್ರಮಿಸಿ, ಕುಲುಕಿ, ಕಲಕಿ, ಹಿಂಡಿ, ಹಿಪ್ಪೆ ಮಾಡಿ ಅವನ ಮೇಲೆ ತನ್ನ ಪ್ರಭಾವ ಬೀರುತ್ತದೆ. ಆದರೆ ಕಲಾವಿದರಿಗೆ, ಕಲಾರಸಿಕರಿಗೆ ಮತ್ತು ಕವಿಗಳ ಮೇಲೆ ಅದು ಬೇರೆಯೇ ರೀತಿಯಾದ ಪ್ರಭಾವ ಬೀರಿ, ಒಂದು ಭಿನ್ನ ರೂಪದಲ್ಲಿ ಪ್ರತಿಕ್ರಿಯೆ ನೀಡುವಂತೆ ಮಾಡುತ್ತದೆ. ಅಂತಹ ಪ್ರತಿಕ್ರಿಯೆ ಅವರಿಗೆ ಮತ್ತು ಜಗತ್ತಿನ ಮನಸ್ಸಿಗೆ, ಸೊಗಸಾಗಿ ಕಾಣುತ್ತದಂತೆ, ಅದಕ್ಕೆ ಒಂದು ಉಪಮೆಯನ್ನು ನೀಡುತ್ತಾ, ಈ ಜಗತ್ತು ಒಂದು ಸೂರ್ಯನಾದರೆ, ಆ ಸೂರ್ಯನ ಬೆಳಕಿಗೆ ಅರಳುವ ಕಮಲ ನೀನು ಎಂದು, ಜಗದ ಭಾವಗಳಿಂದ ನಾವೆಲ್ಲಾ ಹೇಗೆ ಪ್ರಭಾವಿತರಾಗುತ್ತೇವೆ ಎಂದು, ಉಲ್ಲೇಖ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು.

"ಜಗ ಸೂರ್ಯ ನೀಂ ಕಮಲ" ಎಂದಿದ್ದಾರೆ ಮಾನ್ಯ ಗುಂಡಪ್ಪನವರು. ಅಬ್ಬಾ! ಎಂತಹ ಉಪಮೆ. ಈ ಜಗತ್ತು ಒಂದು ಸೂರ್ಯನಾದರೆ, ಈ ಜಗತ್ತಿನಲ್ಲಿರುವ ಸಕಲ ಜೀವರಾಶಿಗಳು, ಆ ಸೂರ್ಯನ ಕಾಂತಿಯಿಂದ ಅರಳುವ ಕಮಲದಂತೆ. ಸೂರ್ಯನ ಆ ಬೆಳಕು ಮತ್ತು ಶಾಖಗಳೇ ಈ ಜಗತ್ತಿನ ಅಸ್ತಿತ್ವಕ್ಕೆ ಹೇಗೆ ಕಾರಣವೋ ಹಾಗೆ ಜಗದಲ್ಲಿನ ಪ್ರತೀ ಪ್ರಾಣಿಯ ಭಾವನೆಗಳೂ ಅನ್ಯರ ಮೇಲೆ ಪ್ರಭಾವ ಬೀರುತ್ತದೆ. ಹಾಗೆ ಆಗುವ ಪ್ರಭಾವದಿಂದ ಮತ್ತಷ್ಟು ಭಾವನೆಗಳೂ ಹೊರಹೊಮ್ಮಿ ಅದೂ ಸಹ ತನ್ನ ಪ್ರಭಾವವನ್ನು ಬೀರುತ್ತದೆ.ಇದು ನಿರಂತರವಾಗಿ ಮತ್ತು ಅನಾದಿಕಾಲದಿಂದಲೂ ನಡೆದು ಬಂದಿರುವ ಕ್ರಮ, ಪರರ ನೋವು ನಲಿವುಗಳು, ದುಃಖ ದುಮ್ಮಾನಗಳು, ಕೋಪ ತಾಪಗಳು, ರೋಷ ಉದ್ವೇಗಗಳು, ಪ್ರೀತಿ ವಿಶ್ವಾಸಗಳು ನಮ್ಮ ಮೇಲೆ ಪ್ರಭಾವ ಬೀರುತ್ತದೆ. ಹಾಗೆಯೇ ನಮ್ಮೆಲ್ಲಾ ಭಾವಗಳೂ ಪರರ ಮೇಲೆ ಪ್ರಭಾವ ಬೀರುತ್ತದೆ. ಆದರೆ ಆ ಪ್ರಭಾವದ ತೀವ್ರತೆ ನಮ್ಮ ಮತ್ತು ಆ ಅನ್ಯರ ಸಂಬಂಧದ ಗಾಢತೆಯ ಮೇಲೆ ನಿರ್ಭರವಾಗಿರುತ್ತದೆ.

ಪ್ರತಿಯೊಬ್ಬರೂ ಅವರವರ ಭಾವಗಳನ್ನು ಅನುಭವಿಸುತ್ತಾ, ಪ್ರಭಾವ ಬೀರುತ್ತಾ ಮತ್ತು ಪ್ರಭಾವಗೊಳ್ಳುತ್ತಾ ಇರುವಾಗ, ಕಲಾವಿದನಿಗೆ ಒಂದು ಭಿನ್ನವಾದ ಅನುಭವವಾಗುತ್ತದೆ. ಉದಾಹರಣೆಗೆ, ಅನ್ಯರ ದುಃಖವನ್ನು ಕಂಡಾಗ, "ಅಯ್ಯೋ ಪಾಪ" ಎನ್ನುವ ಉದ್ಗಾರವನ್ನೋ ಅಥವಾ ಎರಡು ಹನಿ ಕಂಬನಿಯನ್ನು ಮಿಡಿಯುವುದು ಸಾಮಾನ್ಯ ಪ್ರತಿಕ್ರಿಯೆ. ಆದರೆ ಕಲಾವಿದ ಹಾಗೆಯೇ ಸ್ಪಂದಿಸದೆ, ಅವನು ಅದನ್ನು ಒಂದು ಚಿತ್ರದ ಮೂಲಕವೋ, ಶಿಲ್ಪದ ಮೂಲಕವೋ, ಒಂದು ಕಾವ್ಯದ ಮೂಲಕವೋ ವ್ಯಕ್ತಪಡಿಸುತ್ತಾನೆ ಮತ್ತು ಆ ಭಾವವನ್ನು ತನ್ಮೂಲಕ ಅನ್ಯರೂ ಮಿಡಿಯುವಂತೆ ಮಾಡುತ್ತಾನೆ. ಅದು ಅವನ ಮಾಧ್ಯಮ.

ಆದರೆ, ನಾವು ಜಗದ್ಭಾವಗಳಿಂದ ಪ್ರಭಾವಿತರಾಗಿ, ಭಾವಾವೇಶಕ್ಕೆ ಒಳಗಾಗದೆ, ಸಹನೆಯಿಂದ, ತಾಳ್ಮೆಯಿಂದ ಸತ್ಪ್ರತಿಕ್ರಿಯೆಯನ್ನು ನೀಡಿದರೆ, ಅನ್ಯರ ಮೇಲೂ ಅದು ಸತ್ಪ್ರಭಾವವನ್ನೇ ಬೀರುತ್ತದೆ. ಜನ ಸಮೂಹದಲ್ಲಿ ಅಂತಹ ಸದ್ಭಾವ, ಸತ್ಪ್ರತಿಕ್ರಿಯೆ ಮತ್ತು ಸತ್ಪ್ರಭಾವಗಳಾಗುತ್ತಿದ್ದರೆ, ಒಟ್ಟು ಸಮಾಜದ ಭಾವವೇ 'ಸತ್' ಆಗುವುದರಲ್ಲಿ ಸಂದೇಹವೇ ಇಲ್ಲ. ನಾವೆಲ್ಲಾ ಜಗತ್ತಿನಿಂದ ಎಂತಹ ಪ್ರಭಾವಕ್ಕೊಳಗಾದರೂ 'ಸತ್'ನ್ನೇ ಹೊರಹೊಮ್ಮಿಸುವ ಪ್ರಯತ್ನವನ್ನು ಮಾಡಿದರೆ, ಜಗತ್ತೆಂಬ ಸೂರ್ಯದಿಂದ ಹೊರಡುವ ಶಾಂತ, ಶೀತಲ ಮತ್ತು ಚೆಂಗಿರಣಗಳಿಂದ ಸುಂದರವಾಗಿ ಅರಳುವ ಕಮಲಗಳಂತೆ, ನಮ್ಮ ಸಮಾಜ ಮತ್ತು ಪರಿಸರ ಅರಳಿ ಎಲ್ಲವೂ 'ಸತ್'ಮಯವಾಗಬಹುದು.

**ಮುಕ್ತಕ – 619**

**ಪ್ರತ್ಯೇಕ ಸುಖವ, ನೀಂ ಪ್ರತ್ಯೇಕ ಸಂಪದವ |**
**ನತ್ಯಾಶೆಯಿಂದರಸಿ ಮಿಕ್ಕೆಲ್ಲ ಜಗವ - ||**
**ನೊತ್ತಟ್ಟಿಗಿಡುವೆನೆನೆ, ನಷ್ಟವಾರಿಗೋ ಮರುಳೆ |**
**ಬತ್ತುವುದು ನಿನ್ನಾತ್ಮ - ಮಂಕುತಿಮ್ಮ ||**

ಸಂಪದವನತ್ಯಾಶೆಯಿಂದರಸಿ= ಸಂಪದವನು+ಅತ್ಯಾಸೆಯಿಂದ+ಅರಸಿ, ಜಗವನೊತ್ತಟ್ಟಿಗಿಡುವೆನೆನೆ=ಜಗವನು+ಒತ್ತಟ್ಟಿಗೆ+ಇಡುವೆನು+ಎನೆ, ನಷ್ಟವಾರಿಗೋ=ನಷ್ಟವು+ಆರಿಗೋ, ನಿನಾತ್ಮ=ನಿನ+ಆತ್ಮ, ಸಂಪದ=ಸಂಪತ್ತು, ಆಸ್ತಿ, ಮರುಳೆ=ಹುಚ್ಚ, ಬತ್ತುವುದು=ಸೊರಗುವುದು, ನಿನ=ನಿನ್ನ

"ನನ್ನ ಸುಖ ನನಗೆ ಮುಖ್ಯ, ನನ್ನ ಆಸ್ತಿ, ಸಂಪತ್ತು ನನಗೆ ಮುಖ್ಯ, ಈ ಜಗತ್ತಿನಿಂದ ನನಗೇನಾಗಬೇಕಿದೆ ಎಂದು, ಅತಿ ಆಸೆ ಪಟ್ಟು ಈ ಜಗತ್ತಿನಿಂದ ದೂರವಿದ್ದರೆ, ನಷ್ಟವು ಯಾರಿಗೋ, ಹುಚ್ಚ?" ಎಂದು ಕೇಳುತ್ತಾ, ಹಾಗೆ ಮಾಡಿದರೆ ನಿನ್ನ ಆತ್ಮ ಬತ್ತುವುದು, ಸೊರಗುವುದು ಎಂದು ಜಗದಾಭಿಮುಖ್ಯವಾಗಿ ಇಲ್ಲದೆ ಸ್ವಾರ್ಥ ಸಾಧಿಸುವ ಜನರಿಗೆ ಒಂದು ಕಿವಿಮಾತನ್ನು ಹೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಕಡಲ ನೀರು ಆವಿಯಾಗಿ, ನಭಕ್ಕೇರಿ ಮತ್ತೆ ಧರೆಗೆ ಮಳೆಯಂತೆ ಇಳಿದು ಬರುತ್ತದೆ. ಹಾಗೆಯೇ ಆ ದಯಾಸಾಗರನಾದ ಪರಮಾತ್ಮನ ಒಂದಂಶವಾದ ಆತ್ಮ ದೇಹವನ್ನು ಧರಿಸುತ್ತದೆ. ಹಾಗೆ ಸುರಿದ ಮಳೆಯ ಪ್ರತಿಯೊಂದು ಹನಿಯೂ ಮತ್ತೊಂದು ಹನಿಯನ್ನು ಕೂಡಿಕೊಂಡು ಹಳ್ಳವಾಗಿ, ತೊರೆಯಾಗಿ, ನದಿಯಾಗಿ ಹರಿದು ತನ್ನ ಮೂಲ ಸಾಗರವನ್ನು ಸೇರುವಂತೆ, ದೇಹಧಾರಣೆ ಮಾಡಿದ ಪ್ರತೀ ಆತ್ಮವೂ 'ಎಲ್ಲರೊಳಗೊಂದಾಗಿ' ತನ್ನ ಮೂಲವಾದ ಪರಮಾತ್ಮವನ್ನು ಸೇರಲು ಹಾತೊರೆಯಬೇಕು.

ಪ್ರಾಣಿ ಸಂಕುಲದಲ್ಲಿರುವುದು ಕೇವಲ ಮೂರು ಅವಶ್ಯಕತೆಗಳು, ಸ್ವರಕ್ಷೆ, ಆಹಾರ ಮತ್ತು ಸಂತಾನ, ಪ್ರಾಣಿಗಳ ಯೋಚನೆಯೂ ಸಹ ಕೇವಲ ಈ ಮೂರು ಅವಶ್ಯಕತೆಗಳ ಪೂರೈಕೆಗಾಗಿಯೇ ಆಗಿರುತ್ತದೆ. ಆದರೆ ಮನುಷ್ಯ ಪ್ರಾಣಿಗಳಿಗಿಂತ ಭಿನ್ನ. ಇವನಿಗೆ ಅಗಾಧವಾದ ಬುದ್ಧಿ ಮತ್ತು ವಿವೇಕವಿದೆ ಮತ್ತು ಈ ಬುದ್ಧಿ ಮತ್ತು ವಿವೇಕಗಳು ತನ್ನನ್ನು ತಾನು ಸುಧಾರಿಸಿಕೊಂಡು ತನ್ನ ಗಮ್ಯ ಸೇರಲು ಉಪಯುಕ್ತವಾಗಿವೆ.ಸ್ವಪ್ರೇಮದಿಂದ 'ನನ್ನ ಸುಖ, ನನ್ನ ಆಸ್ತಿ, ನನ್ನ

ಸಂಪತ್ತು' ಎಂದು ಸದಾ ಕಾಲ ಅತಿಯಾಸೆಯಿಂದ ಬದುಕಿದರೆ, ಮನುಷ್ಯ ಇದ್ದಲ್ಲೇ ಇರಬೇಕಾಗುತ್ತದೆ. ಆದರೆ ಜಗತ್ತಿನಲ್ಲಿ ಇದ್ದು ಮತ್ತು ಜಗತ್ತಿನಿಂದ ಎಲ್ಲವನ್ನೂ ಪಡೆದು “ಜಗತ್ತು ಬೇಡ, ನನ್ನಷ್ಟಕ್ಕೆ ನಾನಿರುತ್ತೇನೆ” ಎಂದರೆ ಮನುಷ್ಯ ಬೆಳೆಯಲು ಸಾಧ್ಯವೇ ಇಲ್ಲ. ಈ ಪ್ರಪಂಚದಲ್ಲಿರುವ ನಿಸರ್ಗ. ಪ್ರಾಣಿ, ಪಕ್ಷಿ, ಗಿಡ, ಮರ ಮತ್ತು ಅನ್ಯ ಮಾನವರನ್ನು ಕಂಡು, ಅವರಿಂದ ಪಡೆದು, ಕಲಿತು, ತಾ ಹೊತ್ತು ತಂದ ಗುಣಗಳನ್ನು ಸುಧಾರಿಸಿಕೊಳ್ಳಲು ಸಿಕ್ಕ ಅವಕಾಶವನ್ನು ಉಪಯೋಗಿಸಿಕೊಳ್ಳದಿದ್ದರೆ 'ನಷ್ಟ ನಮಗೆ ಅಲ್ಲವೇ? ಇದನ್ನೇ ಮಾನ್ಯ ಗುಂಡಪ್ಪನವರು ನಷ್ಟವಾರಿಗೋ ಮರುಳೆ?' ಎಂದು ಕೇಳುತ್ತಾರೆ.

“ನಾನು ಎಂಬುದ ಬಿಟ್ಟು ಜ್ಞಾನಿಗಳೊಡಗೂಡಿ ಏನೆಲ್ಲಕೆ ದೇವ ಪ್ರೇರಣೆ” ಎಂದು ಪುರಂದರ ದಾಸರು





ಹೇಳುವಂತೆ, ಸ್ವಾರ್ಥವನ್ನು ಬಿಟ್ಟು ಎಲ್ಲರೊಳಗೆ ಒಂದಾಗಿ ಬದುಕಿದರೆ ಆತ್ಮದ ಗುಣಗಳು ವಿಕಸನವಾಗಿ ಆನ್ನೋದ್ಧಾರವಾಗಬಹುದು. ಅದನ್ನು ಬಿಟ್ಟು ಕೂಪಸ್ಥ ಮಂಡೂಕ'ದ ರೀತಿ ತಾನಾಯಿತು ತನ್ನ ಸುಖ, ತನ್ನ ಸಂಪತ್ತಾಯಿತು ಎಂದು ಇದ್ದರೆ, ಎಲ್ಲಿದ್ದರೆ ಅಲ್ಲೇ ಇದ್ದು, ಆತ್ಮ ಸೊರಗುವುದು. “ಉದ್ಧರೇತ್ ಆತ್ಮನಾತ್ಮಾನಂ' ಎಂದು ಗೀತೆಯಲ್ಲಿ ಶ್ರೀ ಕೃಷ್ಣ ಹೇಳಿದಂತೆ, ನಾವು ಉದ್ಧರಿತರಾಗಬೇಕೆ ಇಲ್ಲವೇ ಎನ್ನುವುದು ನಮ್ಮ ನಮ್ಮ ನಿರ್ಧಾರಕ್ಕೆ ಬಿಟ್ಟದ್ದು ಅಲ್ಲವೇ? ಪ್ರಯತ್ನ ನಮ್ಮದೇ ಆಗಬೇಕು.

**ಮುಕ್ತಕ-620**

**ಲೋಕಜೀವನದೆ ಮಾನಸದ ಪರಿಪಾಕವಾ |**
**ಪಾಕದಿಂ ಮತಿಶುದ್ಧಿಯದರಿನೊಳದೃಷ್ಟಿ ||**
**ಸಾಕಲ್ಯದಾತ್ಮ ಸಂದರ್ಶನಕ್ಕೆ ಕರಣವದು |**
**ಲೋಕದಿಂ ನಿರ್ಲೋಕ - ಮಂಕುತಿಮ್ಮ ||**

ಮತಿಶುಧ್ಧಿಯದರಿನೊಳದೃಷ್ಟಿ =ಮತಿ+ಶುಧ್ಧಿ+ಆದರಿನ್+ಒಳದೃಷ್ಟಿ, ಸಾಕಲ್ಯದಾತ್ಮ=ಸಾಕಲ್ಯದ+ಆತ್ಮ, ಕರಣ=ಸಾಧನ, ನಿರ್ಲೋಕ=ಲೋಕವಲ್ಲದ

ಲೋಕದ ಬದುಕಿನಲ್ಲಿ ಅನುಭವಗಳಿಂದ, ಮನಸ್ಸು ಪಕ್ವವಾಗುತ್ತದೆ. ಹಾಗೆ ಪಕ್ವವಾದ ಮನಸ್ಸಿನಿಂದ ಬುಧ್ಧಿ ಪಕ್ವವಾಗುತ್ತದೆ. ಪರಿಶುದ್ಧವಾದ ಮನಸ್ಸು, ಬುಧ್ಧಿಗಳಿಂದ ಅಂತರಂಗದ ಶುದ್ಧಿಯಾಗುವುದಕ್ಕೆ ಮತ್ತು ಜಗತ್ತಿನಲ್ಲಿ ಏಕಾತ್ಮಭಾವ ನಮಗೆ ಬರಲು ಒಂದು ಸಾಧನವಾಗುತ್ತದೆ ಮತ್ತು ಮಾನಸಿಕ ಅಪ್ರಬುದ್ಧತೆಯಲ್ಲಿ ಕಾಣುವ ಭೇದಗಳೆಲ್ಲ ನಶಿಸಿ, ಲೋಕದಲ್ಲಿದ್ದರೂ ಲೋಕದಿಂದಲೇ ಪರತತ್ವದ ಭಾವ ಮನಸ್ಸು ಬುದ್ದಿಗಳಲ್ಲಿ ನೆಲೆಯೂರುತ್ತದೆ ಎಂದು, ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಸಕಲ ಜೀವರಾಶಿಗಳಲ್ಲೂ ಇರುವ ಚೇತನವೊಂದೇ ಆದರೂ, ರೂಪ ಮತ್ತು ಭಾವ ಭೇಧದಿಂದ ನಮಗೆ ಎಲ್ಲವೂ ಬೇರೆ ಬೇರೆಯಾಗಿ ಕಾಣುತ್ತವೆ ಮತ್ತು ಆ ಭೇಧಾನುಗುಣವಾಗಿ ನಮ್ಮ ಪ್ರತಿಕ್ರಿಯೆ ಇರುತ್ತದೆ. ನಮ್ಮ ಮತ್ತು ಇತರರ ಪ್ರತಿಕ್ರಿಯೆಗಳ ಪ್ರಭಾವ, ನಮ್ಮ ಮನಸ್ಸು ಬುಧ್ಧಿಗಳ ಮೇಲಾಗಿ, ಅವುಗಳು ಮತ್ತಷ್ಟು ಬದಲಾಗುತ್ತವೆ. ಹೀಗೆ ನಮ್ಮ ಬದುಕಿನಲ್ಲಿ ಆಗುವ ಘಟನೆಗಳು, ಬಂದುಹೋಗುವ ವಿಚಾರಗಳು ಮತ್ತು ನಮ್ಮ ಸಂಪರ್ಕದ ವ್ಯಕ್ತಿಗಳಿಂದ, ನಮ್ಮ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಇದೇ ಗುಂಡಪ್ಪನವರು ಹೇಳುವ "ಮಾನಸದ ಪರಿಪಾಕ".

ಬದುಕಿನ ಅನುಭವಗಳಿಂದ ನಲಿದು, ನೋವುಂಡು, ಪಾಡು ಪಟ್ಟು, ಪೆಟ್ಟು ತಿಂದು, ಸಂದ ಸುಖದುಃಖಗಳನ್ನೆಲ್ಲ ಅನುಭವಿಸಿ, ಪ್ರತೀ ಘಟನೆಯಿಂದಲೂ ಏನನ್ನಾದರೂ ಸಕಾರಾತ್ಮಕವಾಗಿ ಕಲಿಯುತ್ತಾ ಹೋದರೆ, ಮನಸ್ಸು, ಬುಧ್ಧಿಗಳು ಪಕ್ವವಾಗಿ ಸತ್ಯದ, ತನ್ಮೂಲಕ ಸತ್ವದರಿವಾಗುತ್ತದೆ. ಕ್ರಮೇಣ ಭೇಧಗಳು ನಶಿಸಿ

ಏಕಾತ್ಮ ಭಾವ ನೆಲೆಯೂರುತ್ತದೆ. ಆದರೆ ಈ ರೀತಿಯನುಭವ ಬರಬೇಕಾದರೆ ಮತ್ತು ಆ ಅನುಭವದಿಂದ ಕಲಿತು ಪಕ್ವವಾಗಬೇಕಾದರೆ ನಾವು ಅದನ್ನು ಈ ಲೋಕದಿಂದಲೇ ಕಲಿಯಬೇಕಲ್ಲವೇ? ಬೇರೆ ಯಾವ ಮಾರ್ಗವೂ ಇಲ್ಲ. ನಮ್ಮ ಸಾಂಗತ್ಯಕ್ಕೆ ಬರುವ ವ್ಯಕ್ತಿಗಳಿಂದ ನಾವು ಕಲಿಯುವ ವಿಷಯಗಳಿಂದ, ನಾವು ಉಪಯೋಗಿಸುವ ವಸ್ತುಗಳಿಂದ ಹೀಗೆ ಎಲ್ಲದರಿಂದಲೂ ಕಲಿತಾಗ ನಮಗೆ ಅನುಭವಗಳಾಗುತ್ತವೆ. ನಾವು ನಮ್ಮನ್ನು ಆ ಅನುಭವಗಳಿಗೆ ತೆರೆದುಕೊಂಡಾಗ ಮಾತ್ರ ಅದು ಸಾಧ್ಯ. ಪೂರ್ವಾಗ್ರಹದ, ಅಹಂಕಾರದ, ಸಂಕುಚಿತತೆಯ ಹೊದಿಕೆಯನ್ನು ನಾವು ಹೊದ್ದು ಮುದುಡಿಬಿಟ್ಟರೆ, ನಮಗೆ ಅನುಭವವೂ ಆಗುವುದಿಲ್ಲ, ಪಕ್ವತೆಯೂ ಬರುವುದಿಲ್ಲ.

ಲೋಕದಿಂದಲೇ ಇವೆಲ್ಲವನ್ನೂ ಪಡೆದು ಕಲಿತು ಅರಗಿಸಿಕೊಂಡು ಊರ್ಧ್ವಾಭಿಮುಖವಾದ ಬೆಳವಣಿಗೆಗೆ ಮಾರಕವಾದದ್ದನ್ನು ಕಳಚಿಕೊಂಡು, ಪೂರಕವಾದದ್ದನ್ನು ಪಡೆದು, ಪಕ್ವತೆಯನ್ನು ಪಡೆದು, ಲೋಕದ ನಶ್ವರತೆಯನ್ನು ಅರಿತು ಶಾಶ್ವತವಾದ ಪರತತ್ವವನ್ನು ಅನುಸಂಧಾನ ಮಾಡಿದರೆ, ಮಾನ್ಯ ಗುಂಡಪ್ಪನವರು ಹೇಳುವ "ಸಾಕಲ್ಯದಾತ್ಮ ಸಂದರ್ಶನ" ನಮಗೆ ಆಗಬಹುದು.

**ಮುಕ್ತಕ – 621**

**ಧರಿಸಿರ್ಪುದಲ ಧರ್ಮ? ಧರಿಸು ಜೀವನಧುರವ |**
**ಚರಿಸು ಲೋಕದ ಮಾರ್ಗಗಳಲ್ಲಿ ಹಿತವರಿತು ||**
**ಸರಿಪಡಿಸು ದಾರಿಗಳ ಕೆರೆ ತೋಪು ಸತ್ರಗಳ |**
**ನೆರವಾಗು ಪಯಣಕ್ಕೆ - ಮಂಕುತಿಮ್ಮ ||**

ಧರಿಸಿರ್ಪುದಲ=ಧರಿಸಿ+ಇರ್ಪುದಲ, ಜೀವನಧುರವ=ಜೀವನ+ಧುರವ, ಹಿತವರಿತು=ಹಿತವ+ಅರಿತು,
ಧುರ=ನೊಗ

ಜಗತ್ತಿನ ಎಲ್ಲವನ್ನೂ ಧರ್ಮವು ಧರಿಸಿಹುದಲ್ಲವೇ? ನೀನು ಜೀವನವೆಂಬ ನೊಗವನ್ನು ಹೊತ್ತು, ಹಿತವನ್ನು ಅರಿತು ಲೋಕದ ಮಾರ್ಗಗಳಲ್ಲಿ ನಡೆ, ಮಾರ್ಗದಲ್ಲಿ, ಸುಗಮವಾದ ಪಯಣಕ್ಕೆ ತೊಡಕುಗಳಿರುವ ಮಾರ್ಗ, ಕೆರೆ, ತೋಪು, ಸತ್ರಗಳನ್ನು ಸರಿಪಡಿಸಿ, ನಿನ್ನ ಮತ್ತು ಜಗತ್ತಿನ ಅನ್ಯರ ಪ್ರಯಾಣಕ್ಕೆ ನೆರವಾಗು, ಎಂದು ಹೇಳುತ್ತಾ, ನಾವು ಸಮಾಜಮುಖಿಯಾಗಿ ಹೇಗಿರಬೇಕು ಎನ್ನುವ ಸಲಹೆಯನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಧರಿಸುವುದಕ್ಕೆ 'ಧರ್ಮ' ಎಂದು ಹೆಸರು. ವಿಧಿತ ನಿಯಮಗಳನ್ನು ಪಾಲಿಸುವುದೇ ಧರ್ಮ, ಕೆಲವು ನೈಸರ್ಗಿಕ ನಿಯಮಗಳು, ಕೆಲವು ಕಲ್ಪಿತ ನಿಯಮಗಳು ಮತ್ತೆ ಕೆಲವು ವಿಧಿತ ನಿಯಮಗಳು. ಈ ಎಲ್ಲಾ ನಿಯಮಗಳನ್ನು ಸಮಯ ಮತ್ತು ಸಂಧರ್ಭಕ್ಕೆ ಅನುಗುಣವಾಗಿ ಪಾಲಿಸುವುದೇ ಧರ್ಮ, ನಮಗೆ ಜೀವಿಸುವುದು ಅನಿವಾರ್ಯ. ಈ ಜೀವನಕ್ಕೆ ಅನ್ವಯಿಸುವುದೇ ಈ ಮೇಲೆ ಹೇಳಿದ ಮೂರೂ ರೀತಿಯ





ನಿಯಮಗಳು. ಈ ನಿಯಮಗಳನ್ನು ನಾವು ಹೊತ್ತುಕೊಂಡು ಪಾಲಿಸಲೇಬೇಕು. ಹಾಗೆ ಪಾಲಿಸುವಾಗ ಸ್ವಹಿತದ ಜೊತೆಗೆ ಲೋಕದ ಹಿತವನ್ನೂ ಆಚರಿಸಬೇಕಾದದ್ದೂ ಸಹ ಧರ್ಮ. ಧರ್ಮದ ಪಾಲನೆಯಿಂದಲೇ ಆತ್ಮೋದ್ಧಾರವಾಗಬೇಕು. ನಾವು ನಮ್ಮನ್ನು ಲೋಕದಿಂದ ಭಿನ್ನವೆಂದುಕೊಳ್ಳಲು ಸಾಧ್ಯವೇ ಇಲ್ಲ, ಅಲ್ಲವೇ?

ಈ ಧರ್ಮವನ್ನು ಪಾಲಿಸುವಾಗ ಮೊಟ್ಟಮೊದಲಿಗೆ, ಲೋಭ ಮತ್ತು ಸ್ವಾರ್ಥರಹಿತ, ಸ್ವಹಿತದ ರಕ್ಷಣೆಯಾಗಬೇಕು. ನಂತರ ಸ್ವಲ್ಪ ವಿಸ್ತರಿಸಿಕೊಂಡು ತನ್ನನ್ನು ನಂಬಿದವರ ರಕ್ಷಣೆಗೆ ಧರ್ಮಾಚರಣೆಯಾಗಬೇಕು. ಈ ವಿಸ್ತಾರ ಅಧಿಕವಾಗತೊಡಗಿದಾಗ, ತಾನಿರುವ ಸಮಾಜದ ಹಿತಕ್ಕಾಗಿ ಧರ್ಮದ ಪಾಲನೆಯಾಗಬೇಕು. ಎಲ್ಲರೂ ಈ ನಿಟ್ಟಿನಲ್ಲಿ ಯೋಚಿಸಿದರೆ, ಒಟ್ಟು ಸಮಾಜದ ಹಿತವಾಗುವುದರಲ್ಲಿ ಸಂದೇಹವೇ ಇಲ್ಲ.

ಆದರೆ ಪ್ರಸಕ್ತ ಸ್ಥಿತಿ ಈ ಆಶಯಕ್ಕೆ ಭಿನ್ನವಾಗೇ ಇದೆ. "ಧರ್ಮ" ಹಾಗಂದರೆ ಏನು? ಎಂದು ಕೇಳುವ ಸ್ಥಿತಿ. 'ನಾನೊಬ್ಬ ಚೆನ್ನಾಗಿದ್ದರೆ ಸಾಕು, ಮಿಕ್ಕವರು ಏನಾದರೇನಂತೆ' ಎನ್ನುವ ಮನೋಭಾವವೇ ಎಲ್ಲರಲ್ಲೂ ಎದ್ದು ಕಾಣುತ್ತಿದೆ. 'ಎಲ್ಲ ಸುಖ ಸಂಪತ್ತುಗಳೂ ನನ್ನದೇ ಆಗಬೇಕು', ಎನ್ನುವ ಸಂಪೂರ್ಣ ಸ್ವಾರ್ಥ ಮನೋಭಾವ ಬಿಡದ ಹೊರತು, ಒಟ್ಟು ಸಮಾಜದ ಹಿತವಾಗುವುದೇ ಇಲ್ಲ. ವೈಯಕ್ತಿಕ ಬದಲಾವಣೆ ಬಂದಾಗ ಮತ್ತು ಬಹುತೇಕ ಜನಗಳಲ್ಲಿ ಆ ಬದಲಾವಣೆ

ಬಂದರೆ, ಅದು ಇಹದ ಬದುಕನ್ನು ಸುಖವಾಗಿಸಿ, ಮಾನ್ಯ ಗುಂಡಪ್ಪನವರು 'ನೆರವಾಗು ಪಯಣಕ್ಕೆ' ಎಂದು ಹೇಳುವಂತೆ ಪಾರಮಾರ್ಥಿಕ ಪ್ರಯಾಣವೂ ಸುಗಮವಾಗಬಹುದು.

**ಮುಕ್ತಕ – 622**

**ಧರ್ಮನಿರ್ಣಯ ನಿನಗೆ ಜನ್ಮಜನ್ಮಾಂತರದ |**
**ಕರ್ಮಸಂದರ್ಭದಿಂದೊಗೆವುದದನರಿತು ||**
**ನಿರ್ಮಮದ ನಿರ್ಮಲೋತ್ಸಹದೆ ನೀನಾಚರಿಸೆ |**
**ಬ್ರಹ್ಮಸಾಮೀಪ್ಯವೆಲೋ – ಮಂಕುತಿಮ್ಮ ||**

ಕರ್ಮಸಂದರ್ಭದಿಂದೊಗೆವುದದನರಿತು = ಕರ್ಮ+ಸಂದರ್ಭದಿಂದ+ಒಗೆವುದು+ಅದನ್+ಅರಿತು,
ನಿರ್ಮಲೋತ್ಸಹದೆ=ನಿರ್ಮಲದ+ಉತ್ಸಹದೆ, ನೀನಾಚರಿಸೆ=ನೀನು+ಆಚರಿಸೆ
ಒಗೆವುದು=ಬರುವುದು, ನಿರ್ಮಮ=ಮಮಕಾರವಿಲ್ಲದೆ, ನಿರ್ಮಲದ=ಕಶಲ ರಹಿತ, ಉತ್ಸಹದೆ=ಉತ್ಸಾಹದಿಂದ.

ನಿನಗೆ ನಿನ್ನ ಸ್ವಭಾವ, ಎಂದರೆ ಧರ್ಮ, ಜನ್ಮಜನ್ಮಾಂತರದ ಕರ್ಮ ಸಂಬಂಧದಿಂದ ಉಂಟಾಗಿರುತ್ತದೆ. ಅದನ್ನು ಅರಿತು, ಪ್ರಕೃತಿ ಸಂಬಂಧದಿಂದ ಉಂಟಾಗುವ ಮಮಕಾರ ಮತ್ತು ಮಾನಸಿಕ ಹೊಲಸನ್ನು ಸ್ವ ಇಚ್ಛೆಯಿಂದ, ಉತ್ಸಾಹದಿಂದ, ತೊರೆದು ತೊಳೆದುಕೊಂಡರೆ, ಶುದ್ಧನಾಗಿ ಬ್ರಹ್ಮ ಸಾಮೀಪ್ಯವನ್ನು ಪಡೆಯಬಹುದು ಎಂದು, ಮೋಕ್ಷದ ಹಾದಿಯನ್ನು ತೋರಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಒಂದು ಜೀವ ಹುಟ್ಟು ಸಾವುಗಳ ಚಕ್ರದಲ್ಲಿ ಸುತ್ತುವಾಗ, ತಾ ಧರಿಸಿದ ದೇಹಗಳಲ್ಲಿ ಅನುಭವಿಸಿದ ಭಾವಗಳನ್ನು, ಆ ದೇಹ ಬಿಟ್ಟರೂ ಕಿಂಚಿತ್ ಅನುಭವಶೇಷವನ್ನು ಹೊತ್ತುಕೊಂಡೇ ಮತ್ತೊಂದು ದೇಹವನ್ನು ಧರಿಸುತ್ತದೆ. ಹಾಗಾಗಿ, ಇಂದು ನಾವು ಇರುವುದು ಮತ್ತು ಆಗಿರುವುದು ಆ ಪೂರ್ವಕರ್ಮಾನುಗುಣವಾಗಿಯೇ ಎಂದು ಹೇಳಬಹುದು. ಹಾಗಾಗಿ ನಮ್ಮಲ್ಲಿರುವ ಸತ್ವ ರಜಸ್ತಮೋಗುಣಗಳು ಮೂರಾದರೂ ಅವುಗಳ ರೂಪಗಳು ಬೇರೆ ಬೇರೆಯಾಗೇ ಇರುತ್ತವೆ. ನಾಯಿಯಂತೆ ಬೊಗುಳುವ, ಹಂದಿಯಂತೆ ತಿನ್ನುವ ಕತ್ತೆಯಂತೆ ದುಡಿಯುವ, ಚೇಳಿನಂತೆ ಕುಟುಕುವ, ಹಾವಿನಂತೆ ಬುಸುಗುಟ್ಟುವ, ಕೋಗಿಲೆಯಂತೆ ಹಾಡುವ, ಸೊಳ್ಳೆಯಂತೆ ಚುಚ್ಚುವ, ಮಲ್ಲಿಗೆಯಂತೆ ಘಮಘಮಿಸುವ, ಹೀಗೆ ಹಲವಾರು ಪ್ರಾಣಿ ಕೀಟಗಳ ಹೂ ಗಿಡಮರಗಳ ಗುಣಗಳ ಸಂಮಿಶ್ರಣವೇ ಅಲ್ಲವೇ, ಮಾನವ ಗುಣ.

ಮಾನವರಿಗೆ, ತಮ್ಮನ್ನು ತಾವೇ ಅವಲೋಕಿಸಿ ನೋಡಿಕೊಳ್ಳುವ ಕ್ಷಮತೆಯನ್ನು ಪರಮಾತ್ಮ ನೀಡಿದ್ದಾನೆ. ಸಾಕ್ಷೀಭಾವದಿಂದ ನಾವು ನಮ್ಮ ಗುಣಗಳನ್ನು ಮತ್ತು ಆ ಗುಣಗಳಿಗನುಸಾರ ನಮ್ಮ ಕರ್ಮವನ್ನು ಪರೀಕ್ಷಿಸಿಕೊಳ್ಳಬಹುದು, ವಿಶ್ಲೇಷಿಸಿಕೊಳ್ಳಬಹುದು. ಅಂತಹ ಅಂತರ್ವೀಕ್ಷೆಯಾದರೆ ನಮ್ಮಲ್ಲಿರುವ ಗುಣಗಳು ಎಂತಹವು, ಮಾನವರಾಗಿರುವ ನಮಗೆ ಯಾವುದು ಕೆಟ್ಟದ್ದು, ಯಾವುದು ಒಳ್ಳೆಯದು, ಯಾವುದು ಬೇಕು, ಯಾವುದು ಬೇಡ ಎಂದು ಅರಿತುಕೊಳ್ಳಬಹುದು. ಆ ಅರಿವು ಮೂಡಿದಾಗ, ಸ್ವಪ್ರಯತ್ನದಿಂದ ನಮ್ಮ ಗುಣಗಳ ಮಿಶ್ರಣ ಪರಿಮಾಣ ಬದಲಾಗಿ, ಸತ್ವ ಗುಣವೇ ಪ್ರಧಾನವಾದಾಗ, ಈ ಜಗತ್ತಿನ ಮೇಲಿನ ವ್ಯಾಮೋಹ ನಮಗೆ ಕಡಿಮೆಯಾಗಿ, ಅಂತರಂಗದಲ್ಲಿ ಇದ್ದ ಮತ್ತು ಮನಸ್ಸಿನ ಗೋಡೆಗಳಿಗೆ ಮೆತ್ತಿಕೊಂಡಿರುವ ಹೊಲಸನ್ನು ಹೊರಹಾಕಿ, ಪರಿಶುದ್ಧತೆಯ ಅನುಭವವನ್ನು ಪಡೆದು ಉತ್ಸಾಹದಿಂದ ಸಂಭ್ರಮಿಸಬಹುದು. ಅಂತಹ ಸಂಭ್ರಮದಲ್ಲಿ ನಮಗೆ ಪರಮಾತ್ಮಾನುಭವವಾಗುತ್ತದೆ ಎಂದು ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು.

ವಿಪರ್ಯಾಸವೆಂದರೆ, ನಮಗಿದಕ್ಕೆಲ್ಲಾ ಸಮಯವೇ ಇಲ್ಲ, ನಾವು ಯಾರೆಂದು ಅರಿಯುವ ಪ್ರಯಾಸವನ್ನು ನಾವು ಮಾಡುವುದೇ ಇಲ್ಲ. ಸದಾಕಾಲ ಬದುಕನ್ನು ದೂಡುವುದೇ ಸಮಸ್ಯೆಯಾದಾಗ, ಚಿಂತೆಯೇ ಅಧಿಕವಾದಾಗ, ಚಿಂತನೆಗೆ ಸಮಯವೆಲ್ಲಿಹುದು? ಪ್ರಯತ್ನವೇ ಇಲ್ಲದೆ ಪ್ರಯೋಜನ ಸಿಗಲು ಸಾಧ್ಯವೇ? ಯಾರಿಗೆ ಏನು ಬೇಕೋ ಅದನ್ನು ಪಡೆಯುವ ಅಧಿಕಾರವಿದೆ. ಏನನ್ನಾದರೂ ಪಡೆಯಲು ಪ್ರಯತ್ನ ಬೇಕು. ಹಾಗೆಯೇ ಪರಮಾತ್ಮನ ಅನುಭವ ಬೇಕೆಂದರೆ, ಪ್ರಯತ್ನವು ಬೇಕು. ಮಾನ್ಯ ಗುಂಡಪ್ಪನವರು ಹೇಳುವಂತೆ ನಾವು "ನಿರ್ಮಮ ಮತ್ತು ನಿರ್ಮಲ"ಭಾವಗಳನ್ನು ರೂಢಿಸಿಕೊಂಡರೆ ಆ ಅನುಭವ ನಮ್ಮದಾಗಬಹುದು.

**ಮುಕ್ತಕ – 623**

**ಗೃಹದಿ ರಾಷ್ಟ್ರದ ಸಮಾಜದಿ ಲೋಕಸಂಗತದಿ |**
**ವಿಹಿತದ ಸ್ಥಾನದಿಂ ಸಹಜಗುಣಬಲದಿಂ- ||**
**ದಿಹಪರಸಮನ್ವಯದ ಸರ್ವಹಿತ ಸಂಸ್ಥಿತಿಗೆ |**
**ಸಹಕರಿಪುದಲೆ ಧರ್ಮ-ಮಂಕುತಿಮ್ಮ ||**





ಸಹಜಗುಣಬಲದಿಂದಿಹಪರಸಮನ್ವಯದೆ=ಸಹಜಗುಣ+ಬಲದಿಂದ+ಇಹ+ಪರ+ಸಮನ್ವಯದೆ,
ಸರ್ವಹಿತ ಸಂಸ್ಥಿತಿಗೆ =ಸರ್ವ+ಹಿತ+ಸಂಸ್ಕೃತಿಗೆ, ಸಹಕರಿಪುದಲೆ=ಸಹಕರಿಪುದು+ಎಲೆ(ಸಂಭೋಧನ ವಿಭಕ್ತಿ)
ವಿಹಿತ=ದೊರಕಿರುವ, ಇಹ=ಇಲ್ಲಿನ ಬದುಕು, ಪರ=ಬದುಕಿನ ನಂತರದ ಬದುಕು

ನಿನಗೆ ನಿನ್ನ ಹುಟ್ಟಿನಿಂದಲೇ ಒಂದು ಸ್ಥಾನ ಮತ್ತು ಆ ಸ್ಥಾನಕ್ಕೆ ವಿಧಿತವಾದ ಒಂದು ಧರ್ಮವಿದೆ. ಮನೆಯಲ್ಲಿ, ಸಮಾಜದಲ್ಲಿ, ದೇಶದಲ್ಲಿ ಮತ್ತು ಲೋಕದಲ್ಲಿ ನಿನಗೆ ಲಭಿಸಿರುವ ಸ್ಥಾನದಿಂದ ಮತ್ತು ಜನ್ಮಾಂತರಗಳಿಂದ ಸಂಚಿತ ಗುಣಗಳಿಂದ ನೀನು ಇಲ್ಲಿನ ಬದುಕು ಮತ್ತು ಪರಮಾರ್ಥದ ನಡುವೆ ಒಂದು ಸಮನ್ವಯವನ್ನು ಕಂಡುಕೊಳ್ಳುವುದೇ ಧರ್ಮ, ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮಗೆ ನಮ್ಮ ಮನೆಯಲ್ಲಿ ಒಂದು ಸ್ಥಾನ, ನಮ್ಮ ಕಾರ್ಯಕ್ಷೇತ್ರದಲ್ಲಿ ಒಂದು ಸ್ಥಾನ, ಸಮಾಜದಲ್ಲಿ ಒಬ್ಬ ನಾಗರೀಕನಾಗಿ ಒಂದು ಸ್ಥಾನ, ದೇಶದ ಪ್ರಜೆಯಾಗಿ ಒಂದು ಸ್ಥಾನ ಮತ್ತು ಈ ಲೋಕದಲ್ಲಿ ಒಬ್ಬ ಜೀವಿಯಾಗಿ ಒಂದು ಸ್ಥಾನವಿದೆಯಲ್ಲವೇ? ಪ್ರತೀ ಸ್ಥಾನಕ್ಕೂ ಅದರದೇ ಆದಂತಹ ಒಂದು ಧರ್ಮ ಕರ್ತವ್ಯದ ರೂಪದಲ್ಲಿರುತ್ತದೆ. ಆ ಧರ್ಮವನ್ನು ಸಮರ್ಪಕವಾಗಿ ಪಾಲಿಸಬೇಕು. ವಿಹಿತ ಮತ್ತು ವಿಧಿತವಾದ ಕೆಲಸಗಳನ್ನು ಮಾಡುತ್ತಾ ಯಾವುದಕ್ಕೂ

ಅಂಟಿದೆ, ಯಾವ ಸ್ಥಾನದ ಮೇಲೂ ಒಂದು ವ್ಯಾಮೋಹವನ್ನು ಬೆಳೆಸಿಕೊಳ್ಳದೆ, ಕೇವಲ ಕರ್ತವ್ಯ ಭಾವದಿಂದ ಇದ್ದರೆ, ಒಂದು ನಿರ್ಲಿಪ್ತತೆ ಮತ್ತು ವಿರಕ್ತಿ ಬರುತ್ತದೆ.

ಹೀಗೆ ವಿಹಿತ ಕರ್ಮಗಳನ್ನು ಧರ್ಮವೆಂಬಂತೆ ಮಾಡುವಾಗ, ಮಾನಸಿಕ ಮತ್ತು ಬೌದ್ಧಿಕ ಶುದ್ಧತೆಯಿಂದ ಶಕ್ತಿಯು ಹೆಚ್ಚಾಗಿ, ಆ ಶಕ್ತಿಯೇ ನಮ್ಮನ್ನು ಪಾರಮಾರ್ಥ್ಯದೆಡೆಗೆ ನಡೆಸಲು ಸಹಾಯಕವಾಗುತ್ತದೆ. ಇಲ್ಲಿಯದನ್ನು ಮಾಡುವಾಗಲೇ, ಅಲ್ಲಿಗೆ ಸೇರುವ ಶಕ್ತಿಯನ್ನು ಪಡೆಯಬೇಕು. ಇಲ್ಲಿಯದನ್ನು ಸಮರ್ಪಕವಾಗಿ ಮಾಡಿದರೆ ಮಾತ್ರ, ಅಲ್ಲಿಗೆ ಸೇರಲು ಶಕ್ತಿ ಬರುತ್ತದೆ. ಹೀಗೆ ಇಲ್ಲಿಯದನ್ನು ಮಾಡುತ್ತಾ, ಪಾರಮಾರ್ಥವನ್ನು ಸಾಧಿಸುವುದು ಮತ್ತು ಇಹ ಮತ್ತು ಪರಗಳ ನಡುವೆ ಒಂದು ಸಮನ್ವಯವನ್ನು ಕಂಡುಕೊಳ್ಳುವುದೇ ಧರ್ಮ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ಎರಡರ ನಡುವೆ ಸಮನ್ವಯವೆಂದರೆ, ಯಾವುದನ್ನೂ ಅತಿಯಾಗಿ ಮಾಡದೆ, ಯಾವುದಕ್ಕೂ ಅತಿಯಾಗಿ ಅಂಟಿಕೊಳ್ಳದೆ, ಎರಡರಲ್ಲೂ ಇದ್ದೂ ಇಲ್ಲದಹಾಗೆ ಇದ್ದರೆ, ಎರಡನ್ನೂ ಸೂಕ್ತವಾಗಿ ಮತ್ತು ಸಮರ್ಪಕವಾಗಿ ನಿಭಾಯಿಸಲು ಸಾಧ್ಯವಾಗುತ್ತದೆ. ಆಗ ನಾವು ಮಾಡುವ ಪ್ರತೀ ಕಾರ್ಯವೂ ಮಾನ್ಯ ಗುಂಡಪ್ಪನವರು ಹೇಳುವ ಹಾಗೆ "ಸರ್ವಹಿತ ಸಂಸ್ಥಿತಿಗೆ" ಸಹಕರಿಸಿದ ಹಾಗೆ ಆಗುತ್ತದೆ. ಅಂತಹ ಸಮನ್ವಯವನ್ನು ನಾವು ನಮ್ಮ ಜೀವನದಲ್ಲಿ ಕಂಡುಕೊಂಡರೆ ನಮ್ಮ ಬದುಕು ಸಾರ್ಥಕ ಬದುಕಾಗುತ್ತದೆ.

(215)

ಆತ್ಮ ಋಣ – ಮನೆಯೆ ಮಠ 624 - 628 ಕಗ್ಗರಸಧಾರೆ

**ಮುಕ್ತಕ – 624**

**ಹತ್ಯೆಯೋ ಹನ್ಯತೆಯೋ ವಿಜಯವೋ ಪರಿಭವವೋ ।**
**ಕ್ಷತ್ರಿಯಂ ಸ್ವಾರ್ಥಮಂ ಗಣಿಸುವನೆ ರಣದೊಳ್? ||**
**ಕೃತ್ಯನಿರ್ಣಯ ಬಾಹ್ಯಲಾಭನಷ್ಟದಿನಲ್ಲ ।**
**ಆತ್ಮಋಣವದು ಜಗಕೆ – ಮಂಕುತಿಮ್ಮ ||**

ಬಾಹ್ಯಲಾಭನಷ್ಟದಿನಲ್ಲ= ಬಾಹ್ಯ+ಲಾಭ+ನಷ್ಟದಿನ್ +ಅಲ್ಲ,

ಪರಿಭವ= ಸೋಲು, ಗಣಿಸುವನೆ = ಲೆಕ್ಕಾಚಾರ ಹಾಕುವನೆ | ರಣದೊಳ್=ಯುದ್ಧದೊಳು, ಕೃತ್ಯನಿರ್ಣಯ= ಮಾಡುವ ಕೆಲಸದ ಕಾರಣ,

ಕೊಲ್ಲುವುದೋ, ಕೊಲ್ಲಲ್ಪಡುವುದೋ, ಗೆಲುವೋ, ಸೋಲೋ ಎಲ್ಲದಕ್ಕೂ ಸಿದ್ಧನಾಗಿರುವ ಕ್ಷತ್ರಿಯ, ಯುದ್ಧದಲ್ಲಿ ಹೋರಾಡುವಾಗ ಅವುಗಳಾವುದನ್ನೂ ಲೆಕ್ಕಿಸುವುದಿಲ್ಲ. ಅವನ ಹೋರಾಟದಲ್ಲಿ ಸ್ವಾರ್ಥಕ್ಕೆ ಸ್ಥಾನವೇ ಇಲ್ಲ. ಹೋರಾಡುವುದಷ್ಟೇ ಅವನ ಅನನ್ಯ ಧರ್ಮವಾಗಿರುತ್ತದೆ. ಹಾಗೆಯೇ ನಾವು ಮಾಡಬೇಕಾದ ಕರ್ತವ್ಯದ ಕಾರಣ, ಕೇವಲ ನಾವು ಈ ಜಗತ್ತಿಗೆ ತೀರಿಸಬೇಕಾದ ಋಣವಾಗಿರುತ್ತದೆ, ಲಾಭ ನಷ್ಟಗಳ ಲೆಕ್ಕಾಚಾರವಲ್ಲ ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಇಲ್ಲಿ ಮಾನ್ಯ ಗುಂಡಪ್ಪನವರು ಒಂದು ಉದಾಹರಣೆಯನ್ನು ನಮಗೆ ನೀಡಿದ್ದಾರೆ. ಹೇಗೆ ತನ್ನ ಪೂರ್ವಕರ್ಮಾನುಸಾರವಾಗಿ ಒಬ್ಬ ವ್ಯಕ್ತಿ ಜನ್ಮತಃ ಕ್ಷಾತ್ರ' ಧರ್ಮವನ್ನು ಪಡೆದುಕೊಂಡು ಬಂದಿರುತ್ತಾನೆಯೋ ಹಾಗೆಯೇ ಪ್ರತಿಯೊಬ್ಬರಿಗೂ ಜನ್ಮತಃ ಒಂದೊಂದು ಧರ್ಮವಿರುತ್ತದೆ. ಕ್ಷಾತ್ರ ಧರ್ಮವನ್ನು ಪಡೆದವರು ಯುದ್ಧದಲ್ಲಿ ಹತ್ಯೆ ಮಾಡಬಹುದು, ತಾವೇ ಸಾಯಬಹುದು, ಗೆಲ್ಲಬಹುದು ಅಥವಾ ಸೋಲಬಹುದು. ಆದರೆ ಇವಾವುದನ್ನೂ ಲೆಕ್ಕ ಮಾಡದೆ ಕೇವಲ ಹೋರಾಡುವುದೇ ಅವರ ಧರ್ಮವಾಗಿರಬೇಕು. ತಾನು ಮಾಡುವ ಕೆಲಸದಿಂದ ಆಗುವ ಲಾಭವೋ ಅಥವಾ ನಷ್ಟವೋ ಅವನ ಗಮನಕ್ಕೆ ಬಾರದೆ, ಕೇವಲ ಹೋರುವುದಷ್ಟೇ ಅವನ ಧರ್ಮವಾಗಿರುತ್ತದೆ. ಹಾಗಾಗಿ ಅವನು ಮಾಡುವ ಕೆಲಸಕ್ಕೂ, ಆ ಕೆಲಸದಿಂದಾಗುವ ಪರಿಣಾಮಕ್ಕೂ ಯಾವುದೇ ಸಂಬಂಧವಿರುವುದಿಲ್ಲ. ಇದನ್ನೇ ಮಾನ್ಯ ಗುಂಡಪ್ಪನವರು "ಕೃತ್ಯನಿರ್ಣಯ ಬಾಹ್ಯಲಾಭನಷ್ಟದಿನಲ್ಲ" ಎಂದಿದ್ದಾರೆ

ಅದೇ ರೀತಿ ಈ ಜಗತ್ತಿನ ಪ್ರತೀ ಸೃಷ್ಟಿಗೂ ಒಂದು ಧರ್ಮವಿದೆ ಮತ್ತು ಆ ಧರ್ಮದ ಪಾಲನೆಯೇ ಕರ್ತವ್ಯ. ಬೆಲ್ಲಕ್ಕೆ ಸಿಹಿಯಾಗಿರುವುದು ಧರ್ಮ, ಮೆಣಸಿನಕಾಯಿಗೆ ಖಾರವಾಗಿರುವುದು ಧರ್ಮ, ಗಾಳಿಗೆ ಬೀಸುವುದು ಧರ್ಮ, ನೀರಿಗೆ ಹರಿಯುವುದು ಧರ್ಮ, ಬೆಂಕಿಗೆ ಸುಡುವುದು ಧರ್ಮ. ಏಕೆ, ಏನು, ಎಲ್ಲಿ, ಹೇಗೆ, ಮುಂತಾದ ಪ್ರಶ್ನೆಗಳನ್ನು ಕೇಳದೆ ವಿಹಿತ ಕರ್ತವ್ಯವನ್ನು ಮಾಡುವುದೇ ಧರ್ಮ. ಗಾಳಿ ನೀರಿನಂತೆ ಹರಿಯಲೂ ಸಲ್ಲ, ನೀರು ಗಾಳಿಯಂತೆ ಬೀಸಲೂ ಸಲ್ಲ. ನಾವು ಏನನ್ನು ಮಾಡಬೇಕು ಮತ್ತು ನಮಗೆ ವಿಹಿತ ಧರ್ಮವು ಆವುದು ಎಂಬುವುದು ನಮ್ಮ ಜನ್ಮಜನ್ಮಾಂತರದಲ್ಲಿ, 'ಆತ್ಮ', ಸಂಚಯನ ಮಾಡಿದ ಗುಣಗಳು ನಿರ್ಧರಿಸುತ್ತವೆ. ಅವುಗಳನ್ನು ಆಧರಿಸಿ ಬದುಕಿದರೆ, ಆಗ ಜಗತ್ತಿನಲ್ಲಿ ನಾವು ಪಡೆದದ್ದನ್ನು ಕೊಟ್ಟು, 'ಋಣ' ತೀರಿಸಿದ ಹಾಗೆ ಆಗುತ್ತದೆ.

ವಿಪರ್ಯಾಸವೆಂದರೆ ಈಗ ಎಲ್ಲವೂ ತಲೆಕೆಳಗು. ಎಲ್ಲವೂ ಕಲಬೆರಕೆ. ಖಾರವಿಲ್ಲದ ಮೆಣಸು, ಸಿಹಿಯಿಲ್ಲದ ಬೆಲ್ಲ, ಮಾನವೀಯತೆಯೇ ಇಲ್ಲದ ಮನುಷ್ಯರು, ಹೀಗೆ ಎಲ್ಲೆಡೆಯಲ್ಲೂ ಧರ್ಮಕ್ಕೆ ಚ್ಯುತಿ ಉಂಟಾಗಿದೆ. ಧರ್ಮದ ಪರಿಭಾಷೆಯೇ ಬದಲಾಗಿದೆ. ಸ್ವಾರ್ಥ, ದ್ವೇಷ, ದ್ರೋಹಗಳೇ ಕೆಲವರಿಗೆ ಧರ್ಮ, ಸೃಷ್ಟಿಯ ಪ್ರತಿಯೊಂದೂ ತಮ್ಮ ತಮ್ಮ ಧರ್ಮಗಳನ್ನು ನಿರ್ವಹಿಸುತ್ತಿರುವಾಗ, ಕೇವಲ ಮನುಷ್ಯ ಮಾತ್ರ ಧರ್ಮಪಥದಿಂದ ಸರಿದು ಅಧರ್ಮಿಯಾಗಿದ್ದಾನೆ. ನಮ್ಮ ಅಸ್ತಿತ್ವಕ್ಕೆ ಒಂದು ಸಾರ್ಥಕತೆಯನ್ನು ಕಂಡುಕೊಳ್ಳಬೇಕಾದರೆ, "ಆತ್ಮ ಋಣವನ್ನು ತೀರಿಸಬೇಕಾದರೆ, ನಮಗೆ ವಿಹಿತವಾದ ಧರ್ಮವನ್ನು ಪಾಲಿಸಲೇ ಬೇಕು. ಮನುಷ್ಯನಿಗೆ ಮಾನವೀಯತೆಯೇ ಮೂಲ ಧರ್ಮ.

**ಮುಕ್ತಕ – 625**

**ಕೆಟ್ಟ ಪ್ರಪಂಚವಿದು, ಸುಟ್ಟ ಕರಿ ನರಮನಸು |**
**ಬಿಟ್ಟುಬಿಡಲರಿದದನು, ಕಟ್ಟಿಕೊಳೆ ಮಷ್ಟು ||**
**ಮುಟ್ಟಿ ಮುಟ್ಟದವೋಲುಪಾಯದಿಂ ನೋಡದನು |**
**ಗಟ್ಟಿ ಪುರುಳೇನಲ್ಲ - ಮಂಕುತಿಮ್ಮ ||**

ಬಿಟ್ಟುಬಿಡಲರಿದದನು=ಬಿಟ್ಟು+ಬಿಡಲು+ಆರಿದ+ಅದನು,
ಮುಟ್ಟದವೋಲುಪಾಯದಿಂ=ಮುಟ್ಟದ+ವೋಲು+ಅಪಾಯದಿಂ, ನೋಡದನು=ನೋಡು+ಅದನು,
ಪುರುಳೇನಲ್ಲ=ಪುರುಳು+ಏನೂ+ಅಲ್ಲ,
ಸುಟ್ಟ ಕರಿ = ಇದ್ದಿಲು ಅಥವಾ ಮಸಿ, ಆರಿದ=ಅರಿಯದ, ಕಟ್ಟಿಕೊಳೆ=ಕಟ್ಟಿಕೊಂಡರೆ, ಮಷ್ಟು=ಕೊಳೆ, ಮಸಿ,
ವೋಲು=ಹಾಗೆ, ಪುರುಳು=ವಸ್ತು, (ತಮಿಳಿನಲ್ಲಿ ಪೊರುಳ್)

ಈ ಪ್ರಪಂಚ ಕೆಟ್ಟ ಪ್ರಪಂಚ. ಇಂತಹ ಕೆಟ್ಟ ಪ್ರಪಂಚದಲ್ಲಿ ಮನವೆಲ್ಲ ಸುಟ್ಟು ಕರಕಲಾದರೂ, ಇದನ್ನು ಬಿಟ್ಟು ಬಿಡಲಾಗದೆ ಕೊಳೆ ಮತ್ತು ರಾಡಿಯನ್ನು ತುಂಬಿಕೊಳ್ಳುತ್ತಾನೆ ಮನುಷ್ಯ. ಇಲ್ಲಿ ಇದ್ದೂ ಇಲ್ಲದಹಾಗೆ ಉಪಾಯದಿಂದ ಬದುಕಬೇಕು. ಈ ಜಗತ್ತು ಬಿಡಲಾಗಲಾರದಂತಹ ಗಟ್ಟಿ ವಸ್ತುವೇನಲ್ಲ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಶ್ರೀ ಶಂಕರ ಭಗವತ್ಪಾದರು "ಲಕ್ಷ್ಮೀ ನರಸಿಂಹ ಕರಾವಲಂಬನ ಸ್ತೋತ್ರದಲ್ಲಿ ಸಂಸಾರ ಘೋರ, ಸಂಸಾರ ಕೂಪ, ಸಂಸಾರ ಸಾಗರ, ಸಂಸಾರ ವೃಕ್ಷಮಘಬೀಜ, ಸಂಸಾರ ಸರ್ಪ, ಸಂಸಾರ ಜಾಲ, ಸಂಸಾರ ಭೀಕರ ಎನ್ನುವಂತಹ ಪದಗಳನ್ನು ಉಪಯೋಗಿಸಿ ಈ ಪ್ರಪಂಚದಲ್ಲಿನ ಕಷ್ಟಗಳ ಕೋಟಲೆಯನ್ನು ವಿವರಿಸುತ್ತಾ, ಪರಮಾತ್ಮನ ಕರಗಳ ಅವಲಂಬನಕ್ಕಾಗಿ ಪ್ರಾರ್ಥಿಸುತ್ತಾರೆ. ಅದು ಅವರು ನಮಗೆ ತೋರಿದ ಮಾರ್ಗದರ್ಶನ. ಭಗವಂತನ ಸೃಷ್ಟಿಯಾದ ಈ ಪ್ರಪಂಚವು, ಆ ಪರಮಾತ್ಮ ತನ್ನ ಆನಂದಕ್ಕಾಗಿ ಸೃಷ್ಟಿಸಿಕೊಂಡ ವಸ್ತು. ಅದನ್ನು ನಮ್ಮ ಆನಂದಕ್ಕಾಗಿ ಸೃಷ್ಟಿಸಲ್ಪಟ್ಟಿದೆ ಎಂದು ನಾವು ಅಂದುಕೊಳ್ಳುವುದರಿಂದಲೇ ನಮಗದು ಕಷ್ಟವಾಗಿ,





ಮಷ್ಟಾಗಿ ಅಂಟಿಕೊಂಡು, ತೊಂದರೆ ಕೊಡುತ್ತದೆ. ಆದರೆ ಅಂತಹ ಪ್ರಜ್ಞೆ ಎಲ್ಲರಿಗೂ ಬರುವುದಿಲ್ಲವಾದ್ದರಿಂದ ಈ ಜಗತ್ತಿನಲ್ಲಿ ಎಷ್ಟೇ ಕಷ್ಟಗಳು ಬಂದರೂ ಇದನ್ನು ಬಿಡಲು ಮನಸ್ಸೇ ಬರುವುದಿಲ್ಲ, ಅಲ್ಲವೇ? ಇದನ್ನೇ ಮಾನ್ಯ ಗುಂಡಪ್ಪನವರು "ಬಿಟ್ಟುಬಿಡಲರಿದದನು" ಎಂದಿದ್ದಾರೆ.

ಹಾಗಾದರೆ ಏನು ಮಾಡಬೇಕು ಎಂದರೆ, ಇಲ್ಲಿ ಇರಬೇಕು ಆದರೆ ಅಂಟಿಕೊಳ್ಳಬಾರದು. "ಪದ್ಮಪತ್ರ ಇವಾಂಭಸಿ" ಎಂದು ಕೃಷ್ಣ ಗೀತೆ (ಅಧ್ಯಾಯ 5 ಶ್ಲೋಕ -10) ಯಲ್ಲಿ ಹೇಳುವಂತೆ, ಮಾನ್ಯ ಗುಂಡಪ್ಪನವರು " ಮುಟ್ಟಿ ಮುಟ್ಟದವೋಲುಪಾಯದಿಂ ನೋಡದನು" ಎಂದರು. ಇದ್ದರೂ ಇಲ್ಲದ ಹಾಗೆ, ಇದ್ದರೂ ಅಂಟದ ಹಾಗೆ, ಇದನ್ನು

ಬಿಟ್ಟರೂ ದುಃಖಪಡದ ರೀತಿಯಲ್ಲಿ ಈ ಜಗತ್ತಿನಲ್ಲಿ ಬಾಳಬೇಕು. ಕಡಲಲ್ಲಿ ಬಿದ್ದು ಮುಳುಗುವ ಸ್ಥಿತಿ ಬಂದರೆ, ತೇಲಿ ಹೊರಬರಲು ತೇಲುವಂತಹ ವಸ್ತುವನ್ನೇ ಹಿಡಿಯಬೇಕು. ಮುಳುಗುವಂತಹ ವಸ್ತುವನ್ನು ಹಿಡಿದರೆ ನಾವೂ ಮುಳುಗುತ್ತೇವೆ. ನಿರಂತರ ಬದಲಾಗುವ, ಒಂದು ದಿನ ಖಂಡಿತ ನಾಶವಾಗುವ ಈ ಜಗತ್ತಿಗೆ ಅಂಟಿಕೊಂಡರೆ, ನಿರಂತರವಾಗಿ ಮುನ್ನಡೆಯಬೇಕಾದ 'ಆತ್ಮ ಸೊರಗುತ್ತದೆ. ಪರಮಾತ್ಮ ಶಕ್ತಿ ನಿತ್ಯವಾದದ್ದರಿಂದ ಸತ್ಯವಾದದ್ದು. 'ಸತ್'ನ್ನು ಹಿಡಿದರೆ ಸದ್ಗತಿ, 'ಮಿಥ್'ನ್ನು ಹಿಡಿದರೆ ದುರ್ಗತಿ. ಆದರೆ ಇಲ್ಲಿ ಸತ್ ಯಾವುದು ಅಥವಾ ಮಿಥ್ ಯಾವುದು ಎಂದು ಅರಿಯುವುದೇ ಸಂಸ್ಕಾರ. ನಮ್ಮೆಲ್ಲ ವಿದ್ಯೆ ನಮಗೆ ಇವೆರಡಲ್ಲಿನ ವ್ಯತ್ಯಾಸವನ್ನು ಮತ್ತು ಯಾವುದು ಸತ್ವ ಯಾವುದು ನಿಸ್ಸತ್ವ ಎಂದು ಅರಿತುಕೊಳ್ಳಲು ಸಹಾಯಮಾಡಬೇಕು. ಎಂದು ನಮಗೆ ಈ ಜಗತ್ತು "ಗಟ್ಟಿ ಪುರುಳೇನಲ್ಲ" ಎಂದು ಅರ್ಥವಾದರೆ ಅಂದು ನಾವು ಈ ಜಗತ್ತಿನ ಜಂಜಡದಿಂದ ಬಿಡಿಸಿಕೊಳ್ಳಲು ಪಾತ್ರರಾಗಬಹುದು.

ಮುಕ್ತಕ -626

ಕುಸುಮಸಖನೇಂ ನೀನು? ಹಿಸುಕದೆಯೆ ಮೂಸದನು ।
ಹಿಸುಕೆ ಕಟುಕಂಪು; ನರಲೋಕವದರವೊಲೇ ।
ಗಸಿಯ ಕಲಕದೆ ಕೊಳದ ಮೇಲ್ತಿಳಿಯ ಕುಡಿದು ನಡೆ ।
ಹಸನು ಹಗುರದ ಬಾಳು ಮಂಕುತಿಮ್ಮ ॥

ಮೂಸದನು=ಮೂಸು+ಅದನು, ನರಲೋಕವದರವೊಲೇ =ನರಲೋಕವು+ಅದರ+ವೊಲೇ,
ಮೇಲ್ತಿಳಿಯ=ಮೇಲ್+ತಿಳಿಯ,
ಮೂಸು=ವಾಸನೆಯನ್ನು ಆಘ್ರಾಣಿಸು, ಕಟುಕಂಪು= ಘಾಟು ವಾಸನೆ, ಗಸಿ= ಬಗ್ಗಡ,

ನೀನು ಕುಸುಮಗಳ ಮಿತ್ರನಾದರೆ ಅವುಗಳನ್ನು ಹಿಸುಕದೆ, ಕೇವಲ ಅವುಗಳ ಸುಗಂಧವನ್ನು ಮಾತ್ರ ಆಘ್ರಾಣಿಸು. ಹಿಸುಕಿದರೆ ಸುಗಂಧದ ಬದಲು ಕಡು ಕಮುಟು ವಾಸನೆ ಬರುತ್ತದೆ. ಈ ಜಗತ್ತೂ ಹಾಗೆಯೇ. ಬದುಕಿನ ಅಂತರಾಳದಲ್ಲಿ ಭಾವಗಳ ಮತ್ತು ಅನುಭವಗಳ ರಾಡಿ ಅಡಗಿದೆ. ಅದನ್ನು ಕಲಕದೆ, ರಾದಿಯಿರುವ

ಕೊಳದ ತಿಳಿ ನೀರನ್ನು ಕೊಳದ ತಿಳಿ ನೀರನ್ನು ಕುಡಿಯುವಂತೆ, ಬದುಕಿನಲ್ಲಿ ತೀರ ಆಳಕ್ಕೆ ಇಳಿಯದೆ ಹಗುರವಾಗಿ ಹಸನಾದ ಬಾಳನ್ನು ಬಾಳು ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಜಗತ್ತೆಂಬ ಕೊಳದಲ್ಲಿ ಆಳವೂ ಉಂಟು, ತಿಳಿಯೂ ಉಂಟು, ಬಗ್ಗಡವೂ ಉಂಟು. ಕೊಳದಲ್ಲಿ ನೀರು ಕುಡಿಯಲು ಹೋದಾಗ ಮೇಲಿರುವ ತಿಳಿನೀರನ್ನು ಕುಡಿಯಬೇಕು. ಅಲ್ಲದೆ ಆ ನೀರನ್ನು ಕದಡಿಬಿಟ್ಟರೆ, ಬಗ್ಗಡವೆಲ್ಲಾ ಮೇಲೆ ಬಂದು ನೀರು ಕುಡಿಯಲಾಗುವುದಿಲ್ಲ. ಬದುಕಿನಲ್ಲೂ ಹಾಗೆಯೇ, ಸುಗಂಧಭರಿತ ಹೂಗಳನ್ನು ಮುಟ್ಟದೆ ಕೇವಲ ಅದರ ಸುವಾಸನೆಯನ್ನು ನಾವು ಆಘ್ರಾಣಿಸುವಂತೆ, ಮೂಲಕ್ಕೆ ಕೈಯಿಡದೆ,ಮೂಲದ ಮಂಥನದಿಂದ ಹೊರಹೊಮ್ಮಿದ ತತ್ವವನ್ನು ಪಡೆದು,ಕುಡಿದು ಅಂತರಂಗಕ್ಕೆ ಇಳಿಸಿಕೊಂಡರೆ ಬದುಕು ಸುಗಮವಾಗುತ್ತದೆ. ಮಾನ್ಯ ಗುಂಡಪ್ಪನವರು ಹೇಳುವಂತೆ 'ಬಾಳು ಹಸನಾಗಿ ಹಗುರಾಗುತ್ತದೆ'.

ರಸಭರಿತವಾದ ಹಣ್ಣನ್ನು ತಿನ್ನುವಾಗ, ಅದರ ರಸಾಸ್ವಾದನೆ ಮಾಡಬೇಕು. ಅದನ್ನು ಬಿಟ್ಟು ಅದನ್ನು ಎಲ್ಲಿ ಬೆಳೆದರು, ಮರದ ಅಥವಾ ಗಿಡದ ಉದ್ದಳತೆಗಳೇನು, ಅದಕ್ಕೆ ಹಾಕಿದ ಗೊಬ್ಬರವೆಂತಹುದು, ಮಣ್ಣಿನ ಸಾರವನ್ನು ಆ ಗಿಡ ಹೇಗೆ ಸೆಳೆದುಕೊಂಡಿತು, ಮಣ್ಣು, ನೀರು, ಗೊಬ್ಬರ, ಗಿಡ ಮುಂತಾದವುಗಳಲ್ಲಿ ಇಲ್ಲದ ಸುವಾಸನೆ,ಬಣ್ಣ, ರುಚಿಗಳು ಈ ಹಣ್ಣಿಗೆ ಹೇಗೆ ಬಂದವು ಎಂದೆಲ್ಲಾ ಆಲೋಚಿಸತೊಡಗಿದರೆ, ಹಣ್ಣನ್ನು ತಿನ್ನಲಾಗುವುದೇ, ಸ್ವಾದವನ್ನು ಅಸ್ವಾದಿಸಲಾಗುವುದೇ ಸಾಧ್ಯವೇ ಇಲ್ಲ. ಹಾಗಾಗಿ ಮೂಲವನ್ನು ಕೆದಕುವುದು ಸರಿಯಲ್ಲ.

ಇದು ಎಲ್ಲಕ್ಕೂ ಅನ್ವಯವಾಗುತ್ತದೆ. ಮನುಷ್ಯ ಮನುಷ್ಯ ಸಂಬಂಧಗಳು ಮತ್ತು ಅದನ್ನಾಧರಿಸಿದ ನಮ್ಮ ಜೀವನದಲ್ಲಿ ಆಳಕ್ಕೆ ಇಳಿದರೆ ಭಯಂಕರವಾಗಿರುತ್ತದೆ. ಒಬ್ಬ ವ್ಯಕ್ತಿ ಇಂದು ಬಹಳ ಒಳ್ಳೆಯ ಗುಣಗಳನ್ನು ಹೊಂದಿದ್ದಾನೆ. ಆದರೆ ಅವನು ಅಂತಹ ಒಳ್ಳೆಯ ಗುಣಗಳನ್ನು ಬೆಳೆಸಿಕೊಳ್ಳುವ ಮೊದಲು ತೀರ ಅಸಹ್ಯ ಗುಣಗಳನ್ನು ಹೊಂದಿದ್ದವನಾಗಿದ್ದಿರಬಹುದು. ಅದು ನಮಗೆ ಮುಖ್ಯವಾಗದೇ, ಇಂದಿನ ಅವನ ಒಳ್ಳೆಯತನವನ್ನು ಕಾಣಬೇಕು. ಹಾಗಾದಾಗ ಪರಸ್ಪರ ಸಂಬಂಧಗಳು ಉಳಿಯುತ್ತವೆ, ಅಲ್ಲವೇ? ಬದುಕು ಸುಗಮವಾಗಿರಬೇಕಾದರೆ, ಅದನ್ನು ಅತಿಯಾಗಿ ಕೆದಕಬಾರದು. ಕೆದಕಿದರೆ ನಮಗೆ ಹಿಂಸೆಯಾಗುತ್ತದೆ. ಹಸನಾಗಿ, ಹಗುರವಾಗಿ ಬದುಕಬೇಕು ಎನ್ನುವುದೇ ಈ ಮುಕ್ತಕದ ಹೂರಣ.

ಮುಕ್ತಕ - 627

ವಿಷಯಸನ್ನಿಧಿಗಿಂತ ಮಸಣಸನ್ನಿಧಿ ಲೇಸು ।
ವಿಷದೂಟಕಿಂತುದೋಷಿತವೆ ಲೇಸಲ್ತೆ? ॥
ತೃಷೆ ಕನಲೆ, ಜೀವ ಬಿಸಿಬಾಣಲಿಗೆ ಬಿದ್ದ ಹುಳು ।
ಶಿಶು ಪಿಶಾಚಿಯ ಕೈಗೆ - ಮಂಕುತಿಮ್ಮ ॥





ವಿಷದೂಟಕಿಂತುಹೋಷಿತವೆ=ವಿಷದ+ಊಟಕಿಂತ +ಉಪೋಷಿತವೆ, ಲೇಸಲ್ತೆ =ಲೇಸು+ಅಲ್ತೆ. ಸನ್ನಿಧಿ=ಸಂಗ, ಮಸಣ= ಸ್ಮಶಾನ, ಲೇಸು= ಉತ್ತಮ, ತೃಷೆ=ಆಸೆ, ಕಾಮನೆ, ಉಪೋಷಿತ=ಹಸಿವಿನಿಂದಿರುವುದು.

ಜಗತ್ತಿನ ವಿಷಯಗಳಲ್ಲಿ ಅತಿಯಾದ ಆಸಕ್ತಿಯಿಂದ ಬದುಕುವುದಕ್ಕಿಂತ ಮರಣವೇ ಉತ್ತಮ. ಹಾಗೆಯೇ ವಿಷದ ಊಟ ಮಾಡುವುದಕ್ಕಿಂತ, ಉಪವಾಸವಿರುವುದೇ ಉತ್ತಮ. ಮನುಷ್ಯನ ಆಸೆಗಳು ಕೆರಳಿದರೆ ಜೀವ ಕಾದ ಬಾಣಲಿಗೆ ಬಿದ್ದ ಹುಳುವಿನಂತೆ ವಿಲವಿಲ ಒದ್ದಾಡುತ್ತದೆ, ಪಿಶಾಚಿಯ ಕೈಗೆ ಸಿಕ್ಕ ಶಿಶುವಿನಂತೆ, ಎಂದು ಬದುಕಿನಲ್ಲಿ ಜೀವ ಹೇಗೆ ಒದ್ದಾಡುತ್ತದೆ ಎಂದು ಉಲ್ಲೇಖ ಮಾಡಿದ್ದಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜಗತ್ತಿನ ವಿಷಯಗಳೇ ಹಾಗೆ, ನಾವು ಅದರಲ್ಲಿ ಆಳವಾದ ಆಸಕ್ತಿ ತೋರಿದರೆ ನಮ್ಮನ್ನು ತನ್ನ ಹಿಡಿತಕ್ಕೆ ಸೆಳೆದುಕೊಂಡು ನಮ್ಮನ್ನು ಗೋಳಾಡಿಸುತ್ತದೆ. ಅಂಟದೆ ಇದ್ದರೆ, ಹಿತ, ಜಗತ್ತಿನ ಜನರ ಕಷ್ಟಗಳಿಗೆಲ್ಲ ವಿಷಯಗಳೊಂದಿಗಿನ ಗಾಢವಾದ ಅಂಟಿನಿಂದ ಕೂಡಿದ ನಂಟೇ ಕಾರಣ. ಅವುಗಳ ವಿಷವೃತ್ತದಲ್ಲಿ ಬದುಕುವುದಕ್ಕಿಂತ ಮರಣವೇ ಲೇಸು ಮತ್ತು ಈ ವಿಷಯಗಳಿಂದ ಉಂಟಾಗುವ ಭಾವನೆಗಳ, ಸಂಬಂಧಗಳ ಮತ್ತು ಅವುಗಳಿಂದ ಉಂಟಾಗುವ ಮಾನಸಿಕ ಕೇಶವೇ, ನಮಗೆ ಅವು ಬಡಿಸುವ ವಿಷಪೂರಿತ ಊಟ. ಅಂತಹ ಊಟ ಮಾಡುವುದಕ್ಕಿಂತ ಉಪವಾಸವಿರುವುದೇ ಉತ್ತಮ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ಎಲ್ಲಿಯತನಕ ನಾವು ವಿಷಯಗಳಿಗೆ ದಾಸರಾಗದೆ ಜಗತ್ತಿನಲ್ಲಿ ಅಂಟಿ ಅಂಟದ ರೀತಿ ಬದುಕುತ್ತೇವೆಯೋ ಅಲ್ಲಿಯ ತನಕ ಬದುಕು ನಿರಾಳವಾಗಿರುತ್ತದೆ. ನಮ್ಮನ್ನು ನಾವು ಅತಿ ಲಾಲಸೆಯಿಂದ, ಸ್ವಾರ್ಥದಿಂದ ಇಲ್ಲಿರುವ ಯಾವುದೇ ವಿಷಯಕ್ಕೆ ಅಂಟಿಕೊಂಡರೆ, ನಮ್ಮಲ್ಲಿ ತೃಷೆ, ಎಂದರೆ ಕಾಮನೆ ಆರಂಭವಾಗಿ, ಆ ಕಾಮನೆ, ಕೋಪ, ಲೋಭ, ಮೋಹ, ಮದ ಮತ್ತು ಮಾತ್ಸರ್ಯವೆಂಬ, ಮಾನವನ ಆರು ವೈರಿಗಳನ್ನು ಉದ್ದೀಪನಗೊಳಿಸಿ ಬದುಕನ್ನು ದುರ್ಬರವನ್ನಾಗಿಸುತ್ತದೆ. ಕಡಲಿಂದ ಹೊರಟು, ನಭದ ಮೂಲಕ ಧರೆಯನ್ನು ಸೇರಿ ಮತ್ತೆ ಕಡಲನ್ನು ಸೇರುವ ತವಕವನ್ನು ಹೊಂದಿರುವ ಪ್ರತೀ ನೀರ ಹನಿಯಂತೆ. ತನ್ನ ಮೂಲವಾದ ಪರಮಾತ್ಮನಿಂದ ಹೊರಟು ಮತ್ತೆ ಆ ಪರಮಾತ್ಮನನ್ನೇ ಸೇರಲು ತವಕಿಸುವ ಜೀವದ ಪ್ರಯಾಣಕ್ಕೆ ಈ ಜಗತ್ತಿನ ವಿಷಯಾಧಾರಿತ ಅಂಟು ಮಾರಕವಾಗಿ ನಿಲ್ಲುತ್ತದೆ. ಬಾಣಲಿಗೆ ಬಿದ್ದ ಹುಳುವಿನಂತೆ.

ನಮ್ಮಲ್ಲಿ ಕನಲುವ, ಅಂದರೆ ಅರಳಿ ಕೆರಳುವ ಆಸೆಗಳೇ ನಮ್ಮನ್ನು ಈ ಜಗತ್ತಿನ ವಿಷಯಗಳಿಗೆ ಅಂಟಿಕೊಳ್ಳುವಂತೆ ಮಾಡುವ ಪಿಶಾಚಿಗಳು, ಎಲ್ಲಿಯತನಕ ಆ 'ಆಸೆ'ಗಳು ಸರ್ವರ ಹಿತಕಾರಿಯಾಗಿರುತ್ತದೆಯೋ ಅಲ್ಲಿಯ ತನಕ ಅದು ಸ್ವಹಿತವೂ ಆಗಿರುತ್ತದೆ, ಎಂದರೆ ಜೀವನಿಗೂ ಹಿತವಾಗೇ ಇರುತ್ತದೆ. ಆದರೆ ನಮ್ಮಲ್ಲಿ ಉದ್ಭವವಾಗುವ ಆಸೆಗಳು ಕೇವಲ ಸ್ವಾರ್ಥ ಸಾಧನೆಗಾದರೆ ನಾವು ಆಸೆಗಳಿಂದುಂಟಾಗುವ 'ಸುಳಿಯಲ್ಲಿ' ಸಿಕ್ಕಿಕೊಳ್ಳುತ್ತೇವೆ. ಇದನ್ನೇ ಮಾನ್ಯ ಗುಂಡಪ್ಪನವರು “ ಶಿಶು ಪಿಶಾಚಿಯ ಕೈಗೆ” ಎನ್ನುತ್ತಾರೆ. ವಾಚಕರೆ ನಮಗೆ ಆ ಪರಮಾತ್ಮ ವಿವೇಕವನ್ನು ಕರುಣಿಸಿದ್ದಾನೆ. ಈ ಜಗತ್ತಿಗೆ ಅಂಟಿ “ನರಳ' ಬೇಕೋ ಅಥವಾ ಅಂಟದೆ 'ಮುಕ್ತ' ಜೀವನವನ್ನು ನಡೆಸಬೇಕೋ ಎನ್ನುವುದನ್ನು ನಾವೇ ನಿರ್ಧರಿಸಿಕೊಳ್ಳಬೇಕಲ್ಲವೇ?

**ಮುಕ್ತಕ – 628** **ಋಣವ ತೀರಿಸಬೇಕು, ಋಣವ ತೀರಿಸಬೇಕು ।**
**ಋಣವ ತೀರಿಸುತ ಜಗದಾದಿಸತ್ವವನು ॥**
**ಜನದಿ ಕಾಣುತ್ತದರೊಳ್ ಒಂದುಗೂಡಲುಬೇಕು ।**
**ಮನೆಯೊಳಗೆ ಮಠ ನಿನಗೆ – ಮಂಕುತಿಮ್ಮ ॥**

ಜಗದಾದಿಸತ್ವವನು= ಜಗದ+ಆದಿ+ಸತ್ವವನು, ಕಾಣುತ್ತದರೊಳ್ =ಕಾಣುತ್ತ+ ಅದರೊಳ್, ಮನೆಯೊಳಗೆ =ಮನೆಯ+ಒಳಗೆ,

ಅದಿಸತ್ವವನು= ಮೂಲ ಸತ್ವ ಮತ್ತು ತತ್ವ

ನಾವು ಋಣವನ್ನು ತೀರಿಸಬೇಕು. ಆ ಪರಮಾತ್ಮ ಸತ್ವವನ್ನು ಎಲ್ಲರಲ್ಲೂ ಕಾಣುತ್ತ ಎಲ್ಲರೊಳಗೆ ಒಂದಾಗಿ ಬದುಕಬೇಕು. ಪಡೆದದ್ದನ್ನೆಲ್ಲ ಹಿಂತಿರುಗಿಸಿ ಸಾಲ ತೀರಿಸಬೇಕು. ಸಂಸಾರದಲ್ಲಿ ಇದ್ದೇ ಎಲ್ಲವನ್ನೂ ತೊರೆದು ಸನ್ಯಾಸಿಯಾಗಬೇಕು. ಮನೆಯನ್ನೇ ಮಠವಾಗಿಸಿಕೊಳ್ಳಬೇಕು ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಾವು ಈ ಜಗತ್ತಿಗೆ ಮನುಷ್ಯ ರೂಪ ಹೊತ್ತು ಬಂದು ಹುಟ್ಟಿನ ಮುಂಚಿನಿಂದ ಸಾಯುವ ತನಕ ಎಲ್ಲರಿಂದ ಏನನ್ನಾದರೂ ಪಡೆದುಕೊಳ್ಳುತ್ತಲೇ ಇರುತ್ತೇವೆ. ಕೊಡುತ್ತಲೂ ಇರುತ್ತೇವೆ. ಇವೆರಡೂ ಸಮವಾಗಿರುವುದಿಲ್ಲವಾದ್ದರಿಂದ, ನಮ್ಮ ಅಂಗಡಿಯಲ್ಲಿ ಈ 'ಋಣ'ದ ಸರುಕು ಖಾಲಿಯಾಗುವುದೇ ಇಲ್ಲ. ಹಾಗಾಗಿ ನಮಗೆ ಈ ಜಗದ್ವ್ಯಾಪಾರದ ಅಂಗಡಿಯಿಂದ ಮುಕ್ತಿಯೂ ಇಲ್ಲ. ಹೆತ್ತವರಿಂದ, ಬಂಧುಗಳಿಂದ, ಸ್ನೇಹಿತರಿಂದ ಹೀಗೆ ನಮ್ಮ ಸಂಪರ್ಕಕ್ಕೆ ಬರುವ ಎಲ್ಲರಿಂದಲೂ ನಾವು ಜೀವಮಾನ ಪರ್ಯಂತ ಏನನ್ನಾದರೂ ಪಡೆದುಕೊಳ್ಳುತ್ತಲೇ ಇರುತ್ತೇವೆ. ಹಲವರಿಂದ ಪಡೆದುಕೊಳ್ಳುತ್ತೇವಾದ್ದರಿಂದ, ನಾವು ಪಡೆದುಕೊಳ್ಳುವುದೇ ಹೆಚ್ಚು ಕೊಡುವುದು ಕಡಿಮೆ. ಹಾಗಾಗಿ ಋಣ ಹಾಗೆಯೇ ಉಳಿಯುತ್ತದೆ. ಈ ಋಣವನ್ನು ತೀರಿಸಲೇ ಬೇಕು. ಹಿಂದಿನಿಂದಲೂ ಒಂದಷ್ಟು ಋಣವನ್ನು ಹೊತ್ತುಕೊಂಡು ಬಂದಿರುತ್ತೇವೆ, ಮತ್ತಷ್ಟನ್ನು ಇಲ್ಲಿ ಸಂಚಯಿಸಿಕೊಳ್ಳುತ್ತೇವೆ. ಎಲ್ಲವನ್ನೂ ತೀರಿಸಲೇಬೇಕು.

ಬಹಳ ಜಾಗರೂಕತೆಯಿಂದ ಬದುಕಿದರೆ, ತೀರ ಸಾಧಾರಣ ಜೀವನವನ್ನು ಮಾಡಿದರೆ, ಆಗ ಪರರಿಂದ ಪಡೆದುಕೊಳ್ಳುವುದನ್ನು ಕಡಿಮೆ ಮಾಡಿಕೊಳ್ಳಬಹುದು. ಸ್ವಾರ್ಥವನ್ನು ಬಿಟ್ಟು ಪರಹಿತವೇ ನಮ್ಮ ಧ್ಯೆಯವಾದರೆ ಆಗ

ಕೊಡುವುದು ಅಧಿಕವಾಗಬಹುದು. ಹೀಗೆ ಪಡೆಯುವುದು ಕಡಿಮೆಯಾಗಿ ಕೊಡುವುದು ಅಧಿಕವಾದಾಗ, ನಮ್ಮ ಕರ್ಮಕ್ಲೇಶವು ಶೇಷರಹಿತವಾಗಬಹುದು. ಜಗತ್ತಿನೊಂದಿಗೆ ನಮ್ಮ ಅಂಟು ಕಡಿಮೆಯಾದರೆ, ಈ ಜಗತ್ತಿನ ಮೇಲೆ ನಮ್ಮ ಅಧಾರ ಕಡಿಮೆಯಾದರೆ ಆಗ ನಮ್ಮ ಬಯಕೆಗಳೂ ಕಡಿಮೆಯಾಗಿ ಭಾರ ಕಡಿಮೆಯಾಗುತ್ತದೆ. "ಸಮ್ಯಕ್ ನ್ಯಾಸ ಇತಿ ಸನ್ಯಾಸಃ" ಎನ್ನುತದೆ ಶ್ರುತಿಗಳು. ಎಲ್ಲವನ್ನೂ ಕಟ್ಟಿಕೊಂಡ ನಾವು ಎಲ್ಲವನ್ನೂ ಬಿಟ್ಟರೆ ಅದು ಸನ್ಯಾಸ. ಆದರೆ ಈ ಸನ್ಯಾಸಕ್ಕೆ ಕಾವಿಯನ್ನು ತೊಟ್ಟು, ಕಾಡಿಗೆ ಹೋದರೆ





ಮಾತ್ರ ಸನ್ಯಾಸವೆಂದು ಅರ್ಥವಲ್ಲ. ತೋರಿಕೆಗಿಂತ ಅಂತರಂಗದಲ್ಲಿ ತೊರೆಯಬೇಕು. ತೊರೆದಂತೆ ಇದ್ದರೆ ಪ್ರಯೋಜನವಿಲ್ಲ ನಿಜವಾಗಲೂ ತೊರೆಯಬೇಕು.

ಅಂತಹ ಸ್ಥಿತಿಗೆ ತಲುಪಬೇಕಾದರೆ ಸಂಸಾರದಲ್ಲಿ ಇದ್ದು, ಎಲ್ಲವನ್ನೂ ಅನುಭವಿಸಿ, ಅವುಗಳ ತಾತ್ಕಾಲಿಕತೆ ಅಥವಾ ನಶ್ವರತೆಯನ್ನು ಮನಗಂಡು, ಯಾವುದಕ್ಕೂ ಅಂಟದೆ, ಸ್ವಾರ್ಥ ಮತ್ತು ನಾನತ್ವವನ್ನು ತೊರೆದು, ಎಲ್ಲವನ್ನೂ ಒಂದು ಕರ್ತವ್ಯದಂತೆ ಮಾಡಿ, ಬದುಕಿದರೆ ಮಾನ್ಯ ಗುಂಡಪ್ಪನವರು ಹೇಳುವಹಾಗೆ 'ಋಣವನ್ನು ತೀರಿಸಿ ಮುಕ್ತರಾಗಬಹುದು. ಇದಕ್ಕೆ ಸಾಧನೆ ಬೇಕು, ಸತ್ಸಂಗಬೇಕು, ಸದಾಚಾರ ಮತ್ತು ಸದ್ವಿಚಾರ ಬೇಕು. ಅವುಗಳನ್ನು ಬೆಳೆಸಿಕೊಂಡರೆ ನಮ್ಮೊಳಗೆ 'ಸತ್ವ' ತುಂಬಿಕೊಂಡು ಸಕಲ ಜೀವರಾಶಿಗಳಲ್ಲೂ ಇರುವ • ಜಗತ್ ಸತ್ಯ ಮತ್ತು ಜಗತ್ ಸತ್ವ' ವನ್ನು ಅರಿತುಕೊಂಡು ಒಂದು ಮುಕ್ತ ಜೀವನ ನಡೆಸಬಹುದು. ಎಲ್ಲ ಋಣ ತೀರಿದಾಗ, ಹಗುರವಾಗಿ ಸ್ವಚ್ಛಂದವಾಗಿ, ಜಗತ್ತೆಲ್ಲ ಆವರಿಸಿಕೊಂಡಿರುವ ಆ "ಜಗದಾದಿಸತ್ವವನು" ಕಾಣುತ್ತಾ ಅದರೊಳಗೊಂದಾಗುತ್ತಾ 'ಋಣ ಮತ್ತು ಬಂಧನ'ದಿಂದ ಮುಕ್ತರಾಗಬಹುದು.

**ಮುಕ್ತಕ – 629** **ವೈವಿಧ್ಯವೊಂದು ಕೃಪೆ ನಮಗಿರುವ ಕಷ್ಟದಲಿ |**
**ಆವರಿಸದಳಲ್ ಎಲ್ಲರನುಮೊಂದೆ ಸಮಯ ||**
**ನೋವಿಲ್ಲದವರು ನೊಂದವರನು ಸಂತಯಿಸುತಿರೆ |**
**ಜೀವನವು ಕಡಿದಹುದೆ? - ಮಂಕುತಿಮ್ಮ ||**

ವೈವಿಧ್ಯವೊಂದು=ವೈವಿಧ್ಯವು+ಒಂದು, ನಮಗಿರುವ=ನಮಗೆ+ಇರುವ, ಆವರಿಸದಳಲ್-ಆವರಿಸದು+ಅಳಲ್, ಎಲ್ಲರನುಮೊಂದೆ=ಎಲ್ಲರುಂ+ಒಂದೆ, ಸಂತಯಿಸುತಿರೆ=ಸಂತಯಿಸುತ+ಇರೆ, ಕಡಿದಹುದೆ=ಕಡಿದು+ಅಹುದೆ. ಅಳಲ್=ದುಃಖ, ಕಡಿದು=ಕಷ್ಟವಾದದ್ದು.

ವೈವಿಧ್ಯತೆಯೇ ನಮಗೆ ಆ ಪರಮಾತ್ಮ ಕರುಣಿಸಿರುವ ಕೃಪೆ, ಎಲ್ಲರನ್ನೂ ಒಂದೇ ಬಾರಿ ಕಷ್ಟಗಳು ಆವರಿಸುವುದಿಲ್ಲ, ಹಲ ನೋವಿಲ್ಲದವರು ಹಲ ನೋವಿರುವವರನ್ನು ಸಂತೈಸುತ್ತಾ ಇರುವಾಗ ಬದುಕು ಕಷ್ಟವಾಗುವುದಿಲ್ಲ ಎಂದು ಬದುಕಿನ ಸುಖ ದುಃಖಗಳ ಮತ್ತೊಂದು ಆಯಾಮವನ್ನು ನಮಗೆ ತೋರಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಎಲ್ಲರಿಗೂ ಎಲ್ಲಾ ಸಮಯಕ್ಕೂ ಕಷ್ಟವಾಗಲೀ ಸುಖವಾಗಲೀ ಇರುವುದಿಲ್ಲ, ಅಲ್ಲವೇ? ಕೆಲಬಾರಿ

ಕಷ್ಟಗಳು, ಕೆಲಬಾರಿ ತೀವ್ರತಮ ಕಷ್ಟಗಳು, ಕೆಲಬಾರಿ ಸುಖಗಳು ಬರುತ್ತವೆ ಮತ್ತು ಅವುಗಳನ್ನು ನಾವು ನುಭವಿಸುತ್ತೇವೆ. ಸದಾಕಾಲ ದುಃಖವೋ ಅಥವಾ ಸುಖವೋ ಇದ್ದರೆ ಬದುಕು ಅಸಹನೀಯವಾಗುತ್ತದೆ. ಇಂತಹ ವೈವಿಧ್ಯತೆಯೇ ಆ ಪರಮಾತ್ಮ ನಮಗೆ ತೋರಿರುವ ಕೃಪೆ ತಿಳಿದುಕೊಳ್ಳಬೇಕು. ಆದ್ದರಿಂದ ಕೆಲವರು ಕಷ್ಟಗಳನ್ನು ಮತ್ತು ಕೆಲವರು ಸುಖಗಳನ್ನು ಅನುಭವಿಸುತ್ತಿರುತ್ತಾರಾದ್ದರಿಂದ, ನೋವಿನ ಸ್ಥಿತಿ ಕೆಲವರಿಗೆ, ನೋವಿಲ್ಲದ ಸ್ಥಿತಿ ಕೆಲವರಿಗೆ.

ನೋವಿಲ್ಲದವರು ನೋವಿರುವ ಜನರಿಗೆ ಒದಗಿದರೆ, ಅವರ ನೋವು ಕಡಿಮೆಯಾಗುತ್ತದೆ. ಪರರ ನೋವನ್ನು ಹಂಚಿಕೊಂಡರೆ ಹಂಚಿಕೊಂಡವರಿಗೆ ತೃಪ್ತಿ ಮತ್ತು ಕಷ್ಟದಲ್ಲಿರುವವರಿಗೆ ಸಾಂತ್ವನ ಸಿಗುತ್ತದೆ. ಇದೂ ಸಹ ಆ ಜಗನ್ನಿಯಾಮಕನ ಸೃಷ್ಟಿಯ ನಿಯಮ. ಪರರ ದುಃಖವನ್ನು ಹಂಚಿಕೊಳ್ಳುವುದು ಮನುಷ್ಯನ ಧರ್ಮವಾದ ಮಾನವೀಯತೆಯ ಒಂದು ಆಯಾಮ. ಮನುಷ್ಯರು ಈ ಧರ್ಮವನ್ನು ಪಾಲಿಸಿದರೆ ಜಗತ್ತಿನಲ್ಲಿ ಕಷ್ಟಪಡುವವರಿಗೆ ಮತ್ತು ನೋವುಣ್ಣುವವರಿಗೆ ಅಲ್ಪ ಸ್ವಲ್ಪ ಸಮಾಧಾನವನ್ನು ನೀಡಿದಂತಾಗುತ್ತದೆ.

ಆದರೆ ಇಂದಿನ ಪರಿಸ್ಥಿತಿ ಹಾಗಿದೆಯೇ? ಸ್ವಾರ್ಥವೇ ತುಂಬಿದ ಈ ಜಗತ್ತಿನಲ್ಲಿ ಪರರ ಕಷ್ಟಕ್ಕೆ ಸ್ಪಂದಿಸುವವರ ಸಂಖ್ಯೆ ಕ್ಷೀಣಿಸುತ್ತಾ ಇದೆ. ಪದವಿ, ಅಧಿಕಾರ, ಆಸ್ತಿ, ದ್ರೋಹ, ತಟವಟ ಮುಂತಾದವುಗಳ ಸುಳಿಯಲ್ಲಿ ಸಿಕ್ಕಿಕೊಂಡಿರುವ ಇಂದಿನ ಮನುಷ್ಯನಿಗೆ ಪರರ ಕಷ್ಟ ಮತ್ತು ದುಃಖದ ಬಗ್ಗೆ ಯೋಚಿಸಲು ಸಮಯವೇ ಇಲ್ಲ. ಇನ್ನು ಸ್ವಾಭಾವಿಕ ಧರ್ಮವನ್ನು ಪರಿಪಾಲಿಸುವ ಪ್ರಶ್ನೆಯೇ ಬರುವುದಿಲ್ಲ. ಹಣವಿದ್ದರೆ ಸುಖ ಅದಿಲ್ಲದಿದ್ದರೆ ದುಃಖ ಎನ್ನುವದು ಸರಿಯಲ್ಲ. ಹಣವಿಲ್ಲದಿದ್ದರೂ ಪರರ ನೋವಿಗೆ ಸ್ಪಂದಿಸಬಹುದು. ನಮ್ಮ ಕ್ಷಮತೆಯ ಮಿತಿಯಲ್ಲಿ ನಾವು ಪರರ ದುಃಖಕ್ಕೆ ಸ್ಪಂದಿಸಿದರೆ ನಾವು ಮಾನವ ಧರ್ಮವನ್ನು ಕಿಂಚಿತ್ ಪಾಲಿಸಿದಂತಾಗುತ್ತದೆ.

**ಮುಕ್ತಕ – 630**

**ಸ್ಥೂಲ ಸೂಕ್ಷ್ಮ ವಿವೇಕರಹಿತೇಷ್ಟ ಬಂಧುಜನ |**
**ಕಾಲದಂಷ್ಟ್ರಕೆ ನಿನ್ನ ಮೃದುಗೊಳಿಪ ಭಟರು ||**
**ಸಾಲವನು ನಿನ್ನಿಂದ ಸಲಿಸಕೊಳಬಂದವರು |**
**ತಾಳುಮೆಯಿನವರೊಳಿರು - ಮಂಕುತಿಮ್ಮ ||**

ವಿವೇಕರಹಿತೇಷ್ಟ=ವಿವೇಕ+ರಹಿತ+ಇಷ್ಟ, ತಾಳುಮೆಯಿನವರೊಳಿರು=ತಾಳುಮೆ+ಇನೆ+ಅವರೊಳು+ಇರು, ಕಾಲದಂಷ್ಟ = ಕಾಲನ ಕರೆಗೆ, ಸಾಲವನು=ಜನ್ಮ ಜನ್ಮಾಂತರದ ಋಣವನ್ನು, ಭಟರು=ಸೇವಕರು (ಯಮನ), ತಾಳುಮೆಯಿನೆ=ತಾಳ್ಮೆಯಿಂದ

(223)

ಕಷ್ಟ ವೈವಿಧ್ಯ 629-633 ಕಗ್ಗರಸಧಾರೆ

ವಿಷಯಗಳ ಸೂಕ್ಷ್ಮತೆ ಮತ್ತು ಸ್ಥೂಲತೆಯನ್ನು ಅರಿಯದೆ ನಮ್ಮೊಡನೆ ನಡಕೊಳ್ಳುವ ನಮ್ಮ ಬಂಧು ಮಿತ್ರರು ಕಾಲನ ಕರೆಗೆ ನಮ್ಮನ್ನು ಅಣಿಗೊಳಿಸುತ್ತಾರೆ. ನಾವು ಜನ್ಮ ಜನ್ಮಾಂತರದಲ್ಲಿ ಬಹುಜನರಿಂದ ಪಡೆದ ಸಾಲವನ್ನು ಹಿಂತಿರುಗಿ ಪಡೆಯಲು ಬಂದವರೇ ಇವರೆಲ್ಲ. ಹಾಗಾಗಿ ಇವರೊಂದಿಗೆ ವ್ಯವಹರಿಸುವಾಗ ತಾಳ್ಮೆಯಿಂದಿರು ಎಂದು ಪರರ ವ್ಯವಹಾರದಿಂದ ನಮ್ಮ ಮೇಲೆ ಆಗುವ ಪ್ರಭಾವವನ್ನು ಎದುರಿಸುವ ಪರಿಯನ್ನು ಬೋಧಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಜಗತ್ತಿನ ನಮ್ಮ ಬದುಕಿನಲ್ಲಿ ಅನ್ಯರೊಂದಿಗೆ ನಾವು ವಿಷಯಗಳಿಂದ ಹೆಣೆದುಕೊಂಡಿರುತ್ತೇವೆ. ವಿಷಯಗಳ ಅಂಟಿನಿಂದ ನಮಗೆ ಜಗತ್ತಿನೊಂದಿಗೆ ನಂಟು. ಆದರೆ ಆ ವಿಷಯಗಳು ಕೆಲವು ಬಹಳ ಆಳಕ್ಕೆ ಹೋಗಬೇಕಾಗಿಲ್ಲದ ಸ್ಥೂಲ ರೂಪದ್ದು ಮತ್ತೆ ಕೆಲವು ಬಹಳ ನಾಜೂಕಾಗಿ ವ್ಯವಹರಿಸಬೇಕಾದ ಸೂಕ್ಷ್ಮ ರೂಪದ್ದು. ನಮ್ಮ ಸಂಪರ್ಕಕ್ಕೆ ಬರುವ ಜನರೊಂದಿಗೆ ನಮ್ಮ ಸಂಬಂಧವು ಈ ಎರಡೂ ರೂಪದ ವಿಷಯಗಳಿಂದ ಏರ್ಪಟ್ಟಿರುತ್ತದೆ. ಅಷ್ಟೇ ಅಲ್ಲ ಮಾನ್ಯ ಗುಂಡಪ್ಪನವರು ಹೇಳುವಂತೆ ಈ ವಿಷಯಗಳು ಮತ್ತು ಈ ವಿಷಯಗಳ ಮೂಲಕ ನಮಗೆ ಅನ್ಯರೊಂದಿಗೆ ಉಂಟಾಗುವ ಸಂಬಂಧಗಳು ನಾವು ಹಿಂದಿನಿಂದ ಪಡೆದುಕೊಂಡು ಬಂದ ಸಾಲದಂತೆ ಇರುತ್ತದೆ. ಇದನ್ನು ತೀರಿಸಲೇ ಬೇಕು.

ಆದರೆ ನಮ್ಮ ಬಂಧು ಮಿತ್ರರಿಗೆ ನಮ್ಮೊಡನೆ ವ್ಯವಹರಿಸುವಾಗ ವಿಷಯಗಳ ಸೂಕ್ಷ್ಮತೆ ಮತ್ತು ಸ್ಥೂಲತೆಗಳನ್ನು ಅರಿಯುವ ಮತ್ತು ಅರಿತು ನಡೆದುಕೊಳ್ಳುವ ಇಂಗಿತ ಜ್ಞಾನ ಮತ್ತು ವಿವೇಕವಿರುವುದಿಲ್ಲ. ಏಕೆಂದರೆ ಅವರು ನಮ್ಮಂತೆ

ಯೋಚಿಸುವುದಿಲ್ಲ. ನಮ್ಮೊಂದಿಗಿನ ಅವರ ನಡವಳಿಕೆ ಅವರ ವಿಚಾರ ಮತ್ತು ಯೋಚನೆಯನ್ನು ಅವಲಂಬಿಸಿರುತ್ತದೆ. ಹಾಗಾಗಿ ಅವರು ನಮಗೆ ಭಾವನಾತ್ಮಕವಾಗಿ ಘಾಸಿಮಾಡಬಹುದು. ಅಂತಹ ಗಾಯಗಳಿಂದ ನಾವು ನೊಂದು, ನಲುಗಿ 'ಸಾಕಪ್ಪ ಸಾಕು, ಇದರಿಂದ ಮುಕ್ತಿ ಪಡೆದರೆ ಸಾಕು' ಎನ್ನುವ ಮಟ್ಟಿಗೆ ಹೋಗಿ 'ಕಾಲದಂಷ್ಟ್ರಕೆ ನಿನ್ನ ಮೃದುಗೊಳಿಪ ಭಟರು' ಎಂದು ಗುಂಡಪ್ಪನವರು ಹೇಳುವಂತೆ 'ಇವರ ಹಿಂಸೆಗಿಂತ ಮರಣವೇ ಹಿತ' ಎನ್ನುವಂತಹ ಭಾವ ನಮಗೆ ಬರಬಹುದು.

ಯಾರು ಹೇಗೆ ಟೀಕಿಸಿದರೂ, ವರ್ತಿಸಿದರೂ ಮತ್ತು ನಮ್ಮನ್ನು ಗೋಳು ಹೊಯ್ದುಕೊಂಡರೂ ನಾವು ನಿಧಾನವಾಗಿ ಯೋಚಿಸಿ ತಾಳ್ಮೆಯಿಂದ ವರ್ತಿಸಿದರೆ, ನಮ್ಮ ಮನಸ್ಸಿಗೆ ಆಗುವ ಗಾಯದ ತೀವ್ರತೆ ಕಡಿಮೆಯಾಗಬಹುದು. ತಾಳ್ಮೆಯನ್ನು ತಳೆಯುವುದಕ್ಕೆ ಈ 'ವಿಷಯ' ಗಳಿಗೆ ತೀವ್ರವಾಗಿ ಅಂಟದೇ ಇರುವುದೇ ಮಾರ್ಗ, ವಿಷಯ ಸಾಂಗತ್ಯದಿಂದ ಆಗುವ ವಿಪರೀತ ಪರಿಣಾಮವನ್ನು ತಡೆದುಕೊಳ್ಳಲು ತಾಳ್ಮೆಯೊಂದೇ ಮಾರ್ಗ,

**ಮುಕ್ತಕ 631**

**ಸರಿಗೆ ಪಂಚೆಯೊ ಹೊದಕೆ, ಹರಕುಚಿಂದಿಯೊ ಮೈಗೆ |**
**ಪರಮಾನ್ನಭೋಜನವೊ? ತಿರುಪೆಯಂಬಲಿಯೋ ||**
**ಪರಿಣಾಮದಲಿ ಧನಿಕ ಬಡವರಿರ್ವರುಮೊಂದೆ |**
**ಕರುಬು ಕೊರಗೇತಕೆಲೊ - ಮಂಕುತಿಮ್ಮ ||**

ತಿರುಪೆಯಂಬಲಿಯೋ=ತಿರುಪೆಯ+ಅಂಬಲಿಯೋ, ಬಡವರಿರ್ವರುಮೊಂದೆ=ಬಡವರು+ಈರ್ವರುಂ+ಒಂದೆ,

ಕೊರಗೇತಕೆಲೊ=ಕೊರಗು+ಏತಕೆ+ಎಲೊ,

ಸರಿಗೆಪಂಚೆ=ರೇಷ್ಮೆಯಂಚಿನ ಪಂಚೆ, ತಿರುಪೆ= ಬಿಕ್ಷೆ, ಅಂಬಲಿ=ಗಂಜಿ, ಕರುಬು=ಗೊಣಗಾಟ, ಕೊರಗು=ಚಿಂತೆ

ರೇಶಿಮೆಯ ಪಂಚೆಯನ್ನು ಉಟ್ಟರೂ, ಹರಿದ ಚಿಂದಿಯನ್ನು ಉಟ್ಟರೂ ಪರಿಣಾಮ ಒಂದೇ ಮತ್ತು ಪರಮಾನ್ನವನ್ನು ಉಂಡರೂ, ಭಿಕ್ಷೆಯೆತ್ತಿ ಗಂಜಿಯನ್ನು ಕುಡಿದರೂ ಪರಿಣಾಮ ಒಂದೇ. ಹಾಗಾಗಿ 'ನಿನ್ನ ಬಳಿ ಏನೇ ಇದ್ದರೂ ಅಥವಾ ಇರದಿದ್ದರೂ ಕೊರಗದೆ ಬದುಕು' ಎಂದು ಬದುಕಿನಲ್ಲಿ ಸಂತೋಷದ ಹಾದಿಯನ್ನು ತೋರಿದ್ದಾರೆ ನಮಗೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಆನಂದ ಅಥವಾ ಸಂತೋಷವೆನ್ನುವುದು ಒಂದು ಮನೋಭಾವ. ಎಲ್ಲರೂ ಪರದಾಡುವುದು ಆ ಆನಂದವನ್ನು ಪಡೆದುಕೊಳ್ಳಲಿಕ್ಕಾಗಿಯೇ, ಆದರೆ ನಮಗೆ ಯಾವುದರಿಂದ ಸಂತೋಷ ಅಥವಾ ಆನಂದವಾಗುತ್ತದೆ ಎನ್ನುವುದು ನಮಗೆ ಗೊತ್ತಿರುವುದಿಲ್ಲ. ಇರುವುದನ್ನು ಬಿಟ್ಟು ಇಲ್ಲದ್ದಕ್ಕೆ ಹಾತೊರೆಯುವುದು ಸಾಮಾನ್ಯವಾಗಿ ಮನಸ್ಸಿನ ಗುಣ. ಆದ್ದರಿಂದಲೇ ನಮಗೆ ಸದಾಕಾಲ ಏನಾದರೂ ಒಂದು ಕೊರತೆ ಕಾಡುತ್ತಲೇ ಇರುತ್ತದೆ. ವಸ್ತು-ವಿಷಯಗಳಿಂದ ಸಿಗುವ ಸುಖದ ತಾತ್ಕಾಲಿಕತ್ವವೇ ಇದಕ್ಕೆ ಕಾರಣ!!. ಹಾಗಾಗಿಯೇ ನಮಗೆ ಕೊರತೆ ಮತ್ತು ತತ್ಪರಿಣಾಮವಾಗಿ ನಮ್ಮ 'ಕೊರಗು ಮತ್ತು ಅಸಮಾಧಾನ' ಸದಾಕಾಲವಿರುತ್ತದೆ.

ಮೃಷ್ಟಾನ್ನವನ್ನು ತಿಂದ ಅತೀ ಧನಿಕನಾದ ಮನುಷ್ಯನಿಗಾಗಲೀ ಅಥವಾ ತಂಗಳನ್ನವನ್ನು ತಿಂದ ಕಡು ಬಡವನಿಗಾಗಲಿ ಹೊಟ್ಟೆ ತುಂಬಿದಾಗ ತೃಪ್ತಿಯಾಗಿ ನಿದ್ದೆ ಬರುತ್ತದೆ. ಆ ನಿದ್ದೆಯಲ್ಲಿ ಅವರಿಗೆ ತಾವು ಯಾರು, ತಾವೆಲ್ಲಿದ್ದೇವೆ, ತಾನು ಏನನ್ನು ಉಟ್ಟಿದ್ದೇವೆ ಎನ್ನುವ ಅರಿವು ಮತ್ತು ಪರಿವೆ ಇರುವುದಿಲ್ಲ ಅಲ್ಲವೇ? ಆ ನಿದ್ದೆಯ ಆನಂದದ ಪ್ರಮಾಣ ಅವರಿಬ್ಬರಲ್ಲೂ ಒಂದೇ ತೆರನಾಗಿ ಇರುತ್ತದೆ. ಹಾಗಾಗಿ ಆನಂದ ಪಡುವುದಕ್ಕಾಗಲೀ ಅಥವಾ ಸಂತೋಷದಿಂದ ಇರುವುದಕ್ಕಾಗಲೀ ಉಟ್ಟ ಬಟ್ಟೆಯಾಗಲೀ, ಉಂಡ ಆಹಾರವಾಗಲೇ ಕಾರಣವಾಗುವುದಿಲ್ಲ. ಅನಂದಪಡುವುದಕ್ಕೆ ಕೇವಲ ಮನೋಭಾವ ಮುಖ್ಯ. ಅಂತಹ ಮನೋಭಾವವಿದ್ದರೆ ಎಂತಹ ಪರಿಸ್ಥಿತಿಯಲ್ಲೂ ಸುಖ ಮತ್ತು ಆನಂದವಾಗಿರಬಹುದು.

ಧನಿಕನಿಗೆ ಇರುವುದನ್ನು ಕಳೆದುಕೊಳ್ಳುವ ಭಯ ಅಥವಾ ಮತ್ತಷ್ಟನ್ನು ಪಡೆಯುವ ಆಸೆ ಕೊನೆಯಾಗದಿದ್ದರೆ, ಅವನ ಕೊರಗಿಗೆ ಕಡೆಯಿಲ್ಲದೆ, ಸುಖವನ್ನು ಕಾಣಲಾಗುವುದೇ ಇಲ್ಲ. ಅವನು ಧನಿಕನಾದರೂ ದಟ್ಟ ದರಿದ್ರ, ಇನ್ನು ಕಡು ಬಡವನಿಗೆ 'ವಿಧಿಯಿಂದ ಹಣೆಯಲ್ಲಿ ಬರೆಯದ ನಿಧಿ' ಸಿಗಲಿಲ್ಲವಲ್ಲ ಎಂದು ಅವನ ಕೊರಗು ಅವನಿಗೆ ಸುಖವನ್ನು ನೀಡಲಾರದು.ಇವನೂ ಸಹ ಭಾವ ದರಿದ್ರನೇ, ಹಾಗಾಗಿ ನಮ್ಮಲ್ಲಿ ಏನಿದ್ದರೂ ಏನಿಲ್ಲದಿದ್ದರೂ ಇರುವುದರಲ್ಲಿ ತೃಪ್ತಿಯಿಂದ ಇದ್ದರೆ, ಸಂತೋಷ ತಾನಾಗಿಯೇ ಉಂಟಾಗುತ್ತದೆ, ಅದೇ ಐಶ್ವರ್ಯ. ಅಂತಹ ತೃಪ್ತ ಮನೋಭಾವದ ಸಂತೋಷ ನಮ್ಮದಾಗಬೇಕು, ಕೊರಗು ರಹಿತವಾದ ಸಂತೋಷ ನಮ್ಮೆಲ್ಲರದಾಗಬೇಕು

(225)



**ಮುಕ್ತಕ – 632**

**ಕಿವುಡುತನ ತಪ್ಪಿತೆ ರನ್ನ ಕುಂಡಲದಿಂದ |**
**ತೊವಲು ಜಬ್ಬಲು ಬಿಳದೆ ಮೃಷ್ಟಾನ್ನದಿಂದ ||**
**ಭುವಿಯ ಪರಿಣಾಮದಲಿ ಸಿರಿಬಡತನಗಳೊಂದೆ |**
**ಜವರಾಯ ಸಮವರ್ತಿ - ಮಂಕುತಿಮ್ಮ ||**

ಸಿರಿಬಡತನಗಳೊಂದೆ=ಸಿರಿ+ಬಡತನಗಳು+ಒಂದೇ, ರನ್ನ ರತ್ನ, ತೊವಲು=ತೊಗಲು, ಚರ್ಮ, ಜಬ್ಬಲು=ಜೊತುಬೀಳುವುದು, ಬಿಳದೆ=ಬೀಳದೆ, ಭುವಿಯ= ಭೂಮಿಯ, ಜವರಾಯ=ಯಮರಾಯ

ಕಿವಿಯಲ್ಲಿ ರತ್ನದ ಕುಂಡಲಗಳನ್ನು ಧರಿಸಿದರೆ ಇರುವ ಕಿವುಡುತನ ತಪ್ಪಿತೆ? ಕೇವಲ ಮೃಷ್ಟಾನ್ನವನ್ನು ತಿಂದರೆ ದೇಹ ಪ್ರಾಯ ಸಂದಂತೆ ಜೋತು ಬೀಳುವುದು ತಪ್ಪಿತೆ? ಭೂಮಿಯಲ್ಲಿನ ಪ್ರಕೃತಿಗೆ ಅನುಗುಣವಾಗಿ ಆಗುವ ಪರಿಣಾಮಗಳಿಗೆ ಬಡವ-ಬಲ್ಲಿದನೆಂಬ ಬೇಧವಿರುವುದಿಲ್ಲ. ಎಲ್ಲರ ಬದುಕನ್ನೂ ಸಮನಾಗಿ ಕೊನೆಗಾಣಿಸುವ ಆ

ಯಮರಾಯ ಸಮವಾಗಿ ವರ್ತಿಸುತ್ತಾನೆ ಎಂದು ಬದುಕಿನ ಪರಮ ಸತ್ಯವನ್ನು ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

"ಇದಂ ಶರೀರಂ ಪರಿಣಾಮ ಪೇಶಲಂ ಪತತ್ತ್ವಶ್ಯಂ ಶೃತ ಸಂಧಿ ಜರ್ಝರಮ್" ಎನ್ನುತ್ತಾರೆ ಕುಲಶೇಖರ ಆಳ್ವಾರರು ತಮ್ಮ 'ಮುಕುಂದ ಮಾಲ' ಸ್ತೋತ್ರದಲ್ಲಿ, ಪ್ರಕೃತಿಯ ಪರಿಣಾಮಗಳಿಗೊಳಗಾಗಿ ಖಂಡಿತವಾಗಿ ಈ ದೇಹವು ಬಿದ್ದು ಹೋಗುತ್ತದೆ ಎನ್ನುವುದು ಸರ್ವರಿಗೂ ವಿಧಿತವಾದ ಸತ್ಯ. 'ಶ್ರೀಯತೆ ಇತಿ ಶರೀರ ಎಂದು ಶರೀರ ಶಬ್ದಕ್ಕೆ ಅರ್ಥೈಸಿದ್ದಾರೆ. ಹಾಗಾಗಿ ಪ್ರಕೃತಿಯ ಪರಿಣಾಮ ಈ ದೇಹದ ಮೇಲೆ ಸಮನಾಗಿ ಆಗುತ್ತದೆ. ಅದು ಬಡವ ಬಲ್ಲಿದರಲ್ಲಿ ಭೇಧವನ್ನು ಮಾಡುವುದಿಲ್ಲ. ಕೇವಲ ಪುಷ್ಟಿಕ ಆಹಾರವನ್ನೇ ತಿನ್ನುತ್ತಾ ನನ್ನ ಆರೋಗ್ಯವನ್ನು ಸದಾಕಾಲ ಹೀಗೇ ಕಾಪಾಡಿಕೊಳ್ಳುವೆ" ಎನ್ನುವುದು ಕೇವಲ ಭ್ರಮೆಯಷ್ಟೇ!!!.

ನಾವು ಇಲ್ಲಿ ಬದುಕಿರುವವರೆಗೆ ನಮಗೆ ಈ ದೇಹದ ಮೇಲಿನ ಮಮಕಾರ ಬಿಡುವುದೇ ಇಲ್ಲ. ಸದಾಕಾಲ ಇದನ್ನು ಜತನವಾಗಿಟ್ಟುಕೊಳ್ಳಬೇಕೆಂಬ ತವಕ ಇದ್ದೇ ಇರುತ್ತದೆ. ಅದು ತಪ್ಪಲ್ಲ. ಆದರೆ ಈ ದೇಹವು ಆನ್ನೋದ್ಧಾರಕ್ಕೆ ಒಂದು 'ಸಾಧನ'ವಷ್ಟೇ ಎಂದು ಅರಿತು ಇದಕ್ಕೆ ಎಷ್ಟು ಪ್ರಾಮುಖ್ಯತೆ ನೀಡಬೇಕೋ ಅಷ್ಟನ್ನೇ ನೀಡಿದರೆ ಸರಿ. ಅದನ್ನು ಮರೆತು ದೇಹವನ್ನಾಶ್ರಯಿಸಿರುವ ಇಂದ್ರಿಯಗಳ ಸುಖದ ಚಿಂತನೆಯೇ ಸದಾಕಾಲ ನಡೆದರೆ ಅದು ಊರ್ಧ್ವಮುಖನಾದ ಬೆಳವಣಿಗೆಗೆ, ಎಂದರೆ ಆತ್ಮೋದ್ಧಾರಕ್ಕೆ ಪೂರಕವಲ್ಲ. ಈ ದೇಹವು ನಿಶ್ಚಯವಾಗಿ ಬೀಳುವುದರಿಂದ ಆ ಸುಖಗಳಿಗೂ ಕೊನೆಯಾಗುತ್ತದೆ. ಹಾಗಾಗಿ ದೇಹದ ಅತೀ ಆರೈಕೆ ಸಲ್ಲ.

ಒಂದು ದೇಹದಲ್ಲಿನ ವಾಸದ ಸಮಯ ಮುಗಿದಾಗ, ಆತ್ಮವನ್ನು ಮತ್ತೊಂದು ದೇಹಕ್ಕೆ ರವಾನಿಸುವುದೇ ಆ ಯಮರಾಯನ ಕೆಲಸ. ಅವನಿಗೂ ಈ ದೇಹಕ್ಕೂ ಸಂಬಂಧವಿಲ್ಲ. ಹಾಗಾಗಿ ಅವನು ಬಡವ

ಬಲ್ಲಿದ, ರೋಗಿ-ನಿರೋಗಿ, ಸಣಕಲ -ಡುಬ್ಬ ಗಂಡು-ಹೆಣ್ಣು, ಮನುಷ್ಯ-ಪ್ರಾಣಿ-ಕೀಟಗಳೆಂಬ ಬೇಧವಿಲ್ಲದೆ ಆತ್ಮಗಳಿಗೆ ಈ ದೇಹದಿಂದ ಮುಕ್ತಿಯನ್ನು ನೀಡುವುದರಲ್ಲಿ ಸಮನಾಗಿ ವರ್ತಿಸುತ್ತಾನ್ನಾದ್ದರಿಂದ ಅವನು "ಸಮವರ್ತಿ", ಹಾಗಾಗಿಯೇ ಅವನಿಗೆ ' ಧರ್ಮ' ನೆಂಬ ಇನ್ನೊಂದು ಹೆಸರೂ ಉಂಟು. ಈ ಜಗತ್ತಿನಲ್ಲಿ ಉತ್ತಮ ಪ್ರಾಣಿಯೆಂದು ಪರಿಗಣಿಸಲ್ಪಡುವ 'ಮನುಷ್ಯ'ರಾಗಿ ಹುಟ್ಟಿದ ಮೇಲೆ ಉತ್ತಮ ರೀತಿಯಲ್ಲಿ ಯೋಚಿಸಿ ದೇಹದ ವ್ಯಾಮೋಹವನ್ನು ತೊರೆದು, ಇಂದ್ರಿಯ ಸುಖಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡದೆ ಆತ್ಮ ಸಂಬಂಧಿ ವಿಷಯಗಳಲ್ಲಿ ತಲ್ಲೀನರಾದರೆ, ನಾವೂ ಸಹ ಎಂದೋ ಒಂದು ದಿನ ಈ ಜನನ-ಮರಣ ಭಯದಿಂದ ಮುಕ್ತರಾಗಬಹುದು.

**ಮುಕ್ತಕ – 633**

**ಸಾಧ್ಯಪಡದಾರಿಗಂ ನರಭಾಲಪಟ್ಟವನು |**
**ಶುದ್ಧಪಡಿಸಲು ತೊಡೆದು ಪೂರ್ವದೆಲ್ಲವನು ||**
**ಹೊದ್ದೆ ಹರಿಯಲಿ ಬೇಕು ಕರ್ಮಶೇಷದ ಪಟವ |**
**ಬುದ್ಧಿ ನುಡಿ ಸ್ಯೆರಣೆಯೆ - ಮಂಕುತಿಮ್ಮ ||**

ಸಾಧ್ಯಪಡದಾರಿಗಂ=ಸಾಧ್ಯ+ಪಡದು+ಆರಿಗುಂ, ಪೂರ್ವದೆಲ್ಲವನು=ಪೂರ್ವದ+ಎಲ್ಲವನು.
ನರಭಾಲಪಟ್ಟ=ಹಣೆಯ ಬರಹ, ಪಟವ=ಹೊದಿಕೆ, ಸ್ಯೆರಣೆಯೆ=ತಾಳ್ಮೆ

ಪೂರ್ವಕರ್ಮವನ್ನು ಸಂಪೂರ್ಣವಾಗಿ ಒಂದೇ ಬಾರಿಗೆ ಅಳಿಸಿಹಾಕಲು ಯಾರಿಗೂ ಸಾಧ್ಯವಾಗುವುದಿಲ್ಲ. ಆ ಪೂರ್ವಕರ್ಮದ ಹೊದಿಕೆಯನ್ನು ಹೊದ್ದೇ, ಎಂದರೆ ಕರ್ಮವನ್ನು ಹೊತ್ತುಕೊಂಡೇ, ಮಾಡುತ್ತಲೇ, ಸವೆಸುತ್ತಲೇ ಜೀವನವನ್ನು ಸಾಗಿಸಬೇಕು. ಆದರೆ ಹಾಗೆ ಬದುಕುವಾಗ ಸ್ಯೆರಣೆಯಿಂದ, ತಾಳ್ಮೆಬಿಡದೆ, ವಿವೇಕದಿಂದ ಜೀವಿಸಬೇಕು ಎಂದು ಪೂರ್ವಕರ್ಮಾಧಾರಿತ ಬದುಕಿನ ಬವಣೆಯನ್ನು ಎದುರಿಸುವ ಪರಿಯನ್ನು ನಮಗೆ ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಒಂದು ಬೀಜ ಮೊಳಕೆಯೊಡೆದು, ಸಸಿಯಾಗಿ, ಗಿಡವಾಗಿ, ಮರವಾಗಿ, ಹೆಮ್ಮರವಾಗಲು ಬೇಕಾದ ಎಲ್ಲಾ ಗುಣಗಳನ್ನೂ ತನ್ನಲ್ಲೇ ಅಡಕವಾಗಿ ಇಟ್ಟುಕೊಂಡಂತೆ, ಪ್ರತೀ ಆತ್ಮನೂ ಒಂದು ದೇಹವನ್ನು ಬಿಡುವಾಗ ಆ ದೇಹದಲ್ಲಿ ಆದಂತ ಅನುಭವಗಳ ಗುಣ ಶೇಷವನ್ನು ತನ್ನ ಸೂಕ್ಷ್ಮ ಶರೀರದೊಳಗಿಟ್ಟುಕೊಂಡು ಬರುತ್ತದೆ ಮತ್ತು ಸೂಕ್ತ ಪಾತ್ರ

ಅಂದರೆ ಮತ್ತೊಂದು ದೇಹ ಸಿಕ್ಕರೆ ಆ ಗುಣಗಳನ್ನು ಪ್ರಕಟಗೊಳಿಸಿ, ಮತ್ತಷ್ಟನ್ನು ಗಳಿಸಿ ಕೆಲವನ್ನು ಕಳೆದುಕೊಂಡು ಕಡೆಗೆ ಒಂದಿಷ್ಟು ಶೇಷವನ್ನು ಉಳಿಸಿಕೊಂಡು ಮುಂದಿನ ಪ್ರಯಾಣವನ್ನು ಮಾಡುತ್ತದೆ ಎನ್ನುತ್ತದೆ ನಮ್ಮ 'ಸನಾತನ ಧರ್ಮ'. ಇದೊಂದು ನಿರಂತರ ಉರುಳುವ ಚಕ್ರ ಎಲ್ಲಿಯ ತನಕ

(227)

ಹಣೆಯ ಬರಹ 634-638 ಕಗ್ಗರಸಧಾರೆ

"ಗುಣಶೇಷವಿದೆಯೋ ಅಲ್ಲಿಯ ತನಕ ಉರುಳುತ್ತಲೇ ಇರುವ ಚಕ್ರ, ಈ ಗುಣ ಶೇಷವನ್ನೇ ಹಣೆಯ ಬರಹ ಎನ್ನುವುದು. ಇದನ್ನು ಒಂದೇ ಬಾರಿಗೆ ಅಳಿಸಿಹಾಕಲು ಸಾಧ್ಯವಿಲ್ಲ.

ಆ ಪರಮಾತ್ಮ ಮನುಷ್ಯನಿಗೆ ಮಾತ್ರ ಕರುಣಿಸಿರುವ 'ವಿವೇಕ'ವನ್ನು ಉಪಯೋಗಿಸಿ ಸತ್ವವನ್ನು ಒಳಗಿಳಿಸಿಕೊಂಡರೆ ಜಗತ್ತಿನ ಬಾಳಿಗೆ ಪೂರಕವಾಗಿರುವ ಎಲ್ಲಾ ಗುಣಗಳನ್ನು ಕ್ರಮೇಣ ಕಳೆದುಕೊಳ್ಳಬಹುದು. ತಂದದ್ದನ್ನು ಕಡಿಮೆಯಾಗಿಸುತ್ತಾ, ಮತ್ತಷ್ಟನ್ನು ಗಳಿಸಿಕೊಳ್ಳದೆ, ಪ್ರತೀ ಜನ್ಮದ ಅಂತ್ಯದಲ್ಲಿ ಶೇಷವನ್ನು ಕಡಿಮೆ ಮಾಡಿಕೊಳ್ಳುತ್ತಾ ಹೋದರೆ, ಎಂದಾದರೂ ಒಂದು ದಿನ ಅದು ನಿತ್ಯೇಷವಾಗಬಹುದು. ಆದರೆ ಕರ್ಮ ಶೇಷವೆಲ್ಲಿಯ ತನಕ ಇರುತ್ತದೆಯೋ ಅಲ್ಲಿಯ ತನಕ ಅದನ್ನು ಅನುಭವಿಸಲೇ ಬೇಕು. ಅದನ್ನು ಅನುಭವಿಸಿಯೇ ತೀರಿಸಿಕೊಳ್ಳಬೇಕು. ಅನ್ಯಥಾ ದಾರಿಯೇ ಇಲ್ಲ. ಆದರೆ ಅದನ್ನು ಕಡಿಮೆ ಮಾಡಿಕೊಳ್ಳಲು ಮಾನ್ಯ ಗುಂಡಪ್ಪನವರು 'ಬುದ್ಧಿ ನುಡಿ ಸೈರಣೆಯೆ' ಎಂದು ಹೇಳಿದಂತೆ ವಿವೇಕದ ಮಾತನ್ನು ಕೇಳಿ ಅದು ಸೂಚಿಸುವ ಹಾದಿಯಲ್ಲಿ ತಾಳ್ಮೆಯಿಂದ ನಡೆಯಬೇಕು.

ಆದರೆ ಇಂದಿನ ಜಗತ್ತಿನಲ್ಲಿ ಪ್ರತಿಯೊಬ್ಬರೂ ಈ ಜಗತ್ತಿಗೆ ಮತ್ತಷ್ಟು ಗಾಢವಾಗಿ ಅಂಟಿಕೊಳ್ಳಲು ಪ್ರತಿ ನಿತ್ಯ ಹೊಸ ಹೊಸ ಸಾಧನಗಳು ಮತ್ತು ಪ್ರಲೋಭನೆಗಳು ಹುಟ್ಟಿಕೊಳ್ಳುತ್ತಲೇ ಇವೆ. ಮನುಷ್ಯ ಮುಕ್ತಿಯ ಮಾರ್ಗಗಳನ್ನೆಲ್ಲಾ ಒಂದೊಂದಾಗಿ ಮುಚ್ಚಿಕೊಳ್ಳುತ್ತಿದ್ದಾನೆ. 'ಅಲ್ಲಿಯದೇನೋ ನಾನರಿಯೆ ಇಲ್ಲಿರುವಾಗ ಈ ಜಗತ್ತನ್ನು ಅನುಭವಿಸಿ ಬಿಡುತ್ತೇನೆ' ಎನ್ನುವ ಅಜ್ಞಾನದ ಹಾದಿಯಲ್ಲೇ ನಡೆಯುವ ನಮಗೆ ನಮ್ಮ ಹಣೆಯ ಬರಹವನ್ನು ಅಳಿಸಿಕೊಳ್ಳಲು

ಸಾಧ್ಯವೆ. ಪ್ರತಿಯೊಬ್ಬರೂ ಆಲೋಚನೆ ಮಾಡಬೇಕಾದ ವಿಷಯ. "ಉದ್ಧರೇತ್ ಆತ್ಮನಾತ್ಮಾನಂ" ಎನ್ನುವಂತೆ ಪ್ರತಿಯೊಬ್ಬರೂ ಅವರವರ ಉದ್ಧಾರವನ್ನು ಅವರವರೆ ಮಾಡಿಕೊಳ್ಳಬೇಕು. ಪ್ರಯತ್ನ ಪಟ್ಟರೆ ಖಂಡಿತ ಸಾಧಿಸಬಹುದು.

**ಮುಕ್ತಕ – 634**

**ಯುದ್ಧವಾಗಲಿ ರಾಜ್ಯವಿದ್ಯೆಯಾಗಲಿ ಶಾಸ್ತ್ರ |**
**ವೃದ್ಧಿಯಾಗಲಿ ನರನ ಹಣೆಯಿನಳಿಯಿಸದಾ ||**
**ಕ್ಷುದ್ರಕಾರ್ಪಣ್ಯದನ್ಯಾಯದನಿತಿನಿತುಳಿಕೆ- |**
**ಯಿದ್ದೆಯಿರುವುದು ನಮಗೆ – ಮಂಕುತಿಮ್ಮ ||**

ಹಣೆಯಿನಳಿಯಿಸದಾ= ಹಣೆಯಿನ್+ಅಳಿಸದ+ಆ,

ಕ್ಷುದ್ರಕಾರ್ಪಣ್ಯದನ್ಯಾಯದನಿತಿನಿತುಳಿಕೆಯಿದ್ದೆಯಿರುವುದು=ಕ್ಷುದ್ರ+ಕಾರ್ಪಣ್ಯದ+ಅನ್ಯಾಯದ+ಅನಿತು+ಇನಿತು+ಉಳಿಕೆ+ಇದೆ+ಇರುವುದು.

ಕ್ಷುದ್ರ=ಸಣ್ಣತನದ, ಅನಿತು=ಅಷ್ಟು, ಇನಿತು=ಇಷ್ಟು





ವಿಧಾತನೊಂದಿಗೆ ಹೋರಾಡಿ ಅಥವಾ ಯುದ್ಧಮಾಡಿಯಾಗಲೀ ಅಥವಾ ಹಲವು ಶಾಸ್ತ್ರಗಳನ್ನು ಅಭ್ಯಾಸಮಾಡಿ ಜ್ಞಾನವಂತನಾಗುವುದರಿಂದಾಗಲೀ, ಹಣೆಯ ಬರಹವನ್ನು ಅಳಿಸಲು ಸಾಧ್ಯವೇ ಇಲ್ಲ. ಎಲ್ಲವನ್ನೂ ತೊಳೆದಂತೆ ಅಥವಾ ಅಳಿಸಿದಂತೆ ಕಂಡರೂ ನಮ್ಮ ಸಣ್ಣತನದ, ಅಜ್ಞಾನದ, ಜ್ಞಾನದ ಕಾರ್ಪಣ್ಯ, ಎಂದರೆ ಅರಿವಿನ ಬಡತನ, ಕಳ್ಳತನದ, ಮೋಸ ಮಾಡುವಂತಹ ಕ್ಷುದ್ರ ಬುದ್ಧಿಗಳ ಕಿಂಚಿತ್ ಉಳಿಕೆ ನಮ್ಮಲ್ಲಿ ಇದ್ದೇ ಇರುತ್ತದೆ. ಅದನ್ನು ಸಂಪೂರ್ಣ ತೊಡೆದುಹಾಕುವುದಕ್ಕೆ ಆಗುವುದೇ ಇಲ್ಲ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜೀವಿಗಳು ಅನುಭವಿಸುವ ಕರ್ಮಫಲಗಳ ಭಿನ್ನತೆಗೆ ಪೂರ್ವ ಕರ್ಮವನ್ನು ಬಿಟ್ಟರೆ ಬೇರೇನೂ ಕಾರಣವನ್ನು ನೀಡಲು ಸಾಧ್ಯವಿಲ್ಲ. ಹಾಗಾಗಿ ಹಲವಾರು ಜನ್ಮಗಳಿಂದ ಹೊತ್ತು ತಂದ ಕರ್ಮ ಶೇಷವನ್ನು ಅನುಭವಿಸಿಯೇ ತೀರಬೇಕು ಎನ್ನುವ ಸಿದ್ಧಾಂತವನ್ನು ಒಪ್ಪಿಕೊಳ್ಳಲೇ ಬೇಕು. ವಿಧಿಯೊಡನೆ ಯುದ್ಧಮಾಡಿ, ಹೋರಾಡಿ ಅದನ್ನು ಕಡಿಮೆ ಮಾಡಿಕೊಳ್ಳಲಾಗಲೀ ಅಥವಾ ಅಳಿಸಿಕೊಳ್ಳಲಾಗಲೀ ಸಾಧ್ಯವೇ ಇಲ್ಲ. ಅಂತಹ ಪ್ರಯತ್ನವನ್ನು ನಾವೆಲ್ಲಾ ಮಾಡುತ್ತಲೇ ಇರುತ್ತೇವೆ. ಜ್ಯೋತಿಷ್ಯರ ಬಳಿ ಹೋಗಿ, ಅವರ ಪರಿಮಿತ ಜ್ಞಾನದಿಂದ ಹೇಳುವುದನ್ನೆಲ್ಲಾ ನಂಬಿ, ಅವರು ಸೂಚಿಸಿದ ಪರಿಹಾರ ಮಾರ್ಗಗಳನ್ನೆಲ್ಲಾ ತುಳಿದಾಗ ಒಂದು ರೀತಿಯ ಸಮಾದಾನವಾಗುತ್ತದೆ. ಆದರೆ ಕರ್ಮಫಲದಿಂದ ಮುಕ್ತಿಯಂತೂ ಆಗುವುದೇ ಇಲ್ಲ. ಇದು ವಿಧಿಯೊಡನೆ ಒಂದು ರೀತಿಯ ಯುದ್ಧ.

ಅದನ್ನು ಬಿಟ್ಟರೆ ನಾವು ಸಹಜವಾಗಿ ನಮ್ಮ ಕರ್ಮ ಫಲದ ತೀವ್ರತೆಯನ್ನು ಕಡಿಮೆಮಾಡಿಕೊಳ್ಳಲು ಅನುಸರಿಸುವುದೇ 'ರಾಜವಿದ್ಯೆ'ಯಾದ ಪೂಜೆ, ವ್ರತ, ಜಪ, ತಪ, ಧ್ಯಾನ ಮುಂತಾದವುಗಳ ಮಾರ್ಗ, ಬದುಕಿನಲ್ಲಿ ವಿಧಿಯೊಂದಿಗೆ ಹೋರಾಡುವ ಶಕ್ತಿ ಕುಂದಿದಾಗ ಎಲ್ಲರೂ ತುಳಿಯುವ ಮಾರ್ಗವೇ ಇದು. ಇಲ್ಲಿ ನಮ್ಮ ಪೂರ್ವ ಕರ್ಮದ ಫಲವು ನಮಗೆ ಉಂಟುಮಾಡಬಹುದಾದ ಮಾನಸಿಕ ಕ್ಲೇಷೆಯನ್ನು ತಡೆದುಕೊಳ್ಳುವ ಶಕ್ತಿಯನ್ನು ಪಡೆದುಕೊಳ್ಳಬಹುದು. ಇಲ್ಲಿಯೂ ಸಹ ಕರ್ಮ ಫಲದಿಂದ ಮುಕ್ತಿಯಿಲ್ಲ.. ಮೇಲೆ ಉಲ್ಲೇಖಿಸಿದ ಎರಡೂ ವಿಧಾನಗಳಲ್ಲಿ ನಮ್ಮ ಮನಸ್ಸಿನ ಮೇಲೆ 'ಕರ್ಮ ಫಲ' ದಿಂದಾಗಬಹುದಾದ ಪರಿಣಾಮದ ತೀವ್ರತೆಯನ್ನು ತಡೆದುಕೊಳ್ಳಲು ಬೇಕಾದ ಶಕ್ತಿಯನ್ನು ಪಡೆಯಬಹುದೇ ಹೊರತು ಕರ್ಮ ಫಲದ ಸಂಪೂರ್ಣ ನಿವಾರಣೆಯಾಗುವುದಿಲ್ಲ.

ಕರ್ಮಫಲವನ್ನು ಅನುಭವಿಸಿಯೇ ತೀರಿಸಬೇಕು. ಫಲಾಯನ ಮಾಡಲು ಸಾಧ್ಯವೇ ಇಲ್ಲ. ಹಾಗೆ ಅನುಭವಿಸುವಾಗ ಹೊತ್ತು ತಂದದ್ದನ್ನು ಕರಗಿಸಿ, ಮತ್ತಷ್ಟನ್ನು ಸೇರಿಸಿಕೊಳ್ಳದೆ ಬದುಕಿದರೆ, ಕಟ್ಟಿಕೊಂಡು ಬಂದಂತಹ ಕರ್ಮದ ಗಂಟನ್ನು ಕರಗಿಸಬಹುದು. ಬದುಕಿನಲ್ಲಿ 'ಬೇಕು'ಗಳು ಕಡಿಮೆಯಾದರೆ ಈ ಸಂಸಾರದೊಂದಿಗಿನ ಅಂಟು' ಕಡಿಮೆಯಾಗುತ್ತದೆ. “ಯದ್ ಯದ್ ಭವ್ಯಂ ಭವತು ಭಗವನ್ ಪೂರ್ವ ಕರ್ಮಾನುರೂಪಂ, ಏತತ್ ಪ್ರಾರ್ಥ್ಯಮ್ ಮಮ ಬಹುಮತಂ ಜನ್ಮಜನ್ಮಾಂತರೇಪಿ ತ್ವತ್ ಪಾದಾಂಬೋರುಹಯುಗಗತಾ ನಿಶ್ಚಲಾ ಭಕ್ತಿರಸ್ತು” ಎನ್ನುತ್ತಾ 'ನನ್ನ ಜನ್ಮಜನ್ಮಾಂತರ ಪೂರ್ವ ಕರ್ಮದನುಸಾರವಾಗಿ ಏನೇನು ನಡೆಯಬೇಕೋ ಅದೆಲ್ಲವೂ ನಡೆಯಲಿ, ಹೇ ದೇವ, ಅದನ್ನೆಲ್ಲ ಅನುಭವಿಸುವಾಗ ನನಗೆ ನಿನ್ನ ಪಾದಾರವಿಂದದಲ್ಲಿ ನಿಶ್ಚಲವಾದ ಭಕ್ತಿಯಿರಲಿ' ಎಂದು ಬೇಡುತ್ತಾರೆ ಶ್ರೀ ಕುಲಶೇಖರ ಆಳ್ವಾರರು. ಅಂತಹ ಮನೋಭಾವ ನಮಗೆ ಬಂದರೆ ಕ್ಷುದ್ರಕಾರ್ಪಣ್ಯದನ್ಯಾಯದನಿತಿನಿತು

ಳಿಕೆಯಿದ್ದೆಯಿರುವುದು" ಎಂದು ಗುಂಡಪ್ಪನವರು ಹೇಳುವಂತೆ ಕಿಂಚಿತ್ ಕರ್ಮಶೇಷವಿದ್ದರೂ ಅದನ್ನು ಭರಿಸುವ ಶಕ್ತಿ ನಮಗೆ ಉಂಟಾಗುತ್ತದೆ, ಅಷ್ಟು ಸಾಕಲ್ಲವೇ ನಿರಾಳವಾಗಿ ಬದುಕಲು? ಅಂತಹ ಸ್ಥಿತಿಗೆ ತಲುಪಲು ಪ್ರಯತ್ನವನ್ನು ಎಲ್ಲರೂ ಮಾಡಬೇಕು.

**ಮುಕ್ತಕ – 635** **ಗುದ್ದಲಿಯನಾದೇತೆ ಮಲೆ ಕಣಿವೆ ಸಮದ ನೆಲ ।**
**ಮುದ್ದು ತಡೆವುದೆ ಮುಪ್ಪು ಕಳ್ಳನವೊಲಮರೆ ॥**
**ಯುದ್ಧತಾಪದೆ ಶಾಂತಿಶೀತಲತೆಯುದಿಸೀತೆ ।**
**ಸಿದ್ಧವಿರು ಸ್ಯೆರಣೆಗೆ - ಮಂಕುತಿಮ್ಮ ॥**

ಗುದ್ದಲಿಯಿನಾದೇತೆ=ಗುದ್ದಲಿಯಿನ್+ಆದೀತೆ, ಕಳ್ಳನವೊಲಮರೆ=ಕಳ್ಳನವೊಲ್+ಅಮರೆ,
ಶಾಂತಿಶೀತಲತೆಯುದಿಸೀತೆ= ಶಾಂತಿ+ಶೀತಲತೆಯು+ಉದಿಸೀತೆ, ಮಲೆ=ಬೆಟ್ಟ, ಕಣಿವೆ=ಕಂದರ,
ಮುಪ್ಪು=ವೃದ್ಧಾಪ್ಯ,
ಅಮರೆ+ಇರಲು,ಉದಿಸೀತೆ+ಉದಯಿಸುತ್ತದೆಯೆ, ಸ್ಯೆರಣೆ=ತಾಳ್ಮೆ,

ಮಣ್ಣನ್ನು ಅಗೆಯಲು ಉಪಯೋಗಿಸುವ ಗುದ್ದಲಿಯಿಂದ ದೊಡ್ಡ ಬೆಟ್ಟ ಮತ್ತು ಕಣಿವೆಯನ್ನು ಅಗೆದು ನೆಲ ಸಮ ಮಾಡಲಾದೀತೇ? ನಮ್ಮ ಅರಿವಿಗೆ ಬಾರದಂತೆ ಕಳ್ಳನಂತೆ ನಮ್ಮ ಮೇಲೆ ಎರಗಿದ ಮುಪ್ಪನ್ನು, ಯಾವುದಾದರೂ ಔಷದಿಯನ್ನು ಕುಡಿದು ವೃದ್ಧಾಪ್ಯ ಬರುವುದನ್ನು ತಡೆಯಲಾಗುವುದೇ? ಕದನದಲ್ಲಿ ಶಾಂತಿ ಮತ್ತು ತಣ್ಣನೆಯ ವಾತಾವರಣ ಉದ್ಭವವಾಗುವುದೇ? ಹಾಗೆಯೇ ಬದುಕಿನಲ್ಲಿ ನಡೆಯುವುದನ್ನು ಬದಲಾಯಿಸಲು ಸಾಧ್ಯವಿಲ್ಲ. ತಾಳ್ಮೆಯಿಂದ ಅನುಭವಿಸುವುದನ್ನು ಹೊರತು ನಿನಗೆ ಬೇರೆ ದಾರಿಯಿಲ್ಲ. ಎನ್ನುವ ಬುಧ್ಧಿವಾದವನ್ನು ಮಾಡಿದ್ದಾರೆ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಾವು ಉತ್ತಮ ಸ್ಥಿತಿಯಲ್ಲಿದ್ದರೂ ಅಥವಾ ಹೀನಾಯ ಸ್ಥಿತಿಯಲ್ಲಿದ್ದರೂ ಅದಕ್ಕೆ ನಮ್ಮ ಪೂರ್ವ ಕರ್ಮವೇ ಕಾರಣ. ಪಾಪಕರ್ಮಗಳು ಹೆಚ್ಚಾಗಿದ್ದರೆ ಕಷ್ಟಗಳೂ, ಪುಣ್ಯ ಹೆಚ್ಚಾಗಿದ್ದರೆ ಸುಖವೂ ಇರುತ್ತದೆ. ಕಷ್ಟ ಸುಖಗಳು ಪಾಪ ಪುಣ್ಯಗಳ ಫಲಗಳು. ಅವುಗಳನ್ನು ಅನುಭವಿಸಿಯೇ ತೀರಿಸಬೇಕು. ಯಾರಾದರೂ ಅತೀ ಕಷ್ಟದಲ್ಲಿದ್ದಾರೆ, ಬವಣೆಯನ್ನು

ಪಡುತ್ತಿದ್ದಾರೆ ಎಂದರೆ ಅವರು ತಮ್ಮ ಪಾಪಗಳನ್ನು ಕಳೆದುಕೊಳ್ಳುತ್ತಿದ್ದಾರೆಂದೂ, ಹಾಗೆಯೇ ಯಾರಾದರೂ ಸುಖದ ಸುಪ್ಪತ್ತಿಗೆಯಲ್ಲಿ ಓಲಾಡುತ್ತಿದ್ದಾರೆಂದರೆ, ಅವರು ತಮ್ಮ ಪುಣ್ಯವನ್ನು ಅನುಭವಿಸಿ ಕಳೆದುಕೊಳ್ಳುತ್ತಿದ್ದಾರೆಂದೂ ಅರ್ಥ ಎಂದು ಎನ್ನುತ್ತದೆ ನಮ್ಮ 'ಸನಾತನ'.

ಸಣ್ಣ ಗುದ್ದಲಿಯಿಂದ ದೊಡ್ಡ ಬೆಟ್ಟವನ್ನು ಕಡಿದು ಒಂದು ಆಗಾಧವಾದ ಕಣಿವೆಯನ್ನು ತುಂಬಿ ನೆಲವನ್ನು ಹೇಗೆ ಸಮ ಮಾಡಲಾಗುವುದಿಲ್ಲವೋ ಹಾಗೆಯೇ ಸಂಚಿತ ಪುಣ್ಯ ಪಾಪಗಳನ್ನು ನಮ್ಮ ಯಾವುದೇ ಉಪಾಯದಿಂದ ಸಮ ಮಾಡಲಾಗುವುದಿಲ್ಲ. ಮಾಡಿದ ಪಾಪ-ಪುಣ್ಯ ಕರ್ಮಗಳ ಫಲವನ್ನು ಅನುಭವಿಸಿಯೇ ತೀರಿಸಬೇಕು. ಆದರೆ ಹಾಗೆ ಕಷ್ಟಗಳನ್ನು ಅನುಭವಿಸುವಾಗ ತಾಳ್ಮೆಯಿಂದ ಇದು ನಮ್ಮದೇ ಕರ್ಮ





ಫಲ ಎಂದು ಅರಿತು ವಿಧಿಯನ್ನಾಗಲಿ, ಪರಮಾತ್ಮನನ್ನಾಗಲೀ ಅಥವಾ ಅನ್ಯರನ್ನಾಗಲೀ ದೂಷಿಸದೆ, ಸ್ಥೈರಣೆಯಿಂದ ಅನುಭವಿಸಿ ಮತ್ತು ಆದ ಅನುಭವವನ್ನೆಲ್ಲಾ ಪರಮಾತ್ಮನಿಗೆ ಸಮರ್ಪಿಸಿಬಿಟ್ಟರೆ, ನೋವು ಕಡಿಮೆಯಾಗುತ್ತದೆ, ದುಃಖದಿಂದ ಅಳು ಬಂದು ಅತ್ತ ನಂತರ ಮನಸ್ಸು ಹಗುರವಾದಂತೆ, ಬದುಕೂ ಹಗುರವಾಗುತ್ತದೆ. ಹಾಗೆಯೇ ಪುಣ್ಯ ಕರ್ಮಗಳ ಫಲವಾಗಿ ಸುಖವು ಬಂದಾಗ, ಅದನ್ನು ಪರಮಾತ್ಮ ಕೃಪೆಯಿಂದ ಸಂದ ಸುಫಲವೆಂದು ಭಾವಿಸಿ, ಅಹಂಕಾರಪಡದೆ ತನಗೆ ಸಂದ ಸುಖವನ್ನು ಅನ್ಯರೊಡನೆ ಹಂಚಿಕೊಂಡು ಬಾಳಿದರೆ ಒಂದು ತೃಪ್ತಿಯ ಭಾವನೆ ಬರುತ್ತದೆ.

ಅಂತಹ ಸ್ಥಿತಿಯಲ್ಲಿ ನಾವು ಇರಬೇಕಾದರೆ ಸ್ಥೈರಣೆ ಬೇಕು. ಕಷ್ಟದಲ್ಲಿ ಅತೀ ವಿಹ್ವಲರಾಗದೆ, ಸುಖದಲ್ಲಿ ಅತೀಯಾಗಿ ಬೀಗದೆ ಸಮಭಾವದಿಂದ ಇದ್ದರೆ, ಎಲ್ಲವೂ ನಮ್ಮದೇ ಕರ್ಮದಿಂದ ಮತ್ತು ಆ ಪರಮಾತ್ಮನ ಕೃಪೆಯಿಂದ ಸಂದ ಫಲಗಳು ಎಂದು ಭಾವಿಸಿ ಸಮತೋಲನವನ್ನು ಉಳಿಸಿಕೊಂಡರೆ, ಮಾನಸಿಕ ಮತ್ತು ದೈಹಿಕ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು

**ಮುಕ್ತಕ – 636** **ಸಾಸಿರದ ಯುಕ್ತಿ ಸಾಹಸವ ನೀನೆಸಗುತಿರು |**
**ಲೇಸು ಫಲ ದೊರೆಗೆ ನಿನ್ನೆಲ್ಲ ಪೌರುಷಕಂ ||**
**ಶೇಷ ನಿನಗುಳಿವುದೆಂತಾದೊಡಂ ನೋವಿನಿತು |**
**ಸೈಸದನು ನೀನಳದೆ - ಮಂಕುತಿಮ್ಮ ||**

ನೀನೆಸಗುತಿರು =ನೀನ್+ಎಸಗುತ+ಇರು, ನೀನೆಗುಳಿವುದೆಂತಾದೊಡಂ=ನಿನಗೆ+ಉಳಿವುದು+ಎಂತು +ಆದೊಡಂ, ನೋವಿನಿತು=ನೋವು+ಇನಿತು,ಸೈಸದನು=ಸೈಸು+ಅದನು,ನೀನಳದೆ+ನೀನು+ಅಳದೆಎಸಗುತ=ಮಾಡುತ, ಲೇಸು=ಒಳ್ಳೆಯ, ಪೌರುಷಕಂ=ಪೌರುಷಕ್ಕೆ, ಶೇಷ=ಉಳಿಕೆ, ಇನಿತು=ಒಂದಿಷ್ಟು, ಸೈಸು=ಸಹಿಸು

ಬದುಕಿನ ಬವಣೆಯನ್ನು ಎದುರಿಸಲು ಮತ್ತು ಸಂದ ಕರ್ಮಫಲವನ್ನು ಅನುಭವಿಸಲು ನೀನು ಸಾವಿರಾರು ಯುಕ್ತಿಯನ್ನು ಮಾಡು. ಅಂತಹ ಪ್ರಯತ್ನದಿಂದ ನಿನಗೆ ಒಳ್ಳೆಯ ಫಲ ದೊರಕಿ ಪಾಪಕರ್ಮದ ಫಲವು ಕಡಿಮೆಯಾದರೂ ಒಂದಿಷ್ಟು ನೋವು ಮನದ ಮೂಲೆಯಲ್ಲೆಲ್ಲೋ ಉಳಿದಿರುತ್ತದೆ. ಅದನ್ನು ಸಹಿಸಿಕೊಂಡು ಬಾಳು ಎಂದು ಪ್ರಸ್ತಾಪಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತದಲ್ಲಿ.

ಹುಟ್ಟುವಾಗ ಹಿಂದಿನಿಂದ ಕಟ್ಟಿಕೊಂಡು ಬಂದದ್ದು ಒಂದಿಷ್ಟು, ಇಲ್ಲಿ ಗಳಿಸಿಕೊಳ್ಳುವುದು ಒಂದಷ್ಟು, ಇವೆರಡರ ಮೊತ್ತದಲ್ಲಿ ಕಳೆದುಕೊಳ್ಳುವುದು ಒಂದಷ್ಟು, ಉಳಿಕೆ ಕರ್ಮಶೇಷ. ಇದು ಕೇವಲ ಲೆಕ್ಕಾಚಾರದ ವಿಚಾರ, ಜನ್ಮದಿಂದ ತಂದದ್ದೆಷ್ಟು ಎಂದು ನಮಗೆ ಅರಿವಿರುವುದಿಲ್ಲ. ಇಲ್ಲಿ ಬಂದ ನಂತರ ನಮಗರಿವಿಲ್ಲದಂತೆಯೇ ನಾವು ಇನ್ನಷ್ಟನ್ನು ಸಂಚಯನ ಮಾಡುತ್ತಾ ಹೋಗುತ್ತೇವೆ. ಅದರ ಅರಿವು ಉಂಟಾಗಿ ಮತ್ತು ಅದರ

ಭಾರ ಹೆಚ್ಚಾದಾಗ, ಅದನ್ನು ಕಡಿಮೆ ಮಾಡಿಕೊಳ್ಳುವು ಪ್ರಯತ್ನವನ್ನು ಮಾಡುತ್ತೇವೆ. ನಮ್ಮ ಪ್ರಯತ್ನ ಎಷ್ಟು ತೀವ್ರವಾಗಿದ್ದರೆ ಅಷ್ಟೇ ಶೀಘ್ರವಾಗಿ ಮತ್ತು ಅಧಿಕ ಪ್ರಮಾಣದಲ್ಲಿ ನಮ್ಮ ಸಂಚಿತ ಕರ್ಮ ಕಡಿಮೆಯಾಗಿ ಮುಂದೆ ಹೊತ್ತು ಹೋಗುವ ಹೊರೆಯ ಭಾರ ಕಡಿಮೆಯಾಗುತ್ತದೆ. ತಂದ ಮತ್ತು ಆರ್ಜಿತ ಕರ್ಮವು ಹೆಚ್ಚಾಗಿ, ಕಡಿಮೆ ಮಾಡಿಕೊಳ್ಳುವ ಪ್ರಯತ್ನವೂ ಕಡಿಮೆಯಾಗಿ ಅಥವಾ ಪ್ರಯತ್ನದಲ್ಲಿ ಲೋಪವಿದ್ದಲ್ಲಿ ಹೊತ್ತು ಹೋಗಬೇಕಾದ ಹೊರೆ ಅಧಿಕವಾಗೇ ಇರುತ್ತದೆ. ಹಾಗಲ್ಲದೆ ಹೊತ್ತು ತಂದದ್ದು ಕಡಿಮೆಯಿದ್ದು, ಸಂಚಯನ ಮಿತವಾಗಿದ್ದು, ಅವೆರಡರ ಮೊತ್ತವನ್ನು ನಿರಂತರ ಪ್ರಯತ್ನದಿಂದ ಕಳೆದುಕೊಳ್ಳಲು ಪ್ರಯತ್ನಪಟ್ಟರೆ, ತೆಗೆದುಕೊಂಡು ಹೋಗಬೇಕಾದ ಹೊರೆಯ ಭಾರ ಕಡಿಮೆಯಾದೀತು.

"ಅಯ್ಯೋ ಇಂದಿನ ಕಾಲಕ್ಕೆ ಬದುಕುವುದೇ ಹೆಚ್ಚು, ಇನ್ನು ಬದುಕಿನ ಬಗ್ಗೆ ವಿಶ್ಲೇಷಣೆ ಮಾಡುವುದಕ್ಕೆ ನನಗೆ ಸಮಯವೆಲ್ಲಿ" ಎಂದು ಆಲೋಚನೆ ಮಾಡುವವರೂ ಅಧಿಕವಾಗೇ ಇದ್ದಾರೆ. ಆದರೆ ಪ್ರತೀ ಜೀವಿಯೂ ಶುದ್ಧ ಮತ್ತು ದೈವೀಕ. ಆಕಾಶದಿಂದ ದರೆಗೆ ಬಿದ್ದ ಪ್ರತೀ ನೀರ ಹನಿಯೂ ತನ್ನ ಗಮ್ಯವಾದ ಸಾಗರವನ್ನು ಸೇರಲು ಹಾತೊರೆಯುವಂತೆ ಪ್ರತೀ ಜೀವಿಯೂ ತನ್ನ ಮೂಲವಾದ ಪರಮಾತ್ಮನನ್ನು ಸೇರಲು ಹಾತೊರೆಯುತ್ತಿರುತ್ತದೆ. ಆದರೆ ಮಾಯೆ ಅವನನ್ನು ಈ ಜಗತ್ತಿಗೆ ಕಟ್ಟಿ ಹಾಕಲು ಸಾಕಷ್ಟು ಪ್ರಲೋಭನೆಗಳನ್ನು ಒಡ್ಡುತ್ತಿರುತ್ತದೆ. ಅವುಗಳನ್ನು ಮೆಟ್ಟಿನಿಂತು ಸತ್ತಂಗದಿಂದ ನಮ್ಮಲ್ಲಿರುವ ಅಸತ್ತನ್ನು ಕಳೆದುಕೊಳ್ಳುವುದೇ ಸಾಧನೆ. ಅಂತಹ ಸಾಧನೆಯನ್ನು ಮಾಡಿದರೆ ಕರ್ಮದ ಹೊರೆಯನ್ನು ಕಡಿಮೆ ಮಾಡಿಕೊಳ್ಳಬಹುದು.

ಎಷ್ಟು ಪ್ರಯತ್ನಪಟ್ಟರೂ ಮಾನ್ಯ ಗುಂಡಪ್ಪನವರು 'ಶೇಷ ನಿನಗುಳಿವುದೆಂತಾದೊಡಂ ನೋವಿನಿತು' ಎಂದು ಹೇಳುವಂತೆ ಅಲ್ಪ ಸ್ವಲ್ಪ ಕರ್ಮಶೇಷ ಉಳಿದೀತು ಅದನ್ನು ತಾಳ್ಮೆಯಿಂದ ಸಹಿಸಿಕೊಳ್ಳಬೇಕು ಎಂದು ನಮ್ಮ ಕರ್ಮಶೇಷ ಇಲ್ಲದಂತಾಗುತ್ತದೆಯೋ ಅಂದು ನಾವು ಬಂಧನಗಳಿಂದ 'ಮುಕ್ತರಾಗಬಹುದು'

**ಮುಕ್ತಕ – 637**

**ಸಿರಿದರಿದ್ರತೆಗಳ್ಗೆ ಫಲದೊಳಂತರ ಕಿರಿದು |**
**ಸರಿತಪ್ಪುಗಳಿಗಂತು ಜಾಣ್ ಬೆಪ್ಪುಗಳ್ಗಂ ||**
**ಮರಣವೆಲ್ಲವನೊಂದೆ ತೆರದಿ ಮುಸುಕುವುದೆಂದೊ |**
**ಪರಿವೆಯೆಂತಾದೊಡೇಂ? - ಮಂಕುತಿಮ್ಮ ||**

ಸಿರಿದರಿದ್ರತೆಗಳ್ಗೆ=ಸಿರಿ+ದರಿದ್ರತೆ+ಗಳ್ಗೆ, ಫಲದೊಳಂತರ=ಫಲದೊಳು+ಅಂತರ,

ಸರಿತಪ್ಪುಗಳಿಗಂತು=ತಪ್ಪು+ಸರಿಗಳಿಗೆ+ಅಂತು, ಮರಣವೆಲ್ಲವನೊಂದೆ=ಮರಣವು+ಎಲ್ಲವನು+ಒಂದೆ,

ಮುಸುಕುವುದೆಂದೊ=ಮುಸುಕುವುದು+ಎಂದೂ,

ಸಿರಿ=ಐಶ್ವರ್ಯ, ಸಂಪತ್ತು, ಬೆಪ್ಪು=ಪೆದ್ದು ತನ, ತೆರದಿ=ರೀತಿಯಲ್ಲಿ, ಮುಸುಕುವುದು=ಆವರಿಸುವುದು,

ಪರಿವೆ=ಅರಿವು,

(232)



ಸಿರಿತನದ ಮತ್ತು ಬಡತನದ ಬದುಕಿನ ಫಲದ ನಡುವೆ ಅಂತರ ಬಹಳ ಕಿರಿದು. ಹಾಗೆಯೇ ಸರಿ ತಪ್ಪುಗಳ ನಡುವೆಯೂ ಮತ್ತು ಜಾಣತನ ಮತ್ತು ಹೆಡ್ಡತನದ ನಡುವೆಯೂ ಅಂತರ ಬಹಳ ಕಡಿಮೆ. ಸಿರಿವಂತ, ಬಡವ, ಜಾಣ, ಪೆದ್ದ, ತಪ್ಪು ಮಾಡಿದವನು ಅಥವಾ ಮಾಡದವನು ಹೀಗೆ ಸಕಲರನ್ನೂ ಮೃತ್ಯು ಒಂದೇ ರೀತಿಯಲ್ಲಿ, ಯಾವ ಭೇದವನ್ನೂ ಮಾಡದೆ ಆವರಿಸುತ್ತದೆ, ಕವಿಯುತ್ತದೆ. ಹಾಗಾಗಿ, ಈ ದ್ವಂದ್ವಗಳ ನಡುವಿನ ಅಂತರದ ಮತ್ತು ಅದರಿಂದುಂಟಾಗುವ ಫಲ ವ್ಯತ್ಯಯದ ಬಗ್ಗೆ ನೀನು ಚಿಂತಿಸಬೇಡ ಎನ್ನುವಂತಹ ವಿವೇಕದ ಆದೇಶವನ್ನು ನೀಡಿದ್ದಾರೆ, ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಯೋಗವಿಲ್ಲದಿದ್ದರೆ ಸಿರಿವಂತನು ಕ್ಷಣಮಾತ್ರದಲ್ಲಿ ದರಿದ್ರನೂ, ಯೋಗವಿದ್ದರೆ ಬಡವನು ಅನಾಯಾಸವಾಗಿ ಬಲ್ಲಿದನೂ ಆಗಬಹುದೆಂದು ಎಲ್ಲರೂ ಬಲ್ಲರು. ಅಷ್ಟೇ ಅಲ್ಲ, ಬದುಕಿನ ಫಲ 'ಆನಂದ' ಅದನ್ನು ಪಡೆಯಲು ಮನಸ್ಸಿರಬೇಕು ಮತ್ತು ಆ ಮನಸ್ಸಿನಲ್ಲಿ ತೃಪ್ತಿಯಿರಬೇಕು. ಸಿರಿತನ ಅಥವಾ ಬಡತನಕ್ಕೂ ಆನಂದಕ್ಕೂ ಯಾವ ಸಂಬಂಧವೂ ಇಲ್ಲ.

ಇನ್ನು ಸರಿ ತಪ್ಪುಗಳನ್ನೇ ತೆಗೆದುಕೊಳ್ಳೋಣ. ಸರಿ ಅಥವಾ ತಪ್ಪು ಎನ್ನುವುದೂ ಸಹ ಬಹಳ ತುಲನಾತ್ಮಕ ವಿಷಯ. ಇಂದು ಸರಿ ಕಂಡದ್ದು ನಾಳೆ ತಪ್ಪಾಗಬಹುದು. ಒಬ್ಬರಿಗೆ ಸರಿಕಂಡದ್ದು ಮತ್ತೊಬ್ಬರಿಗೆ ತಪ್ಪೆನಿಸಬಹುದು. ಹಾಗಾಗಿ ತಪ್ಪು ಸರಿಗಳ ನಡುವಿನ ಅಂತರ ಬಹಳ ಸೂಕ್ಷ್ಮ, ಹಾಗೆಯೇ ಎಲ್ಲರಿಗೂ ಸಮಾನವಾದ ಬುದ್ಧಿಯನ್ನು

ಪರಮಾತ್ಮ ಕರುಣಿಸಿರುತ್ತಾನೆ. ಆದರೆ, ನಾವು ಅದನ್ನು ಹೇಗೆ, ಎಲ್ಲಿ, ಯಾವ ಪ್ರಮಾಣದಲ್ಲಿ ಉಪಯೋಗಿಸುತ್ತೇವೆ ಎನ್ನುವುದರ ಮೇಲೆ ನಾವು ಮತಿವಂತರೋ ಅಥವಾ ಮತಿಹೀನರೋ ನಿರ್ಧಾರವಾಗುತ್ತದೆ. ಕೆಲವಿಷಯಗಳಲ್ಲಿ ತೀಕ್ಷ್ಮಮತಿಗಳಾದವರು, ತೀರ ಸಾಮಾನ್ಯ ವಿಷಯಗಳಲ್ಲಿ ಪೆದ್ದರಂತೆ ವರ್ತಿಸಬಹುದು. ಹಾಗಾಗಿ ಬುದ್ದಿವಂತಿಕೆ ಮತ್ತು ಪೆದ್ದುತನದ ನಡುವೆ ಅಂತರ ಕಡಿಮೆ.

ಹೀಗೆ, ವಿಷಯ ಮತ್ತು ವ್ಯಕ್ತಿಗಳು ಭಿನ್ನ, ಭಿನ್ನಸಮಯ ಮತ್ತು ಸಂದರ್ಭಗಳಲ್ಲಿ, ಭಿನ್ನ ಭಿನ್ನವಾಗಿ ಕಂಡರೂ, ಪ್ರತೀ ಭಿನ್ನತೆಯ ನಡೆವೆ ಇರುವ ಅಂತರ ತೀರ ಕಡಿಮೆಯಾಗಿದ್ದು, ಈ ಜಗತ್ತೇ ಒಂದು ವಿಚಿತ್ರವೆನಿಸುತ್ತದೆ. ಆದರೆ ಎಲ್ಲವನ್ನೂ ಸಮನಾಗಿಸುವುದೇ ಮೃತ್ಯು, ಮೃತ್ಯು ಬಡವ-ಬಲ್ಲಿದನನ್ನೂ, ಜಾಣ- ಪೆದ್ದನನ್ನೂ, ಸರಿ ಅಥವಾ ತಪ್ಪು ಮಾಡಿದವನನ್ನೂ ಬೇಧವಿಲ್ಲದೆ, ಸಮಯ ಬಂದೊದಗಿದಾಗ ತನ್ನ ತೆಕ್ಕೆಯಲ್ಲಿ ಸೇರಿಸಿಕೊಂಡುಬಿಡುತ್ತದೆ. ಪ್ರತಿಯೊಬ್ಬರೂ ತಮ್ಮ ತಮ್ಮ ಪೂರ್ವ ಕರ್ಮಗಳಿಗನುಸಾರವಾಗಿ ಬಡವನಾಗಿಯೋ, ಬಲ್ಲಿದನಾಗಿಯೋ, ಜಾಣನಾಗಿಯೋ, ಪೆದ್ದನಾಗಿಯೋ, 'ಸತ್ಕರ್ಮ ಅಥವಾ ದುಷ್ಕರ್ಮ' ಗಳನ್ನು ಮಾಡುತ್ತಾ ಇರುತ್ತಾರೆ. ಯಾರು ಹೇಗೆ ಇದ್ದರೂ ಕಾಲವೊದಗಿಬಂದಾಗ ಸಮನಾಗಿ ಕಾಲವಶರಾಗುತ್ತಾರೆ. ಹಾಗಾಗಿ ಇದರ ಬಗ್ಗೆ ಹೆಚ್ಚು ಚಿಂತೆ ಮಾಡದೆ, ಇಲ್ಲಿರುವಾಗ, ಬದುಕನ್ನು ಅನಂದಮಯವನ್ನಾಗಿಸುವುದು ಹೇಗೆ ಎನ್ನುವುದರ ಕುರಿತು ಚಿಂತಿಸಿ, ಪ್ರಯತ್ನಿಸಿ, ಏನೇ ಇದ್ದರೂ, ಇಲ್ಲದಿದ್ದರೂ, ಆನಂದವನ್ನು ಬದುಕಿನಲ್ಲಿ ಪಡೆಯಲಾದರೆ, ಅದೇ ಬದುಕಿನ ಸಾರ್ಥಕ್ಯ ಅಂತಹ ಸಾರ್ಥಕತೆಯನ್ನು ಪಡೆಯಲು ನಾವೆಲ್ಲಾ ಪ್ರಯತ್ನಿಸಬೇಕು.

**ಮುಕ್ತಕ – 638**

**ನಂಬು ದೇವರ, ನಂಬು, ನಂಬೆನ್ನುವುದು ಲೋಕ |**
**ಕಂಬನಿಯನಿಡುವ ಜನ ನಂಬಲೊಲ್ಲದರೇಂ? ||**
**ಹಂಬಲನೆ ತೊರೆದಂಗೆ ನಂಬಿಕೆಯ ಹಂಗೇಕೆ? |**
**ತುಂಬು ವಿರತಿಯ ಮನದಿ–ಮಂಕುತಿಮ್ಮ ||**

ನಂಬೆನ್ನುವುದು =ನಂಬು+ಎನ್ನುವುದು, ಕಂಬನಿಯನಿಡುವ =ಕಂಬನಿಯ+ಇಡುವ,
ನಂಬಲೊಲ್ಲದರೇಂ= ನಂಬಲು+ ಒಲ್ಲದರು+ಏಂ,
ಒಲ್ಲದರು=ಇಷ್ಟಪಡರು, ಹಂಬಲನೆ=ಆಸೆಯನ್ನು, ತೊರೆದಂಗೆ= ಬಿಟ್ಟವನಿಗೆ, ವಿರತಿಯ=ವೈರಾಗ್ಯವನು

ಜಗತ್ತೆಲ್ಲ 'ದೇವರನ್ನು ನಂಬು, ನಂಬಿ ಕೆಟ್ಟವರಿಲ್ಲವೋ, ದೇವರು ನಂಬಿದವರ ಕೈಬಿಡನು' ಎಂದೆಲ್ಲಾ ಹೇಳುತ್ತದೆ. ಆದರೆ ತೀರ ಕಷ್ಟದಲ್ಲಿ ಇದ್ದು, ಕಣ್ಣೀರಿಡುವ ಜನರೇಕೆ ದೇವರನ್ನು ನಂಬುವುದಿಲ್ಲ. ಆಸೆಯನ್ನು ಬಿಟ್ಟವನಿಗೆ ನಂಬಿಕೆಯ ಹಂಗು ಏಕೆ? ನೀನೂ ಸಹ ಈ ನಂಬಿಕೆಯ ವೃತ್ತದಿಂದ ಹೊರಬರಬೇಕಾದರೆ ನಿನ್ನ ಮನಸ್ಸಿನಲ್ಲಿ ವಿರಕ್ತಿಯನ್ನು ತುಂಬಿಕೋ" ಎಂದು ಆದೇಶಿಸುತ್ತಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ದೇವರೆಂಬುದು ಒಂದು ಸುಂದರ ಕಲ್ಪನೆ. ಆ ಕಲ್ಪನೆಯನ್ನು ನಂಬಿ ಬದುಕುವುದರಿಂದ ನಮ್ಮಲ್ಲಿ ಒಂದು ಸುಂದರ ಧರ್ಮಾಧಾರಿತ, ಶಿಸ್ತಿನ ಸಮಾಜದ ನಿರ್ಮಾಣಕ್ಕೆ ಹೇತುವಾಗಿದೆ. ಆ ದೇವರು ನಮಗೆ ಏನನ್ನೋ ಮಾಡುತ್ತಾನೆಂಬ ಆಸೆ ಮತ್ತು ಆ ಆಸೆಗೆ ಇಂಬುಕೊಡುವ ನಂಬಿಕೆಗಳೇ ನಮ್ಮ ಸಮಾಜ ಮತ್ತು ಸಂಸ್ಕೃತಿಗಳಿಗೆ ಆಧಾರ. ಆ ನಂಬಿಕೆಯ ಸುತ್ತ ಹೆಣೆದುಕೊಂಡದ್ದೇ, ಆಚಾರ ವಿಚಾರಗಳು, ಸಂಪ್ರದಾಯಗಳು, ನಿಗಮ, ಆಗಮ, ಸಾಹಿತ್ಯ, ಸಂಗೀತ, ನಾಟ್ಯ, ನಾಟಕ, ಶಿಲ್ಪ, ಚಿತ್ರ ಮುಂತಾದ ಕಲೆಗಳು. ಒಟ್ಟಾರೆ, ಈ ನಂಬಿಕೆಯೇ ನಮ್ಮ ಸಮಾಜದ ಅಸ್ತಿತ್ವದ ಜೀವಾಳ. ಆದರೆ, ಹಾಗೆ ತಮ್ಮ ಬಯಕೆಗಳನ್ನು ಈಡೇರಿಸಿಕೊಳ್ಳಲು ದೇವರನ್ನು ನಂಬಿ, ಹಾಗೆ ತಮ್ಮ ಬಯಕೆಗಳು ಈಡೇರದೆ ಹೋದರೆ ಆ ದೇವರನ್ನು ಹಳಿದು, ಆ ನಂಬಿಕೆಯಿಂದ ದೂರಾಗಿ, ಕಂಬನಿಗರೆಯುವವರೂ ಇದ್ದಾರೆ. ಇದು ಅಜ್ಞಾನದ ಭಾವ. ಏಕೆಂದರೆ ಆ ದೇವರೇನು ಇವರನ್ನು 'ನನ್ನನ್ನು ನಂಬು' ಎಂದು ಹೇಳಿದ್ದರೆ? ನಾವು ನಮ್ಮ ಅನುಕೂಲಕ್ಕೆ ಮತ್ತು ಅಸಹಾಯಕತೆಗೆ ಅವನನ್ನು ನಂಬಿ ಸೋತು ಕಣ್ಣೀರಿಡುತ್ತಾ ಅವನನ್ನು ಹಳಿದರೆ, ಅದು ವ್ಯರ್ಥ ಪ್ರಲಾಪ.

ನಮಗೆ ಆಸೆಗಳುಂಟು, ನಮಗೆ ಹೆದರಿಕೆಯೂ ಉಂಟು. ನಮ್ಮೆಲ್ಲಾ ಹೆದರಿಕೆಗಳನ್ನೂ 'ಎರಡು' ಗುಂಪುಗಳಾಗಿಸಬಹುದು. 'ನಾವು ಬಯಸಿದ ಆಸೆಗಳು ನೆರವೇರುವುದೋ ಇಲ್ಲವೋ' ಎನ್ನುವ ಭಯದ ಒಂದು ಗುಂಪು ಮತ್ತು 'ನಾವು ಬಯಸಿ ಪಡೆದುಕೊಂಡ ವಸ್ತು ವಿಷಯ ಅಥವಾ ವ್ಯಕ್ತಿ ನಮ್ಮನ್ನು ಬಿಟ್ಟು ಹೋಗುವುದೋ' ಎಂಬ ಭಯದ ಎರಡನೇ ಗುಂಪು, ನಮ್ಮೆಲ್ಲಾ ಭಯಗಳನ್ನೂ ಈ ಎರಡರಲ್ಲಿ ಒಂದರೊಳಗೆ ಸೇರಿಸಿಬಿಡಬಹುದು. ಈ ಭಯ ನಿವಾರಣೆಗೆ ನಮಗೆ ದೇವರು ಬೇಕು. ಭಯದ ಕಂಪನದಿಂದ





ತತ್ತರಿಸುವ ನಮಗೆ ಭದ್ರವಾಗಿ ಹಿಡಿದುಕೊಳ್ಳಲು ಒಂದು ಆಧಾರ ಸ್ಥಂಭ ಬೇಕು. ಆ ಆಧಾರವೇ ನಾವು ಕಂಡುಕೊಂಡ ದೇವರು ಮತ್ತು ಅವನಲ್ಲಿ ನಂಬಿಕೆ. ಆದರೆ ನಮಗೆ ಆಗುವುದು, ಹೋಗುವುದೆಲ್ಲವೂ ನಮ್ಮ ಆರ್ಜಿತ ಕರ್ಮದಿಂದ ಎಂದು ನಮಗೆ ಅರಿವಾದರೆ ಮತ್ತು ನಮ್ಮ ಕರ್ಮಗಳ ಫಲವನ್ನು ನಾವು ಅನುಭವಿಸುತ್ತಿದ್ದೇವೆ ಎಂದು ಒಪ್ಪಿಕೊಂಡರೆ, ಆ ಭಯ ನಿವಾರಣೆಯಾಗಬಹುದು.

ಈ ಪಡೆದುಕೊಳ್ಳುವ ಮತ್ತು ಉಳಿಸಿಕೊಳ್ಳುವ ಆಸೆಗಳನ್ನು ತೊರೆದರೆ, ನಮಗೆ ಭಯ ತೊಲಗಿ ದೇವರ ಅವಶ್ಯಕತೆ ಇರುವುದೇ ಇಲ್ಲ. ಹಾಗಾಗಿ ಆಸೆ ಬಿಡಬೇಕು. ಆಸೆ ಬಿಡಬೇಕು ಎನ್ನುವುದಕ್ಕಿಂತ ಆಸೆಯೊಂದಿಗಿನ ನಂಟನ್ನು ಮತ್ತು ಅಂಟನ್ನು ಬಿಡಿಸಿಕೊಂಡು, ಕಳಚಿಕೊಳ್ಳಬೇಕು. ಹಾಗಾದಾಗ ಆ ದೇವರ ಮೇಲೆ ಆಧಾರ ಪಡುವುದು ಮತ್ತು ತತ್ಪರಿಣಾಮವಾಗಿ ನಿರಾಶರಾಗುವುದೂ ತಪ್ಪುತ್ತದೆ. ಆದರೆ, ಆಸೆಗಳಿಲ್ಲದೆ, ಬಯಕೆಗಳಿಲ್ಲದೆ ಮತ್ತು ಆ ಆಸೆ ಮತ್ತು ಬಯಕೆಗಳ ಈಡೇರಿಕೆಗೆ ಅಧಾರ ಪಡದೆ, ಕೇವಲ ನಮಗೆ ಬದುಕನ್ನು ಕೊಟ್ಟದ್ದಕ್ಕಾಗಿ ಮತ್ತು ಆ ಬದುಕನ್ನು ಸುಂದರವಾಗಿ ಬದುಕಲು ಸಕಲವನ್ನು ಇತ್ತ ಆ ಪರಮಾತ್ಮನನ್ನು ಕೃತಜ್ಞತಾಪೂರ್ವಕವಾಗಿ ಭಾವಿಸಲು ಆ ದೇವರನ್ನು ನಂಬುವಂತಾದರೆ, ನಮ್ಮ ಜೀವನ ಸಾರ್ಥಕವಾಗುತ್ತದೆ.

**ಮುಕ್ತಕ – 639** **ಮುಗ್ಧನಾಗದೆ ಭುಜಿಸು ಭುಜಿಸಲಿಹುದನು ಜಗದಿ |**
**ಮಾಧ್ವೀಕ ಭಯವಿರದು ಜಾಗರೂಕನಿಗೆ ||**
**ದೃಗ್ದೃಶ್ಯಚಿತ್ರಪ್ರಪಂಚದಲಿ ಸೇರಿ ನೀಂ ।**
**ಮುಗ್ಧನಾಗದೆ ಸುಖಿಸು – ಮಂಕುತಿಮ್ಮ ||**

ಮುಗ್ಧನಾಗದೆ=ಮುಗ್ಧನು+ಆಗದೆ ಭುಜಿಸಲಿಹುದನು=ಭುಜಿಸಲು+ಇಹುದನು, ಭಯವಿರದು=ಭಯವು+ಇರದು, ದೃಗ್ದೃಶ್ಯಚಿತ್ರಪ್ರಪಂಚದಲಿ=ದೃಗ್+ದೃಶ್ಯ+ಚಿತ್ರ+ಪ್ರಪಂಚದಲಿ, ಮುಗ್ಧನಾಗದೆ=ಮುಗ್ಧನು+ಆಗದೆ, ದೃಗ್=ಕಾಣುವವನು, ದೃಶ್ಯ=ಕಾಣಬಲ್ಲದ್ದು, ಮುಗ್ಧನಾಗದೆ=ಮೋಹಕ್ಕೊಳಗಾಗದೆ.

ಈ ಜಗತ್ತಿನಲ್ಲಿ ಅನುಭವಿಸಬೇಕಾದ್ದನ್ನು ಮೋಹವಿಲ್ಲದೆ ಅನುಭವಿಸು. ಮೋಹವಿಲ್ಲದವನಿಗೆ ಅಹಂಕಾರವು ಬಂದು ಅಂಟಿಕೊಳ್ಳುವ ಭಯವಿರದು. ಚಿತ್ರಕಾರನೂ ಚಿತ್ರವೂ ಎರಡೂ ಒಂದೇ ಆಗಿರುವ ಈ ಪ್ರಪಂಚದಲ್ಲಿ ನೀನೂ ಸಹ ಒಂದಾಗಿ ಈ ಜಗತ್ತಿಗೆ ಅಂಟದೆ, ಮೋಹವನ್ನು ತೊರೆದು ಸುಖದಿಂದಿರು, ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಜಗತ್ತು ಪರಮಾತ್ಮ ಶಕ್ತಿಯಿಂದ ಸೃಷ್ಟಿಸಲ್ಪಟ್ಟಿದೆ. ಆ ಶಕ್ತಿಯೇ ಇಡೀ ಜಗತ್ತಾಗಿ ಪ್ರಕಟಗೊಂಡಿದೆ. ಹಾಗೆ ಪ್ರಕಟಗೊಂಡದ್ದು ಎರಡು ರೂಪಗಳಲ್ಲಿ, ಕಣ್ಣಿಗೆ ಕಾಣುವ ಜಡ ಸ್ವರೂಪ ಒಂದು ಮತ್ತು ಕಣ್ಣಿಗೆ ಕಾಣದ

ಚೈತನ್ಯ ಅಥವಾ ಶಕ್ತಿ ರೂಪ. ಸಕಲ ಜಗತ್ತೂ ಇವೆರಡರಿಂದಲೇ ಆಗಿದೆ ಎನ್ನುವುದು ಸರ್ವ ವಿಧಿತ. ಸಕಲ ಜೀವರಾಶಿಗಳೂ, ಸಸ್ಯ ಪ್ರಭೇದಗಳೂ ಈ ಜಡ ಮತ್ತು ಚೈತನ್ಯದ ಸಮ್ಮಿಲನದಿಂದ ಆಗಿವೆ. ಹಾಗಾಗಿ ಕಣ್ಣಿಗೆ ಕಾಣುವ ಸಕಲವೂ ಆ ಪರಮಾತ್ಮನೇ.

ಒಂದು ರೇಷ್ಮೆಯ ಹುಳ, ತನ್ನ ದೇಹದ ಒಂದು ಅಂಗವಾದ ತನ್ನ ಜೊಲ್ಲಿನಿಂದಲೇ ತನ್ನ ಸುತ್ತ ಒಂದು ಗೂಡನ್ನು ಕಟ್ಟಿಕೊಂಡಂತೆ, ಒಂದು ಗಿಡ ತನ್ನ ಒಡಲ ಸಾರದಿಂದಲೇ ಚಿಗುರು, ಎಲೆ, ಹೂವು, ಕಾಯಿ, ಹಣ್ಣು, ಮತ್ತು ಅವುಗಳ ಬಣ್ಣ, ರುಚಿ ಮತ್ತು ಸುಗಂಧವನ್ನು ಪ್ರಕಟಗೊಳಿಸುವಂತೆಯೇ, ತನ್ನ ಸಂತೋಷಕ್ಕಾಗಿ ಆ ಪರಮಾತ್ಮ ಈ ಜಗತ್ತನ್ನು ಸೃಷ್ಟಿಸಿದ್ದಾನೆ. ಹಾಗಾಗಿಯೇ ಮಾನ್ಯ ಗುಂಡಪ್ಪನವರು 'ದೃಗ್ದೃಶ್ಯಚಿತ್ರಪ್ರಪಂಚದಲಿ' ಎಂದರು. ಸುಧಾರಿತ ಸೃಷ್ಟಿಯಾದ ನಾವೂ ಸಹ ಅಂತಹ ಒಂದು ಪ್ರಕ್ರಿಯೆಯ ಫಲವಷ್ಟೇ? ಇಲ್ಲಿ ಚಿತ್ರಕಾರನು, ಚಿತ್ರ ಮತ್ತು ಅದಕ್ಕಾಗಿ ಉಪಯೋಗಿಸಿದ ಗೋಡೆ ಮತ್ತು ಬಣ್ಣ ಎಲ್ಲವೂ ಆ ಪರಮಾತ್ಮನೇ.

ನಾನು ಮತ್ತು ನನ್ನದೆಂಬ ಭಾವ ಬಂದರೆ, ಅದು ಅಹಂಕಾರವಾಗಿ, ಆ ಅಹಂಕಾರ ಜನಿತವಾದ ಮಿಕ್ಕೆಲ್ಲ ದುರ್ಭಾವಗಳೂ ನಮ್ಮಲ್ಲಿ ನುಗ್ಗಿ, ನಮ್ಮನ್ನು ದುಃಖಿಗಳನ್ನಾಗಿಸುತ್ತದೆ. ಅದಕ್ಕಾಗಿಯೇ ನಮಗೆ ಸಿಗುವ ಎಲ್ಲವೂ ಆ ಪರಮಾತ್ಮನ ಪ್ರಸಾದವೆಂದು ಅನುಭವಿಸಿದರೆ, ಗುಂಡಪ್ಪನವರು 'ಮಾನ್ವಿಕ ಭಯವಿರದು ಜಾಗರೂಕನಿಗೆ' ಎಂದು ಹೇಳುವಂತೆ, ನಮಗೆ ಮದವು ಹೆಚ್ಚಾಗಿ, ತತ್ಪರಿಣಾಮವಾಗಿ ಉಂಟಾಗುವ ಭಯವು ಇರುವುದಿಲ್ಲ. ಗುಂಡಪ್ಪನವರು ಇಲ್ಲಿ 'ಮುಗ್ಧನಾಗದೆ' ಎನ್ನುವ ಪದಪ್ರಯೋಗದಿಂದ 'ಅರಿವಿಲ್ಲದವನಂತೆ ಮೋಹಕ್ಕೊಳಪಡಬೇಡ ಎಂದು ಎಚ್ಚರಿಸಿದ್ದಾರೆ. ನನಗೆ ಸಿಕ್ಕಿದ್ದೆಲ್ಲ ಆ ಪರಮಾತ್ಮನ ಕೃಪೆಯಿಂದ ದೊರಕಿದೆ ಎಂಬ ಅರಿವನ್ನು ಪಡೆದು, ಮುಗ್ಧತೆಯನ್ನು ತೊರೆದು, ಮೋಹಕ್ಕೊಳಗಾಗದೆ ಬದುಕಿದರೆ, ಸಂತೋಷ ನಮ್ಮದಾಗುತ್ತದೆ. ಆದರೆ ಅಂಥಹ ಭಾವನೆಗಳನ್ನು ಬೆಳೆಸಿಕೊಂಡು, ಉಳಿಸಿಕೊಂಡು, ನಮ್ಮದಾಗಿಸಿಕೊಳ್ಳಬೇಕಾದರೆ, ಸಾಧನೆ ಬೇಕು. ಅಂತಹ ಸಾಧನೆಯನ್ನು ಮಾಡಲು ನಾವೆಲ್ಲರೂ ಪ್ರಯತ್ನ ಪಡಬೇಕು.

**ಮುಕ್ತಕ – 640**

**ತಿರುಕ ನೀನೀ ಬ್ರಹ್ಮಪುರಿಯೊಳದ ಮರೆಯದಿರು ।**
**ಸಿರಿಯಿರ್ದೊಡೇನು? ಪರಿಜನವಿರ್ದೊಡೇನು? ॥**
**ತೊರೆದೆಲ್ಲ ಡಂಬಗಳ ನೀನೆ ನಿನ್ನಾಳಾಗು ।**
**ಪರದೇಶಿವೊಲು ಬಾಳು - ಮಂಕುತಿಮ್ಮ ॥**

ನೀನೀ=ನೀನು+ಈ, ಬ್ರಹ್ಮಪುರಿಯೊಳದಮರೆಯದಿರು= ಬ್ರಹ್ಮಪುರಿಯೊಳು+ಅದ+ಮರೆಯದೆ+ಇರು, ಸಿರಿಯಿರ್ದೊಡೇನು=ಸಿರಿ+ಇರ್ದೊಡೆ+ಏನು, ಪರಿಜನವಿರ್ದೊಡೇನು=ಪರಿಜನ+ಇರ್ದೊಡೆ+ಏನು, ತೊರೆದೆಲ್ಲ=ತೊರೆದು+ಎಲ್ಲ, ನಿನ್ನಾಳಾಗು=ನಿನ್ನ+ಆಳು+ಆಗು, ಪರದೇಶಿವೊಲು=ಪರದೇಶಿ+ಒಲು,





ತಿರುಕ=ಬಿಕ್ಷುಕ. ಬ್ರಹ್ಮಪುರಿ=ಬ್ರಹ್ಮನಿಂದ ಸೃಷ್ಟಿಸಲ್ಪಟ್ಟ ಈ ಜಗತ್ತು. ಸಿರಿ=ಸಂಪತ್ತು, ಪರಿಜನ=ಬಂಧುಬಳಗ, ಡಂಬಗಳ=ಬೂಟಾಟಿಕೆ. ಆಳು=ಸೇವಕ

ಈ ಜಗತ್ತಿನಲ್ಲಿ ನೀನು ಬಿಕ್ಷುಕ, ಅದನ್ನು ಮರೆಯಬೇಡ. ಹಣಬಲ ಮತ್ತು ಜನಬಲವಿದ್ದರೆ ಏನು ಪ್ರಯೋಜನ. ಅದರಿಂದ ಮನದಲ್ಲಿ ಉಂಟಾಗುವ ಎಲ್ಲ ಡಂಬಾಚಾರ, ಬೂಟಾಟಿಕೆಗಳನ್ನು ಬಿಟ್ಟು ಎಲ್ಲಿಂದಲೋ ಬಂದ ನಿನ್ನ ಆತ್ಮಕ್ಕೆ ನೀನು ಸೇವಕನಾಗು. ಈ ಜಗತ್ತಿನಲ್ಲಿ ನೀನು ಪರಕೀಯ, ಪರದೇಶಿ, ಹಾಗೆಯೇ ಬಾಳು ಎಂದು ಬದುಕಿಗೆ ನಾವು ಎಷ್ಟರಮಟ್ಟಿಗೆ ಅಂಟಿಕೊಳ್ಳಬೇಕು ಎನ್ನುವುದನ್ನು ಸೂಕ್ಷ್ಮವಾಗಿ ತಿಳಿಸಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

“ಅಲ್ಲಿದೆ ನಮ್ಮ ಮನೆ, ನಾನೇಕೆ ಬಂದೆ ಸುಮ್ಮನೇ” ಎಂದರು ಶ್ರೀ ಪುರಂದರದಾಸರು. ತನ್ನ ಮೂಲದಿಂದ ಹೊರಟ 'ಆತ್ಮ' ದ ಪ್ರಯಾಣದ ಒಂದು ಮಜಲು ಅಷ್ಟೇ ಈ ಜಗತ್ತಿನ ನಮ್ಮ ಇಂದಿನ ಬದುಕು. ಹಿಂದೆ ಎಷ್ಟು ಬಾರಿ ಬಂದಿದ್ದೆವೋ, ಏನೇನಾಗಿ ಬಂದಿದ್ದೆವೋ, ಮುಂದೆ ಇನ್ನೆಷ್ಟುಬಾರಿ ಬರಬೇಕೋ ನಮಗೆ ಅರಿವಿಲ್ಲ. ಆದರೂ ಈ ನಮ್ಮ ಇಂದಿನ ಅಸ್ತಿತ್ವವೇ ಸತ್ಯ ಮತ್ತು ನಿತ್ಯ ಎಂದು ತಿಳಿದು, ಬದುಕಿನ ಬಗ್ಗೆ ಒಂದು ಭ್ರಮೆಯನ್ನು ಬೆಳೆಸಿಕೊಂಡು ಬಿಡುತ್ತೇವೆ. ಆ ಭ್ರಮೆ ನಮ್ಮನ್ನು ಈ ಜಗತ್ತಿಗೆ ಅಂಟಿಸಿ, ನಂಟನ್ನು ಬೆಳೆಸಿ, ಐಹಿಕ ಸುಖ ಮತ್ತು ದುಃಖಗಳನ್ನು ಅನುಭವಿಸುವಂತೆ ಮಾಡುತ್ತದೆ.

ಒಂದು ಬಾರಿ ನಮ್ಮ ಬದುಕನ್ನೇ ಪರಿಕಿಸಿ ನೋಡಿದರೆ ನಮಗೆ ಅರ್ಥವಾಗುತ್ತದೆ ನಾವೆಷ್ಟು ದಟ್ಟ ದರಿದ್ರ ಭಿಕ್ಷುಕರೆಂದು. ಈ ದೇಹ ನಮ್ಮ ಪ್ರಮೇಯವಿಲ್ಲದೆ ಸಿಕ್ಕದ್ದು, ಹಾಗಾಗಿ ನಮ್ಮದಲ್ಲ. ತಾಯಿಯ ಗರ್ಭದಿಂದ ಧರೆಗುದುರಿದ ಮೇಲೆ ಪಡೆಯುವ ಮಾತೃಸ್ತನ್ಯ, ಆಹಾರ,ಉಸಿರಾಡುವ ಗಾಳಿ, ಸಕಲವೂ ಆ ಪರಮಾತ್ಮನಿಂದ ಪಡೆದ ಭಿಕ್ಷೆ. ಆಜೀವ ಪರ್ಯಂತ ಅದನ್ನು ಭಿಕ್ಷಾ ರೂಪದಲ್ಲೇ ಪಡೆಯುತ್ತಿರುತ್ತೇವೆ. ಇನ್ನು ಬದುಕಿನಲ್ಲಿನ ನಮ್ಮ ಅವಶ್ಯಕತೆಗಳೆಲ್ಲವನ್ನೂ ನಾವು ಪರರಿಂದ, ನಿಸರ್ಗದಿಂದ, ಪರಮಾತ್ಮನಿಂದ ಸದಾಕಾಲ ಬೇಡುತ್ತಿರುತ್ತೇವೆ. ಹಾಗಾಗಿ ನಾವು ಭಿಕ್ಷುಕರು. ಕಡೆಗೆ ಈ ಜಗತ್ತನ್ನು ತೊರೆಯಬೇಕಾದ 'ಮರಣ'ವೂ ನಮಗೆ ಆ ಪರಮಾತ್ಮ ಕರುಣಿಸುವ ಭಿಕ್ಷೆಯೇ ಹೊರತು ಬೇರೇನಲ್ಲ. ನಮ್ಮ ಒಳಹೊರಗಾಡುವ ಉಸಿರೂ ಸಹ ಈ ಸೃಷ್ಟಿಯಿಂದ ನಾವು ಪಡೆದ ಭಿಕ್ಷೆ. ಎಂದು ಆ ಭಿಕ್ಷೆ ಸಿಗುವುದಿಲ್ಲವೋ, ಅಂದು ಈ ಬದುಕಿಗೆ ಅಂತ್ಯ.

ಹಾಗಾಗಿ ಈ ಜಗತ್ತು ನಮ್ಮದಲ್ಲ ಇಲ್ಲಿರುವುದಾವುದೂ ನಮ್ಮದಲ್ಲ. ನಾವು ಕೇವಲ ಇಲ್ಲಿರಲು ಸೃಷ್ಟಿಯಿಂದ ಪಡೆದುಕೊಂಡ ಭಿಕ್ಷೆ. ಎಷ್ಟು ಸಿರಿ, ಸಂಪತ್ತುಗಳಿದ್ದರೇನು? ಎಷ್ಟು ಬಂಧುಬಳಗವಿದ್ದರೇನು? ಎಲ್ಲವನ್ನೂ ತೊರೆದು ನಮ್ಮ ಸ್ವಸ್ಥಾನಕ್ಕೆ ಹಿಂತಿರುಗಲೇಬೇಕು. “ಹಾಗಾಗಿ ನೀನು ಇಲ್ಲಿನವನಲ್ಲ. ನೀನು ಪರದೇಶಿ. ಆ ದೇಶಕ್ಕೆ ಎಂದಿದ್ದರೂ ನೀನು ಹಿಂತಿರುಗಲೇಬೇಕು. ಇಲ್ಲಿಗೆ ನೀನು ಅಂಟಿಕೊಂಡರೆ ದುಃಖಪಡಬೇಕಾಗುತ್ತದೆ. ಹಾಗಾಗಿ ಇಲ್ಲಿನ ಡಂಬಗಳನ್ನು ತೊರೆದು ನಿರ್ಲಿಪ್ತತೆಯ ಬದುಕನ್ನು ಬದುಕು. ಅದು ನಿನಗೆ ಹಿತ ಅದೇ ನಿಜವಾದ ಬಾಳು” ಎಂದು, ಬಹಳ ಸೂಕ್ತ ಸಲಹೆಯನ್ನು ನಮಗೆ ಇತ್ತಿರುವುದೇ ಈ ಮುಕ್ತಕದ ಹೂರಣ. ಆ ರೀತಿ ಬದುಕಲು ಪ್ರಯತ್ನ ಪಟ್ಟರೆ ಬದುಕು ಹಿತವಾಗಿರುತ್ತದೆ.

**ಮುಕ್ತಕ 641**

**ಬಾನೊಳಿರುವುದೆ ಪಕ್ಷಿ ಪಾರ್ವ ದಾರಿಯ ನಕ್ಷೆ? |**
**ಮೀನು ನೀರೊಳು ನುಸುಳೆ ಪಥನಿಯಮವಿಹುದೆ? ||**
**ಏನೊ ಜೀವನವನೆಳೆವುದೇನೊ ನೂಕುವುದದನು |**
**ನೀನೊಂದು ಗಾಳಿಪಟ-ಮಂಕುತಿಮ್ಮ ||**

ಬಾನೊಳಿರುವುದೆ=ಬಾನೊಳು+ಇರುವುದೆ, ಪಥನಿಯಮವಿಹುದೆ=ಪಾಠ+ನಿಯಮವು+ಇಹುದೆ,
ಜೀವನವನೆಳೆವುದೇನೊ=ಜೀವನವನ್+ಎಳೆವುದು+ಏನೋ,
ನೂಕುವುದದನು=ನೂಕುವುದು+ಅದನು, ನುಸುಳೆ=ಸುಳಿ, ನುಗ್ಗು,

ಆಕಾಶದಲ್ಲಿ ಹಾರುವ ಪಕ್ಷಿಯ ಚಲನಕ್ಕೆ ಒಂದು ನಿರ್ದಿಷ್ಟ ಪಥವಿಲ್ಲ, ಎಂದರೆ ಒಂದು ಮಾರ್ಗವಿಲ್ಲ. ಹಾಗೆಯೇ ಕಡಲಿನಲ್ಲಿರುವ ಮೀನು ಚಲಿಸಲು ಒಂದು ನಿಗದಿತ ಹಾದಿ ಇಲ್ಲ. ಆಯಾಯಾ ದೇಹಗಳನ್ನು ಧರಿಸಿದ ಜೀವವನ್ನು ಒಂದು ಶಕ್ತಿ ಎಳೆಯುತ್ತಾ, ನೂಕುತ್ತಾ ಮುಂದಕ್ಕೆ ಮತ್ತು ಹಿಂದಕ್ಕೆ ತಳ್ಳುತ್ತಿರುತ್ತದೆ. ಹಾಗೆಯೇ ನಮ್ಮ ಜೀವನವೂ ಒಂದು ಗಾಳಿಪಟವಿದ್ದಂತೆ. ಕೈಯಲ್ಲಿ ದಾರ ಹಿಡಿದು ಗಾಳಿಪಟವನ್ನು ಹಾರಿಬಿಟ್ಟರೂ, ಅದು ಹಾರುವುದು ನಭದಲ್ಲಿನ ಗಾಳಿಯ ಚಲನೆಯನುಸಾರವಾಗಿ, ಹಾಗಾಗಿ ವಿಧಿಯೆಂಬ ಗಾಳಿಯ ಹೊಯ್ದಾಟದ ಅನುಸಾರವಾಗಿ ಹಾರಾಡುವ ಬದುಕನ್ನು ಹೊಂದಿರುವ ನೀನೂ ಒಂದು ಗಾಳಿಪಟದ ರೀತಿ ಎಂದು, ನಮ್ಮ ಬದುಕಿನ ಪರಿಯನ್ನು ವಿಶ್ಲೇಷಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಆಕಾಶದಲ್ಲಿ ಹಾರುವ ಪಕ್ಷಿಗೆ, ನೀರಿನಲ್ಲಿ ನುಲಿಯುವ ಮೀನಿಗೆ, ಹೇಗೆ ಒಂದು ನಿರ್ಧಿಷ್ಟವಾದ ಚಲನ ಪಥವಿಲ್ಲವೋ, ಹಾಗೆಯೇ ನಮ್ಮ ಬಾಳು. ನಾವಂದುಕೊಳ್ಳುತ್ತೇವೆ "ನಾವು ಹೀಗೆ ಮಾಡುತ್ತೇವೆ" ನಾನು ಹಾಗೆ ಮಾಡುತ್ತೇನೆ" ಎಂದು. ಅದೊಂದು ಭ್ರಮೆ, ಗಾಳಿಪಟವನ್ನು ನೆಲದಿಂದ ಆಕಾಶಕ್ಕೆ ಒಂದು ಸೂತ್ರದ ಮೂಲಕ ಹಾರಿಬಿಟ್ಟ ನಂತರ ದಾರ ನಮ್ಮ ಕೈಯಲ್ಲಿದ್ದರೂ, ಅದು ಹಾರಾಡುವುದು ಬೀಸುವ ಗಾಳಿ ನಿರ್ದೇಶಿಸಿದಂತೆ, ಅಲ್ಲವೇ? ಹಾಗೆ ನಮ್ಮ ಬದುಕೂ ಸಹ. ನಾವರಿಯದ ನಮ್ಮ ಪೂರ್ವಕರ್ಮಗಳು, ನಮ್ಮನ್ನು ಹಲವಾರು ದಿಕ್ಕುಗಳಿಗೆ ಹೋಗುವಂತೆ ಮಾಡುತ್ತದೆ. ನಮ್ಮ ಜೀವನದ ಗತಿಯ ಮೇಲೆ ನಮಗೆ ಯಾವುದೇ ಹಿಡಿತವಿರುವುದಿಲ್ಲ.

ನಮ್ಮ ಜೀವನದ ಗತಿಯನ್ನು ನಿರ್ಧರಿಸುವ ನಮ್ಮ ಪೂರ್ವಕರ್ಮದ ಪರಿಚಯ ನಮಗೆ ಇರುವುದಿಲ್ಲ. ಅದು ದೈವ ರಹಸ್ಯ. ನಮ್ಮ ಬದುಕು ಅದರ ಮಾರ್ಗದಲ್ಲಿಯೇ ಹೋಗಬೇಕು ಬೇರೆ ದಾರಿಯಿಲ್ಲ. ಆದರೆ ಆ ಪೂರ್ವಕರ್ಮವನ್ನು ಅನುಭವಿಸುವಾಗ ಮತ್ತೆ ಅಧಿಕವಾದ ಹೊಸ ಕರ್ಮಗಳ ಗಂಟನ್ನು ಕಟ್ಟಿಕೊಳ್ಳದೆ ಇದ್ದರೆ, ಬಂದದ್ದನ್ನೆಲ್ಲಾ ತಪ್ಪಿಸಿಕೊಳ್ಳುವ ಮಾರ್ಗಗಳನ್ನು ಹುಡುಕದೆ, ಅನುಭವಿಸಿ ಸವೆಸಿಬಿಟ್ಟರೆ ಸುಖ ಮತ್ತು ಬದುಕು ಹಗುರವಾಗುತ್ತದೆ. ಇಲ್ಲದಿದ್ದರೆ ಪೂರ್ವಕರ್ಮಗಳ ಹೊರೆಗೆ ಪ್ರಸ್ತುತ ಕರ್ಮಗಳ ಭಾರವೂ ಸೇರಿದರೆ, ಹೊರಲು ಕಷ್ಟವಾಗುತ್ತದೆ ಮತ್ತು ಬದುಕು ದುರ್ಭರವಾಗುತ್ತದೆ.





ಗಾಳಿಪಟ ಹೇಗೆ ಬೀಸುವ ಗಾಳಿಯ ಗತಿಯಂತೆ ಆಕಾಶದಲ್ಲಿ ಹಾರಾಡುತ್ತದೆಯೋ, ಅದೇ ರೀತಿ ನಾವೂ ಸಹ ಬಂದದ್ದನ್ನೆಲ್ಲಾ ನಿರ್ಮಮತೆಯಿಂದ, ಅದೂ ಸಹ ಪರಮಾತ್ಮನ ಕೃಪೆಯಿಂದ ಸಂದದ್ದು ಮತ್ತು ಅವನ ಕೃಪೆಯಿಂದಲೇ ಅನುಭವಿಸುವ ಶಕ್ತಿ ಬರುತ್ತದೆ ಮತ್ತು ಅವನ ಕೃಪೆಯಿಂದಲೇ ಅದು ಸರಿದೂ ಹೋಗುತ್ತದೆ ಎಂದು ಭಾವಿಸಿದರೆ, ಬದುಕು ಐಹಿಕ ಸುಖವಿಲ್ಲದಿದ್ದರೂ, ಸಂತೋಷ ಮತ್ತು ಆನಂದದಿಂದ ಕೂಡಿರುತ್ತದೆ. ನಮ್ಮ ಪ್ರಮೇಯವೇ ಇಲ್ಲದ ನಮ್ಮ ಜೀವನದ ಗತಿಗೆ ಕೊರಗಿದರೆ ಏನೂ ಪ್ರಯೋಜನವಿಲ್ಲ. ನಿರ್ಲಿಪ್ತತೆಯ ಭಾವ ಮನಸ್ಸಿಗೆ ತಂದುಕೊಂಡು ಬಾಳಿದರೆ ಸುಖ, ಪ್ರಯತ್ನ ಪಟ್ಟರೆ ಸಾಧಿಸಬಹುದು.

**ಮುಕ್ತಕ – 642**

**ದಾರಿಗುರಿಗಳ ಗೊತ್ತು ಕಾಗೆಗುಂಟೇನಯ್ಯ ।**
**ಆರ ಮನೆ ಸಂಡಿಗೆಯೊ, ಚುಂಡಿಲಿಯೊ, ಹುಳುವೋ ॥**
**ಆರ ಪಿಂಡವೊ, ಏನೊ, ಎಂತೊ, ಆ ಬಾಳಗತಿ ।**
**ಮೀರಿದವನೇಂ ನೀನು? – ಮಂಕುತಿಮ್ಮ ॥**

ಬಾಕಾಗೆಗುಂಟೇನಯ್ಯ = ಕಾಗೆಗೆ + ಉಂಟೇನಯ್ಯ, ಮೀರಿದವನೇಂ=ಮೀರಿದವನು + ಏಂ

ಚೂಡಿಲಿ = ಸುಂಡಿಲಿ

ಮನಸೋ ಇಚ್ಛೆ ಹಾರಾಡುವ ಕಾಗೆಗೇನಾದರೂ ನಿಗಧಿಪಡಿಸಿದ ದಿಶೆ, ದಾರಿಗಳೇನಾದರೂ ಇದೆಯೇ? ಅದು ಹಾರುತ್ತಾ ಯಾರದೋ ಮನೆಯ ಸಂಡಿಗೆಯನ್ನೋ, ಬೆಂದ ಕಾಳನ್ನೋ, ಇಲಿಯನ್ನೋ, ಯಾವುದಾದರೂ ಹುಳವನ್ನೋ ಅಥವಾ ಯಾರದೋ ಮನೆಯಲ್ಲಿ ಇಟ್ಟ ಪಿಂಡವನ್ನೋ ತಿನ್ನುತ್ತಾ, ಹಾರುತ್ತಾ, ತನ್ನ ಬಾಳ ಗತಿಯನ್ನು ದೂಡುತ್ತದೆ. ನೀನೂ ಸಹ ಅದೇ ರೀತಿ ಬಾಳುವವನು. ನಿನ್ನ ಜೀವನದ ಗತಿ ಅದಕ್ಕಿಂತ ಭಿನ್ನವೇನಲ್ಲ ಎಂದು, ತಮಗೆ ತಾವೇ ಹೇಳಿಕೊಳ್ಳುವಂತೆ ಹೇಳಿ ನಮಗೂ ನಮ್ಮ ಬದುಕಿನ ಪರಿಯನ್ನು ಅರುಹಿದ್ದಾರೆ ಮಾನ್ಯ ಗುಂಡಪ್ಪನವರು.

ಕೆಲವರಿಗೆ ಮಾತ್ರ ತಾವು ಮಾಡಬೇಕಾದ ಕೆಲಸದ ಸೂಕ್ತತೆ, ಪ್ರಸ್ತುತತೆ ಅಥವಾ ಅಪ್ರಸ್ತುತತೆಯ ಪೂರ್ವ ಪರಿಚಯ, ಮಾಡುವ ವಿಧಾನ, ಮಾಡುವ ಅಥವಾ ಬಿಡುವ ಸಂಪೂರ್ಣ ಸ್ವಾತಂತ್ರ್ಯ ಇರುತ್ತದೆ. ಅವರು ಪುಣ್ಯವಂತರು. ಮಿಕ್ಕೆಲ್ಲರಿಗೂ ಅದಿಲ್ಲದೆ ಮನಸ್ಸಿಗೆ ಬರುವ ಚಿತ್ರ ವಿಚಿತ್ರ ವಿಚಾರಗಳ ಧಾರಾಪ್ರವಾಹಕ್ಕನುಗುಣವಾಗಿ, ಅವರ ಕೆಲಸ ಕಾರ್ಯಕೆಲಸಗಳಿರುತ್ತವೆ. ಒಂದು ನಿರ್ಧಿಷ್ಟವಾದ ದಿಕ್ಕು ಅಥವಾ ದಿಶೆ ಇರುವುದಿಲ್ಲ. ತಾವು ಏತಕ್ಕಾಗಿ ಆ ಕೆಲಸವನ್ನು ಮಾಡುತ್ತಿದ್ದೇವೆ ಎನ್ನುವುದರ ಅರಿವಿಲ್ಲದೆಯೆ ಸುಖಾಸುಮ್ಮನೆ ಮಾಡುತ್ತಾ ಹೋಗುತ್ತಾರೆ. ಮಾನ್ಯ ಗುಂಡಪ್ಪನವರು 'ಮೀರಿದವನೇಂ ನೀನು' ಎಂದು ಕೇಳುವಂತೆ ನಾವು ಈ ರೀತಿಯ ಬದುಕನ್ನು ಮೀರಲಾಗುವುದಿಲ್ಲ.





ಅದು ಏಕೆ ಹೀಗೆ ಎಂದರೆ, ಅದು ಇರುವುದೇ ಹೀಗೆ. ಅದು ಭಿನ್ನವಾಗಿರಲು ಸಾಧ್ಯವೇ ಇಲ್ಲ. ಮಾನಸಿಕ ಮತ್ತು ಆಂತರಂಗಿಕ ಪಕ್ವತೆ ಬರದೆ ನಾವು ಮಾಡುವ ಕೆಲಸದ ಮೇಲೆ ನಮಗೆ ಸಂಪೂರ್ಣ ಹಿಡಿತ ಬರಲು ಸಾಧ್ಯವೇ ಇಲ್ಲ. ಚಂಚಲ ಮನಸ್ಸಿನ ಹುಚ್ಚು ತಿರುಗಾಟದ ಮೂರ್ತರೂಪವೇ ನಮ್ಮ ಸಕಲ ಕಾರ್ಯ ಕೆಲಸಗಳೂ ಸಹ. ಹಾಗಾಗಿ ಪಕ್ವತೆಯೇ ಪರಿಪೂರ್ಣತೆಗೆ ದಾರಿ. ಆ ಪಕ್ವತೆಯನ್ನು ಪಡೆಯಲು ಹಲವಾರು ದಾರಿಗಳುಂಟು. ಯಾವುದಾದರೂ ಒಂದು ದಾರಿಯನ್ನು ಹಿಡಿದುಕೊಂಡು, ಧೀರ್ಗಕಾಲದ ಅಭ್ಯಾಸಮಾಡಿದರೆ, ಆ ಪಕ್ವತೆಯನ್ನು ಸಾಧಿಸಬಹುದು. ಅಂತಹ ಸ್ಥಿತಿಯಲ್ಲಿ ದಾರಿ ಗುರಿ ಗೊತ್ತುಗಳಿಲ್ಲದ ಕಾಗೆಯಂತಾಗದೆ, ದೃಢವಾದ ಮನಸ್ಸಿನಲ್ಲಿ ನಿರ್ಧಿಷ್ಟ ಸಂಕಲ್ಪಗಳೊಂದಿಗೆ ಬಯಸಿದ ಕೆಲಸಗಳನ್ನು ಮಾಡುವ ಕ್ಷಮತೆಯನ್ನು ಪಡೆಯಬಹುದು.

**ಮುಕ್ತಕ – 643** **ಬಾಳ್ಕೆಯಲಿ ನೂರೆಂಟು ತೊಡಕು ತಿಣುಕುಗಳುಂಟು |**
**ಕೇಳ್ಕೆ ಮಾಣ್ಕೆಗಳಿಗವು ಜಗ್ಗವೊಂದಿನಿಸುಂ ||**
**ಗೋಳ್ಕರದರೇನು ಫಲ? ಗುದ್ದಾಡಲೇನು ಫಲ? |**
**ಪಲ್ಕಿರಿದು ತಾಳಿಕೊಳೊ - ಮಂಕುತಿಮ್ಮ ||**

ತಿಣುಕುಗಳುಂಟು=ತಿಣುಕುಗಳು+ಉಂಟು, ಮಾಣ್ಕೆಗಳಿಗವು=ಮಾಣ್ಕೆಗಳಿಗೆ+ಅವು, ಜಗ್ಗವೊಂದಿನಿಸುಂ=ಜಗ್ಗವು+ಒಂದು+ಇನಿಸುಂ, ಗೋಳ್ಕರದರೇನು=ಗೋಳು+ಕರದರೆ+ಏನು, ಗುದ್ದಾಡಲೇನು=ಗುದ್ದಾಡಲು+ಏನು, ಪಲ್ಕಿರಿದು=ಪಲ್+ಕಿರಿದುಬಾಳೆಯಲಿ=ಬಾಳಿನಲಿ, ತಿಣುಕು=ಪರದಾಡು, ಕೇಳ್ಕೆ=ಒಪ್ಪುವುದು, ಮಾಣ್ಕೆ=ಒಪ್ಪದಿರುವುದು, ಪತ್ಕಿರಿದು=ಹಲ್ಲ ಕಿರಿದು.

ನಾವು ಒಪ್ಪಲಿ ಅಥವಾ ಒಪ್ಪದೆ ಇರಲಿ, ನಮ್ಮ ಬಾಳಿನಲ್ಲಿ ನೂರೆಂಟು ಎಡರು ತೊಡರುಗಳು, ಕಷ್ಟ ಆಯಾಸಗಳು ಬರುತ್ತವೆ. ಅವುಗಳನ್ನು ಸಹಿಸಲಾಗದೆ, ದುಃಖಪಡುವುದೋ ಅಥವಾ ವಿಷಮ ಸ್ಥಿತಿಗೆದುರಾಗಿ ಗುದ್ದಾಡುವುದೋ ಮಾಡಿದರೆ ಯಾವ ಪ್ರಯೋಜನವೂ ಇಲ್ಲ. ನಗುನಗುತ್ತಾ ಅದನ್ನು ತಾಳಿಕೊಳ್ಳುವುದ ಬಿಟ್ಟು ನಿನಗೆ ಬೇರೆ ದಾರಿಯೇ ಇಲ್ಲ ಎಂದು ಬದುಕಿನ ಅನಿವಾರ್ಯತೆಯನ್ನು, ಮಾನ್ಯ ಗುಂಡಪ್ಪನವರು ಅರುಹಿದ್ದಾರೆ ನಮಗೆ ಈ ಮುಕ್ತಕದಲ್ಲಿ.

ಪ್ರತಿಯೊಬ್ಬರಿಗೂ ಅವರವರದೇ ಆದ ಪರದಾಟ, ತಿಣುಕಾಟಗಳು ಬಾಳಿನಲ್ಲಿ. ಕಷ್ಟಗಳ ಸರಮಾಲೆಗಳನ್ನು ಧರಿಸಿಯೇ ನಾವು ಈ ಜಗತ್ತಿನಲ್ಲಿ ಜನ್ಮ ತಾಳುತ್ತೇವೆ. ಅವುಗಳನ್ನು ಮತ್ತು ಹೊಸ ಹೊಸದಾಗಿ ತಂದುಕೊಳ್ಳುವ ತಾಪತ್ರಯಗಳನ್ನು ಅನುಭವಿಸುವುದೇ ಕರ್ತವ್ಯ. ಇಲ್ಲಿ ನಾವು 'ನಮಗೆ ಈ ಕಷ್ಟವಿರಲಿ, ಅದು ಬೇಡ, ಇಷ್ಟು ಸಾಕು, ಇದು ಸ್ವಲ್ಪ ಜಾಸ್ತಿಯಾಯಿತು' ಎನ್ನುವಂತಹ ಮಾತುಗಳನ್ನು ಆಡಲು ಯಾವ ಆಸ್ಪದವೂ

ಇಲ್ಲ. 'ಅಯ್ಯೋ ಇಂತಹ ಕಷ್ಟ ಬಂದಿದೆಯಲ್ಲಾ' ಎಂದು ಗೋಳಾಡುವುದಾಗಲೀ ಅಥವಾ 'ನಾನು ಈ ಕಷ್ಟವು ಬರದ ಹಾಗೆ ಹೋರಾಡುತ್ತೇನೆ' ಎಂದು ಹೇಳುವುದಕ್ಕೂ ಆಸ್ಪದವಿಲ್ಲ. ನಮಗೆ ಆಯ್ಕೆ ಮಾಡುವ ಅಧಿಕಾರವೇ ಇಲ್ಲದೆ, ಬಂದದ್ದನ್ನು ಅನುಭವಿಸುವ ಸ್ವಾತಂತ್ರ ಮಾತ್ರ ನಮಗಿದೆ.

ಹಾಗೆ ಅನುಭವಿಸುವಾಗ ಇಷ್ಟವಿರಲಿ ಇಲ್ಲದಿರಲಿ, ಸಾಧ್ಯವಾಗಲಿ ಅಥವಾ ಅಸಾಧ್ಯವಾಗಲಿ, ಅನುಭವಿಸಿಯೇ ತೀರಬೇಕಾದ ಪರಿಸ್ಥಿತಿಯಲ್ಲಿ, ಅತ್ತು ಗೋಳಾಡಿದರೆ ನಮಗೆ ಉಳಿಯುವುದು ನಮ್ಮ ಗೋಳು ಮಾತ್ರ. ಸಂಕಟವನ್ನು ಅನುಭವಿಸುವುದರಿಂದ ಮುಕ್ತಿಯಂತೂ ಸಿಗುವುದಿಲ್ಲ. ಅಷ್ಟೇ ಅಲ್ಲ, ಆ ಕಷ್ಟಗಳ ಸಂಕೋಲೆಗಳ ವಿರುದ್ಧವಾಗಿ ಹೋರಾಡಿ, ಗುದ್ದಾಡಿ, ಅದು ಬರದ ಹಾಗೆ ತಡೆಯುವುದೂ ಸಾಧ್ಯವಿಲ್ಲ. ಆದರೆ, ನಮ್ಮ ದೈಹಿಕ ಮತ್ತು ಮಾನಸಿಕ ಶಕ್ತಿಯನ್ನು, ಆ ಕಷ್ಟಗಳನ್ನು ಧೈರ್ಯವಾಗಿ ಎದುರಿಸಲು ಉಪಯೋಗಿಸಬಹುದು.

ಮಾನ್ಯ ಗುಂಡಪ್ಪನವರು 'ಪಲ್ಕಿರಿದು ತಾಳಿಕೊಳು' ಎನ್ನುತ್ತಾರೆ. ಅಂದರೆ ಕೇವಲ 'ಹಲ್ಕಿರಿ' ಎಂದರ್ಥವಲ್ಲ, ಪಲ್ಕಿರಿದು ಎಂದರೆ ಬಂದ ಕಷ್ಟಗಳನ್ನು ನಿವಾರಿಸಲು ಸಾಧ್ಯವಿಲ್ಲವಾದ್ದರಿಂದ ಅದನ್ನು ನಗುನಗುತ್ತಾ ತಾಳಿಕೊಂಡು ತೀರಿಸಿಬಿಡು, ಎಂದು ಅರ್ಥ. ಬಂದ ಕಷ್ಟದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲವಾಗಿರುವಾಗ ಅದನ್ನು ನಗುನಗುತ್ತಾ ಅನುಭವಿಸಿಬಿಟ್ಟರೆ, ಬದುಕು ಹಿತವಾಗಿರುತ್ತದೆ. ಈ ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ' ಎಂದೂ ಸಹ ಹೇಳಿದ್ದಾರೆ ಮಾನ್ಯ ಗುಂಡಪ್ಪನವರು. ಮನಸ್ಸನ್ನು ಕಲ್ಲಾಗಿಸಿಕೊಂಡು ನಗುಮೊಗವ ಹೊತ್ತು ಬಂದ ಕಷ್ಟಗಳನ್ನು ಅನುಭವಿಸಬೇಕು ಎನ್ನುವುದೇ ಈ ಮುಕ್ತಕದ ಹೂರಣ.

**ಮುಕ್ತಕ – 644**

**ತರಚು ಗಾಯವ ಕೆರೆದು ಹುಣ್ಣನಾಗಿಸುದು ಕಪಿ |**
**ಕೊರತೆಯೊಂದನು ನೀನು ನೆನೆನೆನೆದು ಕೆರಳಿ ||**
**ಧರೆಯೆಲ್ಲವನು ಶಪಿಸಿ ಮನದಿ ನರಕವ ನಿಲಿಸಿ |**
**ನರಳುವುದು ಬದುಕೇನೋ? ಮಂಕುತಿಮ್ಮ ||**

ಹುಣ್ಣನಾಗಿಪುದು=ಹುಣ್ಣನು+ಆಗಿಪುದು, ಕೊರತೆಯೊಂದನು=ಕೊರತೆಯ+ಒಂದನು,

ಮರದಿಂದ ಮರಕ್ಕೆ ಹಾರುವಾಗಲೋ ಅಥವಾ ಯಾವುದೋ ಬೇಲಿಯಲ್ಲಿ ನುಗ್ಗುವಾಗಲೋ ಮುಳ್ಳೋ ಕಲ್ಲೋ ತರಚಿ ಆದ ಒಂದು ಸಾಮಾನ್ಯ ಗಾಯವನ್ನು ಕೆರೆದು, ದೊಡ್ಡ ಹುಣ್ಣಾಗಿಸಿ, ರಣವಾಗಿಸಿ ಅತಿಯಾದ ನೋವಿಂದ ಪರದಾಡುವ 'ಕಪಿ' ಯಂತೆ, ನೀನು ಯಾವುದೋ ಒಂದು ಕೊರತೆಯನ್ನು ಹಿಡಿದುಕೊಂಡು ಮತ್ತೆ ಮತ್ತೆ ಅದನ್ನೇ ನೆನೆದು, ಕನಲಿ ನಿನ್ನ ಕೊರತೆಗೆ ಜಗತ್ತನ್ನೇ ಕಾರಣವನ್ನಾಗಿಸಿ, ಎಲ್ಲರನ್ನೂ ದೂರಿ, ಮನಸ್ಸಿನಲ್ಲಿ ದುಮ್ಮಾನ ತುಂಬಿಕೊಂಡು, ನರಕ ಯಾತನೆಯನ್ನು ಅನುಭವಿಸುವುದೂ ಒಂದು ಬಾಳೇ ಎಂದು ನಮ್ಮೆಲ್ಲರ ಸ್ಥಿತಿಯನ್ನು ಎತ್ತಿತೋರುವ ರೀತಿಯಲ್ಲಿ ಪ್ರಸ್ತಾಪ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

(241)

ಆತ್ಮ ಚಿಕಿತ್ಸೆ 643 . 648 ಕಗ್ಗರಸಧಾರೆ

ನಮಗೆ ಸುಮ್ಮನಿರಲು ಸಾಧ್ಯವೇ ಇಲ್ಲ. ಏನನ್ನಾದರೂ ಮಾಡುತ್ತಲೇ ಇರಬೇಕು. ಹಲವು ಬಾರಿ ನಾವು ಮಾಡಲಿಕ್ಕಾಗದ, ಅನವಶ್ಯಕ, ಪ್ರಯೋಜನಕ್ಕೆ ಬಾರದ ಕೆಲಸಗಳನ್ನು ಮಾಡಲು ಉದ್ಯುಕ್ತರಾಗಿ, ಅದರ ಸುಳಿಯಲ್ಲಿ ಸಿಲುಕಿ, ಪಡಬಾರದ ಕಷ್ಟಗಳನ್ನು ಅನುಭವಿಸುವಾಗ, ನಮ್ಮ ಆ ಸ್ಥಿತಿಗೆ ಇಡೀ ಜಗತ್ತನ್ನೇ ದೂರುವ ದುರಭ್ಯಾಸ ನಮ್ಮದು. ನಮ್ಮ ಅಹಂಕಾರ 'ನಾವೇ ನಮ್ಮ ಅಜ್ಞಾನದಿಂದಲೇ ಆ ಸ್ಥಿತಿಗೆ ಸಿಲುಕಿದ್ದೇವೆ' ಎಂದು ಒಪ್ಪಿಕೊಳ್ಳಲು ಸಿದ್ಧವಿರುವುದಿಲ್ಲ. ನಮ್ಮ ಮನಸ್ಸು ಪ್ರಕ್ಷುಬ್ಧವಾಗಿ, ಯಾತನೆಯನ್ನು ಅನುಭವಿಸುತ್ತದೆ. ಇದು ಬಹುಶಃ ಸರ್ವೇ ಸಾಮಾನ್ಯ ಎಲ್ಲರ ಸ್ಥಿತಿಯೂ ಹೌದು. ಪ್ರಪಂಚದಲ್ಲಿ ಕೇವಲ ಕೆಲವರಿಗೆ ಮಾತ್ರ 'ತಾವು ಏನು ಮಾಡಬೇಕು, ಹೇಗೆ ಮಾಡಬೇಕು, ಎಲ್ಲಿ ನಿಲ್ಲಿಸಬೇಕು' ಎಂಬುವುದರ ಪರಿವೆ ಮತ್ತು ಅರಿವು ಇರುತ್ತದೆ. ಅಂತಹವರು ಧನ್ಯರು.

ಬದುಕಲು ಏನನ್ನಾದರೂ ಮಾಡುತ್ತಲೇ ಇರಬೇಕು. ಹೌದು, ಹಾಗೆಂದು ಏನೇನೋ ಮಾಡಲು ಹೋಗುವುದು ಮೂರ್ಖತನ. ಅರಿಯದೆ, ಮಾಡಲು ಹೋಗಿ 'ಕೆಸರ ಗುಂಡಿಯಲ್ಲಿ ಇಳಿದು ಮೇಲೆದ್ದು ಹೊರಬರಲಾರದ ಸ್ಥಿತಿಯಲ್ಲಿ, ನರಕ ಯಾತನೆಯನ್ನು ಅನುಭವಿಸುತ್ತಾ ಬದುಕುವುದೂ ಒಂದು ಬದುಕೇನಾ? ಎನ್ನುವುದು ಮಾನ್ಯ ಡಿ ವಿ ಜಿ ಯವರ ಪ್ರಶ್ನೆ. ಆದರೆ ಏನು ಮಾಡುವುದು? ನಮಗೆ ಯಾವುದು ಹಿತ, ಯಾವುದು ಅಹಿತ, ಯಾವುದು ಸೂಕ್ತ, ಯಾವುದು ಅಲ್ಲ ಎಂಬುದರ ಅರಿವೇ ನಮಗಿರುವುದಿಲ್ಲ ಮತ್ತು ನಮಗೆ ಏನನ್ನೋ ಮಾಡಬೇಕೆಂಬ ಆಸೆ. ಈ ಆಸೆಗಳೇ ನಮ್ಮನ್ನು ಗಾಯ

ಮಾಡಿಕೊಳ್ಳುವಂತೆ ಮಾಡಿ, ಅತೃಪ್ತ ಮನಸ್ಸು ಮತ್ತಷ್ಟು ಅಸೆ ಪಡುವಂತೆ ಮಾಡಿ, ಆ ಗಾಯವನ್ನು ಕೆರೆದು ಕೆರೆದು ಹುಣ್ಣಾಗಿಸಿ, ವ್ರಣವಾಗಿಸಿ ನಮ್ಮನ್ನು ನರಳಿಸುತ್ತದೆ. ಈ ನರಳಿಕೆಗೆ ಕಾರಣ 'ಕೊರತೆ'ಯ ಭಾವ, ಏನೋ ಕೊರತೆ, ಯಾವುದರದೋ ಕೊರತೆ, ಅದನ್ನು ಬಿಟ್ಟರೆ ತರಚುವುದೂ ತಪ್ಪುವುದು, ಗಾಯವೂ ತಪ್ಪುವುದು. ಇದಕ್ಕೆ ದಾರಿಯೇ 'ತೃಪ್ತಿ. ತೃಪ್ತ ಮನಸ್ಸು ಎಂದೆಂದಿಗೂ ಸಂತೋಷದಿಂದಲೇ ಇರುತ್ತದೆ

ಅಂತಹ ತೃಪ್ತ ಭಾವ ನಮಗೆ ಬರಬೇಕು, ಬಂದರೆ ನಾವು ಆನಂದದಿಂದ ಇರಬಹುದು. ಬಯಸುವುದರ ಬದಲು ಬದುಕುವುದ ಕಲಿಯಬೇಕು. ಸಿಕ್ಕದ್ದರಿಂದ, ಸಿಕ್ಕಿದ್ದಷ್ಟರಿಂದ ತೃಪ್ತರಾದರೆ ಕೊರತೆ ಇರುವುದಿಲ್ಲ. ಆ ಕೊರತೆಯಿಂದ ಉಂಟಾಗುವ ಎಲ್ಲ ತೊಂದರೆಗಳೂ ನಿವಾರಣೆಯಾಗುತ್ತದೆ. ಆ ಸ್ಥಿತಿಗೆ ತಲುಪಲು ನಿರಂತರ ಪ್ರಯತ್ನ, ಸಾಧನೆ, ಅಭ್ಯಾಸ ಬೇಕು. ಅಲ್ಲಿಗೆ ತಲುಪಿದರೆ ನಾವೂ ಸಹ ಆ 'ಆನಂದವನ್ನು' ಪಡೆಯಬಹುದು.

**ಮುಕ್ತಕ – 645**

**ಚಿಂತೆಸಂತಾಪಗಳು ಮನಸಿಗೆ ವಿರೇಚಕವೋ ।**
**ಸಂತಸೋತ್ಸಾಹಗಳೆ ಪಥ್ಯದುಪಚಾರ ॥**
**ಇಂತುಂಮಂತುಂ ನಡೆಯುತಿರುವುದಾತ್ಮ ಚಿಕಿತ್ಸೆ ।**
**ಎಂತಾದೊಡಂತೆ ಸರಿ – ಮಂಕುತಿಮ್ಮ ॥**

ಸಂತಸೋತ್ಸಾಹಗಳೆ=ಸಂತಸ+ಉತ್ಸಾಹಗಳೆ, ಪಥ್ಯದುಪಚಾರ=ಪಥ್ಯದ+ಉಪಚಾರ,
ಇಂತುಂಮಂತುಂ=ಇಂತುಂ +ಅಂತುಂ, ನಡೆಯುತಿರುವುದಾತ್ಮ = ನಡೆಯುತಿರುವುದು+ಆತ್ಮ,
ಎಂತಾದೊಡಂತೆ =ಎಂತೆ+ಆದೊಡೆ+ಅಂತೆ, ವಿರೇಚಕ=ದೇಹದಿಂದ ಕೊಳೆಯನ್ನು ಹೊರಹಾಕುವ ಔಷಧ.
ಪಥ್ಯ=ಆರೋಗ್ಯ ಸುಧಾರಿಸಲು ಪಾಲಿಸುವ ಆಹಾರ ಸೇವನೆಯ ಕ್ರಮ,

ಮನಸ್ಸಿನಲ್ಲಿ ಗೂಡು ಕಟ್ಟಿರುವ ನೋವು ಮತ್ತು ಹಿಂಸೆಗಳನ್ನು ಹೊರಹಾಕಲು ಚಿಂತೆ ಮತ್ತು ದುಃಖಗಳು ಸಹಾಯಮಾಡುತ್ತವೆ ಮತ್ತು ಅಂತಹ ಮನಸ್ಸನ್ನು ತಿಳಿಯಾಗಿಸಲು, ಮದ್ದಿನಂತೆ ಸಂತಸ ಮತ್ತು ಉತ್ಸಾಹಗಳು ಇವೆ. ಹೀಗೆ ದುಃಖವನ್ನು ಹೊರಹಾಕುವುದೋ ಅಥವಾ ಸಂತಸವನ್ನು ಒಳಗೆ ತಂದುಕೊಳ್ಳುವುದೋ, ಹೇಗಾದರೂ ಸರಿ ಎರಡೂ ವಿಧಾನದಲ್ಲಿ ಚಿಕಿತ್ಸೆ ನಡೆದು, ಆತ್ಮಕ್ಕೆ ಉಪಚಾರವಾಗಿ ಆತ್ಮ ಉದ್ಧಾರವಾದರೆ ಸರಿ, ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

'ನಾನು ನನ್ನದು' ಎನ್ನುವುದು ಮಮಕಾರ. 'ನಾನೇ, ನನ್ನದೇ' ಎನ್ನವುದು ಅಹಂಕಾರ, ಈ ಪ್ರಪಂಚದ ಬದುಕಿಗೆ ಮೊದಲನೆಯದು ಅವಶ್ಯಕ, ಆದರೆ 'ಅಹಂಕಾರ' ಒಬ್ಬ ವ್ಯಕ್ತಿಯ ನೆಮ್ಮದಿ ಮತ್ತು ಒಟ್ಟು ಸಮಾಜದ ವಾತಾವರಣವನ್ನು ಕಲುಷಿತಗೊಳಿಸುತ್ತದೆ. ಈ ಅನಾಹುತಕಾರೀ ಅಹಂಕಾರದಿಂದ ಪಡೆಯಬೇಕೆನ್ನುವ ಆಸೆ, ಆಸೆ ಈಡೇರಿದರೆ, ತನ್ನಲ್ಲಿದೆಯಂದು ಗರ್ವ ಮತ್ತು ಮತ್ತಷ್ಟು ಪಡೆಯುವ ಆಸೆ. ಈಡೇರದಿದ್ದರೆ ಕೋಪ, ಕೋಪದಿಂದ ದ್ವೇಷ ಮತ್ತು ಕ್ರೋಧ. ನಮಗಿಂತ ಅಧಿಕ ಪಡೆದವರನ್ನು ಕಂಡು ಅಸೂಯೆ, ಕಡಿಮೆ ಪಡೆದವರನ್ನು ಕಂಡು ಮದ, ಪಡೆದ ವಸ್ತು ತನ್ನಲ್ಲೇ ಇರಬೇಕು ಎನ್ನುವ ಮೋಹ. ಹೀಗೆ ನಾನಾ ಅನಾಹುತಗಳಿಗೆ ದಾರಿ ಅಹಂಕಾರ,

ಇಂತಹ ಅನಾಹುತಗಳ ಕಹಿ ಅನುಭವಗಳನ್ನು ಪಡೆದು, ಎಂದಾದರೂ ಒಂದು ದಿನ 'ಅಯ್ಯೋ! ಇದೆಲ್ಲ ಸರಿಯಿಲ್ಲ, ನಾನು ಬದಲಾಗಬೇಕು' ಎನ್ನುವ ಸಾತ್ವಿಕ ಅಹಂಕಾರ ಮನದಲ್ಲಿ ಹೊಕ್ಕರೆ, ತನ್ನ ಕೃತ್ಯಗಳಿಂದ ದುಃಖಿತನಾಗಿ ಪಶ್ಚಾತ್ತಾಪ ಪಟ್ಟರೆ, ಆ ದುಃಖ, ಪಶ್ಚಾತ್ತಾಪಗಳೇ ನಮ್ಮೊಳಗಿರುವ ಅಹಂಕಾರ ಮತ್ತು ತಜ್ಜನಿತ ಅನಾಹುತಕಾರಿ ವಿಷಯಗಳನ್ನೆಲ್ಲ ನಮ್ಮ ಮನಸ್ಸಿನಿಂದ ಹೊರಹಾಕಲು ಉಪಯುಕ್ತವಾಗುತ್ತದೆ. ಪರ್ಯಾಯವಾಗಿ ನಾವು ಮಾಡುವ ಪೂಜೆ,ಜಪ,ತಪ,ಧ್ಯಾನ ಸೇವೆ ಮತ್ತು ತೋರುವ ಅನುಕಂಪ, ಕರುಣೆ, ಸ್ನೇಹ, ಸೌಹಾರ್ಧತೆಗಳಂತಹ ಸಾತ್ವಿಕ ಕಾರ್ಯಗಳಿಂದ ನಮಗೆ ಉಂಟಾಗುವ ಮನಸ್ಸಂತೋಷವನ್ನು, ಅನುಭವಿಸುತ್ತಾ ಅಂತಹದೇ ಕಾರ್ಯಗಳನ್ನು

ಅಧಿಕಗೊಳಿಸುತ್ತಾ, ಅದರಿಂದ ಸಿಗುವ ಆನಂದರ ಪ್ರಮಾಣವನ್ನು ಹೆಚ್ಚಿಸಿಕೊಳ್ಳುತ್ತಾ ಹೋದರೂ ಸಹ ಆತ್ಮ ಸಂಸ್ಕರಣಗೊಂಡು ಉದ್ಧಾರವಾಗುವ ಸಾಧ್ಯತೆಗಳಿವೆ.

ಮಾನ್ಯ ಗುಂಡಪ್ಪನವರು ನಡೆಯುತಿರುವುದಾತ್ಮ ಚಿಕಿತ್ಸೆ ಎಂತಾದೊಡಂತೆ ಸರಿ' ಎಂದು ಹೇಳುವಂತೆ ಯಾವುದಾದರೂ ರೀತಿಯಲ್ಲಿ ಆತ್ಮೋದ್ಧಾರವಾದರೆ ಸಾಕು. ಹಾಗಾಗಲು ಅಹಂಕಾರ ಕರಗಬೇಕು, ಸದಿಚ್ಚೆ ಉಂಟಾಗಬೇಕು, ಆ ಇಚ್ಚೆಯನ್ನು ಪೂರೈಸಿಕೊಳ್ಳಲು, ಪ್ರಾಮಾಣಿಕ ಪ್ರಯತ್ನ ನಡೆಯಬೇಕು ಮತ್ತು ಆ ಪ್ರಯತ್ನ ನಮ್ಮನ್ನು ಪೂರ್ಣತ್ವದೆಡೆಗೆ ಕೊಂಡುಹೋಗಬೇಕು. ಸತ್ಯದ ಅರಿವಾದಾಗ ಆತ್ಮೋದ್ಧಾರ ತಾನೇ ತಾನಾಗಿ ಆಗುತ್ತದೆ. ಬಹಳ ಕಷ್ಟವಾದ ಮಾರ್ಗ. ಆದರೆ ದೃಢ ನಿಶ್ಚಯ ಮತ್ತು ಸತ್ಪ್ರಯತ್ನವಿದ್ದರೆ ಅಸಾಧ್ಯವಲ್ಲ.





**ಮುಕ್ತಕ – 646**

**ಶೀತವಾತಗಳಾಗೆ ದೇಹಕೌಷಧ ಪಥ್ಯ ।**
**ಚೇತ ಕೆರಳಿದರೆ ಕಣ್ಣು ಕಿವಿಗಳಾತುರದಿಂ ॥**
**ಪ್ರೀತಿಯಿಂದದನೊಲಿಸಿ ನೀತಿಯಲಿ ಶಿಕ್ಷಿಸುವ ।**
**ದಾತುಮದ ನೆಮ್ಮದಿಗೆ – ಮಂಕುತಿಮ್ಮ ॥**

ಶೀತವಾತಗಳಾಗೆ=ಶೀತವಾತಗಳು+ಆಗೆ, ದೇಹಕೌಷಧ= ದೇಹಕೆ+ಔಷಧ
ಕಣ್ಣುಕಿವಿಗಳಾತುರದಿಂ= ಕಣ್ಣುಕಿವಿಗಳ +ಆತುರದಿಂ, ಪ್ರೀತಿಯಿಂದದನೊಲಿಸಿ=ಪ್ರೀತಿಯಿಂದ+ಅದನು+ಒಲಿಸಿ,
ಶಿಕ್ಷಿಸುವದಾತುಮದ= ಶಿಕ್ಷಿಸುವುದು+ಆತುಮದ, ಆತುಮದ= ಆತ್ಮದ ಚೇತ+ ಚೇತನ, ಆತ್ಮ,
ಆತುರದಿಂ=ಆತುರದಿಂದ

ಶೀತವೋ, ವಾತವೋ ಆಗಿ, ದೇಹಾರೋಗ್ಯ ಕೆಟ್ಟರೆ ಪಥ್ಯ ಮಾಡಿ ಸರಿಪಡಿಸಿಕೊಳ್ಳಬಹುದು. ಆದರೆ, ಈ ದೇಹಧಾರಣೆ ಮಾಡಿದ ಚೇತನಕ್ಕೆ ಕಿವಿ ಮತ್ತು ಕಣ್ಣುಗಳ ಮೂಲಕ ರೋಗಾಣುಗಳು ತಗುಲಿ, ಆರೋಗ್ಯ ಕೆಟ್ಟರೆ, ಅದನ್ನು ಪ್ರೀತಿಯಿಂದ ಒಲಿಸಿಕೊಂಡು ನಿಯಮಿತವಾಗಿ ಶಿಕ್ಷಣ ನೀಡಿವುದು ಆತ್ಮಕ್ಕೆ ನೆಮ್ಮದಿಯನ್ನು ತರುತ್ತದೆ ಎಂದು, ಅಂತರಂಗದ ಸಂಸ್ಕರಣದ ಮಾರ್ಗವನ್ನು ತೋರಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಉಣ್ಣುವ ಆಹಾರ ಮತ್ತು ಆಡುವ ಉಸಿರಿನಿಂದ ರೋಗಾಣುಗಳು ಒಳನುಗ್ಗಿ, ನೆಗಡಿ, ಜ್ವರ, ಮೈ ಕೈಕಾಲು ನೋವು ಬಂದರೆ ವೈದ್ಯರಲ್ಲಿ ಹೋಗುತ್ತೇವೆ, ಔಷಧವನ್ನು ತಂದು ತಿನ್ನುತ್ತೇವೆ ಅಥವಾ ಕಷಾಯ ಕುಡಿದು, ಪಥ್ಯದೂಟಮಾಡಿ ಆರೋಗ್ಯ ಸುಧಾರಿಸಿಕೊಳ್ಳುತ್ತೇವೆ. ನೋಡುವ ನೋಟ, ಕೇಳುವ ಶಬ್ದಗಳು ನಮ್ಮ ಮನಸ್ಸಿನ ಆರೋಗ್ಯವನ್ನು, ತನ್ಮೂಲಕ ನಮ್ಮ ಆತ್ಮವನ್ನು ಕಂಗೆಡಿಸುತ್ತದೆ. ಆತ್ಮದ ಗುಣದ ಆರೋಗ್ಯವನ್ನು ಹಾಳುಗೆಡುವುತ್ತದೆ. 'ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ' ಎಂದು ಹೇಳುತ್ತಾ ಆತ್ಮವು ಕೇವಲ ಸಾಕ್ಷೀಭೂತವಾಗಿರುತ್ತದೆ ಮತ್ತು ಅದಕ್ಕೆ ಯಾವುದೇ ಲೇಪನವಾಗುವುದಿಲ್ಲ ಎಂದು ಹೇಳುತ್ತದೆ ಶ್ರೀಮದ್ಭಗವದ್ಗೀತೆ. ಹಾಗಿದ್ದಲ್ಲಿ ಆತ್ಮಕ್ಕೆ ರೋಗವು ಹೇಗೆ ಬರುತ್ತದೆ? ಎಂದರೆ, ಪಂಚೀಕೃತವಾದ ದೇಹಧಾರಣೆ ಮಾಡಿದಮೇಲೆ ಪ್ರಕೃತಿಯ ಗುಣಗಳಾದ 'ಸತ್ವರಜಸ್ತಮೋಗುಣಗಳ ಪ್ರಭಾವದಿಂದ ತನ್ನ ಮೂಲ ಸ್ವರೂಪವನ್ನು ಮರೆತು, ಮನಸ್ಸು, ಬುದ್ಧಿ, ದೇಹಗಳೊಂದಿಗೆ ತನ್ನನ್ನು ತಾನು ಗುರುತಿಸಿಕೊಳ್ಳುತ್ತಾ ಈ ಜಗತ್ತಿನ ಸುಖ ದುಃಖಗಳನ್ನು ಅನುಭವಿಸುತ್ತದೆ, ಆತ್ಮ.

ಆತ್ಮಕ್ಕೆ ಸುಖ ದುಃಖಗಳು ಇಲ್ಲದ ಹಾಗೆ ಮಾನ್ಯ ಗುಂಡಪ್ಪನವರು ಹೇಳುವ 'ಆತುಮದ ನೆಮ್ಮದಿಗೆ' ಏನು ಮಾಡಬೇಕೆಂದರೆ, ಆತ್ಮ ತನ್ನ ಮೂಲ ಅಥವಾ ನೈಜ ಸ್ವರೂಪವನ್ನು ಅರಿತುಕೊಳ್ಳಬೇಕು. ನಾವು ನೋಡುವಾಗ ಮತ್ತು ಕೇಳುವಾಗ ಆ ದೃಶ್ಯಗಳು ಮತ್ತು ಶಬ್ದಗಳು ನಮ್ಮ ಮನಸ್ಸಿನೊಳಗೆ ಎಂತೆಂತಹ ಭಾವನೆಗಳನ್ನು ಕೆರಳಿಸುತ್ತದೆ, ನಾವು ಏನೆಲ್ಲಾ ಯೋಚನೆ ಮಾಡುತ್ತೇವೆ, ಆ ಯೋಚನೆಗಳು ನಮ್ಮ ಅಂತರಂಗವನ್ನು ಎಷ್ಟರಮಟ್ಟಿಗೆ ಕಲಕಿ ರಾಡಿಯಾಗಿಸುತ್ತದೆ ಎನ್ನವುದನ್ನು ಆತ್ಮಾವಲೋಕನ ಮಾಡಿಕೊಂಡರೆ

ಅರ್ಥವಾಗುತ್ತದೆ. ಇಂತಹ ಅನುಭವ ಬಹುಶಃ ಎಲ್ಲರಿಗೂ ಆಗುತ್ತದೆ. ಅದು ಆ ಕ್ಷಣಕ್ಕೆ ಬಂದು ಹೋಗಬಹುದು, ಜ್ಞಾಪಕದ ರೂಪದಲ್ಲಿ ಬಹಳ ಕಾಲ ನಮ್ಮ ಮನದಲ್ಲಿ ಉಳಿಯಬಹುದು ಅಥವಾ ಇನ್ನೂ ಮುಂದೆ ಹೋಗಿ ಆ ಅನುಭವವನ್ನು ಮೂರ್ತರೂಪದಲ್ಲಿ ಪಡೆಯಲು ಪ್ರಯತ್ನಿಸಬಹುದು. ಅಂತೂ ಅದು ನಮ್ಮನ್ನು ಕಲಕುತ್ತದೆ, ಕೆರಳಿಸುತ್ತದೆ, ಮನಸ್ಸು ಬುದ್ಧಿಗಳನ್ನು ಕಲುಷಿತಗೊಳಿಸುತ್ತದೆ.

ನಮ್ಮ ಸನಾತನದಲ್ಲಿರುವ ನಿಯಮಗಳು, ಅತ್ಮ ತನ್ನ ಸ್ವರೂಪವನ್ನು ಅರಿಯಲು ಸಹಾಯ ಮಾಡುತ್ತವೆ. "ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ, ಭದ್ರಂ ಪಶ್ಯೇಮಾಕ್ಷಭಿರ್ ಯಜತ್ರಾಃ" ಎನ್ನುತ್ತದೆ ವೇದ. ಒಳ್ಳೆಯದನ್ನು ನೋಡುವ, ಒಳ್ಳೆಯದನ್ನೇ ಕೇಳುವ ಎಂದು ಹೇಳಿ ಮಾನ್ಯ ಗುಂಡಪ್ಪನವರು ಹೇಳುವ ಕಣ್ಣುಕಿವಿಗಳಾತುರದಿಂದ ಆಗುವ ಅನಾಹುತವನ್ನು ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಸತ್ಸಂಗ, ಸದಾಚಾರ, ಸದಾಹಾರ ಮತ್ತು ಸದ್ವಿಚಾರದ ಸಂಗದಿಂದ ಅನವಶ್ಯಕವಾದ ಅಥವಾ ಹಾನಿಕಾರಕ ವಿಷಯಗಳು ನಮ್ಮೊಳಗೆ ನುಗ್ಗದಂತೆ ತಡೆದು, ಆತ್ಮದ ನೆಮ್ಮದಿಯನ್ನು ತಂದುಕೊಳ್ಳಬಹುದು. ಇಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಮತ್ತು ಇಂದಿನ ಸೆಳೆತಗಳಲ್ಲಿ ಆದು ಕಷ್ಟವಾದರೂ, ನಾವು ತೀವ್ರವಾಗಿ ಪ್ರಯತ್ನಪಟ್ಟರೆ ಅಸಾಧ್ಯವಲ್ಲ.

**ಮುಕ್ತಕ – 647**

**ಮುಕ್ತಿಯೆಂಬುದು ಮನದ ಸಂಸ್ಕೃತಿಯೆ, ಬೇರಲ್ಲ।**
**ರಕ್ತಿ ವಿಪರೀತವದಕಾಗದಿರೆ ಮುಕ್ತಿ ॥**
**ಯುಕ್ತಿಯಿಂ ಕರಣಚೇಷ್ಟಿತವ ತಿದ್ದುತೆ ಶಮಿಪ।**
**ಶಕ್ತಿವಂತನೆ ಮುಕ್ತ – ಮಂಕುತಿಮ್ಮ ॥**

ಮುಕ್ತಿಯೆಂಬುದು= ಮುಕ್ತಿ+ಎಂಬುದು, ವಿಪರೀತವದಕಾಗದಿರೆ=ವಿಪರೀತವು+ಅದಕೆ+ಆಗದಿರೆ,
ರಕ್ತಿ=ಜಗತ್ತಿನೊಂದಿಗಿನ ಅಂಟು ಕರಣಚೇಷ್ಟಿತವ=ಇಂದ್ರಿಯಗಳ ಚೇಷ್ಟೆಯನ್ನು, ಶಮಿಪ=ಶ್ರಮಿಸುವ,
ಪ್ರಯತ್ನಿಸುವ

ಮುಕ್ತಿಯೆಂಬುದು ಕೇವಲ ಮನಸ್ಸಿನ ಒಂದು ಭಾವವಷ್ಟೆ, ಮುಕ್ತಿಯೆಂದರೆ ಈ ಜಗತ್ತಿನಿಂದ ಮುಕ್ತಿಯೆಂದಲ್ಲ. ಜಗತ್ತಿನೊಂದಿಗೆ ರಕ್ತಿ ಅಂದರೆ ಅಂಟು ಅಧಿಕವಾಗದಿದ್ದರೆ ಅಥವಾ ಅಂಟಿ ಅಂಟದ ಹಾಗೆ ಜೀವಿಸಲಾದರೆ ಅದೇ ಮುಕ್ತಿ

ಯುಕ್ತಿಯನ್ನು ಉಪಯೋಗಿಸಿ, ಇಂದ್ರಿಯಗಳನ್ನು ನಿಯಂತ್ರಿಸುವುದಕ್ಕೆ ಪ್ರಯತ್ನಪಡುತ್ತಾ, ಮತ್ತು ಅದರ ಮೂಲಕ ಆತ್ಮ ಸಂಸ್ಕಾರಗೊಳ್ಳಲು ಪೂರಕವಾದ ಕೆಲಸ ಮಾಡಲು, ದೈಹಿಕ ಮತ್ತು ಮಾನಸಿಕ ಶಕ್ತಿಯನ್ನು ವ್ಯಯಿಸುವವನೇ ಮುಕ್ತ ಎಂದು ಮುಕ್ತಿಗಾಗಿ ನಾವು ಮಾಡಬೇಕಾದ ಪ್ರಯತ್ನವನ್ನು ವಿಶಧೀಕರಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

(245)

ಆತ್ಮ ಚಿಕಿತ್ಸೆ 643 -648 ಕಗ್ಗರಸಧಾರೆ

'ಮುಕ್ತಿ'ಗೆ ವಿರುದ್ಧ ಪದ 'ಬಂಧನ', ನಾವೆಲ್ಲಾ ಒಂದಲ್ಲ ಒಂದು ರೀತಿಯಲ್ಲಿ ಈ ಜಗತ್ತಿನ ವಸ್ತು, ವಿಷಯ, ಮತ್ತು ವ್ಯಕ್ತಿಗಳೊಡನೆ ಈ ಬಂಧನದಲ್ಲಿ ಇರುತ್ತೇವೆ. ವ್ಯಾವಹಾರಿಕ, ಭಾವನಾತ್ಮಕ, ಔಪಚಾರಿಕ, ಬೌದ್ಧಿಕ, ಪಾರಮಾರ್ಥಿಕ, ಸಾಂಸಾರಿಕ ಮುಂತಾದ ರೀತಿಯಲ್ಲಿ ನಾವು ಬಂಧನಕ್ಕೊಳಗಾಗಿದ್ದೇವೆ. ಅಲ್ಲವೇ? ಯಾವುದೇ ರೀತಿಯ ಬಂಧನಕ್ಕೊಳಗಾಗದೆ ಇರುವ ವ್ಯಕ್ತಿ ಈ ಜಗತ್ತಿನಲ್ಲಿ ನಮಗೆ ಕಾಣಸಿಗುವುದು ಬಹಳ ವಿರಳ. ಹೀಗೆ ಜಗತ್ತಿನಲ್ಲಿನ ಸಂಬಂಧದ ನಂಟಿನಿಂದ ಮತ್ತು ಅಂಟಿನಿಂದ ಬಿಡುಗಡೆ ಹೊಂದಿದರೆ ಆ ಸ್ಥಿತಿಯನ್ನು ಮುಕ್ತ ಸ್ಥಿತಿ ಎನ್ನುತ್ತಾರೆ. ರಕ್ತಿಯಿಂದ ಇದ್ದರೆ ಜಂಜಾಟ, ಪರದಾಟಗಳಿಗೆ ಒಳಗಾಗಿ ಮನಸ್ಸು ಬುದ್ಧಿಗಳು ಸೊರಗುತ್ತವೆ. ಅದ್ದರಿಂದ ಆತ್ಮ ಸೊರಗುತ್ತದೆ.

'ರಕ್ತಿ'ಯೆಂದರೆ ಈ ಜಗತ್ತಿನೊಂದಿಗೆ ಗಾಢವಾದ ನಂಟನ್ನು ಇಟ್ಟುಕೊಳ್ಳುವುದು. ಇದಕ್ಕೆ ವಿರುದ್ಧ ಪದವೇ "ವಿರಕ್ತಿ. ರಕ್ತಿಯಿಂದ ಇದ್ದರೆ ಏನು ಸಮಸ್ಯೆ? ಜಗತ್ತಿನ ಎಲ್ಲರೂ 'ವಿರಕ್ತರಾಗಿಬಿಟ್ಟರೆ ಈ ಜಗತ್ತಿನ ಗತಿಯೇನು? ಎಂದರೆ, ಅಂತಹ ಭಯವೇನೂ ಇಲ್ಲ. ಏಕೆಂದರೆ ಮನುಷ್ಯ ಪ್ರಾಣಿಯೊಬ್ಬನೇ ಈ ವಿರಕ್ತಿ ಗೆ ಪ್ರಯತ್ನವನ್ನು ಮಾಡುವುದು. ಹಾಗೆ ಪ್ರಯತ್ನಪಡುವವರು ಬಹುಶಃ ಲಕ್ಷಕ್ಕೆ 10 ಜನ. ಆ ಹತ್ತು ಜನರಲ್ಲಿ ಇಬ್ಬರೋ ಮೂವರೋ ತಮ್ಮ ಪ್ರಯತ್ನವನ್ನು ಮುಂದುವರೆಸುತ್ತಾರೆ. ಆದರೆ ಅದರಲ್ಲಿ ಜಯಗಳಿಸುವುದು ಬಹುಶಃ ಕೇವಲ ಒಬ್ಬ. ಹಾಗಾಗಿಯೇ ನಮಗೆ ಮುಕ್ತರು ಕಾಣಿಸುವುದಿಲ್ಲ, ಹಾಗೆ ಮುಕ್ತರಿದ್ದರೂ ಯಾರೂ 'ನಾನು ಮುಕ್ತ' ಎಂದು ಬೋರ್ಡ್ ಹಾಕಿಕೊಂಡು ತಿರುಗುವುದಿಲ್ಲ. ಆ

ಮುಕ್ತ ಸ್ಥಿತಿಯಲ್ಲಿ ತಮ್ಮೊಳಗೆ ತಾವೇ ಆನಂದದಿಂದ ಇರುತ್ತಾರೆ. ತಾವು ಮುಕ್ತರೆಂದು ತೋರಿಸಿಕೊಳ್ಳುವ ಬಂಧನಕ್ಕೂ ಒಳಗಾಗುವುದಿಲ್ಲ ಅವರು. ಮುಕ್ತ ಸ್ಥಿತಿಯಲ್ಲಿ ಜಗತ್ತಿನಲ್ಲಿ ಇದ್ದರೂ ಜಗತ್ತಿನ ಯಾವುದೇ ವಸ್ತು, ವಿಷಯ, ವ್ಯಕ್ತಿಗೆ ಅಂಟಿಕೊಳ್ಳದೆ ತಾವರೆ ಎಲೆಯಮೇಲಿನ ನೀರ ಹನಿಯಂತೆ ಬದುಕುವುದೇ ವಿರಕ್ತಿ, "ನ ಕರ್ಮಣಾ, ನ ಪ್ರಜಯಾ,ಧನೇನ 'ತ್ಯಾಗೇನೈಕೇ' ಅಮೃತತ್ವ ಮಾನಶು:" ಎನ್ನುತ್ತದೆ ವೇದ. ತ್ಯಾಗದಿಂದ ಮಾತ್ರ ಅಮೃತತ್ವ, ತ್ಯಾಗವೆಂದರೆ ತ್ಯಜಿಸಿ ಬಿಡುವುದು. ಬದುಕಿರುವ ತನಕ ಬಂಧನ ಹೋಗಲು ಸಾಧ್ಯವೇ ಇಲ್ಲ. ಆ 'ಬಂಧನದ' ಭಾವವನ್ನು ತ್ಯಜಿಸಿದರೆ ಅದೇ ಮುಕ್ತಿ, ಈ ಜಗತ್ತಿನೊಂದಿಗಿನ ನಂಟನ್ನು ಬಿಡಿಸಿಕೊಳ್ಳಲು ಮಾನ್ಯ ಗುಂಡಪ್ಪನವರು 'ಯುಕ್ತಿಯಿಂ ಕರಣಚೇಷ್ಟಿತವ ತಿದ್ದುತೆ ಶಮಿಪ' ಎಂದು ಹೇಳುವಂತೆ, ಬಂಧನದಿಂದ ಮುಕ್ತನಾಗಬೇಕು ಎನ್ನುವ ಇಚ್ಛೆಯಿಂದ, ಬಹಳ ಸಮಯದ ಸಾಧನೆಯಿಂದ, ಇಂದ್ರಿಯ ನಿಗ್ರಹವನ್ನು ಸಾಧಿಸಿದರೆ, ಬಂಧನದ ಭಾವದಿಂದ ಮುಕ್ತರಾಗಬಹುದು. ಅದೇ ಮುಕ್ತಿ ಎನ್ನಬಹುದು. ಬಹಳ ಕಷ್ಟ. ಆದರೆ ಪ್ರಯತ್ನದಿಂದ ಸಾಧ್ಯ.

**ಮುಕ್ತಕ – 648**

**ತರಿದುಬಿಡು, ತೊರೆದುಬಿಡು, ತೊಡೆದುಬಿಡು ನೆನಹಿಂದ |**
**ಕರೆಕರೆಯ ಬೇರುಗಳ, ಮನದ ಗಂಟುಗಳ ||**
**ಉರಕೆ ಸೊಗಸನಿಸಿದಾ ಪ್ರೀತಿಹಾರಮುಮ್ಮೊರ್ಮೆ |**
**ಉರುಳಪ್ಪುದಾತ್ಮಕ್ಕೆ - ಮಂಕುತಿಮ್ಮ ||**

ಸೊಗಸೆನಿಸಿದಾ=ಸೊಗಸು+ಎನಿಸಿದಾ, ಪ್ರೀತಿಹಾರಮುನ್ನೊರ್ಮೆ=ಪ್ರೀತಿ+ಹಾರಮುಂ+ಒರ್ಮೆ,
ಉರುಳಪ್ಪುದಾತ್ಮಕ್ಕೆ= ಉರುಳು+ಅಪ್ಪುದು+ಆತ್ಮಕ್ಕೆ,
ನೆನಹಿಂದ=ನೆನಪಿಂದ, ಕರೆಕರೆಯ=ಮುಜುಗರದ, ಉರಕೆ=ಹೃದಯಕ್ಕೆ, ಒರ್ಮೆ=ಒಮ್ಮೊಮ್ಮೆ, ಉರುಳು=
ನೇಣು, ಅಪ್ಪುದು=ಆಗುವುದು

ಅಂತರಾತ್ಮಕ್ಕೆ ಮುಜುಗರ ಮಾಡುವಂತಹ ನೆನಪಿನ ಬೇರುಗಳನ್ನು ಮತ್ತು ಗಂಟುಗಳನ್ನು ಅಂತರಾಳದಿಂದ ಕತ್ತರಿಸಿಬಿಡು, ತೊರೆದುಬಿಡು, ಅಳಿಸಿಬಿಡು. ಏಕೆಂದರೆ ಹೃದಯಕ್ಕೆ ಹಿತವೆನಿಸುವ ಪ್ರೀತಿ ಪ್ರೇಮಗಳ ಮಾಲೆಯು, ಆತ್ಮಕ್ಕೆ ಕೆಲವು ಬಾರಿ ನೇಣಿನಂತೆ ಆಗುವುದು ಎಂದು, ಗತವನ್ನು ನೆನೆಯುವ, ಆ ನೆನಪಿನಲ್ಲಿ ಹಿಂಸೆಯನ್ನನುಭವಿಸುವ ನಮ್ಮ ಬದುಕಿನ ವಿಚಾರವನ್ನು ತಿಳಿಗೊಳಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಭೃಗು ಮಹರ್ಷಿಯ ಮಗ ವಾರುಣಿ, ಬ್ರಹ್ಮವನ್ನು ಅರಿಯಲು ತಂದೆಯ ಆದೇಶದಂತೆ ತಪಸ್ಸನ್ನು ಮಾಡಿ ಅನ್ನ, ಪ್ರಾಣ, ಮನಸ್ಸು, ವಿಜ್ಞಾನಗಳ ಹಂತವನ್ನು ದಾಟಿ 'ಆನಂದ'ದಲ್ಲಿ ನಿಲ್ಲುತ್ತಾನೆ. ಅಲ್ಲಿ "ಆನಂದೋ ಎಂದು ಹೇಳುತ್ತಾನೆ. ಬ್ರಹ್ಮತಿವ್ಯಜಾನಾತ್" ಎನ್ನುತ್ತಾನೆ. ಎಂದರೆ 'ಆನಂದವೇ ಬ್ರಹ್ಮ ಎಂದು ಅರಿತೆ' ತೈತ್ತರೀಯೋಪನಿಷತ್ತಿನ ಭೃಗುವಲ್ಲಿ'ಯಲ್ಲಿ. ಪರಬ್ರಹ್ಮದ ಸ್ವರೂಪವಾದ ಆತ್ಮದ ನಿಜವಾದ ಸ್ವರೂಪ 'ಆನಂದ' ಆದರೆ ತ್ರಿಗುಣಗಳ ಪ್ರಭಾವದಿಂದ ಆತ್ಮ. ತನ್ನನ್ನು ತಾನು ಈ ದೇಹ ಮನಸ್ಸು ಬುದ್ಧಿಗಳೊಡನೆ ಗುರುತಿಸಿಕೊಂಡು ಹಿಂಸೆಯನ್ನು ಅನುಭವಿಸುತ್ತದೆ. ಬದುಕಿನಲ್ಲಿ ಆತ್ಮ ಸೊರಗುವುದಕ್ಕೆ ಯತೇಚ್ಚವಾಗಿ ಸಾಮಗ್ರಿಗಳುಂಟು. ಪ್ರೀತಿ ಪ್ರೇಮಗಳು, ದ್ವೇಷಾಸೂಯೆಗಳು, ಬಂಧ ಅನುಬಂಧಗಳು, ಮೋಹ ವ್ಯಾಮೋಹಗಳು ಎಲ್ಲವೂ ಆತ್ಮಕ್ಕೆ ನೇಣು ಹಾಕಿ ಹಿಂಸಿಸುವುದಕ್ಕೆ ಕಾತರದಿಂದ ಕಾಯುತ್ತಿರುತ್ತವೆ.

ಅವುಗಳನ್ನು ತೊರೆ, ಕಡಿದುಬಿಡು, ಮನಸ್ಸಿನಿಂದ ಅಳಿಸಿ ಹಾಕು ಎನ್ನುತ್ತಾರೆ ಮಾನ್ಯ ಗುಂಡಪ್ಪನವರು. ಇವೆಲ್ಲ ಮನಸ್ಸಿಗೆ, ಹೃದಯಕ್ಕೆ ಸಂತೋಷವನ್ನು ನೀಡುತ್ತವೆಯಾದರೂ, ಅಂತಿಮವಾಗಿ ಆತ್ಮವನ್ನು ಸೊರಗಿಸುತ್ತವೆ. ಹಾಗಾಗಿ, ಅವುಗಳ ಕೊಂಡಿಯನ್ನು ಕಡಿದುಹಾಕು ಎಂದು ಒಂದು ಆದೇಶವನ್ನು ನೀಡಿದ್ದಾರೆ. "ಎಲ್ಲವನ್ನೂ ಅಳಿಸಿಹಾಕಿಬಿಟ್ಟರೆ ಈ ಬದುಕಿಗೆ ಯಾವ ಅರ್ಥವಿರುತ್ತದೆ" ಎನ್ನುವ ಪ್ರಶ್ನೆ ಸಾಮಾನ್ಯವಾಗಿ ಎಲ್ಲರಲ್ಲೂ ಮೂಡುವುದುಂಟು. ಬದುಕಿನಲ್ಲಿ ಅಂಟು ಇಲ್ಲದೆ ಜೀವಿಸಲು ಅಸಾಧ್ಯ, ಎನ್ನುವ ವಾದವೂ ಉಂಟು. ಆ ರೀತಿಯ ಭಾವ ಕೇವಲ ನಾವು ಈ ಜಗತ್ತಿಗೆ ಮತ್ತು ಈ

ಜಗತ್ತಿನ ಜೀವನಕ್ಕೆ ಅಂಟಿಕೊಂಡಿರುವುದರಿಂದ ಇರುತ್ತದೆ. ಈ ಅಂಟಿನ ಕಾರಣವಾಗಿ ನಾವು ನೋವು ದುಃಖ ಮುಂತಾದ ಹಿಂಸೆಗಳನ್ನು ಅನುಭವಿಸುತ್ತಾ ಇದ್ದರೂ ಸಹ ನಮಗೆ ಅದರ ಕಾರಣವನ್ನು ನೋಡುವ ವಿಧಾನವೂ ಗೊತ್ತಿಲ್ಲ ಮತ್ತು ನೋಡಲು ವ್ಯವಧಾನವೇ ಇರುವುದಿಲ್ಲ. ಹಾಗಾಗಿ ಸತ್ಯವಾಗಲಿ, ಸತ್ವವಾಗಲೀ ನಮಗೆ ಅರ್ಥವಾಗುವುದಿಲ್ಲ.

ಬದುಕಬೇಕು, ಆದರೆ ಬದುಕಿಗೆ ಅಂಟಬಾರದು. ವ್ಯಕ್ತಿ, ವಿಷಯ ಮತ್ತು ವಸ್ತುಗಳ ನಡುವೆ ಇದ್ದರೂ





ಅವುಗಳ ಸಂಪರ್ಕ ಕೇವಲ ಮನಸ್ಸು ಬುದ್ಧಿಗಳಿಗೆ ಸೀಮಿತವಾಗಿರಬೇಕು. ಆತ್ಮ ಕೇವಲ ಸಾಕ್ಷೀ ಭಾವದಿಂದ ಇದ್ದರೆ, ಸತ್ಯದ ಮತ್ತು ಸತ್ವದ ಅರಿವಾಗಿ, ಸಕಲ ಸಂಕಷ್ಟಗಳ ನಡುವೆಯೂ ಆನಂದವಾಗಿರಬಹುದು. ಆದರೆ ತ್ರಿಗುಣ ಪ್ರೇರಿತವಾಗಿ ಆತ್ಮ ತನ್ನನ್ನು ತಾನು ಮರೆತರೆ, ನೋವು, ಹಿಂಸೆ, ಸಂಕಟ ತಪ್ಪಿದ್ದಲ್ಲ.

**ಮುಕ್ತಕ – 649**

**ಜಗವೆನ್ನ ಮುದ್ದಿಸದದೇಕೆಂದು ಕೊರಗದಿರು |**
**ಮಗುವು ನೀಂ ಪೆತ್ತರ್ಗೆ, ಲೋಕಕೆ ಸ್ಪರ್ಧಿ ||**
**ಹೆಗಲಹೊರೆ ಹುಟ್ಟಿದರ್ಗೆಲ್ಲಮಿರುತಿರೆ, ನಿನ್ನ |**
**ರಗಳೆಗಾರಿಗೆ ಬಿಡುವೋ? – ಮಂಕುತಿಮ್ಮ ||**

ಜಗವೆನ್ನ=ಜಗವು+ಎನ್ನ, ಮುದ್ದಿಸದದೇಕೆಂದು=ಮುದ್ದಿಸದು+ಅದೇಕೆ+ಎಂದು, ಹುಟ್ಟಿದರ್ಗೆಲ್ಲಮಿರುತಿರೆ=ಹುಟ್ಟಿದರ್ಗೆಲ್ಲಂ+ಇರುತಿರೆ, ರಗಳೆಗಾರಿಗೆ=ರಗಳೆಗೆ+ಯಾರಿಗೆ, ಪೆತ್ತರ್ಗೆ=ಹೆತ್ತವರಿಗೆ, ಹುಟ್ಟಿದರ್ಗೆಲ್ಲಂ=ಹುಟ್ಟಿದವರಿಗೆಲ್ಲ, ರಗಳೆ=ಚಿಂತೆ.

ಜಗದೊಳಿರುವ ಜನರೆಲ್ಲ ನನ್ನನ್ನು ಪ್ರೀತಿಸಿಬೇಕು ಎಂದು ಅಪೇಕ್ಷೆಪಟ್ಟು, ಅದು ಆಗದಿದ್ದಾಗ ನೀನು ಕೊರಗಬೇಡ. ನಿನ್ನ ಹೆತ್ತವರಿಗೆ ನೀನು ಮಗು, ಆದರೆ ಲೋಕಕ್ಕೆ ಪ್ರತಿಸ್ಪರ್ಧಿ, ಹುಟ್ಟಿದವರಿಗೆಲ್ಲಾ ಅವರವರ ಬಾಳಿನ ಹೊರೆ ಇದ್ದೇ ಇರುತ್ತದೆ. ನಿನ್ನ ಬಗ್ಗೆ ತಲೆಕೆಡಿಸಿಕೊಳ್ಳಲು ಯಾರಿಗೂ ಬಿಡುವಿಲ್ಲ ಎಂದು ಪ್ರತಿಯೊಬ್ಬರೂ ಅವರವರ ಜೀವನದ ಹೊರೆಯನ್ನು ಅವರವರೇ ಹೊರಬೇಕಾದ ಅನಿವಾರ್ಯತೆಯನ್ನು ಸ್ಪಷ್ಟಿಕರಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಸಾಮಾನ್ಯವಾಗಿ ಪ್ರತಿಯೊಬ್ಬರಿಗೂ ಸ್ವ-ಪ್ರೀತಿ, ಸ್ವ-ಪ್ರೇಮ ಅಧಿಕವಾಗೇ ಇರುತ್ತದೆ. ನಾ ಮಾಡಿದ ಕೆಲಸ ಉತ್ತಮ, ಅದನ್ನು ಕಂಡು ಅನ್ಯರು ನನ್ನನ್ನು ಮೆಚ್ಚಬೇಕು, ನನ್ನನ್ನು ಹೊಗಳಬೇಕು, ನನಗೆ ಒದಗಬೇಕು, ನನ್ನನ್ನು ಇಷ್ಟಪಡಬೇಕು ಎಂದು ಅಪೇಕ್ಷೆಪಡುವುದೂ ಸಾಮಾನ್ಯ. ನಮ್ಮ ತಂದೆ ತಾಯಿಗಳಿಗೆ ನಾವು ಮಕ್ಕಳು. ಹೆತ್ತವರಾದ್ದರಿಂದ ನಮ್ಮನ್ನು ಅವರು ಸರ್ವದಾ ಪ್ರೀತಿಸುತ್ತಾರೆ. ನಮ್ಮ ಗುಣ ಮತ್ತು ಅವಗುಣಗಳನ್ನು ಲೆಕ್ಕಿಸದೆ ಪ್ರೀತಿಸುತ್ತಾರೆ. ಹೀಗೆ ಎಲ್ಲ ಮಕ್ಕಳಿಗೂ ಅವರವರ ತಂದೆ ತಾಯಿಯರ ಪ್ರೀತಿ ಪ್ರೇಮಗಳು ಲಭ್ಯವಾಗುತ್ತವೆ. ಎಲ್ಲ ತಂದೆ ತಾಯಂದಿರಿಗೂ ಅವರವರ ಮಕ್ಕಳೇ ಇರುತ್ತಾರೆ ಪ್ರೀತಿ ತೋರಲು.

ಆದರೆ ಲೋಕದಲ್ಲಿ ನಾವು ನಮ್ಮ ಅಸ್ತಿತ್ವಕ್ಕೆ ಅನ್ಯರೊಡನೆ ಹೋರಾಡಬೇಕು, ಸ್ಪರ್ಧೆಮಾಡಬೇಕು. ಬದುಕಿನಲ್ಲಿ ನಮಗೆ ನಮ್ಮ ಹೊರೆ ಇದ್ದ ಹಾಗೆ ಅನ್ಯರಿಗೂ ಅವರವರ ಹೊರೆ ಇದ್ದೇ ಇದೆ, ಯಾರೂ ಯಾರ ಹೊರೆಯನ್ನೂ ಹೊರಲಾಗದು. ನಮ್ಮ ಹೊರೆಯನ್ನು ಬೇರೆ ಯಾರಾದರೂ ಹೊರಲಿ ಎಂದು ಅಪೇಕ್ಷೆಪಡುವುದೂ ಸಹ ಸಾಧುವಲ್ಲ. ನಮ್ಮ ಪೂರ್ವ ಕರ್ಮಾನುಸಾರ ನಾವು ಹೊತ್ತು ತಂದ ಹೊರೆಯನ್ನು,

ಇಲ್ಲಿ ಆಚರಿಸಿದ ಕರ್ಮಗಳ ಹೊರೆಯನ್ನು ನಾವೇ ಹೊತ್ತು ಅನುಭವಿಸಿ ಭಾರ ಕಡಿಮೆ ಮಾಡಿಕೊಳ್ಳಬೇಕು. ಇದು, ಎಲ್ಲರಿಗೂ ಅನ್ವಯವಾಗುತ್ತದೆಯಾದ್ದರಿಂದ, ಯಾರೂ, ಮತ್ತ್ಯಾರಿಗೂ ತಮ್ಮ ಹೊರೆಯನ್ನು ವರ್ಗಾವಣೆಮಾಡಲಾಗುವುದಿಲ್ಲ, ಎಲ್ಲರಿಗೂ ಅವರವರ ಹೊರೆಯಿರುತ್ತದೆಯಾದ್ದರಿಂದ ಅನ್ಯರ ಭಾರವನ್ನು ಯಾರೂ ತೆಗೆದುಕೊಳ್ಳಲೂ ಆಗುವುದಿಲ್ಲ. ಹಾಗೆ ತೆಗೆದುಕೊಳ್ಳಲಾದರೆ ಅವರೇ ಪುಣ್ಯವಂತರು.

ನಾವು ಅನ್ಯರು ನಮ್ಮ ಹೊರೆಯನ್ನು ಹೊರಲೆಂದು ಅಪೇಕ್ಷೆಪಟ್ಟರೂ, ಅವರವರ ಹೊರೆಯನ್ನು ಹೊರುವುದರಲ್ಲಿ ಎಲ್ಲರೂ ವ್ಯಸ್ತರಾಗಿರುವಾಗ, ಯಾರಿಗೂ ನಮ್ಮ ರಗಳೆಯನ್ನು ಕೇಳಲು ಸಮಯವಿರುವುದಿಲ್ಲ. ಹೆಗಲ ಹೊರೆಯಾದ ಸಂಚಿತ ಮತ್ತು ಆರ್ಜಿತ ಕರ್ಮಗಳನ್ನು ನಾವೇ ಹೊರಬೇಕು, ಹೊತ್ತು ಅನುಭವಿಸಬೇಕು, ಅನುಭವಿಸಿಯೇ ತೀರಿಸಬೇಕು ಎನ್ನುವುದು ಈ ಮುಕ್ತಕದ ಹೂರಣ.

**ಮುಕ್ತಕ – 650**

**ರಾಗಿಮುದ್ದೆಯ ನುಂಗಿ ನಲಿದು ಬಾಳ್ವಾತಂಗೆ |**
**ಕಾಗೆ ಕದ್ದುಣ್ಣುವ ಭಕ್ಷ್ಯ ವ ಕಂಡು ಕರುಬೆ? ||**
**ನೀಗುವುದು ಹಸಿವನ್ ಉಣಿಸೆಂತಪ್ಪುದಾದೊಡಂ |**
**ಬಾಗಿಸದಿರಾತ್ಮವನು - ಮಂಕುತಿಮ್ಮ ||**

ಬಾಳ್ವಾತಂಗೆ =ಬಾಳುವ+ಆತಂಗೆ, ಕದ್ದುಣ್ಣುವ=ಕದ್ದು+ಉಣ್ಣುವ,
ಉಣಿಸೆಂತಪ್ಪುದಾದೊಡಂ= ಉಣಿಸು+ಎಂತಪ್ಪುದು+ಆದೊಡಂ,
ಬಾಗಿಸದಿರಾತ್ಮವನು=ಬಾಗಿಸದೆ+ಇರು+ಆತ್ಮವನು ಕರುಬೆ=ಅಸೂಯೆಪಡುವುದು, ಉಣಿಸು=ಆಹಾರ,
ಬಾಗಿಸದೆ=ದೈನ್ಯತೆ ತೋರದೆ.

ರಾಗಿ ಮುದ್ದೆಯ ತಿಂದು ಸಂತುಷ್ಟನಾಗಿ ನಲಿಯುವವನು, ಕಾಗೆ ಎಲ್ಲಿಂದಲೋ ಕದ್ದು ತಂದು ಉಣ್ಣುವ ಮೃಷ್ಟಾನ್ನ ಭೋಜನವನ್ನು ನೋಡಿ ಕರುಬುತ್ತಾನೆಯೇ? ಆಹಾರ ಎಂತಹದ್ದಾದರೂ ಅದು ಹಸಿವನ್ನು ಇಂಗಿಸುವುದು. ಅದನ್ನು ಕಷ್ಟಪಟ್ಟು ದುಡಿದು ಸಂಪಾದಿಸುವುದೇ ಮುಖ್ಯ. ಅದನ್ನು ಬಿಟ್ಟು ಮೃಷ್ಟಾನ್ನವನ್ನು ಪಡೆಯಲು

ಆತ್ಮಾಭಿಮಾನವನ್ನು ಬಿಡಬೇಡ ಎಂದು, ಬುದ್ಧಿವಾದದ ಕಿವಿಮಾತನ್ನು ನಮಗೆ ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಬದುಕಲು ಪ್ರಾಣವೆಷ್ಟು ಅವಶ್ಯವೋ, ದೇಹ, ಮನಸ್ಸು, ಬುದ್ಧಿಗಳು ಎಷ್ಟು ಅವಶ್ಯವೋ, ಈ ದೇಹವನ್ನು ಧಾರಣೆ ಮಾಡಲು ಆಹಾರವೂ ಅಷ್ಟೇ ಅವಶ್ಯಕ. ನಾವು ಸೇವಿಸುವ ಆಹಾರವು ನಮ್ಮ ದೇಹದ ಜಠರದಲ್ಲಿರುವ 'ವೈಶ್ವಾನರ' ರೂಪಿಯಾದ ಜಠರಾಗ್ನಿಗೆ ನಾವು ನೀಡುವ ಹವಿಸ್ಸು. ಹಾಗೆ ನೀಡಿದ ಹವಿಸ್ಸನ್ನು ಸ್ವೀಕರಿಸಿದ ಆ ಅಗ್ನಿಯು ದೇವತೆಗಳ ಮೂಲಕ ನಮ್ಮ ದೇಹಕ್ಕೆ ಶಕ್ತಿಯನ್ನು ನೀಡುತ್ತದೆ. ಹೀಗೆ ನಾವು ಮಾಡುವ ಊಟದ ಪ್ರಕ್ರಿಯೆಯನ್ನು ಒಂದು ಯಜ್ಞಕ್ಕೆ ಹೋಲಿಸುತ್ತಾರೆ ನಮ್ಮ ಸನಾತನರು. ಇಲ್ಲಿ 'ನಾನು' ತಿನ್ನುತ್ತಿದ್ದೇನೆ





ಎನ್ನುವ ಅಹಂಭಾವವನ್ನು ಬಿಡುವುದೇ ಉದ್ದೇಶ. ಹಾಗೆ ಸೇವಿಸುವ ಆಹಾರ ಸಾಧಾರಣ ಆಹಾರವಾಗಲಿ, ಮೃಷ್ಟಾನ್ನವಾಗಲಿ, ಈ ದೇಹವು ಸ್ವೀಕರಿಸುತ್ತದೆ ಮತ್ತು ನಮಗೆ ಶಕ್ತಿಯನ್ನು ನೀಡುತ್ತದೆ.

ಅಂತಹ ಆಹಾರವನ್ನು ನಾವು ಕಷ್ಟಪಟ್ಟು ಸಂಪಾದಿಸಿದ ದ್ರವ್ಯದಿಂದ ಪಡೆದರೆ, ಒಂದು ಆತ್ಮ ತೃಪ್ತಿಯಿರುತ್ತದೆ. ಇಲ್ಲಿ ಮಾನ್ಯ ಗುಂಡಪ್ಪನವರು ಕಾಗೆಯ ದೃಷ್ಟಾಂತವನ್ನು ಕೊಡುತ್ತಾರೆ, ಹೌದು, ಕಾಗೆಗೆ ಯಾರ ಮನೆಯದೋ ಸಿಗುತ್ತದೆ. ಆದರೆ ಮನುಷ್ಯರಾದ ನಮಗೂ ಹಾಗೆ ಸಿಗಬಹುದು. ಆದರೆ ಅದು ಹಂಗಿನ ಅನ್ನವಾಗುತ್ತದೆ. ಅಂತಹ ಅನ್ನವನ್ನು ಪಡೆಯುವಾಗ ಆತ್ಮ ಸೊರಗುತ್ತದೆ. ಹೇಗೆ ತಿಂದರೂ ಯಾವರೀತಿಯಿಂದ ಪಡೆದ್ದಾದರೂ ಆಹಾರ ಹಸಿವನ್ನು ನೀಗಿಸುತ್ತದೆಯಾದರೂ, ಆತ್ಮಾಭಿಮಾನವನ್ನು ಕೊಂದುಕೊಂಡು ಪರಾನ್ನ ತಿನ್ನುವುದು ಹೇಯ ಎನ್ನುತ್ತಾರೆ ಗುಂಡಪ್ಪನವರು

ಹಾಗಾಗಿ ಪರಾವಲಂಬಿಗಳಾಗದೆ, ಸ್ವಾಭಿಮಾನದಿಂದ ಆತ್ಮವನ್ನು 'ಬಾಗಿಸದೆ' ನಮ್ಮ ಆಹಾರವನ್ನು ನಾವೇ ಸಂಪಾದಿಸಿಕೊಂಡರೆ, ಒಂದು ತೃಪ್ತಿ ಮತ್ತು ಸಮಾಧಾನವಿರುತ್ತದೆ. ಧೈರ್ಯದಿಂದ ತಲೆಯೆತ್ತಿ ಬಾಳಬಹುದು. ಎಂದಿಗೂ ಪರರ ಮೇಲೆ ಆಧಾರಪಡದಂತಹ ಬದುಕು ನಮ್ಮದಾದರೆ, ಅದಕ್ಕಿಂತ ಬೇರೇನು ಭಾಗ್ಯ ಬೇಕು
ಹೇಳಿ ನೋಡುವಾ?

**ಮುಕ್ತಕ – 651** **ಮೌನದಿಂದಂಬಲಿಯನುಂಡು ತಣಿಯವ ಮಾನಿ |**
**ಶ್ವಾನನುಣುವೆಂಜಲೋಗರಕೆ ಕರುಬುವನೆ? ||**
**ಜ್ಞಾನಿ ನಡೆವಂ ವಿಷಯ ತರತಮವಿವೇಕದಲ್ಲಿ |**
**ಮಾಣು ನೀಂ ತಲ್ಲಣವ – ಮಂಕುತಿಮ್ಮ ||**

ಮೌನದಿಂದಂಬಲಿಯನುಂಡು=ಮೌನದಿಂದ+ಅಂಬಲಿಯನು+ಉಂಡು,
ಶ್ವಾನನುಣುವೆಂಜಲೋಗರಕೆ=ಶ್ವಾನನು+ಉಣುವ+ಎಂಜಲ+ಓಗರಕೆ, ಮಾನಿ=ಸ್ವಾಭಿಮಾನಿ

ಮೌನದಿಂದ ಗಂಜಿಯನ್ನು ಕುಡಿದು ಸಂತುಷ್ಟಗೊಳ್ಳುವ ಮಾನಧನನಾದ ವ್ಯಕ್ತಿ, ಬೀದಿಯಲ್ಲಿ ಯಾರೋ ಬಿಸುಟ ಎಂಜಲೆಲೆಯಲ್ಲಿ ಮೃಷ್ಟಾನ್ನ ಭೋಜನವ ತಿನ್ನುವ ನಾಯಿಯನ್ನು ಕಂಡು ಕರುಬುವನೇನು? ಹೇಗೆ ಸರಿ ತಪ್ಪುಗಳನ್ನು ಅರಿತ ಜ್ಞಾನಿ ಬದುಕಿನಲ್ಲಿ ನಡೆದುಕೊಳ್ಳುತ್ತಾನೋ, ಹಾಗೆಯೇ ನೀನೂ ದೃಢಮನಸ್ಕನಾಗಿ, ತಲ್ಲಣವ ತೊರೆದು, ನಡೆದುಕೋ ಎಂದು ನಮಗುಪದೇಶವನ್ನು ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮನಸ್ಸು ಬಹಳ ಚಂಚಲ. "ದೃಷ್ಯಮಾಣೆ ಭವೇತ್ ಪ್ರೀತಿಃ" ಎನ್ನುವಂತೆ, ಕಣ್ಣಿನಿಂದ ಕಂಡದ್ದನ್ನೆಲ್ಲಾ

ಮನಸ್ಸು ಬಯಸುತ್ತದೆ. ನಮಗದು ಅವಶ್ಯವೋ ಅಲ್ಲವೋ ಎಂಬ ವಿವೇಚನೆಗೆ ನಮ್ಮ 'ಬೇಕುಗಳನ್ನು ಒಳಪಡಿಸದೆ ಬಯಸುತ್ತಾ ಇರುತ್ತದೆ. ಹಾಗೆ ಬಯಸಿದ್ದನ್ನೆಲ್ಲಾ ಪಡೆಯುವ ಪ್ರಯತ್ನ ಮಾಡದೆ ಇದ್ದರೂ, "ಬಯಕೆ'ಯೇ ಸಾಕು, ನಮ್ಮ ಮಾನಸಿಕ ನೆಮ್ಮದಿಯನ್ನು ಹಾಳುಮಾಡಲು ಅಲ್ಲವೇ? ಬಡತನಕೆ ಉಂಬುವ ಚಿಂತೆ, ಉಂಬುವುದಾದರೆ ಉಡುವ ಚಿಂತೆ, ಉಡುವುದಾದರೆ ಮನೆಯ ಚಿಂತೆ, ಮನೆಯದಾದರೆ ಮಡದಿಯ ಚಿಂತೆ" ಎನ್ನುತ್ತಾರೆ ನಮ್ಮ ಶಿವ ಶರಣರು. ತನ್ನ ಸ್ಥಿತಿಯನ್ನು ತಾನೇ ಪ್ರಯತ್ನಪೂರ್ವಕವಾಗಿ, ಬಯಕೆಗಳನ್ನು ತೀರಿಸಿಕೊಳ್ಳುವ ಮೂಲಕ, ಸುಧಾರಿಸಿಕೊಳ್ಳುವ ಪ್ರಯತ್ನ ಮನುಷ್ಯರಲ್ಲಿ ನಿರಂತರವಾಗಿ ಸಾಗಿರುತ್ತದೆ. ಇದು ಸಹಜ.

"ಮೌನದಿಂದಂಬಲಿಯನುಂಡು ತಣಿಯವ ಮಾನಿ" ಎಂದು ಮಾನ್ಯ ಗುಂಡಪ್ಪನವರು ಹೇಳುವಂತೆ, ಮನಸ್ಸಿನಲ್ಲಿ ಆಸೆಯುಕ್ಕುತ್ತಿದ್ದರೂ ತನ್ನಲ್ಲಿ ಎನುಂಟೋ ಅದನ್ನೇ ಅನುಭವಿಸುತ್ತಾ ನಿರ್ಲಿಪ್ತನಂತೆ ಇರುವವನು 'ಅಭಾವ ವೈರಾಗಿ' ಅವನಿಗೆ ಸಿಗುವುದಿಲ್ಲ. ಹಾಗಾಗಿ ಅವನಿಗದು ಬೇಕಾಗಿಲ್ಲ. ಆಸೆಯಾದರೂ ತನ್ನ ಸ್ವಾಭಿಮಾನವನ್ನು ತೊರೆಯದೆ, ಪರರಲ್ಲಿ ಕೈಚಾಚದೆ, ತನ್ನ ಪ್ರಾಮಾಣಿಕ ಪ್ರಯತ್ನದಿಂದ ಸಿಕ್ಕದ್ದನ್ನು ಅನುಭವಿಸಿ ತೃಪ್ತಿಯಿಂದಿರುವವನು ಸ್ವಾಭಿಮಾನಿ. ಕಣ್ಣಲ್ಲಿ ಕಂಡರೂ, ಮನದಲ್ಲಿ ಆಸೆಯುಕ್ಕಿದರೂ, ತಲ್ಲಣಗೊಳ್ಳದೆ ಯುಕ್ತಾಯುಕ್ತಾ ವಿವೇಚನೆಯಿಂದ ಯಾವುದಕ್ಕೆ ಮತ್ತು ಎಷ್ಟು ಆಸೆಪಡಬೇಕೆಂಬುದನ್ನು ಅರಿತು ವರ್ತಿಸುವವನು ಜ್ಞಾನಿ. ಕಣ್ಣಲ್ಲಿ ಕಂಡರೂ ಆಸೆ ಪಡದೆ, ಅದು ಪರರಿಗುಪಯೋಗಕ್ಕೆ ಬಂದರೆ ಚೆನ್ನ ಎಂದು ಭಾವಿಸುವವನು, ಶುದ್ಧ ನಿರ್ಲಿಪ್ತತೆ, ಉದಾತ್ತತೆ ಮತ್ತು ವೈರಾಗ್ಯವನ್ನು ತೋರುವವನು, 'ಯೋಗಿ'.

ಮಾನ್ಯ ಗುಂಡಪ್ಪನವರು ಆ ರೀತಿಯ 'ಯೋಗಿ' ಯಾಗಿದ್ದರು. ಅಂದಿನ ಸರ್ಕಾರವು ಸಮಾಜಕ್ಕೆ ಅವರ ಕೊಡುಗೆಯನ್ನು ಗುರುತಿಸಿ, ಅವರಿಗೆ 500 ರೂಗಳ ಮಾಶಾಸನವನ್ನು ಮಂಜೂರುಮಾಡಿ ಆದೇಶ ಹೊರಡಿಸಿದಾಗ, ಅವರು ಅದನ್ನು ಸ್ವೀಕರಿಸದೆ, ತಾವು ಕಡು ಬಡತನದಲ್ಲಿದ್ದರೂ "ಆ ಹಣವನ್ನು ನನಗಿಂತ ತೀರ ಅವಶ್ಯಕತೆ ಇರುವವರಿಗಾಗಿ ಉಪಯೋಗಿಸಿ" ಎಂದು ಸರ್ಕಾರಕ್ಕೆ ಮರು ಆದೇಶ ನೀಡಿದರಂತೆ. ಅದು ಯೋಗಿಗಳ ಲಕ್ಷಣ. ನಾವೂ ಸಹ ಆತ್ಮಾವಲೋಕನದಿಂದ, ಇಂದಿನ ನಮ್ಮ ಮಾನಸಿಕ ಸ್ಥರವನ್ನು (mental, intellectual and spiritual level or state) ಅರಿತುಕೊಂಡು, ಸಾಧನೆಯಿಂದ ಯುಕ್ತಾಯುಕ್ತ ವಿವೇಚನೆಯನ್ನು ಬೆಳೆಸಿಕೊಂಡು, ನಮ್ಮ ತಲ್ಲಣವನ್ನು ಹೋಗಲಾಡಿಸಿಕೊಳ್ಳಲಾದರೆ ಬದುಕಿನಲ್ಲಿ ಧನ್ಯರೆನಿಸಿಕೊಳ್ಳಬಹುದು. ಅದು ಕೇವಲ ಪ್ರಯತ್ನದಿಂದ ಮಾತ್ರ ಸಾಧ್ಯ.

–

**ಮುಕ್ತಕ – 652** **ಅನ್ನದಾತುರಕಿಂತ ಚಿನ್ನದಾತುರ ತೀಕ್ಷ್ಣ ।**
**ಚಿನ್ನದಾತುರಕಿಂತ ಹೆಣ್ಣುಗಂಡೊಲವು ॥**
**ಮನ್ನಣೆಯದಾಹವೀಯೆಲ್ಲಕುಂ ತೀಕ್ಷ್ಣತಮ ।**
**ತಿನ್ನುವುದದಾತ್ಮವನೆ - ಮಂಕುತಿಮ್ಮ ॥**





ಅನ್ನದಾತುರಕಿಂತ = ಅನ್ನದ+ಆತುರಕಿಂತ, ಚಿನ್ನದಾತುರ=ಚಿನ್ನದಾ+ಆತುರ,
ಹೆಣ್ಣುಗಂಡೊಲವು=ಹೆಣ್ಣು+ಗಂಡ+ಒ ಲವು, ಮನ್ನಣೆಯದಾಹವೀಯೆಲ್ಲಕುಂ=ಮನ್ನಣೆಯ+ದಾಹವು+ಈ+ಎಲ್ಲಕುಂ,
ತಿನ್ನುವುದಾತ್ಮವನೆ=ತಿನ್ನುವುದು+ಆತ್ಮವನೆ,
ಮನ್ನಣೆಯದಾಹ=ಪ್ರಚಾರದ, ಕೀರ್ತಿಯ ದಾಹ

ಅನ್ನವನ್ನು ಪಡೆಯಬೇಕು ಎನ್ನುವ ತೀವ್ರತಮ ಬಯಕೆಗಿಂತ, ಚಿನ್ನದಮೇಲಿನ ಆಸೆಯ ತೀವ್ರತೆ ಹೆಚ್ಚು. ಅದಕ್ಕಿಂತ ತೀವ್ರ ಹೆಣ್ಣುಗಂಡಿನ ಪರಸ್ಪರ ಆಕರ್ಷಣೆಯ ತೀವ್ರತೆ. ಇವೆಲ್ಲಕ್ಕಿಂತ ಮೀರಿದುದು ಮನ್ನಣೆಯ, ಪ್ರಚಾರದ ಆಸೆ. ಈ ಎಲ್ಲ ಆಸೆಗಳು ಆತ್ಮವನ್ನು ಕೊರಗಿಸಿ, ಸೊರಗಿಸಿ, ತಿನ್ನುತ್ತವೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ಬದುಕಿಗೆ ಮೂಲ ಅವಶ್ಯಕತೆ ಆಹಾರ. ಅದನ್ನು ಪಡೆಯಲು ಮನುಷ್ಯ ಹಲವಾರು ಕೆಲಸಗಳನ್ನು ಮಾಡುತ್ತಾನೆ ಮತ್ತು ಕೆಲವರು ಏನನ್ನೂ ಮಾಡದೆಯೇ ಪರಾವಲಂಬಿಗಳಾಗಿ ಉಣಿಸನ್ನು ಪಡೆಯುತ್ತಾರೆ ಎಂಬುದು ಸರ್ವವಿಧಿತ ವಿಚಾರ. ಒಮ್ಮೆ ಈ ಅನ್ನದ ಆತುರ ತಣಿದುಬಿಟ್ಟರೆ, ಮನಸ್ಸು ನಾನಾ ರೀತಿಯ ಆಸೆಗಳ ಕಡೆಗೆ ನಾಗಾಲೋಟದಲ್ಲಿ ಓಡುತ್ತದೆ. ಹಣವನ್ನು ಕೂಡಿಡುವ, ಕೂಡಿಟ್ಟ ಹಣವನ್ನು ಬೆಳೆಸುವ, ಬೆಳೆಸಿದ್ದನ್ನು ಮತ್ತಷ್ಟು ಬೆಳೆಸುವ ಮತ್ತು ಅದು ಎಷ್ಟು ಬೆಳೆದರೂ ತೃಪ್ತಿಯಾಗದ ಅಥವಾ ಆ ಬೆಳೆಸುವ ಓಟದಲ್ಲಿ ಅಕಸ್ಮಾತ್ ಎಡವಿ ಇದ್ದದ್ದನ್ನು ಕಳೆದುಕೊಂಡರೆ,

ಬೇತಾಳವನ್ನು ಛಲಬಿಡದ ತ್ರಿವಿಕ್ರಮನಂತೆ ಮತ್ತೆ ಮತ್ತೆ ಪ್ರಯತ್ನವನ್ನು ಪಡುತ್ತಲೇ ಇರುವುದೇ, ಮನುಷ್ಯ ಸ್ವಭಾವ. ಈ ಛಲ, ಆಸೆಗಳ ತೀವ್ರತೆ, ಅವುಗಳನ್ನು ಪಡೆಯಲು ಓಡುವ ಓಟದ 'ವ್ಯರ್ಥತೆ' ಕಡೆಗೂ ಅರ್ಥವಾಗುವುದೇ ಇಲ್ಲ.

ಚಿನ್ನದಾತುರ ಎಂದರೆ, ಸಂಪತ್ತಿನ ಆಸೆಯನ್ನು ಪೂರೈಸಿಕೊಳ್ಳಲು ಅವರವರ ಮಿತಿಯಲ್ಲಿ ಸಾಮರ್ಥ್ಯವಿರುತ್ತದೆ, ಆದರೆ ಇದಕ್ಕಿಂತ ಹೆಚ್ಚಿನ ತೀವ್ರತೆಯಲ್ಲಿರುವುದು ಹೆಣ್ಣುಗಂಡಿನ ಪರಸ್ಪರ ಆಕರ್ಷಣೆ. ಈ ಆಕರ್ಷಣೆಯ ಪರಿಣಾಮವಾಗಿ ಚರಿತ್ರೆಯಲ್ಲಿ ನಡೆದ ಘಟನೆಗಳು, ಈ ಆಕರ್ಷಣೆಯ ಪ್ರಭಾವ ಮತ್ತು ಮಹತ್ವವನ್ನು ತೋರುತ್ತದೆ ಅಲ್ಲವೇ? ಮೇಲೆ ಹೇಳಿದ ಎರಡನ್ನೂ ಮೀರಿಸುವುದು ಮನ್ನಣೆಯ ಆಸೆ. ಮೇಲಿನ ಎರಡಕ್ಕೂ ಮಿತಿಯಿರಬಹುದು ಅಥವಾ ಮಿತಿಯನ್ನು ಹಾಕಿಕೊಳ್ಳಬಹುದು. ಆದರೆ ಮನ್ನಣೆಯ ಆಸೆ ಇವೆರಡಕ್ಕಿಂತಲೂ ಬಹಳ ತೀಕ್ಷ್ಣ, ಮನ್ನಣೆಯ ಆಸೆಗೆ ಬಿದ್ದವನು ಅದನ್ನು ಪಡೆಯಲು ಏನನ್ನು ಬೇಕಾದರೂ ಮಾಡಲು ಹೇಸುವುದಿಲ್ಲ. ಅದನ್ನು ಪಡೆಯಲು ಎಂತಹ ಹೀನಕೃತ್ಯವನ್ನಾದರೂ ಮಾಡಲು ಹಿಂಜರಿಯುವುದಿಲ್ಲ. ಮನ್ನಣೆಯ ಆಸೆಗೆ ಬಿದ್ದವನು ತನ್ನ ಹೆಂಡಿರ, ಮಕ್ಕಳ, ಬಂಧು ಬಳಗ, ಆಸ್ತಿಪಾಸ್ತಿ ಎಲ್ಲವನ್ನೂ ತೊರೆಯಲು ತಯಾರಾಗಿಬಿಡುತ್ತಾನೆ. ಇದರ ದೃಷ್ಟಾಂತಗಳೂ ನಮಗೆ ಪುರಾಣಗಳಲ್ಲಿ ಮತ್ತು ಚರಿತ್ರೆಯಲ್ಲಿ ತೊರೆಯಲು ಸಿಗುತ್ತದೆ.

ಮೇಲಿನ ಮೂರೂ ಆಸೆಗಳನ್ನು ಪೂರೈಸಿಕೊಳ್ಳುವ ಪ್ರಯತ್ನದಲ್ಲಿ ಮನುಷ್ಯ ತನ್ನ ಸಂಸ್ಕಾರಗಳನ್ನು ಕಳೆದುಕೊಂಡು, ಇತರರಿಗೆ ಮತ್ತು ತನಗೂ ಘಾಸಿ ಮಾಡಿಕೊಳ್ಳುತ್ತಾನೆ. ತೃಪ್ತಿಯಿಲ್ಲದೆ, ಮತ್ತಷ್ಟು ನಿರಾಸೆಯಲ್ಲಿ

ನಲುಗಿ ಹೋಗುತ್ತಾನೆ. ಮಾನಸಿಕವಾಗಿ ಬಹಳ ಹಿಂಸೆಯನ್ನು ಅನುಭವಿಸುತ್ತಾ, ಬುದ್ಧಿಮಾಂದ್ಯನಾಗುತ್ತಾನೆ, ಯುಕ್ತಾಯುಕ್ತತೆಯ ವಿವೇಚನೆಯನ್ನು ಕಳೆದುಕೊಂಡು, ಮಾಡಬಾರದ ಕೆಲಸಗಳನ್ನು ಮಾಡುತ್ತಾ, ಧರ್ಮವಿರುದ್ಧವಾಗಿ ಬದುಕುತ್ತಾನೆ. ಹಾಗೆ ಬದುಕುವಾಗ ಬದುಕಿಗೆ ಮೂಲ ಆಧಾರವಾದ 'ಆತ್ಮ 'ಏನನ್ನು ಪಡೆಯಬೇಕೋ ಅದನ್ನು ಪಡೆಯಲಾಗದೆ, ಎಲ್ಲಿಗೆ ಸೇರಬೇಕೋ ಅಲ್ಲಿಗೆ ಸೇರಲಾಗದೆ, ವಿಲಿವಿಲಿ ಒದ್ದಾಡುತ್ತಾ ಸೊರಗುತ್ತದೆ. ಇದನ್ನೇ ಮಾನ್ಯ ಗುಂಡಪ್ಪನವರು "ತಿನ್ನುವುದಾತ್ಮವನೆ" ಎಂದರು. ಸಾಮಾನ್ಯವಾಗಿ, ಈ ಆಸೆಗಳ ಕಾರಣವಾಗಿ ಜಗತ್ತಿನ ಜನರು ಎಷ್ಟು ಕಷ್ಟಪಡುತ್ತಾರೆ ಎನ್ನುವ ದೃಷ್ಟಾಂತಗಳನ್ನು ನೋಡುತ್ತಿದ್ದರೂ, ತಾವೂ ಸಹ ಈ ಆಸೆಗಳ ವಿಷವೃತ್ತದಲ್ಲಿ ಸಿಲುಕಿ, ತಾವೂ ಅನುಭವಿಸದ ಹೊರತು ಯಾರಿಗೂ ಅರಿವು ಮೂಡುವುದೇ ಇಲ್ಲ. ನಮಗೆ ಅಂತಹ ಅರಿವು ಮೂಡಿ, ನಾವು ನಮ್ಮ ಆಸೆಗಳನ್ನು ನಮ್ಮ ಸಾಮರ್ಥ್ಯಗಳ ಮಿತಿಯಲ್ಲಿ ಇಟ್ಟುಕೊಳ್ಳಲಾದರೆ ನಾವೇ ಧನ್ಯರೆಂದು ಅಂದುಕೊಳ್ಳಬೇಕು.

**ಮುಕ್ತಕ – 653** **ಮನೆಯೊಳೊ ಮಠದೊಳೋ ಸಭೆಯೊಳ್ ಸಂತೆಯೊಳೊ ।**
**ಕಡೆಗೆ ಕಾಡೊಳೊ ಮಸಾಣದೊಳೊ ಮತ್ತೆಲ್ಲೋ ॥**
**ಗಣನೆಗೇರಲಿಕೆಂದು ಜನ ತಪಿಸಿ ತೊಳಲುವುದು ।**
**ನೆನೆಯದಾತ್ಮದ ಸುಖವ-ಮಂಕುತಿಮ್ಮ ॥**

ಗಣನೆಗೇರಲಿಕೆಂದು=ಗಣನೆಗೆ+ಏರಲಿಕೆ+ಎಂದು, ನೆನೆಯದಾತ್ಮದ= ನೆನೆಯದು+ಆತ್ಮದ, ಮಸಾಣ=ಸ್ಮಶಾನ, ಗಣನೆಗೆ= ಮನ್ನಣೆ, ಕೀರ್ತಿಯನ್ನು ಪಡೆಯಲು, ತಪಿಸಿ=ತೀವ್ರತಮ ಪ್ರಯತ್ನಿಸಿ,

ಮನೆ, ಮಠ, ಸಭೆ, ಸಂತೆ ಹೀಗೆ ಎಲ್ಲೇ ಇದ್ದರೂ ನನ್ನನ್ನು ಎಲ್ಲರೂ ಗುರುತಿಸಬೇಕು' ಎನ್ನುವ ಹಂಬಲ ಪ್ರತಿಯೊಬ್ಬರಿಗೂ ಇರುತ್ತದೆ. ಅಲ್ಲೆಲ್ಲೂ ಆಗದಿದ್ದರೆ ಯಾರೂ ಇರದ ಕಾಡಿನಲ್ಲಾಗಲೀ ಅಥವಾ ಸತ್ತು ಸ್ಮಶಾನ ಸೇರಿದಮೇಲಾಗಲೀ ಎಲ್ಲರೂ ತನ್ನನ್ನು, ಗುರುತಿಸಬೇಕು, ಹೊಗಳಬೇಕು ಎನ್ನುವ ಹಂಬಲ ಮತ್ತು ಬದುಕಿನ್ನುದ್ದಕ್ಕೂ ಅಂತಹ ಹೊಗಳಿಕೆಗೆ ಬಾಯ್ದಿಡುತ್ತಾ, ಶಾಶ್ವತವಾಗಿ ಅನಂತವಾಗಿರುವ ಆತ್ಮದ ಸುಖ ಮತ್ತು ಉದ್ದಾರಕ್ಕೆ ಯಾರೂ ಆಲೋಚಿಸುವುದಿಲ್ಲ ಎಂದು, ಆತ್ಮೋದ್ಧಾರಕ್ಕೆ ಮಾರಕವಾದ ಮನ್ನಣೆಯ ಹಂಬಲದ ಬಗ್ಗೆ ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು.

ಮನೆಯಲ್ಲಿ ಎಲ್ಲರೂ 'ನನ್ನ' ಮಾತನ್ನು ಕೇಳಬೇಕು, ಅಕಸ್ಮಾತ್ 'ನಾನು' ಸನ್ಯಾಸಿಯಾದರೂ ಅಲ್ಲೂ ಎಲ್ಲರೂ 'ನನ್ನ' ಹೊಗಳಬೇಕು. ಸಭೆಯಲ್ಲಿ ಎಲ್ಲರೂ 'ನನ್ನನ್ನು ನೋಡಬೇಕು, 'ನಾ' ಆಡುವ ಮಾತುಗಳಿಗೆ ಎಲ್ಲರ ಮೆಚ್ಚುಗೆ ಇರಬೇಕು, ನೂರಾರು ಜನ ಸೇರುವ ಸಂತೆಯಂತಹ ಸ್ಥಳದಲ್ಲೂ 'ನಾನೇ' ಪ್ರಮುಖವಾಗಿ ಎದ್ದು ಕಾಣಬೇಕು, ಯಾರೂ ಇಲ್ಲದ ಕಾಡಿಗೆ ಸೇರಿದರೂ 'ನಾನು' ಸೇರಿದೆ, 'ನಾನು' ಎಲ್ಲರಂತಲ್ಲ

(253)



ನೋಡಿ 'ನಾನು' ಜಗವನ್ನು ಬಿಟ್ಟು ವನವಾಸಕ್ಕೆ ಬಂದಿದ್ದೇನೆ ಎನ್ನುವ ಭಾವ, 'ನಾನು' ಸತ್ತಮೇಲೂ 'ನನ್ನ' ಹೆಸರ ಹೇಳಿ ನಾಲ್ಕು ಜನ ಬದುಕಬೇಕು, 'ನಾ' ಸತ್ತಮೇಲೂ ಶತಮಾನಗಳವೆರೆಗೂ ಜನ ನನ್ನನ್ನು' ನೆನಪಿಸಿಕೊಂಡು ಹಾಡಿ ಹೊಗಳಬೇಕು. ಇದು ಸಾಮಾನ್ಯವಾಗಿ ಎಲ್ಲರ ಬಯಕೆ. ಕೆಲವರಿಗೆ ಈಡೇರುತ್ತದೆ, ಹಲವರಿಗೆ ಆಗುವುದಿಲ್ಲ.

ಮೇಲಿನ ಒಕ್ಕಣೆಯಲ್ಲಿ 'ನಾ', 'ನಾನು', 'ನಾನೇ' 'ನನ್ನ' 'ನನಗೆ' 'ನನ್ನನ್ನು' 'ನನ್ನಿಂದ' ಎನ್ನುವ ಪದಗಳು ಕೇವಲ ಅಹಂಕಾರ ಸೂಚಕವಾಗಿವೆ, ನಮ್ಮ ಎಲ್ಲ ಬಯಕೆಗಳೂ, ಆ ಅಹಂಕಾರವನ್ನು ತಣಿಸಿಕೊಳ್ಳುವುದಕ್ಕಾಗಿಯೇ ಇರುತ್ತವೆ. ಎಲ್ಲಿಯ ತನಕ ನಮ್ಮನ್ನು ನಾವು ಈ ಜಗತ್ತಿನಲ್ಲಿರುವ ವಸ್ತು, ವಿಷಯ ಮತ್ತು ವ್ಯಕ್ತಿಗಳೊಂದಿಗೆ ಗುರುತಿಸಿಕೊಳ್ಳುತ್ತೇವೆಯೋ, ಅಲ್ಲಿಯ ತನಕ ಅಹಂಕಾರ ಹೋಗುವುದೆ ಇಲ್ಲ. ಅಲ್ಲಿಯ ತನಕ ನಮ್ಮ ಅಹಂಕಾರ ಜನ್ಯವಾದ ವ್ಯರ್ಥಾಲಾಪವೂ ಹೋಗುವುದಿಲ್ಲ. 'ನಾನು ಎಂಬುದ ಬಿಟ್ಟು ಜ್ಞಾನಿಗಳೊಳಗೂಡಿ ಏನೆಲ್ಲಕೆ ದೇವ ಪ್ರೇರಣೆಯೆಂದು, ಧ್ಯಾನಿಸಿ ಮೌನದಿ ಪುರಂಧರ ವಿಠಲನ' ಎನ್ನುತ್ತಾರೆ ಪುರಂದರದಾಸರು. ಆತ್ಮ, ದೇಹ, ಮನಸ್ಸು, ಬುದ್ಧಿಗಳು ತಾನು ಎನ್ನುವ ಭಾವ ತೊರೆದು ತನ್ನ ನಿಜ ಸ್ವರೂಪವನ್ನು ಅರಿತುಕೊಳ್ಳಬೇಕಾದರೆ, ಈ ಅಹಂಕಾರ ಪೂರಿತವಾದ 'ನಾನತ್ವ'ವನ್ನು ಬಿಡಬೇಕು. ಅದನ್ನು ಬಿಟ್ಟರೆ ಈ ಮನ್ನಣೆಯ ಹಂಬಲವು ಕರಗಿ, ಎಲ್ಲರೊಳಗೊಂದಾಗು ಮಂಕುತಿಮ್ಮ' ಎಂದು ಮಾನ್ಯ ಗುಂಡಪ್ಪನವರು ಹೇಳುವಂತೆ ಆದರೆ, ಆಗ ಆತ್ಮ ತನ್ನ ಗಮ್ಯವನ್ನು ಸೇರುವಂತಹ ಮಾರ್ಗ ತೋರಿದಂತಾಗುತ್ತದೆ.

*ಉಪಕಾರಿ ನಾನು, ಎನ್ನುಪಕೃತಿಯು ಜಗಕೆಂಬ ವಿಪರೀತ ಮತಿಯನುಳಿದು ವಿಪುಲಾಶ್ರಯವನೀವ ಸುಫಲ ಸುಮ ಭರಿತ ಪಾದಪದಂತೆ' ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ತಮ್ಮ 'ವನಸುಮ' ಎಂಬ ಅದ್ಭುತ ಕವನದಲ್ಲಿ. ಈ ಜಗತ್ತಿನ ಸಂಕಷ್ಟಗಳ ವಿಷವೃತ್ತದಲ್ಲಿ ಸಿಲುಕಿ, ಆತ್ಮ ಸೊರಗದಿರಬೇಕೆಂದರೆ 'ಅಹಂಕಾರ' ವನ್ನು ತೊರೆಯಬೇಕು ಮತ್ತು ಆ ಅಹಂಕಾರ ಜನಿತವಾದ 'ಮನ್ನಣೆ'ಯ ಆಸೆ ಬಿಡಬೇಕು. ಅದು ಎಂತೆಂತಹ ಮಹಾ ಮಹಿಮಾನ್ವಿತರಿಗೇ ಸಾಧ್ಯವಾಗದ್ದಾದ್ದರಿಂದ ನಮ್ಮಂತಹ ಸಾಮಾನ್ಯರಿಗೆ ಕಷ್ಟಸಾಧ್ಯ. ಆದರೆ ಅಹಂಕಾರವನ್ನು ತೊರೆವ ಇಚ್ಛೆ, ಪ್ರಯತ್ನ ಮತ್ತು ನಿರಂತರ ಅಭ್ಯಾಸವಿದ್ದರೆ, ಎಂದಾದರೂ ಒಂದು ದಿನ ಡಿ.ವಿ.ಜಿ.ಯವರು ಹೇಳುವಂತಹ "ಆತ್ಮ ಸುಖ' ನಮಗೂ ಸಿಗಬಹುದು.

**ಮುಕ್ತಕ – 654**

**ಹೆಸರು ಹೆಸರೆಂದು ನೀಂ ಬಸವಳಿವುದೇಕಯ್ಯ? |**
**ಕಸದೊಳಗೆ ಕಸವಾಗಿ ಹೋಹನ ನೀನು? ||**
**ಮುಸುಕಲೀ ಧರೆಯ ಮರೆವೆನ್ನನ್, ಎನ್ನುತ ಬೇಡು |**
**ಮಿಸುಕದಿರು ಮಣ್ಣಿನಲಿ - ಮಂಕುತಿಮ್ಮ ||**





ಬಸವಳಿವುದೇಕಯ್ಯ= ಬಸವಳಿವುದು + ಏಕಯ್ಯ, ಹೋಹನಲೆ=ಹೋಹನು+ಎಲೆ,
ಮರೆವೆನ್ನನ್=ಮರೆವು+ಎನ್ನನ್, ಮಿಸುಕದಿರು=ಮಿಸುಕದೆ+ಇರು.
ಬಸವಳಿವುದು= ಸುಸ್ತಾಗುವುದು, ಹೋಹನು=ಹೋಗುವವನು, ಮಿಸುಕದಿರು=ತಿಣುಕಾಡದಿರು

ಹೆಸರನ್ನು ಗಳಿಸುವುದಕ್ಕೆ ಮತ್ತು ಗಳಿಸಿದ ಹೆಸರನ್ನು ಉಳಿಸಿಕೊಳ್ಳುವುದಕ್ಕೆ ನೀನು ಏತಕ್ಕೆ ದಣಿಯುತ್ತೀಯಾ? ಜಗತ್ತಿನ ಬೇರೆ ಕಸಗಳಂತೆಯೇ ನೀನೂ ಸಹ ಕಸದಲ್ಲಿ ಕಸವಾಗಿ, ಮಣ್ಣಲ್ಲಿ ಮಣ್ಣಾಗಿ ಹೋಗುವವನು. ಜಗತ್ತಿನ ಜನರ

ಮರೆವು ನನ್ನ ಹೆಸರನ್ನು ಮರೆಮಾಡಿಬಿಡಲಿ ಎಂದು ನೀನು ಪಾರ್ಥಿಸು, ಸತ್ತ ನಂತರವೂ ಹೆಸರನ್ನು ಉಳಿಸಿಕೊಳ್ಳುವ ಕೊರಗನ್ನು ನೀನು ಪಡಬೇಡ' ಎಂದು, ಖ್ಯಾತಿಯ ಮತ್ತು ಪ್ರಶಂಸೆಯ ಹಿಂದೆ ಓಡುವವರಿಗೆ ಒಂದು ಕಿವಿಮಾತನ್ನು ಹೇಳಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮನ್ನಣೆಯ ದಾಹವು ನಮ್ಮ ಬೇರೆಲ್ಲ ಬಯಕೆಗಳಿಗಿಂತ ಬಹಳ ತೀಕ್ಷ್ಣತಮ ಎಂದು ಈ ಹಿಂದಿನ ಒಂದು ಮುಕ್ತಕದಲ್ಲಿ ಹೇಳಿದ್ದಾರೆ ಶ್ರೀ ಡಿ.ವಿ.ಜಿ ಯವರು. ಪ್ರತಿಯೊಬ್ಬರಿಗೂ 'ಈ ಜಗತ್ತು ನನ್ನನ್ನು ಗುರುತಿಸಬೇಕು, ನಾನು ಪ್ರಖ್ಯಾತನಾಗಬೇಕು ಎಂಬ 'ಹೆಸರ' ಬಯಕೆ ಇದ್ದೇ ಇರುತ್ತದೆ. ಆದರೆ, ಆ ಬಯಕೆಯ ತೀವ್ರತೆಯ ಮತ್ತು ಆ ಹೆಸರನ್ನು ಪಡೆಯುವ ಪ್ರಯತ್ನದ ಪ್ರಮಾಣದಲ್ಲಿ ವ್ಯತ್ಯಾಸವಿರಬಹುದೇ ವಿನಃ, ಹೆಸರ ಬಯಕೆ ಇಲ್ಲದ ಮಾನವ ಪ್ರಾಣಿ ಈ ಜಗತ್ತಿನಲ್ಲಿ ಸಿಗುವುದೇ ಬಹಳ ಅಪರೂಪ.

ಆದರೆ ನಾವು ಎಂದಾದರೂ ಒಂದು ದಿನ ಈ ರೂಪವನ್ನು ತೊರೆದು, ಈ ಜಗತ್ತನ್ನು ಬಿಟ್ಟು ಹೋಗಲೇಬೇಕಲ್ಲವೇ? ಮಣ್ಣಿನಲಿ ಮಣ್ಣಾಗಿ ಬೆರೆತುಹೋಗಬೇಕಲ್ಲವೇ? ಇದರ ಅರಿವು ನಮಗೆ ಇದ್ದರೂ ಮತ್ತು ನಾವು ಅದನ್ನು ದೃಢವಾಗಿ ನಂಬಿದರೂ, ನಮ್ಮ ಯೋಚನೆ ಮಾತ್ರ ನಾವು ಈ ಜಗತ್ತಿನಲ್ಲಿ ಶಾಶ್ವತ' ಎನ್ನುವ ರೀತಿ ಇರುತ್ತದೆ. ಹೆಸರನ್ನು ಗಳಿಸುವುದಕ್ಕಾಗಿ ಮತ್ತು ಗಳಿಸಿದ ಹೆಸರನ್ನು ಉಳಿಸಿಕೊಳ್ಳುವುದಕ್ಕಾಗಿ ನಾವು ಏನನ್ನು ಬೇಕಾದರೂ ಮಾಡಲು ಸಿದ್ಧ, ಅಂತಹ ಮಹತ್ವಾಕಾಂಕ್ಷೆಯ ವ್ಯಕ್ತಿಗಳು ನಡೆಸಿದ ಅಧಾರ್ಮಿಕ, ಅನೈತಿಕ, ದೌರ್ಜನ್ಯ ಮತ್ತು ದುಂಡಾವರ್ತಿಗಳ ಉಲ್ಲೇಖ ನಮಗೆ ಜಗತ್ತಿನ ಚರಿತ್ರೆಯಲ್ಲಿ ಹೇರಳವಾಗಿ ಲಭ್ಯವಾಗುತ್ತದೆ. ಇದಕ್ಕೆ ಅಹಂಕಾರ ಪ್ರೇರಿತ 'ಮದ' ವೇ ಕಾರಣ.

ನಾವು ಮಾಡುವ ಕೆಲಸಕ್ಕೆ ಒಂದು ಆಧ್ಯಾತ್ಮಿಕ ನೆಲೆಗಟ್ಟನ್ನು ಕಂಡುಕೊಂಡಾಗ, ಅಹಂಕಾರವಿಲ್ಲದೆ, ಕೀರ್ತಿಯ ಆಸೆಯಿಲ್ಲದೆ, ನಮ್ಮ ಹೆಸರನ್ನು ಎಲ್ಲರೂ ಮರೆತರೂ ನಾವು ಮಾಡಿದ ಕೃತಿಯ ಉಪಕೃತಿ ಜಗಕ್ಕೆ ಆದರೆ, ನಮ್ಮ ಬದುಕು ಸಾರ್ಥಕವಾಗುತ್ತದೆ. ಇದಕ್ಕೆ ಭಾರತೀಯ ಸಂಸ್ಕೃತಿಯ ವಿಕಾಸಕ್ಕೆ ಕಾರಣವಾದ 'ವೇದ ವಾಙ್ಞಯ' ವೇ ಒಂದು ಸುಂದರ ನಿದರ್ಶನ. ಬರೆದವರ ಹೆಸರಿಗಿಂತ ವಸ್ತು ದೊಡ್ಡದಾದಾಗ, ಹೆಸರು ಅಳಿಸಿ ಸತ್ವ ಉಳಿಯುತ್ತದೆ. ಸತ್ತಮೇಲೂ ನನ್ನ ಹೆಸರು ಉಳಿಯಬೇಕು ಎನ್ನುವಂತಹ ಆಸೆಯನ್ನು ತೊರೆದು, ಈ ಜಗ ನನ್ನನ್ನು ಮರೆತು ಬಿಡಲಿ ಎಂದು ಪ್ರಾರ್ಥಿಸಬೇಕೆನ್ನುವುದೇ ಈ ಮುಕ್ತಕದ ಆಶಯ.

**ಮುಕ್ತಕ – 655**

**ಅಕ್ಕಿಯೊಳಗನ್ನವನು ಮೊದಲಾರು ಕಂಡವನು? |**
**ಅಕ್ಕರದ ಬರಹಕ್ಕೆ ಮೊದಲಿಗನದಾರು? ||**
**ಲೆಕ್ಕವಿರಿಸಿಲ್ಲ ಜಗ ತನ್ನಾದಿಬಂಧುಗಳ |**
**ದಕ್ಕುವುದೆ ನಿನಗೆ ಜಸ? – ಮಂಕುತಿಮ್ಮ ||**

ಅಕ್ಕಿಯೊಳನ್ನವನು= ಅಕ್ಕಿಯೊಳಗೆ+ಅನ್ನವನು, ಮೊದಲಾರು=ಮೊದಲು+ಆರು, ಮೊದಲಿಗನದಾರು=ಮೊದಲಿಗನು+ಅದು+ಯಾರು, ಲೆಕ್ಕವಿರಿಸಿಲ್ಲ= ಲೆಕ್ಕವ+ಇರಿಸಿಲ್ಲ, ತನ್ನಾದಿಬಂಧುಗಳ=ತನ್ನ +ಆದಿ+ಬಂದುಗಳ, ಅಕ್ಕರದ +ಅಕ್ಷರದ, ದಕ್ಕುವುದೆ=ಸಿಗುವುದೆ, ಜಸ=ಯಶಸ್ಸು.

ಇಂದು ಜಗತ್ತಿನ ಬಹುತೇಕ ಮಂದಿ ತಿನ್ನುವ ಅನ್ನವನ್ನು ಅಕ್ಕಿಯಿಂದ ಮಾಡಬಹುದು ಎಂದು ಕಂಡುಕೊಂಡಂತಹ ಮೊದಲ ಮಾನವನು ಯಾರು? ಅವನ ಹೆಸರು ಈ ಜಗತ್ತಿಗೆ ಗೊತ್ತೇ ಇಲ್ಲ!, ಅಲ್ಲವೇ? ನಾವಿಂದು ಬರೆಯುವ ಅಕ್ಷರಗಳನ್ನು ಹೀಗೇ ಬರೆಯಬೇಕೆಂದು ಕಂಡುಹಿಡಿದವನು ಯಾರು ಎಂದು ನಮಗೆ ಗೊತ್ತಿಲ್ಲ. ಹೀಗೆ ಈ ಜಗತ್ತು, ಆದಿಯಲ್ಲಿ ಇಲ್ಲಿನ ವಸ್ತು ವಿಷಯಗಳನ್ನು ರೂಪಿಸಿದ ಆದಿ ಬಂಧುಗಳನ್ನೇ ಲೆಕ್ಕವಿರಿಸದೆ ಮರೆತುಹೋಗಿರುವಾಗ, ನೀನು ಯಾವ ಘನಕಾರ್ಯ ಮಾಡಿದ್ದೀಯೆ ಎಂದು ಯಶಸ್ಸನ್ನು ಅಪೇಕ್ಷೆಪಡುತ್ತಿದ್ದೀಯೆ? ಎಂದು ಪ್ರಶ್ನಿಸುತ್ತಾ ಹೆಸರು, ಪ್ರಖ್ಯಾತಿಗಳ ಹುಚ್ಚು ಹಿಡಿದವರಿಗೆ ಎಚ್ಚರಿಕೆಯ ಮಾತನ್ನು ಹೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಇಂದು ಈ ಜಗತ್ತಿನಲ್ಲಿ ನಾವು ಉಪಯೋಗಿಸುವ ಎಷ್ಟೋ ವಸ್ತುಗಳನ್ನು ಯಾರು ಆವಿಷ್ಕರಿಸಿದರು ಎಂದು ನಮಗೆ ಗೊತ್ತಿಲ್ಲ. ಆದರೂ ಆ ವಸ್ತುಗಳು ನಮಗೆ ಬಹು ಉಪಯೋಗಿಯಾಗಿವೆ, ಅಲ್ಲವೇ? ಹಾಗೆ ಈ ಜಗತ್ತಿಗೆ ಕೊಟ್ಟವರು' ಎಂದಿಗೂ ತಮಗೆ ಹೆಸರು ಬರಲಿ ಎಂದೋ, ಅಥವಾ ತಾವು ಪ್ರಖ್ಯಾತರಾಗಬೇಕೆಂದೋ, ಆ ಕೊಡುಗೆಗಳನ್ನು ನೀಡಲಿಲ್ಲ. ತಮ್ಮ ತಪಸ್ಸಿನಂತಹ ಪ್ರಯತ್ನದಿಂದ ತಾವು ಕಂಡುಕೊಂಡ ಸತ್ಯಗಳನ್ನು ಜಗತ್ತಿನ ಕ್ಷೇಮ ಮತ್ತು ಸಂತೋಷಕ್ಕಾಗಿ ನೀಡುತ್ತಾ ಹೋದರು. ತಾವೆಂದೂ ಖ್ಯಾತಿಗಾಗಿ ತವಕಪಡಲಿಲ್ಲ. ಇಂದು ಅವುಗಳ ಉಪಯೋಗದ ಬಳಕೆಯ ವಿಧಾನ ಬದಲಾಗಿರಬಹುದೇ ವಿನಃ, ಅದರ ಮೂಲ ಆಶಯದಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಹಾಗಾಗಿ ಅವುಗಳ ಶ್ರೇಯಸ್ಸು ಅನಾಮಧೇಯ ಮಹನೀಯರಿಗೇ ಸಲ್ಲಬೇಕು.

ಆದರೆ, ಅವರಾರ ಹೆಸರನ್ನೂ ಜಗತ್ತು ನೆನಪಿಟ್ಟುಕೊಂಡೇ ಇಲ್ಲ. ಹಾಗಿರುವಾಗ ಏನನ್ನೂ ಸಾಧಿಸದೆ, ಈ ಜಗತ್ತಿನ ಸಂತೋಷಕ್ಕೆ ಏನನ್ನೂ ನೀಡದೆ, ಕೇವಲ ಪೂರ್ವಜರಿಂದ ಎರವಲು ಪಡೆದ ಸವಲತ್ತುಗಳನ್ನು ಅನುಭವಿಸಿ ಬದುಕುವ ನೀನು, ಹೆಸರಿನ, ಕೀರ್ತಿಯ ಬಯಸುವುದೇ ಸರಿಯಲ್ಲ ಎಂದು ಸ್ಪಷ್ಟವಾಗಿ ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು. ಆದರೆ, ಇಂದಿನ ಪರಿಸ್ಥಿತಿ ನೋಡಿ, ಬೀದಿ ಬೀದಿಗಳಲ್ಲಿ, ಎಲ್ಲಿ ನೋಡಿದರಲ್ಲಿ ನಮ್ಮ ರಾಜಕೀಯ ನಾಯಕರ ಹೆಸರುಗಳು ಅಂಕಿತವಾಗಿರುವ ಫಲಕಗಳು ರಾರಾಜಿಸುತ್ತಿರುತ್ತವೆ. ಸಾರ್ವಜನಿಕರದೇ ಹಣದಿಂದ ಸಹಜವಾಗಿ ನಡೆಯುವ ಸರಕಾರೀ ಕಾರ್ಯಕ್ರಮಗಳಿಗೆ ಇವರ ಹೆಸರುಗಳು. ಹಿಂದೆ ಇದ್ದವರ





ಹೆಸರುಗಳ ಫಲಕಗಳನ್ನು ಕಿತ್ತು ಇಂದಿನವರ ಫಲಕಗಳು, ಇವರ ಕಾಲವಾದ ಮೇಲೆ ಮತ್ಯಾರದ್ದೋ ಹೆಸರುಗಳು ಅಂಕಿತವಾಗುತ್ತವೆ. ಇದು ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಒಂದು ಕಾಲಕ್ಕೆ ಇಂದಿರಾ ಈಸ್ ಇಂಡಿಯಾ, ಇಂಡಿಯಾ ಈಸ್ ಇಂದಿರಾ' ಎನ್ನುವ ಘೋಷಣೆಗಳು ಕೇಳಿಬರುತ್ತಿದ್ದವು. ಇಂದು !! ಕಾಲಗರ್ಭದಲ್ಲಿ ಸೇರಿಹೋಗುವ ಎಲ್ಲರಿಗೂ ಹೆಸರಿನ ಒಂದು 'ಭ್ರಮೆ'

ತಿಯೊಡರ್ ಟಿಲ್ಟೊನ್ ಎಂಬ ಆಂಗ್ಲ ಕವಿ 'EVEN THIS WILL PASS AWAY' ಎಂಬ ಕವಿತೆಯಲ್ಲಿ "ಖ್ಯಾತಿ ಎಂಬುದದೇನು, ಅದೊಂದು ನಿಧಾನ ನಾಶ - ಅದು ಕೂಡ ಸರಿದು ಹೋಗುವುದು" ಎಂದು ಹೆಸರಿನ ಅಶಾಶ್ವತೆಯನ್ನು ಸ್ಪಷ್ಟವಾಗಿ ಬರೆದಿದ್ದಾನೆ. ಮಾನುಷಾಹಂಕಾರದಿಂದ ಅಂತಹ 'ಹೆಸರಿನ ಖ್ಯಾತಿ'ಯನ್ನು ಬಯಸುತ್ತೇವೆ. ಆದರೆ ಖಂಡಿತ ಯಶಸ್ಸು ಸಿಗುವುದಿಲ್ಲ. ನಿರ್ಮಮಕಾರದಿಂದ, ನಿರಪೇಕ್ಷೆಯಿಂದ ನಮ್ಮ ಜೀವನಾವಧಿಯಲ್ಲಿ ಮುಂದಿನ ಹತ್ತಾರು ಪೀಳಿಗೆಗಳಿಗೆ ಉಪಯುಕ್ತವಾದದ್ದನ್ನು, ಏನಾದರೂ ನೀಡಲು ಸಾಧ್ಯವಾದರೆ ನೀಡಿ ಬದುಕಿನ ನಾಟಕದ ನೇಪತ್ಯಕ್ಕೆ ಸದ್ದಿಲ್ಲದೇ ಸರಿದುಹೊಗಬೇಕು. ಅದು ಸಾರ್ಥಕ್ಯವನ್ನು, ತೃಪ್ತಿಯನ್ನು ನೀಡುತ್ತದೆ.

**ಮುಕ್ತಕ – 656** **ಹೆಸರು ಹೆಸರೆಂಬುದೇಂ? ಕಸರು ಬೀಸುವ ಗಾಳಿ |**
**ಹಸೆಯೊಂದು ನಿನಗೇಕೆ ಬ್ರಹ್ಮಪುರಿಯೊಳಗೆ? ||**
**ಶಿಶುವಾಗು ನೀಂ ಮನದಿ, ಹಸುವಾಗು, ಸಸಿಯಾಗು |**
**ಕಸಬೊರಕೆಯಾಗಿಳೆಗೆ – ಮಂಕುತಿಮ್ಮ ||**

ಹೆಸರೆಂಬುದೇಂ+ ಹೆಸರು+ಎಂಬುದು+ಏಂ, ಕಸಬೊರಕೆಯಾಗಿಳೆಗೆ=ಕಸಬೊರಕೆಯಾಗು+ಇಳೆಗೆ
ಕಸರು=ಕೊಳಕು, ಕಲ್ಮಶ, ಬ್ರಹ್ಮಪುರಿ=ಈ ಜಗತ್ತು

ಹೆಸರು ಹೆಸರೆಂಬುದು ಏನು? ಕೊಳೆಯಿಂದ ಕೂಡಿದ ಉಸಿರು. ಈ ಜಗತ್ತಿನೊಳಗೆ ನಿನಗೆ ಬಿರುದು ಬಾವುಲಿಗಳ ಮನ್ನಣೆ ಏಕೆ ಬೇಕು? ಹಸುಗೂಸಿನಂತೆ ಮುಗ್ಧನಾಗು, ಸಾಧು ಭಾವದ ಹಸುವಿನಂತಾಗು, ಮುಂದೆ ಗಿಡವಾಗಿ ಹೆಮ್ಮರವಾಗಿ ಹೂ, ಹಣ್ಣು ಮತ್ತು ಸುಗಂಧವನ್ನು ನೀಡುವ ಪುಟ್ಟ ಸಸಿಯಾಗು, ನಿನ್ನ ಮನಸ್ಸಿನ ಕಲ್ಮಷಗಳನ್ನು ಗುಡಿಸಿಹಾಕಲು ನೀನೇ ಒಂದು ಸೊರಕೆಯಾಗು ಎಂದು, ಈ ಜಗತ್ತಿನಲ್ಲಿ ಖ್ಯಾತಿಯ ಬಯಕೆಯನ್ನು ಹತ್ತಿಕ್ಕಿ, ಸಹಜವಾಗಿ ಹೇಗೆ ಬಾಳಬೇಕೆಂದು ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ನಮಗೆ ನಮ್ಮಲ್ಲೇ ಹೆಚ್ಚು ಪ್ರೀತಿ. ನಮ್ಮನ್ನು ನಾವು ಪ್ರೀತಿಸುವಷ್ಟು ಮತ್ಯಾರನ್ನೂ ಪ್ರೀತಿಸುವುದಿಲ್ಲ. 'ನಾನು ಏನು' ಎಂಬುದು ನನಗೆ ಅರಿವಿದ್ದರೂ ಸತ್ಯವನ್ನು ಒಪ್ಪಿಕೊಳ್ಳದೆ ನಮ್ಮನ್ನು ನಾವು ಪ್ರತಿಷ್ಠಿಸಿಕೊಳ್ಳಲು ಸದಾ

ಪ್ರಯತ್ನಪಡುತ್ತಿರುತ್ತೇವೆ. ಇದೇ ಹೆಸರಿನ ಹಂಬಲ, ಆದರೆ ಈ ಹೆಸರಿನ ಹಂಬಲದಿಂದ ನಾವು ಆಡುವ ಮಾತು, ಮಾಡುವ ಕೆಲಸಗಳೆಲ್ಲವೂ ಇಂದ್ರಿಯಾಸಕ್ತಿಯ, ಅರಿಷಡ್ವರ್ಗಗಳ 'ಕಸರು' ತುಂಬಿ ನಮ್ಮನ್ನು ಮತ್ತು ನಮ್ಮ ಸುತ್ತಿರುವ ಸಮಾಜವನ್ನೂ ಸಹ ಕಲುಷಿತಗೊಳಿಸುತ್ತದೆ. ನಾವು ಯಾವ ಘನಂದಾರಿ ಕೆಲಸ ಮಾಡಿದ್ದೇವೆ ಎಂದು ನಮ್ಮನ್ನು ಜನ ಗುರುತಿಸಬೇಕು, ಬಿರುದುಗಳನ್ನು ನೀಡಿ ನಮ್ಮನ್ನು ಹಾಡಿ ಹೊಗಳಬೇಕು ಎಂದು ಬಯಸುತ್ತಿದ್ದೇವೆ ಎಂದು, ನಮಗೆ ಅರ್ಥವಾಗುವುದಿಲ್ಲ. ಆದರೂ ಬಯಸುತ್ತೇವೆ. ನಮ್ಮ ಬಯಕೆ ಈಡೇರಿದರೆ ಮತ್ತಷ್ಟು ಕೀರ್ತಿಯ ಆಸೆ ಪಡುತ್ತೇವೆ, ಈಡೇರದಿದ್ದರೆ ಮತ್ತೆ ಮತ್ತೆ ಪ್ರಯತ್ನದ ಹಾದಿಯಲ್ಲಿ ಆಡಬಾರದ ಮಾತು ಮತ್ತು ಮಾಡಬಾರದ ಕೆಲಸಗಳನ್ನು ಮಾಡುತ್ತಾ, ನಮ್ಮೊಳಕ್ಕೆ ಬೇಡದ ಕಸವನ್ನು ತುಂಬಿಕೊಳ್ಳುತ್ತೇವೆ. ಇದು ವಿಷಮ ಪರಿಸ್ಥಿತಿ,

ಅಂತಹ ವಿಷಮತೆಯಿಂದ ದೂರವಿರಬೇಕಾದರೆ, ನಮ್ಮ ಮನಸ್ಸನ್ನು ತಿಳಿಯಾಗಿಸಿಕೊಳ್ಳಬೇಕು. ಅಭ್ಯಾಸಬಲದಿಂದ ಮನವನ್ನು ತೊಳೆದುಕೊಂಡು ಮಗುವಿನಂತೆ ಮುಗ್ಧರಾದರೆ, ಮನಸ್ಸು ತಿಳಿಯಾಗುತ್ತದೆ. ಹಸುವಿನಂತೆ, ಬೇಡುವುದಕ್ಕಿಂತ ಕೇವಲ ನೀಡುವುದೇ ಅಧಿಕವಾದರೆ, ಆಗಲೂ ಸಹ ಹೆಸರಿನ ಹಂಬಲ ನಮ್ಮಲ್ಲಿ ಅಳಿಸಿಹೋಗಬಹುದು. ಒಂದು ಪುಟ್ಟ ಸಸಿ ತನ್ನ ಪ್ರಯತ್ನದಿಂದಲೇ ಪ್ರಕೃತಿಯಿಂದ ತನಗೆ ಬೇಕಾದ ಸಾರವನ್ನು ಪಡೆದುಕೊಂಡು ಗಿಡವಾಗಿ, ಮರವಾಗಿ, ಹೆಮ್ಮರವಾಗಿ, ಬೆಳೆದು ಅನ್ಯರಿಗೆ ವಿಫುಲವಾಗಿ ಆಶ್ರಯವನ್ನು ನೀಡುತ್ತಾ, ನೆರಳು, ಪುಷ್ಪ, ಸುಗಂಧ ಮತ್ತು ಮದುರವಾದ ಫಲಗಳನ್ನು ನೀಡುತ್ತಾ, ಯಾರಿಂದಲೂ ಏನನ್ನೂ ಅಪೇಕ್ಷೆಪಡದೆ, ಕಡೆಗೆ ತನ್ನನ್ನು ಕೊಡಲಿಯಿಂದ ಕತ್ತರಿಸುವಾಗಲೂ ಪ್ರತಿಭಟಿಸದೇ ನಮ್ರತೆಯಿಂದ ತಲೆ ಬಾಗುವಂತೆ ನಾವಾಗಬೇಕು. ಈ ಹೆಸರಿನ ಹಂಬಲದಿಂದ ನಮ್ಮ ಮನಸ್ಸಿಗೆ ಅಂಟಿಕೊಳ್ಳುವ ಕಲ್ಮಷಗಳನ್ನು ನಾವೇ ತೊಳೆದುಕೊಳ್ಳುವ ಪ್ರಯತ್ನವನ್ನು ಮಾಡಿ, ನಮಗೆ ನಾವೇ 'ಪೊರಕೆ'ಯಂತಾಬೇಕು.

ಜಗತ್ತನ್ನು, ಅನ್ಯರನ್ನು ಬಿಟ್ಟು 'ನಮ್ಮನ್ನು ನಾವು ಅಧಿಕವಾಗಿ ಪ್ರೀತಿಸುವುದೇ ಹೆಸರಿನ ಹಂಬಲಕ್ಕೆ ಕಾರಣ. ಇದು ಅಹಂಕಾರಕ್ಕೆ ಕಾರಣವಾಗುತ್ತದೆ. ಅಹಂಕಾರ ಮತ್ತೆಲ್ಲಾ ಅನಾಹುತಗಳಿಗೂ ಮೂಲವಾಗುತ್ತದೆ. ಹಾಗಾಗಿ ಅಹಂಕಾರವನ್ನು ತೊರೆದು, ಸಹಜವಾಗಿ ಎಂದರೆ ಮಾನ್ಯ ಗುಂಡಪ್ಪನವರು 'ಎಲ್ಲರೊಳಗೊಂದಾಗು “ಎಂದು ಹೇಳುವಂತೆ ನಾವು ಎಲ್ಲರಂತೆ ಇದ್ದು, ಸ್ವಪ್ರತಿಷ್ಠೆಯನ್ನು ಬಿಟ್ಟರೆ, ನಮಗೂ ಹಿತ ಮತ್ತು ಅನ್ಯರಿಗೂ ಸುಖ.

**ಮುಕ್ತಕ – 657** **ಸಿರಿಮಾತ್ರಕೇನಲ್ಲ, ಪೆಣ್ ಮಾತ್ರಕೇನಲ್ಲ ।**
**ಕರುಬಿ ಜನ ಕೆಸರುದಾರಿಯಲಿ ಸಾಗುವುದು ॥**
**ಬಿರುದ ಗಳಿಸಲಿಕೆಸೆಪ, ಹೆಸರಪಸರಿಸಲೆಸೆಪ ।**
**ದುರಿತಗಳ್ಗೆಣೆಯುಂಟೆ? ಮಂಕುತಿಮ್ಮ ॥**





ಸಿರಿಮಾತ್ರಕೇನಲ್ಲ=ಸಿರಿ+ಮಾತ್ರಕೆ+ಏನಲ್ಲ, ಗಳಿಸಲಿಕೆಸೆಪ=ಗಳಿಸಲಿಕೆ+ಎಸೆಪ,
ಹೆಸರಪಸರಿಸಲೆಸೆಪ=ಹೆಸರ+ಪಸರಿಸಲು+ಎಸೆಪ, ದುರಿತಗಳಗೆಣೆಯುಂಟೆ=ದುರಿತಗಳಿಗೆ+ಎಣೆ+ಉಂಟೆ
ಸಿರಿ=ಐಶ್ವರ್ಯ, ಪೆಣ್ =ಹೆಣ್ಣು, ಕರುಬಿ=ಕೊರಗಿ, ಎಸೆಪ=ಮಾಡುವ, ದುರಿತಗಳಿಗೆ=ದುಷ್ಕಾರ್ಯಗಳಿಗೆ,
ಪಾಪಗಳಿಗೆ, ಎಣೆ +ಮಿತಿ, ಎಲ್ಲೆ

ಜಗತ್ತಿನ ಜನರು ಕೆಟ್ಟ ದಾರಿಯಲ್ಲಿ ಹೋಗುವುದು ಕೇವಲ ಹಣವನ್ನು ಸಂಪಾದಿಸುವುದಕ್ಕೆ ಮಾತ್ರವಲ್ಲ, ಹೆಣ್ಣನ್ನು ಮೆಚ್ಚಿಸಲಿಕ್ಕಾಗಲೀ ಅಥವಾ ಪಡೆಯಲಿಕ್ಕಾಗಲೀ ಮಾತ್ರವಲ್ಲ. ಹೆಸರು ಗಳಿಸುವುದಕ್ಕೆ ಮತ್ತು ಆ ಗಳಿಸಿದ ಹೆಸರನ್ನು ಜಗತ್ತಿನ ನಾಲ್ಕೂ ಮೂಲೆಗಳಿಗೆ ಪ್ರಚಾರಮಾಡಿಕೊಳ್ಳಲಿಕ್ಕೆ ಇವನು ತುಳಿಯುವ ದುರ್ದಾರಿಗಳಿಗೆ, ಮಾಡುವ ಪಾಪಗಳಿಗೆ, ಮಿತಿಯೇ ಇಲ್ಲ ಎಂದು, ಇಂದಿಗೂ ಪ್ರಸ್ತುತವಾಗುವಂತೆ ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಕೇವಲ ಹಣ ಸಂಪಾಧನೆಗಾಗಿ ಹೋರಾಡುವ ಜನರನ್ನು ನಾವು ಬಹಳಷ್ಟು ನೋಡಿದ್ದೇವೆ. ಅವರಲ್ಲಿ, ಕಷ್ಟಪಟ್ಟು ದುಡಿದು, ಬಂದದ್ದರಲ್ಲಿ ತಾವೂ ತೃಪ್ತಿಪಟ್ಟು ಅನ್ಯರಿಗೂ ಸಾಧ್ಯವಾದಷ್ಟು ಉಪಕಾರ ಮಾಡುವವರನ್ನೂ ನೋಡಿದ್ದೇವೆ. ಯಾರಿಗೂ ತೊಂದರೆ ಕೊಡದೆ, ತಮ್ಮಷ್ಟಕ್ಕೆ ತಾವು ಗಳಿಸಿದ ಸಂಪತ್ತನ್ನು ತಾವೇ ಅನುಭವಿಸುತ್ತಾ, ಪರರ ಬಗ್ಗೆ ತಲೆ

ಕೆಡಿಸಿಕೊಳ್ಳದೆ ಪರರಿಗೆ ಉಪಕಾರಿಗಳಾಗದಿದ್ದರೂ, ನಿರುಪದ್ರವಿಗಳಂತೆ ಬದುಕುವವರನ್ನೂ ನೋಡಿದ್ದೇವೆ. ಇಷ್ಟಪಟ್ಟ ಹೆಣ್ಣನ್ನು ಕಟ್ಟಿಕೊಂಡೊ ಅಥವಾ ಕಟ್ಟಿಕೊಂಡ ಹೆಣ್ಣನ್ನು ಇಷ್ಟಪಟ್ಟೋ ಶಾಂತವಾಗಿ ಬದುಕುವವರನ್ನೂ ನೋಡಿದ್ದೇವೆ. ಇವರಿಂದ ಸಮಾಜಕ್ಕೆ ಯಾವ ತೊಂದರೆಯೂ ಇಲ್ಲ. ಆದರೆ ಹಣವನ್ನು ಗಳಿಸುವುದಕ್ಕಾಗಿ ದುರ್ಮಾರ್ಗಿಗಳಾಗಿ, ಸಮಾಜ ಕಂಟಕರಾಗಿ, ಸದಾ ಸ್ವಾರ್ಥ ಸಾಧನೆಯೇ ಗುರಿಯಾಗಿಟ್ಟುಕೊಂಡಿರುವವರೂ, ತಮ್ಮ ಗುರಿಮುಟ್ಟಲು ಯಾವುದೇ ದುರಾಚಾರವನ್ನು ಮಾಡಲು ಹೇಸದ ದುಷ್ಟರನ್ನೂ ಮತ್ತು ಹೆಣ್ಣಿಗಾಗಿ ಹೊಡೆದಾಡಿ ಮಹಾ ಮಹಾ ಯುದ್ಧಗಳನ್ನೇ ಮಾಡಿದ ದುರಾತ್ಮರನ್ನೂ ಕಂಡು ಕೇಳಿದ್ದೇವೆ ಅಲ್ಲವೇ? ಅವರೆಲ್ಲಾ ಸಾಗುವುದೇ ಕೆಸರ ದಾರಿಯಲ್ಲಿ, ಅವರ ಮನಸ್ಸು ಬುದ್ಧಿಗಳಿಗೆ, ಅವರ ಹಾದಿಯ ಕೆಸರು ರಾಡಿ ಅಂಟಿಕೊಳ್ಳುತ್ತದೆ.

ಆದರೆ ಹೆಸರು ಗಳಿಸುವ ದಾಹ ಬಂದುಬಿಟ್ಟರೆ ಸಾಕು, ಅದನ್ನು ತಣಿಸಿಕೊಳ್ಳಲು ಮನುಷ್ಯ ಏನನಾದರೂ ಮಾಡಲು ತಯಾರಾಗಿ ಬಿಡುತ್ತಾನೆ. ಹೆಸರು ಗಳಿಸುವುದು ಮತ್ತು ಗಳಿಸಿದ ಖ್ಯಾತಿಯನ್ನು ಹರಡುವಂತೆ ಮಾಡುವ ಮಾರ್ಗದಲ್ಲಿ ಮನುಷ್ಯ ಏನು ಮಾಡಲೂ ಹೇಸುವುದಿಲ್ಲ. ಅದಕ್ಕೆ ನಮ್ಮ ರಾಜಕಾರಣಿಗಳು, ಕುಖ್ಯಾತ ಸಾಹಿತಿಗಳು ಮತ್ತು ತಮ್ಮನ್ನು ತಾವೇ ಸಮಾಜ ಸೇವಕರು ಎಂದು ಕರೆದುಕೊಳ್ಳುವ ದುಷ್ಟರು, ಪ್ರತ್ಯಕ್ಷ ಮತ್ತು ಪ್ರಸ್ತುತ ಸಮಾಜದಲ್ಲಿ ನಮಗೆ ಸಿಗುವ ನಿದರ್ಶನಗಳು. ಜನರು ಕಟ್ಟಿದ ಕರಗಳನ್ನು, ಯಾರೋ ಪುಣ್ಯಾತ್ಮರು ರೂಪಿಸಿದ ಸರ್ಕಾರದ ಯೋಜನೆಗಳಲ್ಲಿ ಬಳಸಿ, ಆ ಯೋಜನೆಯಡಿ ಸಾಕಷ್ಟು ಹಣವನ್ನು ಸ್ವಾಹಾ ಮಾಡಿ, ಆ ಯೋಜನೆಯನ್ನು ತಾವೇ ರೂಪಿಸಿ ತಮ್ಮ ಸ್ವಂತ ದುಡ್ಡಿನಿಂದ ಅನುಷ್ಠಾನಗೊಳಿಸಿರುವಂತೆ, ತಮ್ಮ ಹೆಸರಿನ ನಾಮ ಫಲಕಗಳೇನು, ಪ್ರಚಾರವೇನು? ಅವರ ಅಬ್ಬರ ಅಷ್ಟಿಷ್ಟಲ್ಲ. ಇದನ್ನೇ ಮಾನ್ಯ ಗುಂಡಪ್ಪನವರು 'ಹೆಸರಪಸರಿಸಲೆಸೆಪ ದುರಿತಗಳ್ಗೆಣೆಯುಂಟೆ' ಎಂದಿದ್ದಾರೆ.

ನಮ್ಮ ಆಯಸ್ಸು ಇರುವವರೆಗೆ ಈ ಜಗತ್ತಿನಲ್ಲಿ ಬದುಕಿ ಕೇವಲ ನಾವು ಗಳಿಸಿಕೊಂಡು, ಕಡೆಗೆ ಉಳಿಸಿಕೊಂಡ ಗುಣಗಳನ್ನು ಹೊತ್ತುಹೊಗುವುದೇ ಬದುಕು. ಇದನ್ನು ಅರ್ಥಮಾಡಿಕೊಳ್ಳದೆ, ತಾವೇನೋ ಈ ಜಗತ್ತಿನಲ್ಲಿ ಶಾಶ್ವತವಾಗಿದ್ದುಬಿಡುತ್ತೇವೆ ಎನ್ನುವಂತೆ ಬೀಗಿ, ದುರ್ಮಾರ್ಗಗಳನ್ನು ತುಳಿಯುವ ಈ ಜನರ ಅಜ್ಞಾನಕ್ಕೆ ಮಿತಿಯೇ ಇಲ್ಲ. ನಾವೇನಾದರೂ ಅಂತಹ ಯೋಚನೆಗಳನ್ನು ನಮ್ಮ ಮನಸ್ಸಿನಲ್ಲಿ ಇಟ್ಟುಕೊಂಡಿರುವುದಾದರೆ, ತಕ್ಷಣವೇ ಅದನ್ನು ಹೊರಹಾಕಿದರೆ, ನಾವು ದುರ್ಮಾರ್ಗಕ್ಕೆ ಇಳಿಯುವ ಸಾಧ್ಯತೆಗಳು ಕ್ಷೀಣಿಸಿ, ನಮ್ಮ ಬದುಕು ಶಾಂತವಾಗಿ, ಅನ್ಯರಿಗೂ ಹಿತವಾಗಬಹುದು.

**ಮುಕ್ತಕ – 658**

**ಎದ್ದೆದ್ದು ಬೀಳುತಿಹೆ, ಗುದ್ದಾಡಿ ಸೋಲುತಿಹೆ ।**
**ಗದ್ದಲವ ತುಂಬಿ ಪ್ರಸಿದ್ಧನಾಗುತಿಹೆ ॥**
**ಉದ್ಧರಿಸುವೆನು ಜಗವನೆನ್ನುತಿಹ ಸಖನೆ, ನಿ- ।**
**ನ್ನುದ್ಧಾರವೆಷ್ಟಾಯ್ತೊ ? - ಮಂಕುತಿಮ್ಮ ॥**

ಜಗವನೆನ್ನುತಿಹ =ಜಗವನು+ಎನ್ನುತಿಹ, ನಿನ್ನುದ್ಧಾರವೆಷ್ಟಾಯ್=ನಿನ್ನ+ಉದ್ಧಾರವು+ಎಷ್ಟು+ಆಯ್ಕೆ, ಸಖನೆ=ಸ್ನೇಹಿತನೆ

“ನಿನ್ನ ಪ್ರಸಿದ್ಧನಾಗುವ ಹಂಬಲದ ಕಾರಣ ನೀನು ಬಹಳಷ್ಟು ಪರದಾಡುತ್ತಿದ್ದೀಯೆ, ಹೋರಾಡಿ ಸೋಲುತ್ತಿದ್ದೀಯೆ. ಹೆಚ್ಚು ಗದ್ದಲವನು ಎಬ್ಬಿಸಿ ಪ್ರಕ್ಯಾತಿಯನ್ನು ಹೊಂದುತ್ತಿದ್ದೀಯೆ. ಆದರೆ ನಿನ್ನ ಪ್ರಯತ್ನಗಳಿಂದ ಜಗವನ್ನು ಉದ್ಧಾರಮಾಡುತ್ತೇನೆ ಎಂದು ಬೀಗುವ ನೀನು, ಸ್ವತಃ ಎಷ್ಟು ಉದ್ಧಾರವಾಗಿದ್ದೀಯೆ?” ಎಂದು ಕೇಳುತ್ತಾ ಮಾರ್ಮಿಕವಾಗಿ ಒಂದು ಪ್ರಶ್ನೆಯನ್ನು ನಮ್ಮೆಲ್ಲರ ಮುಂದೆ ಇಟ್ಟು, ನಮಗೆಲ್ಲಾ ಆತ್ಮಾವಲೋಕನ ಮಾಡಿಕೊಳ್ಳುವ ಪ್ರೇರಣೆ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮೇಲಿನ ಸಾಲುಗಳು, ಅವರು ಬರೆದ ಕಾಲಕ್ಕಿಂತಲೂ ಇಂದು ಹೆಚ್ಚು ಪ್ರಸ್ತುತ ಎಂದು ಅನಿಸುತ್ತದೆ. ಮೌನವಾಗಿ ತಮಗೆ ದಕ್ಕಿದ ಕರ್ತವ್ಯವನ್ನು ಯಾವುದೇ ಬಿರುದು, ಮನ್ನಣೆ ಅಥವಾ ಪದಕ, ಪದವಿಗಳಿಗೆ ಆಸೆ ಪಡದೆ ಒಂದು ತಪಸ್ಸಿಂಬಂತೆ ಮಾಡುತ್ತಾ ಬದುಕುವ ಜನರ ಎಷ್ಟೋ ನಿದರ್ಶನಗಳು ನಮಗೆ ಈ ಜಗತ್ತಿನಲ್ಲಿ ಸಿಗುತ್ತದೆ ಅಲ್ಲವೇ? ಅವರದು ಸ್ವಲ್ಪವೂ ಗದ್ದಲವಿರುವುದಿಲ್ಲ, ಏಕೆಂದರೆ ಅವರಿಗೆ ಸತ್ವವಿರುತ್ತದೆ. ಅವರ ಸತ್ವವೇ ಅವರ ಬಲ.

ಅವರು ಅದರ ಬಲದ ಆಧಾರದ ಮೇಲೆಯೇ ಪ್ರಸಿದ್ಧರಾಗುತ್ತಾರೆ ಮತ್ತು ಅವರ ಪ್ರಸಿದ್ಧಿ ಬಹಳ ಕಾಲ ಜನಮಾನಸದ ನೆನಪಿನಲ್ಲಿ ಉಳಿಯುತ್ತದೆ.

ಆದರೆ ಅಂತಹ ಅಂತಃಸತ್ವವಿಲ್ಲದವರು, ಡಂಬಾಚಾರದಿಂದ ಪ್ರಸಿದ್ಧಿ ಹೊಂದುತ್ತಾರೆ. ಅದಕ್ಕೆ ಇಂದಿನ ನಮ್ಮ ರಾಜಕಾರಣಿಗಳೇ ಸೂಕ್ತ ಉದಾಹರಣೆ, ವಿದ್ಯೆ, ಸಂಸ್ಕಾರ, ಸನ್ನಡತೆ, ಸದ್ವಿಚಾರಗಳಂತಹ ಗುಣಗಳ





ಬಲವಿಲ್ಲದೆ, ಕೇವಲ ಗುಂಪುಗಾರಿಕೆ ಮಾಡಿಕೊಂಡು, ತಮ್ಮನ್ನು ತಾವೇ ದ್ರೋಹಮಾಡಿಕೊಳ್ಳುತ್ತಾ, ಇಡೀ ಜಗತ್ತಿಗೆ ದ್ರೋಹ ಮಾಡಬಲ್ಲ ಕ್ಷಮತೆಯನ್ನು ಬೆಳೆಸಿಕೊಂಡು, ಕೇವಲ ಪ್ರಚಾರದಿಂದ ಮಾತ್ರ ತಮ್ಮ ಹೆಸರನ್ನು ಉಳಿಸಿಕೊಳ್ಳಲು, ಹೆಣಗುವ ಇವರನ್ನು ನೋಡಿಯೇ ಇರಬೇಕು, ಮಾನ್ಯ ಗುಂಡಪ್ಪನವರು ಎದ್ದೆದ್ದು ಬೀಳುತಿಹೆ, ಗುದ್ದಾಡಿ ಸೋಲುತಿಹೆ 'ಎಂದು ಹೇಳಿರಬೇಕು.

ತಮ್ಮನ್ನು ತಾವು ಸಮಾಜ ಸೇವಕರೆಂದು ಕರೆದುಕೊಳ್ಳುವ ಇವರುಗಳು, ನಿಜ ಸ್ವರೂಪದಲ್ಲಿ ಸಮಾಜ ಘಾತುಕರು. ತಮ್ಮ ಪದವಿ, ಪ್ರಾಬಲ್ಯ ಮತ್ತು ಹೆಸರನ್ನು ಉಳಿಸಿಕೊಳ್ಳಲು ಇವರು ಮಾಡುವ ಪ್ರಯತ್ನದ ಫಲವೇ ಸಮಾಜದಲ್ಲಿ ನಡೆಯುವ ದಂಗೆ, ದುಂಡಾವರ್ತಿ ಮುಂತಾದ ಸಾಮಾಜಿಕ ದುರಿತಗಳು, ಅವರು ಸತ್ಕಾರ್ಯಗಳನ್ನು ಮಾಡುವುದೇ ಇಲ್ಲ, ಅವುಗಳ ಬಲದಿಂದ ಅವರಿಗೆ ಒಳ್ಳೆಯ ಹೆಸರು ಬರುವುದೇ ಇಲ್ಲ. ಹೀಗಲ್ಲದಿದ್ದರೆ ಹಾಗೆ' ಎಂದು ವಾಮಮಾರ್ಗದಲ್ಲಿ ಹೆಸರು ಉಳಿಸಿಕೊಳ್ಳಲು ಬಯಸುವ ಇವರೇ ಗೂಂಡಾಗಳನ್ನು, ದುಷ್ಟರನ್ನು ಸಾಕುವವರು. ಇವರೇ ಅಧೋಗತಿಗೆ ಇಳಿದ ಮೇಲೆ, ಇನ್ನು ಸಮಾಜವನ್ನು ಹೇಗೆ ಉದ್ಧಾರಮಾಡಿಯಾರು? ಅಂತರಂಗಲ್ಲಿ ಕುಸಿದ, ಕೊಳೆತುನಾರುವ ದುರ್ನಡತೆಯ ಈ ಜನರಿಂದ ಸಮಾಜದ ಉದ್ಧಾರ ಸಾಧ್ಯವೇ ಇಲ್ಲ. ಸತ್ಕಾರ್ಯದಿಂದ ಹೆಸರು

ಪಡೆದರೆ, ಆ ಕಾರ್ಯ ಮತ್ತು ಕರ್ತೃ ಇಬ್ಬರೂ ಉದ್ಧಾರವಾದಾರು. ಅಲ್ಲದೆ ದುಷ್ಕಾರ್ಯಗಳಿಂದ ಹೆಸರು ಪಡೆಯಲು ಪ್ರಯತ್ನಪಟ್ಟರೆ ಕಾರ್ಯವೂ ಹಾಳು, ಕರ್ತೃವೂ ನಾಶವಾಗುತ್ತಾನೆ.

**ಮುಕ್ತಕ – 659**

**ಎಂದೊ ನಿನಗೊಂದುದಿನ ಮೂಗು ಮುರಿಯುವುದು ದಿಟ |**
**ವೃಂದಾರಕರು ಮತ್ತರಿಸರೆ, ಗರ್ವಿತರ? ||**
**ಸಂದರ್ಭಗಳನದಕ್ಕೆ ಜೋಡಿಪನು ವಿಧಿರಾಯ |**
**ಅಂದಿಕೊಳ್ಳನೆ ನಿನ್ನ? - ಮಂಕುತಿಮ್ಮ ||**

ನಿನಗೊಂದುದಿನ=ನಿನಗೆ+ಒಂದು+ದಿನ, ಸಂದರ್ಭಗಳನದಕೆ ಸಂದರ್ಭಗಳನು+ಅದಕೆ,
ವೃಂದಾರಕರು=ದೇವತೆಗಳು, ಜೋಡಿಪನು=ಸೇರಿಸುವನು, ಅಂದಿಕೊಳ್ಳನೆ=ಹಿಡಿದುಕೊಳ್ಳನೆ

"ಮುಂದೆ ಎಂದಾದರೂ ಒಂದು ದಿನ ಖಂಡಿತ ನಿನಗೆ ಗರ್ವ ಭಂಗವಾಗುತ್ತದೆ, ನಿನ್ನ ಪ್ರತಿಷ್ಠೆ ಹೆಚ್ಚಾದರೆ ಆ ದೇವತೆಗಳು ನಿನ್ನ  ನೋಡಿ ಈರ್ಷ್ಯಪಡುತ್ತಾರೆ ಮತ್ತು ವಿಧಿರಾಯ ನಿನ್ನ ಗರ್ವ ಭಂಗಕ್ಕೆ ಸರಿಯಾದ ಸಂದರ್ಭಗಳನ್ನು ಸೃಷ್ಟಿಸಿ, ನಿನ್ನನ್ನು ಬಗ್ಗು ಬಡಿಯದೆ ಇರುವನೇ?" ಎಂದು ವಾಸ್ತವವಾಗಿ ಜಗತ್ತಿನಲ್ಲಿ ಪ್ರಸಿದ್ಧಿ ಪಡೆದವರು ಅತಿಯಾಗಿ ತೋರುವ ಗರ್ವದ ಭಂಗ ಹೇಗಾಗುತ್ತದೆಂದು ಉಲ್ಲೇಖ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು.





"ಅತಿ ಸರ್ವತ್ರ ವರ್ಜಯೇತ್" ಎನ್ನುವ ಮಾತಿದೆ. ಒಳ್ಳೆಯತನವಾಗಲಿ, ದುರ್ನಡತೆಯಾಗಲಿ ಒಂದು ಮಿತಿಯಲ್ಲಿರಬೇಕು. ಮಿತಿಮೀರಿದರೆ ಏನಾಗುತ್ತದೆ ಎನ್ನುವುದಕ್ಕೆ ನಮ್ಮಲ್ಲಿ ಹೇರಳ ಉದಾಹರಣೆಗಳಿವೆ. ಹಿರಣ್ಯಕಶಿಪು, ದುರ್ಯೋಧನ, ಯುಧಿಷ್ಠಿರ, ಕಂಸ, ಜರಾಸಂದರಂತಹ ಪುರಾಣ ಪುರುಷರು, ಇಂದಿರಾ, ಜಿಯಾ-ಉಲ್-ಹಕ್, ಇದಿ-ಅಮಿನ್, ಮುಂತಾದ ಆಧುನಿಕ ವ್ಯಕ್ತಿಗಳೇ ನಮಗೆ ಸಿಗುವ ಹಲವು ನಿದರ್ಶನಗಳು. ಹಾಗಾಗಿ ಹೆಸರಿನ ಹಂಬಲವು

ಅತಿಯಾಗಿ, ಮಾಡಬಾರದ ಕೆಲಸಗಳನ್ನು ಮಾಡಿದರೆ, ಎಂದಾದರೊಂದು ದಿನ ಗರ್ವಭಂಗವಾಗಲೇಬೇಕು. “ಎಲಾ!! ಇವನು ನಮಗಿಂತ ಪ್ರಸಿದ್ಧನಾಗಿಬಿಟ್ಟನೆ?' ಎನ್ನುವಂತೆ ದೇವತೆಗಳೂ (ವೃಂದಾರಕರು) ಸಹ ಈರ್ಷ್ಯಪಟ್ಟು, ನಮ್ಮ ಗರ್ವ ಮುರಿಯಲು ಸೂಕ್ತ ವಾತಾವರಣವನ್ನು ನಿರ್ಮಿಸುತ್ತಾರೆ ಎನ್ನುತ್ತಾರೆ ಗುಂಡಪ್ಪನವರು.

ಯಾರು ಯಾವುದರ ಭಾರವನ್ನು ಹೆಚ್ಚಿಸಿಕೊಳ್ಳುತ್ತಾರೋ, ಅವರು ಅದರದೇ ಭಾರದಿಂದ ತುಳಿಯಲ್ಪಟ್ಟು ನಲುಗಿ ಹೋಗುತ್ತಾರೆ. ಅದು ಧನದಾಸೆಯ, ಹೆಸರಿನಾಸೆಯ, ಕೀರ್ತಿ ಪ್ರತಿಷ್ಠೆಗಳಾಸೆಯ ಅಥವಾ ಇನ್ಯಾವುದೇ ಭಾರವಾಗಬಹುದು. ಮಿತಿಯೊಳಿದ್ದರೆ 'ಹಿತ', ಮಿತಿ ಮೀರಿದರೆ 'ಹತ'. ಮಿತಿ ಮೀರಿಹೋದರೆ 'ಪ್ರಕೃತಿಸ್ತ್ವಾಂ ನಿಯೋಕ್ಷ್ಯತಿ' ಎನ್ನುವಂತೆ ಪ್ರಕೃತಿಯೇ ಸರಿಪಡಿಸುತ್ತದೆ. ಗುಂಡಪ್ಪನವರು ಇದನ್ನೇ 'ಸಂದರ್ಭಗಳನದಕೆ ಜೋಡಿಪನು ವಿಧಿರಾಯ' ಎಂದರು. ನಾವು ನಮ್ಮ ಅಹಂಕಾರದ ಭಾರದಿಂದ ಮಿತಿ ಮೀರಿ ಹೋದರೆ, ಆ ವಿಧಿ ನಮ್ಮನ್ನು ತನ್ನ ಹತೋಟಿಗೆ ತಂದುಕೊಳ್ಳುತ್ತದೆ ಎಂದು ಅರ್ಥ.

ಹಾಗಾಗಿ ಯಾವುದೂ ಮಿತಿಮೀರದೆ, ಅಹಂಕಾರವನ್ನು ತೊರೆದು, ಅರಿಷಡ್ವರ್ಗಗಳಿಗೆ ಬಲಿಯಾಗದೆ ವಿಧಿಗೆ ತಲೆಬಾಗಿ ನಮಗೆ ಸಿಗುವುದೆಲ್ಲಾ ಮತ್ತು ನಮಗೆ ಆಗುವುದೆಲ್ಲ ಆ ಪರಮಾತ್ಮನ ಕೃಪೆಯಿಂದ, ವಿಧಿ ಲಿಖಿತ ರೀತಿಯಲ್ಲಿ ನಡೆಯುತ್ತದೆ ಎಂದು ಭಾವಿಸುತ್ತಾ, ನಮಗೆ ಸಂದ ಕರ್ತವ್ಯವನ್ನು ನಿರ್ವಂಚನೆಯಿಂದ ಮಾಡಿದರೆ, ನಮ್ಮ ಜೀವನ ಶಾಂತವಾಗಿ ಅರ್ಥಪೂರ್ಣವಾಗಿ ಸಾಗುತ್ತದೆ. ನಮ್ಮ ಗುಣವೇನು ಎಂದು ಅರಿತು, ಅದನ್ನು ಉತ್ತಮಗೊಳಿಸುವ ಪ್ರಯತ್ನವನ್ನು ಮಾಡಿ, ಸದಾ 'ಪರಾಭಿಮುಖ' ವಾಗಿದ್ದರೆ ಜೀವನ ಹಿತವಾಗಿರುತ್ತದೆ.

**ಮುಕ್ತಕ – 660**

**ಗರುವಭಂಗವನಾಗಿಸಿದನು ಗರುಡಂಗೆ ಹರಿ ।**
**ಮುರಿಯಿಸಿದನಂತೆ ಫಲುಗುಣನ ಹೆಮ್ಮೆಯನು ॥**
**ಕರುಬುವಂ ವಿಧಿ ಸೈಸನಾರೊಳಂ ದರ್ಪವನು ।**
**ಶಿರವ ಬಾಗಿಹುದೆ ಸರಿ - ಮಂಕುತಿಮ್ಮ ॥**

ಗರುವಭಂಗವನಾಗಿಸಿದನು=ಗರುವ+ಭಂಗವನು+ಆಗಿಸಿದನು. ಸೈಸನಾರೊಳಂ=ಸೈಸನು+ಆರೊಳುಂ, ಗರುವ=ಗರ್ವ, ಭಂಗ=ಮುರಿ, ಫಲುಗುಣ=ಫಲ್ಗುಣ,ಅರ್ಥಾತ್ ಅರ್ಜುನ, ಕರುಬುವಂ=ಅಸೂಯೆಪಡುವನು, ಸೈಸನು=ಸಹಿಸನು, ದರ್ಪವನು= ಗರ್ವವನು, ಶಿರವ=ತಲೆಯ

ಗರುಡನ ತಾಯಿ ವಿನುತೆ, ತನ್ನ ಸವತಿ ಕದ್ರುವಿನೊಡನೆ ಪಂದ್ಯದಲ್ಲಿ ಸೋತು ಅವಳ ದಾಸ್ಯವನ್ನು ಸ್ವೀಕರಿಸುತ್ತಾಳೆ. ತಾಯನ್ನು ದಾಸ್ಯದಿಂದ ಬಿಡಿಸಲು, ದೇವಲೋಕದಿಂದ ಅಮೃತವನ್ನು ತರಲು ಹೊರಟು, ದೇವತೆಗಳೊಡನೆ ಹೋರಾಡಿ, ಕಡೆಗೆ ದರ್ಪದಿಂದ ಇಂದ್ರನಮೇಲೆ ಯುದ್ಧಕ್ಕೆ ನಿಂತಾಗ, ಇಂದ್ರ 'ಹರಿ'ಯ ಮೊರೆ ಹೋಗಲು, ಹರಿಯ ಪಾದದಡಿ ನಲುಗಿದ ಗರುಡನ ಗರ್ವ ಭಂಗವಾಗುತ್ತದೆಂದು ಭಾಗವತ ಪುರಾಣ ಹೇಳುತ್ತದೆ. ಅದೇ ರೀತಿ ಕುರುಕ್ಷೇತ್ರ ಯುದ್ಧದಲ್ಲಿ ವೀರಾವೇಶದಿಂದ ಹೋರಾಡುತ್ತಾ ತನಗೆ ಸಮಾನರಾರೂ ಇಲ್ಲವೆಂದು ಬೀಗುತ್ತಿದ್ದ ಅರ್ಜುನನಿಗೆ, ಕೇವಲ ಒಂದು ಹದ್ದಿನಿಂದ ಗರ್ವ ಭಂಗವಾಗುವಂತಹ ಪರಿಸ್ಥಿತಿಯನ್ನು ಉಂಟುಮಾಡುತ್ತಾನೆ ಶ್ರೀ ಕೃಷ್ಣ

ಹೀಗೆ ತಮ್ಮ ಬಲದ ಭಾರದಿಂದ ಉನ್ಮತ್ತರಾಗಿ ಮೆರೆದವರ ಗರ್ವ ಭಂಗವಾದ ದೃಷ್ಟಾಂತಗಳು ನಮಗೆ ಕಥೆ, ಪುರಾಣಗಳಲ್ಲಿ ಹೇರಳವಾಗಿ ಸಿಗುತ್ತವೆ. ಹಾಗೆ ಅತಿಯಾಗಿ ಗರ್ವಪಟ್ಟರೆ, ಎಂದಾದರೂ ಒಂದು ದಿನ ಭಂಗವಾಗುತ್ತದೆ ಎಂದು ಎಲ್ಲರೂ ಅರಿತಿದ್ದರೂ, ಪದವಿ. ಧನ, ಕೀರ್ತಿ, ಹೆಸರು, ಪ್ರತಿಷ್ಠೆಗಳ ಮದದಿಂದ ಮೆರೆಯುವ ಜನರಿಗೇನೂ ಈ ಜಗತ್ತಿನಲ್ಲಿ ಕಡಿಮೆ ಇಲ್ಲ, ಅಲ್ಲವೇ?

ಆದರೆ ನಮ್ಮೆಲ್ಲರ ಆಗುಹೋಗುಗಳನ್ನು, ಕೆಲಸಕಾರ್ಯಗಳನ್ನು ನಿಯಂತ್ರಿಸುವ ವಿಧಿ ಎಂಬ ಒಂದು ಪರಮ ಶಕ್ತಿ, ನಮ್ಮ ಅಹಂಕಾರ ಪ್ರಚೋದಿತ ದುರ್ಬುದ್ಧಿಯನ್ನು, ದುರ್ನಡತೆಯನ್ನು, ದುರಿತಗಳನ್ನು ತಡೆಯಲು ತನ್ನದೇ ಆದ ಯೋಜನೆಯನ್ನಿಟ್ಟುಕೊಂಡಿರುತ್ತದೆ. ನಮ್ಮ ಅರಿವಿಗೆ ಬಾರದಂತೆ ಅದು ತನ್ನ ಯೋಜನೆಯನ್ನು ಕಾರ್ಯರೂಪಕ್ಕೆ ಇಳಿಸಿ ನಮ್ಮ ಅಹಂಕಾರವನ್ನು ಮುರಿದು, ನಮಗೆ ನಮ್ಮ ಸ್ಥಾನವೇನು, ನಮ್ಮ ಕ್ಷಮತೆ ಎಷ್ಟರಮಟ್ಟದ್ದು ಎಂದು ತಿಳಿಹೇಳಿ, ನಮ್ಮನ್ನು ಸರಿದಾರಿಗೆ ತರುತ್ತದೆ. ಇದು ಪ್ರತಿಯೊಬ್ಬರಿಗೂ ತಮ್ಮ ತಮ್ಮ ಅನುಭವಕ್ಕೆ ಬಂದರೆ ಮಾತ್ರ ಅರ್ಥವಾಗುತ್ತದೆ. ಹಾಗೆ ವಿಧಿಯ ಕೈಯ ಪೆಟ್ಟು ಬಿದ್ದರೂ ತಮ್ಮನ್ನು ತಾವು ತಿದ್ದಿಕೊಳ್ಳದವರು ಖಂಡಿತ ನಾಶವಾಗುತ್ತಾರೆ.

ಅಂತಹ ನಾಶ ಅಥವಾ ಅನಾಹುತದಿಂದ ನಮ್ಮನ್ನು ನಾವು ರಕ್ಷಿಸಿಕೊಳ್ಳಬೇಕಾದರೆ, ಮಾನ್ಯ ಗುಂಡಪ್ಪನವರು ಹೇಳುವಂತೆ 'ಶಿರವ ಬಾಗಿವುದೆ ಸರಿ, ತಲೆಯಿಂದ ಅಹಂಕಾರದ ಭಾರವನ್ನು ಕಿತ್ತುಹಾಕಿ, ಅದನ್ನು ಹಗುರಾಗಿಸಿಕೊಂಡು ಬಾಗಬೇಕು. ಮಿತ ಶಕ್ತಿಯ ನಾವು ಅಮಿತ, ಅನಂತ ಮತ್ತು ಸರ್ವಶಕ್ತನಾದ ವಿಧಿಗೆ ತಲೆಬಾಗಬೇಕು. ನಮ್ಮ ಕರ್ತವ್ಯವನ್ನು ನಿರ್ವಂಚನೆಯಿಂದ ಮಾಡಿ, ಫಲಾಫಲಗಳನ್ನು ವಿಧಿಗೆ ಬಿಟ್ಟು, ಸಂದ ಫಲದಿಂದ ತೃಪ್ತರಾಗಿರುವುದೇ

ದಾರಿ. 'ನಾನು' ಎಂಬುದನ್ನು ಬಿಡಬೇಕು. ನಮ್ಮ ಪೂರ್ವ ಮತ್ತು ಪ್ರಸ್ತುತ ಕರ್ಮಗಳಿಂದ ಎಂತಹುದೇ ಫಲ ಸಿಗಲಿ ಅದನ್ನು ಪರಮಾತ್ಮನ ಪ್ರಸಾದವೆಂದು ಸೀಕರಿಸಿ, ಹಲುಬದೆ ತೃಪ್ತರಾದಲ್ಲಿ, ನಮ್ಮಲ್ಲಿ ಅಹಂಕಾರವೂ ತಲೆಯೆತ್ತುವುದಿಲ್ಲ. ನಾವು ವಿಧಿಯ ಹೊಡೆತಕ್ಕೆ ಬಲಿಯಾಗಬೇಕಾಗುವುದೂ ಇಲ್ಲ.





**ಮುಕ್ತಕ – 661**

**ಇಳೆಯಿಂದ ಮೊಳಕೆಯೊಗೆವಂದು ತಮಟೆಗಳಿಲ್ಲ।**
**ಫಲ ಮಾಗುವಂದು ತುತ್ತೂರಿ ದನಿಯಿಲ್ಲ ॥**
**ಬೆಳಕೀವ ಸೂರ್ಯಚಂದ್ರರದೊಂದು ಸದ್ದಿಲ್ಲ।**
**ಹೊಲಿ ನಿನ್ನ ತುಟಿಗಳನು - ಮಂಕುತಿಮ್ಮ।**

ಮೊಳಕೆಯೊಗೆವಂದು= ಮೊಳಕೆಯು=ಒಗೆವಂದು, ತಮಟೆಗಳಿಲ್ಲ=ತಮಟೆಗಳು +ಇಲ್ಲ,
ಮಾಗುವಂದು=ಮಾಗುವ+ಅಂದು, ದನಿಯಿಲ್ಲ, ದನಿಯು+ಇಲ್ಲ ಬೆಳಕೀವ=ಬೆಳಕ+ಈವ,
ಸೂರ್ಯಚಂದ್ರರದೊಂದು=ಸೂರ್ಯ+ಚಂದ್ರರದು+ಒಂದು, ಸದ್ದಿಲ್ಲ=ಸದ್ದು+ಇಲ್ಲ
ಮೊಳಕೆಯೊಗೆವಂದು=ಮೊಳಕೆ ಒಡೆಯುವಾಗ, ಈವ=ಕೊಡುವ,

ಇಳೆಯಿಂದ ಕುಡಿಯೊಡೆದು, ಮೊಳಕೆ ಭೂಮಿಯ ಪದರವನ್ನು ಸೀಳಿಕೊಂಡು ಬರುವಾಗ ಯಾವುದೇ ಅಬ್ಬರ ಆರ್ಭಟಗಳಿಲ್ಲದೆ ಬರುತ್ತದೆ. ಮರದಲ್ಲಿ ಕಾತ ಕಾಯಿ ಹಣ್ಣಾಗುವಾಗ, 'ನಾನು ಹಣ್ಣಾಗುತ್ತಿದ್ದೇನೆ' ಎಂದು ತುತ್ತೂರಿ ಊದಿ ಮಾಗುವುದಿಲ್ಲ. ಜಗತ್ತಿಗೆ ಬೆಳಕನ್ನು ಈವ ಸೂರ್ಯ ಚಂದ್ರರೂ ಸಹ ಶಬ್ದವಿಲ್ಲದೆ ತಮ್ಮ ತಮ್ಮ ಕೆಲಸವನ್ನು ಮಾಡಿ ಹೋಗುತ್ತಾರೆ. ಹಾಗಿದ್ದಲ್ಲಿ, “ನೀನು ಯಾವ ಮಹಾ ಸಾಧನೆ ಮಾಡಿದ್ದೀಯೆ ಎಂದು ಜಂಬಕೊಚ್ಚಿಕೊಳ್ಳುತ್ತೀಯೆ? ನಿನ್ನ ತುಟಿಗಳನ್ನು ಹೊಲಿದಿಕೋ” ಎಂದು ಸಲಹೆಯನ್ನು ಇತ್ತಿದ್ದಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜಗತ್ತಿನ ಸಕಲರಿಗೂ ಆಹಾರವನ್ನು ನೀಡುವ ಮತ್ತು ಇಲ್ಲಿನ ಜೀವರಾಶಿಗಳ ಅಸ್ತಿತ್ವಕ್ಕೆ, ಅಂದರೆ ಇರುವಿಕೆಗೆ ಕಾರಣವಾದ ಗಿಡ ಮರಗಳು ಮೊಳೆತು, ಭೂಮಿಯ ಪದರಗಳನ್ನು ಸೀಳಿಕೊಂಡು ಹೊರಬರುವಾಗ 'ನಾನು ಬರುತ್ತಿದ್ದೇನೆ, ನಾನು ಬಹೂಪಕಾರಿ' ಎಂದು ಘೋಷಿಸುತ್ತದೆಯೇ? ಹಾಗೆಯೇ, ಪ್ರಕೃತಿಯಲ್ಲಿ ನಮಗೆ ಸಿಗುವ ರುಚಿ ರುಚಿಯಾದ ಹಣ್ಣುಗಳು ತಮ್ಮ ಪೂರ್ವಾವಸ್ಥೆಯಾದ ಕಾಯಿಂದ ಮಾಗಿ ಹಣ್ಣಾವಾಗ ಡಂಗುರ ಸಾರಿಕೊಳ್ಳುವುದಿಲ್ಲ. ಈ ಜಗತ್ತಿನ ಇರುವಿಕೆಗೆ ಕಾರಣವಾಗಿರುವ ಸೂರ್ಯ ಚಂದ್ರರು ಬೆಳಗು ರಾತ್ರಿಗಳನ್ನು ಸದ್ದಿಲ್ಲದೆಯೇ ಮಾಡಿಹೋಗುತ್ತಾರೆ ಅಲ್ಲವೇ? ಹಾಗಿರಬೇಕಾದರೆ, ಯಾವ ಘನ ಕಾರ್ಯವನ್ನೂ ಮಾಡದ ನರ ಮನುಷ್ಯರಾದ ನಾವು, ಸ್ವತಂತ್ರವಾಗಿ ಜೀವಿಸುವ ಅನ್ಯ ಪ್ರಾಣಿ, ಪಕ್ಷಿ ಮತ್ತು ಇತರೆ ಕೀಟ ಸಂಕುಲಕ್ಕೆ ಹೋಲಿಸಿದರೆ, ಸದಾ ಪರಾವಲಂಬಿಗಳಾಗಿರುವ ಯಃಕಶ್ಚಿತ್ ನರ ಮನುಷ್ಯರಾದ ನಾವು, ಜಂಬ ಪಡಲಿಕ್ಕೋ, ಗರ್ವ ತೋರುವುದಕ್ಕೋ ಕಾರಣವಿದೆಯೇ?

ಮಾನ್ಯ ಗುಂಡಪ್ಪನವರು ತಮ್ಮ 'ವನಸುಮ' ಕವಿತೆಯಲ್ಲಿ ಒಂದು ಕಾಡ ಮಲ್ಲಿಗೆಯ ಬಗ್ಗೆ ಹೇಳುತ್ತಾ 'ಕಾನನದಿ ಮಲ್ಲಿಗೆಯು ಮೌನದಿಂ ಬಿರಿದು ನಿಜ ಸೌರಭವ ಸೂಸಿ, ತಾನ್ ಎಲೆಯ ಪಿನಿಂತಿರ್ದು ದೀನತೆಯ ತೋರಿ ಅಭಿಮಾನವನು ತೊರೆದು ಕೃತಕೃತ್ಯತೆಯ ಪಡೆವಂತೆ' ಎನ್ನುತ್ತಾರೆ. ಕಾಡಿನಲ್ಲಿ ಒಂದು ಮಲ್ಲಿಗೆ, ಎಲೆಯ ಮರೆಯಲ್ಲಿ ನಿಂತು, ಮೌನವಾಗಿ ಬಿರಿದು, ನಿಜವಾದ ಸುಗಂಧವನ್ನು ಕಾಡಿಗೆಲ್ಲಾ ಪಸರಿಸಿ, ಯಾರ ಕಣ್ಣಿಗೂ ಬೀಳದೆ, ಕೇವಲ ಸುಗಂಧವನ್ನು ನೀಡುವುದೇ ತನ್ನ ಕರ್ತವ್ಯವೆಂಬಂತೆ, ತನ್ನ

ಬದುಕಿನ ಕೃತಾರ್ಥತೆಯನ್ನು ಕಂಡುಕೊಂಡಂತೆ, ನಾವೂ ಸಹ ಜಗತ್ತಿನಿಂದ ಪಡೆದ ಒಂದು ಸುಂದರ ಬದುಕನ್ನು ಮೌನವಾಗಿ ಬದುಕಿ ಸಾಧ್ಯವಾದರೆ, ಈ ಜಗತ್ತನ್ನು ಇನ್ನಷ್ಟು ಸುಂದರವಾಗಿಸಲು ಏನನ್ನಾದರೂ ನೀಡಲು ಸಾಧ್ಯವಾದರೆ, ನೀಡಿ ನಿರ್ಗಮಿಸಬೇಕು. ಅದು ಬದುಕಿನ ಸಾರ್ಥಕತೆ.

ಅದನ್ನು ಬಿಟ್ಟು ಕೊಡೋದು ಮೂರ್ಕಾಸು ಕೋಣೆ ತುಂಬಾ ಹಾಸು' ಎನ್ನುವಂತೆ ಮಾಡಿದ್ದು ಗೌಣವಾದರೂ, ಅತಿಯಾಗಿ ಶಬ್ದ ಮಾಡುತ್ತಾ ಸಮಾಜದ ಗಮನವನ್ನು ತನ್ನೆಡೆಗೆ ಸೆಳೆಯುವ ವ್ಯರ್ಥಪ್ರಯತ್ನ ಮಾಡುತ್ತಾ ಇರುತ್ತೇವೆ. 'ಮಂತ್ರಕ್ಕಿಂತ ಉಗುಳೇ ಜಾಸ್ತಿ' ಎನ್ನುವಂತೆ ನಾವು ಮಾಡುವ ಕೆಲಸಕ್ಕಿಂತ, ಅದರ ಮಹತ್ತು ಮತ್ತು ಮಹತ್ವಕ್ಕಿಂತ, ನಾವು ಕೊಚ್ಚಿಕೊಳ್ಳುವುದೇ ಹೆಚ್ಚು. ನಮ್ಮಂತಹವರನ್ನು ಕಂಡು 'ಹೊಲಿ ನಿನ್ನ ತುಟಿಗಳನ್ನು' ಎಂದು ಅಪ್ಪಣೆ ಕೊಡಿಸಿದ್ದಾರೆ ಮಾನ್ಯ ಗುಂಡಪ್ಪನವರು, ಮೌನವಾಗಿ, ನಿಶ್ಯಬ್ದವಾಗಿ 'ಉಪಕಾರಿ ನಾನು' ಎಂದು ಒದರದೆ ನಮ್ಮ ತುಟಿಗಳನ್ನು ಹೊಲೆದುಕೊಂಡರೆ, ಮನಸ್ಸು ಬುದ್ಧಿಗಳು ಶಾಂತವಾಗುತ್ತವೆ. ಸಾರ್ಥಕ ಬದುಕು ಎನಿಸಿಕೊಳ್ಳುತ್ತದೆ.

**ಮುಕ್ತಕ – 662** **ಖದ್ಯೋತನಂತೆ ಬಿಡುಗೊಳದೆ ಧರ್ಮವ ಚರಿಸು |**
**ವಿದ್ಯುಲ್ಲತೆಯ ತೆರದಿ ತೇಜಗಳ ಸೂಸು ||**
**ಗೆದ್ದುದೇನೆಂದು ಕೇಳದೆ, ನಿನ್ನ ಕೈ ಮೀರೆ |**
**ಸದ್ದು ಮಾಡದೆ ಮುಡುಗು ಮಂಕುತಿಮ್ಮ ||**

ಗೆದ್ದುದೇನೆಂದು ಗೆದ್ದುದು+ಏನು+ಎಂದು,
ಬಿಡುಗೊಳದೆ=ಬಿಡುವಿಲ್ಲದೆ, ನಿರಂತರವಾಗಿ, ವಿದ್ಯುಲ್ಲತೆ=ಮಿಂಚಬಳ್ಳಿ, ತೇಜ=ಬೆಳಕು, ಮುಡುಗು=ತಲೆಬಾಗು

ಒಂದು ಕ್ಷಣವೂ ಬಿಡುವಿಲ್ಲದೆ ಬೆಳಕ ನೀಡುವ ತನ್ನ ಧರ್ಮವನ್ನು ಆಚರಿಸುವ ಸೂರ್ಯನಂತೆ, ಬೆಳಕ ನೀಡುವ ಮಿಂಚ ಬಳ್ಳಿಗಳಂತೆ, ನೀನೂ ಸಹ ಜಗತ್ತಿನಲ್ಲಿ ನಿನಗೆ ವಿಧಿಸಿದ ಧರ್ಮವನ್ನು ಆಚರಿಸಲು ಪ್ರಯತ್ನಿಸು. ಇದರಿಂದ ಏನು ಪ್ರಯೋಜನ? ಎಂದು, ನಿನ್ನ ಸಾಧನೆಯ ಪ್ರಾಯೋಜಕತೆಯನ್ನು ಲೆಕ್ಕ ಹಾಕದೆ, ನಿನ್ನ ಕ್ಷಮತೆ ಅಥವಾ ಯೋಗ್ಯತೆ ಇರುವಷ್ಟು ನೀನು ನೀಡು. ನಿನ್ನ ಕೈ ಮೀರಿದರೆ ನಿ:ಶಬ್ದವಾಗಿ ಆ ಪರಮಾತ್ಮನಿಗೆ ಶರಣಾಗಿ ಬಿಡು ಎಂದು, ಹಿತಬೋಧೆ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು.

ಪರಮಾತ್ಮನ ಸೃಷ್ಟಿಯಲ್ಲಿ ಎಲ್ಲವೂ ತಮ್ಮ ತಮ್ಮ ಧರ್ಮವನ್ನು ಪಾಲಿಸುತ್ತವೆ, ನರ ಮನುಷ್ಯನನ್ನು ಹೊರತು. ಬೆಲ್ಲಕ್ಕೆ ಸಿಹಿ, ಬೇವಿಗೆ ಕವಿ, ಮೆಣಸಿಗೆ ಖಾರ, ಗಾಳಿಗೆ ಬೀಸುವುದು, ನೀರಿಗೆ ಹರಿಯುವುದು, ಬೆಂಕಿಗೆ ಸುಡುವುದು ಹೇಗೆ ಧರ್ಮವೋ, ಮನುಷ್ಯನಿಗೆ ಮನುಷ್ಯನಾಗಿರುವುದೇ ಧರ್ಮ. ಆದರೆ, ಇಂದಿನ





ಮಾನವ ಅದನ್ನು ಬಿಟ್ಟು ಮಿಕ್ಕೆಲ್ಲವೂ ಆಗಿದ್ದಾನೆ. ತಾನು ಹೀಗೆ ಏಕಾಗಿದ್ದೇನೆ ಎನ್ನುವುದು ಅವನ ಅರಿವಿಗೆ ಬರುವುದೇ ಇಲ್ಲ. ಏಕೆಂದರೆ, ಅವನಿಗೆ ತಾನು ಏನಾಗಿರಬೇಕು ಎನ್ನುವುದು ಗೊತ್ತಿಲ್ಲ. ಹಾಗಾಗಿ ತಾನು ಏನು ಎಂಬುದರ ಅರಿವೂ ಸಹ ಇಲ್ಲ. ಇದು ಧರ್ಮ ಎಂದು ಗೊತ್ತಿದ್ದರೆ, ನಾವು ಅದನ್ನು ಪಾಲಿಸುತ್ತಿದ್ದೀವೋ ಇಲ್ಲವೋ ತಿಳಿದುಕೊಳ್ಳಬಹುದು. ಆದರೆ ಪಾಪ ಮನುಷ್ಯನಿಗೆ ಅದೇ ಗೊತ್ತಿಲ್ಲ. ಬೇರೆ ಏನೇನನ್ನೋ ಅವನು ಇದು ನನ್ನ ಧರ್ಮ, ಇದು ನಿನ್ನ ಧರ್ಮ, ನನ್ನದೇ ಶ್ರೇಷ್ಠ ಎಂದು ತಾನು ನಂಬಿದ್ದನ್ನು ಧರ್ಮವೆಂದು ಆಚರಿಸುತ್ತಾ, ಮಾನವ ಧರ್ಮವನ್ನು ತೊರೆದಿದ್ದಾನೆ. ಆದ್ದರಿಂದಲೇ ಮಾನ್ಯ ಗುಂಡಪ್ಪನವರು 'ಧರ್ಮವ ಚರಿಸು' ಎಂದು ನುಡಿದ್ದಿದ್ದಾರೆ.

ಮನುಷ್ಯ, ಧರ್ಮ ಮಾರ್ಗದಿಂದ ವಿಚಲಿತನಾಗುವುದಕ್ಕೆ ಇವನ ವಿಕೃತ ಜ್ಞಾನ ಮತ್ತು ಅಹಂಕಾರವೇ ಕಾರಣ. ಈ ಅಹಂಕಾರದ ಕಾರಣ ತಾನು ಏನನ್ನಾದರೂ ಮಾಡಬಲ್ಲೆ ಎಂಬ ದೌಷ್ಟ್ಯದಿಂದ, ಧರ್ಮದ ಪಥದಿಂದ ದೂರ ಚಲಿಸಿ ಹೋಗಿದ್ದಾನೆ. ಕಾಲ, ದೇಶಕ್ಕೆ ಅನುಗುಣವಾಗಿ ಧರ್ಮಾಚರಣೆಯ ವಿಧಾನದಲ್ಲಿ ಬದಲಾವಣೆ ಬಂದರೂ, ಧರ್ಮದ ಮೂಲ ಸ್ವರೂಪ ಮತ್ತು ಧೈಯದಿಂದ ವಿಚಲಿತನಾಗಬಾರದಿತ್ತು. ಆದರೆ ಪ್ರಸ್ತುತ ಪರಿಸ್ಥಿತಿಯಲ್ಲಿ ಮನುಷ್ಯ ತನ್ನ ಮೂಲ ಗುಣದಿಂದ ವಿಚಲಿತನಾಗಿರುವುದೇ, ದುರಂತ.

ಮಾನ್ಯ ಗುಂಡಪ್ಪನವರು "ಆದ್ದರಿಂದ ಜಗತ್ತಿನ ಎಲ್ಲರೂ ತಮ್ಮ ತಮ್ಮ ಧರ್ಮಗಳನ್ನು ನಿರ್ವಂಚನೆಯಿಂದ ನಿರ್ವಹಿಸುತ್ತಿರುವಾಗ, ನೀನೂ ಸಹ ಧರ್ಮವನ್ನು ಆಚರಿಸು. ಅದನ್ನು ಮಾಡುವುದರಿಂದ ನನಗೆ ಗೆಲುವು ಸಿಗುತ್ತದೆಯೋ ಎಂದು ಕೇಳದೆ, ಏನನ್ನೋ ಸಾಧಿಸಿದೆನೆಂದು ಗರ್ವ ಪಡದೆ, ನಿನ್ನ ಶಕ್ತಿಯ ಮತ್ತು ಕ್ಷಮತೆಯ

ಮಿತಿಯಲ್ಲಿ ಧರ್ಮವನ್ನು ಆಚರಿಸು, ನಿನ್ನ ಕೈಮೀರಿದ ಕೆಲಸವಾದರೆ, ಅದನ್ನು ಮಾಡುವ ದುಃಸಾಹಸವನ್ನು ಮಾಡದೆ ಸುಮ್ಮನೆ ಆ ದೇವದೇವನಾದ ಪರಮಾತ್ಮನಿಗೆ ಶರಣಾಗು" ಎಂದು ಸ್ಪಷ್ಟವಾದ ಬುದ್ಧಿವಾದವನ್ನು ಹೇಳಿದ್ದಾರೆ. ನಾವೂ ಸಹ ವಿಚಕ್ಷಣೆಯಿಂದ ಧರ್ಮಗಳನ್ನು ಪಾಲಿಸುವುದು ಉತ್ತಮವಲ್ಲವೇ?

**ಮುಕ್ತಕ – 663**

**ಎರಡುತರ ಮೌಲ್ಯಂಗಳೆಲ್ಲಕಂ ಲೋಕದಲಿ |**
**ಪರಮಾರ್ಥಕೊಂದು, ಸಾಂಪ್ರತದರ್ಥಕೊಂದು ||**
**ಪರಿಕಿಸೆರಡಂ ನೀನು: ಹೊರಬೆಲೆಯ ಗುಣಿಪಂದು |**
**ಮರೆಯಬೇಡೊಳಬೆಲೆಯ - ಮಂಕುತಿಮ್ಮ ||**

ಮೌಲ್ಯಗಳೆಲ್ಲಕಂ =ಮೌಲ್ಯಗಳು+ಎಲ್ಲಕಂ, ಪರಮಾರ್ಥಕೊಂದು=ಪರಮ+ಅರ್ಥಕೆ+ಒಂದು, ಸಾಂಪ್ರತದರ್ಥಕೊಂದು=ಸಾಂಪ್ರತದ+ಅರ್ಥಕೆ+ಒಂದು, ಪರಿಕಿಸೆರಡಂ=ಪರಿಕಿಸು+ಎರಡಂ, ಗುಣಿಪಂದು=ಗುಣಿಪ+ಅಂದು, ಮರೆಯಬೇಡೊಳಬೆಲೆಯ=ಮರೆಯಬೇಡ+ಒಳ+ಬೆಲೆಯ, ಎಲ್ಲಕಂ=ಎಲ್ಲಕ್ಕೂ, ಸಾಂಪ್ರತದ=ಪ್ರಾಪಂಚಿಕ, ಲೋಕಾರೂಢಿಯ, ಪರಿಕಿಸು=ಪರೀಕ್ಷಿಸು, ಗುಣಿಪ=ಲೆಕ್ಕಾಚಾರ ಹಾಕುವಾಗ





ಈ ಲೋಕದಲ್ಲಿ ಎಲ್ಲಕ್ಕೂ ಎರಡು ಬಗೆಯ ಅರ್ಥವುಂಟು ಮತ್ತು ಎರಡು ಬಗೆಯ ಮೌಲ್ಯಗಳುಂಟು. ಇಹಕ್ಕೊಂದು ಅರ್ಥ ಮತ್ತು ಮೌಲ್ಯ ಮತ್ತು ಪರಕ್ಕೊಂದು ಅರ್ಥ ಮತ್ತು ಮೌಲ್ಯ. "ನೀನು ಇವೆರಡನ್ನೂ ಪರೀಕ್ಷಿಸಿ ನೋಡು. ಮೌಲ್ಯಗಳ ಲೆಕ್ಕಾಚಾರವನ್ನು ಹಾಕುವಾಗ ಮೇಲೆ ತೋರುವ ಅರ್ಥ ಮತ್ತು ಮೌಲ್ಯದ ಜೊತೆಗೆ ಪರಮಾರ್ಥ ಮತ್ತು ಅಂತರ್ಮೌಲ್ಯಗಳನ್ನು ನೀ ಮರೆಯಬೇಡ" ಎಂದು ನಮ್ಮನ್ನು ಎಚ್ಚರಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜಗತ್ತಿನಲ್ಲಿ ಪ್ರತೀ ವಸ್ತುವಿಗೂ ಎರಡು ರೀತಿಯ ಪ್ರಯೋಜನವಿರುತ್ತದೆ ಮತ್ತು ಪ್ರತೀ ವಿಷಯಕ್ಕೂ ಎರಡು ಅರ್ಥವಿರುತ್ತದೆ. ನೋಡುವ ಕ್ಷಮತೆಯಿದ್ದರೆ ಕಾಣುತ್ತದೆ. ಮೇಲ್ನೋಟಕ್ಕೆ ಕಾಣುವ ಅರ್ಥ ಮತ್ತು ಪ್ರಯೋಜನಗಳು ಬೇರೆ ಮತ್ತು ಅಂತರ್ಯದಲ್ಲಿ ಭಿನ್ನವಾದ ಅಥವಾ ಅದಕ್ಕೆ ತದ್ವಿರುದ್ಧವಾದ ಅರ್ಥ ಮತ್ತು ಪ್ರಯೋಜನಗಳು ಗೋಚರಿಸುತ್ತವೆ. ಉದಾ. ಒಬ್ಬ ವ್ಯಕ್ತಿಯನ್ನು ನೋಡಿದರೆ ಬಹಳ ಕೊಳಕನಾಗಿ, ಅವಿಧ್ಯಾವಂತನಂತೆ, ಅಸಂಸ್ಕೃತನಂತೆ ಹೊರನೋಟಕ್ಕೆ ಕಂಡರೂ, ಅವನ ಅಂತರ್ಯದಲ್ಲಿ ಪರಿಶುದ್ಧ ವಿಚಾರಗಳು, ಸುಸಂಸ್ಕೃತ ಸಂಸ್ಕಾರಗಳು ಇದ್ದು, ಅವನೊಡನೆ ಸಂಪರ್ಕ ಬೆಳೆಸಿದಾಗ, ಅವನ ಔನ್ನತ್ಯ ನಮಗೆ ಅರಿವಾಗುವುದಲ್ಲವೇ? ಹೊರನೋಟಕ್ಕೆ ಕಾಣುವ ಮತ್ತು ನಮಗನ್ನಿಸುವ ವಿಚಾರಗಳನ್ನೇ ಅಂತಿಮವಾಗಿಸಿಕೊಳ್ಳದೆ, ಕೆದಕಿ ಅಂತರಂಗವನ್ನೂ ಅರಿಯಬೇಕು. ಇದನ್ನೇ ಮಾನ್ಯ ಗುಂಡಪ್ಪನವರು "ಮರೆಯಬೇಡೊಳಬೆಲೆಯ" ಎಂದಿದ್ದಾರೆ.

ಆದರೆ ಪ್ರಸ್ತುತ ಪರಿಸ್ಥಿಯೇ ಬೇರೆಯಾಗಿದೆ, ನಮಗೆ ಯಾವುದನ್ನೂ ಆಳವಾಗಿ ನೋಡಲು ವ್ಯವಧಾನವೇ ಇಲ್ಲ. ಒಂದು ದುಂಬಿ, ಹೂವಿನಿಂದ ಹೂವಿಗೆ ಹಾರುವಾಗ, ಆ ಹೂವಿಗೆ ಕಿಂಚಿತ್ತೂ ನೋವುಂಟುಮಾಡದೇ ಒಂದು ಹನಿ ಮಕರಂದವನ್ನಷ್ಟೇ ಹೀರಿ, ಸತ್ವವನ್ನು ಪಡೆಯುತ್ತದೆ. ನಾವೂ ಸಹ ವಿಷಯದಿಂದ ವಿಷಯಕ್ಕೆ ಹಾರುತ್ತೇವೆ, ಆದರೆ ಮಕರಂದಂತೆ ಆ ವಿಷಯದ ಸತ್ವವನ್ನು ಪಡೆಯದೆ ಮುಂದಕ್ಕೋಡುತ್ತೇವೆ. ಯಾವುದನ್ನೂ ಆಳವಾಗಿ ಅಭ್ಯಾಸಮಾಡದೆ 'ಖಾಲಿ'ಯಾಗಿ ತೆರಳುತ್ತೇವೆ. ಒಂದು ಪುಸ್ತಕ ಓದುವುದರಲ್ಲೋ, ಸಂಗೀತ ಕೇಳುವುದರಲ್ಲೋ, ಒಂದು ವಿಚಾರವನ್ನು ಕೂಲಂಕುಶವಾಗಿ ಚರ್ಚೆ ಮಾಡಿ ಸತ್ಯದೆಡೆಗೆ ಹೋಗುವುದೋ ನಮಗೆ ಆಗುವುದಿಲ್ಲ. ನಾವು ಬೆಳೆಯ ಬೇಕಾದರೆ ಗುಂಡಪ್ಪನವರು 'ಪರಿಕಿಸೆರಡಂ ನೀನು ಎಂದು ಹೇಳುವಂತೆ ಸಮಗ್ರವಾಗಿ ಅರಿಯಬೇಕು.

ಒಂದು ವಿಷಯವನ್ನು ಅರಿಯದೆ, ಅದರ ಬಗ್ಗೆ ನಮ್ಮ ಟಿಪ್ಪಣಿಯನ್ನು ನೀಡುವುದು ಮೂರ್ಖತನ. ಆ ವಿಷಯವನ್ನು ಸಮಗ್ರವಾಗಿ ಅರಿತು, ಅದರಲ್ಲಿರುವ ಎರಡು ಆಯಾಮಗಳನ್ನು ಅರಿತುಕೊಳ್ಳುವುದು ಜಾಣತನ, ಅವೆರಡರಲ್ಲಿ 'ಟೊಳ್ಳನ್ನು ತೊರೆದು 'ಸತ್ವವನ್ನು ಹೀರಿಕೊಳ್ಳುವುದು ವಿವೇಕ. ಆದರೆ ಎರಡೂ ಆಯಾಮಗಳನ್ನು ಹೊಂದಿದ ವಸ್ತು, ವ್ಯಕ್ತಿ ಮತ್ತು ವಿಷಯಗಳಲ್ಲಿನ ಭಿನ್ನತೆ ಮತ್ತು ಸಮಗ್ರತೆಯನ್ನು ಮನಗಂಡು, ಎರಡನ್ನೂ ಅಂತರಂಗದಲ್ಲಿ ಸಮನ್ವಯಗೊಳಿಸಿಕೊಂಡು ಭಿನ್ನತೆಯಲ್ಲಿ ಏಕತೆಯನ್ನು ಕಂಡುಕೊಳ್ಳುವುದೇ ಪರಮಾರ್ಥ.

ನಾವು ಏನು? ನಮಗೇನು ಬೇಕು? ನಮ್ಮ ವಿಚಾರ ಹೇಗಿದೆ? ಹೇಗಿರಬೇಕು? ನಮ್ಮನ್ನು ನಾವು ತಿದ್ದಿಕೊಳ್ಳುವ ಮಾರ್ಗಗಳೇನು? ಎಂದು, ಆತ್ಮಾವಲೋಕನ ಮಾಡಿಕೊಂಡರೆ ಮುಂದಿನ ಹೆಜ್ಜೆ ಇಡಲು ಸಾಧ್ಯವಾಗುತ್ತದೆ. ಪ್ರಯತ್ನಪಡಬೇಕು ಅಷ್ಟೇ!

**ಮುಕ್ತಕ – 664** **ನರನೊಂದುವವಹಾರಕೆರಡಾಯವೆಯ ಲೆಕ್ಕ |**
**ಹೊರಗಣನುಭೋಗಕೊಂದೊಳನೀತಿಗೊಂದು ||**
**ವರಮಾನ ದೇಹಕಾದೊಡೆ ಮಾನಸಕದೇನು? |**
**ಪರಿಕಿಸಾ ಲೆಕ್ಕವನು - ಮಂಕುತಿಮ್ಮ ||**

ನರನೊಂದುವವಹಾರಕೆರಡಾಯವೆಯ=ನರನ+ಒಂದು+ವೆವಹಾರಕೆ+ಎರಡು+ಆಯ+ವೆಯ,
ಹೊರಗಣನುಭೋಗಕೊಂದೊಳನೀತಿಗೊಂದು=ಹೊರಗಣ+ಅನುಭೋಗಕೆ+ಒಂದು+ಒಳನೀತಿಗೆ+ಒಂದು.
ದೇಹಕಾದೊಡೆ=ದೇಹಕೆ+ಆದೊಡೆ, ಮಾನಸಕದೇನು=ಮಾನಸಕೆ+ಅದೇನು. ಪರಿಕಿಸಾ=ಪರಿಕಿಸು+ಆ,
ಆಯ=ವರಮಾನ, ವೆಯ=ವ್ಯಯ, ಕರ್ಚು, ಹೊರಗಣ=ಹೊರಗಿನ, ಪರಿಕಿಸಾ=ಪರೀಕ್ಷಿಸು.

ಮನುಷ್ಯರ ವ್ಯವಹಾರಕ್ಕೆ ಎರಡು ಆಯಾಮಗಳು ಇರುತ್ತವೆ. ಒಂದು 'ಆಯ' ಮತ್ತು ಎರಡನೆಯದು 'ವ್ಯಯ', ಅವನ ಅನುಭವವೆಲ್ಲಕ್ಕೂ ಎರಡು ಮುಖಗಳಿರುತ್ತದೆ. ಒಂದು ಬಾಹ್ಯಾನುಭವಕ್ಕೆ ಮತ್ತೊಂದು ಒಳಗಿನ ನೀತಿಗೆ, ಎಲ್ಲ ಅನುಭವಗಳು ದೇಹಕ್ಕಾದರೆ, ಮನಸ್ಸಿಗೇನು? ಅದನ್ನು ಕೊಂಚ ಪರೀಕ್ಷಿಸಿ ನೋಡಿಕೋ ಎಂದು, ನಮಗೆ ನಿರ್ದೇಶಿಸುತ್ತಾ, ಅಂತರಂಗ ಮತ್ತು ಬಹಿರಂಗದ ಅನುಭವಗಳನ್ನು ಪಡೆದುಕೊಳ್ಳುವ ಬಗೆಯನ್ನು ತಿಳಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಊಟಮಾಡಿದರೆ, ಅಕ್ಕಿ ಬೇಳೆಗಳು ಕರ್ಚಾಗುತ್ತವೆ, ಅದು ವ್ಯಯ. ಆದರೆ ಊಟ ದೇಹಕ್ಕೆ ಶಕ್ತಿಯನ್ನು ನೀಡುತ್ತದೆ, ಅದು ಹೊರಗಿನ ಅನುಭವ. ಮನಸ್ಸಿಗೆ ತೃಪ್ತಿಯನ್ನು ನೀಡುತ್ತದೆ, ಅದು ಅಂತರಂಗದ ಅನುಭವ. ಅದನ್ನು ಲೆಕ್ಕ ಹಾಕಲು ಸಾಧ್ಯವಿಲ್ಲ. ತೃಪ್ತಿಯೇ ಮನಸ್ಸಿನ ಶಕ್ತಿ, ಹೀಗೆ ನಾವು ಮಾಡುವ ಪ್ರತೀ ಕೆಲಸಕ್ಕೂ ಎರಡು ರೀತಿಯ

ಪ್ರಯೋಜನಗಳ ಆಯಾಮಗಳಿರುತ್ತವೆ. ಇವುಗಳನ್ನು ಜಾಗರೂಕತೆಯಿಂದ ಪರೀಕ್ಷಿಸಬೇಕು. ಏಕೆಂದರೆ, ಬಹುಪಾಲು ದೇಹಕ್ಕೆ ಶಕ್ತಿ ಅಥವಾ ತೃಪ್ತಿ ನೀಡುವುದು ಮನಸ್ಸು ಬುದ್ಧಿಗಳಿಗೆ ಅಪಾಯಕಾರಿಯಾಗಿರಬಹುದು.

ನಾವು ನೋಡುವ ಮತ್ತು ಕೇಳುವ ವಿಚಾರಗಳು ದೇಹಕ್ಕೆ ಮತ್ತು ಮನಸ್ಸಿಗೆ ಭಿನ್ನವಾದ ಅನುಭೂತಿಯನ್ನು ನೀಡಬಹುದು. ನಾವು ಯಾವುದಕ್ಕೆ ಹೆಚ್ಚು ಮಹತ್ವವನ್ನು ನೀಡುತ್ತೇವೆ ಎನ್ನುವುದು, ನಮ್ಮ ವ್ಯಕ್ತಿತ್ವವನ್ನು





ನಿರ್ಧರಿಸುತ್ತದೆ. ಹೊರಗಿನ ಭಾವಗಳು ಬಂದು ಹೋಗುವ ಭಾವಗಳು. ಆದರೆ ಒಳಗಿನ ಭಾವಗಳು ಸ್ಥಾಯೀಯಾಗಿ ನಮ್ಮ ಸ್ವಭಾವದೊಂದಿಗೆ ಸೇರಿಕೊಳ್ಳುವಂತಹ ಭಾವಗಳು. ಇಲ್ಲಿ ಒಂದು ಲೆಕ್ಕಾಚಾರವಿದೆ. ದೇಹಕ್ಕಾದ ಅನುಭವ, ಅಂತರಂಗಕ್ಕಿಳಿದು ನಮಗೆ ಒಳಿತನ್ನು ಮಾಡುತ್ತದೋ ಅಥವಾ ಕೇವಲ ಹೊರಗಿನ ಭಾವವಾಗಿ, ಸತ್ವದ ರೂಪದಲ್ಲಿ ಒಳಗಿಳಿಯದೇ ಉಳಿಯುತ್ತದೆಯೋ ಎನ್ನುವುದು.

ಹಾಗಾಗಿ ನಾವು ಪಡೆದುಕೊಳ್ಳುವುದೆಲ್ಲವೂ ದೇಹ, ಮನಸ್ಸು ಮತ್ತು ಬುದ್ಧಿಗಳಿಗೆ ಹಿತವಾಗಿರಬೇಕು ಮತ್ತು ನಾವು 'ವ್ಯಯ' ಎಂದರೆ ಕೊಡುವುದೆಲ್ಲವೂ ಲೋಕಹಿತಕ್ಕಾಗಿರಬೇಕು. ಹಾಗಾದಾಗ ಬದುಕು ಸಾರ್ಥಕವಾಗುತ್ತದೆ. ಅದನ್ನು ಬಿಟ್ಟು ಬಾಹ್ಯಾನಂದವನ್ನು ಮಾತ್ರ ಪಡೆದು, ಮನಸ್ಸು, ಬುದ್ಧಿಗಳನ್ನು ಸೊರಗಿಸಿದರೆ ಅಥವಾ ಪಡೆದುಕೊಂಡದ್ದನ್ನು ಕೇವಲ ಸ್ವಾರ್ಥಸಾಧನೆಗೆ ಬಳಸಿದರೆ, ಬದುಕಿನ 'ಆಯವ್ಯಯ'ದ ಲೆಕ್ಕಾಚಾರ ತಾಳೆಯಾಗುವುದಿಲ್ಲ.

ನಾವು ಪಡೆದುಕೊಳ್ಳುವುದು ಮತ್ತು ನೀಡುವುದು ಎರಡೂ ಶುದ್ಧವಾಗಿ ಲೋಕಹಿತಕ್ಕಾಗಬೇಕು. ನಮ್ಮ ಜೀವನದಲ್ಲೂ ಅಂತಹ ಲೆಕ್ಕವನ್ನು ಸರಿದೂಗಿಸಿಕೊಳ್ಳುವ ಪ್ರಯತ್ನವನ್ನು ಮಾಡಬೇಕು.

**ಮುಕ್ತಕ – 665** **ತನುವ ತಣಿಸುವ ತುತ್ತು ಮನಕೆ ನಂಜಾದೀತು |**

**ಮನಮೋಹ ಜೀವಕ್ಕೆ ಗಾಳವಾದೀತು ||**

**ಅನುಭವದ ಪರಿಣಾಮವೊಂದರಿಂದೊದಕ್ಕೆ |**

**ಗಣಿಸಾತ್ಮಲಾಭವನು – ಮಂಕುತಿಮ್ಮ ||**

ನಂಜಾದೀತು=ನಂಜು+ಆದೀತು ಗಾಳವಾದೀತು=ಗಾಳ +ಆದೀತು,

ಪರಿಣಾಮವೊಂದರಿಂದೊಂದಕ್ಕೆ=ಪರಿಣಾಮವು+ಒಂದರಿಂದ+ಒಂದಕ್ಕೆ,

ಗಣಿಸಾತ್ಮಲಾಭವನು=ಗಣಿಸು+ಆತ್ಮ+ಲಾಭವನು,

ನಂಜು=ವಿಷ, ಮನಮೋಹ=ಮನಸ್ಸಿನ ಮೋಹ, ಗಣಿಸು=ಗಮನಿಸು.

ದೇಹಕ್ಕೆ ಹಿತವೆನಿಸುವ ಮತ್ತು ನಾಲಿಗೆಗೆ ರುಚಿಯಾದ ಆಹಾರದ ತುತ್ತು ಮನಸ್ಸಿಗೆ ವಿಷವಾಗಬಹುದು. ಮನಸ್ಸಿನ ಮೋಹ ಆತ್ಮವನ್ನು ಬಂಧನಕ್ಕೆ ಸಿಲುಕಿಸುವ ಗಾಳವಾಗಬಹುದು. ನಮಗಾಗುವ ಒಂದು ಅನುಭವದ ಪರಿಣಾಮ ಬಹು ವಿಧದಲ್ಲಿ ನಮ್ಮ ಮೇಲೆ ಆಗುತ್ತದೆ. ಆದರೆ ಆ ಪರಿಣಾಮಗಳಲ್ಲಿ, ಆತ್ಮಕ್ಕೇನು ಲಾಭವಾಯಿತು, ಎಂದು, ನೀನು ಎಚ್ಚರವಾಗಿರು ಎಂದು ಒಂದು ಸಂದೇಶವನ್ನು ಮತ್ತು ಎಚ್ಚರಿಕೆಯ ಮಾತನ್ನು ಹೇಳಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.





ಮದಿರೆಯನ್ನು ಇಷ್ಟಪಟ್ಟು ಕುಡಿದವನಿಗೆ, ಕುಡಿಯುವಾಗ ನಾಲಿಗೆಗೆ ರುಚಿಯಾಗಿರುತ್ತದೆ. ನಾಲಿಗೆಯಿಂದ ಮುಂದಕ್ಕೆ ಹೋಗಿ ಒಳಹೊಕ್ಕಾಗ, ಸುರೆಯ ಪರಿಣಾಮ ನರನಾಡಿಗಳ ಮೇಲಾಗಿ 'ಮತ್ತು' ಏರುವಾಗ, ಒಂದು ಮಧುರವಾದ ಅನುಭವವಾಗುತ್ತದೆ. ಸಂಪೂರ್ಣ ಮತ್ತೇರಿದ ನಂತರ ಅದರ ಪರಿಣಾಮದಿಂದ ತಾನೇನು ಮಾಡಿದೆ,

ತಾನೇನು ಮಾಡುತ್ತಿದ್ದೇನೆ, ಏನು ಆಡುತ್ತಿದ್ದೇನೆ ಎನ್ನುವ ಪರಿವೆಯಿಲ್ಲದೆ ಪತನವಾಗುತ್ತಾನೆ. ಇದೇ ರೀತಿ ನಮ್ಮ ಮನಸ್ಸುಗಳಲ್ಲಿ ಉಂಟಾಗುವ ವಸ್ತು, ವಿಷಯ ಮತ್ತು ವ್ಯಕ್ತಿಗಳ ಮೇಲಿನ ಮೋಹವು ನಮ್ಮನ್ನು ವಿವೇಕದಿಂದ ದೂರಾಗಿಸಿ ಆತ್ಮವನ್ನು ಬಂಧನದಲ್ಲಿ ಸಿಲುಕಿಸುತ್ತದೆ.

ನಾವು ಸೇವಿಸಿದ ಆಹಾರ ಬಾಯಿ, ನಾಲಿಗೆ, ಉದರ ಮತ್ತು ದೇಹದ ಮೇಲೆ ಹೇಗೆ ಒಂದರಿಂದ ಒಂದಕ್ಕೆ ತನ್ನ ಪರಿಣಾಮವನ್ನು ಬೀರುತ್ತದೆಯೋ, ಹಾಗೆಯೇ, ನಮ್ಮ 'ಮೋಹ'ವೂ ಸಹ ದೇಹ, ಮನಸ್ಸು, ಬುದ್ಧಿ, ಆತ್ಮಗಳ ಮೇಲೆ ಭಿನ್ನ ಭಿನ್ನವಾದ ಪರಿಣಾಮ ಬೀರುತ್ತದೆ. ಅಂತಹ ಪರಿಣಾಮದಿಂದ ಆತ್ಮವೆಷ್ಟು ಗಳಿಸುತು, ಎಷ್ಟು ಕಳೆದುಕೊಂಡಿತು ಎಂಬುದರ ಲೆಕ್ಕಾಚಾರವನ್ನು ಗಮನಿಸಿತ್ತಾ ಇರಬೇಕು. ಕಾಣುವ ಪ್ರತೀ ದೃಶ್ಯ, ಕೇಳುವ ಪ್ರತೀ ಧ್ವನಿ ಮನಸ್ಸಿನ ಮೇಲೆ ತನ್ನದೇ ಪರಿಣಾಮ ಬೀರುತ್ತದೆ ಮತ್ತು ತತ್ಪರಿಣಾಮವಾಗಿ ನಮ್ಮ ಕರ್ಮವಾಗುತ್ತದೆ. ಆ ಕರ್ಮದಿಂದ ಮನಸ್ಸಿಗೆ ಸುಖದ ಅಥವಾ ದುಃಖದ ಅನುಭವ ಆಗುತ್ತದೆ. ಅಂತಹ ಹಲವಾರು ಅನುಭವಗಳು, ನಮ್ಮ ಸ್ವಭಾವವಾಗಿ, ನಮ್ಮ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಹಾಗಾಗಿ ತಮ್ಮ ವ್ಯಕ್ತಿತ್ವದ ವಿಕಾಸದ ಬಗ್ಗೆ ಆಸ್ಥೆ ಇರುವವರು ತಾವು ಕಾಣುವಾಗ, ಕೇಳುವಾಗ, ಓದುವಾಗ, ಒಡನಾಡುವಾಗ, ಸಂಚಿತ, ಆರ್ಜಿತ ಕರ್ಮಗಳು ನಮ್ಮ ಆತ್ಮದ ಮೇಲೆ ಎಷ್ಟು ಪರಿಣಾಮ ಬೀರಿದೆ ಎಂದ, ಕರ್ಮ ಶೇಷದಿಂದ ಆತ್ಮಕ್ಕೆ ಆದ ಲಾಭ ನಷ್ಟಗಳೇನು ಎಂದು, ಅರಿಯಬೇಕು.

ಭಗವದ್ಗೀತೆಯಲ್ಲಿ ಕೃಷ್ಣ 'ಉದ್ಧರೇತ್ ಅತ್ಮನಾತ್ಮಾನಂ' ಎನ್ನುತ್ತಾನೆ. ನಮ್ಮ ಉದ್ಧಾರವನ್ನು ನಾವೇ ಮಾಡಿಕೊಳ್ಳಬೇಕು, ಅದು ಸುಮ್ಮನೆ ಜೀವಿಸುವುದರಿಂದ ಆಗುವುದಿಲ್ಲ. ಜಾಗರೂಕರಾಗಿ ಜೀವಿಸಬೇಕು. ಸೇವಿಸುವ ಆಹಾರದ ಬಗ್ಗೆ ಹೇಗೆ ಕಾಳಜಿ ವಹಿಸಿ ನಾವು ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುತ್ತೇವೋ, ಹಾಗೆಯೇ ಆತ್ಮದ ಮೇಲೆ ಪರಿಣಾಮ ಬೀರುವ ವಿಷಯಗಳ ಒಳಹರಿವಿನ ಮೇಲೂ ಸೂಕ್ಷ್ಮವಾದ ಗಮನವಿಟ್ಟು, ಆತ್ಮದ ಶುದ್ಧತೆಯನ್ನು ಕಾಪಾಡಿಕೊಳ್ಳಲು ಮತ್ತು ಸಾಧಿಸಲು ಪ್ರಯತ್ನಿಸಬೇಕು.

**ಮುಕ್ತಕ – 666**

**ನೂರಾರು ಸರಕುಗಳು ಜೀವಿತದ ಸಂತೆಯಲಿ |**
**ಊರಿನವು, ಕೇರಿಯವು, ಮನೆಯವಾತ್ತದವು ||**
**ಬೇರೆ ಬೇರೆ ಪುರುಳ್ಗೆ ಬೇರೆ ನೆಲೆ, ಬೇರೆ ಬೆಲೆ |**
**ತಾರತಮ್ಯವೆ ತತ್ತ್ವ - ಮಂಕುತಿಮ್ಮ ||**

ಮನೆಯವಾತ್ಮದವು=ಮನೆಯವು+ಆತ್ಮದವು, ಸರಕುಗಳು=ಸಾಮಾನುಸರಂಜಾಮುಗಳು,

ಪುರುಳ್ಗೆ =ವಸ್ತುಗಳಿಗೆ, ತಾರತಮ್ಯ=ಭೇದ.

(270)

ಕಗ್ಗರಸಧಾರೆ ಎರಡು ಲೆಕ್ಕ 663-668

ಬದುಕಿನ ಸಂತೆಯಲ್ಲಿ ನೂರಾರು ವಸ್ತುಗಳು, ಕೆಲವು ನಮ್ಮ ಊರಿನವು, ಕೆಲವು ನಮ್ಮ ಬೀದಿಯವು, ಕೆಲವು ನಮ್ಮ ಮನೆಯವು ಮತ್ತು ಕೆಲವು ಆತ್ಮದ್ದು. ಎಲ್ಲಕ್ಕೂ ಅದರದರದೇ ಸ್ಥಳ ಮತ್ತು ಅದರದರದೇ ಬೆಲೆ. ಈ ವಸ್ತುಗಳಲ್ಲಿ ತಾರತಮ್ಯವನ್ನು ಅರಿತು ನಮ್ಮ ಬದುಕಿನಲ್ಲಿ ಯಾವುದಕ್ಕೆ ಎಷ್ಟು ಬೆಲೆ ಕೊಡಬೇಕು, ಯಾವುದಕ್ಕೆ ಯಾವ ಸ್ಥಾನಕೊಡಬೇಕು ಎಂದು ಅರಿತು ಬದುಕುವುದೇ ಬದುಕಿನ ತತ್ವ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಾವಿರುವ ಈ ಜಗತ್ತು ಒಂದು ದೊಡ್ಡ ಸಂತೆಯ ಹಾಗೆ, ಇಲ್ಲಿ ನಾನಾ ರೀತಿಯ ಭಾವಗಳು ಮತ್ತು ಭಾವನೆಗಳನ್ನು ಹೊತ್ತ ಜನರು, ನಾನಾ ರೀತಿಯ ವಸ್ತು ಮತ್ತು ವಿಷಯ ಸಮೂಹಗಳು, ಈ ವ್ಯಕ್ತಿ, ವಿಷಯ ಮತ್ತು ವಸ್ತು ಸಮೂಹದಲ್ಲಿ ಕೆಲವು ನಮ್ಮ ಊರಿನವು, ಎಂದರೆ ಅಷ್ಟು ಹತ್ತಿರದವಲ್ಲ. ಕೆಲವು ನಮ್ಮ ಕೇರಿಯದು, ಅಂದರೆ ಸ್ವಲ್ಪ ಹತ್ತಿರ. ಕೆಲವು ನಮ್ಮ ಮನೆಯದ್ದು, ಅಂದರೆ ತೀರ ಹತ್ತಿರದವು, ನಮ್ಮ ಮನೆಯ ಎಲ್ಲರಿಗೂ ಸೇರಿದ್ದು ಮತ್ತೆ ಕೆಲವು ತೀರ ವೈಯಕ್ತಿಕ, ಅಂದರೆ ನಮಗೆ ಮಾತ್ರ ಸೇರಿದ್ದು, ಪ್ರತಿಯೊಂದಕ್ಕೂ ಅದರದೇ ನೆಲೆ ಮತ್ತು ಅದರದೇ ಬೆಲೆ. ಎಲ್ಲವನ್ನೂ ಒಂದೇ ತಕ್ಕಡಿಯಲ್ಲಿ ತೂಗಲಾಗದು. ಇದು ಲೋಕವ್ಯವಹಾರ, ಇದನ್ನರಿತು ವ್ಯವಹರಿಸಿದರೆ ಬದುಕು ಹಿತವಾಗಿರುತ್ತದೆ. ಊರಿನ ವಿಷಯವನ್ನು ಕೇರಿಗಾಗಲೀ, ಕೇರಿಯ ವಿಷಯವನ್ನು ಮನೆಗಾಗಲೀ, ಮನೆಯ ವಿಷಯವನ್ನು ಮನದೊಳಕ್ಕಾಗಲೀ ಸಂಪೂರ್ಣವಾಗಿ ತರಲಾಗುವುದಿಲ್ಲ. ಹಾಗಾದರೆ ಅನಾಹುತವಾಗುತ್ತದೆ.

ವಸ್ತುಗಳ ಉಪಯೋಗವರಿತು ಬಳಸಬೇಕು, ವಿಷಯಗಳ ಸೂಕ್ಷ್ಮತೆಯನ್ನು ಅರಿತು ವಿಚಾರ ಮಾಡಬೇಕು ಮತ್ತು ವ್ಯಕ್ತಿಗಳ ಗುಣವನ್ನರಿತು ವ್ಯವಹರಿಸಬೇಕು. ಈ ವಿಷಯವನ್ನು ಬಹಳ ದೀರ್ಘವಾಗಿ ಮತ್ತು ವಿಸ್ತಾರವಾಗಿ ಪ್ರಸ್ತಾಪಮಾಡಬಹುದು. ಆದರೆ ಪ್ರತಿಯೊಬ್ಬ ವ್ಯಕ್ತಿಗೂ ಪ್ರತಿಯೊಂದು ವಿಷಯ, ವಸ್ತು ಮತ್ತು ವ್ಯಕ್ತಿಗಳು ಭಿನ್ನ ಭಿನ್ನ

ರೀತಿಯಲ್ಲಿ ಸ್ಪಂದನವನ್ನು ನೀಡುತ್ತವೆ. ಅವುಗಳಿಂದ ಒಬ್ಬರಿಗೆ ಸಿಕ್ಕ ಅನುಭೂತಿ ಮತ್ತೊಬ್ಬರಿಗೆ ಸಿಗುವುದಿಲ್ಲ. ಅವುಗಳಲ್ಲಿ ಯಾವ ಕೊರತೆ ಇಲ್ಲದಿದ್ದರೂ ಪ್ರತಿಯೊಬ್ಬರ ಅನುಭವವೂ ಬೇರೆ ಬೇರೆಯಾಗಿರುವುದಕ್ಕೆ ಅವರವರ ಮನೋಭಾವವೇ ಕಾರಣ. ಒಂದೇ ವಸ್ತು ಅಥವಾ ವಿಷಯ ನಮ್ಮ ಬದಲಾದ ಮನೋಭಾವಕ್ಕೆ ತಕ್ಕಂತೆ ಬೇರೆ ಬೇರೆ ಸಮಯದಲ್ಲಿ ಭಿನ್ನವಾದ ಅನುಭೂತಿಯನ್ನು ನೀಡಬಹುದು. ಹಾಗಾಗಿ ದೇಶ, ಕಾಲಕ್ಕೆ ತಕ್ಕಂತೆ ವಸ್ತು, ವಿಷಯ ಮತ್ತು ವ್ಯಕ್ತಿಗಳನ್ನು ಪರಿಕಿಸಿ, ಆ ಸಮಯಕ್ಕೆ ಅದರ ನೆಲೆ ಮತ್ತು ಬೆಲೆಯನ್ನು ಅರಿತು ನಡೆದುಕೊಳ್ಳಬೇಕು. ಇದನ್ನೇ ಮಾನ್ಯ ಗುಂಡಪ್ಪನವರು 'ತಾರತಮ್ಯವೇ ತತ್ವ' ಎಂದಿದ್ದಾರೆ.

ಹಾಗೆ ತಾರತಮ್ಯವನ್ನು ಅರಿಯದೆ ನಾವು ವ್ಯವಹರಿಸಿದಾಗ ನಮ್ಮ ನಡವಳಿಕೆ, ಸಮುಚಿತ ವರ್ತನೆಯಾಗದೆ ಬಯಸಿದ ಪರಿಣಾಮ ಸಿಗುವುದಿಲ್ಲ. ತಾರತಮ್ಯವನ್ನರಿಯಲು ವಿವೇಚನೆ ಬೇಕು, ಆ ವಿವೇಚನೆ ನಮಗೆ ಅನುಭವದಿಂದ ಮತ್ತು ಅಭ್ಯಾಸ ಬಲದಿಂದ ಬರಬೇಕು. ಅನುಭವದಿಂದ ಕಲಿಯದಿದ್ದರೆ ಅಥವಾ ಆ ವಿವೇಚನೆಯನ್ನು ಬೆಳೆಸಿಕೊಳ್ಳಲು ಪ್ರಾಮಾಣಿಕ ಪ್ರಯತ್ನವನ್ನು ಮಾಡದೆ ಇದ್ದರೆ, ನಮ್ಮ ಲೋಕವ್ಯವಹಾರವೆಲ್ಲ ವಿಫಲವಾಗುವುದರಲ್ಲಿ ಸಂದೇಹವೇ ಇಲ್ಲ. ಯೋಚಿಸಿ, ಬೇಧವನ್ನರಿತು, ಸಮುಚಿತ ರೀತಿಯಲ್ಲಿ ನಾವು ನಡೆದುಕೊಂಡರೆ ಮಾತ್ರ ಬದುಕು ಸಾರ್ಥಕವಾಗಬಹುದು.





**ಮುಕ್ತಕ – 667**

**ಮನೆಯ ಸುಡುತಿಹ ಬೆಂಕಿಯುರಿಯನಾರಿಸೆ ನುಗ್ಗು ।**
**ಮನವ ಸುಡುವುರಿಯಿಂದ ದೂರ ನೀಂ ನಿಲ್ಲು ॥**
**ತನುವಿಗುಪಕೃತಿಗೆಯ್ವ ಭರದಿ ನೀನಾತುಮದ ।**
**ಅನುನಯವ ಕೆಡಿಸದಿರು — ಮಂಕುತಿಮ್ಮ ॥**

ಬೆಂಕಿಯುರಿಯನಾರಿಸೆ=ಬೆಂಕಿಯನು+ಆರಿಸೆ,ಸುಡುವುರಿಯಿಂದ=ಸುಡುವ+ಉರಿಯಿಂದ,
ತನುವಿಗುಪಕೃತಿಗೆಯ್ಯ =ತನುವಿಗೆ+ಉಪಕ್ರುತಿಗೆ, ನೀನಾತುಮದ=ನೀನು+ಆತುಮದ, ಕೆಡಿಸದಿರು=ಕೆಡಿಸದೆ+ಇರು,
ತನುವಿಗೆ=ದೇಹಕ್ಕೆ. ಉಪಕ್ರುತಿ=ಉಪಕಾರ, ಭರದಿ=ಆತುರದಿ, ಅನುನಯವ=ಸಮತೋಲನವನ್ನು, ಗೆಯ್ಯ = ಮಾಡುವ

ಮನೆಗೆ ಬೆಂಕಿ ಹೊತ್ತಿಕೊಂಡರೆ, ಅದನ್ನು ಆರಿಸಲು ನುಗ್ಗು. ಆದರೆ ಮನಸ್ಸನ್ನು ಸುಡುವ ಬೆಂಕಿಯಿಂದ ದೂರ ಇರು, ದೇಹಕ್ಕೆ ಆನಂದವನ್ನು ನೀಡುವ ಅತಿಯಾದ ಆಸೆಯಿಂದ ಆತ್ಮವನ್ನು ಕಡೆಗಣಿಸಬೇಡ ಎಂದು, ಒಂದು ಸೂಕ್ತ ತಿಳುವಳಿಕೆಯನ್ನು ನೀಡಿದ್ದಾರೆ, ನಮಗೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ .

ಮನೆ ಎಂದರೆ ನಾವು ವಾಸಮಾಡುವ ಮನೆ. ಆದರೆ ಈ ದೇಹ ನಮ್ಮ ಆತ್ಮಕ್ಕೆ ಮನೆ. ಮನೆಗೆ ಬೆಂಕಿ ಬಿದ್ದರೆ ತಕ್ಷಣ ಅದನ್ನು ಆರಿಸಲು ನಾವು ಮುಂದಾಗಬೇಕು. ಆದರೆ ಆತ್ಮ ಸುಡುವಂತಹ ವಿಚಾರಗಳಿಂದ ಸಾಕಷ್ಟು ದೂರ ಉಳಿಯಬೇಕು. ಆತ್ಮದ ಮನೆಯಾದ ದೇಹಕ್ಕೆ ಬಹಳ ಹಿತ ಉಂಟು ಮಾಡುವುದು ಆತ್ಮವನ್ನು ಸುಡುತ್ತದೆ ಮತ್ತು ಆತ್ಮಕ್ಕೆ ಹಿತವಾದ ವಿಷಯಗಳು ದೇಹವನ್ನು ಸೊರಗಿಸುತ್ತದೆ, ದೇಹದ ಆರೈಕೆ ಅಧಿಕವಾದರೆ ಆತ್ಮ ಸೊರಗುತ್ತದೆ. ದೇಹವು ಇಂದ್ರಿಯ ವಶ. ಇಂದ್ರಿಯಗಳು ತಮ್ಮ ಸುಖಕ್ಕೆ ಏನೇನು ಬೇಕೋ ಅದನ್ನೆಲ್ಲ ಅಪೇಕ್ಷೆಪಡುವಂತೆ ಮಾಡುತ್ತದೆ. ಮನಸ್ಸು ಅದರ ಎಲ್ಲ ಬೇಡಿಕೆಗಳನ್ನೂ ತೀರಿಸುತ್ತಾ ಹೋದರೆ, ವಿವೇಕ, ಶೂನ್ಯವಾಗಿ ಆತ್ಮ ಸೊರಗುತ್ತದೆ. ಏಕೆಂದರೆ ದೇಹಕ್ಕೆ ಹಿತ ಎನಿಸುವಂತಹದ್ದು ಆತ್ಮಕ್ಕೆ ಖಂಡಿತ ಹಿತವಲ್ಲ. ದೇಹ ಇಹವನ್ನು ಬಯಸಿದರೆ ಆತ್ಮ ಪರವನ್ನು ಬಯಸುತ್ತದೆ. ಇವೆರಡರ ಸಮನ್ವಯವನ್ನು ಕಾಯುತ್ತಾ ಆತ್ಮದ ಅನುನಯವನ್ನು ಕಾಯುವ ಕೆಲಸವನ್ನು ಮನಸ್ಸು ಮತ್ತು ಬುದ್ದಿಗಳು ಮಾಡಬೇಕು. ಇದನ್ನೇ ಮಾನ್ಯ ಗುಂಡಪ್ಪನವರು ತನುವಿಗುಪಕೃತಿಗೆಯ ಭರದಿ ನೀನಾತುಮದ ಅನುನಯವ ಕೆಡಿಸದಿರು', ಎನ್ನುವ ಆದೇಶವನ್ನು ನೀಡಿದ್ದಾರೆ.

ಹಾಗೆ ಕಾರ್ಯಪ್ರವೃತ್ತವಾಗಲು ಮನಸ್ಸು ಮತ್ತು ಬುದ್ಧಿಗಳನ್ನು ಸಿದ್ಧಪಡಿಸಲು ನಮ್ಮ ಸನಾತನದಲ್ಲಿ ಸೂಚನೆಗಳು, ಆದೇಶಗಳು ಇವೆ. ಇಂದಿಗೂ ಸಹ, ಅವುಗಳನ್ನು ಅರಿತಲ್ಲದಿದ್ದರೂ ಅಭ್ಯಾಸಬಲದಿಂದ ವೇದೋಪನಿಷತ್ತಿನ ಹಲವಾರು ಆದೇಶಗಳು ನಮ್ಮ ಬದುಕಿನಲ್ಲಿ ಹಾಸುಹೊಕ್ಕಾಗಿ ಇವೆ. ಆದರೆ ಅವುಗಳನ್ನು ಅರಿತು ಅನುಷ್ಠಾನಮಾಡಿದರೆ, ಆತ್ಮವನ್ನು ಸುಡುವಂತಹ ವಸ್ತು ವಿಷಯಗಳನ್ನು ನಿಯಂತ್ರಿಸುವಲ್ಲಿ ಮನಸ್ಸು ಬುದ್ಧಿಗಳು ಹೆಚ್ಚು ಕ್ಷಮತೆಯನ್ನು ಪಡೆದುಕೊಳ್ಳುತ್ತವೆ, ಅದು ಕೇವಲ ಪ್ರಯತ್ನದಿಂದ ಮಾತ್ರ ಆಗುತ್ತದೆ.

ದೇಹಕ್ಕೆ ತಗುಲುವ ಬೆಂಕಿಯನ್ನು ಆರಿಸಿದರೆ ಅಥವಾ ಬೆಂಕಿಯ ಮೂಲವನ್ನು ನಿವಾರಿಸಿದರೆ, ಎಂದರೆ ದೇಹಕ್ಕೆ ಹಿತವಾಗುವಂತಹ ವಿಚಾರ ಮತ್ತು ವಸ್ತುಗಳನ್ನು ನಿಯಮಿತವಾಗಿ ಮತ್ತು ಹಿತವಾಗಿ ಉಪಯೋಗಿಸಿದರೆ, ಮನಸ್ಸು, ಬುದ್ಧಿಗಳು ಶುದ್ಧವಾಗಿ ಆತ್ಮದ ಹಿತಕ್ಕೆ ಅಣಿಯಾಗುತ್ತದೆ. ಒಂದೇ ಸಮಯದಲ್ಲಿ ಒಂದೇ ಸ್ಥಳದಲ್ಲಿ ಎರಡು ವಸ್ತುಗಳು ಇರಲು ಸಾಧ್ಯವಿಲ್ಲ ಎನ್ನುವ ವಿಜ್ಞಾನದ ಸಿದ್ಧಾಂತದಂತೆ, ಇಂದ್ರಿಯ ಹಿತವನ್ನು ಕಡೆಗಣಿಸಿದರೆ ಆತ್ಮದ ಹಿತಕ್ಕೆ ಭೂಮಿಕೆ ಸಿದ್ಧವಾಗುತ್ತದೆ. ಹೊರಗಿನ ಜ್ಞಾನ ಮತ್ತು ಅಂತರಂಗದಲ್ಲಿ ಮಂಥನದಿಂದ ಆತ್ಮಕ್ಕೆ ಹಿತವಾದದ್ದನ್ನು ಒಳ ಹರಿಯಬಿಟ್ಟರೆ, ಬದುಕು ಸಾರ್ಥಕ್ಯವನ್ನು ಪಡೆಯುತ್ತದೆ.

**ಮುಕ್ತಕ – 668**

**ಬಡಗಿ ಬೇಸಾಯಿ ಕರ್ಮಿಗರೇನು ಯೋಗಿಗಳೊ? ।**
**ಮುಡುಪವರ ಮನಸೆಲ್ಲ ಕೈಯ ದುಡಿತಕ್ಕೆ ॥**
**ಬಿಡುವಿರದು ಬಣಗು ಚಿಂತೆಗೆ, ಬುತ್ತಿ ಹಂಗಿರದು ।**
**ಕಡಿದಲ್ಲವರ್ಗೆ ಬಾಳ್ – ಮಂಕುತಿಮ್ಮ ॥**

ಕರ್ಮಿಗರೇನು=ಕರ್ಮಿಗರು+ಏನು, ಮುಡುಪವರ=ಮುಡುಪು+ಅವರ, ಬಿಡುವಿರದು=ಬಿಡುವು+ಇರದು,
ಹಂಗಿರದು=ಹಂಗು+ಇರದು, ಕಡಿದಲ್ಲವರ್ಗೆ=ಕಡಿದು+ಅಲ್ಲ+ಅವರ್ಗೆ,
ಕರ್ಮಿಗರು=ಕುಶಲ ಕರ್ಮಿಗಳು, ಮುಡುಪು=ಮೀಸಲು, ಬುತ್ತಿ= ಊಟ, ಕಡಿದು=ಕಷ್ಟತರವಾದದ್ದು.

ಬಡಗಿ, ರೈತ, ಕಮ್ಮಾರ, ಕುಂಬಾರ ಮುಂತಾದ ಕುಶಲ ಕರ್ಮಿಗಳೆಲ್ಲ 'ಯೋಗ'ವನ್ನು ಕಲಿತವರೇನು? ಅವರ ಜೀವನವೆಲ್ಲ ಮೈಬಗ್ಗಿಸಿ ಮಾಡುವ ದುಡಿತಕ್ಕೆ ಮೀಸಲಾಗಿರುತ್ತದೆ. ಬಿಡುವಿಲ್ಲದ ಕೆಲಸಕಾರ್ಯಗಳ ಮಧ್ಯೆ ಅವರಿಗೆ ವ್ಯರ್ಥ ಹರಟೆಗೆ ಸಮಯವಿರುವುದಿಲ್ಲ. ಅವರು ಸದಾ ದುಡಿದು ತಿನ್ನುವವರಾದ್ದರಿಂದ, ಅವರಿಗೆ ಯಾರ ಹಂಗೂ ಇರುವುದಿಲ್ಲ. ಅಂತಹವರಿಗೆ ಬಾಳು ದುರ್ಗಮವೆನಿಸುವುದಿಲ್ಲ ಎಂದು 'ಕಾಯಕ'ದ ಮಹತ್ವವನ್ನು ಬಹಳ ಸುಂದರವಾಗಿ ಹೇಳಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಅಂತಹ ಕುಶಲ ಕರ್ಮಿಗಳಿಗೆ ಅವರ ಕೆಲಸವೇ ಒಂದು ಯೋಗ. ಅವರು ಯೋಗಿಗಳಲ್ಲದಿದ್ದರೂ, ಯೋಗಿಗಳು, ಯೋಗವೆಂದರೆ 'ಚಿತ್ತವೃತ್ತಿ ನಿರೋಧಕ', ಎಂದರೆ ಮನಸ್ಸನ್ನು ಹಲವಾರು ಕಡೆಗೆ ಹರಿದು ಹೋಗದಂತೆ ಇಟ್ಟುಕೊಳ್ಳುವುದೇ 'ಯೋಗ'

ಇದೇ ರೀತಿ, ಕಮ್ಮಾರ, ಚಮ್ಮಾರ, ಬಡಗಿ, ಶಿಲ್ಪಿ, ಚಿತ್ರಕಾರ ಮುಂತಾದ ಕುಶಲ ಕರ್ಮಿಗಳು ತಮ್ಮ ವಿದ್ಯೆಯನ್ನು ಕಲಿಯುವುದು ಒಂದು 'ತಪಸ್ಸು'. ಜ್ಞಾನಾರ್ಜನೆಗೆ ಮನದಲ್ಲಿ ತಪಿಸುವುದೇ 'ತಪಸ್ಸು', ಅವರು ತಪಸ್ವಿಗಳು. ಹಾಗಾಗಿಯೇ ಅವರು ತಮ್ಮ ಏಕಾಗ್ರತೆಯಿಂದ ಸೃಷ್ಟಿಸುವ 'ಕೃತಿ'ಗಳು ನೂರಾರು ಅಥವಾ ಸಾವಿರಾರು ವರ್ಷಗಳು ಸಮಾಜಕ್ಕೆ ಸಂತೋಷವನ್ನು ನೀಡುತ್ತದೆ. ಅವರ ಜೀವನವೆಲ್ಲ ಅಂತಹ ಕಲಾಕೃತಿಗಳ ಮೂಲಕ





ಜಗತ್ತಿನ ಸಂತೋಷಕ್ಕಾಗಿಯೇ ಮುಡುಪಾಗಿಡುತ್ತಾರೆ. ಅವರಿಗೆ ವ್ಯರ್ಥಕಾಲಯಾಪನೆ ಮಾಡಲು ಸಮಯವೇ ಇರುವುದಿಲ್ಲ. ಅವರು ತಮ್ಮ ಆಹಾರವನ್ನು ತಾವೇ ಸಂಪಾದಿಸಿಕೊಳ್ಳುತ್ತಾರೆ. ಅವರು ಆಹಾರಕ್ಕಾಗಿ ಯಾರ ಹಂಗಿಗೂ ಬೀಳುವುದಿಲ್ಲ. ಅವರಿಗೆ ಬಾಳು ಕಷ್ಟಗಳ ಪ್ರಯಾಣವಾಗುವುದಿಲ್ಲ.

ಹಾಗಾಗಿ, ಯಾರೇ ಆಗಲಿ ತಮ್ಮ ಪಾಲಿಗೆ ಬಂದ ಕೆಲಸವನ್ನು ಕರ್ತವ್ಯವೆಂದು ಅರಿತು, ಒಪ್ಪಿಕೊಂಡು ತಮ್ಮನ್ನು ತಾವು ಸಂಪೂರ್ಣವಾಗಿ ಅದರಲ್ಲೇ ತೊಡಗಿಸಿಕೊಂಡರೆ, ಅದನ್ನೊಂದು ತಪ್ಪಸ್ಸೆಂದು ಆಚರಿಸಿದರೆ, ಆಗ ಯಾರಿಗೂ ವ್ಯರ್ಥವಾಗಿ ಕಾಲ ಕಳೆಯುವ ಅವಕಾಶವೇ ಸಿಗುವುದಿಲ್ಲ. ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡವರಿಗೆ, ಆ ಕೆಲಸವನ್ನು ಪೂರ್ಣಗೊಳಿಸಿದರೆ ಒಂದು ಸಂತೃಪ್ತ ಭಾವವಿರುತ್ತದೆ. ಒಬ್ಬ ಚಿತ್ರಕಾರನನ್ನೋ, ಒಬ್ಬ ಶಿಲ್ಪಿಯನ್ನೂ ನಾವು ಗಮನಿಸಿದರೆ, ಅವರು ತಾವು ಸೃಷ್ಟಿಸಿದ ಕಲಾಕೃತಿಯನ್ನು ತಾವೇ ನೋಡಿ ಆನಂದಿಸಿ ತೃಪ್ತರಾಗುವುದನ್ನು, ಮತ್ತು

ಅದು ಅನ್ಯರಿಗೆ ಸಂತಸವನ್ನಿತ್ತರೆ ಅನ್ಯರ ಸಂತೋಷವನ್ನು ಕಂಡು ಸಂತೋಷಪಡುವಂತಹ ಯೋಗಿಗಳು ಅವರು. ಅಂತಹವರಿಗೆ ಅನಾವಶ್ಯಕ ಮಾತು ಮತ್ತು ಕಾಡು ಹರಟೆಯಲ್ಲಿ ಯಾವ ಆಸಕ್ತಿಯೂ ಇರುವುದಿಲ್ಲ.

ನಾವು ಯಾವುದೇ ಕೆಲಸವನ್ನು ಮಾಡುವಾಗಲೂ ಅಂತಹ ಮನೋಭಾವವನ್ನು ಬೆಳೆಸಿಕೊಂಡರೆ, ನಾವು ಮಾಡುವ ಕೆಲಸ ನಮಗೆ ತೃಪ್ತಿಯನ್ನು ನೀಡುತ್ತದೆ. ಆದರೆ ಇಂದಿನ ಸಮಾಜದ ಪರಿಸ್ಥಿತಿಯಲ್ಲಿ, ನಮ್ಮ ಮನಸ್ಸನ್ನು ಸೆಳೆಯುವ ನೂರಾರು ಸೆಳೆತಗಳ ಮಧ್ಯೆಯೂ, ನಾವು ಅಂತಹ ಮನೋಭಾವವನ್ನು ಬೆಳೆಸಿಕೊಂಡು, ನಾವು ಮಾಡುವ ಕೆಲಸವನ್ನು ನಿಷ್ಠೆಯಿಂದ ಮಾಡಿ ತೃಪ್ತರಾದರೆ ನಮಗೂ ಸಹ "ಕಡಿದಲ್ಲವರ್ಗೆ ಬಾಳ್' ಎಂದು ಗುಂಡಪ್ಪನವರು ಹೇಳುವಂತೆ ಬದುಕು ಸುಗಮವಾಗುತ್ತದೆ ಅಲ್ಲವೇ?

**ಮುಕ್ತಕ – 669** **ಹಾಗೆಯೋ ಹೀಗೆಯೋ ಹೇಗೆ ಹೇಗೆಯೋ ಜನುಮ? |**
**ಸಾಗಿ ಮುಗಿವುದು; ಮುಗಿದು ಮರೆವುದದೆ ಸುಕೃತ? ||**
**ಈಗಲೋ ಆಗಲೋ ಎಂದೋ ಮುಗಿವುಂಟೆಂಬ |**
**ಭಾಗ್ಯವನು ನೆನೆದು ನಲಿ – ಮಂಕುತಿಮ್ಮ ||**

ಮರೆವುದದೆ=ಮರೆವುದು+ಅದೆ, ಮುಗಿವುಂಟೆಂಬ=ಮುಗಿವು+ಉಂಟು+ಎಂಬ
ಸುಕೃತ=ಪುಣ್ಯ, ಮುಗಿವುದು=ಕೊನೆಯಾಗುವುದು, ಮುಗಿವು=ಅಂತ್ಯ

ಹೇಗೋ ಒಂದು ರೀತಿಯಲ್ಲಿ, ಹುಟ್ಟಿದ ನಮಗೆಲ್ಲಾ ಸಾವು ನಿಶ್ಚಿತ. ಈ ಜನುಮದಲ್ಲಿ ಹಿಂದಿನ ಜನುಮದ ನೆನಪಿಲ್ಲ. ಮುಂದಿನ ಜನುಮದಲ್ಲಿ ಇಂದಿನ ಜನುಮದ ನೆನಪಿರುವುದಿಲ್ಲ, ಅದೇ ನಮ್ಮ ಪುಣ್ಯ ಕಡೆಗೂ ಒಂದು ದಿನ ಇದಕ್ಕೆಲ್ಲಾ ಅಂತ್ಯವಾಗುವುದು ಎಂಬ ಭಾಗ್ಯ ನಮಗೆ ಇದೆಯಲ್ಲಾ ಎಂದು ಸಂತಸಿಸಬೇಕು ಎಂದು ಉಲ್ಲೇಖಮಾಡಿದ್ದಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜಗತ್ತಿನ ಒಂದು ನಿಯಮವೇನೆಂದರೆ, ಅದು ತನ್ನಷ್ಟಕ್ಕೆ ತಾನು ನಡೆಯುತ್ತದೆ, ನಮ್ಮ ಜೀವನವೂ ಸಹ. ಆದರೆ ಹೀಗೇ ಇರಬೇಕೆಂದು ಮತ್ತು ಹೀಗೇ ಆಗಬೇಕೆಂದು ನಾವು ಯೋಚಿಸುತ್ತೇವೆ. ಯೋಜಿಸುತ್ತೇವೆ ಮತ್ತು ಅಪೇಕ್ಷೆಪಡುತ್ತೇವೆ, ಅಲ್ಲವೇ? ಯಾವುದೂ ನಾವು ಅಂದುಕೊಂಡ ಹಾಗೆಯೇ ನಡೆಯುವುದಿಲ್ಲ. ಹಾಗೋ, ಹೀಗೋ, ಹೇಗೋ ಹಾಗೆ ನಡೆಯುತ್ತದೆ. ಬದುಕು ನಮ್ಮನ್ನು ತನ್ನ ದಾರಿಯಲ್ಲಿ ನಡೆಸಿಕೊಂಡು ಹೋಗುತ್ತದೆ ಮತ್ತು ನಾವು ಆ ದಾರಿಯಲ್ಲಿ ನಡೆಯಲು ಒಗ್ಗಿಹೋಗುತ್ತೇವೆ. ಹಾಗಾಗಿ ಬದುಕು ಹೇಗೋ ನಡೆಯುತ್ತದೆ ಮತ್ತು ನಡೆದು ಕೊನೆಯಾಗುತ್ತದೆ. ಕೊನೆಯಾದ ನಂತರ ಈ ಬದುಕಿನಲ್ಲಿ ನಡೆದ ಘಟನೆಗಳಾವುದೂ ನಮ್ಮ ನೆನಪಿನಲ್ಲಿ ಉಳಿಯುವುದಿಲ್ಲ. ಬದುಕಿರುವಾಗಲೇ ಕಾಲ ಕಳೆದಂತೆ ನಾವು ನಮ್ಮ ಗತವನ್ನೇ ಮರೆಯುವಾಗ, ಇನ್ನು ಸತ್ತ ನಂತರ ಈ ಜನ್ಮದ ವಿಷಯಗಳು ನೆನಪಿನಲ್ಲಿ ಉಳಿಯುವುದೇ? ಹಾಗೆ ಉಳಿಯದೆ ಇರುವುದೇ ಸೃಷ್ಟಿಕರ್ತನಿಂದ ನಮಗೆ ಸಂದ ವರ, ಪುಣ್ಯ ಮತ್ತು ಸುಕೃತ. ಹಾಗಾಗಿ ನಮ್ಮ ಒಳಿತಿಗಾಗಿಯೇ ಮರೆವನ್ನು ನಮಗೆ ಒಂದು ಶ್ರೇಷ್ಠ 'ವರ'ವಾಗಿ ನೀಡಲಾಗಿದೆ.

ಭಗವದ್ಗೀತೆಯಲ್ಲಿ ಅರ್ಜುನನ್ನು ಸಮಾಧಾನಪಡಿಸುತ್ತಾ ಶ್ರೀ ಕೃಷ್ಣ 'ಜಾತಸ್ಯ ಮರಣಂ ದೃವಂ, ದೃವಮ್ ಜನ್ಮಂ ಮೃತಸ್ಯ ಚ' ಎನ್ನುತ್ತಾ, ಹುಟ್ಟಿದವನು ಸಾಯಲೇಬೇಕು ಮತ್ತು ಸತ್ತವನು ಹುಟ್ಟಲೇಬೇಕು ಎಂದಿದ್ದಾನೆ. ಎರಡನೆಯದನ್ನು ಯಾರೂ ಕಂಡಿಲ್ಲ. ಆದರೆ ಮೊದಲನೆಯದು ಸತ್ಯವೆಂದು ಎಲ್ಲರಿಗೂ ಗೊತ್ತು, ಬಡವನಾಗಲಿ, ಬಲ್ಲಿದನಾಗಲಿ, ಜ್ಞಾನಿಯಾಗಲಿ, ದಡ್ಡನಾಗಲಿ, ಸುಂದರನಾಗಲಿ, ಕುರೂಪಿಯಾಗಲಿ, ಗಂಡಾಗಲಿ, ಹೆಣ್ಣಾಗಲಿ ಎಲ್ಲರೂ ಅವರವರ ಕಾಲ ಬಂದಾಗ ನಿರ್ಗಮಿಸಲೇ ಬೇಕು, ಇದು ಸತ್ಯ. ಇದು ಎಲ್ಲರಿಗೂ ಗೊತ್ತಿರುವುದರಿಂದಲೇ ಬದುಕು ಎಷ್ಟೇ ದುರ್ಭರವಾದರೂ, ಎಂದಾದರೂ ಒಂದು ದಿನ ಈ ಬವಣೆಗೆಲ್ಲಾ ಕಡೆ' ಇದೆಯೆಂದು ಒಂದು ಸಮಾದಾನವಲ್ಲವೇ? ಬದುಕಿನಲ್ಲಿ ಬಡತನದಿಂದ ಮಾತ್ರ ಕಷ್ಟ ಬರುತ್ತದೆಂಬುದು ಸುಳ್ಳು, ಬಡತನವಿದ್ದವರು ಹೇಗಾದರೂ ತಮ್ಮ ಕಷ್ಟಗಳನ್ನು ಸಹಿಸುತ್ತಾರೆ. ಆದರೆ ಸಿರಿತನದ ಬವಣೆ ಬಹಳ ಕಷ್ಟ. ಎಲ್ಲವೂ ಇದ್ದು ಸುಖ, ಸಂತೋಷಗಳಿಂದ ವಂಚಿತರಾದವರಿಗೂ 'ಸಾಕಪ್ಪ ಈ ಬದುಕು' ಎನ್ನುವ ಭಾವ ಬರುತ್ತದೆ, ಅತಿ ಸಿಹಿ ವಗಟಾದಂತೆ.

ಆದ್ದರಿಂದ ಈ ಕಷ್ಟಗಳಾಗಲೀ, ಸುಖಗಳಾಗಲೀ ಯಾವುದೂ ನಿರಂತರವಲ್ಲ, ಎಂದಾದರೂ ಒಂದು ದಿನ ಈ ಎಲ್ಲ ಕಷ್ಟ- ಸುಖಗಳಿಗೆ ಅಂತ್ಯವಿದೆ, ಎಂದು ಅರಿತು, ಯಾವುದಕ್ಕೂ ಅತಿಯಾಗಿ ಅಂಟದೆ, ಒಂದು ನಿರ್ಲಿಪ್ತಭಾವದಿಂದ

ಬದುಕಲು ಅಭ್ಯಾಸಮಾಡಿಕೊಂಡರೆ, ಎಷ್ಟೇ ಕಷ್ಟ ಅಥವಾ ಸುಖವಿದ್ದರೂ ಮನಸ್ಸು ಮಾತ್ರ ನಿರಾಳವಾಗಿರಲು ಸಾಧ್ಯ. ಪ್ರಯತ್ನಪಟ್ಟರೆ ಇದು ಎಲ್ಲರಿಗೂ ಸಾಧ್ಯ.

**ಮುಕ್ತಕ – 670**

**ಬರುವೆಲ್ಲ ಬೇನೆಗಂ ಮದ್ದನಾರಿರಿಸಿಹರು ।**
**ನರರ ಕೀಳ್ತನಕೆಲ್ಲ ಪರಿಹಾರವೆಂತು ॥**
**ಕಿರಿದು ಪಲ್ಲನು ತಾಳಿಕೊಳಲೆಬೇಕಷ್ಟಿಷ್ಟು ।**
**ಧರೆಯಂತರುಷ್ಣವನು - ಮಂಕುತಿಮ್ಮ ॥**





ಬರುವೆಲ್ಲ=ಬರುವ +ಎಲ್ಲ, ಮದ್ದನಾರಿರಿಸಿಹರು=ಮದ್ದನು+ಆರು+ಇರಿಸಿಹರು. ಕೀಳ್ತನಕೆಲ್ಲ ಕೀಳ್ತನಕೆ+ಎಲ್ಲ. ಪರಿಹಾರವೆಂತು=ಪರಿಹಾರವು+ಎಂತು. ತಾಳಿಕೊಳಲೆಬೇಕಷ್ಟಿಷ್ಟು=ತಾಳಿಕೊಳಲು+ಬೇಕು+ಅಷ್ಟು+ಇಷ್ಟು. ಧರೆಯಂತರುಷ್ಣವನು=ಧರೆಯ+ಅಂತರ+ಉಷ್ಣವನು,

ಬೇನೆಗಂ=ಖಾಯಿಲೆಗೆ, ಮದ್ದನು=ಔಷಧವನ್ನು, ಕೀಳ್ತನಕೆ=ಕೀಳುತನಕ್ಕೆ, ಪಲ್ಲನು=ಹಲ್ಲನು, ಧರೆಯಂತರುಷ್ಣವನು=ದ 'ರೆಯಂತರಂಗದ ಬೇಗೆಯನು.

ಹೊಸಹೊಸದಾಗಿ ಬರುವ ರೋಗಗಳಿಗೆಲ್ಲ ಔಷಧವನ್ನು ಯಾರು ಕಂಡುಹಿಡಿದಿದ್ದಾರೆ? ಅದೇ ರೀತಿ ಈ ಜಗತ್ತಿನ ಮನುಷ್ಯರು ಹೊಸಹೊಸದಾಗಿ ಕಲಿಯುವ ದುರ್ಬುದ್ಧಿಗೆ ಪರಿಹಾರವೆಲ್ಲಿದೆ? ನಾವು ಈ ಜಗತ್ತಿನಲ್ಲಿರಬೇಕು ಎಂದರೆ, ಇಂತಹ ಅಂತರಂಗದ ಬಿಸಿಯನ್ನು ತಾಳ್ಮೆಯಿಂದ ನಗುನಗುತ್ತಾ ಸಾಧ್ಯವಾದಷ್ಟು ತಡೆದುಕೊಳ್ಳಬೇಕು. ಬೇರೆ ದಾರಿಯಿಲ್ಲ ಎಂಬಂತೆ ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

'ಬರುವೆಲ್ಲ ಬೇನೆಗಂ' ಎಂದಿದ್ದಾರೆ ಶ್ರೀ ಡಿವಿಜಿ ಯವರು ಅಂದರೆ, ಹೊಸ ಹೊಸದಾಗಿ ಹುಟ್ಟಿಕೊಳ್ಳುವ ರೋಗಗಳಿಗೆ ಎಂದು ಅರ್ಥ ಹೌದಲ್ಲವೇ? ಈ ಜಗತ್ತಿನಲ್ಲಿ ಕಾಲಾನುಕಾಲಕ್ಕೆ ಹೊಸ ಹೊಸ ಬೇನೆಗಳು ಹುಟ್ಟಿಕೊಳ್ಳುತ್ತಲೇ ಇವೆ ಮತ್ತು ಹಳೆಯ ಕಾಲದ ಹಲವಾರು ಖಾಯಿಲೆಗಳು ಇಂದು ಇಲ್ಲವಾಗಿವೆ. ಒಂದು ಕಾಲಕ್ಕೆ 'ಪ್ಲೇಗ್ ಮತ್ತು ಕಾಲರಾ'ಗಳು ಅತಿ ಮಾರಕ ವ್ಯಾಧಿಗಳಾಗಿದ್ದವು. ಇಂದು ಪ್ಲೇಗ್ ಇಲ್ಲ. ಕಾಲರಾ ನಿಯಂತ್ರಣಕ್ಕೆ ಬಂದಿದೆ. ಇನ್ನೂ ಹಲವಾರು ಖಾಯಿಲೆಗಳು ಮಾಯವಾಗಿವೆ. ಅದೇ ರೀತಿ ಇಂದು ಹಲವು ಹೊಸ ಹೊಸ ಖಾಯಿಲೆಗಳು ಉದ್ಭವವಾಗಿವೆ. ಆದರೂ ಇಂದಿಗೂ ವೈದ್ಯಕೀಯ ಶಾಸ್ತ್ರ ಎಲ್ಲ ರೋಗಗಳಿಗೂ ಪರಿಹಾರವನ್ನು ಕಂಡುಕೊಳ್ಳಲಾಗಿಲ್ಲ.

ಪುರಾತನ ಕಾಲದಲ್ಲೂ, ಕೀಳು ಬುದ್ಧಿಯ ಜನರು ಇದ್ದರು, ಇಂದೂ ಇದ್ದಾರೆ. ಕಾಲ ಬದಲಾದಂತೆಲ್ಲ ಮನುಷ್ಯನ ಕೀಳ್ತನದ ಸ್ವರೂಪ ಮತ್ತು ಪ್ರಮಾಣ ಬದಲಾಗಿದೆಯೇ ಹೊರತು, ಮನುಷ್ಯನ ಕುಬುದ್ಧಿ ಸಂಪೂರ್ಣ ನಿವಾರಣೆಯಾಗಿಲ್ಲ. ಹೇಗೆ ಹೊಸದಾಗಿ ಹುಟ್ಟಿಕೊಳ್ಳುವ ರೋಗಗಳನ್ನು ಸಂಪೂರ್ಣವಾಗಿ ನಿವಾರಿಸಲು ಸಾಧ್ಯವಿಲ್ಲವೋ, ಹಾಗೆಯೇ ಮನುಷ್ಯನ ಕೆಟ್ಟ ಬುದ್ದಿಯನ್ನು ಸಂಪೂರ್ಣವಾಗಿ ನಿವಾರಿಸಲು ಸಾಧ್ಯವೇ ಇಲ್ಲ. ಅಂತಹ ಅನಿವಾರ್ಯತೆಯನ್ನು ಸಹನೆಯಿಂದ ಸಾಧ್ಯವಾದಷ್ಟು ತಾಳಿಕೊಳ್ಳಲೇ ಬೇಕು.

ದೈಹಿಕ ರೋಗಗಳು ಮತ್ತು ಮಾನಸಿಕ ರುಗ್ಣತೆಗಳು, ಮನುಷ್ಯನನ್ನು ಜೀವನದುದ್ದಕ್ಕೂ ಸುಡುತ್ತವೆ. ಅದರ ತೀವ್ರತೆಯನ್ನು ತಾಳಿಕೊಳ್ಳಲೇ ಬೇಕು. ಪ್ರತಿಯೊಬ್ಬರಿಗೂ ಅದರ ಬಿಸಿ ತಾಗುತ್ತಲೇ ಇರುತ್ತದೆ ಮತ್ತು ಅದನ್ನು ತಾಳಿಕೊಳ್ಳುವ ಶಕ್ತಿ ಮತ್ತು ಕ್ಷಮತೆ ಎಲ್ಲರಿಗೂ ಬೇರೆ ಬೇರೆ ಪ್ರಮಾಣದಲ್ಲಿರುತ್ತದೆ. ಅವುಗಳ ಬಿಸಿ ಅಥವಾ ತಾಪವನ್ನು ತಾಳಿಕೊಳ್ಳುವ ಶಕ್ತಿಯನ್ನು ನಾವು ಹೆಚ್ಚಿಸಿಕೊಳ್ಳಬೇಕು ಹಾಗಾದರೆ, ಮಾನ್ಯ ಗುಂಡಪ್ಪನವರು ಹೇಳುವ 'ಧರೆಯಂತರುಷ್ಣ ' ವನ್ನು ನಿವಾರಿಸಲಾಗದಿದ್ದರೂ ತಡೆದುಕೊಳ್ಳುವ ಸಹನೆ" ನಮಗೆ ಬರುತ್ತದೆ. ಅಂತಹ ಸಹನ ಶಕ್ತಿ ಬೆಳೆಸಿಕೊಳ್ಳದಿದ್ದರೆ, ಅದನ್ನು ಅನುಭವಿಸುವಾಗ ತೀವ್ರ ನೋವನ್ನು

ಅನುಭವಿಸಬೇಕಾಗುತ್ತದೆ. ಆ ನೋವಿನಿಂದ ಪಾರಾಗಬೇಕಾದರೆ ನಮಗುಳಿದಿರುವ ಒಂದೇ ಮಾರ್ಗವೆಂದರೆ ಸಹನೆಯನ್ನು ಬೆಳೆಸಿಕೊಳ್ಳಲೇಬೇಕು, ಎನ್ನುವುದೇ ಈ ಮುಕ್ತಕದ ಭಾವ.

**ಮುಕ್ತಕ – 671**

**ತಿರಿದನ್ನವುಂಬಂಗೆ ಹುರುಡೇನು, ಹಟವೇನು |**
**ತಿರುಪೆಯಿಡುವುದು ಕುಪಿಸಿ ಬಿರುನುಡಿಯ ನುಡಿಯೆ ||**
**ದುರದುರನೆ ನೋಡಿ ನೀನೆದುರುನುಡಿ ನುಡಿಯುವುದೆ? |**
**ಗರುವವೇತಕೆ ನಿನಗೆ?-ಮಂಕುತಿಮ್ಮ ||**

ತಿರಿದನ್ನವುಂಬಂಗೆ= ತಿರಿದು+ಅನ್ನವ+ಉಂಬಂಗೆ, ತಿರುಪೆಯಿಡುವುದು=ತಿರುಪೆಯ+ಇಡುವುದು, ನೀನೆದುರುನುಡಿ=ನೀನು+ಎದುರು+ನುಡಿ, ಗರುವವೇತಕೆ=ಗರುವವು+ಏತಕೆ, ತಿರಿದು=ಭಿಕ್ಷೆಬೇಡಿ, ಹುರುಡು= ಸ್ಪರ್ಧೆ, ಪೈಪೋಟಿ, ಕುಪಿಸಿ =ಕೋಪಗೊಂಡು, ಬಿರುನುಡಿ=ಒರಟಾದ ಮಾತು, ಗರುವ=ಗರ್ವ

ಭಿಕ್ಷೆ ಬೇಡಿ ತಿನ್ನುವವನಿಗೆ ಪೈಪೋಟಿ, ಹಠ ಇರಬಹುದೇ? ತಿರುಪೆ ನೀಡುವವನ ಮೇಲೆ ಕೋಪಿಸಿಕೊಂಡು ಅವನನ್ನು ಬಿರುಸಾದ ನುಡಿಗಳಿಂದ ನೀನು ನುಡಿಯಬಹುದೇ? ಬೇಡುವುದೇ ಭಿಕ್ಷೆಯಾದ ಮೇಲೆ ನಿನಗೆ ಗರ್ವವಿರಬಹುದೇ? ಎಂದು, ಒಂದು ಗಹನವಾದ ವಿಚಾರವನ್ನು ನಮ್ಮ ಮುಂದೆ ಇಟ್ಟಿದ್ದಾರೆ ಮಾನ್ಯ ಗುಂಡಪ್ಪನವರು.

ತಿರುಪೆ ಬೇಡುವವನಿಗೆ ಆಯ್ಕೆ ಮಾಡುವ ಹಕ್ಕು ಇಲ್ಲ. "Beggars cannot be choosers' ಎನ್ನುವುದು ಆಂಗ್ಲ ನಾಣ್ಣುಡಿ, 'ತನಗೆ ಇದನ್ನೇ ನೀಡಬೇಕು, ಇಷ್ಟನ್ನೇ ನೀಡಬೇಕು, ಈ ಸಮಯದಲ್ಲೇ ನೀಡಬೇಕು' ಎಂದು ನೀಡುವವನನ್ನು ನಿರ್ಭಂಧಪಡಿಸುವ ಅಧಿಕಾರ ಬೇಡುವವನಿಗೆ ಇಲ್ಲ. 'ಬೇಡುವ ಕೈಗಳಿಗೆ ಆಡುವ ಬಾಯಿರಬಾರದು', ಅಲ್ಲವೇ? ಹಾಗೆ ಬೇಡಿ, ಬೇಡಿದ್ದು ಸಿಗದಿದ್ದಾಗ ನೀಡುವವನ ಪ್ರತಿ, ಆಗ್ರಹ ಅಥವಾ ಕೋಪದಿಂದ ಕೂಡಿದ ಬಿರುನುಡಿಗಳಿಂದ ಪ್ರತಿಕ್ರಿಯೆ ನೀಡಬಾರದಲ್ಲವೇ? ಹಾಗೆ ಮಾಡಿದರೆ ನಷ್ಟ ಬೇಡುವವನಿಗೇ ಹೊರತು ನೀಡುವವನಿಗಲ್ಲ.

ಇದನ್ನು ನಮ್ಮ ಬದುಕಿಗೆ ಅನ್ವಯಿಸಿಕೊಳ್ಳಬೇಕು, ಎನ್ನುವುದೇ ಮಾನ್ಯ ಗುಂಡಪ್ಪನವರ ಸೂಚನೆ. ನಾವೆಲ್ಲಾ ಒಂದಲ್ಲದೊಂದು ರೀತಿಯಲ್ಲಿ ಭಿಕ್ಷುಕರೇ, ವಿದ್ಯೆಯನ್ನು ಬೇಡುವವನು 'ವಿದ್ಯಾರ್ಥಿ', ಆರ್ಥಿ ಎಂದರೆ ಬೇಡುವವನು

ಎಂದರ್ಥ. ವಿದ್ಯೆಯನ್ನು ನೀಡುವ ಗುರುವಿನಲ್ಲಿ ಅವನು ಎಷ್ಟು ವಿಧೇಯನಾಗಿದ್ದರೆ ಅಷ್ಟು ಸಮರ್ಪಕವಾಗಿ ಕಲಿಯಬಹುದು. ನಾವೆಲ್ಲರೂ ಸದಾಕಾಲ ಅನ್ಯರಿಂದ ಏನನ್ನಾದರೂ ಬೇಡುತ್ತಲೇ ಇರುತ್ತೇವೆ. ಈ ಬೇಡುವಿಕೆ ನಿರಂತರ ಮತ್ತು ಅನಂತ. ಬಯಸಿದ್ದನ್ನು ಪಡೆಯುವ ಪ್ರಯತ್ನದಲ್ಲಿ ಮೊದಲು

(277)

ಮುಗಿವೇ ಭಾಗ್ಯ 669 - 674 ಕಗ್ಗರಸಧಾರೆ

ನಮ್ಮದೇ ಶಕ್ತಿಯಿಂದ ಪ್ರಯತ್ನ, ಅದು ಸಫಲವಾಗದಿದ್ದರೆ ಅನ್ಯರಿಂದ ಬೇಡುವುದು. ಬೇಡಿದ್ದು ಸಿಗದಿದ್ದರೆ ಆಗ್ರಹವುಂಟಾಗುವುದು ತೀರ ಸಹಜ. ಅದು ಅಸಹಾಯಕತೆಯಿಂದ ಉಂಟಾಗುವುವಂತಹ ಭಾವ. ನಮ್ಮ ಎಲ್ಲ ಪ್ರಯತ್ನಗಳೂ ಕೈಮೀರಿದಾಗ, ನಾವು ನಮಗೆ ಸಹಾಯ ಮಾಡದವರ ಮೇಲೆ ಕೋಪಿಸಿಕೊಂಡು ಬೈಯುತ್ತೇವೆ, ಒಳಗೊಳಗೇ ಕನಲುತ್ತೇವೆ, ಅಲ್ಲವೇ?

ಇದಾದನಂತರ ಯಾವ ದಿಕ್ಕಿನಿಂದಲ್ಲೂ ಬಯಸಿದ್ದು ಸಿಗದಿದ್ದರೆ, ನಮ್ಮೆಲ್ಲರನ್ನೂ ಮೀರಿದ ಪರಮಶಕ್ತಿಯಿಂದ ಬೇಡುವುದು. ಇದು ಸರ್ವೇ ಸಾಮಾನ್ಯ, ಕವಡೆ ಶಾಸ್ತ್ರ, ಜಾತಕ, ಪೂಜೆ ಪುನಸ್ಕಾರ ಎಲ್ಲಾ ಮಾಡಿ ಆ ದೇವರನ್ನು ಬೇಡುತ್ತೇವೆ. ಅಲ್ಲಿಯೂ ಸಿಗದಿದ್ದರೆ, ಅವನನ್ನೂ ಬಿಡುವುದಿಲ್ಲ, ಆ ದೇವರನ್ನೂ ನಿಂದಿಸುತ್ತೇವೆ. ಇದು ಮಾನ್ಯ ಗುಂಡಪ್ಪನವರು ಹೇಳುವಂತೆ ಗರ್ವದಿಂದ ಉಂಟಾಗುವ ಭಾವ. ನಾವು ಎಂದಿಗೂ ನಮ್ಮ ಕೊರತೆಗಳಿಗೆ, ನ್ಯೂನತೆಗಳಿಗೆ, ಸಂಕಷ್ಟಗಳಿಗೆ ನಾವೇ ಕಾರಣವೆಂದು ಅರಿಯುವುದೇ ಇಲ್ಲ. ಆ ಅರಿವಿನ ಕೊರತೆಯೇ ನಮ್ಮನ್ನು ಜಗತ್ತಿನಮೇಲೆ ಮತ್ತು ಸೃಷ್ಟಿಕರ್ತನಮೇಲೆ ಎಗರಾಡುವ ಹಾಗೆ ಮಾಡುತ್ತದೆ. ಎಂದು, ನಮಗೆ ಆ ಅರಿವು ಮೂಡುತ್ತದೋ, ಅಂದು ನಾವು ತಾಳ್ಮೆಯನ್ನು ವಹಿಸಿ ನಮ್ಮ ಕೊರತೆಗಳನ್ನು ನೀಗಿಕೊಳ್ಳುವ ಪ್ರಾಮಾಣಿಕ ಪ್ರಯತ್ನವನ್ನು ನಾವೇ ಮಾಡುತ್ತೇವೆ ಮತ್ತು ಸಂದ ಸುಖವನ್ನೋ, ದುಃಖವನ್ನೋ ತಾಳ್ಮೆಯಿಂದ ಅನುಭವಿಸುತ್ತೇವೆ. ನಾವು ಆ ಸ್ಥಿತಿಗೆ ತಲುಪಿದರೆ ಬದುಕಿನಲ್ಲಿ ಒಂದು ಮಹತ್ಸಾಧನೆ ಮಾಡಿದ ಹಾಗಾಗುತ್ತದೆ.

**ಮುಕ್ತಕ – 672** **ಯಾತ್ರಿಕರು ನಾವು, ದಿವ್ಯಕ್ಷೇತ್ರವೀ ಲೋಕ |**

**ಸತ್ರದಲಿ ನೇಮದಿಂದಿರಲಿಕೆಡೆಯುಂಟು ||**

**ರಾತ್ರಿ ಮೂರಾಯ್ತು ಹೊರಡೆನೆ ತೆರಳಿದೊಡೆ, ಪಾರು |**

**ಪತ್ಯದವ ಮೆಚ್ಚುವನು – ಮಂಕುತಿಮ್ಮ ||**

ನೇಮದಿಂದಿರಲಿಕೆಡೆಯುಂಟು= ನೇಮದಿಂದ+ಇರಲಿಕೆ+ಎಡೆ +ಉಂಟು, ಮೂರಾಯ್ತು=ಮೂರು+ಆಯ್ತು, ಹೊರಡೆನೆ=ಹೊರಡು+ಏನೆ, ತೆರಳಿದೊಡೆ=ತೆರಳಿದ+ಒಡೆ,

ಸತ್ರ=ಧರ್ಮಛತ್ರ, ನೇಮದಿಂದ=ನಿಯಮದಿಂದ, ಎಡೆ=ಅವಕಾಶ, ಹೊರಡೆನೆ=ಹೊರಡೆಂದರೆ, ತೆರಳಿದೊಡ= ಹೊರಟರೆ, ಪಾರುಪತ್ಯದವ=ಮೇಲ್ವಿಚಾರಕ

ಈ ಜಗತ್ತು ಒಂದು ಧರ್ಮಛತ್ರವಿದ್ದಂತೆ. ಇಲ್ಲಿ ತಂಗಲು ಕೆಲವು ನಿಯಮಗಳನ್ನು ಪಾಲಿಸಬೇಕು. ನಿಯಮದ ಪ್ರಕಾರ ಅಲ್ಲಿದ್ದು, ಹೊರಡೆಂದಾಗ ಹೊರಟರೆ, ಅದರ ಮೇಲ್ವಿಚಾರಕ ಮೆಚ್ಚುವನು. ಇಲ್ಲದಿದ್ದರೆ ಬಲವಂತವಾಗಿ ಹೊರದಬ್ಬುವನು ಎಂದು, ಈ ಜಗತ್ತಿನಲ್ಲಿ ನಮ್ಮ ಬದುಕಿಗಿರುವ ನಿಯಮವನ್ನು, ಒಂದು ಉಪಮೆಯ ಆಧಾರದಿಂದ ಅರುಹಿದ್ದಾರೆ, ಮಾನ್ಯ ಗುಂಡಪ್ಪನವರು.





ಹಿಂದಿನ ಕಾಲದಲ್ಲಿ ಜನರು ಊರಿಂದ ಊರಿಗೆ ತೆರಳುವಾಗ ರಾತ್ರಿಯಾದರೆ ಯಾವುದಾದರೂ ಹತ್ತಿರದ ಊರಲ್ಲಿ ತಂಗುತ್ತಿದ್ದರು. ಹಾಗೆ ತಂಗಲು ಪ್ರತಿಯೊಂದು ಊರಿನಲ್ಲೂ ಒಂದು ಧರ್ಮಛತ್ರವಿರುತ್ತಿತ್ತು. ಆ ಛತ್ರಕ್ಕೆ ಒಬ್ಬ ಮೇಲ್ವಿಚಾರಕನಿದ್ದು, ಅಲ್ಲಿ ಮೂರು ದಿವಸ ಮಾತ್ರ ತಂಗಲು ಅವಕಾಶವಿದ್ದು, ಹೊಸದಾಗಿ ಬರುವವರಿಗೆ ಜಾಗ ಬಿಟ್ಟುಕೊಡಬೇಕಾಗಿತ್ತು. ಹಾಗೆ, ಸ್ಥಳ ಬಿಡೆಂದಾಗ ಬಿಟ್ಟುಕೊಟ್ಟರೆ ಮೇಲ್ವಿಚಾರಕ ಮೆಚ್ಚುತ್ತಿದ್ದ. ಇಲ್ಲದಿದ್ದರೆ ಬಲವಂತವಾಗಿ ಹೊರಹಾಕುತ್ತಿದ್ದ. ಇದನ್ನೇ ನಮ್ಮ ಜೀವನಕ್ಕೂ ಅನ್ವಯಿಸಿಕೊಳ್ಳಬೇಕೆಂದು ಸೂಚಿಸಿದ್ದಾರೆ.

ನಾವು ಬದುಕಿನಲ್ಲಿ ಜೀವನದ ನಿಯಮಗಳಿಗನುಸಾರವಾಗಿ ಬದುಕಬೇಕು. 'ಕಲಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗಸಹ್ಯ ಪಡಬೇಡ, ಇದಿರ ಹಳಿಯಲು ಬೇಡ, ತನ್ನ ಬಣ್ಣಿಸಬೇಡ'ಎಂದು 'ಜಗಜ್ಯೋತಿ ಬಸವೇಶ್ವರ' ರು ಹೇಳಿದ ಜಗತ್ತಿನ ಜೀವನದ ನಿಯಮಗಳನ್ನು ಪಾಲಿಸಬೇಕು. ಇಲ್ಲದಿದ್ದರೆ, ಈ ಜಗತ್ತಿನ ಮೇಲ್ವಿಚಾರಕನಾದ 'ವಿಧಿ' ನಮ್ಮನ್ನು ಬಲವಂತದಿಂದ ನಿಯಮಗಳನ್ನು ಪಾಲಿಸುವಂತೆ ಮಾಡುತ್ತಾನೆ. ಇದು ಎಲ್ಲರ ಬದುಕಿಗೂ ಅನ್ವಯ. ಕೆಲವರಿಗೆ ಅರ್ಥವಾಗುತ್ತದೆ, ಹಲವರಿಗೆ ಅರಿವಾಗುವುದಿಲ್ಲ. ಹಲವರು ನಂಬುತ್ತಾರೆ, ಕೆಲವರು ನಂಬುವುದಿಲ್ಲ. ನಂಬಲಿ ಬಿಡಲಿ, ವಿಧಿಗೆ ವಶರಾಗಿ ಬದುಕದಿರುವವರು ಯಾರೂ ಇಲ್ಲ. ಇಲ್ಲಿನ ನಿಯಮಗಳು ಕಾಲಕ್ರಮಣಕ್ಕೆ ಅನುಗುಣವಾಗಿ ಬದಲಾಗಲು ವಿಧಿರಾಯನ ಅನುಮತಿ ಇದೆ. ಅಂದರೆ ನಾವಿರುವ ಕಾಲಕ್ಕೆ ಅನುಗುಣವಾಗಿರುವ ನಿಯಮಗಳನ್ನು ಪಾಲಿಸದೆ ಬೇರೆ ದಾರಿಯಿಲ್ಲ. ಧರ್ಮಛತ್ರದಲ್ಲಿ ಹೇಗೆ ನಿಯಮಿತ ಗಡುವಿಗಿಂತ ಅಧಿಕವಾಗಿರಲು ಸಾಧ್ಯವಿಲ್ಲವೋ ಹಾಗೆಯೇ ಈ ಜಗತ್ತೆಂಬ ಧರ್ಮಛತ್ರದಲ್ಲಿ ನಮಗೂ ಒಂದು ಗಡುವು ಉಂಟು. ಆ ಗಡುವನ್ನು ನಾವು ಮೀರಲು ಸಾಧ್ಯವೇ ಇಲ್ಲ.

ಹಾಗೆ ನಾವು ಹೊರಡುವ ಸಮಯ ಬಂದಾಗ ಸಂತೋಷವಾಗಿ ಇಲ್ಲಿ ಉಳಿಯಲು, ಕಲಿಯಲು, ಕುಮತಿಯನ್ನು ತೊರೆದು ಸುಮತಿಗಳಾಗಲು ಅವಕಾಶಮಾಡಿಕೊಟ್ಟ ಆ ವಿಧಿರಾಯನೆಂಬ ಮೇಲ್ವಿಚಾರಕನಿಗೆ ನಮ್ಮ ಕೃತಜ್ಞತೆಗಳನ್ನು ಸಲ್ಲಿಸಿ, ಮುಂದಿನ ಊರಿಗೆ ತೆರಳಿದರೆ, ಅವನು ಸಂತಸಿಸುತ್ತಾನೆ. ಮುಂದಿನ ಊರಲ್ಲಿ ಮತ್ತೊಂದು ಧರ್ಮಛತ್ರ, ಅಲ್ಲಿ ಮತ್ತಷ್ಟು ದಿನ ತಂಗಲು, ಕಲಿಯಲು, ಪ್ರಯತ್ನಪಟ್ಟರೆ ಆತ್ಮೋದ್ಧಾರಕ್ಕೆ ಅವಕಾಶ ಸಿಗುತ್ತದೆ. ಹೀಗೆ ಕಲಿಯುತ್ತಾ, ಬೆಳೆಯುತ್ತಾ ನಮ್ಮನ್ನು ನಾವು ಸುಧಾರಿಸಿಕೊಳ್ಳುತ್ತಾ ಹೋದರೆ, ಸ್ವ ಇಚ್ಛೆಯಿಂದ ಸಂತೋಷವಾಗಿ, ನಮ್ಮ ಗಮ್ಯ'ವನ್ನು ಸೇರಬಹುದು. ಬದುಕಿನ ನಿಯಮಗಳನ್ನು ಪಾಲಿಸಿಯೇ, ಅದರ ಬಂಧನದಿಂದ ಮುಕ್ತಿಯನ್ನು ಪಡೆಯಬೇಕು. ಅನುಭವಿಸಿಯೇ ಅನುಭವವನ್ನು ಪಡೆಯಬೇಕು. ನಾವೂ ಅಂತಹ ಅನುಭವವನ್ನು ಪಡೆಯುವ ಮತ್ತು ಈ ಜಗತ್ತೆಂಬ ಧರ್ಮಛತ್ರದ ಮೇಲ್ವಿಚಾರಕನಾದ ವಿಧಿರಾಯನ ಮೆಚ್ಚುಗೆಯನ್ನು ಪಡೆಯುವ ಪ್ರಯತ್ನವನ್ನು ಮಾಡಿದರೆ, ಸಾರ್ಥಕ ಬದುಕಾಗುತ್ತದೆ.

**ಮುಕ್ತಕ – 673**

**ಒಂದಗಳು ಹೆಚ್ಚಿರದು, ಒಂದಗಳು ಕೊರೆಯಿರದು |**
**ತಿಂದು ನಿನ್ನನ್ನ ಋಣ ತೀರುತಲೆ ಪಯಣ ||**
**ಹಿಂದಾಗದೊಂದು ಚಣ, ಮುಂದಕಂ ಕಾದಿರದು |**
**ಸಂದ ಲೆಕ್ಕವದೆಲ್ಲ - ಮಂಕುತಿಮ್ಮ ||**

ಒಂದಗಳು=ಒಂದು+ಅಗಳು, ಹೆಚ್ಚಿರದು=ಹೆಚ್ಚು+ಇರದು, ಕೊರೆಯಿರದು=ಕೊರೆ+ಇರದು, ನಿನ್ನನ್ನಋಣ=ನಿನ್ನ +ಅನ್ನ+ಋಣ, ಹಿಂದಾಗದೊಂದು=ಹಿಂದೆ+ಆಗದು+ಒಂದು, ಕಾದಿರದು=ಕಾದು+ಇರದು, ಲೆಕ್ಕವದೆಲ್ಲ=ಲೆಕ್ಕವು+ಅದೆಲ್ಲ, ಕೊರೆ=ಕಡಿಮೆ, ಚಣ=ಕ್ಷಣ, ಸಂದ=ಆದ,

ನಮ್ಮ ಜೀವನದಲ್ಲಿ ನಾವು ಸೇವಿಸಬೇಕಾದ ಆಹಾರದ ಒಂದು ಅಗಳೂ ಅಧಿಕವಾಗದು ಅಥವಾ ಒಂದು ಅಗಳೂ ಕಡಿಮೆಯಾಗದು. ಹೀಗೆ ನಮ್ಮ ಅನ್ನದ ಋಣ ಈ ಜಗತ್ತಿನಲ್ಲಿ ಮುಗಿದೊಡನೆಯೇ, ಇಲ್ಲಿಂದ ಪಯಣ ಬೆಳಸಬೇಕು. ನಮಗೆ ಎಷ್ಟು ದಿನ, ಎಷ್ಟು ಗಂಟೆ ಮತ್ತು ಎಷ್ಟು ಕ್ಷಣ ಈ ಜಗತ್ತಿನಲ್ಲಿ ಇರಬೇಕೋ, ಅದಕ್ಕಿಂತ ಒಂದು ಕ್ಷಣ ಕಡಿಮೆಯೋ ಅಥವಾ ಒಂದು ಕ್ಷಣ ಅಧಿಕವಾಗೋ ಇಲ್ಲಿ ಇರಲಾಗದು. ಲೆಕ್ಕ ಮುಗಿದ ಒಡನೆಯೇ ನಮ್ಮ ಇಹಲೋಕದ ಪ್ರಯಾಣ ಕೈಗೊಳ್ಳಬೇಕು ಎಂದು, ಬದುಕಿನ ಅನಿವಾರ್ಯತೆಯನ್ನು ನಮಗೆ ಈ ಸಾಲುಗಳಲ್ಲಿ ಅರುಹಿದ್ದಾರೆ ಮಾನ್ಯ ಗುಂಡಪ್ಪನವರು.

ಈ ಜಗತ್ತೆಂಬ ದಿವ್ಯಕ್ಷೇತ್ರದಲ್ಲಿ ನಾವೆಲ್ಲಾ ಬಂದುಹೋಗುವ ಪ್ರಯಾಣಿಕರು, ಬರಬಹುದು, ತಂಗಬಹುದು ಮತ್ತು ನಿರ್ಗಮಿಸಬಹುದು. ಆದರೆ ಆ ಬರುವುದು, ಇರುವುದು ಮತ್ತು ನಿರ್ಗಮಿಸುವುದು, ಕೇವಲ ಆ ವಿಧಿಯೆಂಬ ಪಾರುಪತ್ತೇಗಾರನ ಆದೇಶದಂತೆ. ಅವನಿಚ್ಛೆ ಇದ್ದಷ್ಟು ದಿನ ಇರಬಹುದು ಮತ್ತು ಅವನು ನಮಗಾಗಿ ನಿಗದಿಪಡಿಸಿರುವಷ್ಟು ಅನುಭವಿಸಬಹುದು ಮತ್ತು ಅವನು ನಿಗದಿಪಡಿಸಿದ ಕ್ಷಣವೇ ಇಲ್ಲಿಂದ ಹೊರಡಬೇಕು. ಒಂದು ಕ್ಷಣವೂ ಅತ್ತಿತ್ತ ಆಗಲು ಸಾಧ್ಯವಿಲ್ಲ, ಲೆಕ್ಕ ಸಮವಾದಾಗ ಮರುಮಾತಿಲ್ಲದೆ ಹೊರಡಲೇ ಬೇಕು. ಇದನ್ನೇ ಮಾನ್ಯ ಗುಂಡಪ್ಪನವರು 'ನಿನ್ನನ್ನ ಋಣ' ಎಂದು ಕರೆದಿದ್ದಾರೆ. ಇದು ಸತ್ಯ. ಇದೇ ಸತ್ಯ. ಇದು ಎಲ್ಲರಿಗೂ ತಿಳಿದಿರುವ ಸತ್ಯ.

ಆದರೆ ತಿಳಿದಿರುವ ಈ ಸತ್ಯದ ಅರಿವು ಬಹಳಷ್ಟು ಜನರಿಗೆ ಇರುವುದೇ ಇಲ್ಲ. ನಾವು ಕಟ್ಟಿಕೊಳ್ಳುವ ಬಾಂಧವ್ಯಗಳು, ನಾವು ನಡೆಸುವ ವ್ಯವಹಾರಗಳು ಮತ್ತು ನಾವು ಸಂಚಯನ ಮಾಡುವ ವಸ್ತುಗಳ ರಾಶಿ, ಕೂಡಿಡುವ ಪರಿ ಮತ್ತು ಸಂಚಯಿಸಿದ ಮತ್ತು ಕೂಡಿಟ್ಟ ವಸ್ತು, ವ್ಯಕ್ತಿ ಮತ್ತು ವಿಷಯಗಳ ಮೇಲಿನ ನಮ್ಮ ವ್ಯಾಮೋಹವನ್ನು ಕಂಡಾಗ, ನಾವೆಲ್ಲ ಈ ಪ್ರಪಂಚದಲ್ಲಿ ಶಾಶ್ವತವಾಗಿ ಇದ್ದು ಬಿಡುವವರು ಎನ್ನುವ ಭ್ರಮೆಯಿಂದ ಬದುಕುತ್ತೇವೆ ಎನ್ನುವುದನ್ನು, ತೋರುತ್ತದೆ. ಅಂತಕನ ಕರೆ ಯಾವ ಕ್ಷಣ ಬಂದರೆ ಆ ಕ್ಷಣವೇ ಎಲ್ಲವನ್ನೂ ಬಿಟ್ಟು ಓಡಬೇಕು ಎನ್ನುವುದನ್ನು ಮರೆತೇ ಹೋಗುತ್ತೇವೆ. ಒಳಗೆ ಹೋದ ಒಂದು ಉಸಿರು ಹೊರಗೆ ಬಾರದಿದ್ದರೆ ಅಥವಾ ಹೊರಗೆ ಹೋದ ಒಂದು ಉಸಿರು ಒಳಗೆ ಹೋಗದಿದ್ದರೆ, ನಾವಿರುವುದಿಲ್ಲ. ಅಷ್ಟು ಸೂಕ್ಷ್ಮ ನಮ್ಮ ಜೀವನ. ಆದರೆ ನಾವು ಎಷ್ಟು ಬಾರಿ ಉಸಿರಾಡಬೇಕೆಂದಿದೆಯೋ ಅದರ ಲೆಕ್ಕ ಮುಗಿದೊಡನೆಯೇ ನಮ್ಮ ನಿರ್ಗಮನ ಆಗಲೇಬೇಕು.





ಹೀಗೆ ಬಾಳಿನ ಅಶಾಶ್ವತೆಯನ್ನು ಮನವರಿಕೆ ಮಾಡಿಕೊಂಡು, ಬದುಕಿನಲ್ಲಿ ಉತ್ಸಾಹವನ್ನು ತೋರುತ್ತಾ, ಅಂತರಂಗದಲ್ಲಿ ನಿರ್ಲಿಪ್ತತೆಯನ್ನು, ವಿರಕ್ತಿಯನ್ನು ಬೆಳೆಸಿಕೊಂಡರೆ, ಬದುಕೂ ಶಾಂತವಾಗಿರುತ್ತದೆ ಮತ್ತು ಬದುಕಿನಿಂದ ನಿರ್ಗಮನವೂ ಸಂತೋಷದಿಂದ ಕೂಡಿರುತ್ತದೆ. ಆದರೆ, ಈ ಜಗತ್ತಿನಲ್ಲಿ ವಿರಕ್ತಿಯನ್ನು ಬೆಳೆಸಿಕೊಳ್ಳುವುದು ಅಷ್ಟು ಸುಲಭವೇ? ಬಹಳ ಕಷ್ಟ, ಆದರೆ ಅಸಾಧ್ಯವಲ್ಲ, ಜನ್ಮ ಜನ್ಮಾಂತರದಲ್ಲಿ ಸಾಧಿಸಬಹುದಾದ ಸಾಧನೆ.

**ಮುಕ್ತಕ – 674**

**ತೊಟ್ಟಿಲುಗಳೆಷ್ಟೋ ಮಸಣಗಳಷ್ಟು ಧರೆಯೊಳಗೆ |**
**ತೊಟ್ಟಿಲಿಗೆ ಹಬ್ಬ ಮಸಣವು ತೇಗುತಿರಲು ||**
**ಹುಟ್ಟಿದವರೆಲ್ಲ ಸಾಯದೆ ನಿಲ್ಲೆ ಹೊಸತಾಗಿ |**
**ಹುಟ್ಟುವರ್ಗೆಡೆಯೆಲ್ಲಿ? - ಮಂಕುತಿಮ್ಮ ||**

ತೊಟ್ಟಿಲುಗಳೆಷ್ಟೋ= ತೊಟ್ಟಿಲುಗಳು+ಎಷ್ಟೋ, ಮಸಣಗಳಷ್ಟು= ಮಸಣಗಳು+ಅಷ್ಟು,
ತೇಗುತಿರಲು=ತೇಗುತ +ಇರಲು, ಹುಟ್ಟುವರ್ಗೆಡೆಯೆಲ್ಲಿ=ಹುಟ್ಟುವರ್ಗೆ+ಎಡೆ+ಎಲ್ಲಿ,
ನಿಲ್ಲೆ=ನಿಂತುಬಿಟ್ಟರೆ, ಹುಟ್ಟುವರ್ಗೆ=ಹುಟ್ಟುವವರಿಗೆ, ಎಡೆ=ಸ್ಥಳ, ಅವಕಾಶ

ಈ ಜಗತ್ತಿನಲ್ಲಿ ಹುಟ್ಟಿದವರಿಗಾಗಿ ಇರುವ ತೊಟ್ಟಿಲುಗಳು ಎಷ್ಟು ಇವೆಯೋ, ಸತ್ತವರಿಗಾಗಿ ಸ್ಮಶಾನಗಳೂ ಅಷ್ಟೇ ಇವೆ. ಸ್ಮಶಾನವು ಸತ್ತವರನ್ನು ಸ್ವೀಕರಿಸಿ ಹೇಗೆ ನುಂಗಿ ತೇಗುತ್ತದೆಯೋ, ಹಾಗೆಯೇ ಹುಟ್ಟಿದವರನ್ನು ಸ್ವೀಕರಿಸಿ ಹಬ್ಬವನ್ನಾಚರಿಸುತ್ತವೆ ತೊಟ್ಟಿಲುಗಳು. ಈ ಜಗತ್ತಿನಲ್ಲಿ ಹುಟ್ಟಿದವರೆಲ್ಲ ಸಾಯದೆ ಇಲ್ಲೇ ಉಳಿದುಬಿಟ್ಟರೆ, ಹೊಸದಾಗಿ ಹುಟ್ಟುವವರಿಗೆ ಸ್ಥಳವೇ ಇಲ್ಲದಂತಾಗುತ್ತದೆ ಎಂದು, ಹುಟ್ಟು ಸಾವುಗಳ ಅನಿವಾರ್ಯತೆಯನ್ನು ವಿಶದೀಕರಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ದಿವ್ಯಕ್ಷೇತ್ರವಾದ ಈ ಜಗತ್ತಿಗೆ ಪಾರುಪತ್ತೇದಾರನಾದ ವಿಧಿರಾಯನು ಇಲ್ಲಿ ಒಂದು ನಿಯಮವನ್ನು ವಿಧಿಸಿದ್ದಾನೆ, ಎಲ್ಲಕ್ಕೂ ಒಂದು ಅವಧಿಯನ್ನು ನಿಗಧಿಪಡಿಸಿದ್ದಾನೆ. ಇಲ್ಲಿ ಹೊಸದಾಗಿ ಹುಟ್ಟುವವರಿಗೆ ಸ್ಥಳ ತೆರವು ಮಾಡಿಕೊಡಲು ಮರಣವೆಂಬ ವ್ಯವಸ್ಥೆಯನ್ನು ಮಾಡಿದ್ದಾನೆ. ಯಾರಿಗೆ, ಎಂದು, ಎಲ್ಲಿ, ಹೇಗೆ ಮರಣ ಸಂಭವಿಸುತ್ತದೆ ಎನ್ನುವುದನ್ನು ಯಾರೂ ಹೇಳಲಾಗುವುದಿಲ್ಲ. ಆದರೆ ಹುಟ್ಟಿದವರೆಲ್ಲರಿಗೂ ಸ್ಮಶಾನದಲ್ಲಿ ಒಂದು ಸ್ಥಳ ಕಾಯ್ದಿರಿಸಿಟ್ಟಿರುತ್ತಾನೆ, ಬಂದವರು ತೆರಳಲೇಬೇಕು. ಭಗವದ್ಗೀತೆಯಲ್ಲಿ ಅರ್ಜುನನ ಶೋಕವನ್ನು ಕಂಡು ಶ್ರೀ ಕೃಷ್ಣ 'ಜಾತಸ್ಯ ಮರಣಂ ಧೃವಂ, ಧೃವಂ ಜನ್ಮಂ ಮೃತಸ್ಯ ಚ' ಎನ್ನುತ್ತಾನೆ, ಜಗತ್ತಿನ ಮನುಷ್ಯರಷ್ಟೇ ಅಲ್ಲ, ಪ್ರಾಣಿ, ಪಕ್ಷಿ, ಕೀಟ, ಸರೀಸೃಪಗಳು, ಗಿಡ ಮರಗಳು ಎಲ್ಲಕ್ಕೂ ಒಂದು ನಿಗದಿತ ಸಮಯವುಂಟು. ತಾವು ತೆರಳಿ ಹೊಸದಕ್ಕೆ ತಾವು ಮಾಡಿಕೊಡುವುದೇ ನಿಯಮ. ಈ ಭೂಮಿಯ ಮೇಲಿರುವ ನಮಗೆ ಈ ನಿಯಮವಿದ್ದರೆ, ಸೃಷ್ಟಿಯಲ್ಲಿರುವ ಎಲ್ಲಕ್ಕೂ ಎಂದರೆ, ಗ್ರಹಗಳು, ನಕ್ಷತ್ರಗಳಿಗೂ ಈ ನಿಯಮವು ಅನ್ವಯವಾಗುತ್ತದೆ ಎನ್ನುವುದು ವಿಜ್ಞಾನದ ಸಿದ್ಧಾಂತ.

ಇದು ವಿಧಿ ನಿಯಮ ಮತ್ತು ಇದನ್ನು ಮೀರಲು ಯಾರಿಗೂ ಸಾಧ್ಯವಿಲ್ಲ, ಹಾಗಾಗಿ ಯಾವುದು ಅನಿವಾರ್ಯವೋ ಅದನ್ನು ಸಂತೋಷದಿಂದ ಸ್ವೀಕರಿಸಬೇಕು. ಹುಟ್ಟು ನಮ್ಮ ಕೈಯಲ್ಲಿಲ್ಲ ಮತ್ತು ಸಾವೂ ನಮ್ಮ ಕೈಯಲ್ಲಿಲ್ಲ. ಆದರೆ ಆ ನಡುವಿನ ಜೀವನ ನಮ್ಮ ಕೈಯಲ್ಲಿದೆ. ಸಂಚಿತ ಕರ್ಮವನ್ನು ಕರಗಿಸುತ್ತಾ ಸತ್ಕರ್ಮಗಳನ್ನು ಆರ್ಜಿಸುತ್ತಾ, ಈ ಜಗತ್ತಿನಲ್ಲಿ ಇದ್ದು, ಆದರೆ ಇದಕ್ಕೆ ಅಂಟದ ಹಾಗೆ ಬಾಳಬೇಕು. ಈ ಜಗತ್ತನ್ನು ಬಿಟ್ಟು ಹೋಗುವಾಗ 'ನಾವೇ' ಪಶ್ಚಾತ್ತಾಪ ಪಡುವಂತಹ ಕೆಲಸಗಳನ್ನು ಮಾಡಿ ಹೋಗಬಾರದು. ಅದು ನಮ್ಮನ್ನು ಕೊರಗಿಸುತ್ತದೆ, ಕುಗ್ಗಿಸುತ್ತದೆ. ಬದುಕಿನಲ್ಲಿ ತಪ್ಪು ಮಾಡುವುದು ಸಹಜ, ಆದರೆ ನಾವು ಮಾಡಿದ್ದು ತಪ್ಪು ಎಂದು ಅರಿವಾದ ಮೇಲೆ ಅದನು ತಿದ್ದಿಕೊಂಡು, ಬದುಕಿನಿಂದ ನಿರ್ಗಮಿಸುವಾಗ ನಿರ್ಲಿಪ್ತತೆಯ ಭಾವದಿಂದ ಹೊರಡಬೇಕು.

ಹುಟ್ಟಿದಾಗ ಎಲ್ಲರಿಗೂ ಹಬ್ಬ. ನಾವು ಸತ್ತಾಗಲೂ ಒಂದು ಹಬ್ಬವಾಗಬೇಕು. ಹಳತನ್ನು ಕಳಚಿ, ಹೊಸತನ್ನು ಧರಿಸುವ ಹಬ್ಬ. ಹಳತಾದ ಜೀವನದಲ್ಲಿನ ಅನುಭವಗಳಿಂದ ಕಲಿತಂತ, ಬೆಳೆದಂತ ಮತ್ತು ನಮ್ಮನ್ನು ನಾವು ಉತ್ತಮವಾಗಿಸಿಕೊಂಡ ಹಬ್ಬವಾಗಬೇಕು. ಜಗತ್ತಿನ ಅಂಟು ಇರುವವರೆಗೂ 'ಗೋಳು' ನಿಶ್ಚಯ. ಗೋಳುವುದೋ ಸಂತಸಿಸುವುದೋ ನಮ್ಮ ಆಯ್ಕೆಗೆ ಬಿಟ್ಟದ್ದಲ್ಲವೇ?

**ಮುಕ್ತಕ – 675** **ಅಪರಿಮಿತವೇನಲ್ಲ ಜೀವನಕೆ ಲಭ್ಯ ಸುಖ |**
**ಚಪಲದಿಂ ಕಣ್ಣನತ್ತಿತ್ತಲಲಸುತಿರೆ ||**
**ಸ್ವಪರಿಸ್ಥಿತಿಯ ಧರ್ಮ ನಷ್ಟವಹುದೊಂದೆ ಫಲ |**
**ವಿಫಲ ವಿಪರೀತಾಶೆ - ಮಂಕುತಿಮ್ಮ ||**

ಅಪರಿಮಿತವೇನಲ್ಲ=ಅಪರಿಮಿತವು+ಏನಲ್ಲ, ಕಣ್ಣನತ್ತಿತ್ತಲಲಸುತಿರೆ=ಕಣ್ಣನು+ಅತ್ತಿತ್ತಲು+ಅಲಸುತಿರೆ,
ನಷ್ಟವಹುದೊಂದೆ =ನಷ್ಟವಹುದು+ಒಂದೆ, ವಿಪರೀತಾಶೆ=ವಿಪರೀತ+ಆಶೆ,
ಚಪಲದಿಂ=ಚಂಚಲತೆಯಿಂದ ಸ್ವಪರಿಸ್ಥಿತಿಯ =ನಮ್ಮ ಪ್ರಸ್ತುತ ಸ್ಥಿತಿಯ, ನಷ್ಟವಹುದು=ನಷ್ಟವಾಗುವುದು.

ಜೀವನದಲ್ಲಿ ಎಲ್ಲರಿಗೂ ಸುಖಪಡಲು ಸಾಧ್ಯವಿದೆ. ಆದರೆ ನಮಗೆ ಸುಖನೀಡುವ ಆ 'ಸುಖ' ಸಾಧನಗಳಿಗೆ ಮಿತಿಯಿದೆ. ನಾವು ಇರುವ ಪರಿಸ್ಥಿತಿಯ ಧರ್ಮದ ಚೌಕಟ್ಟನ್ನು ಮೀರಿ, ಚಪಲತೆ ಮತ್ತು ಅತಿ ಆಸೆಯಿಂದ, ಸುಖವನ್ನು

ನಾನಾ ಕಡೆ ಅರಸಿದರೆ, ಅದು ಮರೀಚಿಕೆಯಂತೆ ಕೈಗೆ ಎಟುಕದೆ, ಸಂದ ಸುಖವನ್ನೂ ಅನುಭವಿಸಲಾಗದೆ, ವಿಪರೀತ ಆಸೆಯಿಂದ ಕೇವಲ ವೈಫಲ್ಯವನ್ನು ಅನುಭವಿಸಬೇಕಾಗುತ್ತದೆ ಎಂದು, ಸುಖವನ್ನು ಅನುಭವಿಸದೆ, ಅರಸುವುದರಲ್ಲೇ ವ್ಯರ್ಥ ಕಾಲಯಾಪನೆ ಮಾಡುವವರಿಗೆ ಒಂದು ಕಿವಿಮಾತನ್ನು ಹೇಳಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಸುಖ ಅಥವಾ ಸಂತೋಷ ಅಥವಾ ಆನಂದ ಎನ್ನುವುದು ಒಂದು ಮಾನಸಿಕ ಸ್ಥಿತಿ, 'ವಸ್ತುಗಳಿಂದ ಸುಖ"





ಸಿಗುತ್ತದೆ' ಎನ್ನುವುದು ಸುಳ್ಳು. ಹಾಗೆ ಸಿಗುತ್ತದೆ ಎನ್ನುವುದು ಕೇವಲ ಒಂದು ಮಾನಸಿಕ ಭ್ರಮೆ, ಯಾವುದೇ ವಸ್ತು, ವಿಷಯ ಅಥವಾ ವ್ಯಕ್ತಿಗಳಿಂದ ಸಿಗುವ ಆನಂದದ ಪ್ರಮಾಣ ಅದನ್ನು ಅನುಭವಿಸುವ ವ್ಯಕ್ತಿಯ ಮನೋಭಾವದ ಮೇಲೆ ಅಧಾರಪಟ್ಟಿದೆ. ಎಲ್ಲವೂ ಇದ್ದು ಗೋಳಾಡುವವರನ್ನೂ, ಏನೂ ಇಲ್ಲದಿದ್ದರೂ ಆನಂದವಾಗಿರುವವರನ್ನೂ ನಾವು ನೋಡಿದ್ದೇವಲ್ಲವೇ? ಪ್ರತಿಯೊಬ್ಬರಿಗೂ ಅವರವರ ಶ್ರಮದ, ಅದೃಷ್ಟದ ಅಥವಾ ಪೂರ್ವ ಕರ್ಮದ ಅನುಸಾರವಾಗಿ ಅವರು ಬಯಸಿದ್ದಪ್ಪಲ್ಲದಿದ್ದರೂ, ಎಷ್ಟೋ ಒಂದಷ್ಟು ಸಿಗುತ್ತದೆ.

ಗುಂಡಪ್ಪನವರು ಹೇಳುವ 'ಸ್ವ-ಪರಿಸ್ಥಿತಿಯ ಧರ್ಮ' ವನ್ನನುಸರಿಸಿ, ಬಂದದ್ದನ್ನು ಅನುಭವಿಸಿ ಸಂತೋಷಪಡಬೇಕು. ಅದನ್ನು ಬಿಟ್ಟು ಕೈಲಿರುವುದನ್ನು ಅನುಭವಿಸಿ, ಸುಖಪಡದೆ ಮತ್ತಷ್ಟಕ್ಕೋ ಅಥವಾ ಬೇರೆ ಯಾವುದಕ್ಕೋ ಅಸೆ ಪಟ್ಟು, ಮನಸ್ಸನ್ನು ಅತ್ತ ಅಲೆಸಿ, ಅಲ್ಲಿ ಏನೂ ಸಿಗದಿದ್ದಾಗ, ಬಂದ ಸುಖವನ್ನು ಅನುಭವಿಸದೆ, ಬಯಸಿದ ಸುಖ ಸಿಗದಿದ್ದಾಗ ಕೊರಗಿ, ಗೋಳಾಡಿ, ಮನಸ್ಸನ್ನು ಹಿಂಸಿಸುವುದು ಸರಿಯಲ್ಲ. ಇದು ಅತೃಪ್ತ ಮನಸ್ಸಿನ ಸ್ಥಿತಿ, ಅತೃಪ್ತ ಮನಸ್ಸಿಗೆ ಇಡೀ ಜಗತ್ತನ್ನೇ ಕೊಟ್ಟರೂ ಅದು ಸುಖಪಡಲು ಸಾಧ್ಯವೇ ಇಲ್ಲ. ಆದ್ದರಿಂದಲೇ ಗುಂಡಪ್ಪನವರು 'ವಿಫಲ ವಿಪರೀತಾಶೆ ಎಂದಿದ್ದಾರೆ. ಅತಿ ಸರ್ವತ್ರ ವರ್ಜ್ಯೇತ್ ಎನ್ನುವುದರ ಗೂಢಾರ್ಥವೇನೆಂದರೆ, ಮಿತಿ ಎನ್ನುವುದು ಧರ್ಮ, ಅತಿ ಎನ್ನುವುದು ಅಧರ್ಮ.

ಚಂಚಲತೆ ಮತ್ತು ಚಪಲತೆ ಮನುಷ್ಯನ ಮನಸ್ಸಿನ ಗುಣ. ಈ ಚಂಚಲತೆ ಮತ್ತು ಚಪಲತೆಗಳೇ ಮನುಷ್ಯನ ಕಷ್ಟಗಳಿಗೆ ಮತ್ತು ತನ್ಮೂಲಕ ದುಃಖಕ್ಕೆ ಕಾರಣ. ಇದು ಎಲ್ಲರಿಗೂ ಗೊತ್ತಿರುವ ಸತ್ಯ. ಇದನ್ನು ತೊರೆದು ತೃಪ್ತರಾಗಿ "ಇದ್ದದ್ದರಲ್ಲಿ ಸಂತೋಷವಾಗಿರಲು ಸಾಧ್ಯವಿಲ್ಲವೇ?" ಎಂದರೆ, ಸಾಧ್ಯ. ಅದಕ್ಕೆ ಮನಸ್ಸಿನ ತರಬೇತಿಯಾಗಬೇಕು. ಅತಿಯಾಸೆ ಬಿಟ್ಟು ತೃಪ್ತ ಮನೋಭಾವ ಬೆಳೆಸಿಕೊಳ್ಳುವಂತಹ ಮಾರ್ಗಗಳನ್ನು ನಮಗೆ ನಮ್ಮ ಪೂರ್ವಜರು, ಗುರುಗಳು, ಋಷಿಮುನಿಗಳು ಹಾಕಿಕೊಟ್ಟಿದ್ದಾರೆ. ಆ ಮಾರ್ಗವನ್ನು ಅನುಸರಿಸಿದರೆ ನಾವೂ ಸಹ ತೃಪ್ತರಾಗಿ ಧರ್ಮದಿಂದ ನಿಜವಾದ ಮತ್ತು ಸತ್ಯವಾದ ಸುಖವನ್ನು ಅನುಭವಿಸಬಹುದು. ಆಯ್ಕೆ ನಮ್ಮದಲ್ಲವೇ?

**ಮುಕ್ತಕ – 676**

**ಸ್ವಾರಸ್ಯವಮಿತಮಾರಿಗುಮಿರದು ಜೀವನದಿ |**
**ಪಾರದಿರ್ಕೆಯ ನೆನೆದು ನಡೆಯಲದು ಸಫಲ ||**
**ಸಾರಂಗಳ್ ಎಲ್ಲಪಣ್ಗಳವುಮ್ ಒಂದರೊಳಿರವು |**
**ಆರೋಗಿಸಿರುವುದನು ಮಂಕುತಿಮ್ಮ ||**

ಸ್ವಾರಸ್ಯವಮಿತಮಾರಿಗುಮಿರದು=ಸ್ವಾರಸ್ಯವು+ಅಮಿತಂ+ಆರಿಗುಂ+ಇರದು.
ಪಾರದಿರ್ಕೆಯ=ಪಾರದ+ಇರ್ಕೆಯ,ಒಂದರೊಳಿರವು=ಒಂದರೋಲು+ಇರವು.
ಆರೋಗಿಸಿರುವುದನು=ಆರೋಗಿಸು+ಇರುವುದನು
ಪಾರದ=ಮಿತಿಯ, ಇರ್ಕೆಯ=ಇರುವಿಕೆಯ, ಸಾರಂಗಳ್= ಸಾರಗಳು, ಪಣ್ಗಳವುಮ್=ಹಣ್ಣುಗಳ, ಆರೋಗಿಸು= ಸೇವಿಸು, ತಿನ್ನು, ಅನುಭವಿಸು

ಎಲ್ಲ ಹಣ್ಣುಗಳ ಸಾರ, ಸತ್ವ ಮತ್ತು ರುಚಿ ಒಂದೇ ಹಣ್ಣಿನಲ್ಲಿ ಇರಲು ಹೇಗೆ ಸಾಧ್ಯವಿಲ್ಲವೋ, ಹಾಗೆಯೇ ನಮಗೆ ಜಗತ್ತಿನ ಎಲ್ಲ ಸುಖಗಳ ಅನುಭವವೂ ಒಂದೇ ಸಲ ಲಭ್ಯವಾಗಲು ಸಾಧ್ಯವಿಲ್ಲ. ಯಾರಿಗೂ 'ಅಮಿತ'ವಾದ, 'ಪಾರ'ವಿಲ್ಲದ ಸ್ವಾರಸ್ಯ, ಸುಖ ಬದುಕಿನಲ್ಲಿ ಇರುವುದಿಲ್ಲ. ಪ್ರತಿಯೊಬ್ಬರ ಸುಖಕ್ಕೂ ಒಂದು ಮಿತಿಯಿರುತ್ತದೆ. ನಮಗೆ ಸಿಗುವ ಮತ್ತು ನಾವು ಅನುಭವಿಸಲಾಗುವ ಸಂತೋಷ ಮತ್ತು ಸುಖಗಳ ಮಿತಿಯನ್ನು ಅರಿತು, ಅನುಭವಿಸಿ ಬಾಳಿದರೆ ಬದುಕು ಸಫಲವಾಗುತ್ತದೆ, ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಒಬ್ಬೊಬ್ಬರಿಗೆ ಒಂದೊಂದು ರೀತಿಯ ಅನುಭವ ಸುಖನೀಡುತ್ತದೆ. ಊಟಮಾಡುವುದರಲ್ಲಿ ಕೆಲವರಿಗೆ, ಪುಸ್ತಕ ಓದುವುದರಲ್ಲಿ ಕೆಲವರಿಗೆ, ವ್ಯರ್ಥ ಹರಟೆ ಹೊಡೆಯುವುದರಲ್ಲಿ ಕೆಲವರಿಗೆ, ಅನ್ಯರನ್ನು ಟೀಕಿಸಿ ಕಾಲೆಳುಯುವುದರಲ್ಲಿ ಕೆಲವರಿಗೆ, ಸ್ವಾರ್ಥದಲ್ಲಿ ಕೆಲವರಿಗೆ ಮತ್ತು ಅನ್ಯರ ಹಿತ ಚಿಂತನೆಯಲ್ಲಿ ಮತ್ತು ಪರೋಪಕಾರದಲ್ಲಿ ಕೆಲವರಿಗೆ ಸಂತೋಷ. ಹೀಗೆ ಎಲ್ಲರಿಗೂ ಬೇರೆ ಬೇರೆ ರೀತಿಯಲ್ಲಿ ಸಂತೋಷ ಸಿಗುತ್ತದೆ. ಎಲ್ಲ ಸಂತೋಷದ ಕಾರಣವೂ ಒಬ್ಬರಿಗೆ ಲಭ್ಯವಾಗುವುದು ಸಾಧ್ಯವಿಲ್ಲ ಮತ್ತು ಎಲ್ಲರ ಸಂತೋಷದ ಕಾರಣವೂ ಒಂದೇ ಆಗಿರುವುದಿಲ್ಲ, ಅಲ್ಲವೇ?'

ಆದರೆ ಪ್ರತಿಯೊಬ್ಬರಿಗೂ ಸಿಗುವ ಸಂತೋಷಕ್ಕೆ ಒಂದು ಮಿತಿ ಇರುತ್ತದೆ. ಹಸಿವಾಗಿರುವಾಗ ಊಟಮಾಡುವುದರಿಂದ ಸಂತೋಷ, ತೃಪ್ತಿ. ಆ ಊಟಕ್ಕೂ ಒಂದು ಮಿತಿ ಇರುತ್ತದೆ. ಹೊಟ್ಟೆ ತುಂಬುವವರೆಗೆ ಮಾತ್ರ. ನಂತರವೂ ತಿಂದರೆ ಅದು ಹೊಟ್ಟೆ ನೋವಿಗೆ ಕಾರಣವಾಗುತ್ತದೆ. ಮಿತಿಯರಿತು ತಿಂದಾಗ ತೃಪ್ತಿಯಿರುತ್ತದೆ, ಮಿತಿ ಮೀರಿದರೆ ನೋವಾಗುತ್ತದೆ. ಇದನ್ನೇ ಮಾನ್ಯ ಗುಂಡಪ್ಪನವರು "ಪಾರದಿರ್ಕೆಯ ನೆನೆದು ನಡೆಯಲದು ಸಫಲ' ಎಂದಿದ್ದಾರೆ ಊಟದ ವಿಷಯದಲ್ಲಿ, ಮಿತಿ ಬೇಗ ಅರ್ಥವಾಗುತ್ತದೆ, ಮಿಕ್ಕ ವಿಷಯಗಳಲ್ಲಿ ಅರ್ಥವಾಗುವುದಿಲ್ಲ. ನಮ್ಮ ಮಿತಿ ಏನೆಂದು ನಮಗೆ ಅರಿವಿರುವುದಿಲ್ಲ, ಹಾಗಾಗಿ ಯಾವುದನ್ನು, ಎಲ್ಲಿ ನಿಲ್ಲಿಸಬೇಕು ಎಂದು ಅರಿಯದೆ ಮಿತಿ ಮೀರಿ ನಾವು ಕಷ್ಟಗಳಿಗೆ ಸಿಲುಕಿಕೊಳ್ಳುತ್ತೇವೆ. ಬಹಳಷ್ಟು ಬಾರಿ ಮಿತಿ ಕಣ್ಣೆದುರಿಗೆ ಕಾಣುತ್ತಾ ಇದ್ದರೂ ಮಾನ್ಯ ಗುಂಡಪ್ಪನವರು "ಚಪಲದಿಂ ಕಣ್ಣನತ್ತಿತ್ತಲಲಸುತಿರೆ" ಎಂದು ಹೇಳುವವಂತೆ, ಮೋಹದಿಂದ ಪ್ರಾಪಂಚಿಕ ಸೆಳೆತಗಳು ನಮ್ಮನ್ನು 'ಮಿತಿಮೀರುವಂತೆ ಮಾಡಿ ಕಷ್ಟಗಳಲ್ಲಿ ಸಿಲುಕಿಸುತ್ತವೆ.

ಅದಕ್ಕೆ ಮಾನ್ಯ ಗುಂಡಪ್ಪನವರು ಹೇಳುವುದು ಬಹಳ ಸೂಕ್ತ, ನಮ್ಮ ಯೋಗ್ಯತೆಯ, ಕ್ಷಮತೆಯ ಮಿತಿಗಳನ್ನು ಅರಿತು ನಮಗೆ ಸಿಕ್ಕದ್ದನ್ನು ತೃಪ್ತಿಯಿಂದ ಸಂತೋಷದಿಂದ ಅನುಭವಿಸಿದರೆ, ಸುಖದಿಂದಿರಬಹುದು. ಅದನ್ನು ಬಿಟ್ಟು

ಮಿತಿಮೀರಿ ಕಂಡ ಕಂಡ ವಸ್ತು, ವಿಷಯ, ವ್ಯಕ್ತಿಗಳಲ್ಲಿ ಆಸೆ ಮತ್ತು ಮೋಹವನ್ನು ಪಟ್ಟರೆ, ಆ ಮೋಹವೇ ನಮ್ಮನ್ನು ಕಷ್ಟ ರೂಪದಲ್ಲಿ ಮತ್ತು ತನ್ಮೂಲಕ ದುಃಖಕ್ಕೆ ತಳ್ಳುತ್ತದೆ. 'ಮಿತಿ'ಯನ್ನು ಅರಿಯುವುದೇ 'ಮತಿ'ಗೆ ಇರಬೇಕಾದ ಯೋಗ್ಯತೆ.





**ಮುಕ್ತಕ – 677**

**ಎಷ್ಟು ನೀನುಂಡರೇಂ? ಪುಷ್ಟಿ ಮೈಗಾಗುವುದು |**
**ಹೊಟ್ಟೆ ಜೀರ್ಣಿಸುವಷ್ಟೆ: ಮಿಕ್ಕುದೆಲ್ಲ ಕಸ ||**
**ಎಷ್ಟು ಗಳಿಸಿಟ್ಟೊಡಂ ನಿನಗೆ ದಕ್ಕುವುದೆಷ್ಟು? |**
**ಮುಷ್ಠಿ ಪಿಷ್ಟವು ತಾನೆ? – ಮಂಕುತಿಮ್ಮ ||**

ನೀನುಂಡರೇಂ=ನೀನು+ಉಂಡರೆ+ಏಂ, ಮೈಗಾಗುವುದು=ಮೈಗೆ+ಆಗುವುದು,
ಜೀರ್ಣಿಸುವಷ್ಟೆ=ಜೀರ್ಣಿಸುವ+ಅಷ್ಟೆ, ಗಳಿಸಿಕೊಡಂ=ಗಳಿಸಿ+ಇಟ್ಟೊಡಂ, ದಕ್ಕುವುದೆಷ್ಟು=ದಕ್ಕುವುದು+ಎಷ್ಟು,
ಪುಷ್ಟಿ=ಶಕ್ತಿ, ಗಳಿಸಿದ್ದೊಡಂ= ಸಂಪಾದಿಸಿಟ್ಟರೆ, ಮುಷ್ಠಿ ಪಿಷ್ಟವು= ಹಿಡಿಯನ್ನ ಅಥವಾ ಹಿಟ್ಟು

ನೀನು ಎಷ್ಟು ಆಹಾರವನ್ನು ತಿಂದರೂ, ಅದರಿಂದ ದೇಹಕ್ಕೆ ಪುಷ್ಟಿ ಸಿಗುವುದು, ನಿನ್ನ ದೇಹ ಜೀರ್ಣಿಸಿಕೊಳ್ಳುವಷ್ಟು ಮಾತ್ರ ಅಧಿಕವಾಗಿ ತಿಂದದ್ದೆಲ್ಲ ಜೀರ್ಣವಾಗದೆ, ಮಲರೂಪದಲ್ಲಿ ಕಸವಾಗಿ ಹೊರಬರುತ್ತದೆ. ಎಷ್ಟು ಸಂಪತ್ತನ್ನು ಗಳಿಸಿದರೂ ಹಸಿವಾದಾಗ ನೀನು ಸೇವಿಸಲಾಗುವುದು ಕೇವಲ ಒಂದು ಮುಷ್ಠಿ ಅನ್ನ ತಾನೆ? ಎಂದು ಕೇಳುತ್ತಾ, ನಮ್ಮ ಮಿತಿಗಳನ್ನು ಅರ್ಥ ಮಾಡಿಕೊಳ್ಳುವಂತೆ ನಮಗೆ ಸೂಚನೆಯನ್ನಿತ್ತಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

“ಊಟ ಬಲ್ಲವನಿಗೆ ರೋಗವಿಲ್ಲ' ಎಂಬುದು ಗಾದೆ ಮಾತು. 'ಅನ್ನಾದ್ಯೋತಾನಿ ಜಾಯಂತೆ, ಜಾತಾನ್ನನ್ನೇನ ವರ್ಧಂತೆ' ಅರ್ಥಾತ್, ಈ ಜಗತ್ತಿನಲ್ಲಿ ಎಲ್ಲವೂ ಅನ್ನದಿಂದ ಹುಟ್ಟುತ್ತವೆ, ಅನ್ನದಿಂದಲೇ ಜೀವಿಸುತ್ತವೆ ಮತ್ತು ಅನ್ನದಿಂದಲೇ ಬೆಳೆಯುತ್ತವೆ, ಎನ್ನುತ್ತದೆ ತೈತ್ತರೀಯ ಉಪನಿಷತ್ತು. ಹಾಗಾಗಿ ಉಣ್ಣುವುದು ದೇಹದ ಪುಷ್ಟಿಗಾಗಿ ಅಷ್ಟೇ. ಪ್ರತಿಯೊಬ್ಬರ ದೇಹದ ಪ್ರಕೃತಿಯ ಮೇಲೆ ಅವರವರಿಗೆ, ಅವರವರ ಅನ್ನದ ಅವಶ್ಯಕತೆ ಬದಲಾಗುತ್ತದೆ. ಕೆಲವರಿಗೆ ಜೀರ್ಣಿಸಿಕೊಳ್ಳುವ ಶಕ್ತಿ ಅಧಿಕವಾಗಿಯೂ, ಕೆಲವರಿಗೆ ಕಡಿಮೆಯಾಗಿಯೂ ಇರುತ್ತದೆ. ಈ ಜೀರ್ಣಿಸಿಕೊಳ್ಳುವ ಶಕ್ತಿಯ ಮಿತಿಯೊಳಗೆ ಆಹಾರದ ಸೇವನೆಯಾಗಬೇಕು. ಅಧಿಕವಾದರೆ ಆಹಾರವೂ ವಿಷವಾಗಿ, ಆರೋಗ್ಯ ವಿಷಮವಾಗುವುದರಲ್ಲಿ ಸಂದೇಹವಿಲ್ಲ.

ನಮ್ಮ ಸನಾತನದ ಪ್ರಕಾರ ಊಟವೆನ್ನುವುದು ಒಂದು ಯಜ್ಞದಂತೆ, ಯಜ್ಞದಲ್ಲಿ ಹವಿಸ್ಸನ್ನು ಅಗ್ನಿಗೆ ಆಹುತಿಯಾಗಿ ಕೊಟ್ಟು, ದೇವತೆಗಳನ್ನು ಸುಪ್ರೀತರನ್ನಾಗಿಸಿ, ನಮಗೆ ಬೇಕಾದ ಶ್ರೇಯಸ್ಸನ್ನು ನಾವು ಪಡೆಯುವಂತೆ, ಪರಮಾತ್ಮ ಸ್ವರೂಪಿಯಾದ ವೈಶ್ವಾನರನೆಂದು ಕರೆಯಲ್ಪಡುವ ಜಠರದ ಅಗ್ನಿಗೆ ಆಹುತಿಯನ್ನಾಗಿ ಆಹಾರವನ್ನು ಸೇವಿಸಿ, ನಮ್ಮ ದೇಹಕ್ಕೆ ಬೇಕಾದ 'ಪುಷ್ಟಿ'ಯನ್ನು ಪಡೆಯುತ್ತೇವೆ. ಆಹಾರ ಜೀರ್ಣವಾದನಂತರ ಆ ಆಹಾರದ ಗುಣಗಳು ನಮ್ಮ ದೇಹ, ಮನಸ್ಸು ಮತ್ತು ಬುದ್ಧಿಗಳ ಮೇಲೆ ತನ್ನ ಪ್ರಭಾವವನ್ನು ಬೀರುತ್ತದೆ. ಇಂದಿಗೂ ಬಹಳ ಆಚಾರವಂತರಲ್ಲಿ ಊಟವಾಯಿತೇ' ಎನ್ನುವುದಕ್ಕೆ 'ವೈಶ್ವಾನರವಾಯಿತೆ' ಎನ್ನುವ ರೂಢಿಯಿದೆ. ಹಾಗಾಗಿ ಆಹಾರ ಸೇವನೆಗೆ ಸೂಕ್ತ ಗಮನವನ್ನು ಕೊಡಬೇಕು. ಅಳತೆಗೆ ಮೀರಿ ಅಧಿಕವಾಗಿ ತಿಂದದ್ದೆಲ್ಲಾ ಕಸವಾಗಿ ಮಲ ರೂಪದಲ್ಲಿ ಹೊರಬರುತ್ತದೆ. ಬಡವನಾಗಲಿ ಬಲ್ಲಿದನಾಗಲಿ ಆಹಾರದ ಅವಶ್ಯಕತೆ ಸಮನಾಗಿರುತ್ತದೆ. ಓಹೋ ನನ್ನಲ್ಲಿ ಗಳಿಸಿದ ಸ್ವತ್ತು ಬೇಕಾದಷ್ಟಿದೆ'

ಎಂದು ಅಧಿಕವಾಗಿ ತಿನ್ನಲಾಗುವುದಿಲ್ಲ. ಪೌಷ್ಟಿಕ ಆಹಾರವನ್ನು ಚಿನ್ನದ ತಟ್ಟೆಯಲ್ಲೇ ತಿನ್ನಬಹುದು, ಆದರೆ ತಿನ್ನುವ ಆಹಾರದ ಪ್ರಮಾಣ ಬದಲಾಗಲು ಸಾಧ್ಯವೇ ಇಲ್ಲ.

ಹಾಗಾಗಿ ಮಿತಿಯರಿಯಬೇಕು, ಮಿತಿಯಿಂದಿದ್ದರೆ ಬಾಳು ಹಿತ. ಇದು ಕೇವಲ ಆಹಾರಕ್ಕಷ್ಟೇ ಸೀಮಿತವಲ್ಲ. ಬದುಕಿನ ನಮ್ಮ ಎಲ್ಲ ಆಯಾಮಗಳಿಗೂ ಇದನ್ನು ಅನ್ವಯಿಸಿಕೊಳ್ಳಬೇಕು. ನಮ್ಮ ಕ್ಷಮತೆ ಮತ್ತು ಯೋಗ್ಯತೆಗನುಗುಣವಾಗಿ ಒಂದು 'ಗೆರೆ' ಎಳೆದುಕೊಳ್ಳಬೇಕು. ಆ ಮಿತಿಯ ವೃತ್ತದ ಪರಿಧಿಯಲ್ಲೇ ನಮ್ಮ ಕಾರ್ಯಕ್ಷೇತ್ರವಿರಬೇಕು. ನಮ್ಮ ಕ್ಷಮತೆಯನ್ನು ಹೆಚ್ಚಿಸಿಕೊಂಡ ಹಾಗೆ ಆ ವೃತ್ತದ ಪರಿಧಿಯೂ ಹೆಚ್ಚುತ್ತಾ ಹೋಗುತ್ತದೆ. ದೇಹವು ಆಹಾರದಲ್ಲಿನ ಸತ್ವವನ್ನು ಮಾತ್ರ ಸ್ವೀಕರಿಸಿ, ಮಿಕ್ಕದ್ದನ್ನು ತ್ಯಜಿಸುವ ಹಾಗೆ, ನಾವು ಈ ಜಗತ್ತಿನಲ್ಲಿ ಸತ್ವವನ್ನು ಮಾತ್ರ ಹೀರಿಕೊಳ್ಳಬೇಕು.

**ಮುಕ್ತಕ – 678**

**ಧನ್ಯತಮವಾ ಘಳಿಗೆ, ಪುಣ್ಯತಮವಾ ಘಳಿಗೆ ।**
**ನಿನ್ನ ಮಮತೆಯ ನೂಲ ವಿಧಿಯೆ ಪರಿದಂದು ॥**
**ಉನ್ನತಿಯನಾತ್ಮವನು ತಡೆದಿಡುವ ಪಾಶಗಳು ।**
**ಛಿನ್ನವಾದಂದೆ ಸೊಗ – ಮಂಕುತಿಮ್ಮ ॥**

ಧನ್ಯತಮವಾ=ಧನ್ಯತಮವು+ಆ, ಪುಣ್ಯತಮವಾ+ಪುಣ್ಯತಮವು+ಆ, ಪರಿದಂದು=ಪರಿದ+ಅಂದು,
ಉನ್ನತಿಯನಾತ್ಮವನು= ಉನ್ನತಿಯನ್+ಆತ್ಮವನು, ತಡೆದಿಡುವ=ತಡೆದು+ಇಡುವ,
ಛಿನ್ನವಾದಂದೆ=ಛಿನ್ನವಾದ ಅಂದೆ,
ಪರಿದ=ಹರಿದ ಪಾಶ=ಕೊಂಡಿ ಛಿನ್ನವಾದ=ಛಿದ್ರವಾದ, ಕಡಿದ

ಆ ವಿಧಿಯ ನೆರವಿನಿಂದ ಆತ್ಮೋದ್ಧಾರಕ್ಕೆ ಅಡ್ಡಿಯಾಗಿರುವ, ಈ ಜಗತ್ತಿನ ಮೇಲಿನ ಮಮಕಾರ ಮೋಹಗಳ ಪಾಶದ ಕೊಂಡಿಗಳು, ಎಂದು ಕಳಚಿಕೊಂಡು, ಕತ್ತರಿಸಿ ಹೋಗಿ ನಾಶವಾಗುತ್ತವೆಯೋ, ಅಂದೇ 'ಧನ್ಯತಮವಾದಂತಹ ಮತ್ತು 'ಪುಣ್ಯತಮವಾದ ಘಳಿಗೆ ಮತ್ತು ಅದೇ ನಮಗೆ ಲಭಿಸುವ ಜೀವನದ ನಿಜವಾದ ಸೊಗಸು ಎಂದು, ಈ ಜಗತ್ತಿನೊಂದಿಗೆ ನಮಗಿರುವ ಮೋಹ ಮತ್ತು ನಿರ್ಮೋಹದ ವಿಚಾರವನ್ನು ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮ ಈ ಜಗತ್ತಿನ ಬದುಕು ಕೇವಲ ಮಮತೆಯಿಂದ ಕೂಡಿದೆ. 'ಮಮತೆ' ಎಂದರೆ 'ಮಮ' ತೆ, ನನ್ನದು, ಎಂದರ್ಥ. ಪ್ರತಿಯೊಂದು ವಸ್ತು, ವಿಷಯ ಮತ್ತು ವ್ಯಕ್ತಿಗಳೊಂದಿಗೆ ನಮ್ಮ ಸಂಬಂಧ, ಈ ಮಮತೆ, ಮಮಕಾರಗಳ ನೂಲುಗಳಿಂದ ಹೆಣೆಯಲ್ಪಟ್ಟಿದೆ. ಹಾಗಾಗಿ ನಮಗೂ ಈ ಜಗತ್ತಿಗೂ ಒಂದು ಬಿಡಿಸಲಾಗದ ನಂಟು. ಈ ನಂಟನ್ನು ಬೆಸೆದಿರುವುದೇ ಈ 'ಮಮಕಾರ'ವೆಂಬ ಅಂಟು. ಈ ಅಂಟು ಎಷ್ಟು ಗಟ್ಟಿಯಾಗಿ





ನಮ್ಮನ್ನು ಅಂಟಿಸಿದೆ ಎಂದರೆ, ಇದರಿಂದ ಬಿಡಿಸಿಕೊಳ್ಳಲು ಜನ್ಮ ಜನ್ಮಾಂತರದ ಪ್ರಯತ್ನ ಮತ್ತು ಸಾಧನೆ ಬೇಕು.

“ಓಹೋ!! ಈ ಜಗತ್ತು ಎಷ್ಟು ಸೊಗಸಾಗಿದೆ. ಇಲ್ಲಿ ನಾನು ಸುಖವಾಗಿದ್ದೇನೆ. ಇದನ್ನು ಬಿಟ್ಟು ಬೇರೇನೂ ನನಗೆ ಗೊತ್ತಿಲ್ಲ. ಹಾಗಾಗಿ ನಾನೇಕೆ ಇದರಿಂದ ಬಿಡಿಸಿಕೊಳ್ಳುವ ಪ್ರಯತ್ನವನ್ನು ಮಾಡಬೇಕು?" ಎನ್ನುವ ವಾಸ್ಥವವಾದಿಗಳೂ ಇದ್ದಾರೆ. ಇದು ಸಹಜ. ಆದರೆ ಎಂದೋ ಒಂದು ದಿನ, ಈ ಜಗತ್ತಿನ ಸುಖ, ದುಃಖಗಳನ್ನೆಲ್ಲಾ ಅನುಭವಿಸಿದ ಮೇಲೆ, ಮನಸ್ಸು ಬುದ್ಧಿಗಳು ನೊಂದು, ದೇಹವೆಲ್ಲ ಕೃಶಿಸಿಹೋದಾಗ, ಇಲ್ಲಿನ ಸುಖಗಳ ನಶ್ವರತೆ, ಅಶಾಶ್ವತೆಗಳ ಅರಿವಾದಾಗ, ಇದರಿಂದ ಬಿಡಿಸಿಕೊಳ್ಳಲು 'ಪೂರ್ವ ಸಿದ್ಧತೆ' ಯಿಲ್ಲದೆ ಪ್ರಯತ್ನಪಟ್ಟರೆ ಅತೀವ ನೋವು ಮತ್ತು ಹಿಂಸೆಯಾಗುತ್ತದೆ. ಏಕೆಂದರೆ ಗಾಯದ ಮೇಲೆ ಅಂಟಿಸಿದ 'ಪಟ್ಟಿ' (bandage) ಯನ್ನು ಗಾಯ ಹಸಿಯಾಗಿರುವಾಗಲೇ ತೆಗೆಯಲು ಪ್ರಯತ್ನ ಪಟ್ಟರೆ, ಗಾಯ ಮತ್ತೆ ವ್ರಣವಾಗುತ್ತದೆ. ಹಾಗಲ್ಲದೆ ಗಾಯವನ್ನು ಮಾಗಲು ಬಿಟ್ಟರೆ, ಆ ಪಟ್ಟಿ ತಾನೇ ತಾನಾಗಿ ಕಳಚಿಹೋಗುತ್ತದೆ. ಕಾಮ ಕ್ರೋಧಾದಿಗಳಾದ ಅರಿಷಡ್ವರ್ಗಗಳ ಪ್ರಭಾವ, ಆತ್ಮ ತನ್ನನ್ನು ತಾನು ಅರಿತುಕೊಳ್ಳಲು ಮತ್ತು ತನ್ನ ಗಮ್ಯವನ್ನು ಸೇರಿಕೊಳ್ಳಲು, ಮಾನ್ಯ ಗುಂಡಪ್ಪನವರು 'ಉನ್ನತಿಯನಾತ್ಮವನು ತಡೆದಿಡುವ ಪಾಶಗಳು. ಎಂದು ಹೇಳುವಂತೆ, ಆತ್ಮವನ್ನು ಸೊರಗಿಸುತ್ತದೆ. ನಾವು 'ಮಾಗ' ಬೇಕು. ಮಾಗಿ ಪಕ್ವವಾಗಬೇಕು. ಹಣ್ಣು ಪಕ್ವವಾದಂತೆ ಅದರ ಸವಿ ಹೆಚ್ಚುವಂತೆ, ನಾವೂ ಪಕ್ವವಾದರೆ ಬದುಕಿನ ಸವಿ ಹೆಚ್ಚಾಗುತ್ತದೆ.

ನಮ್ಮ ಋಷಿ ಮುನಿಗಳು, ಸಾಧು ಸತ್ಪುರುಷರು, ನಮ್ಮ ವೇದೋಪನಿಷತ್ತುಗಳ, ಪುರಾಣ ಪುಣ್ಯಕಥೆಗಳ ಮೂಲಕ 'ಆತ್ಮದ ಉನ್ನತಿ' ಯನ್ನು ಪಡೆಯುವ ಮಾರ್ಗವನ್ನು ತೋರಿದ್ದಾರೆ. ಆ ಮಾರ್ಗದಲ್ಲಿ ನಡೆದರೆ ನಾವು ನಮ್ಮ ಗಮ್ಯವನ್ನು ಸೇರುವುದರಲ್ಲಿ ಸಂದೇಹವೇ ಇಲ್ಲ, ತೀವ್ರತಮ ಪ್ರಯತ್ನವಾಗಬೇಕು, ಆದರೆ ಪ್ರಸಕ್ತ ಸಾಮಾಜಿಕ ಸ್ಥಿತಿಯನ್ನು ನೋಡಿದರೆ ಅನುಕಂಪವುಂಟಾಗುತ್ತದೆ. ಎಲ್ಲರಿಗೂ ಈ ಜಗತ್ತಿನ ಮಮಕಾರವೇ ಸುಂದರವಾಗಿ ಕಾಣುತ್ತಿದೆ, ಇದರ ಸೆಳೆತಗಳೇ ಸುಖ ನೀಡುತ್ತವೆ ಎನ್ನುವ ಭ್ರಮೆ ಮುತ್ತಿಕೊಂಡಿದೆ. ಸ್ವಪ್ರಯತ್ನದಿಂದ ಎಂದು ನಾವು ಈ ಮೋಹದ, ಮಮಕಾರದ ಕೊಂಡಿಗಳನ್ನು ಕಳಚಿಕೊಳ್ಳುತ್ತೇವೆಯೋ, ಈ ಅಂಟಿನಿಂದ ಎಂದು ಬಿಡಿಸಿಕೊಳ್ಳುತ್ತೇವೆಯೋ ಅಂದೇ ನಾವು ಧನ್ಯರಾಗುತ್ತೇವೆ, ಪುಣ್ಯವಂತರಾಗುತ್ತೇವೆ ಮತ್ತು ಜೀವನದ ಸತ್ಯವಾದ ಸೊಗಸನ್ನು ಅನುಭವಿಸಲು ಸಾಧ್ಯವಾಗುತ್ತದೆ.

**ಮುಕ್ತಕ – 679**

**ಶಿಶುಗಳವಲಕ್ಕಿ ಬೆಲ್ಲದ ಸಂಭ್ರಮವ ನೋಡಿ ।**
**ಹಸಿವನೊಂದುವನೆ ಹಿರಿಯನು? ನಲಿಯದಿಹನೆ? ॥**
**ವಿಷಯಸಂಸಕ್ತಲೋಕವನ್ ಅನಾಸಕ್ತಿಯಿಂ- ।**
**ದೊಸೆದುನೋಳ್ಪ ನು ಜಾಣ – ಮಂಕುತಿಮ್ಮ ॥**





ಶಿಶುಗಳವಲಕ್ಕಿಬೆಲ್ಲದ=ಶಿಶುಗಳ+ಅವಲಕ್ಕಿ+ಬೆಲ್ಲದ, ಹಸಿವನೊಂದುವನೆ=ಹಸಿವನು+ಒಂದುವನೆ, ನಲಿಯದಿಹನೆ=ನಲಿಯದೆ+ಇಹನೆ, ವಿಷಯಸಂಸಕ್ತಲೋಕವನ್=ವಿಷಯ+ಸಂಸಕ್ತ+ಲೋಕವನ್, ಅನಾಸಕ್ತಿಯಿಂದೊಸೆದುನೋಳ್ಪನು=ಅನಾಸಕ್ತಿಯಿಂದ+ಒಸೆದು+ನೋಳ್ಪನ್, ಒಂದುವನೆ=ಹೊಂದುವನೆ,. ಇಹನೆ=ಇರನೆ, ಸಂಸಕ್ತ=ಆಸಕ್ತಿಯಿಂದ ಕೂಡಿದ, ಒಸೆದು=ಬಗೆದು, ನೋಳ್ಪನ್=ನೋಡುವವನು

ಮಕ್ಕಳು ಅವಲಕ್ಕಿ ಬೆಲ್ಲವನು ತಿನ್ನುವುದನ್ನು ನೋಡಿ ಮನೆಯ ಹಿರಿಯರು ತಮಗೂ ಹಸಿವಾಗಿದೆಯೆಂದು ಅದನ್ನು ಅಪೇಕ್ಷಿಸುವರೆ? ಆ ಮಕ್ಕಳು ತಿನ್ನುವುದನ್ನು ನೋಡಿ ತಾವು ಸಂತೋಷಪಡುತ್ತಾರೆ ಅಲ್ಲವೇ? ಹಾಗೆಯೇ ವಿಷಯಗಳ ಆಸಕ್ತಿಯಲ್ಲಿ ಮುಳುಗಿರುವ ಜಗತ್ತಿನ ಜನರನ್ನು ನೋಡಿ, ಅವರಲ್ಲಿ ಅನಾದರ ತೋರದಿದ್ದರೂ, ಅನಾಸಕ್ತಿಯನ್ನು ತೋರುವವನೆ ಜಾಣ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜ್ಞಾನವನ್ನು ಪಡೆದವನು ಜಾಣ, ಈ ಜಗತ್ತಿನಲ್ಲಿ ಇದ್ದು, ಜಗತ್ತಿನ ಆಶಾಪಾಶಗಳ ಬಂಧನದಿಂದ ಮುಕ್ತನಾಗಿ, ಶಾಂತನಾಗಿ, ಪ್ರಾಪಂಚಿಕ ವಸ್ತುಗಳಿಂದ ಅಲ್ಲದೆ ತನ್ನೊಳಗಿನ ಪರಬ್ರಹ್ಮಸಾನ್ನಿಧ್ಯದಿಂದಲೇ ಸದಾಕಾಲ ಆನಂದದಿಂದಿರುವವನನ್ನು ಜ್ಞಾನಿ, ಭಕ್ತ, ಮುಕ್ತ, ಮುಂತಾದಾಗಿ ಕರೆಯುತ್ತಾರೆ. ಮನಸ್ಸಿನ ವಿಕಾರಗಳನ್ನೆಲ್ಲ ಗೆದ್ದಿರುವವರು ಅವರು. ಅಂತಹವರು ಲೋಕದ ಜನರ ಪ್ರಾಪಂಚಿಕ ವ್ಯವಹಾರವನ್ನು, ಅವರ ಅಜ್ಞಾನವನ್ನು ಕಂಡು, ಅವರ ಬಾಲಿಶ ಬುದ್ಧಿಯನ್ನು ಕಂಡು, ತುಚ್ಚವಾಗಿ ಕಾಣದೆ, ಅವರನ್ನುದ್ಧರಿಸುವುದಕ್ಕಾಗಿ ತಾವೂ ಅವರೊಡನೆ ಒಂದಾಗಿ ಬೆರೆತು, ಆದರೂ ಅದರಲ್ಲಿ ಅನಾಸಕ್ತಿಯಿಂದ, ಜಗತ್ತಿನ ಜನರ ಸಕಲ ಲೋಕವ್ಯವಹಾರದಲ್ಲೂ, ಸೃಷ್ಟಿಕರ್ತನ ಲೀಲಾವಿನೋದವನ್ನೇ ಕಂಡು ಆನಂದಿಸುತ್ತಾರೆ. ಅಂತಹವರೇ ನಿಜವಾದ ಮುಕ್ತರು, ವಿಮುಕ್ತರು.

ನಮ್ಮ ಸಮಾಜದಲ್ಲೂ ತಮ್ಮನ್ನು ತಾವು "ಸ್ವಾಮಿಗಳು, ಗುರುಗಳು, ಮಠಾಧೀಶರು, ಸನ್ಯಾಸಿಗಳು" ಮುಂತಾದಾಗಿ ಕರೆದುಕೊಳ್ಳುವ ಸಾವಿರಾರು ಜನರು ಸಿಗುತ್ತಾರೆ. ಸ್ವಜನ ಪ್ರೀತಿಯಿಂದ, ಸ್ವಾರ್ಥದಿಂದ, ಧನದಾಸೆಯಿಂದ, ಪ್ರಚಾರದ ಆಸೆಯಿಂದ, ತಮ್ಮ ಪ್ರಾಬಲ್ಯವನ್ನು ಪ್ರದರ್ಶಿಸಲು, ಆಚಾರಗಳ, ಸಂಪ್ರದಾಯಗಳ ಜಾತಿಯ, ಭಾಷೆಯ, ವೃತ್ತಗಳನ್ನು ಸೃಷ್ಟಿಸಿ, ಎಲ್ಲರನ್ನೂ ಆ ವೃತ್ತದೊಳಕ್ಕೆ ಸೆಳೆಯಲು ಸಾಹಸ ಮಾಡಿ, ಜಗತ್ತಿನ ಜನರ ನಡುವೆ ಬೇಧ ಭಾವಗಳನ್ನು ಸೃಷ್ಟಿಸಿ, ತಮ್ಮ ಬೇಳೆ ಬೇಯಿಸಿಕೊಳ್ಳುವವರು, ಜನರನ್ನು ತಪ್ಪು ಮಾರ್ಗದಲ್ಲಿ ನಡೆಸುವವರು, ಕೇವಲ ಬೂಟಾಟಿಕೆಯ ಜನ. ಅವರ ಸಂಸರ್ಗದಲ್ಲಿದ್ದರೆ ನಮ್ಮ ಉದ್ಧಾರವೆಂದೂ ಸಾಧ್ಯವಿಲ್ಲ. "ಉದರ ವೈರಾಗ್ಯವಿದು ನಮ್ಮ ಪದುಮನಾಭನಲಿ ಲೇಶ ಬಕುತಿಯಿಲ್ಲ" ಎಂದು ಪುರಂದರ ದಾಸರು ಹೇಳಿದ ಹಾಗೆ, ಇವರೆದ್ದೆಲ್ಲಾ ಬೂಟಾಟಿಕೆಯ ಭಕ್ತಿ, ಇವರು ಮಾಡುವ ಪೂಜೆ, ಆಚಾರ ಮತ್ತು ಪಾಲಿಸುವ ಗೊಡ್ಡು ಸಂಪ್ರದಾಯಗಳನ್ನು ಮತ್ತು ಇವರ ಅಜ್ಞಾನವನ್ನು ನೋಡಿ ಆ ದೇವರೂ ಸಹ 'ಅಯ್ಯೋ ಪಾಪ' ಎಂದು ಮುಗುಳ್ನಕ್ಕಿರಬೇಕು.

ನಿಜವಾಗಿ ಜ್ಞಾನಿಯಾದವನು 'ಸರ್ವಜನ ಹಿತಾಯ, ಸರ್ವಜನ ಸುಖಾಯ' ಎನ್ನುವಂತೆ ಬದುಕುತ್ತಾನೆ. ಸಕಲ

ಜೀವರಾಶಿಗಳಲ್ಲೂ ಕರುಣೆಯನ್ನು, ಪ್ರೀತಿಯನ್ನು ತೋರುತ್ತಾ, ಎಲ್ಲರ ಉದ್ಧಾರಕ್ಕೆ ಮಾರ್ಗತೋರುತ್ತಾನೆ, ಮತ್ತು ತಾನೂ ಶ್ರಮ ಪಡುತ್ತಾನೆ. ಸತ್ಯವಾದ ಜ್ಞಾನವನ್ನು ಪಡೆಯುವುದರಿಂದ, ಎಲ್ಲರಲ್ಲೂ ಪ್ರೀತಿಯ ಭಾವನೆಯನ್ನು ಬೆಳೆಸಿಕೊಳ್ಳಲು ಅಡ್ಡಿಯಾಗಿರುವ, ನಮ್ಮ ಮನಸ್ಸಿನಲ್ಲಿರುವ ಜಾತಿ, ಮತ, ಭಾಷೆ, ಧರ್ಮ ಮುಂತಾದವುಗಳ 'ಗೆರೆ' ಗಳನ್ನು ಅಳಿಸಿಹಾಕಿದರೆ ಮತ್ತು ಮತ್ತೆಂದೂ ಅಂತಹ ಭಾವಗಳು ನಮ್ಮ ಮನಃಪಟಲದಲ್ಲಿ ಮೂಡದಿರುವಂತಹ ಎಚ್ಚರಿಕೆಯನ್ನು ವಹಿಸಿ ಮುಂದುವರೆದರೆ, ಎಲ್ಲರೂ ಸತ್ಯವಾದ ಸತ್ಯ ಕ್ಕೆ ಹತ್ತಿರವಾದ, ಮತ್ತು ಸತ್ಯವನ್ನು ಕಾಣಬಹುದಾದ ಜ್ಞಾನವನ್ನು ಪಡೆಯಬಹುದು. ಅದಕ್ಕೆ ದೃಢವಾದ ಇಚ್ಛೆ, ಸಂಕಲ್ಪ ಮತ್ತು ಪ್ರಯತ್ನವಿದ್ದಲ್ಲಿ ಸರ್ವರಿಗೂ ಸಾಧ್ಯ.

**ಮುಕ್ತಕ – 680**

**ಉಂಡಾತನುಣುತಿರುವರನು ಕಾಣ್ಬ ನಲವಿಂದ |**
**ಪಂಡಿತನು ವಿಧ್ಯಾರ್ಥಿಗಳಿಗೊರೆವ ನಯದಿಂ ||**
**ಕಂಡು ಲೋಕವನು ಸಂತೈಸುತಿರುವಂ ಜ್ಞಾನಿ |**
**ಕಂಡೆಲ್ಲರೊಳು ತನ್ನ - ಮಂಕುತಿಮ್ಮ ||**

ಉಂಡಾತನುಣುತಿರುವರನು=ಉಂಡಾತ +ಉಣುತ+ಇರುವರನು, ವಿಧ್ಯಾರ್ಥಿಗಳಿಗೊರೆವ=ವಿದ್ಯಾರ್ಥಿಗಳಿಗೆ+ಒರೆವ, ಸಂತೈಸುತಿರುವಂ=ಸಂತೈಸುತ+ಇರುವ, ಕಂಡೆಲ್ಲರೊಳು=ಕಂಡು+ಎಲ್ಲರೊಳು.
ಕಾಣ್ಬ=ನೋಡುವ, ನಲವಿಂದ=ಪ್ರೀತಿಯಿಂದ, ಒರೆವ=ತಿಳಿಸುವ, ನಯದಿಂ=ನಯ ಮತ್ತು ನಾಜೂಕಿನಿಂದ, ಸಂತೈಸುತ=ಸಾಂತ್ವನವನ್ನು ಹೇಳುತ.

ಊಟಮಾಡಿ ಹೊಟ್ಟೆ ತುಂಬಿದವನು, ನಂತರ ಉಣ್ಣುವವರನ್ನು 'ನಿಧಾನವಾಗಿ ಆಗಲಿ' ಸಾವಕಾಶ ತಿನ್ನಿ ಎನ್ನುವಂತಹ ಪ್ರೀತಿಯ ಮಾತನ್ನಾಡುವಂತೆ, ಒಬ್ಬ ನಿರಹಂಕಾರಿ ಪಂಡಿತನು ತನ್ನ ಶಿಷ್ಯರ ಜ್ಞಾನ ವೃದ್ಧಿಗಾಗಿ, ನಲುಮೆಯಿಂದ, ತನ್ನ ಮಕ್ಕಳನ್ನು ಕಾಣುವಂತೆ, ಜ್ಞಾನಿಯಾದವನು ಲೋಕದ ಚರಾಚರಗಳಲ್ಲಿ ತನ್ನ ಪ್ರತಿಬಿಂಬವನ್ನೇ ಕಾಣುತ್ತಾ, ಅರಿವಿಲ್ಲದ ಜನರಲ್ಲಿ ಅನಾದರ ತೋರದೆ, ಅವರಲ್ಲಿ ಅರಿವನ್ನು ಮೂಡಿಸಲು ಮತ್ತು ಅವರನ್ನು ಔನ್ನತ್ಯಕ್ಕೆ ಕೊಂಡು ಹೋಗಲು ಪ್ರಯತ್ನಿಸುತ್ತಾನೆ ಎಂದು, ಸಜ್ಜನರ, ಸದ್ಗುರುಗಳ ಮತ್ತು ಸತ್ಪುರುಷರ ಲಕ್ಷಣವನ್ನು ನೀಡಿದ್ದಾರೆ ನಮಗೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಅನ್ಯರ ನೋವು, ಕಷ್ಟ, ದುಃಖ, ಕೊರತೆಗಳು, ನ್ಯೂನತೆಗಳು ಮತ್ತು ಅವುಗಳ ಕಾರಣಗಳನ್ನೆಲ್ಲ ಅರ್ಥಮಾಡಿಕೊಂಡರೆ, ಆಗ ಅದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಬಹುದು, ಅಲ್ಲವೇ? ಅದೇ ಅರ್ಥವಾಗದಿದ್ದರೆ ಅಥವಾ ನಾವು ಅರ್ಥಮಾಡಿಕೊಳ್ಳಲು ಪ್ರಯತ್ನವನ್ನೇ ಪಡೆದಿದ್ದರೆ, ನಮಗದು ಅರ್ಥವಾಗುವುದೇ ಇಲ್ಲ. ತಾನೊಬ್ಬ ಉಂಡರೆ ಸಾಕು ಅನ್ಯರು ಏನಾದರೆ ನನಗೇನು ಎನ್ನುವ ಸ್ವಾರ್ಥಿಗಳಾಗದೆ, ಎಲ್ಲರೂ ಉಂಡು

(289)

ಜಾಣ ಹಿರಿಯ 679 – 683 ಕಗ್ಗರಸಧಾರೆ

ತೃಪ್ತಿಯಿಂದಿರಬೇಕು ಎಂದು ಆಶಿಸುವವನೆ ಸಜ್ಜನ. ಇದಕ್ಕೆ ವೇದದ ಪ್ರಮಾಣವೆಂದರೆ, ತೈತ್ತರೀಯ ಉಪನಿಷತ್ತಿನ ಭಗುವಲ್ಲಿಯಲ್ಲಿ 'ನ ಕಂಚನ ವಸತ್ ಪ್ರತ್ಯಾಚಕೀತ, ತಸ್ಮಾದ್ಯಯಾಕಯಾಡ ವಿಧಯಾ ಬನ್ನಂ ಪ್ರಾಪ್ನುಯಾತ್ "ಎಂದು ಹೇಳುತ್ತಾ ಹಸಿದವರಿಗೆ ಏನಾದರೂ ಮಾಡಿ ಬಹು ಅನ್ನುವನ್ನು ಪ್ರಾಪ್ತಿ ಮಾಡಬೇಕು ಎನ್ನುವ ಆದೇಶವನ್ನು ನೀಡಿದೆ. ಇದೇ ರೀತಿ, ಸದ್ಗುರುವೂ ಸಹ ಏನೂ ಅರಿಯದ ತನ್ನ ಶಿಷ್ಯನನ್ನು, ಉದಾಸೀನ, ತತ್ಸಾರ ಮಾಡದೆ, ಅವನ ಮೇಲೆ ಪ್ರೇಮದಿಂದ, ಅವನ ಅಭ್ಯುದಯಕ್ಕಾಗಿ ಶ್ರಮಿಸಿ, ವಿದ್ಯೆಯನ್ನು ಧಾರೆ ಎರೆಯುತ್ತಾನೆ, ಎರೆಯಬೇಕು. ಹಾಗಾದಾಗ ಮಾತ್ರ ಅವನು ಗುರುವಾಗಲು ಅರ್ಹನಾಗುತ್ತಾನೆ.

'ಪಂಡಿತಾಃ ಸಮದರ್ಶಿನಃ' ಎನ್ನುತ್ತಾನೆ ಶ್ರೀ ಕೃಷ್ಣ ಭಗವದ್ಗೀತೆಯಲ್ಲಿ. 'ಆತ್ಮವತ್ ಸರ್ವ ಭೂತೇಷು ಯೇ ಪಶ್ಯಂತಿ ನರೋತ್ತಮಾಃ, ತೇ ವೈ ಭಾಗವತಾಃ ಸ್ಮೃತಾಃ' ಎನ್ನುವ ಸಾಲುಗಳು ಭಗವದ್ಭಕ್ತರ ಲಕ್ಷಣಗಳನ್ನು ವಿವರಿಸುತ್ತದೆ. ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು' ಎಂದು – ಸರ್ವಜ್ಞ ವಚನ ಹೇಳುತ್ತದೆ. ಹೀಗೆ ಜ್ಞಾನಿಯಾದವನು, ಲೋಕದ ಜನರು ಲೌಕಿಕದಲ್ಲಿ ಮುಳುಗಿ ಜ್ಞಾನಪ್ರಾಪ್ತಿಯಿಂದ ವಂಚಿತರಾಗಿರುವಾಗ, ಅವರನ್ನು ತುಚ್ಛವಾಗಿ ನೋಡದೆ, ಎಲ್ಲರಲ್ಲೂ ಆ ಪರಮಾತ್ಮನೇ ವಾಸವಾಗಿದ್ದಾನೆ ಎನ್ನುವುದನ್ನು ದೃಢವಾಗಿ ನಂಬಿ, ಎಲ್ಲರ ಉದ್ಧಾರಕ್ಕೆ ಸದಾಕಾಲ ಶ್ರಮಿಸುತ್ತಾನೆ. ಅಜ್ಞಾನದಿಂದ ಅಥವಾ ಅತಿ ಲೌಕಿಕತೆಯಿಂದ, ಕಷ್ಟದಲ್ಲಿ ಮತ್ತು ತನ್ಮೂಲಕ ಪ್ರಾಪ್ತಿಯಾದ ದುಃಖದಿಂದ ನರಳುತ್ತಿರುವವರನ್ನು ಸಾಂತ್ವನಗೊಳಿಸುತ್ತಾನೆ.

ಇದನ್ನೆಲ್ಲಾ ಮಾನ್ಯ ಗುಂಡಪ್ಪನವರು ಹೇಳಿ ನಮಗೆ ಆತ್ಮಾವಲೋಕನ ಮಾಡಿಕೊಳ್ಳಲು ಒಂದು ಸೂಕ್ಷ್ಮ ಆದೇಶವನ್ನು ನೀಡಿದ್ದಾರೆ. ನಮ್ಮನ್ನು ನಾವು ಪರಿಕಿಸಿ ನೋಡಿಕೊಳ್ಳಬೇಕು. ಅಹಂಕಾರವನ್ನು ತೊರೆದು ನಮ್ಮಲ್ಲಿರುವ ನ್ಯೂನತೆಗಳನ್ನು ಒಪ್ಪಿಕೊಳ್ಳಬೇಕು. ತಿದ್ದಿಕೊಳ್ಳಲು ಪ್ರಯತ್ನಪಡಬೇಕು. ಸದ್ಗುರುವನ್ನು, ಸತ್ಪುರುಷರನ್ನು ಆಶ್ರಯಿಸಬೇಕು. ಅವರ ಆಶ್ರಯದಲ್ಲಿ, ಮಹಾ ವೃಕ್ಷದಡಿಯಲ್ಲಿ ತಂಪಾದ ನೆರಳು ಸಿಗುವಂತೆ, ನಮ್ಮ ಮೈ, ಮನಸ್ಸು, ಬುದ್ಧಿಗಳಿಗೂ ಸಾಂತ್ವನ ಸಿಕ್ಕು. ನಮ್ಮ ಬದುಕೂ ಸಾರ್ಥಕತೆಯನ್ನು ಪಡೆಯಬಹುದು.

**ಮುಕ್ತಕ – 681**

**ಮುಂದೇನೋ, ಮತ್ತೇನೋ, ಇಂದಿಗಾ ಮಾತೇಕೆ? |**
**ಸಂದರ್ಭ ಬರಲಿ, ಬಂದಾಗಳಾ ಚಿಂತೆ ||**
**ಹೊಂದಿಸುವನಾರೊ ನಿನ್ನಾಳಲ್ಲ, ಬೇರಿಹನು |**
**ಇಂದಿಗಿಂದಿನ ಬದುಕು ಮಂಕುತಿಮ್ಮ ||**

ಮುಂದೇನೋ =ಮುಂದೆ+ಏನೋ, ಮತ್ತೇನೋ=ಮತ್ತೆ+ಏನೋ ಇಂದಿಗಾ =ಇಂದಿಗೆ+ಆ, ಮಾತೇಕೆ=ಮಾತು+ಏಕೆ, ಬಂದಾಗಳಾ=ಬಂದ+ಆಗಳಾ, ಹೊಂದಿಸುವನಾರೊ=ಹೊಂದಿಸುವನು+ಆರೊ,ನಿನ್ನಾಳಲ್ಲ=ನಿನ್ನ+ಆಳಲ್ಲ,
ಬೇರಿಹನು+ಬೇರೆ+ಇಹನು, ಇಂದಿಗಿಂದಿನ=ಇಂದಿಗೆ+ಇಂದಿನ.

ಮುಂದೆ ಏನಾಗುವುದೋ, ಹೇಗಾಗುವುದೋ ಎಂದು, ಇಂದು ಚಿಂತಿಸಬೇಡ. ಆ ಸಂದರ್ಭ ಬಂದಾಗ ಆ ಚಿಂತೆ ಮಾಡು. ನಮಗೆ ನಮ್ಮ ಜೀವನದಲ್ಲಿ ನಡೆವುದೆಲ್ಲವನ್ನೂ ಹೊಂದಿಸುವವನು ಬೇರೆ ಯಾರೋ, ಹಾಗೆ ಹೊಂದಿಸುವವನು ನೀನು ಹೇಳಿದಂತೆ ಕೇಳುವ ನಿನ್ನ ಸೇವಕನಲ್ಲ. ಹಾಗಾಗಿ ಇಂದು ನೀ ಇಂದಿನ ಬದುಕನ್ನು ಬದುಕು ಎಂದು ಮಾನಸಿಕ ಸಮತೋಲನವನ್ನು ಕಾಪಾಡಿಕೊಳ್ಳುವ ಬಗೆಯನ್ನು ನಮಗೆ ಸ್ಪಷ್ಟವಾಗಿ ಸೂಚಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಾವು ಸದಾ ಕಾಲ ಮುಂದಿನ ಯೋಜನೆಗಳನ್ನು ಹಾಕುತ್ತಾ ಇರುತ್ತೇವೆ. "ಹೀಗಾದರೆ ಹಾಗಾಗುತ್ತದೆ. ಹಾಗಾದರೆ ನಾ ಹೀಗೆ ಮಾಡುತ್ತೇನೆ. ಅದರಿಂದ ನನಗೆ ಅದು ಸಿಗುತ್ತದೆ. ಎಂದು ಸಾಧ್ಯವಾಗುವ, ಸಾಧ್ಯವಲ್ಲದ, ಚಿತ್ರ ವಿಚಿತ್ರವಾದ ಯೋಜನೆಗಳನ್ನು ಹಾಕುತ್ತಿರುತ್ತೇವೆ. ಆಕಾಶಕ್ಕೆ ಏಣಿಯನ್ನು ಹಾಕುವುದರಲ್ಲಿ ನಾವು ನಿಸ್ಸಿಮರು. ನಮ್ಮ ಯೋಜನೆಗಳ ಸಫಲತೆಗೆ ನಾವು ಹರಕೆ ಹೊರುತ್ತೇವೆ, ಆ ದೇವರನ್ನು ಬೇಡುತ್ತೇವೆ ಮತ್ತು ಅವನಿಗೂ 'ಲಂಚ' ಕೊಡುವ ದುರ್ಯೋಚನೆಯನ್ನೂ ಮಾಡುತ್ತೇವೆ. ನಾವು ಬೇಡಿದ್ದನ್ನೆಲ್ಲ ಕೊಡುವುದಕ್ಕೆ ಮತ್ತು ಅದಕ್ಕಾಗಿ ಕೂಲಿ ತೆಗೆದುಕೊಳ್ಳಲು ಆ ದೇವರೇ ನಮ್ಮ ಮನೆಯ ಸೇವಕನೇನು । ಎಂದು ಕೇಳುತ್ತಾರೆ ಮಾನ್ಯ ಗುಂಡಪ್ಪನವರು.

ಆದರೆ ಸರ್ವದಾ ನಮ್ಮ ಎಣಿಕೆಯಂತೆ ಯಾವುದೂ ನಡೆಯುವುದಿಲ್ಲ, ಹಾಗಾದಾಗ ನಿರಾಸೆಯೂ ಅಧಿಕವಾಗುತ್ತದೆ. ಆ ನಿರಾಸೆಯಿಂದ ಮುಕ್ತರಾಗಬೇಕಾದರೆ ಯೋಜನೆಗಳನ್ನು ಹಾಕದೆ, ಇಂದು ಸಂದ ಕೆಲಸವನ್ನು ಶ್ರದ್ಧೆಯಿಂದ ಮಾಡಬೇಕು. ಮಾನ್ಯ ಗುಂಡಪ್ಪನವರು ಇಂದಿಗಿಂದಿನ ಬದುಕು" ಎಂದು ಹೇಳುವಂತೆ, ಬೆಳಗಾದಾಗ ಕಣ್ಣುತೆರೆದು ಮತ್ತು ಮಲಗುವಾಗ ಕಣ್ಣು ಮುಚ್ಚುವವರೆಗೆ 'ಮುಂದಿನ ಯೋಜನೆಗಳನ್ನು ಹಾಕುವುದನ್ನು ಬಿಟ್ಟು ಅಂದಿಗೆ ನಮ್ಮ ಪಾಲಿಗೆ ಬಂದ ಕೆಲಸವನ್ನು ಶ್ರದ್ಧೆಯಿಂದ, ಪ್ರತಿಫಲಾಪೇಕ್ಷೆಯಿಲ್ಲದೆ ಮಾಡಿದರೆ, ನಾವು ಮಾಡಿದ ಕೆಲಸಕ್ಕೆ ಸೂಕ್ತ ಫಲ ನಮಗೆ ಸಿಕ್ಕೇ ಸಿಗುತ್ತದೆ, ಮತ್ತು ಅಪೇಕ್ಷೆ ಇರಲಿಲ್ಲವಾದ್ದರಿಂದ ಸಿಕ್ಕ ಫಲದಿಂದ ತೃಪ್ತಿಯೂ ಸಿಗುತ್ತದೆ. ಅಂದಂದಿಗೆ, ಅಂದಂದು ಬಂದು ಒದಗುವ ಸಂದರ್ಭಗಳನ್ನು ಒದಗಿದ ಕ್ಷಣಕ್ಕೆ ಆ ಪರಮಾತ್ಮ ಕೊಟ್ಟ ಬುದ್ಧಿ ಮತ್ತು ಕಾರ್ಯ ಕ್ಷಮತೆಯಿಂದ ಎದುರಿಸುವುದು, ಬುದ್ಧಿವಂತರ ಲಕ್ಷಣ, ಯೋಜಿಸಿ, ಚಿಂತಿಸಿ, ಕೊರಗಿ, ಕನಲುವುದು ಮೂರ್ಖರ ಗುಣ, ಡೇಲ್ ಕಾರ್ನಗಿ ಎನ್ನುವ ಬರಹಗಾರ "water tight days' ಎನ್ನುತ್ತಾನೆ. ದಿನದ ಆದಿಯಿಂದ ಅಂತ್ಯದವರೆಗೆ ಒಂದು ವೃತ್ತ ಅಥವಾ ಒಂದು ಗೆರೆಯನ್ನು ಎಳೆದುಕೊಂಡು ಬಿಟ್ಟರೆ, "ಎದ್ದ ಕ್ಷಣ ದಿಂದ ರಾತ್ರಿಯವರೆಗೆ ಕಾರ್ಯಪ್ರವೃತ್ತ, ರಾತ್ರಿಗೆ ಕಾರ್ಯನಿವೃತ್ತ ಎನ್ನುವ ರೀತಿಯಲ್ಲಿ ಇದ್ದು ಬಿಟ್ಟರೆ ಸುಖ ತೃಪ್ತಿ.

ಮಹಾಭಾರತದಲ್ಲಿ ಗ್ರಂಥಪಠಣದಲ್ಲಿ ನಿರತನಾದ ಧರ್ಮರಾಯ, ಮಗಳ ಮದುವೆಗೆ ಸಹಾಯ ಬೇಡಿದ ವ್ಯಕ್ತಿಗೆ ಯಾವುದೋ ಯೋಚನೆಯಲ್ಲಿ 'ನಾಳೆ ಬನ್ನಿ' ಎನ್ನುತ್ತಾನೆ. ತಕ್ಷಣ ಇದನ್ನು ಕಂಡ ಭೀಮಸೇನ ಸಂತೋಷದಿಂದ ಕುಣಿಯಲು ಶುರುಮಾಡುತ್ತಾನೆ. ಕಾರಣವೇನೆಂದು ಕೇಳಿದಾಗ "ಆಹಾ! ನನಗೆ ಬಹಳ ಸಂತೋಷವಾಗಿದೆ. ನಮ್ಮ ಅಣ್ಣ 'ಸಾವನ್ನು ಗೆದ್ದಿದ್ದಾನೆ' ಎನ್ನುತ್ತಾನೆ. ಹೇಗೆ? ಎಂದು ಕೇಳಿದರೆ "ಮತ್ತೆ!





ಬೇಡಲು ಬಂದ ವ್ಯಕ್ತಿಯನ್ನು ನಾಳೆ ಬನ್ನಿ ಎಂದು, ತಾನು ನಾಳೆಯವರೆಗೆ ಸಾಯುವುದಿಲ್ಲ ಎನ್ನುವ ಖಾತ್ರಿಯಿಂದದಿದ್ದಾನೆ ಅಲ್ಲವೇ? ಹಾಗಾಗಿ ಅವನು ಸಾವನ್ನು ಗೆದ್ದಿದ್ದಾನೆ" ಎನ್ನುತ್ತಾನೆ. ಹಿಂದೆ ನಡೆದದ್ದನ್ನು ಬದಲಾಯಿಸಲು ಮತ್ತು ಮುಂದೆ ಆಗುವುದನ್ನು ನಿರ್ದೇಶಿಸಲು ನಮಗೆ ಸಾಧ್ಯವಿಲ್ಲ. ಹಾಗಾಗಿ ನಮ್ಮ ಕೈಲಿ ಸಾಧ್ಯವಾಗದ ಕೆಲಸದ ಬಗ್ಗೆ ಚಿಂತಿಸಿ ಫಲವೇನು? ಗುಂಡಪ್ಪನವರು ಹೇಳುವಂತೆ 'ಇಂದಿಗಿಂದಿನ ಬದುಕು' ಎನ್ನುವಂತೆ ಇರಬೇಕು, ಇದ್ದರೆ ಸುಖ. ಆಯ್ಕೆ ನಮ್ಮದೇ ಅಲ್ಲವೇ?

**ಮುಕ್ತಕ – 682**

**ದಿವಸದಿಂ ದಿವಸಕ್ಕೆ ನಿಮಿಷದಿಂ ನಿಮಿಷಕ್ಕೆ |**
**ಭವಿಷಿಯವ ಚಿಂತಿಸದೆ ಬದುಕ ನೂಕುತಿರು ||**
**ವಿವರಗಳ ಜೋಡಿಸುವ ಯಜಮಾನ ಬೇರಿಹನು |**
**ಸವೆಸು ನೀಂ ಜನುಮವನು - ಮಂಕುತಿಮ್ಮ ||**

ಬೇರಿಹನು=ಬೇರೆ + ಇಹನು, ಭವಿಷಿಯವ =ಭವಿಷ್ಯವನ್ನು, ಸವೆಸು=ಕಳಿ, ಜನುಮವನು=ಜನ್ಮವನು

ಮುಂದೇನಾಗುವುದೋ ಎಂದು ಚಿಂತಿಸದೆ, ನಿತ್ಯದ ಬದುಕನ್ನು ಜೀವಿಸು. ನಮ್ಮ ಬದುಕಿನ ಅನುಕ್ಷಣವನ್ನೂ ಹೊಂದಿಸುವ, ಜೋಡಿಸುವ ನಮ್ಮ ಯಜಮಾನ ಬೇರೆ ಇದ್ದಾನೆ. ಹಾಗಾಗಿ ಸುಮ್ಮನೆ ಬದುಕನ್ನು ಸವೆಸು ಎಂದು

ಅನುದಿನವೂ ಚಿಂತೆಗಳ ಮಡುವಿನಲ್ಲಿ ಮುಳುಗಿರುವವರಿಗೆ, ಒಂದು ಸಲಹೆಯನ್ನಿತ್ತಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನೀತಿಗಳನ್ನು ಹೇಳುವಾಗ 'ಗತಂ ನ ಶೋಚಿತವ್ಯಂ 'ಎನ್ನುತ್ತಾರೆ. ಎಂದರೆ, ಮಿಂಚಿಹೋದದ್ದಕ್ಕೆ ಚಿಂತಿಸಿ ಫಲವಿಲ್ಲ ಎಂದು ಹೇಳುತ್ತಾರಲ್ಲವೆ, ಹಾಗೆ, ಎಂದರೆ ಗತಿಸಿದ ಯಾವುದನ್ನೂ ಬದಲಾಯಿಸಲು ಸಾಧ್ಯವಿಲ್ಲ ಎಂದರ್ಥ, ಅಲ್ಲವೇ? ಹೇಗೆ ಗತವನ್ನು ಬದಲಾಯಿಸಲು ಸಾಧ್ಯವಿಲ್ಲವೋ, ಹಾಗೆಯೇ ಭವಿಷ್ಯದಲ್ಲಿ ಏನು ನಡೆಯಬೇಕೋ ಅದನ್ನು ನಾವು ರೂಪಿಸಲೂ ಸಾಧ್ಯವಿಲ್ಲ, ಎನ್ನುವುದನ್ನೂ ಒಪ್ಪಿಕೊಳ್ಳಬೇಕು. ಅಕಸ್ಮಾತ್ ನಾವಂದುಕೊಂಡಹಾಗೆ ಏನಾದರೂ ನಡೆದರೆ ಅದು ಕೇವಲ ಕಾಕತಾಳೀಯ ಎಂದು ತಿಳಿಯಬೇಕು. ನಿರೀಶ್ವರವಾದಿಗಳು ಮತ್ತು ವಾಸ್ತವವಾದಿಗಳು ಈ ವಿಚಾರವನ್ನು ಒಪ್ಪುವುದಿಲ್ಲವಾದರೂ, ಇದೇ ಸತ್ಯ, ಅದಕ್ಕೆ ಬದುಕೇ ಸಾಕ್ಷಿ.

ಗುಂಡಪ್ಪನವರು ಹೇಳುವ 'ವಿವರಗಳ ಜೋಡಿಸುವ ಯಜಮಾನ ಬೇರಿಹನು 'ಎನ್ನುವುದನ್ನು ಒಪ್ಪಿಕೊಳ್ಳಲೇ ಬೇಕು, ಏಕೆಂದರೆ ಹಾಗಿಲ್ಲದಿದ್ದರೆ ಲೋಕದ ಜನರು ಹಾಕುವ ಯೋಜನೆಗಳೆಲ್ಲ ಯಶಸ್ವಿಯಾಗಬೇಕಿತ್ತಲ್ಲ. ಜನರು ಬಯಸಿದ್ದು ಸೂಕ್ತ ಪ್ರಯತ್ನದಿಂದ ಅವರಿಗೆ ಸಿಗಬೇಕಿತ್ತಲ್ಲ. ಆದರೆ ವಸ್ತು ಸ್ಥಿತಿ ಬೇರೆ ಇದೆಯಲ್ಲ. ಎಲ್ಲವನ್ನೂ ಬೇರೆ 'ಯಜಮಾನ' ಜೋಡಿಸುತ್ತಿದ್ದರೆ ನಾವು ಏನೂ ಮಾಡಬೇಡವೆ? ಎಂದರೆ, ಹಾಗೂ





ಅಲ್ಲ ಏನೂ ಮಾಡದೆ ಇರುವುದಕ್ಕೂ ಮಾಡುವುದರ ಬಗ್ಗೆ ಅತಿಯಾಗಿ ಚಿಂತಿಸುವುದಕ್ಕೂ ವ್ಯತ್ಯಾಸವಿದೆ. ಗುಂಡಪ್ಪನವರು ಹೇಳುವುದು 'ಚಿಂತಿಸದೆ ಬದುಕ ನೂಕುತಿರು' ಎಂದು. 'ಮುಂದೆ ಏನಾಗುವುದೋ, ಹಾಗಾದರೆ ಏನು ಮಾಡುವುದು, ಅಯ್ಯೋ!! ಆಗದಿದ್ದರೆ ಗತಿಯೇನು' ಎಂದು ಚಿಂತಿಸಬೇಡ ಎಂದು ಆದೇಶ ಮಾಡಿದ್ದಾರೆ. ನಾವು ಚಿಂತಿಸಿ ಆಗುವುದನ್ನು ಬದಲಾಯಿಸಲು ಸಾಧ್ಯವಿಲ್ಲವಾದ್ದರಿಂದ, ಅನಾವಶ್ಯಕ ಚಿಂತಿಸಿ ನಮ್ಮ ಮಾನಸಿಕ ಮತ್ತು ತದ್ವಾರಾ

ದೈಹಿಕ ಆರೋಗ್ಯವನ್ನು ಕೆಡಿಸಿಕೊಂಡು, ನಾವೂ ಕಷ್ಟಪಟ್ಟು ನಮ್ಮನ್ನು ಸುತ್ತಿರುವವರನ್ನೂ ನೋಯಿಸುವುದು ಯಾವ ಜಾಣತನ.

ತಿರುವನಂತಪುರದ ರಾಜ ಕುಲಶೇಖರರು ತಮ್ಮ 'ಮುಕುಂದಮಾಲ' ಸ್ತೋತ್ರದಲ್ಲಿ 'ಯದ್ ಯದ್ ಭವ್ಯಂ ಭವತು ಭಗವನ್ ಪೂರ್ವ ಕರ್ಮಾನುರೂಪಂ, ಏತತ್ ಪ್ರಾರ್ಥ್ಯಂ ಮಮ ಬಹುಮತಂ ಜನ್ಮ ಜನ್ಮಾಂತರೇಪಿ, ತ್ವತ್ ಪಾದಾಂಬೋರುಹ ಯುಗಗತಾ ನಿಶ್ಚಲಾ ಭಕ್ತಿರಸ್ತು ಎನ್ನುತ್ತಾ, "ನನ್ನ ಜನ್ಮಜನ್ಮಾಂತರದ ಕರ್ಮದ ಪ್ರಕಾರ ನನಗೆ ಏನೇನು ಆಗಬೇಕೋ ಅದೆಲ್ಲ ಆಗಲಿ, ಅದನ್ನೆಲ್ಲಾ ಅನುಭವಿಸುವಾಗ ನನ್ನ ಮನಸ್ಸು ನಿನ್ನ ಪಾದರವಿಂದವನ್ನು ನೆನೆಯುತ್ತಿರಲಿ" ಎನ್ನುತ್ತಾರೆ. ನಾವು ಮಾಡುವ ಕೆಲಸವನ್ನು ಮಾಡಬೇಕಾದ ರೀತಿಯಲ್ಲಿ ನಿರ್ವಂಚನೆಯಿಂದ ಮಾಡಬೇಕು. 'ಏನಾಗುವುದೋ ಎಂತಾಗುವುದೋ' ಎನ್ನುವ ಚಿಂತೆಯನ್ನು ಬಿಟ್ಟು ನಿರಾಳವಾಗಿರಬೇಕು. ಹಾಗಿದ್ದರೆ ನೆಮ್ಮದಿ, ಶಾಂತಿ ಮತ್ತು ತೃಪ್ತಿಯಿಂದ ಇರಬಹುದು. ಅದನ್ನು ಬಿಟ್ಟು 'ಹೀಗೇ ಆಗಬೇಕೆಂದು ಅಪೇಕ್ಷೆಪಟ್ಟು, ಹಾಗಾಗದಿದ್ದಾಗ ನೊಂದುಕೊಳ್ಳುವುದು, ನಮ್ಮ ಮನಸ್ಸಿನಲ್ಲಿ ನಾವೇ ನರಕವನ್ನು ಸೃಷ್ಟಿಸಿಕೊಂಡಂತೆ ಅಲ್ಲವೇ? ಚಿಂತೆಮಾಡುವುದು ಮನುಷ್ಯ ಸ್ವಭಾವ, ಸ್ವಪ್ರಯತ್ನದಿಂದ ಆ ಚಿಂತೆಯಿಂದ ಮುಕ್ತರಾಗುವುದು ಸಾಧನೆ. ಅಂತಹ ಸಾಧನೆಯನ್ನು ಯಾರುಬೇಕಾದರೂ ಮಾಡಬಹುದು. ಪ್ರಯತ್ನ ಪಡಬೇಕು ಅಷ್ಟೇ!

**ಮುಕ್ತಕ – 683**

**ರವಿ ನಿಲದೆ ಸುತ್ತುತಿರೆ ಕೊರಗು ಕಳವಳವೇಕೊ? |**
**ಸವೆಯಿಸುತ್ತಲೆಲ್ಲವನು ಕಡೆಗೊಯ್ವನವನು ||**
**ಕವಳಿಸುವುದೆಲ್ಲವನು ಮರೆವು: ಬಾಳೋಳ್ ಅದೊಂದು |**
**ಶಿವಕೃಪೆಯ ಲಕ್ಷಣವೋ – ಮಂಕುತಿಮ್ಮ ||**

ಸುತ್ತುತಿರೆ=ಸುತ್ತುತ+ಇರೆ, ಕಳವಳವೇ =ಕಳವಳವು+ಏಕೋ? ಸವೆಯಿಸುತಲೆಲ್ಲವನು= ಸವೆಯಿಸುತಲು+ಎಲ್ಲವನು, ಕಡೆಗೊಯ್ವನವನು= ಕಡೆಗೆ+ಒಯ್ವನು+ಅವನು+ ಕವಳಿಸುವುದೆಲ್ಲವನು=ಕವಳಿಸುವುದು+ಎಲ್ಲವನು.
ಕಳವಳ=ಚಿಂತೆ, ಕವಳಿಸುವುದು=ಕಬಳಿಸುವುದು,ನುಂಗುವುದು

ಕಾಲದ ಪ್ರವಾಹ ನಿರಂತರ. ಅದರಂತೆಯೇ ಸೂರ್ಯೋದಯ, ಸೂರ್ಯಾಸ್ಥಮಾನಗಳು ಅವ್ಯಾಹತ

ನಡೆಯುತ್ತಲೇ ಇರುವಾಗ, ಕಾಲ ಕಳೆದಂತೆ ಎಲ್ಲಕ್ಕೂ ಒಂದು ಅಂತ್ಯವಿರುತ್ತದೆ. ಕಳೆದುಹೋದ ವಿಷಯಗಳೆಲ್ಲ ನಮ್ಮ ನೆನಪಿನಿಂದ ಮರೆಯಾಗುತ್ತವೆ. ಕಡೆಗೆ ಎಲ್ಲವನ್ನೂ ಮರೆತುಹೋಗುವ ವರವನ್ನು ನಮಗೆ ಪರಮಾತ್ಮ ಕರುಣಿಸಿದ್ದಾನೆ ಎಂದು ಜೀವನದ ನಶ್ವರತೆಯನ್ನು ಅರುಹಿ ಮತ್ತು ಎಲ್ಲವೂ ತಾತ್ಕಾಲಿಕವಾಗಿರುವಾಗ ನಿನಗೆ ಚಿಂತೆ ಮಾಡಲು ಏನಾದರೂ ಕಾರಣವಿದೆಯೇ? ಎಂದು ಪ್ರಶ್ನಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಪ್ರತಿಯೊಬ್ಬರ ಬದುಕಿನಲ್ಲೂ ಹುಟ್ಟಿನಿಂದ ಸಾವಿನತನಕ ಕೋಟ್ಯಾಂತರ ಘಟನೆಗಳು ಮತ್ತು ಅದರ ನೆನಪುಗಳು. ಘಟನೆಗಳು ಗತಿಸಿದ ಹಾಗೆ ಕಾಲಕಾಲಕ್ಕೆ ನಾವು ಅನಾವಶ್ಯಕವಾದದ್ದನ್ನು ಮರೆತುಹೊಗುತ್ತೇವೆ. ಯಾವುದು ಅನಾವಶ್ಯಕ ಮತ್ತು ಯಾವುದು ಆವಶ್ಯಕ ಎನ್ನುವುದನ್ನು ಬುದ್ಧಿಯೇ ನಿರ್ಧರಿಸುತ್ತದೆ. ಹಾಗೆ ಬೇಡದ್ದನ್ನು ನೇಪತ್ಯಕ್ಕೆ ತಳ್ಳುವ 'ಮರೆವು' ಎಂಬ ಗುಣ ನಮಗೆ ಆ ಪರಮಾತ್ಮನಿಂದಲೇ ಬಂದದ್ದು ಎಂದು, ಮಾನ್ಯ ಗುಂಡಪ್ಪನವರು ಇದು 'ಶಿವಕೃಪೆಯ ಲಕ್ಷಣವೋ' ಎಂದಿದ್ದಾರೆ. ಬೆಳಗು ಕತ್ತಲೆಗಳಾಗುತ್ತವೆ. ಕ್ಷಣ, ಗಂಟೆ, ದಿನ, ವಾರ, ವರುಷಗಳು ಉರುಳಿಹೋಗುತ್ತವೆ. ನಾವೂ ಸಹ ಎಂದೋ ಒಂದು ದಿನ ಈ ಕಾಲನ ಅವ್ಯಾಹತ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿಬಿಡುತ್ತೇವೆ. ನಾವೇ ಹೋದಮೇಲೆ ನಮಗೆ ಸಂಬಂಧಿತ ಎಲ್ಲವೂ ಮರೆಯಾಗಲೇಬೇಕಲ್ಲವೇ? ಹಾಗಿರುವಾಗ ಇಂದಿನ ಸುಖವೋ ಅಥವಾ ಕಷ್ಟವೋ ಯಾವುದೂ ಇಲ್ಲಿ ಶಾಶ್ವತವಾಗಿ ಇರುವದಿಲ್ಲ, ಎಲ್ಲವೂ ಸರಿದು ಹೋಗಿಬಿಡುತ್ತದೆ. ಆದ್ದರಿಂದ ಅದರ ಬಗ್ಗೆ ಚಿಂತೆ ಕಳವಳ ನಿನಗೆ ಏಕೆ?" ಎಂದು ಕೇಳಿದ್ದಾರೆ ಮಾನ್ಯ ಗುಂಡಪ್ಪನವರು

ಮರೆವು ಮನುಷ್ಯನಿಗೆ ಆ ಪರಮ ಚೈತನ್ಯವು ಇತ್ತ ಒಂದು ಬೃಹತ್ 'ವರ'. ಯಾವುದು ಬೇಕೋ ಅದನ್ನಷ್ಟೇ ಉಳಿಸಿ. ಮತ್ತೆಲ್ಲವನ್ನೂ ಹಿಂದಕ್ಕೆ ತಳ್ಳುವ 'ಮರೆವು 'ನಮ್ಮ ಮಾನಸಿಕ ಸಮತೋಲನವನ್ನು ಕಾಪಾಡಿಕೊಳ್ಳಲು ಸಹಾಯಮಾಡುತ್ತದೆ. ಮನುಷ್ಯನಿಗೆ ಮರೆವೆ ಎಂಬುದೊಂದು ಇಲ್ಲದಿದ್ದಿದ್ದರೆ ಏನಾಗಬಹುದಿತ್ತು ಎಂದು ಯೋಚಿಸಿದರೆ, ಈ ನೆನಪುಗಳ ಭಾರದಿಂದ ಪ್ರತಿಯೊಬ್ಬನೂ ತಲೆಕೆಟ್ಟು ಹುಚ್ಚನಾಗಿರುತ್ತಿದ್ದ 'ಎಂದು ನಿರ್ಭಯವಾಗಿ ಹೇಳಿಬಿಡಬಹುದು. ಹಾಗಾಗಿ ಅತೀ ನೆನಪು ಒಂದು ಶಾಪ ಮತ್ತು ಮರೆವು ಒಂದು ವರ.

ವಾಚಕರೆ ಈ ಬದುಕಿನಲ್ಲಿ ನಮಗೆ ಒಂದು ಆರಂಭವಿದ್ದ ಹಾಗೆ, ನಮ್ಮ ಎಲ್ಲಕ್ಕೂ ಒಂದು ಕೊನೆಯುಂಟು. ನಮ್ಮನ್ನು ಮತ್ತು ನಮ್ಮ ಎಲ್ಲಕ್ಕೂ ಒಂದು ಕೊನೆ ಮುಟ್ಟಿಸುವವನೆ ಕಾಲರಾಯ. ಹಾಗಾಗಿ ಚಿಂತೆ ಬಿಡಬೇಕು. ಎಲ್ಲವೂ ಸರಿದು ಹೋಗುವ ನಮ್ಮ ಆಸೆಗಳು, ವಿಷಯಗಳು, ವ್ಯಕ್ತಿಗಳು ಎಲ್ಲವೂ ಬದಲಾಗುತ್ತಾ ಮರೆಯಾಗುತ್ತಾ ಒಂದು

ಅಂತ್ಯವಾಗುವಾಗ, ಅದರ ಹಿಂದಿನ, ಇಂದಿನ ಮತ್ತು ಮುಂದಿನ ಬಗ್ಗೆ ಕುರಿತು ಚಿಂತೆಮಾಡದೆ "ಅಂದಿಗಂದಿಕೆ ಬದುಕು" ಎಂದು ಗುಂಡಪ್ಪನವರು ಹೇಳುವಂತೆ ಬದುಕಿನದರೆ ಸುಖ. ಚಿಂತೆಬಿಡಲು ಪ್ರಯತ್ನ ಪಡಬೇಕು.





**ಮುಕ್ತಕ – 684**

**ದಿವಸಕೊಳಗದಿನ್ ಆಯುರಾಶಿಯನು ರವಿಯಳೆಯಲ್ ।**
**ಅವನ ಮಗ ಜವನ್ ಅದರ ಲೆಕ್ಕವಿರಿಸುವನು ॥**
**ದಿವಿಜರೊಳಗಿವರಿರ್ವರುಪಕಾರಿಗಳು ನಮಗೆ ।**
**ಸವೆಸುವರು ತನುಘಟವ – ಮಂಕುತಿಮ್ಮ ॥**

ದಿವಸಕೊಳಗದಿನ್=ದಿವಸ+ಕೊಳಗದಿನ್, ರವಿಯಳೆಯಲ್=ರವಿ+ಅಳೆಯಲ್, ಲೆಕ್ಕವಿರಿಸುವನು= ಲೆಕ್ಕವ+ಇರಿಸಿಹನು, ದಿವಿಜರೊಳಗಿವರಿರ್ವರುಪಕಾರಿಗಳು=ದಿವಿಜರೊಳಗೆ+ಇವರು+ಇರ್ವರು+ಉಪಕಾರಿಗಳು ಕೊಳಗ=ಒಂದು ಅಲೆಯುವ ಸಾಧನ, ಆಯುರಾಶಿ=ಆಯಸ್ಸಿನ ಮೊತ್ತ, ಜವನ್=ಜವರಾಯ, ಯಮರಾಯ, ದಿವಿಜರು= ದೇವತೆಗಳು, ಇರ್ವರು=ಇಬ್ಬರು

ನಾವು ಈ ಭೂಮಿಯ ಮೇಲೆ ಎಷ್ಟು ಗಂಟೆ, ಎಷ್ಟು ದಿವಸ, ಎಷ್ಟು ತಿಂಗಳು, ಎಷ್ಟು ವರ್ಷ ಬದುಕಿರುತ್ತೇವೆ ಎನ್ನುವುದು ನಮ್ಮ ಆಯಸ್ಸು. ಸೂರ್ಯನ ಉದಯ ಮತ್ತು ಅಸ್ತಮಾನಗಳ ಅಧಾರದ ಮೇಲೆ ನಾವು ಅದರ ಲೆಕ್ಕವನ್ನು ಹಾಕುತ್ತೇವೆ. ಹಾಗೆಯೇ ಸೂರ್ಯನ ಮಗನಾದ ಯಮನು ನಾವು ಎಷ್ಟು ದಿನ ಈ ಜಗತ್ತಿನಲ್ಲಿ ಇರಬೇಕು ಎಂದು ಲೆಕ್ಕವಿಟ್ಟುಕೊಂಡು, ಸರಿಯಾದ ಸಮಯಕ್ಕೆ ನಮ್ಮನ್ನು ಇಲ್ಲಿಂದ ಕರೆದುಕೊಂಡುಹೋಗುತ್ತಾನೆ. ಈ ದೇಹವನ್ನು ಸವೆಸುವುದರಲ್ಲಿ ಮತ್ತು ಇದರ ಅಂತ್ಯದಲ್ಲಿ ಈ ದೇವತೆಗಳಿಬ್ಬರು ನಮಗೆ ಬಹಳ ಉಪಕಾರ ಮಾಡುತ್ತಾರೆ ಎಂದು ಪ್ರಸ್ತಾಪ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ನಾವು ಹುಟ್ಟಿದಾರಭ್ಯ ಬೆಳೆಯುತ್ತಲೇ ಹೋಗುತ್ತೇವೆ. ವಯಸ್ಸಾಗುತ್ತದೆ, ಮುದುಕರಾಗುತ್ತೇವೆ ಮತ್ತು ಒಂದು ದಿನ ನಮ್ಮ ಅವಸಾನವಾಗುತ್ತದೆ. ಆದರೆ ನಾವು ಎಷ್ಟು ದಿವಸ ಈ ಭೂಮಿಯ ಮೇಲೆ ಇದ್ದೆವು ಎನ್ನುವ ಲೆಕ್ಕ ಮಾಡಲು, ಮೊದಲು ದಿವಸದ ಲೆಕ್ಕಗಳನ್ನು ಹಾಕಬೇಕು, ಈ ದಿವಸಗಳ ಲೆಕ್ಕಹಾಕಲು ನಮಗಿರುವುದೊಂದೆ ಆಧಾರ, ಸೂರ್ಯೋದಯ ಮತ್ತು ಸೂರ್ಯಾಸ್ಥಮಾನ. ಹಾಗಾಗಿ ಆ 'ರವಿಯು ನಮಗೆ ಉಪಕಾರಿ. ಇನ್ನು ಆ ರವಿಯ ಮಗ, ಅಪ್ಪನ ಸುತ್ತುವಿಕೆಯಿಂದ ಜೀವಿಗಳ ಆಯಸ್ಸನ್ನು ಲೆಕ್ಕ ಹಾಕಿಟ್ಟುಕೊಂಡು, ಸಮಯ ಸಂದಾಗ ನಮ್ಮನ್ನು ಈ ದೇಹದಿಂದ ಮುಕ್ತಗೊಳಿಸುತ್ತಾನೆ. ಇದನ್ನೇ ಆದರೆ ಮಾನ್ಯ ಗುಂಡಪ್ಪನವರು 'ಸವೆಸುವರು ತನುಘಟವ' ಎಂದಿದ್ದಾರೆ.

ನಾವು ಎಂದರೆ 'ಆತ್ಮ'. ಈ ಆತ್ಮ ಒಂದು ದೇಹವನ್ನು ಧರಿಸಿಕೊಂಡು, ಈ ಜಗತ್ತಿನಲ್ಲಿ ಜೀವಿಸುತ್ತದೆ. ಕರ್ಮಗಳನ್ನು ಮಾಡುತ್ತಾ ಬದುಕನ್ನು ಅನುಭವಿಸುತ್ತದೆ, ಮೋಹವನ್ನು ಬೆಳೆಸಿಕೊಳ್ಳುತ್ತದೆ. ಅಪೂರ್ಣ ಆಸೆಗಳ ಗಂಟನ್ನು ಹೊತ್ತುಕೊಂಡು ಬಂದು, ಅವುಗಳನ್ನು ಅನುಭವಿಸುತ್ತಾ, ಕೆಲವನ್ನು ಕಳೆದುಕೊಂಡು ಮತ್ತೆ ಕೆಲವನ್ನು ಸೇರಿಸಿಕೊಳ್ಳುತ್ತಾ ಹೋಗುತ್ತದೆ. ದೇಹ ಝರ್ಝರಿತವಾದಂತೆ, ಅತೃಪ್ತ ಆಸೆಗಳನ್ನು ತೀರಿಸಿಕೊಳ್ಳಲು ಮತ್ತೊಂದು ಹೊಸ ದೇಹವನ್ನು ಸೇರಲು, ಆ ಅತೃಪ್ತ ಆಸೆಗಳನ್ನು ಹೊತ್ತುಕೊಂಡೇ ಅವಸಾನವಾಗುತ್ತದೆ, ಮತ್ತದರ ಮತ್ತೊಂದು ಪ್ರಯಾಣ. ಹೀಗೆ ಆತ್ಮದ ಕರ್ಮ ಸಂಚಯನಕ್ಕೆ ಮತ್ತು





ಕರ್ಮ ವಿಮೋಚನೆಗೆ ಸಹಾಯಮಾಡುವವರೇ. ಈ ಅಪ್ಪ ಮಗ, ಕರ್ಮ ಶೇಷವಿರುವ ತನಕ ಇವರ ಹಿಡಿತದಿಂದ ಮುಕ್ತಿಯಿಲ್ಲ.

ಇದೇ ಸುಖವೆನ್ನುವವರಿಗೆ ಇದೇ ಹಿತ, ಇದಕ್ಕಿಂತ ಹೆಚ್ಚಿನ ಸುಖ ಬೇಕಾದರೆ, ಇವರಿಂದ ಮುಕ್ತಿ ಪಡೆಯಬೇಕು. ಹಾಗೆ ಪಡೆಯಬೇಕಾದರೆ ಇವರಪ್ಪ'ನಾದ ಪರಮಾತ್ಮನನ್ನು ಶರಣಾಗಬೇಕು. ಆದರೆ ಈ 'ಅಪ್ಪ ಮಕ್ಕಳ' ಮೂಲಕವೇ ಅವರಪ್ಪನನ್ನು ಸೇರಬೇಕು. ಇವರನ್ನು ದಾಟಿಕೊಂಡು ಹಾರಿಕೊಂಡು ಹೋಗಲಾಗುವುದಿಲ್ಲ. ಆ ಪರಮಾತ್ಮನನ್ನು

ಸೇರಲೂ ಸಹ ಇವರೇ ನಮಗೆ ಸಹಾಯಮಾಡುವವರು. ಹಾಗಾಗಿ ಮಾನ್ಯ ಗುಂಡಪ್ಪನವರು "ದಿವಿಜರೊಳಗಿವರಿರ್ವರುಪಕಾರಿಗಳು" ಎಂದು ಬಹಳ ಸೂಕ್ತವಾಗಿ ಹೇಳಿದ್ದಾರೆ. ಈ ತತ್ವವನ್ನು ಅರ್ಥೈಸಿಕೊಂಡು ನಾವು ಮುನ್ನಡೆದರೆ ಎಂದೋ ಒಂದು ದಿನ ನಮಗೂ ಮುಕ್ತಿ ಸಿಗಬಹುದು.

ಮುಕ್ತಕ - 685

ಅಂತೂ ಇಂತೂ ಎಂತೊ ಜೀವಕಥೆ ಮುಗಿಯುವುದು ।
ಅಂದೂ ಇಂದೂ ಎಂದೊಜನುಮ ಕಳೆಯುವುದು ॥
ಒಂದೆ ಮರೆವಿನ ಮುಸುಕು ಮುಸುಕಲಿಹುದೆಲ್ಲವನು ।
ಸಂತಸದ ಮಾತಿಷ್ಟೆ - ಮಂಕುತಿಮ್ಮ ॥

ಮುಸುಕಲಿಹುದೆಲ್ಲವನು = ಮುಸುಕಲಿಹುದು+ಎಲ್ಲವನು, ಮಾತಿಷ್ಟೆ= ಮಾತು+ಇಷ್ಟೆ, ಜೀವಕಥೆ =ಬದುಕು,

ಹಾಗೋ, ಹೀಗೋ, ಹೇಗೋ ಒಂದು ದಿನ ಬದುಕಿನ ಕತೆಯೂ ಅಂತ್ಯವಾಗುವುದು. ಈ ಜನ್ಮದ ಅಂತ್ಯದೊಂದಿಗೆ, ಈ ಜನ್ಮದಲ್ಲಿ ನಡೆದ ಎಲ್ಲ ಘಟನೆಗಳ, ಅರಿತುಕೊಂಡ ಎಲ್ಲ ವಿಷಯಗಳ ಮತ್ತು ವ್ಯಕ್ತಿಗಳ ನೆನಪೂ ಮಾಸಿಹೋಗುವುದು. ಇಲ್ಲಿಂದ ಹೊರಡುವಾಗ ಅವುಗಳ ಮೂಟೆಯನ್ನು ಹೊತ್ತು ಹೋಗಬೇಕಾಗಿಲ್ಲವೆಂಬುದಷ್ಟೇ ಸಂತೋಷದ ವಿಷಯ ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಪ್ರತಿಯೊಬ್ಬರದೂ ಒಂದೊಂದು ರೀತಿಯ ಬದುಕು. ಒಬ್ಬರದ್ದಿದ್ದಂತೆ ಮತ್ತೊಬ್ಬರದಿರುವುದಿಲ್ಲ. ಕೆಲವು ದಿನ ಹೀಗೆ, ಕೆಲವು ದಿನ ಹಾಗೆ ಮತ್ತು ಹೇಗೆ ಹೇಗೋ ಕಾಲ ಕಳೆದಂತೆ ನಡೆದು ಹೋಗುತ್ತದೆ, ದೇಹ ಕೃಶವಾಗುತ್ತದೆ, ಮನಸ್ಸು ಬುದ್ಧಿಗಳು ಸೊರಗುತ್ತವೆ, ನೆನಪುಗಳು ಮಾಸುತ್ತವೆ, ಕೊನೆಗೊಂದು ದಿನ ಎಲ್ಲವೂ ಶಾಂತವಾಗುತ್ತದೆ, ನಮ್ಮ ಅಂತ್ಯವಾಗುತ್ತದೆ. ನಮ್ಮ ದೇಹದ ಅವಸಾನದೊಂದಿಗೆ, ಮನಸ್ಸು ಬುದ್ಧಿಗಳು ಮತ್ತು ಅವುಗಳ ಮೂಲಕ ಸಂಚಿಯಿಸಿಕೊಂಡ ಮತ್ತು ಶೇಖರಿಸಿಟ್ಟುಕೊಂಡ ಎಲ್ಲ ನೆನಪುಗಳು ಮಾಯವಾಗಿಬಿಡುತ್ತವೆ. ಹಾಗೆ ನೆನಪುಗಳೆಲ್ಲ ಮಾಸಿ ಮಾಯವಾಗುವುದು ಆ ಪರಮಾತ್ಮ ನಮಗೆ ಕೊಟ್ಟ ಒಂದು ದೊಡ್ಡ 'ವರ'.

ಪರ್ಯಾಯವಾಗಿ, ಅಕಸ್ಮಾತ್ ಆ ನೆನಪುಗಳೆಲ್ಲಾ ಹಾಗೇ ಉಳಿದುಬಿಟ್ಟಿದ್ದರೆ ಏನಾಗುತ್ತಿತ್ತು ಎಂದು ಆಲೋಚಿಸಿದರೆ 'ನಡುಕ ಉಂಟಾಗುತ್ತದೆ. ನಾವೆಷ್ಟು ಜನ್ಮಗಳನ್ನು ಎತ್ತಿದ್ದೇವೋ, ಆ ಜನ್ಮಗಳಲ್ಲೆಲ್ಲ ಏನೆಲ್ಲಾ ಅನುಭವಿಸಿದ್ದೇವೋ, ಅವುಗಳ ನೆನಪೆಲ್ಲಾ ನಮಗೆ ಉಳಿದುಬಿಟ್ಟಿದ್ದಿದ್ದರೆ, ಅಬ್ಬಾ!!! ಊಹಿಸಲೂ ಅಸಾಧ್ಯವಾದಂತಹ ಸ್ಥಿತಿ ಅಲ್ಲವೇ? ಹಾಗಾಗಿ ಮರೆವು ನಮಗೆ ಒಂದು ದೊಡ್ಡ 'ವರ'ವೆಂದೇ ತಿಳಿಯಬೇಕು. ಆದರೆ ಘಟನೆಗಳು ಮತ್ತು ಆ ಘಟನೆಗಳಿಂದುಂಟಾದ ನೆನಪುಗಳು ಮಾಸಿದರೂ, ಅವುಗಳ ಪರಿಣಾಮವಾಗಿ ನಮ್ಮ ಆತ್ಮ ಹೊತ್ತು ತರುವ ಗುಣ ಅಥವಾ ಸ್ವಭಾವಗಳು ನಮ್ಮಲ್ಲಿ ಗಟ್ಟಿಯಾಗಿ ನಮ್ಮೊಡನೆಯೇ ಜನ್ಮಜನ್ಮಾಂತರಕ್ಕೆ ಪ್ರಯಾಣ ಮಾಡುತ್ತದೆ, ಎನ್ನುವುದು ನಮ್ಮ 'ಸನಾತನ' ದ ಸಿದ್ಧಾಂತ. ಅದೇ ನಮ್ಮ ಹುಟ್ಟು ಗುಣ. ಈ ಗುಣಗಳೇ ನಮ್ಮ ಇಂದಿನ ಸ್ವಭಾವವನ್ನು ರೂಪಿಸುತ್ತದೆ.

ಅದನ್ನು ನಾವು ಉಳಿಸಿಕೊಂಡು ಬರುತ್ತೇವೆ, ಇನ್ನಷ್ಟು ಗಳಿಸುತ್ತೇವೆ, ಒಂದಷ್ಟು ಕಳೆಯುತ್ತೇವೆ ಮತ್ತು ಉಳಿದಿದ್ದನ್ನು ಹೊತ್ತು ಮುನ್ನಡೆಯುತ್ತೇವೆ. ಎಲ್ಲಿಯತನಕ ಈ ಗುಣಗಳು ನಮ್ಮಲ್ಲಿ ಲೇಶಮಾತ್ರವಿದ್ದರೂ ನಮ್ಮ ಪ್ರಯಾಣ ಸಾಗುತ್ತಲೇ ಇರುತ್ತದೆ. ಕಷ್ಟ ಸುಖಗಳ, ಜನನ ಮರಣಗಳ ವೃತ್ತದಿಂದ ನಮಗೆ ಬಿಡುಗಡೆಯೇ ಇಲ್ಲ. ಆದರೆ ನೆನಪುಗಳೆಲ್ಲ ಮಾಸಿ ಪ್ರತಿ ಬಾರಿಯೂ ಒಂದು ಹೊಸತನವನ್ನು ಹೊತ್ತು ಹೊಸ ಜೀವನವನ್ನು ಮಾಡುವ ಸದವಕಾಶ, ಸಂತಸದ ವಿಷಯವೇ ಅಲ್ಲವೇ?

**ಮುಕ್ತಕ – 686**

**ಎಲ್ಲ ಬರಿ ಗೊಣಗಾಟ, ತಿಣಕಾಟ, ತಡಕಾಟ |**
**ಇಲ್ಲ ನಮಗೂರೆಕೋಲ್, ತಿಳಿಬೆಳಕುಮಿಲ್ಲ ||**
**ಬಲ್ಲತನ ಮಬ್ಬಿನಲಿ ನಿದ್ರಿಸದೆ ತೆವಳುವುದು |**
**ಸಲ್ಲದುಬ್ಬಟೆ ನಮಗೆ - ಮಂಕುತಿಮ್ಮ ||**

ನಮಗೂರೆಕೋಲ್=ನಮಗೆ+ಊರೆ +ಕೋಲ್, ತಿಳಿಬೆಳಕುಮಿಲ್ಲ=ತಿಳಿ+ಬೆಳಕುಂ+ಇಲ್ಲ, ಸಲ್ಲದುಬ್ಬಟೆ = ಸಲ್ಲದ+ಉಬ್ಬಟೆ, ಊರೆ=ಊರಿಕೊಳ್ಳಲು, ಬಲ್ಲತನ = ಜ್ಞಾನ, ಮಬ್ಬಿನಲಿ=ಕತ್ತಲಿನಲ್ಲಿ, ಉಬ್ಬಟೆ =ಉತ್ಸಾಹ

ನಮ್ಮ ಬದುಕಿನಲ್ಲಿ ನಾವು ಮಾಡುವುದೆಲ್ಲವೂ ಒಂದು ರೀತಿಯ ತಿಣುಕಾಟ, ಪರದಾಟ. ಅದನ್ನು ಮಾಡಲು ನಮ್ಮ ತಡಕಾಟ ಮತ್ತು ಗೊಣಗಾಟ. ಬದುಕಿನಲ್ಲಿ ಸ್ಥಿರವಾಗಿ ನಿಲ್ಲಲು ನಮಗೆ ಒಂದು ಊರುಗೋಲಿಲ್ಲ ಅಥವಾ ತಿಳಿಯಾದ ಜ್ಞಾನವೂ ಇಲ್ಲ. ನಮ್ಮ ಎಲ್ಲ ಮಾನಸಿಕ ಮತ್ತು ದೈಹಿಕ ಓಡಾಟಗಳಿಗೆ ಒಂದು ನಿಶ್ಚಿತ ಅರಿವಿನ ಆಧಾರವಿಲ್ಲ, ಎಚ್ಚರವೂ ಇಲ್ಲ, ನಿದ್ದೆಯೂ ಇಲ್ಲ ಒಂದು ರೀತಿಯ 'ಮಂಪರು'. ಆದರೂ ಬೇಡವಾದ ಅಥವಾ ಸೂಕ್ತವಲ್ಲದ ಉತ್ಸಾಹ ನಮಗೆ ಎಂದು ಪ್ರಸ್ತಾಪ ಮಾಡಿದ್ದಾರೆ ಮಾನ್ಯ ಗುಂಡಪ್ಪನರು ಈ ಮುಕ್ತಕದಲ್ಲಿ.

(297)

| ಕಗ್ಗರಸಧಾರೆ | ಮರೆವು ಶಿವ ಕೃಪೆ 684 – 688 |
|---|---|

ಪ್ರತಿಯೊಬ್ಬರೂ ತಾವು ಏನು ಮಾಡುತ್ತಿದ್ದೇವೆ ಎನ್ನುವ ಅರಿವುಂಟಾದ ಸಮಯದಿಂದ, ತಮ್ಮ ತಮ್ಮ ಬದುಕಿನಲ್ಲಿ ನಡೆದ ಘಟನೆಗಳು, ಆಡಿದ ಮಾತುಗಳು, ನಡೆದುಕೊಂಡ ರೀತಿ ಎಲ್ಲವನ್ನೂ ಒಂದು ಬಾರಿ ನೆನಪಿಸಿಕೊಂಡು ಮೆಲುಕುಹಾಕಿದರೆ, ತಾವು ಹಾಗಲ್ಲದೆ ಇನ್ನೂ ಉತ್ತಮ ರೀತಿಯಲ್ಲಿ ಬದುಕಬಹುದಿತ್ತು ಎಂದು, ಅನ್ನಿಸದೆ ಇರುವುದೇ ಇಲ್ಲ. ಆದರೆ, ಹಾಗೆ ಅನ್ನಿಸಬೇಕಾದರೆ ತಾವು ಮಾಡಿದ್ದು ಮತ್ತು ಆಡಿದ್ದು ಸರಿಯಾಗಿರಲಿಲ್ಲ ಎಂದು ಒಪ್ಪಿಕೊಳ್ಳುವ ಉದಾರತೆ ಇರಬೇಕು. ಏಕೆ ಹಾಗಾಯಿತು? ಎಂದು ಯೋಚಿಸಿದರೆ ಮಾನ್ಯ ಗುಂಡಪ್ಪನವರು ಹೇಳುವಂತೆ, ನಮಗೆ ತಿಳಿಯಾದ ಎಂದರೆ ನಿಚ್ಚಳ ಮತ್ತು ನಿಶ್ಚಯವಾದ ಜ್ಞಾನದ ಅಥವಾ ವಿವೇಕದ 'ಊರುಗೋಲಿನ ಕೊರತೆ ಇತ್ತು. ಬಹುಶಃ ಇಂದೂ ಇದೆ. ಹಾಗಾಗಿ ನಾವು ಏನನ್ನೋ ಮಾಡುತ್ತೇವೆ ಮತ್ತು ಆಡುತ್ತೇವೆ, ಹಾಗೆ ಮಾಡಿ ಮತ್ತು ಆಡಿ ಪರದಾಡುತ್ತೇವೆ, ಪಶ್ಚಾತ್ತಾಪ ಪಡುತ್ತೇವೆ.

ಆದರೆ ನಾವು ಏನನ್ನೋ ಅರಿತಿದ್ದೇವೆ ಮತ್ತು ಆ ಅರಿವಿನ ಬಲದಿಂದಲೇ ನಮ್ಮ ಕೆಲಸಗಳನ್ನು ಮಾಡುತ್ತೇವೆ. ಆದರೂ ನಮ್ಮ ಬಹುತೇಕ ಕೆಲಸಗಳು ಬಯಸಿದ ಫಲಿತಾಂಶವನ್ನು ನೀಡುವುದಿಲ್ಲವೇಕೆ? ಎಂದು ಯೋಚಿಸಿದರೆ, 'ಬಲ್ಲತನ ಮಬ್ಬಿನಲಿ' ಎಂದು ಗುಂಡಪ್ಪನವರು ಹೇಳುವಂತೆ, ನಮ್ಮ ಅರಿವು ನಮಗೆ ಸ್ಪುಟವಾಗಿಲ್ಲ, ತಿಳಿಯಾಗಿಲ್ಲ . ಏನೋ ಸಂದೇಹ, ಏನೋ ಸಂಶಯ. ಆ ಸಂದೇಹ ಸಂಶಯಗಳನ್ನು ನಿವಾರಿಸಿಕೊಂಡು, ನಮ್ಮ ಅರಿವನ್ನು ಸರಿಪಡಿಸಿಕೊಳ್ಳುವ ಪ್ರಯತ್ನವನ್ನೇ ಮಾಡದೆ. ಕಾರ್ಯದಲ್ಲಿ ನಿಮಗ್ನರಾಗುವ ನಮಗೆ 'ಸಲ್ಲದ ಉತ್ಸಾಹ', ಕಾರ್ಯ

ವೈಫಲ್ಯವಾದಾಗ 'ನಿರುತ್ಸಾಹ.' ಮತ್ತದೇ ಗೋಣಗಾಟ, ತಿಣಕಾಟ, ತಡಕಾಟ ಇದು ಸರ್ವೇಸಾಮಾನ್ಯ ನಮ್ಮ ಎಲ್ಲರ ಸ್ಥಿತಿ ಅಲ್ಲವೇ?

ನಮ್ಮನ್ನು ನಾವು ತಿದ್ದಿಕೊಳ್ಳುವ ದಿಕ್ಕಿನಲ್ಲಿ ನಮ್ಮ ಕೊರತೆಗಳನ್ನು ಒಪ್ಪಿಕೊಳ್ಳುವುದು ನಮ್ಮ ಪ್ರಥಮ ಹೆಜ್ಜೆಯಾಗಬೇಕು. ಹಾಗೆ ಒಪ್ಪಿಕೊಂಡು, ನಮ್ಮನ್ನು ನಾವು ತಿದ್ದಿಕೊಳ್ಳಲು ನಿರ್ಧರಿಸುವುದು ಎರಡನೆಯ ಹೆಜ್ಜೆ. ಅಹಂಕಾರವನ್ನು ತೊರೆದು, ನಮ್ಮನ್ನು ನಾವು ತಿದ್ದಿಕೊಳ್ಳಲು ತೆರೆದುಕೊಳ್ಳಬೇಕು. ತಾಳ್ಮೆಯಿಂದ ಕಲಿಯಬೇಕು. ಅತಿ ಉತ್ಸಾಹವನ್ನು ಬಿಟ್ಟು ನಮಗೆ 'ಹಿತ'ವಾಗುವ ಮತ್ತು ಅನ್ಯರಿಗೆ 'ಅಹಿತವಾಗದಂತಹ ಕೆಲಸಗಳನ್ನು ಮಾತ್ರ ಮಾಡುವ ಪ್ರಯತ್ನಪಟ್ಟರೆ ಅದು ನಮ್ಮ ಮೂರನೆಯ ಹೆಜ್ಜೆ. ಹೀಗೆ ಹೆಜ್ಜೆಗಳನ್ನು ಇಡುತ್ತಾ, ಹಂತ ಹಂತವಾಗಿ ನಾವು ಸತ್ಯವಾದ ಅರಿವನ್ನು ಬೆಳೆಸಿಕೊಂಡು ನಮ್ಮ ತಿಣುಕಾಟ, ಪರದಾಟ, ಗೋಣಗಾಟಗಳನ್ನು ಕಾಲಕ್ರಮೇಣ ಕಡಿಮೆಯಾಗಿಸಿಕೊಂಡರೆ, ನಮ್ಮ ಜೀವನವೂ ಸಾರ್ಥಕವಾಗಬಹುದು.

**ಮುಕ್ತಕ – 687**

**ಅತ್ಯಂತದುತ್ಕಟದ ಸನ್ನಿವೇಶಗಳ ಭರ |**
**ಪ್ರತ್ಯಕ್ಷದರ್ಶನದಿನಲ್ಲದೆಂತಹುದು? ||**
**ಪುಸ್ತಕದ ಚಿತ್ರರೂಪದಿಂದೂಹಿಪೆಯ ಹಿಮಗಿರಿಯ |**
**ವಿಸ್ತಾರದದ್ಭುತವ? - ಮಂಕುತಿಮ್ಮ ||**

ಅತ್ಯಂತದುತ್ಕಟದ=ಅತ್ಯಂತದ+ಉತ್ಕಟದ,ಪ್ರತ್ಯಕ್ಷದರ್ಶನದಿನಲ್ಲದೆಂತಹುದು=ಪ್ರತ್ಯಕ್ಷ+ದರ್ಶನ+ಅಲ್ಲದೆ+ಎಂತೆ+ಅಹುದು ,ಚಿತ್ರರೂಪದಿಂದೂಹಿಪೆಯ=ಚಿತ್ರ+ರೂಪದಿಂದ+ಊಹಿಪೆಯ, ವಿಸ್ತಾರದದ್ಭುತವ=ವಿಸ್ತಾರದ +ಅದ್ಭುತವ
ಉತ್ಕಟದ=ತೀವ್ರತಮ, ಭರ = ಭಾವ, ಊಹಿಪೆಯ=ಊಹಿಸುತ್ತೀಯಾ?
ಹಿಮಗಿರಿಯ=ಹಿಮಾಲಯ ಪರ್ವತದ, ವಿಸ್ತಾರದ=ವೈಶಾಲ್ಯದ.

ಹಿಮಾಲಯ ಪರ್ವತದ ಒಂದು ಚಿತ್ರವನ್ನು ನೋಡಿ, ಅದರ ವಿಸ್ತಾರ, ಅಗಾಧತೆಗಳನ್ನು ಊಹಿಸಲು ಸಾಧ್ಯವಿಲ್ಲ. ಅದರ ಅನುಭವವಾಗಬೇಕಾದರೆ, ಅದನ್ನು ನಾವು ಪ್ರತ್ಯಕ್ಷ ನೋಡಬೇಕು ಎಂದು ಹೇಳುತ್ತಾ, ಹಾಗೆಯೇ ಬದುಕಿನ ಅತ್ಯಂತ ತೀವ್ರತಮ ಘಟನೆಗಳನ್ನು ಅರ್ಥಮಾಡಿಕೊಳ್ಳಬೇಕಾದರೆ, ಆ ಘಟನೆಗಳಲ್ಲಿ ನಾವೂ ಭಾಗಿಯಾಗಿ, ಅದರ ಪರಿಣಾಮಗಳ ಅನುಭವವನ್ನು ಪಡೆದರೆ ಮಾತ್ರ ಸತ್ಯವಾದ ಚಿತ್ರಣ ನಮಗೆ ಅರ್ಥವಾಗುವುದು ಸಾಧ್ಯ ಎಂದು, ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಹೌದು, ಯಾವುದೇ ವಿಷಯವು ನಮ್ಮ ಸ್ವಂತ ಅನುಭವಕ್ಕೆ ಬರದೆ ಇದ್ದರೆ, ಅದರ ಪೂರ್ಣ ಪರಿಚಯ ನಮಗೆ ಆಗುವುದಿಲ್ಲ. ಯಾರೋ ಹೇಳಿದ್ದನ್ನೋ ಅಥವಾ ಎಲ್ಲೋ ಕೇಳಿದ ವಿಷಯದ ಬಗ್ಗೆ ನಮಗೆ ಸತ್ಯ ಸಂಗಿತಿ ಗೊತ್ತಿರುವುದಿಲ್ಲ. ಹಾಗಾಗಿ ಅದರ ಪೂರ್ಣ ಪರಿಚಯವಿರುವುದಿಲ್ಲ, ನಮ್ಮ ಸುತ್ತಮುತ್ತ ಅಥವಾ ನಮ್ಮೊಡನೆಯೇ ನಡೆಯುವ ಅನೇಕ ಘಟನೆಗಳನ್ನು ನಾವು ಅರ್ಥಮಾಡಿಕೊಳ್ಳಲು ಬಹಳಷ್ಟು ಬಾರಿ ಸಾಧ್ಯವಾಗುವುದೇ ಇಲ್ಲ. ಹಾಗಿರುವಾಗ ಒಂದು ಚಿತ್ರವನ್ನು ನೋಡಿ, ಒಂದು ಸ್ಥಳವನ್ನೋ ಅಥವಾ ಒಬ್ಬ ವ್ಯಕ್ತಿಯನ್ನೂ ಅರಿತುಕೊಳ್ಳಲು ಸಾಧ್ಯವೇ? ಒಂದು ಸುನಾಮಿಯ ಅಥವಾ ಭೂಕಂಪದ ಅನುಭವ ಅಥವಾ ಒಂದು ಜಲಪಾತದ ಅನುಭವ ಅಥವಾ ಯಾರನ್ನೋ ಅಗಲಿದ ನೋವಿನ ಅನುಭವ, ಮುಂತಾದವುಗಳನ್ನು ಅನುಭವಿಸಿಯೇ ಅರಿತುಕೊಳ್ಳಬೇಕು.

ಮಾನ್ಯ ಗುಂಡಪ್ಪನವರು 'ಪ್ರತ್ಯಕ್ಷ ದರ್ಶನ' ಎನ್ನುವ ಪದಪ್ರಯೋಗ ಮಾಡಿದ್ದಾರೆ. ಅದು ಕೇವಲ ನಮ್ಮ ಭೌತಿಕ ಕಣ್ಣುಗಳಿಗೆ ಕಂಡದ್ದಾಗಿರಬಾರದು, ನಮಗೆ ಅದರ 'ದರ್ಶನ'ವಾಗಬೇಕು. ದರ್ಶನ ಎಂದರೆ ಒಂದು ವಸ್ತು ಅಥವಾ ವಿಷಯ ಅಥವಾ ವ್ಯಕ್ತಿಯ ನಿಜ ಸ್ವರೂಪ ನಮಗೆ ಸತ್ಯವಾಗಿ ಅಂತರ್ಗತವಾಗಬೇಕು ಎಂದು ಅರ್ಥ. ನಾವು ಪ್ರತ್ಯಕ್ಷವಾಗಿ ನೋಡಿದ್ದು, ಕಂಡಹಾಗಲ್ಲದೆ ಬೇರೇನೋ ಆಗಿರಬಹುದು. ಕಂಡದ್ದು, ಕೇಳಿದ್ದು ಎಲ್ಲವೂ ಸುಳ್ಳಾಗಿರಬಹುದು.

ಹಾಗಾಗಿ ಅದು “ಏನಾಗಿದೆ'ಯೋ ಅದನ್ನು ಹಾಗೆಯೇ ನೋಡಿ, ಹಾಗೆಯೇ ಅರಿತುಕೊಳ್ಳುವುದೇ 'ದರ್ಶನ' ಅಂತಹ ಅರಿವಿನಿಂದ ಕೂಡಿದ ಸತ್ಯದ 'ದರ್ಶನ'ವಾಗಬೇಕು.

ಒಂದು ವಸ್ತು, ವಿಷಯ ಅಥವಾ ವ್ಯಕ್ತಿಯ ಸತ್ಯವಾದ ಸ್ವರೂಪವನ್ನು ಅರಿತುಕೊಳ್ಳಬೇಕಾದರೆ, ಪೂರ್ವಾಗ್ರಹವಿಲ್ಲದೆ, ಕೇವಲ ಸತ್ಯವರಿಯುವ ಗುರಿಯಿಂದ ಅದರ ಮೂಲ ಸ್ವರೂಪವನ್ನು ಅರಿತುಕೊಂಡರೆ, ಅದರ ವೈಶಾಲ್ಯ ಮತ್ತು ಅಗಾಧತೆ ಅರ್ಥವಾಗುತ್ತದೆ. 'ನಮಗಿರುವ 'ಕಿಂಚಿತ್' ಜ್ಞಾನದಲ್ಲಿ ಹೇಗರಿಯುವುದು? ಎಂದರೆ, ಅದಕ್ಕೆ ಗುಂಡಪ್ಪನವರೇ ಒಂದು ಸೂತ್ರವನ್ನು (ಮುಕ್ತಕ - 47) ಕೊಟ್ಟಿದ್ದಾರೆ. ಇರುವ ಕಣ್ಣಿರುವ ಬೆಳಕಿನೊಳಾದಿನಿತ ನೋಡಿ ಪರಿಕಿಸಿದೊಡು ಲಾಭ' ಎಂದು ಹೇಳಿ ನಮಗೆಷ್ಟು ಸಾಧ್ಯವೋ ಅಷ್ಟೂ ಪ್ರಯತ್ನ ಮಾಡಿ, ಸತ್ಯವನ್ನರಿಯಬೇಕು ಎಂದು ಸೂಚಿಸಿದ್ದಾರೆ. ಅಂತಹ ಸತ್ಯವನ್ನರಿಯುವ ಪ್ರಯತ್ನವನ್ನು ಮಾಡಿದರೆ ಲಾಭ ಎಂದೂ ಹೇಳಿದ್ದಾರೆ. ಪ್ರಯತ್ನ ನಮ್ಮದಾದರೆ 'ಸತ್ಯ ದರ್ಶನ'ದ ಪ್ರಯೋಜನವೂ ನಮ್ಮದೇ ಆಗುತ್ತದೆಯಲ್ಲವೇ?





**ಮುಕ್ತಕ – 688**

**ಆರ್ಣವವ ಕಣ್ಣಿಂದೆ ಕಂಡ ಬೆರಗಾದೀತೆ ।**
**ವರ್ಣನೆಯನೋದಿದೊಡೆ, ತೆರೆಯನೆಣಿಸಿದೊಡೆ? ॥**
**ಪೂರ್ಣವಸ್ತುಗ್ರಹಣವಪರೋಕ್ಷದಿಂದಹುದು ।**
**ನಿರ್ಣಯ ಪ್ರತ್ಯಕ್ಷ - ಮಂಕುತಿಮ್ಮ ॥**

ಬೆರಗಾದೀತೆ=ಬೆರಗು+ಆದೀತೆ, ವರ್ಣನೆಯನೋದಿದೊಡೆ=ವರ್ಣನೆಯ+ಓದಿದ+ಒಡೆ,
ತೆರೆಯನೆಣಿಸಿದೊಡೆ=ತೆರೆಯನು+ಎಣಿಸಿದೊಡೆ,
ಪೂರ್ಣವಸ್ತುಗ್ರಹಣವಪರೋಕ್ಷದಿಂದಹುದು=ಪೂರ್ಣ+ವಸ್ತು+ಗ್ರಹಣವ+ಅಪರೋಕ್ಷದಿಂದ+ಅಹುದು
ಆರ್ಣವ = ಸಮುದ್ರ, ಕಡಲು. ಬೆರಗು=ಆಶ್ಚರ್ಯ, ವರ್ಣನೆಯ=ವಿವರಣೆಯ, ತೆರೆಯನು=ಅಲೆಯನ್ನು,

ಗ್ರಹಣವ=ಗ್ರಹಿಕೆಯನ್ನು, ಅಪರೋಕ್ಷ-ಪರೋಕ್ಷವಲ್ಲದ್ದು,ಪ್ರತ್ಯಕ್ಷ, ನಿರ್ಣಯ-ಅರಿತುಕೊಳ್ಳುವುದು.

ಪ್ರತ್ಯಕ್ಷವಾಗಿ ಕಾಣದೆ, ಕೇವಲ ಪುಸ್ತಕದಲ್ಲಿನ ವರ್ಣನೆಯನ್ನು ಓದಿ ಸಮುದ್ರದ ಬೆರಗನ್ನು ಅನುಭವಕ್ಕೆ ತಂದುಕೊಳ್ಳಲು ಸಾಧ್ಯವೇ? ಅಥವಾ ಸಮುದ್ರದ ಮೇಲೇಳುವ ಅಲೆಗಳನ್ನು ಎಣಿಸಿದರೆ ಸಮುದ್ರದ ಸೊಬಗು ಅನುಭವಕ್ಕೆ ಬರುವುದೇ? ಅದನ್ನು ಅರಿಯಲು ಪ್ರತ್ಯಕ್ಷ ನೋಡಬೇಕು, ಅದರ ಸೊಬಗನ್ನು ಸವಿಯಬೇಕು. ಅದೇ ರೀತಿ ಯಾವುದೇ ವಸ್ತುವಿನ ನಿಜ ಸ್ವರೂಪವನ್ನರಿಯಲು ಪ್ರತ್ಯಕ್ಷವಾಗಿ ನೋಡಬೇಕು, ಅನುಭವಿಸಬೇಕು. ಪ್ರತ್ಯಕ್ಷಾನುಭವವಾದರೆ ಮಾತ್ರ ಒಂದು ವಸ್ತುವನ್ನು ನಿರ್ಣಾಯಕವಾಗಿ ಅರಿಯಲು ಸಾಧ್ಯ ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ದೂರದ ಬೆಟ್ಟ, ಗಿರಿ ಶಿಖರಗಳು, ವನರಾಶಿಗಳು ಎಲ್ಲವೂ ಹಾಗೆಯೇ! ಅದರ ವೈಶಾಲ್ಯ ಮತ್ತು ಸೌಂದರ್ಯವನ್ನು ಒಳಹೊಕ್ಕೇನೋಡಬೇಕು, ಅನುಭವಿಸಬೇಕು, ಆನಂದಿಸಬೇಕು. ದೂರದಲ್ಲಿ ನಿಂತೋ, ಅದರ ಚಿತ್ರವನ್ನು ಕಂಡೋ ಅಥವಾ ಅನ್ಯರಿಂದ ಅದರ ವರ್ಣನೆಯನ್ನು ಕೇಳಿಯೋ ಅದರ ಅನುಭವವನ್ನು ಪಡೆಯಲು ಸಾಧ್ಯವಿಲ್ಲ. ಇದು ಕೇವಲ ಇಷ್ಟಕ್ಕೆ ಸೀಮಿತವಲ್ಲ. ನಮ್ಮ ಸಂಪರ್ಕಕ್ಕೆ ಬರುವ ವ್ಯಕ್ತಿಗಳ ಅಥವಾ ನಾವು ಓದುವ ವಿಚಾರಗಳ ವೈಶಾಲ್ಯವನ್ನು ಅರ್ಥಮಾಡಿಕೊಳ್ಳಲೂ ಸಹ ನಾವು ಆಳದಲ್ಲಿ ನೋಡಬೇಕು. ಒಂದು ವಿಚಾರವನ್ನು ತೆಗೆದುಕೊಂಡರೆ ಅದರ ಮೂಲವನ್ನು ಅರಿತಾಗ ಅದರ ಬಾಹುಳ್ಯ ಮತ್ತು ವಿಸ್ತಾರ ಅರ್ಥವಾಗುತ್ತದೆ ಮತ್ತು ಆ ವಿಷಯದ ಸೂಕ್ಷ್ಮತೆಗಳ ಅನುಭವವಾಗಿ ಅದನ್ನು ಸಂಪೂರ್ಣ ಆಸ್ವಾಧಿಸಲು ಸಾಧ್ಯ.

ವ್ಯಕ್ತಿಗಳ ಮನಸ್ಸೂ ಸಹ ಸಮುದ್ರದ ವೈಶಾಲ್ಯವನ್ನು ಹೊಂದಿರುತ್ತದೆ. ಒಬ್ಬ ವ್ಯಕ್ತಿಯನ್ನು ಸಂಪೂರ್ಣ ಅರಿಯಲು ಯಾರಿಂದಲೂ ಸಾಧ್ಯವಿಲ್ಲ. ಆದರೂ ಅವರ ವಿಚಾರಗಳನ್ನು, ನಮ್ಮ ಪೂರ್ವಾಗ್ರಹರಹಿತವಾದ ಮನಸ್ಸಿನಿಂದ ಅರ್ಥಮಾಡಿಕೊಳ್ಳಲು ಪ್ರಯತ್ನಪಟ್ಟರೆ ನಮಗೆ ಅರ್ಥವಾಗುತ್ತದೆ. ಈ ಜಗತ್ತಿನ ವೈಶಾಲ್ಯವೂ ಸಹ, ಶತಕೋಟಿ ಸಮುದ್ರಕ್ಕಿಂತ ಅಗಾಧವಾಗಿರುವುದರಿಂದ, ಅದರ ಮೂಲವನ್ನು ಸಮರ್ಥವಾಗಿ ಅರಿತಲ್ಲಿ

ಕಗ್ಗರಸಧಾರೆ ಏಕಾಕಿ ಮನಸಾಕ್ಷಿ 689 693 ಅದರ ವೈಶಾಲ್ಯವೂ ಅರ್ಥವಾಗುತ್ತದೆ. ನಾವು ಕಾಣುವುದೇ ನಮಗೆ ಸರಿಯಾಗಿ ಅಥವಾ ಸತ್ಯರೂಪದಲ್ಲಿ ಅರ್ಥವಾಗದಿದ್ದಲ್ಲಿ, ಇನ್ನು ಕೇವಲ ಅದರ ವರ್ಣನೆಯಿಂದ ಅರಿತುಕೊಳ್ಳಲು ಸಾಧ್ಯವೇ?

ನಾವು ಏನನ್ನು ಅರಿತಿದ್ದೇವೋ ಅದು ಸಂಪೂರ್ಣವಾಗಿರಬೇಕು ಮತ್ತು ಸತ್ಯವಾಗಿರಬೇಕು. ಆಗ ಅದು ಜ್ಞಾನವಾಗುತ್ತದೆ, ಅಂತಹ ಜ್ಞಾನ ನಮ್ಮದಾದರೆ ನಮ್ಮ ಅರಿಯುವ ಪ್ರಯತ್ನ ಪರಿಪೂರ್ಣತೆಯನ್ನು ಪಡೆಯುತ್ತದೆ. 'ಪ್ರತ್ಯಕ್ಷ'ಎಂದರೆ, ನಮ್ಮ ಕಣ್ಣೆದುರಿಗೆ ನಿಂತದ್ದು ಎಂದು ಅರ್ಥ. ಹೊರಕಣ್ಣುಗಳಿಗೆ ಕಾಣುವುದು ರೂಪವಾದರೆ ಒಳ ಕಣ್ಣುಗಳಿಗೆ ಕಾಣುವುದು 'ಸತ್ಯ'. ಪ್ರತಿ ವ್ಯಕ್ತಿ, ವಸ್ತು ಮತ್ತು ವಿಷಯದ 'ಸತ್ಯ' ಸ್ವರೂಪ ನಮಗೆ ಅರಿವಾದರೆ ನಮಗೆ ಲಭಿಸುವುದು 'ಸುಜ್ಞಾನ'ವಾಗುತ್ತದೆ. ಅಂತಹ ಸುಜ್ಞಾನವನ್ನು ಎಲ್ಲರೂ ಪಡೆಯಬೇಕೆಂಬುದೇ ಮಾನ್ಯ ಗುಂಡಪ್ಪನವರ ಈ ಮುಕ್ತಕದ ಆಶಯ.

**ಮುಕ್ತಕ – 689** **ಒರ್ವನೇ ನಿಲುವೆ ನೀನುತ್ಕಟಕ್ಷಣಗಳಲಿ |**
**ಧರ್ಮಸಂಕಟಗಳಲಿ, ಜೀವಸಮರದಲಿ ||**
**ನಿರ್ಮಾಣದೀಕ್ಷೆಯಲಿ, ನಿರ್ಯಾಣಘಟ್ಟದಲಿ |**
**ನಿರ್ಮಿತ್ರನಿರಲು ಕಲಿ – ಮಂಕುತಿಮ್ಮ ||**

ನೀನುತ್ಕಟಕ್ಷಣಗಳಲಿ=ನೀನು+ಉತ್ಕಟ+ಕ್ಷಣಗಳಲಿ,
ಜೀವಸಮರ=ಬದುಕಿನ ಹೋರಾಟ, ನಿರ್ವಾಣದೀಕ್ಷೆಯಲಿ ಆಧ್ಯಾತ್ಮದ ಹಾದಿಯಲ್ಲಿ,
ನಿರ್ಯಾಣಘಟ್ಟ=ನಿರ್ಣಯವನ್ನು ತೆಗೆದುಕೊಲ್ಲಬೇಕಾದ ಸಮಯ,
ನಿರ್ಮಿತ್ರ=ಮಿತ್ರನಾಗಿರದೆ.

ಬದುಕಿನ ಕ್ಲಿಷ್ಟತರವಾದ ಘಟ್ಟಗಳಲ್ಲಿ, ಧರ್ಮಸಂಕಟದ ಸ್ಥಿತಿಗಳಲ್ಲಿ, ಜೀವನದ ಹೋರಾಟದಲ್ಲಿ, ಪರಮಾರ್ಥ ಸಾಧನೆಯಲ್ಲಿ, ಮೃತ್ಯುವನ್ನೆದುರಿಸುವಾಗ, ನೀನು ಒಬ್ಬನೇ ನಿಲ್ಲಬೇಕಾಗುತ್ತದೆ, ಅನ್ಯರೇನು, ಮಿತ್ರರಿಂದಲೂ ಸಹಾಯ ಅಥವಾ ಸಲಹೆಗಳನ್ನು ಅಪೇಕ್ಷಿಸಬೇಡ ಎಂದು, ಅತ್ಯುತ್ತಮ ಸಲಹೆನ್ನಿತ್ತಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಹಿಂದಿನೈದಾರು ಮುಕ್ತಕಗಳಲ್ಲಿ ಎಂತಹ 'ದರ್ಶನ'ವನ್ನು ಹೇಗೆ ಪಡೆಯಬೇಕು ಎಂದು ಹೇಳಿ, ಆ ಪಡೆದ ದರ್ಶನದಿಂದ ನೀನು ಒಬ್ಬಂಟಿಯಾಗುತ್ತೀಯಾದ್ದರಿಂದ, 'ನಿರ್ಮಿತ'ನಾಗುವುದನ್ನು ಕಲಿ ಎಂದು ಹೇಳಿದ್ದಾರೆ ಈ ಮುಕ್ತಕದಲ್ಲಿ, ಉತ್ಕಟವಾದ ಘಳಿಗೆಗಳಲ್ಲಿ, ಹಾಗೋ, ಹೀಗೋ ಅಥವಾ ಇದೋ, ಅದೋ ಅಥವಾ

| (301) |
|---|

| ಏಕಾಕಿ ಮನಸಾಕ್ಷಿ 689 - 693 | ಕಗ್ಗರಸಧಾರೆ |
|---|---|

ಇವರೋ, ಅವರೋ ಎನ್ನುವಂತಃ ತುಮುಲಗಳು ನಮಗೆದುರಾಗಬಹುದು. ನಮ್ಮ ಜೀವನದಲ್ಲಿ ಅಂತಹ ಎಷ್ಟೋ ಸಂದರ್ಭಗಳು ಬರುತ್ತವೆ. ಆ ಸಂದರ್ಭಗಳನ್ನು ನಾವು ಎದುರಿಸುವಾಗ, ನಮ್ಮ ನಿರ್ಧಾರಗಳನ್ನು ನಾವೇ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ, ನಾವು ತೆಗೆದುಕೊಂಡ ನಿರ್ಧಾರಗಳಿಗೆ ಕೇವಲ ನಾವೇ ಭಾಧ್ಯರಾಗುತ್ತೇವೆ. ಅಕಸ್ಮಾತ್ ನಾವು ಅನ್ಯರ ಸಲಹೆಗಳ ಮೇಲೆ ನಿರ್ಧಾರಗಳನ್ನು ತೆಗೆದುಕೊಂಡು ಕೆಲಸ ಕೆಟ್ಟರೆ, ಸಾಮಾನ್ಯವಾಗಿ ಅದರ ಪರಿಣಾಮದ ಹೊಣೆಯನ್ನು ಅವರಮೇಲೇ ಹೊರಿಸುವ ಚೇಷ್ಟೆಯನ್ನು ಮಾಡುತ್ತೇವೆ ಅಲ್ಲವೇ?

ಲೌಕಿಕವಾದ ವಿಚಾರದಲ್ಲಿ ಮನಸ್ಸು, ಕಣ್ಣು ಮತ್ತು ಕಿವಿಗಳನ್ನು ತೆರೆದುಕೊಂಡಿರುತ್ತೇವಾದ್ದರಿಂದ, ನಿರ್ಧಾರ ನಮ್ಮದಾದರೂ, ನಮ್ಮ ನಿರ್ಧಾರದ ಮೇಲೆ ಅನ್ಯರ ವಿಚಾರಗಳ ಪ್ರಭಾವ ಆಗಿಯೇ ಆಗಿರುತ್ತದೆ. ಇದು ಸಹಜ. ಆದರೆ ಆಧ್ಯಾತ್ಮದ ವಿಚಾರದಲ್ಲಿ ನಮ್ಮ ಅಂತರಂಗದಲ್ಲಿ ನಾವು ನಮ್ಮದೇ ಪ್ರಯತ್ನದಿಂದ ಪಡೆದ 'ದರ್ಶನ'ವೇ ನಮ್ಮನ್ನು ಮುಂದಕ್ಕೆ ನಡೆಸುತ್ತದೆ. ಏಕೆಂದರೆ ಆಧ್ಯಾತ್ಮದ ವಿಚಾರಗಳನ್ನು ಯಾರು ಎಷ್ಟೇ ಸುಂದರವಾಗಿ ವಿವರಿಸಿದರೂ ಕಾಣಲಾಗುವುದಿಲ್ಲವಾದ್ದರಿಂದ ಮತ್ತು ಅದು ಅನುಭವ ವೇದ್ಯವಾದ್ದರಿಂದ ಮತ್ತು ಆ ಅನುಭವ ನಮ್ಮದೇ ಆದ್ದರಿಂದ, ಇಲ್ಲಿ ಅನ್ಯರ ವಿಚಾರಗಳ ಪ್ರಭಾವ ಕಡಿಮೆ.

ಇನ್ನು ಮರಣದ ವಿಷಯಕ್ಕೆ ಬಂದರೆ, ಅಲ್ಲಿ ನಾವು ಒಬ್ಬಂಟಿ. ಇಲ್ಲಿ ಜೊತೆಗೆ ಬರುವವರಾಗಲೀ ಅಥವಾ ಜೊತೆಗೆ ಬರುವುದಾಗಲೀ ಯಾವುದೂ ಇಲ್ಲ . ಇದು ಎಲ್ಲರಿಗೂ ಗೊತ್ತಿರುವ ವಿಚಾರವೇ ಅಲ್ಲವೇ? ಮರಣದಲ್ಲಿ ಹೇಗೆ

ನೀನು ಒಬ್ಬಂಟಿಯೋ, ಬದುಕಿನ ಹೋರಾಟದಲ್ಲೊ, ನೀನು ಎಲ್ಲರೊಂದಿಗಿದ್ದರೂ ಅಂತರಂಗದಲ್ಲಿ 'ನಿರ್ಮಿತ್ರನಿರಲು ಕಲಿ' ಎಂದು, ನಮ್ಮನ್ನು ನಾವು ನಾವೇ ಹೇಗೆ ರೂಪಿಸಿಕೊಳ್ಳಬೇಕು ಎನ್ನವುದಕ್ಕೆ ಒಂದು ಮಾರ್ಗವನ್ನು ಹಾಕಿಕೊಟ್ಟಿದ್ದಾರೆ ಮಾನ್ಯ ಗುಂಡಪ್ಪನವರು. ಈ ಮಾರ್ಗವನ್ನು ತುಳಿದರೆ ಮಾನಸಿಕ ದ್ವಂದ್ವಗಳು, ತುಮುಲಗಳು, ಬೇಸರ, ಜಿಗುಪ್ಸೆಗಳು ಇಲ್ಲದೆ ನಮ್ಮ ಮನಸ್ಸು ಶಾಂತವಾಗಿರಬಹುದು. ಇಂತಹ ಮಾರ್ಗವು ಬದುಕಿನ ಸಾರ್ಥಕತೆಗೆ ಪೂರಕವಾಗಿರುತ್ತದೆ.

**ಮುಕ್ತಕ – 690**

**ಶುನಕ ಬೆಂಬತ್ತಿತಲ ಧರ್ಮಜನ ಕಡೆವರಂ |**
**ನಿನಗಂತು ಸಂಗಡಿಗನೊರ್ವನೆಡೆಬಿಡದನ್ ||**
**ಇಣಿಕಿ ನೋಡರರದಾರುಮೆನ್ನುವೆಡೆ ಕಾದಿಹನು |**
**ಅಣಕಿಗ ಮನಸ್ಸಾಕ್ಷಿ - ಮಂಕುತಿಮ್ಮ ||**

ಬೆಂಬತ್ತಿತಲ = ಬೆಂಬತ್ತಿತು +ಎಲ, ಸಂಗಡಿಗನೊರ್ವನೆಡೆಬಿಡದನ್=ಸಂಗಡಿಗನು+ಓರ್ವನ್+ಎಡೆಬಿಡದನ್,
ನೋಡರರದಾರುಮೆನ್ನುವೆಡೆ=ನೋಡರು+ಅದಾರುಂ+ಎನ್ನುವ+ಎಡೆ, ಕಾದಿಹನು+ಕಾದು+ಇಹನು
ಬೆಂಬತ್ತು= ಹಿಂಬಾಲಿಸು, ಎಡೆಬಿಡದೆ=ನಿರಂತರವಾಗಿ, ಎಡೆ =ಕಡೆ,





ಮಹಾಭಾರತದಲ್ಲಿ ಧರ್ಮರಾಯನ ಸ್ವರ್ಗಾರೋಹಣದ ಕಾಲಕ್ಕೆ ಅವನ ಸಂಗಡ ಹೊರಟವರೆಲ್ಲರೂ ಒಬ್ಬರಾದಂತೆ ಒಬ್ಬರು ತೀರಿಕೊಂಡ ನಂತರ, ಅವನನ್ನು ಸ್ವರ್ಗದ ಬಾಗಿಲವರೆಗೂ ಒಂದು ನಾಯಿ ಹಿಂಬಾಲಿಸಿತಂತೆ. ಧರ್ಮರಾಯನನ್ನು ಒಳಗೆ ಸ್ವಾಗತಿಸಿದ ಸ್ವರ್ಗಾಧಿಕಾರಿಗಳು ನಾಯಿಯ ಪ್ರವೇಶವನ್ನು ನಿರಾಕರಿಸಿದರಂತೆ. “ನನ್ನನ್ನು ನಂಬಿ ಹಿಂಬಾಲಿಸಿ ಬಂದ ನಾಯಿಗೆ ಪ್ರವೇಶವಿಲ್ಲದ ಸ್ವರ್ಗಕ್ಕೆ ನಾನೂ ಪ್ರವೇಶಮಾಡುವುದಿಲ್ಲವೆಂದು ಧರ್ಮರಾಯನೆಂದಾಗ, ಆ ನಾಯಿಯ ರೂಪದಲ್ಲಿದ್ದ 'ಯಮಧರ್ಮರಾಯನು' ತನ್ನ ನಿಜ ಸ್ವರೂಪವನ್ನು ತೋರಿದನಂತೆ, ಹಾಗೆಯೇ ತನ್ನ ನಿಜಸ್ವರೂಪವನ್ನು ತೋರದಿದ್ದರೂ ನಮ್ಮ ಅಂತರಾತ್ಮ, ನಾವು ಮಾಡಿದ ಮತ್ತು

ಪಾಲಿಸಿದ ಧರ್ಮ ಅಥವಾ ಅಧರ್ಮಗಳನ್ನು ಸಾಕ್ಷೀ ರೂಪದಲ್ಲಿ ನೋಡುತ್ತಾ ಇರುತ್ತದೆ ಎಂದು, ಈ ಜಗತ್ತಿನಲ್ಲಿ ನಾವಿರುವಾಗ ಏನನ್ನು ಗಳಿಸಬೇಕು ಅಥವಾ ಗಳಿಸಿದ ಯಾವುದು ನಮ್ಮನ್ನು ಅಗಲದೆ ಇರುತ್ತದೆ ಎನ್ನುವುದನ್ನು ಸೂಚ್ಯವಾಗಿ ನಮಗೆ ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮ ಈ ದೇಹ, ಮನಸ್ಸು ಬುದ್ಧಿಗಳ ಮೂಲಕ ನಡೆಯುವ ಪ್ರತೀ ಕೆಲಸದ ಸಂಪೂರ್ಣ ಸತ್ಯ ನಮಗೊಬ್ಬರಿಗೇ ಗೊತ್ತು. ಇಲ್ಲಿ ಮಾಡುವುದು ಮನಸ್ಸು, ಬುದ್ಧಿ, ದೇಹಗಳು, ನಾವು ಮಾಡುವ ಕೆಲಸವನ್ನು ನಾವು ಯಾರಿಗೂ ತಿಳಿಯದೆ ಮಾಡುತ್ತಿದ್ದೇವೆ ಎಂದು ಮಾಡುತ್ತಿದ್ದರೂ, ಅದನ್ನು ಸಾಕ್ಷೀ ರೂಪದಲ್ಲಿ ನೋಡುವುದು 'ನಾವು'. ಈ ನಾವು ಎನ್ನುವುದೇ ನಮ್ಮ ದೇಹವನ್ನು ಧರಿಸುವ ಚೇತನ, ಇದು ಸಾಕ್ಷೀ ರೂಪದಲ್ಲಿ ಎಲ್ಲವನ್ನೂ ಕಾಣುತ್ತದೆಯಾದ್ದರಿಂದ ಇದನ್ನೇ ಮನಃಸಾಕ್ಷಿ ಎನ್ನುತ್ತಾರೆ. ಇದು ನಮ್ಮ ಬೆಂಬಿಡದ ಸಂಗಡಿಗ, ನಾವು ಮಾಡಿದ ಪ್ರತೀ ಕೆಲಸವನ್ನು ಸಾಕ್ಷೀ ರೂಪದಿಂದ ನೋಡುವುದು, ವಿಶ್ಲೇಷಿಸುವುದು, ಅಣಕಿಸುವುದು ಎಲ್ಲವೂ ಈ ಮನಃಸಾಕ್ಷಿಯೇ. ಇದರ ಕಣ್ ತಪ್ಪಿಸಿ ನಾವು ಏನನ್ನೂ ಮಾಡಲು ಸಾಧ್ಯವೇ ಇಲ್ಲ. ಅಲ್ಲವೇ? ಹಾಗಾಗಿಯೇ ಅದನ್ನು 'ಅಣಕಿಗ ಮನಸ್ಸಾಕ್ಷಿ' ಎಂದಿದ್ದಾರೆ ಮಾನ್ಯ ಗುಂಡಪ್ಪನವರು.

ನಾವು ಧರ್ಮದ ಕೆಲಸವನ್ನು ಮಾಡುವಾಗ, ಜಗತ್ತಿಗೆ ಪ್ರದರ್ಶಿಸಲು ಇಚ್ಛಿಸುತ್ತೇವೆ. ಅದೇ ಅಧರ್ಮದ ಕೆಲಸ ಮಾಡುವಾಗ ಯಾರಿಗೂ ತೋರದ ಹಾಗೆ, ಯಾರಿಗೂ ಅರಿಯದ ಹಾಗೆ ಮಾಡಬೇಕೆಂದು ಇಚ್ಛಿಸುತ್ತೇವೆ. ಆದರೆ ಅದು ಸಾಧ್ಯವೇ ಇಲ್ಲ. ನಮ್ಮ ಅಂತರಾತ್ಮವನ್ನು ವಂಚಿಸಿ ಯಾವುದನ್ನೂ ಮುಚ್ಚಿಡಲು ಸಾಧ್ಯವಿಲ್ಲ, ಅದರ ಮುಂದೆ ನಾವು ಬೆತ್ತಲಾಗಲೇ ಬೇಕು, ತಲೆ ತಗ್ಗಿಸಲೇ ಬೇಕು. 'ಧರ್ಮರಾಯನೊಟ್ಟಿಗೆ' ಕಡೆಯ ತನಕ 'ಧರ್ಮನು' ಶ್ವಾನರೂಪದಲ್ಲಿ ಹೋದಂತೆ ನಮ್ಮ ಅಂತರಾತ್ಮದೊಟ್ಟಿಗೆ ನಮ್ಮ ಸುಕರ್ಮ ಮತ್ತು ದುಷ್ಕರ್ಮಗಳೆಲ್ಲವೂ ನಮ್ಮೊಂದಿಗೆ ಬರುತ್ತವೆ. ಅದರ ಲೆಕ್ಕವನ್ನು ಮುಚ್ಚಿಡಲೋ ಅಥವಾ ಬಚ್ಚಿಡಲೋ ಸಾಧ್ಯವಿಲ್ಲ. ಹಾಗೆ ಮುಚ್ಚಿಡಲು ಪ್ರಯತ್ನಿಸಿದರೆ ನಮಗೆ ನಾವೇ ಮಾಡಿಕೊಂಡ ದ್ರೋಹವಾಗುತ್ತದೆ. ಸತ್ಯ ಸತ್ವ ಮತ್ತು ಧರ್ಮವರಿಯದ ಕರ್ಮಗಳಿಂದ ಆತ್ಮ ಸೊರಗುತ್ತದೆ ಮತ್ತು ಈ ದೇಹದ ಮೂಲಕ ಗಳಿಸಿದ ಎಲ್ಲ ಗುಣಗಳನ್ನೂ ತೊಡೆದುಕೊಳ್ಳಲು ಪರದಾಡುತ್ತದೆ. ಅಂತಹ ಗುಣಗಳು ಸದ್ಗುಣಗಳಾದಲ್ಲಿ, ಆತ್ಮದ ಭಾರ ಕಡಿಮೆಯಾಗಿ, ಪರಮಾತ್ಮನನ್ನು ಸೇರುವ ಹಾದಿ ಸುಗಮವಾಗುತ್ತದೆ.

**ಮುಕ್ತಕ – 691**

**ಸುತ್ತಿ ಸುತ್ತುವ ಖಗವ ನೆನಪೆಳೆಯುವುದು |**
**ಗೊತ್ತುನೂಲ್ ಪಿಡಿದಿಹುದು ದನವ ಬಯಲಿನಲ್ಲಿ ||**
**ತತ್ವವೊಂದರ ಹಿಡಿತಕೊಗ್ಗದಿಹ ಬಾಳೇನು? |**
**ಕಿತ್ತ ಗಾಳಿಯ ಪಟವೊ – ಮಂಕುತಿಮ್ಮ ||**

ನೆನಪೆಳೆಯುವುದು=ನೆನಪು+ಎಳೆಯುವುದು, ಗೊತ್ತುನೂಲ್=ಗೊತ್ತಿನ+ನೂಲ್, ಹಿಡಿತಕೊಗ್ಗದಿಹ=ಹಿಡಿತಕೆ+ಒಗ್ಗದಿಹ
ಖಗವ = ಪಕ್ಷಿಯ, ಗೊತ್ತು= ದನವನ್ನು ಕಟ್ಟಿಹಾಕಲು ಭೂಮಿಯಲ್ಲಿ ಹೊಡೆದಿರುವ ಒಂದು ಗೂಟ,

ತನ್ನ ಆಹಾರಕ್ಕಾಗಿ ಎಲ್ಲೆಲ್ಲೊ ಸುತ್ತಿ ಅಲೆಯುವ ಪಕ್ಷಿ, ಸಂಜೆಗೆ ತನ್ನ ಗೂಡನ್ನು ನೆನಪಿಸಿಕೊಂಡು ಸೇರುವಂತೆ, ಒಂದು ಗೂಟಕ್ಕೆ ಹಗ್ಗದ ಸಹಾಯದಿಂದ ಕಟ್ಟಿಹಾಕಿದ ದನ, ಹುಲ್ಲ ಮೇಯಲು ಆ ಹಗ್ಗದ ಅಳತೆಯ ಪರಿಧಿಯಲ್ಲೇ ಸುತ್ತುತ್ತಾ ಒಂದು ಬಂಧಕ್ಕೆ ಒಳಪಟ್ಟಂತೆ, ನಾವೂ ಸಹ ಒಂದು ತತ್ವಕ್ಕೆ ಅಥವಾ ಸಿದ್ಧಾಂತಕ್ಕೆ ಒಳಪಟ್ಟು ಬದ್ಧರಾಗದೆ ಇದ್ದರೆ, ಅದೂ ಸಹ ಒಂದು ಬಾಳೇನು? ಖಂಡಿತ ಅಲ್ಲ, ಅದು ಸೂತ್ರ ಕಿತ್ತ ಗಾಳಿಪಟದಂತಹ ಬದುಕು ಎಂದು ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಹಿಂದಿನ ಮುಕ್ತಕಗಳಲ್ಲಿ ನಮಗೆ ಒಂದು ಅಂತರ್ದಶ್ರನ ಬೇಕು, ಆ ದರ್ಶನದಿಂದ ನಮ್ಮ ಧರ್ಮವನ್ನು ನಾವು ಕಂಡುಕೊಳ್ಳಬೇಕು ಮತ್ತು ಪಾಲಿಸಬೇಕು, ಹಾಗೆ ಪಾಲಿಸಿದ ಧರ್ಮವೇ ನಮ್ಮ ಸ್ವಭಾವವಾಗಿ, ನಮ್ಮ ಗುಣವಾಗಿ ನಮ್ಮೊಡನೆ ಮೃತ್ಯುವಿನ ನಂತರವೂ ಬರುತ್ತದೆ ಎನ್ನುವ ವಿಚಾರವನ್ನು ನೋಡಿದ್ದೇವೆ. ಆದರೆ ಆ 'ಧರ್ಮ' ಎಂದರೆ ಏನು? ಈ ಜಗತ್ತಿನಲ್ಲಿ ಪರಮಾತ್ಮ ಸೃಷ್ಟಿಸಿದ ಪ್ರತಿಯೊಂದು ವಸ್ತುವಿಗೂ ಒಂದು ಸ್ವಭಾವವುಂಟು. ಮೆಣಸಿನ ಕಾಯಿ ಖಾರವಾಗಿರುವುದು, ಬೆಲ್ಲ ಸಿಹಿಯಾಗಿರುವುದು, ಗಾಳಿ ಬೀಸುವುದು, ನೀರು ಹರಿಯುವುದು ಇತ್ಯಾದಿಗಳು ಆಯಾಯಾ ವಸ್ತುಗಳ ಧರ್ಮ. ಸ್ವಲ್ಪ ಯೋಚಿಸಿ ನೋಡಿದರೆ ನಮಗೆ ಅರ್ಥವಾಗುವ ವಿಷಯವೇನೆಂದರೆ, ಆ ವಸ್ತುಗಳು ತಮ್ಮ ಧರ್ಮವನ್ನು ತೊರೆದರೆ 'ವಿನಾಶ' ಖಂಡಿತ ಎಂದು. ಉದಾ, ನೀರು ಹರಿಯುವುದ ಬಿಟ್ಟ 'ನಾ ಗಾಳಿಯಂತೆ ಬೀಸುವೆ' ಎಂದರೆ ಆಗುವ ಅನಾಹುತಕ್ಕೆ ಸುನಾಮಿ ಎಂದು ಹೆಸರಲ್ಲವೆ?

ಅದೇ ರೀತಿ ಮನುಷ್ಯನಿಗೆ ಮಾನವೀಯತೆಯೇ ಧರ್ಮ, ಅದನ್ನು ಭದ್ರವಾಗಿ ಹಿಡಿದು, ಶುದ್ಧವಾಗಿ ಪಾಲಿಸುವುದೇ ಮಾನ್ಯ ಗುಂಡಪ್ಪನವರು ಹೇಳುವಂತೆ 'ತತ್ವವೊಂದರ ಹಿಡಿತದಲ್ಲಿ ನಾವು ಇರಬೇಕು. ಹಾಗಿದ್ದರೆ ಮಾತ್ರ ಅದು ಬಾಳು, ಇಲ್ಲದಿದ್ದರೆ ಅದು ಗೋಳು. ಒಂದು ನದಿಗೆ ಇಕ್ಕೆಲಗಳಲ್ಲಿ ಕಟ್ಟೆಕಟ್ಟಿ, ಅದರ ನೀರನ್ನು ಸರಿಯಾಗಿ ಹಾಯಿಸಿ ಹನಿಸಿದರೆ ಅದು ನೀರಾವರಿಯಾಗುತ್ತದೆ, ಸುಭಿಕ್ಷವಿರುತ್ತದೆ. ಅದಲ್ಲದೆ ಅದನ್ನು ಹೇಗೆಂದರೆ ಹಾಗೆ ಹರಿಯಲು ಬಿಟ್ಟರೆ ವ್ಯರ್ಥವಾಗುತ್ತದೆ. ಈದೇ ರೀತಿ ನಮ್ಮ ಬಾಳಲ್ಲೂ ಸಹ ನಾವು ಒಂದು ತತ್ವಕ್ಕೆ ಬದ್ಧರಾಗಿ, ನಮ್ಮೆಲ್ಲ ಆಲೋಚನೆ ಮತ್ತು ತದನುಸಾರವಾಗಿ ನಾವು ಮಾಡುವ





ಕೆಲಸಗಳನ್ನು ಆ ತತ್ವದ ಪರಿಧಿಯಲ್ಲಿ ಮಾಡಿದರೆ, ಆಗ ನಾವು ನಮ್ಮ ಸ್ವಭಾವವನ್ನು ಎಂದರೆ, ಧರ್ಮವನ್ನು ಉಳಿಸಿಕೊಳ್ಳಬಹುದು ಮತ್ತು ಬೆಳೆಸಿಕೊಳ್ಳಬಹುದು.

'ಮಾನವತೆ'ಯೆನ್ನುವುದು ಬಹಳ ವಿಶಾಲವಾದ ಅರ್ಥವನ್ನು ಕೊಡುತ್ತದೆ. ಹಾಗಾಗಿ ಅದರೊಳಗೆ ಯಾವುದಾದರೂ ಒಂದು ವಿಷಯಕ್ಕೆ ಬದ್ಧರಾಗಿ ಅದೇ ಕ್ಷೇತ್ರದಲ್ಲಿ ದುಡಿದರೆ ಸಾಕು, ನಾವು ಧರ್ಮವನ್ನು ಪರಿಪಾಲಿಸಿದಂತಾಗುತ್ತದೆ. ಉದಾ:ಸ್ವಾಮೀ ವಿವೇಕಾನಂದ, ಮದರ್ ತೆರೇಸಾ, ಬಾಬಾ ಆಮ್ಟೆ, ಮುಂತಾದ ಮಹಾನುಭಾವರು. ಅದನ್ನು ಬಿಟ್ಟು ಯಾವುದೇ ತತ್ವಕ್ಕೆ ಬದ್ದರಾಗದೆ ಇದ್ದರೆ, ಬಾಳು ಸತ್ವಹೀನವಾಗಿ ಗೊತ್ತು ಗುರಿಯಿಲ್ಲದೆ ಕಿತ್ತ ಗಾಳಿಪಟದಂತೆ ಆಗುತ್ತದೆ. ನಮ್ಮ ಗುರಿಯನ್ನು ಗುರುತಿಸಿಕೊಳ್ಳುವುದು ಮತ್ತು ಅದನ್ನು ಮುಟ್ಟುವ ಪ್ರಯತ್ನ ನಮ್ಮಿಂದಲೇ ಆಗಬೇಕು, ಅಲ್ಲವೇ? ಪ್ರಯತ್ನ ಪಟ್ಟರೆ ಎಲ್ಲರಿಗೂ ಸಾಧ್ಯ.

**ಮುಕ್ತಕ – 692** **ಬರಿಯೋದು ಬರಿವಾದ ಬರಿಬುದ್ಧಿ ದೊರಕಿಸದು |**
**ಪರತತ್ತ್ವವನು; ಬೇಕು ಬೇರೆ ಕಣ್ಣದಕೆ ||**
**ಚಿರದ ಮಮತಾವೇಷ್ಟಿತದ  ಪೊರೆಯ ಪರಿದಂದು |**
**ಅರಳ್ವುದರಿವಿನ ಕಣ್ಣು – ಮಂಕುತಿಮ್ಮ ||**

ಬರಿಯೋದು=ಬರಿಯ+ಓದು, ಕಣ್ಣದಕೆ =ಕಣ್ಣು+ಅದಕೆ, ಪರಿದಂದು=ಪರಿದ+ಅಂದು,
ಅರಳ್ವುದರಿವಿನ=ಅರಳ್ವುದು+ಅರಿವಿನ,
ಚಿರದ =ಸದಾ ಇರುವ, ಮಮತಾ=ಮೋಹದ, ಪೊರೆಯ=ಮುಸುಕು, ಪರಿದ=ಹರಿದ

ಶಾಸ್ತ್ರಗಳನ್ನು ಓದುವುದು, ಅವುಗಳಲ್ಲಿನ ವಿಷಯವನ್ನು ಹಿಡಿದು ಚರ್ಚೆ, ವಾದ ಮಾಡುವುದು ಅಥವಾ ಬುದ್ಧಿಯಿಂದ ತರ್ಕ, ಕುತರ್ಕ, ವಿತರ್ಕಗಳ ಕಸರತ್ತನ್ನು ಮಾಡಿದರೆ, ಪರತತ್ವದ ದರ್ಶನವಾಗುವುದಿಲ್ಲ. ಪರತತ್ವನ್ನು ಕಾಣುವುದಕ್ಕೆ ಬೇರೊಂದು ಕಣ್ಣು ಬೇಕು. ಆದರೆ ಆ ಕಣ್ಣಿನ ಸುತ್ತ 'ಮಮತೆ', ಎಂದರೆ 'ನಾನು, ನನ್ನದು' ಎಂಬ ಪೊರೆ ಅಡ್ಡವಾಗಿ ಇದೆ. ಆ ಪೊರೆ ಹರಿದಂದು ಅಂದರೆ, ಅದು ತೊಲಗಿದರೆ ಒಳಗಣ್ಣು ತೆರೆದುಕೊಂಡು ನಮಗೆ ಪರತತ್ವದ ದರ್ಶನವಾಗುತ್ತದೆ ಎಂದು, ಸ್ಪಷ್ಟವಾಗಿ ಉಲ್ಲೇಖಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

'ಪರತತ್ವವನ್ನು ಅರಿಯಲು ವೇದ ವೇದಾಂತದ ಪಸಕಗಳನ್ನು ಓದುವುದು, ಅದರ ವಿಚಾರವಿನಿಮಯ, ಚರ್ಚೆ, ವಾದ, ವಿವಾದ ಮಾಡುವುದರಿಂದ ಆಗುವುದಿಲ್ಲ. ಅದನ್ನು ಅರಿಯಲು ಅಂತರಂಗದ ಕಣ್ಣು ತೆರೆಯಬೇಕು. ಹಾಗಾದರೆ ಅದು ಮುಚ್ಚಿದೆಯೇ? ಎಂದರೆ ಹೌದು. ಅದಕ್ಕೊಂದು ಪೊರೆ ಅಥವಾ ತೆರೆ

ಕವಿದುಕೊಂಡಿದೆ. ಆ ಪೊರೆ 'ನಾನತ್ವ'ದಿಂದಾಗಿದೆ. ನಾನು ನನ್ನದೆಂಬ 'ಮಮಕಾರ' ಭಾರದಿಂದ ಒಳಗಣ್ಣಿನ ರೆಪ್ಪೆಗಳು ಮುಚ್ಚಿಕೊಂಡಿವೆ. ಅದನ್ನು ತೆರೆದರೆ ಮಾತ್ರ ತತ್ವದ ಮತ್ತು ಸತ್ಯದ ದರ್ಶನವಾಗುತ್ತದೆ.

ನಮಗಿರುವುದು ಪ್ರಾಪಂಚಿಕ ವಸ್ತುಗಳ ಮೇಲೆ ಮಮಕಾರ, ಮನೆ, ಸಂಪತ್ತು, ಹೆಂಡತಿ, ಮಕ್ಕಳು, ಬಂಧು, ಬಾಂಧವರು ಹೀಗೆ ನಾವು ನಮ್ಮ ಸಂಪರ್ಕ ಸಂಬಂಧವನ್ನು ಯಾರ್ಯಾರ ಒಟ್ಟಿಗೆ ಇಟ್ಟುಕೊಂಡಿದ್ದೇವೋ, ಅವರೆಲ್ಲರಮೇಲೂ ನಮಗೆ ಮಮಕಾರ, ನಾವು ಇವುಗಳ ನಡುವೆ ನಲುಗಿರುವಾಗ, ಆ ಪರತತ್ವದ ದರ್ಶನವು ಆಗಲು ಹೇಗೆ ಸಾಧ್ಯ. ಮಮಕಾರ ನಮ್ಮ ಮನಸ್ಸುಗಳಲ್ಲಿ, ನಾವು, ನಮ್ಮವರು, ನಮ್ಮದು ಮತ್ತು ನಮ್ಮದಲ್ಲದ್ದು, ನಮ್ಮವರದಲ್ಲದ್ದು ಎನ್ನುವ ಬೇಧವನ್ನು ಸೃಷ್ಟಿಸುತ್ತದೆ. ಅಂತರಂಗದಲ್ಲಿ ಈ ಜಗತ್ತಿನ ನಂಟನ್ನು ತೊರೆದರೆ ಮಮಕಾರದ ಭಾರ ಕಡಿಮೆಯಾಗಿ, ನಮ್ಮ ಅಂತಃಚಕ್ಷುಗಳು ತೆರೆದುಕೊಂಡರೆ, ಆಗ ನಮ್ಮ ಮನದಲ್ಲಿರುವ 'ಬೇಧ' ತೊಲಗಿ ಇಡೀ ಜಗತಿನಲ್ಲಿ ವ್ಯಾಪಕವಾಗಿರುವ ಆ ಪರಮಾತ್ಮ ತತ್ವವನ್ನು ಅರಿತುಕೊಳ್ಳಬಹುದು.

ಹಾಗೆಂದು ವೇದ ವೇದಾಂತದ ಪುಸಕಗಳನ್ನು ಓದುವುದು ಅದರ ವಿಚಾರವಿನಿಮಯ, ಚರ್ಚೆ, ವಾದ, ವಿವಾದ' ಮಾಡುವುದನ್ನು ಸಂಪೂರ್ಣವಾಗಿ ತೊರೆದುಬಿಡಬೇಕು ಎಂದಲ್ಲ, ಅವುಗಳನ್ನು ಪರತತ್ವವನ್ನು ಅರಿಯಲು 'ಮೆಟ್ಟಿಲು'ಗಳಾಗಿ ಉಪಯೋಗಿಸಬೇಕು. ಲೌಕಿಕದ ಹೊರೆಯನ್ನು ಹೊತ್ತು ಮತ್ತು ಮೊರೆಯನ್ನು ಹೊದ್ದು ಅವುಗಳನ್ನು ಎಷ್ಟು ಅಭ್ಯಾಸ ಮಾಡಿದರೂ, ಅದರಲ್ಲಿ ಎಷ್ಟೇ ಪಾಂಡಿತ್ಯವನ್ನು ಪಡೆದರೂ 'ಪರತತ್ವ'ವನ್ನು ಅರಿಯುವ ಹಾದಿಯಲ್ಲಿ ಒಂದು ಹೆಜ್ಜೆಯನ್ನೂ ಇಡಲಾಗದು.

ಈ ಜಗತ್ತು ಬಹಳ ಸುಂದರ, ಇಂದ್ರಿಯ ಸುಖಕ್ಕೆ ಬಹಳ ಅನುಕೂಲವಾಗಿರುವುದು. ಅದನ್ನು ಅನುಭವಿಸಿ, ಸಂತೋಷದಿಂದ ಇರುವವರೆಗೂ ನಮಗೆ ನಮ್ಮ ಬದುಕಿನ ಸತ್ಯ ಮತ್ತು ಸತ್ವ ಎರಡೂ ಅರ್ಥವಾಗುವುದಿಲ್ಲ. ಹಾಗಾಗಿ ಇದರೊಳಗೆ ಇದ್ದು, ಇದನ್ನು ಅನುಭವಿಸುತ್ತಿದ್ದರೂ, ಇದಕ್ಕೆ ಅಂಟದೆ ಇದ್ದು, ಇದಕ್ಕೆಲ್ಲ ಕಾರಣವಾದ ಆ 'ಪರವಸ್ತು, ಪರತತ್ವ' ದ ಕಡೆಗೆ ಮನಸ್ಸು ಹೋದರೆ, ಆಗ ಮಾನ್ಯ ಗುಂಡಪ್ಪನವರು 'ಅರಳುದರಿವಿನ ಕಣ್ಣು' ಎಂದು ಹೇಳುವ ಹಾಗೆ, ಜ್ಞಾನದೆಡೆಗೆ ನಮ್ಮ ಪಯಣ ಆರಂಭವಾಗುತ್ತದೆ.

**ಮುಕ್ತಕ – 693**

**ಇಂದ್ರಿಯಾತೀತವನು ಪಿಡಿಯಲಿಂದ್ರಿಯಕಳವೆ? |**
**ಇಂದ್ರಧನು ಕೈದೋಟಿ ಕೊಂಕಿಗೆಟುಕುವುದೆ? ||**
**ಸಂದೃಶ್ಯವಾತ್ಮವಾತ್ಮಕೆ ಬೇರೆ ಕರಣದಿಂ |**
**ತಂದ್ರಿ ಬಿಡೆ ದೊರೆವುದದು - ಮಂಕುತಿಮ್ಮ ||**

ಇಂದ್ರಿಯಾತೀತವನು=ಇಂದ್ರಿಯ+ಅತೀತವನು, ಪಿಡಿಯಲಿಂದ್ರಿಯಕಳವೆ |=ಪಿಡಿಯಲು+ಇಂದ್ರಿಯಕ್+ಅಳವೆ, ಕೊಂಕಿಗೆಟುಕುವುದೆ=ಕೊಂಕಿಗೆ+ಎಟುಕುವುದೆ, ಸಂದೃಶ್ಯವಾತ್ಮವಾತ್ಮಕೆ=ಸಂದೃಶ್ಯವು+ಆತ್ಮವು+ಆತ್ಮಕೆ, ಇಂದ್ರಿಯ=ಸ್ಪರ್ಶ ಮತ್ತು ಜ್ಞಾನೇಂದ್ರಿಯಗಳು, ಅತೀತ-ಹಿಡಿತಕ್ಕೆ ಸಿಗದ, ಪಿಡಿಯಲು=ಹಿಡಿಯಲು, ಅಳವೆ=ಸಾಧ್ಯವೇ, ಇಂದ್ರಧನು=ಕಾಮನ ಬಿಲ್ಲು, ಕೊಂಕಿ=ಕೊಂಡಿ, ಸಂದೃಶ್ಯವು=ಕಾಣುವುದು, ತಂದ್ರಿ=ಆಲಸ್ಯ ಅಥವಾ ಸೋಮಾರಿತನ.





ಇಂದ್ರಿಯಗಳಿಗೆ ಅತೀತವಾದದ್ದನ್ನು ನಮ್ಮ ಇಂದ್ರಿಯಗಳಿಗೆ ಅರಿಯಲು ಸಾಧ್ಯವೇ? ಕಾಮನಬಿಲ್ಲನ್ನು, ತೋಟದಲ್ಲಿ ನಾನು ಹೂವೋ, ಹಣ್ಣೋ ಕೀಳಲುಪಯೋಗಿಸುವ ಕೈ ದೋಟಿಯಿಂದ ಕಿತ್ತುಕೊಳ್ಳಲು ಸಾಧ್ಯವೇ? ಹಾಗೆಯೇ ಪರತತ್ವದ ದರ್ಶನವಾಗಬೇಕಾದರೆ, ಅದಕ್ಕೆ ಬೇರೆಯೇ ಉಪಕರಣ ಬೇಕು. ನೋಡಬೇಕಾದರೆ ಆಲಸ್ಯವನ್ನು ಬಿಟ್ಟು, ನಿರಂತರ ಪ್ರಯತ್ನದಿಂದ ಮಾತ್ರ ಸಾಧ್ಯ ಎಂದು ಹೇಳುತ್ತಾರೆ ಗುಂಡಪ್ಪನವರು.

ಇಂದ್ರಿಯಾತೀತವೆಂದರೆ 'ನಮ್ಮ ಸ್ಪರ್ಶ ಮತ್ತು ಜ್ಞಾನೇಂದ್ರಿಯಗಳಿಗೆ ಎಟುಕದ' ಎಂದು ಅರ್ಥ. ಇದನ್ನೇ ಮಾನ್ಯ ಗುಂಡಪ್ಪನವರು 2ನೇಮುಕ್ತಕದಲ್ಲಿ "ಭಾವಕೊಳಪಡದಂತೆ ಅಳತೆಗಳವಡದಂತೆ" ಎಂದಿದ್ದಾರೆ. ಅದನ್ನು ನೋಡಲಾಗಲೀ, ನಮ್ಮ ಇಂದ್ರಿಯಾಧಾರಿತವಾದ ಭಾವಗಳಿಂದ ಅನುಭವಿಸಲಾಗಲೀ ಸಾಧ್ಯವಿಲ್ಲವಾದ್ದರಿಂದ, ಅದನ್ನು ಕಾಣಲು ಬೇರೆ ಉಪಾಯವನ್ನು ಹುಡುಕಬೇಕುಎಂದು ಹೇಳುತ್ತಾ 'ತಂದ್ರಿ ಬಿಡೆ' ಎಂದಿದ್ದಾರೆ. ನಮಗೆ ಈ ಜಗತ್ತು

ರಂಜಿಸುತ್ತಾ ಇರುವಾಗ ಇದನ್ನು ಬಿಟ್ಟು, ಪರತತ್ವವನ್ನು ಕಾಣಲು, ನಿರಂತರವಾದ ಮತ್ತು ಗಟ್ಟಿ ಪ್ರಯತ್ನವನ್ನು ಮಾಡುವುದೊಂದೇ ನಮಗಿರುವ ಉಪಾಯ ಎನ್ನುತ್ತಾರೆ ಶ್ರೀ ಗುಂಡಪ್ಪನವರು.

ಹಿಂದಿನ ಮುಕ್ತಕದಲ್ಲಿ ಹೇಳಿದ ಆ ಪರತತ್ವವೆ 'ಇಂದ್ರಿಯಾತೀತ'. ಅದನ್ನು ಅರಿಯಬೇಕಾದರೆ ಅದರ ಮಾಧ್ಯಮದಲ್ಲೇ ನೋಡಬೇಕು. ಈ ಜಗತ್ತಿನ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳ ಅರಿಯಲು, ನಮ್ಮ ಇಂದ್ರಿಯಗಳು ಸಹಾಯಮಾಡುತ್ತವೆ. 'ಇಹ' ತತ್ವದಿಂದಾದ ಇವುಗಳು ಇಹವನ್ನು ಅರಿಯಲುಪಯೋಗಿ, ಆದರೆ ಪರವನ್ನು ಅರಿಯಲು ನಮ್ಮಲ್ಲಿರುವ ಪರವಸ್ತುವಿನಿಂದಲೇ ಸಾಧ್ಯ. ಆ ಪರವಸ್ತುವೇ 'ಆತ್ಮ. ಹಾಗಾಗಿ ಆತ್ಮದಿಂದ ಮಾತ್ರ ಪರವಸ್ತುವನ್ನು ಕಾಣಲು ಸಾಧ್ಯ. ಆತ್ಮದ ಸಂವಾದ ಆತ್ಮದೊಂದಿಗಾದರೆ ಜಗತ್ತಿನಲ್ಲೆಲ್ಲಾ ಪರತತ್ವದ ಅನುಭವ ನಮಗೆ ಆಗುತ್ತದೆ, ಎಲ್ಲವನ್ನೂ ಮೀರಿ ಇರುವ ಆ ಪರಮ ವಸ್ತುವನ್ನು ಅರಿಯಲು ಮೇಲೇರಬೇಕು, ಈ ಜಗತ್ತಿನ ಸೆಳೆತದ ಹಿಡಿತದಿಂದ ನಮ್ಮನ್ನು ನಾವು ಹಗುರಾಗಿಸಿಕೊಂಡು ಮೇಲೇರಬೇಕು. ಗಟ್ಟಿಯಾದ ಅಂಟಿನಿಂದ ನಮ್ಮನ್ನು ನಾವು ಈ ಜಗತ್ತು ಮತ್ತು ಇದರ ಸೆಳೆತಗಳಿಗೆ ಅಂಟಿಸಿಕೊಂಡು ಬಿಟ್ಟಿದ್ದೇವೆ. ಇದರಿಂದ ಬಿಡಿಸಿಕೊಂಡರೆ ಸಾಧ್ಯ.

ಅದರಿಂದ ಬಿಡಿಸಿಕೊಳ್ಳಲು ನಮ್ಮ ಪೂರ್ವಜರು, ಋಷಿ ಮುನಿಗಳು, ನಮಗೆ ಬೇಕಾದಷ್ಟು ಮಾರ್ಗಗಳನ್ನು ತೋರಿದ್ದಾರೆ. ಯಾವುದೇ ಮಾರ್ಗವನ್ನು ಅನುಸರಿಸಿಕೊಂಡು, ಗುಂಡಪ್ಪನವರು ಹೇಳುವ ಆ 'ತಂದ್ರಿ' ಎಂದರೆ ಸೋಮಾರಿತನವನ್ನು ಬಿಟ್ಟು ತೀವ್ರತಮ ಪ್ರಯತ್ನ ಮಾಡಿದರೆ, ಮತ್ತು ಆ ಪ್ರಯತ್ನ ನಿರಂತರವಾದರೆ ನಮಗೂ ಆ ಪರತತ್ವದ ಅನುಭವವಾಗಬಹುದು. ಬಹಳ ಕಷ್ಟ, ಜನ್ಮಜನ್ಮಾಂತರದಲ್ಲಿ ಹಂತಹಂತವಾಗಿ ಮೇಲೇರಿ ಅಣುವಣುವಾಗಿ ಆಗುವ ಪರತತ್ವದದ ಅನುಭವವನ್ನು ಪಡೆಯಲು ಸಾಧ್ಯ, ಆದರೆ ಪರಿಶ್ರಮ ಬೇಕು, ನಾವೂ ಅಂತಹ ಪರಿಶ್ರಮವನ್ನು ಮಾಡುವಂತಾದರೆ, ಸಾರ್ಥಕ ಬದುಕಿನೆಡೆಗೆ ನಮ್ಮ ಪ್ರಯಾಣ ಸಾಗುತ್ತದೆ.

**ಮುಕ್ತಕ – 694**

**ಬಂಧನಗಳೆಲ್ಲವನು ದಾಟಿ, ಹೊಳೆ ನೆರೆ ನೀರು |**
**ಸಂಧಿಪುದು ಕಡಲ ನೀರ್ಗಳನ್ ಅಂತು ಜೀವನ್ ||**
**ಇಂದ್ರಿಯದ ಕಟ್ಟುಗಳ ಮೀದಿರ್ಕ್ಷೆಯೋಟದಿಂ |**
**ಸಂದರುಶಿಪನು ಪರನ - ಮಂಕುತಿಮ್ಮ ||**

ಬಂಧನಗಳೆಲ್ಲವನು=ಬಂಧನಗಳ+ಎಲ್ಲವನು, ಮೀದಿರ್ಕ್ಷೆಯೋಟದಿಂ=ಮೀರ್ದು+ಈಕ್ಷೆ+ಓಟದಿಂ, ಈಕ್ಷೆ =ನೋಡುವುದು, ಸಂದರುಶಿಪನು=ಸಂದರ್ಶಿಸುತ್ತಾನೆ, ಪರನ=ಪರತತ್ವವನ್ನು, ಪರಮಾತ್ಮನನ್ನು

ಹೇಗೆ ಕೆರೆ ತುಂಬಿ ಹರಿಯುವ ನೀರು ತನಗೊಡ್ಡುವ ಅಡ್ಡಿಗಳೆಲ್ಲವನ್ನೂ ದಾಟಿ, ಹರಿದು, ತನ್ನ ಗಮ್ಯವಾದ ಕಡಲನ್ನು ಸೇರುವಂತೆ, ಜೀವನೂ ಸಹ, ಪರತತ್ವದ ಮೇಲೆ ಕಣ್ಣಿಟ್ಟು, ಅದನ್ನು ಸೇರುವ ಆತುರದಿಂದ, ಅದನ್ನು ಅರಿಯಲು ಇಂದ್ರಿಯಗಳು ಒಡ್ಡಿದ ಮತ್ತು ಒಡ್ಡಬಹುದಾದ ಎಲ್ಲ ಅಡ್ಡಿಗಳನ್ನೂ ದಾಟಿ, ಪರತತ್ವದ ದರ್ಶನವನ್ನು ಪಡೆಯುತ್ತದೆ ಎಂದು ನಿಖರವಾಗಿ ಉಲ್ಲೇಖಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮಗೆ ಈ ಜಗತ್ತಿನೊಂದಿಗೆ ಸಂಪರ್ಕವನ್ನು ಕಲ್ಪಿಸಿ, ನಮಗೆ ಇದರಲ್ಲಿ ರಕ್ತಿಯನ್ನು ಬೆಳೆಸಿ, ಇದನ್ನು ಬಿಟ್ಟಿರಲಾಗದಂತಹ ಸ್ಥಿತಿಗೆ ತಳ್ಳುವುದೇ ಈ ಇಂದ್ರಿಯಗಳು. ನಮಗೆ ಪರತತ್ವವನ್ನು ಕಾಣಲಾಗದ ಸ್ಥಿತಿಗೆ ಈ ಇಂದ್ರಿಯಗಳೇ ಕಾರಣ. ಕಣ್ಣಲ್ಲಿ ಕಾಣುವ, ಕಿವಿಯಲ್ಲಿ ಕೇಳುವ, ಸ್ಪರ್ಶದಿಂದನುಭವಿಸುವ, ಜಿ.ಯಿಂದ ರುಚಿ ನೋಡುವ, ಸುಗಂಧವನ್ನಾಘ್ರಾಣಿಸುವ, ಮನಸ್ಸಿನಿಂದ ಆಲೋಚಿಸುವ, ಬುದ್ಧಿಯಿಂದ ಅವಲೋಕಿಸುವ ಎಲ್ಲ ಗುಣಗಳೂ ನಮ್ಮನ್ನು ಈ ಜಗತ್ತಿಗೆ ಅಂಟಿಸಿ ಬಿಟ್ಟಿದೆ. ಹಾಗಾಗಿ ಈ ಇಂದ್ರಿಯಗಳ ಸಹಾಯದಿಂದ ನಾವು ಪರತತ್ವವನ್ನು ಅರಿತುಕೊಳ್ಳಲು ಸಾಧ್ಯವಿಲ್ಲವೆಂದಾಯಿತು. ಈ ಇಂದ್ರಿಯಗಳು ಒಡ್ಡುವ ತಡೆಗಳನ್ನು ಸಂಪೂರ್ಣವಾಗಿ ದಾಟಲಾದರೆ ನಾವು 'ಪರಮನ ದರುಶನ'ವನ್ನು ಪಡೆಯಬಹುದು ಎನ್ನುವುದೇ ಈ ಮುಕ್ತಕದ ಹೂರಣ.

ವಾಚಕರೆ, ನಾವು ನೋಡುವ ಮತ್ತು ಮಾಡುವ ಯಾವುದೇ ಕೆಲಸದಿಂದುಂಟಾಗುವ, ವಸ್ತು, ವಿಷಯ ಅಥವಾ ವ್ಯಕ್ತಿಗಳ ಸಂಪರ್ಕದಿಂದ ನಮಗೆ ಪರತತ್ವದ ದರ್ಶನವಾಗುವುದಿಲ್ಲ. ನಾವು, ಓದುವ ಆಧ್ಯಾತ್ಮದ ಪುಸ್ತಕಗಳು, ಕೇಳುವ ಪ್ರವಚನಗಳು, ಮಾಡುವ ಪೂಜೆ ಪುನಸ್ಕಾರಗಳು, ದಾನ ಧರ್ಮಗಳು, ನಮಗೆ ಪರತತ್ವದ ದರ್ಶನಮಾಡಿಸುವುದಿಲ್ಲ.

ಹಾಗಾಗಿ, ಅವುಗಳನ್ನು ಮಾಡಬಾರದೆಂದು ಹೇಳಲಾಗುವುದಿಲ್ಲ! ಅವುಗಳನ್ನು ಮಾಡುವುದರಿಂದ ಒಂದು ಸಾಮಾಜಿಕ ವ್ಯವಸ್ಥೆಯುಂಟಾಗಿ ನಮ್ಮನ್ನು ಸನ್ಮಾರ್ಗಕ್ಕೆ ಕೊಂಡುಹೋಗಲು ಸಹಾಯವಾಗಬಹುದು. ಅದು ಕೇವಲ ದಾರಿ. ಅದು ಕೇವಲ ಒಂದು ಮಾಧ್ಯಮ. ಅದು ಅಂತಿಮವಲ್ಲ. ಅಲ್ಲಿಂದ ಮುಂದಕ್ಕೂ ಹೋಗಬಹುದು ಅಥವಾ ಹಿಂದಕ್ಕೂ ಬರಬಹುದು. ಅಲ್ಲಿನ ಎಲ್ಲಾ ಕೆಲಸ ಕಾರ್ಯಗಳೂ ಸಹ ಇಂದ್ರಿಯಾನುವರ್ತಿಯಾಗಿಯೇ ಇರುತ್ತವೆಯೇ ಹೊರತು,

(308)

| ಕಗ್ಗರಸಧಾರೆ | ತೃತೀಯ ನೇತ್ರ 694 698 |
|---|---|

ಇಂದ್ರಿಯಗಳು ನಿರ್ಮಿಸಿರುವ, ಆಸೆ, ವ್ಯಾಮೋಹಗಳ ಕಟ್ಟೆಗಳನ್ನು ದಾಟಿ ಹೋಗಲು ಸಾಧ್ಯವಿಲ್ಲ. ಆದರೆ ಪರತತ್ವದ ದರ್ಶನವಾಗಬೇಕಾದರೆ ಅವುಗಳನ್ನು ಮೀರಿ ಬೆಳೆಯಬೇಕು. ಹಾಗೆ ಬೆಳೆಯಲು ಅಂತರಂಗದ ಬೆಳಕು ಬೇಕು. ಒಳಗಣ್ಣು ತೆರೆದುಕೊಳ್ಳಬೇಕು.

"ಉದ್ಧರೇತ್ ಆತ್ಮಾನಾನಂ" ಎಂದರೆ ತನ್ನ ಉದ್ಧಾರವನ್ನು ಆತ್ಮ ತಾನೇ ಮಾಡಿಕೊಳ್ಳಬೇಕು, ಎಂದು ಗೀತೆ ಹೇಳುತ್ತದೆ. ವೇದವು 'ಹೇ ವಾಜಿನ್ ಮಹಿಮಾ ತೇ ಅನೇನ, ನ ಸನ್ನ' ಎಂದು ಹೇಳುತ್ತಾ, "ಹೇ ಆತ್ಮವೇ, ನಿನ್ನಲ್ಲೇ ಶಕ್ತಿಯುಂಟು, ನಿನ್ನ ಶಕ್ತಿ ನಿನ್ನಿಂದಲೇ ವೃದ್ಧಿಯಾಗುತ್ತದೆಯೇ ಹೊರತು ಅನ್ಯರ ಶ್ರಮ ಮತ್ತು ಸಾಧನೆಯಿಂದಲ್ಲ' ಎನ್ನುತ್ತದೆ. ಹಾಗಾಗಿ ಪರತತ್ವವನ್ನು ಕಾಣುವ ನಮ್ಮ ಪ್ರಯತ್ನಗಳಿಗೆ ಇಂದ್ರಿಯಗಳು ಒಡ್ಡುವ ಅಡೆ-ತಡೆಗಳನ್ನು ನಾವೇ ದಾಟಬೇಕು, ಆ ಪ್ರಯತ್ನಕ್ಕೆ ನಮ್ಮದೇ ಶಕ್ತಿ, ಯುಕ್ತಿಗಳು ಕಾರಣವಾದಾಗ, ನಮ್ಮ ಒಳಗಣ್ಣು ತೆರೆದುಕೊಂಡರೆ, ನಮಗೆ 'ಪರತತ್ವ'ದ ದರ್ಶನವಾಗುತ್ತದೆ. ರಂಜಕವಾದ ಈ ಜಗತ್ತಿನ ಅಂಟನ್ನು ಬಿಡಿಸಿಕೊಂಡು, ಮಾನ್ಯ ಗುಂಡಪ್ಪನವರು ಹೇಳುವಂತೆ "ಪರನ ಸಂದರುಶಿಸಲು ನಾವು ಪ್ರಯತ್ನಪಟ್ಟರೆ, ಸಾರ್ಥಕ ಬದುಕಿನೆಡೆಗೆ ಹೆಜ್ಜೆಯಿಟ್ಟಂತಾಗುತ್ತದೆ. ಅಂತಹ ಪ್ರಯತ್ನವನ್ನು ನಾವೂ ಸಹ ಮಾಡೋಣವೆ?

**ಮುಕ್ತಕ – 695**

**ದ್ವಂದ್ವಲೋಕವನಕ್ಷಿಯುಗದೆ ತೊರೆದು ತ್ರ್ಯಕ್ಷ- |**
**ನೊಂದರಿಂ ಮಾಯೆಯಾಟವ ಮೀರುವಂತೆ ||**
**ಇಂದ್ರಿಯಾತೀತದರ್ಶನಕೆ ಬೇರೊಂದಕ್ಷಿ |**
**ಸಂದಾನವನು ಗಳಿಸೋ - ಮಂಕುತಿಮ್ಮ ||**

ದ್ವಂದ್ವಲೋಕವನಕ್ಷಿಯುಗದೆ=ದ್ವಂದ್ವಲೋಕವನ್+ಅಕ್ಷಿ+ಯುಗದೆ, ತ್ರ್ಯಕ್ಷನೊಂದರಿಂ=ತ್ರ್ಯಕ್ಷನ್+ಒಂದರಿಂ,
ಮಾಯೆಯಾಟವ=ಮಾಯೆಯ+ಆಟವ, ಬೇರೊಂದಕ್ಷಿ =ಬೇರೆ+ಒಂದು+ಅಕ್ಷಿ
ಮೊರೆದು=ಕಾಪಾಡಿ, ತ್ರ್ಯಕ್ಷನ್=ಮದನ, ಕಾಮ. ಅಕ್ಷಿ=ಕಣ್ಣು, ಸಂದಾನವನು=ಹೊಂದಾಣಿಕೆಯನ್ನು

ಕೋಟ್ಯಾಂತರ ದ್ವಂದ್ವಗಳಿಂದ ಕೂಡಿದ ಈ ಲೋಕವನ್ನು ತನ್ನೆರಡು ಕಣ್ಣುಗಳಿಂದ ನೋಡುತ್ತಾ ಕಾಪಾಡಿ, ಮಾಯೆಯಾಟದಿಂದ ಉಂಟಾಗುವ ಕಾಮನನ್ನು ಅಥವಾ ಮನ್ಮಥನನ್ನು ತನ್ನ ಮೂರನೆಯ ಕಣ್ಣಿಂದ, ಆ ಪರಮಶಿವ ಸುಟ್ಟಂತೆ, ಇಂದ್ರಿಯಗಳಿಗೆಟುಕದರ ದರ್ಶನಕೆ ನಿನ್ನಲ್ಲಿರುವ ವಿವೇಕದ ಅಥವಾ ಜ್ಞಾನದ

ಕಣ್ಣನ್ನು, ಮನಸ್ಸು ಬುದ್ಧಿಗಳೊಂದಿಗೆ ಅನುಸಂಧಾನ ಮಾಡಿಕೊ ಎಂದು ಆದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಕಣ್ಣಿಗೆ ಕಾಣುವ ಹೊಲಸನ್ನು ನಮ್ಮೆರಡು ಕಣ್ಣುಗಳಿಂದ ನೋಡಿ, ಗುಡಿಸಿ ತೆಗೆದು ಹಾಕಿಬಿಡಬಹುದು. ಕಣ್ಣಿಗೆ ಕಾಣದೆ, ಅಂತರಂಗದಲ್ಲಿ ಅಡಗಿ ಕುಳಿತು, ಮಾಯಾ ಪ್ರೇರಿತವಾಗಿ ನಮಗರಿವಿಲ್ಲದಂತೆಯೇ, ತುಕ್ಕು ಕಬ್ಬಿಣವನ್ನೂ ತಿಂದುಬಿಡುವಂತೆ, ನಮ್ಮನ್ನು ಪೀಡಿಸುವ ಕಾಮ, ಕ್ರೋಧಾದಿಗಳನ್ನು ನಮ್ಮೊಳಗಿಂದ ತೊಳೆದುಬಿಡಲು ಬೇರೊಂದು ಅಕ್ಷಿ ಸಂದಾನವನು ಗಳಿಸೊ' ಎಂದು ಗುಂಡಪ್ಪನವರು ಹೇಳಿದಂತೆ ಅರಿವಿನ, ಜ್ಞಾನದ ಕಣ್ಣನ್ನು ನಮ್ಮೊಳಗೇ ನಾವೇ ಬೆಳಗಿಸಿಕೊಳ್ಳಬೇಕು.

“ಅರಿಷಡ್ವರ್ಗ'ಗಳೆಂದೇ ಕರೆಯಲ್ಪಡುವ, ನಮ್ಮ ಕಣ್ಣಿಗೆ ಕಾಣದ ಕಾಮ, ಕ್ರೋದಾದಿಗಳನ್ನು, ನಮ್ಮ ಮನಸ್ಸಿನಿಂದ ತೊಡೆದುಹಾಕಲು, ಅದನ್ನು ನಮ್ಮ ಅಂತಃಚಕ್ಷುವಿನಿಂದ ಗುರುತು ಹಿಡಿದು ಅಂತರಂಗದ ಕತ್ತಲೆಯನ್ನು ಜ್ಞಾನದ ಬೆಳಕಿನಿಂದ ಹೊಡೆದೋಡಿಸಬೇಕು ಎನ್ನುವುದು 'ತತ್ವ'. 'ಶಿವ' ಎಂದರೆ ಮಂಗಳಕರವಾದದ್ದು ಎಂದು ಅರ್ಥ. 'ಶಂ ಕರೋತಿ ಇತಿ ಶಂಕರಃ 'ಮಂಗಳವನ್ನುಂಟುಮಾಡುತ್ತಾನಾದ್ದರಿಂದ ಶಂಕರ,ಎನ್ನುವುದು ಶಂಕರ ಎನ್ನುವ ಪದದ ಅರ್ಥ. ಒಳಗಿನ ಜ್ಞಾನವೇ 'ಶಂಕರ' ರೂಪ. ಆ ಜ್ಞಾನದ ಉದ್ದೀಪನವೇ ಶಿವನ ಮೂರನೆಯ ಕಣ್ಣನ್ನು ತೆರೆದಹಾಗೆ. ಆದ್ದರಿಂದ ನಮ್ಮೊಳಗಿನ 'ಜ್ಞಾನದ ಕಣ್ಣನ್ನು ತೆರೆದು, ನಮಗೆ ಅಮಂಗಳಕಾರಿಯಾದ ಕಾಮಾದಿಗಳನ್ನು ಹೊರಹಾಕಿದರೆ ಪರತತ್ವದ ದರ್ಶನವಾಗುತ್ತದೆಂಬುದೇ ಈ ಮುಕ್ತಕದ ಗುಹ್ಯಾರ್ಥ.

ತತ್ವವನು ಹೇಳುವುದು ಬಹಳ ಸುಲಭ, ಅರ್ಥಮಾಡಿಕೊಳ್ಳುವುದು ಸ್ವಲ್ಪ ಕಷ್ಟ ಆದರೆ, 'ಅನುಷ್ಠಾನಕ್ಕೆ ತರುವುದು' ಅತೀ ಕಷ್ಟ, ಸೆಳೆತಗಳ ಈ ಜಗತ್ತಿನಲ್ಲಿ 'ಹರಿದಾಡುವಂತಾ ಮನವ ನಿಲಿಸುವುದು ಬಲು ಕಷ್ಟ ಎಂದು ಹರಿದಾಸರು ಹೇಳಿದ ಹಾಗೆ, ಮನೋ ನಿಗ್ರಹ ಬಹಳ ಕಷ್ಟದ ಕೆಲಸ. ಆದರೆ ನಮ್ಮ ಮನಸ್ಸನ್ನು ನಾವೇ ತಹಬಂದಿಗೆ ತಂದುಕೊಂಡು, ನಮ್ಮ ಉದ್ಧಾರವನ್ನು ನಾವೇ ಮಾಡಿಕೊಳ್ಳಬೇಕಾಗಿರುವುದರಿಂದ, ಸ್ವಪ್ರಯತದಿಂದಲೇ 'ಪರತತ್ವ'ದ ದರ್ಶನವನ್ನು ಪಡೆಯುವ ಪ್ರಯತ್ನವನ್ನು ನಿರಂತರವಾಗಿ ಮಾಡಲು ನಮಗೆ ಸಾಧ್ಯವಾದರೆ, ಸಾರ್ಥಕ ಬದುಕಿನ ಮೊದಲ ಹೆಜ್ಜೆಯಾಗುತ್ತದೆ. ಅಂತಹ ಹೆಜ್ಜೆ ನಾವಿಡುವಂತಾದರೆ 'ಸುಫಲ' ಖಂಡಿತ ನಮಗೆ ಸಿಗುವುದು.

**ಮುಕ್ತಕ-696** **ಶರಧಿಯನೀಜುವನು, ಸಮರದಲ್ಲಿ ಕಾದುವನು |**

**ಗುರಿಯೊಂದನುಳಿದು ಪೆರತೊಂದ ನೋಡುವನೆ? ||**

**ಮರೆಯುವನು ತಾನೆಂಬುದನೆ ಮಹಾವೇಶದಲಿ |**

**ನಿರಹಂತೆಯದು ಮೋಕ್ಷ - ಮಂಕುತಿಮ್ಮ ||**





ಶರಧಿಯನೀಜುವನು= ಶರಧಿಯನು+ಈಜುವನು, ಗುರಿಯೊಂದನುಳಿದು=ಗುರಿಯನು+ಒಂದನು+ಉಳಿದು, ಪೆರತೊಂದ=ಪೆರತು+ಒಂದ, ತಾನೆಂಬುದನೆ= ತಾನ್+ಎಂಬುದನೆ, ನಿರಹಂತೆಯದು=ನಿರ್+ಅಹಂತೆ ಶರಧಿ=ಕಡಲು ಪೆರತು=ಮತ್ತೊಂದು, ಬೇರೊಂದು, ನಿರಹಂತೆ = (ಅಹಂತೆ=ಅಹಂಕಾರ) ಅಹಂಕಾರವಿಲ್ಲದ.

ಕಡಲನ್ನು ಈಜುವವನು ಅಥವಾ ಯುದ್ಧದಲ್ಲಿ ಹೋರಾಡುವವನು, ತನ್ನ ಗುರಿಯನ್ನು ಮಾತ್ರ ನೋಡುತ್ತಾನಲ್ಲದೆ ಬೇರೊಂದನ್ನು ನೋಡುವನೆ? ಆ ಸ್ಥಿತಿಯಲ್ಲಿ ಅವನಿಗಿರುವ ಮಹಾ ಆವೇಶದಲ್ಲಿ ಅವನು ತನ್ನನ್ನೇ ತಾನು ಮರೆತು ಈಜುತ್ತಾನೆ ಅಥವಾ ಹೋರಾಡುತ್ತಾನೆ. ಹಾಗೆಯೇ ಪರತತ್ವವನು ಅರಿಯಲು ಇಚ್ಚಿಸುವವನು 'ಅಹಂ'ಕಾರವನ್ನು ಮರೆತು, ತೊರೆದು ಏಕದೃಷ್ಟಿಯಿಂದ ಮುನ್ನಡೆದಾಗ ಅವನಿಗೆ ಮೋಕ್ಷವುಂಟಾಗುತ್ತದೆ ಎಂದು, ಉಲ್ಲೇಖ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಾವು ಯಾವುದಾದರೂ ಒಂದು ಕೆಲಸವನ್ನು ಮಾಡುವಾಗ, ಅದು ಸಂಪೂರ್ಣರೀತಿಯಲ್ಲಿ, ಸಮರ್ಪಕವಾಗಿ ಆಗಬೇಕಾದರೆ, ಆ ಕೆಲಸದಲ್ಲಿ ನಾವು ನಮ್ಮನ್ನೇ ತೊಡಗಿಸಿಕೊಳ್ಳಬೇಕು. ತೊಡಗಿಸಿಕೊಳ್ಳುವುದೆಂದರೆ ಆ ಕೆಲಸದಲ್ಲಿ ತನ್ಮಯತೆಯನ್ನು ತೋರುವುದು, ಆ ಕೆಲಸವನ್ನು ಮಾಡುವ ಮತ್ತು ಅಂತಿಮ ಹಂತಕ್ಕೆ ತಲುಪುವ ಮತ್ತು ಉದ್ದೇಶಿತ ಫಲಿತಾಂಶವನ್ನು ಪಡೆಯುವ ದಿಕ್ಕಿನಲ್ಲಿ ನಮ್ಮ ಮನಸ್ಸನ್ನು ತೊಡಗಿಸಿಕೊಳ್ಳುವುದೇ, ಏಕಾಗ್ರಚಿತ್ತಕ್ಕೆ ಪರಿಭಾಷೆ, ಹಾಗೆ, ನಾವು ಯಾವುದಾದರೂ ಕೆಲಸವನ್ನು ಮಾಡುವಾಗ ಆ ಕೆಲಸದಲ್ಲಿ ನಿಮಗ್ನರಾಗಿ ನಮ್ಮನ್ನೇ ನಾವು ಮರೆಯಬೇಕು.

ನಾನು ಮಾಡುತ್ತಿದ್ದೇನೆ ಎನ್ನುವ 'ಅಹಂ' ಇಲ್ಲದೆ ಮಾಡಿದಾಗ ಅದು ಅಪೇಕ್ಷೆಯಿಲ್ಲದ ಸತ್ಪ್ರಯತ್ನವಾಗುತ್ತದೆ. 'ಈ ಕೆಲಸವನ್ನು ಸರಿಯಾಗಿ ಮಾಡಿ ಮುಗಿಸಬೇಕು ಎನ್ನುವ ಒಂದು ತೀವ್ರತಮ ಭಾವವಿರುತ್ತದೆ. ಇದನ್ನೇ 'ಮಹಾವೇಶದಲಿ' ಎಂದಿದ್ದಾರೆ ಡಿವಿಜಿ.

ಯಾವುದೇ ಕೆಲಸದಲ್ಲಿ 'ನಾನು' 'ನನ್ನದು' ಎನ್ನುವ ಮೋಹದ ಅಥವಾ ಮಮಕಾರದ ಭಾವಗಳು ಬಂದಲ್ಲಿ, ಆ ಕಾರ್ಯ ಸಮರ್ಪಕವಾಗಿ ಆಗುವುದಿಲ್ಲ. ಅದರ ರಹಿತವಾದ ಮನೋಭಾವನ್ನು ನಾವು ಆ ಪರತತ್ತ್ವವನ್ನು ಅರಿಯುವ ಪ್ರಯತ್ನದಲ್ಲಿಯೂ ತೋರಿದರೆ, ಆಗ ಮೋಕ್ಷ ಸಿಗುವುದು ಎನ್ನುತ್ತಾರೆ ಮಾನ್ಯ ಗುಂಡಪ್ಪನವರು. ಅರ್ಜುನನಿಗೆ ಪಕ್ಷಿಯ ಕಣ್ಣು ಮಾತ್ರ ಕಂಡು, ಗುರಿ ಭೇದಿಸಿದಂತೆ. ನಮಗೂ ನಮ್ಮ ಗಮ್ಯ ಮಾತ್ರ ಕಂಡಾಗ ನಮ್ಮ ಬಾಳಿನ ಗುರಿಯನ್ನು ನಾವೂ ಭೇದಿಸಬಹುದು. ನಿರ್ಮೋಹತ್ವೆ ನಿಶ್ಚಲ ತತ್ವಂ, ನಿಶ್ಚಲ ತತ್ವೆ ಜೀವನ್ಮುಕ್ತಿ:' ಎನ್ನುತ್ತಾರೆ ಶಂಕರ ಭಗವತ್ಪಾದರು. ಅಂದರೆ ನಾವು ಮೋಹವನ್ನು ಬಿಟ್ಟರೆ, ಆ ಪರತತ್ವ ನಮ್ಮಲ್ಲಿ ನಿಶ್ಚಲವಾಗಿ, ಮಾನ್ಯ ಗುಂಡಪ್ಪನವರು ನಿರಹಂತೆಯದು ಮೋಕ್ಷ "ಎಂದು ಹೇಳುವಂತೆ ನಾವು ಮುಕ್ತರಾಗಬಹುದು.

ಯಾವುದೇ ಕೆಲಸದಿಂದ ನಮಗೆ ಮುಕ್ತಿ ಸಿಗಬೇಕಾದರೆ ಅದನ್ನು ಸಮರ್ಪಕವಾಗಿ ಮಾಡಿ ಮುಗಿಸಿರಬೇಕು. ಮಾಡಿದ ಸಂತೋಷ, ಮಾಡಲಾಗಲಿಲ್ಲ ಎಂಬ ಕೊರಗು, ಅನ್ಯರಿಂದಾಯಿತು ನನ್ನಿಂದಾಗಲಿಲ್ಲವಲ್ಲ ಎಂಬ ಈರ್ಶ್ಯಾಸಹಿತ ಕುಪಿತತೆ ಇವೆಲ್ಲ ಇಲ್ಲದೆ, ನಾವು ಕಾರ್ಯವನ್ನು ಸಾಧಿಸಲಾದರೆ ಮಾತ್ರ ನಮಗೆ ಮೋಕ್ಷ ಸಿಗುವುದು ಎನ್ನುವುದೇ ಈ ಮುಕ್ತಕದ ಹೂರಣ.

**ಮುಕ್ತಕ – 697**

**ಉತ್ತಮತೆಯಿಂತೆಂದು ಮತಿಗೆ ತೋರ್ದೊಡದೇನು |**
**ವೃತ್ತಿಯೊಳ್ ಅದೂರಿ ಸ್ವಭಾವಾಂಶವಾಗಲ್ ||**
**ಮತ್ತಮತ್ತನುವರ್ತಿಸುತ, ಭಂಗವಾದಂದು |**
**ಯತ್ನಿಸಿನ್ನುಂ ಮರಳಿ - ಮಂಕುತಿಮ್ಮ ||**

ಉತ್ತಮತೆಯಿಂತೆಂದು=ಉತ್ತಮತೆ+ಇಂತು+ಎಂದು, ತೋರ್ದೊಡದೇನು=ತೋರ್ದೊಡೆ+ಅದು+ಏನು, ಅದೂರಿ=ಅದು+ಊರಿ, ಸ್ವಭಾವಾಂಶವಾಗಲ್=ಸ್ವಭಾವ+ಅಂಶ+ಆಗಲ್, ಮತ್ತಮತ್ತನುವರ್ತಿಸುತ=ಮತ್ತೆ+ಮತ್ತೆ+ಅನುವರ್ತಿಸುತ, ಭಂಗವಾದಂದು=ಭಂಗವು+ಆದಂದು, ಯತ್ನಿಸಿನ್ನುಂ=ಯತ್ನಿಸು+ಇನ್ನುಂ, ಮತಿಗೆ+ಬುದ್ಧಿಗೆ, ತೋರ್ದೊಡೆ=ತೋರಿದರೆ, ಊರಿ=ಆಳಕ್ಕಿಳಿದು, ಅನುವರ್ತಿಸುತ=ಮಾಡುತ್ತಾ, ಬಂಗವು= ತೊಡಕು.

ಪರತತ್ವವನ್ನು ಕಂಡುಕೊಳ್ಳಲು ನಾವು 'ನಿರಹಂತೆ' ಯನ್ನು ಬೆಳೆಸಿಕೊಳ್ಳಬೇಕು ಎಂದು ಹಿಂದಿನ ಮುಕ್ತಕದಲ್ಲಿ ಅರಿತೆವು. ಆದರೆ ನಿರಹಂತೆ' ಒಳ್ಳೆಯದು ಎಂದು ಕೇವಲ ಬುದ್ಧಿಗೆ ಅವಗಾಹನೆಯಾದರೇನು ಫಲ? ಅದನ್ನು ನಾವು ಕಾರ್ಯರೂಪಕ್ಕೆ ತಂದು, ಅದು ನಮ್ಮ ಸ್ವಭಾವವಾಗಲು, ನಮ್ಮ ಪ್ರಯತ್ನಗಳಿಗೆ ತೊಡಕುಗಳು ಬಂದರೆ, ಅದನ್ನು ನಮ್ಮ ಸ್ವಾಭಾವವಾಗಿಸಿಕೊಳ್ಳಲು ಮತ್ತೆ ಮತ್ತೆ ಪ್ರಯತ್ನವನ್ನು ಮಾಡು ಎಂದು, ಆದೇಶವನ್ನು ನೀಡಿದ್ದಾರೆ ನಮಗೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮಗೆ ಬದುಕಿನುದ್ದಕ್ಕೂ ಯಾವುದು ಸರಿ ಯಾವುದು ತಪ್ಪು ಎಂಬುದರ ಪ್ರಜ್ಞೆ ಇರುತ್ತದೆ. ಒಂದು ವಿಷಯ ಸರಿ ಎಂದು ಕಂಡು ಬರುತ್ತದೆ. ಅದನ್ನು ನಾವೂ ಸಹ ಒಪ್ಪಿಕೊಳ್ಳುತ್ತೇವೆ, ಅದನ್ನು ನಮ್ಮ ಬದುಕಿನಲ್ಲೂ ಅಳವಡಿಸಿಕೊಂಡರೆ ಉತ್ತಮವಾಗಿರುತ್ತದೆ ಎಂದು ಅನಿಸುತ್ತದೆ. ಆದರೆ ಇಂದ್ರಿಯಪ್ರೇರಿತವಾದ ನಮ್ಮ ಮನಸ್ಸು, ಜಗತ್ತಿನ ಸೆಳೆತಗಳಿಗೊಳಗಾಗಿ, ವ್ಯಾಮೋಹದ ಬಲೆಗೆ ಸಿಕ್ಕು ಅವುಗಳನ್ನು ಅಳವಡಿಸಿಕೊಳ್ಳುವ ಪ್ರಯತ್ನವನ್ನು ಮಾಡುವುದಿಲ್ಲ. ಕೆಲವು ಬಾರಿ ಪ್ರಯತ್ನವನ್ನು ಮಾಡುತ್ತೇವೆ, ಆ ದಾರಿಯಲ್ಲಿ ಎದುರಾಗುವ ಕಷ್ಟಗಳೆಂಬ ತಡೆಗಳಿಂದ ಎದೆಗುಂದಿ ಅರ್ಧಕ್ಕೇ ಬಿಟ್ಟುಬಿಡುತ್ತೇವೆ, ಸೋಲುತ್ತೇವೆ. ಇದನ್ನು ಮನಗಂಡು ಮಾನ್ಯ ಗುಂಡಪ್ಪನವರು “ಭಂಗವಾದಂದು ಯತ್ನಿಸಿನ್ನುಂ ಮರಳಿ” ಎಂದು ನಮಗೆ ಸೂಚಿಸಿ, ಆದೇಶಿಸಿದ್ದಾರೆ. ನಾವು ಮನಗಂಡ ಸತ್ಯ ಮತ್ತು ಸತ್ವವನ್ನು

ನಮ್ಮದಾಗಿಸಿಕೊಳ್ಳಬೇಕಾದರೆ ಒಂದು ಮಾರ್ಗವುಂಟು. ನಮ್ಮ ನಂಬಿಕೆ ಧೃಡವಾಗಿರಬೇಕು, ನಮ್ಮ ಪ್ರಯತ್ನ ನಿರಂತರವಾಗಿರಬೇಕು, ಆ ಸತ್ವವನ್ನು ನಮ್ಮ ಬದುಕಿಗೆ ಅಳವಡಿಸಿಕೊಳ್ಳಬೇಕು, ಆ ಸತ್ವದ ನಿರಂತರ ಸಾಂಗತ್ಯದಿಂದ ಅದು ನಮ್ಮ ಸ್ವಭಾವವಾಗಬೇಕು. ಹಾಗಾದಾಗ ನಮ್ಮ ವೃತ್ತಿ ಮತ್ತು ಪ್ರವೃತ್ತಿಯಲ್ಲೂ ನಮ್ಮ ನಂಬಿಕೆಗಳು ಪ್ರತಿಬಿಂಬಿಸುತ್ತದೆ. ಆಗ ಆ ತತ್ವಗಳು ಮತ್ತು ಸತ್ವಗಳು ನಮ್ಮ ಧರ್ಮವಾಗಿಬಿಡುತ್ತವೆ. ಈ ಹಾದಿಯಲ್ಲಿ ನಮಗೆ ಬಹಳಷ್ಟು ವಿಘ್ನಗಳು ಬರುತ್ತವೆ. ಸಂಸಾರದಲ್ಲಿ ಇರಬೇಕಾದರೆ ಮತ್ತು ನಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾದರೆ ಕಿಂಚಿತ್ 'ಅಹಂತೆ'ಯ





ಅವಶ್ಯಕತೆಯುಂಟು. ಆದರೆ ಅದು ನಮ್ಮ ಸ್ವಭಾವೆಲ್ಲಾ ವ್ಯಾಪಿಸಿಕೊಂಡು, ನಮ್ಮನ್ನು ಅಧೋಗತಿಗೆ ತಳ್ಳುವಂತಹದ್ದಾಗಿರಬಾರದು.

ಎಲ್ಲಿಯತನಕ ನಾವು ಆ ನಿರಹಂತೆ' ಯ ಸ್ಥಿತಿಗೆ ತಲುಪುವುದಿಲ್ಲವೋ, ಎಲ್ಲಿಯ ತನಕ ನಾವು ಮನಗಂಡ ಸತ್ಯ ನಮ್ಮ ಸ್ವಭಾವವಾಗುವುದಿಲ್ಲವೋ ಮತ್ತು ಆ ಸ್ವಭಾವ ನಮ್ಮಲ್ಲಿ ಸ್ಥಿರವಾಗುವುದಿಲ್ಲವೋ ಅಲ್ಲಿಯ ತನಕ ನಿರಂತರ ಪ್ರಯತ್ನ ಮಾಡುತ್ತಲೇ ಇರಬೇಕು. ಪ್ರಯತ್ನವನ್ನೇ ಮಾಡದಿದ್ದರೆ ಅಥವಾ ಮಾಡುವ ಪ್ರಯತ್ನವನ್ನು ಭಂಗವುಂಟಾಯಿತೆಂದು ಅರ್ಧಕ್ಕೇ ಕೈ ಬಿಟ್ಟರೆ, ನಾವು ನಮ್ಮ ಅಹಂಕಾರವನ್ನು ಕಳೆದುಕೊಳ್ಳಲೂ ಸಾಧ್ಯವಿಲ್ಲ, 'ಪರತತ್ವದ' ದರ್ಶನವೂ ಸಾಧ್ಯವಿಲ್ಲ. ಈ ಜಗತ್ತಿನಲ್ಲಿ ನಾವು ಏನನ್ನೇ ಅಪೇಕ್ಷೆಪಟ್ಟರೂ ನಮಗೆ ಅದು ಸಿಗುತ್ತದೆ. ಆ ಅಪೇಕ್ಷೆ ಮತ್ತು ಅದನ್ನು ಸಾಧಿಸುವ ಪ್ರಯತ್ನ ದೃಢ ಮತ್ತು ನಿರಂತರವಾಗಿರಬೇಕು. ಆದರೆ ಏನನ್ನು ಅಪೇಕ್ಷೆಪಡಬೇಕು ಎನ್ನುವುದಕ್ಕೆ ನಮಗೆ ಸ್ವಾತಂತ್ರವುಂಟು, 'ಸತ್ 'ನ್ನು ಅಪೇಕ್ಷಿಸಿದರೆ ಸದ್ಗತಿ 'ಅಸತ್ 'ನ್ನು ಅಪೇಕ್ಷಿಸಿದರೆ ಅಧೋಗತಿ. ಆಯ್ಕೆ ನಮ್ಮದೇ ಅಲ್ಲವೇ?

**ಮುಕ್ತಕ – 698** 

**ಎಡವದೆಯೆ, ಮೈಗಾಯವಡೆಯೆದೆಯೆ ಮಗುವಾರು |**
**ನಡೆಯ ಕಲಿತವನು?8 ಮತಿನೀತಿಗತಿಯಂತು ||**
**ತಡವರಿಸಿ ಮುಗ್ಗರಿಸಿ ಬಿದ್ದು ಮತ್ತೆದ್ದು ಮೈ- |**
**ದಡವಿಕೊಳುವವರೆಲ್ಲ – ಮಂಕುತಿಮ್ಮ ||**

ಮೈಗಾಯವಡೆಯೆದೆಯೆ=ಮೈ+ಗಾಯವ+ ಅಡೆಯೆದೆಯೆ, ಮಗುವಾರು=ಮಗುವು+ಆರು,
ಮತಿನೀತಿಗತಿಯಂತು=ಮತಿನೀತಿಗೆ+ಅಂತು, ಮತ್ತೆದ್ದು=ಮತ್ತೆ+ಎದ್ದು
ಮೈದಡವಿಕೊಳುವವರೆಲ್ಲ= ಮೈ+ದಡವಿ+ ಕೊಳುವವರು+ಎಲ್ಲ.
ಅಡೆಯೆದೆಯೆ=ಪಡೆಯೆದೆಯೇ, ಆರು=ಯಾರು

ನಡೆಯಲು ಪ್ರಯತ್ನಪಡುವ ಪ್ರತಿಯೊಂದು ಮಗುವೂ ತಡವರಿಸಿ, ಎಡವಿ, ಮುಗ್ಗರಿಸಿ, ಬಿದ್ದು ತಾನೇ ನಡೆಯುವುದನ್ನು ಕಲಿಯುವುದು. ಮಗು ಹೇಗೆ ಮತ್ತೆ ಮತ್ತೆ ಬಿದ್ದರೂ ಮೈದಡವಿಕೊಂಡು, ಮೇಲೆದ್ದು ನಡೆಯುವಂತೆ, ರೀತಿ, ನೀತಿಯನ್ನು, ಧರ್ಮ ಮಾರ್ಗವನ್ನು, ಬದುಕಿನ ತತ್ವವನ್ನು ಮತ್ತು ಪರತತ್ವನ್ನರಿಯಲು ಪ್ರಯತ್ನಿಸುವ ಪ್ರತಿಯೊಬ್ಬರೂ, ಅಡೆ ತಡೆ ಎದುರಾದರೂ ಮತ್ತೆ ಮತ್ತೆ ಪ್ರಯತ್ನವನ್ನು ಮಾಡುತ್ತಾರೆ ಎಂದು, ಉಲ್ಲೇಖ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು.

ಜಗತ್ತಿನಲ್ಲಿ ನಮ್ಮನ್ನು ಸನ್ಮಾರ್ಗಕ್ಕೆ ಕೊಂಡುಹೋಗುವ ಮಾರ್ಗದಲ್ಲಿ ನಮ್ಮ ನಡಿಗೆ ಅಷ್ಟು ಸುಲಭವಲ್ಲ.

ಏಕೆಂದರೆ ಅದು ತತ್ವ ಕಣ್ಣಿಗೆ ಕಾಣುವುದಿಲ್ಲ, ಕೇವಲ ಅನುಭವ ವೇದ್ಯ. ಒಂದು ನಿರ್ಧಿಷ್ಟ ದಾರಿಯಿಲ್ಲದೆ ಹಲವಾರು ದಾರಿಗಳು ಮತ್ತು ಆ ದಾರಿಗಳಲ್ಲಿ ಸಾವಿರಾರು ಕವಲು ದಾರಿಗಳು. ಈ ದಾರಿಗಳ ಗೋಜಲಿನಲ್ಲಿ, ಸುಳಿಗಳಲ್ಲಿ ನಾವು ಎತ್ತ ಹೋಗುವುದೆಂಬ ಸಂದೇಹದಿಂದ ನಮ್ಮ ನಡಿಗೆ ಕುಂಠಿತವಾಗುತ್ತದೆ, ನಾವು ಎಡವುತ್ತೇವೆ, ಬೀಳುತ್ತೇವೆ ಮತ್ತೆ ಸಾವರಿಸಿಕೊಂಡು ಎದ್ದರೆ, ಮುಂದುವರೆಯುತ್ತೇವೆ. ನಮ್ಮ ಹಲವಾರು ಪ್ರಶ್ನೆಗಳಿಗೆ ಉತ್ತರವೇ ಸಿಗುವುದಿಲ್ಲ.

ನಮ್ಮ ಪೂರ್ವಜರು ನಮಗೆ ಹಾಕಿಕೊಟ್ಟ ಮಾರ್ಗಗಳು, ಈಗ ತಮ್ಮ ರೂಪವನ್ನು ಬದಲಾಯಿಸಿಕೊಂಡು, ಮೂಲ ತತ್ವದಿಂದ ಸರಿದು ಬಹಳ ದೂರ ಹೋಗಿದೆ. ಇಂದಿನ ರೂಪ, ಮೂಲ ರೂಪದ ಯಾವುದೇ ಛಾಯೆಗಳನ್ನು ಉಳಿಸಿಕೊಂಡಿಲ್ಲ. ಅಷ್ಟೇ ಅಲ್ಲದೆ ಈ ಪರತತ್ವವನ್ನು ಬೋಧಿಸುವವರು, ನಾನಾ ರೀತಿಯ ದಾರಿಗಳನ್ನು ತೋರುತ್ತಾ, ತಮ್ಮ ಮಾರ್ಗವೇ ಎಲ್ಲಕ್ಕಿಂತ ಶ್ರೇಷ್ಟವೆಂದು ಪ್ರತಿಪಾದಿಸುತ್ತಾ ಇರುವಾಗ, ಸಾಮಾನ್ಯ ಜನರಿಗೆ, ತಮ್ಮ ಅಂತರಂಗದಲ್ಲಿ ಶೋಧನೆಮಾಡಿ ತಮ್ಮದೇ ಸತ್ವದಿಂದ ಆ 'ಪರತತ್ವ'ವನ್ನು ಕಂಡುಕೊಂಡು, ತಮ್ಮ ನಂಬಿಕೆಯನ್ನು ದೃಢಪಡಿಸಿಕೊಳ್ಳಲು ಸಾಮರ್ಥ್ಯವಿಲ್ಲದವರು, ಸಾಮಾನ್ಯವಾಗಿ ಅಂತಹ ಬೋಧಕರು ಬೋಧಿಸುವ ದಾರಿಗಳಲ್ಲಿ ನಡೆಯುತ್ತಾರೆ. ಹಾಗೆ ನಡೆಯುವಾಗ ಮತ್ಯಾರೋ ಹೇಳಿದ್ದನ್ನು ಕೇಳಿ, ಆ ಹೇಳುವವನ ವಾಕ್ಚಾತುರ್ಯಕ್ಕೆ ಮರುಳಾಗಿ, ಅವರ ಹಾದಿಯನ್ನು ತುಳಿಯುತ್ತಾರೆ. ಅಂತಹ ಪ್ರಯತ್ನದಲ್ಲಿ ಎಡವುವುದು, ಮುಗ್ಗರಿಸುವುದು, ಬೀಳುವುದು, ಗಾಯ ಮಾಡಿಕೊಳ್ಳುವುದು ತೀರ ಸಹಜ. ಬಹಳಷ್ಟು ಬಾರಿ ಬೇಸತ್ತು ಯಾರನ್ನೂ ನಂಬದ ಸ್ಥಿತಿಗೆ ತಲುಪಿ, ನಡೆಯುತ್ತಿದ್ದ ಹಾದಿಯಿಂದ ವಿಮುಖರಾಗುವುದನ್ನೂ ಕಾಣುತ್ತೇವೆ.

ಇಂತಹ ದ್ವಂದ್ವಗಳ ಅನುಭವ ಆ ಪರಮಾತ್ಮನನ್ನು, ಪರತತ್ವವನ್ನು ಕಾಣಲುಪಕ್ರಮಿಸುವ ಪ್ರತಿಯೊಬ್ಬರಿಗೂ ಆಗುತ್ತದೆ. ಇದು ತೀರ ಸಹಜ ಮತ್ತು ಸ್ವಾಭಾವಿಕ. ಆದ್ದರಿಂದ, ನಮ್ಮ ಚಿಂತನೆಯಿಂದ ನಮ್ಮ ಅಂತರಂಗದಲ್ಲಿ ನಾವು ಕಂಡುಕೊಂಡ ತತ್ವವನ್ನು ದೃಢವಾಗಿ ನಂಬಿ, ಅದನ್ನೇ ಸಾಧಿಸಿ, ನಮಗೆ ಕಂಡ ಸತ್ಯವನ್ನು ನಮ್ಮ ಸ್ವಭಾವದಲ್ಲಿ ಗಟ್ಟಿಯಾಗಿಸಿಕೊಳ್ಳುವುದು ಅತೀ ಉತ್ತಮವಾದ ಕೆಲಸ. “ಅವರವರ ಭಾವಕ್ಕೆ ಅವರವರ ಬಕುತಿಗೆ ಅವರವರ ತೆರನಾಗಿ ಇರುತಿಹನು ಶಿವಯೋಗಿ..... ನರರೇನು ಭಾವಿಸುವರದರಂತೆ ಕಾಣುವನು” ಎಂದಿದ್ದಾರೆ ಶಿವಯೋಗಿಗಳು. ಹಾಗಾಗಿ ನಮ್ಮ ಆಂತರ್ಯದಲ್ಲಿ ನಮ್ಮದೇ ರೀತಿಯಲ್ಲಿ ನಾವು ಪರಮಾತ್ಮನನ್ನು ಕಾಣುವ ಪ್ರಯತ್ನವನ್ನು ಮಾಡಿದರೆ,

ದ್ವಂದ್ವಗಳಿಂದ ಮುಕ್ತರಾಗಿ, ಎಡವದೇ, ಬೀಳದೆ ಮುಂದುವರೆದು ಎಂದೋ ಒಂದು ದಿನ ನಮ್ಮ ಗಮ್ಯವನ್ನು ಸೇರಬಹುದು.

ಮುಕ್ತಕ - 699

ಏಸು ಸಲ ತಪವಗೈದೇಸು ಬನ್ನವನಾಂತು ।
ಕೌಶಿಕಂ ಬ್ರಹ್ಮರ್ಷಿ ಪದಕರ್ಹನಾದನ್ ॥
ಘಾಸಿಪಡುತಿನ್ನೊಮ್ಮೆ ಮತ್ತೊಮ್ಮೆ ಮರಮರಳಿ ।
ಲೇಸಾಗಿಸಾತ್ಮವನು - ಮಂಕುತಿಮ್ಮ ॥





ತಪವಗೈದೇಸು=ತಪವ+ತಪವ +ಗೈದು+ಏಸು, ಬನ್ನವನಾಂತು= ಬನ್ನವನು+ಆಂತು, ಬ್ರಹ್ಮರ್ಷಿಪದಕರ್ಹನಾದನ್=ಬ್ರಹ್ಮರ್ಷಿ+ಪದ+ಅರ್ಹನ್+ಆದನ್, ಘಾಸಿಪಡುತಿನ್ನೊಮ್ಮೆ=ಘಾಸಿಪಡುತ +ಇನ್ನೊಮ್ಮೆ, ಲೇಸಾಗಿಸಾತ್ಮವನು=ಲೇಸು+ಆಗಿಸು+ಆತ್ಮವನು, ಏಸು +ಎಷ್ಟು, ಬನ್ನವನು=ಭಂಗವನು, ಲೇಸು=ಒಳಿತು, ಉತ್ತಮ.

ಕೌಶಿಕನೆಂಬ ಕ್ಷತ್ರಿಯ ರಾಜನು, ವಸಿಷ್ಠ ಮಹರ್ಷಿಯ ಬ್ರಹ್ಮ ತೇಜಸ್ಸಿನ ಬಲವನ್ನು ಕಂಡು ಕ್ಷಾತ್ರಬಲಕ್ಕಿಂತ ಬ್ರಹ್ಮಬಲ' ವೇ ಉತ್ತಮವೆಂದರಿತು, ಅದನ್ನು ಪಡೆಯಲು ತಪಸ್ಸನ್ನು ಮಾಡಿದಾಗ, ಅವನ ತಪಸ್ಸಿಗೆ ಇಂದ್ರಾದಿದೇವತೆಗಳು ಒಡ್ಡಿದ ಹಲವಾರು ಅಡ್ಡಿಗಳನ್ನು ತಡೆದುಕೊಂಡು, ಅವುಗಳೆಲ್ಲವನ್ನು ಮೆಟ್ಟಿ ನಿಂತು, ಮತ್ತೆ ಮತ್ತೆ ತಪವನ್ನು ಮಾಡಿ, ಬ್ರಹ್ಮರ್ಷಿತ್ವವನ್ನು ಪಡೆದನಲ್ಲವೇ? ಹಾಗೆಯೇ, ನೀನೂ ಸಹ ನಿನ್ನ ಆತ್ಮಬಲವನ್ನು ಹೆಚ್ಚಿಸಿಕೊಳ್ಳುವ, ನಿನ್ನ ಪ್ರಯತ್ನಕ್ಕೆ ಬರುವ ಅಡ್ಡಿಗಳನ್ನು ಮೆಟ್ಟಿ ನಿಂತು, ಮತ್ತೆಮತ್ತೆ ಪ್ರಯತ್ನವನ್ನು ಮಾಡಿ, ನಿನ್ನ ಆತ್ಮವನ್ನು ಉತ್ತಮವನ್ನಾಗಿಸಿಕೋ ಎಂದು ಮಾರ್ಗತೋರಿದ್ದಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮುಂದೆ ತನ್ನ ತಪೋಬಲದಿಂದ 'ವಿಶ್ವಾಮಿತ್ರ' ನಾದ ಆ ಕೌಶಿಕನೆಂಬ ರಾಜ, ಬ್ರಹ್ಮರ್ಷಿ ಪಟ್ಟಕ್ಕೇರುವ ಮುನ್ನ, ಅದೆಷ್ಟು ಅಡ್ಡಿಗಳು, ಅಡೆತಡೆಗಳು, ತೊಂದರೆಗಳನ್ನು ಮೀರಿ ನಿಂತದ್ದು ಒಂದು ನಿದರ್ಶನ. ಒಂದು ಕೆಲಸವನ್ನು ಮಾಡಬೇಕಾಗಿ ಬಂದಾಗ, ಮುಂದೆ ಬರಬಹುದಾದ ಕಷ್ಟಗಳನ್ನು ಯೋಚಿಸಿ, ಆ ಕೆಲಸವನ್ನು ಮಾಡಲು ಪ್ರಯತ್ನವನ್ನೇ ಮಾಡದೆ ಇರುವವನು ಅದಮ ', ಕೆಲಸವನ್ನು ಕೈಗೆತ್ತಿಕೊಂಡು ಮಧ್ಯದಲ್ಲಿ ಬಂದಂತಹ ಕಷ್ಟಗಳನ್ನು ಎದುರಿಸಲಾಗದೆ ಮಧ್ಯದಲ್ಲೇ ಕೆಲಸವನ್ನು ಬಿಟ್ಟುಬಿಡುವವನು 'ಮಧ್ಯಮ' ಮತ್ತು ಕೈಗೆತ್ತಿಕೊಂಡ ಕೆಲಸವನ್ನು ಎಷ್ಟೇ ಕಷ್ಟಗಳು, ಅಡ್ಡಿ ಆತಂಕಗಳು ಬಂದರೂ ಛಲಬಿಡದೆ, ಹಿಡಿದ ಕೆಲಸವನ್ನು ಪೂರೈಸುವವನೇ 'ಉತ್ತಮ'ಎಂದು ಕರೆಯಲ್ಪಡುತ್ತಾರೆ.

ಇದೇ ರೀತಿ ಅ ಪರತತ್ವವನ್ನು ಅರಿಯುವ ಹಾದಿಯಲ್ಲೂ, ಬಹಳಷ್ಟು ಜನ ಇಹದ ಬದುಕನ್ನು ಬಿಟ್ಟು ಬೇರೇನೂ ಇಲ್ಲ. ಇದೇ ರಂಜನೀಯವಾಗಿದೆ, ಇನ್ನು ಪರದ ಚಿಂತೆ ನಮಗೇಕೆ' ಎಂದು, ಅದರ ಪ್ರಯತ್ನವನ್ನೇ ಮಾಡುವುದಿಲ್ಲ. ಪರತತ್ವ ಇವರ ಬಳಿಯೇ ಇದ್ದರೂ, ಇವರು ಪರತತ್ವಕ್ಕೆ ದೂರ, ಹಲವರು ಅದರ ಪ್ರಯತ್ನವನ್ನು ಮಾಡುತ್ತಾರೆ, ಆದರೆ ಅವರಲ್ಲಿ ತೀಕ್ಷ್ಣ ಪರಿಶ್ರಮದ ಕೊರತೆ, ಪ್ರಾಪಂಚಿಕ ವಾಸನೆಗಳ ಮತ್ತು ಭಿನ್ನಭಿನ್ನ ಮಾರ್ಗಗಳ ಸೆಳೆತ ಮತ್ತು ಯಾವ ಮಾರ್ಗವನ್ನು ಆಯ್ದುಕೊಳ್ಳಬೇಕು, ಯಾವುದು ಉತ್ತಮ ಎಂದು ನಿರ್ಧರಿಸಲಾಗದೆ 'ಅಯ್ಯೋ, ಇಂತಹ ಕಷ್ಟದ ಹಾದಿ ನಮಗೇಕೆ ಬೇಕು' ಎಂದು, ಅರ್ಧದಲ್ಲೇ ಕೈ ಬಿಡುತ್ತಾರೆ ಅಥವಾ ತುಮುಲಗಳ ನಡುವೆಯೇ ಬದುಕ ಸವೆಸುತ್ತಾರೆ. ಇಂತಹವರು, ಪರತತ್ವವನ್ನು ಪಡೆದೂ ಪಡೆಯದಹಾಗೆ, ಕಂಡೂ ಕಾಣದ ಹಾಗೆ, ಅದನ್ನು ಮುಟ್ಟಿ ಮುಟ್ಟದ ಹಾಗೆ (tangentially) ಇರುತ್ತಾರೆ.ಜನ್ಮಜನ್ಮಾಂತರದಲ್ಲೂ ಇವರ ಪ್ರಯತ್ನ ಹೀಗೇ ಸಾಗಿರುತ್ತದೆ.

ಇನ್ನು ಕೇವಲ ಕೆಲವೇ ಕೆಲವರು ಸರಿಯಾದ ಮಾರ್ಗವನ್ನು ಆಯ್ದುಕೊಂಡು, ಆ ಮಾರ್ಗದಲ್ಲಿ ನಡೆಯಬೇಕಾದ ರೀತಿಯ ಬಗ್ಗೆ ಸೂಕ್ತ ಮಾರ್ಗದರ್ಶನವನ್ನು ಪಡೆದು, ದೃತಿಗೆಡದೆ, ಬರುವ ಎಲ್ಲಾ

ಅಡೆ ತಡೆಗಳನ್ನು ಅನುಭವಿಸಿ, ಅನುಭವವನ್ನು ಪಡೆದು, ಅವುಗಳನ್ನು ಮೆಟ್ಟಿ ನಿಂತು ತಾವು ನಂಬಿದ ಸತ್ಯವನ್ನು ಕಂಡುಕೊಳ್ಳಲು ಸತತ ಪ್ರಯತ್ನವನ್ನು ಮಾಡುತ್ತಾ, ಅಂತರಂಗದಲ್ಲಿ ಸತ್ವವನ್ನು ಬೆಳೆಸಿಕೊಳ್ಳುತ್ತಾ, ಆ ಪರತತ್ವದ ಸತ್ವವನ್ನು ತಮ್ಮ ಒಳಕ್ಕೆ ಇಳಿಸಿಕೊಂಡು, ಆತ್ಮಾನಂದವನ್ನು ಅನುಭವಿಸುತ್ತಾರೆ. ಇದು ಮಾನ್ಯ ಗುಂಡಪ್ಪನವರು 'ಲೇಸಾಗಿಸಾತ್ಮವನು' ಎಂದು ಸೂಚಿಸಿರುವ ಹಾದಿಯ ಪಯಣ. ಪ್ರತಿಯೊಬ್ಬರೂ ಅಂತಹ ಪ್ರಯತ್ನವನ್ನು ಮಾಡಬಹುದು. ನಮಗೆ ದಕ್ಕುವುದು ನಾವು ಮಾಡುವ ಪ್ರಯತ್ನದ ತೀವ್ರತೆಯ ಮೇಲೆ ಅಧಾರಪಟ್ಟಿರುತ್ತದೆ. ಪ್ರಯತ್ನವನ್ನು ನಿರಂತರವಾಗಿ ಮಾಡುತ್ತಿದ್ದರೆ, ಎಂದೋ ಒಂದು ದಿನ ನಾವೂ ಸಹ ಆ 'ಪರತತ್ವದ' ಪೂರ್ಣ ಅನುಭವವನ್ನು ಪಡೆಯಬಹುದು.

**ಮುಕ್ತಕ – 700** **ವಾಸನೆ ವಿವೇಚನೆಗಳೆರಡಕಂ ಸಂಘರ್ಷೆ |**

**ಪ್ರಚೀನಕಂ ಪೌರುಷಕ್ಕಮಿರುವಂತೆ ||**

**ಅಶಾವಿನಾಶಮುಂ ಧೀಶಕ್ತಿಯುದ್ಭವಮುಂ |**

**ಈಶಪ್ರಸಾದದಿಂ - ಮಂಕುತಿಮ್ಮ ||**

ವಿವೇಚನೆಗಳೆರಡಕಂ= ವಿವೇಚನೆಗಳು+ಎರಡಕಂ, ಪೌರುಷಕ್ಕಮಿರುವಂತೆ = ಪೌರುಷಕ್ಕಂ+ಇರುವಂತೆ,
ಅಶಾವಿನಾಶಮುಂ=ಅಶಾ+ವಿನಾಶಮುಂ, ಧೀಶಕ್ತಿಯುದ್ಭವಮುಂ=ಧೀ+ಶಕ್ತಿಯ=ಉದ್ಭವಂ,
ಸಂಘರ್ಷ=ಹೋರಾಡಿದರೆ, ಪ್ರಾಚೀನಕಂ=ಹಿಂದಿಂದ ಬಂದ, ಧೀಶಕ್ತಿ=ವಿವೇಕದ ಶಕ್ತಿ,
ಈಶಪ್ರಸಾದದಿಂ=ಭಗವಪೆಯಿಂದ

ನಮ್ಮ ಗುಣಗಳ' ರೂಪದಲ್ಲಿರುವ ವಾಸನೆಗಳು ಮತ್ತು ನಮ್ಮ ವಿವೇಕದ ನಡುವಿನ ಸಂಘರ್ಷದಿಂದ, ಹಿಂದಿನಿಂದ ಬಂದ ನಮ್ಮ ಗುಣಗಳಿಗೂ, ನಮಗಿರುವ ವಿವೇಕದಿಂದ ಕೂಡಿದ ಬುದ್ಧಿಶಕ್ತಿಗೂ ನಡೆಯುವ ಸಂಘರ್ಷದಿಂದ, ನಮ್ಮ ಆಸೆಗಳು ನಶಿಸಿ, ಪರಮಾತ್ಮನನ್ನು ಮತ್ತು ಪರತತ್ವವನ್ನು ಅರಿಯುವ ಶಕ್ತಿಯು ನಮ್ಮಲ್ಲಿ ಆ ಪರಮಾತ್ಮನ ಪ್ರಸಾದದಂತೆ ಸಿಗುತ್ತದೆ ಎಂದು, ಪ್ರಸ್ತಾಪಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಪ್ರತಿಯೊಬ್ಬರೂ ತಮ್ಮ ಪೂರ್ವ ಜನ್ಮದ ಕರ್ಮಗಳಿಂದ ಸಂಚಯಿಸಿದ ಕರ್ಮಶೇಷವನ್ನು ಹೊತ್ತೇ ತರುತ್ತಾರೆ ಮತ್ತು ಇಲ್ಲಿನ ಬದುಕಿನ ಕರ್ಮಾನುಸಾರ ಒಂದಷ್ಟನ್ನು ಗಳಿಸಿಕೊಳ್ಳುತ್ತಾರೆ. ಇವೆರಡರ ಒಟ್ಟು ಮೊತ್ತವೇ ನಮ್ಮ ಈಗಿನ ಗುಣವಾಗುತ್ತದೆ. ನಮ್ಮ ಗುಣಗಳ ಪರಿಚಯ ನಮಗೆ ಆಗುತ್ತಿದ್ದಂತೆ, ನಮ್ಮ ವಿವೇಕ ಅದನ್ನು ಸರಿ ಮತ್ತು ತಪ್ಪು' ಗಳಾಗಿ ಪರಿಗಣಿಸಿ, ಮಾನಸಿಕ ದೃಢತೆಯಿಂದ, ತನಗೆ ಯಾವುದು ಹಿತವೋ ಅದನ್ನು ವೃದ್ಧಿಸಿಕೊಳ್ಳುತ್ತಾ, ಅಹಿತವಾದದ್ದನ್ನು ಬಿಡುವ ಪ್ರಯತ್ನವನ್ನು ಮಾಡಬೇಕು. ಇದೇ 'ವಾಸನೆ ಮತ್ತು ವಿವೇಕಗಳೆ'ದರ ನಡುವಿನ ಸಂಘರ್ಷ. ಈ ಸಂಘರ್ಷದಲ್ಲಿ ವಿವೇಕದ ಆಧಿಕ್ಯದಿಂದ

(316)

ಕಗ್ಗರಸಧಾರೆ ಎರಡು ಕೋಣೆಗಳು 699 -700

'ಸತ್' ಒಳಗೆ ತುಂಬಿಕೊಳ್ಳುತ್ತಾ ಹೋದಂತೆ 'ಅಸತ್' ನಮ್ಮಿಂದ ದೂರವಾಗಿ, ಜಗತ್ತಿನ ವಸ್ತು, ವಿಷಯ ಮತ್ತು ವ್ಯಕ್ತಿಗಳ ಮೇಲಿನ ಆಸೆ ನಾಶವಾಗುತ್ತದೆ. ಇದನ್ನೇ ಮಾನ್ಯ ಗುಂಡಪ್ಪನವರು “ಅಶಾವಿನಾಶಮುಂ ಧೀಶಕ್ತಿಯುದ್ಭವಮುಂ” ಎಂದಿದ್ದಾರೆ.

ಕೆಲವರಿಗೆ ತಮ್ಮ ಗುಣಗಳ ವಿಶ್ಲೇಷಣೆ ಮಾಡಿಕೊಳ್ಳಬೇಕೆಂಬ ಇಚ್ಛೆಯೇ ಉದ್ಭವವಾಗುವುದಿಲ್ಲ. ಹಾಗೆ ಉದ್ಭವವಾದರೂ ಆ ಗುಣಗಳಲ್ಲಿರುವ ಕೆಡುಕನ್ನು ಗುರುತಿಸಿಕೊಂಡು, ಸುಧಾರಿಸಿಕೊಳ್ಳುವ ಪ್ರಯತ್ನವನ್ನೇ ಮಾಡುವುದಿಲ್ಲ. ಹಾಗೆ ಪ್ರಯತ್ನ ಪಟ್ಟರೂ ಈ 'ವಾಸನೆ ಮತ್ತು ವಿವೇಕ' ಗಳ ನಡುವಿನ ಘರ್ಷಣೆಯಲ್ಲಿ ವಾಸನೆಗಳ ಮೇಲುಗೈಯಾದರೆ, ಆತ್ಮೋದ್ಧಾರದ ಪ್ರಯಾಣ ಕುಂಠಿತವಾಗುತ್ತದೆ. ಸತತ ಸತ್ಪ್ರಯತ್ನದಿಂದ ಈ ಘರ್ಷಣೆಯಲ್ಲಿ ವಾಸನೆಗಳು ನಶಿಸಿ, ಧೀ ಶಕ್ತಿ ಅಧಿಕವಾದರೆ, ಆಗ ನಮ್ಮ ಆಸೆಗಳು ಮತ್ತು ವಾಸನೆಗಳು ನಾಶವಾಗಿ, ನಮ್ಮ ಅಧ್ಯಾತ್ಮಿಕ ಪ್ರಯಾಣ ಸುಗಮವಾಗುತ್ತದೆ. ಇದು ಒಂದು ಸಂಘರ್ಷ, ನಿರಂತರ ಮತ್ತು ಜನ್ಮಜನ್ಮಾಂತರದ ಸಂಘರ್ಷ. ಪ್ರತಿ ಕ್ಷಣವೂ ನಮ್ಮಲ್ಲಿ, ನಮಗೆ ಅರಿವಿಲ್ಲದಂತೆ ನಡೆಯುವ ಸಂಘರ್ಷ. ಆದರೆ ಅರಿತು ಹೋರಾಡಿ ಗೆದ್ದರೆ ಅಧಿಕ ಲಾಭ.

ಈ ಒಳಿತು ಕೆಡುಕಿನ, ವಾಸನೆ ಮತ್ತು ಧೀ ಶಕ್ತಿಗಳ ನಡುವಿನ ಈ ಸಂಘರ್ಷಕ್ಕೆ ನಮ್ಮ 'ಇಚ್ಛಾಶಕ್ತಿ'ಯೇ ಇಂಧನ. ನಮ್ಮ ಇಚ್ಛಾಶಕ್ತಿ, ಸ್ವಚ್ಛ, ದೃಢ ಮತ್ತು ನಿರಂತರವಾಗಿದ್ದರೆ, ಆಗ 'ಸತ್ ಚಿತ್ ಆನಂದ ಸ್ವರೂಪನಾದ ಪರಮಾತ್ಮ ನಮ್ಮೊಳಗೇ ಆತ್ಮಸ್ವರೂಪದಲ್ಲಿದ್ದುಕೊಂಡು, ನಮಗೆ ಸಹಾಯಮಾಡುತ್ತಾನೆ. ನಮ್ಮ ಪ್ರಯತ್ನ ಶುದ್ಧ ಮತ್ತು ಪ್ರಾಮಾಣಿಕವಾಗಿದ್ದರೆ, ನಮಗೆ ಈ ಸಂಘರ್ಷದಲ್ಲಿ ಖಂಡಿತ ಜಯವಾಗುತ್ತದೆ. ನಾವು ಪ್ರಯತ್ನಪಡಬೇಕಷ್ಟೇ!

*****

# ಕಗ್ಗ ರಸಧಾರೆ

ಸಂಪುಟ ೩

ಇಂಗ್ಲಿಷಿನಲ್ಲಿ 'ಶೇಕ್ಸ್‌ಪಿಯರ್ ಫಾರ್ ಆಲ್ ಅಕೇಷನ್ಸ್' ಎಂಬ ಮಾತಿದೆ. ನಮ್ಮ ಬದುಕಿನಲ್ಲಿ ಯಾವುದೇ ಸಂದರ್ಭಕ್ಕೂ ಹೊಂದುವ ಸೂಕ್ತವಾದೊಂದು ನಾಣ್ಣುಡಿಯ ರೂಪದ ಸಾಲು ಶೇಕ್ಸ್‌ಪಿಯರನಲ್ಲಿ ಸಿಕ್ಕೇ ಸಿಕ್ಕುತ್ತದೆ ಎನ್ನುವುದು ಅದರ ಅರ್ಥ. ಕನ್ನಡದಲ್ಲಿ ಯಾರಾದರೊಬ್ಬರ ಬಗ್ಗೆ ಅಂಥ ಮಾತನ್ನು ಹೇಳಬಹುದಾದರೆ ಅವರು ಡಿ.ವಿ.ಜಿ. ಮಾತ್ರ. ಡಿ.ವಿ.ಜಿ.ಯವರ ಕೃತಿಶ್ರೇಣಿಯಲ್ಲಿ 'ಮಂಕುತಿಮ್ಮನ ಕಗ್ಗ'ಕ್ಕಿರುವ ಜನಪ್ರಿಯತೆ ಬೇರೆ ಯಾವ ಗ್ರಂಥಕ್ಕೂ ಇಲ್ಲವೆನ್ನಬೇಕು. ನಮ್ಮ ಹಳ್ಳಿಗಳಲ್ಲಿರುವ ಶ್ಯಾನುಭೋಗರಿಗೆ, ಪಟೇಲರಿಗೆ, ಶಾಲಾ ಶಿಕ್ಷಕರಿಗೆ, ಓದು ಬರಹ ಬಲ್ಲ ಸಾಮಾನ್ಯರಿಗೆ, ಅಷ್ಟೇಕೆ ರಾಜಕಾರಣಿಗಳಿಗೆ ಕೂಡ, ಈ ಕೃತಿಯ ಕೆಲವು ಮುಕ್ತಕಗಳಾದರೂ ಬಾಯಿಪಾಠವಾಗಿರುತ್ತದೆ. ಇಷ್ಟು ವ್ಯಾಪಕ ಜನಪ್ರಿಯತೆಗೆ ಕಾರಣವೇನಿರಬಹುದು? 'ಮಂಕುತಿಮ್ಮನ ಕಗ್ಗ'ವನ್ನು ಸೂಕ್ಷ್ಮವಾಗಿ ಓದದಿದ್ದರೆ ನಮಗದು ಸರ್ವಜ್ಞನ ತ್ರಿಪದಿಗಳಂಥ ಒಂದು ನೀತಿಕಾವ್ಯ ಎನ್ನಿಸಿಬಿಡಬಹುದು. ನೀತಿ ಭೋದನೆಯ ಕಾವ್ಯದಲ್ಲಿ ತನ್ನ ಪ್ರತಿಪಾದನೆಯೇ ಸರಿ ಎಂಬ ಧೋರಣೆಯಿರುತ್ತದೆ. ಆದರೆ 'ಮಂಕುತಿಮ್ಮನ ಕಗ್ಗ'ದಲ್ಲಿ ಎಲ್ಲಿಯೂ ಅಂಥ ಧ್ವನಿಯಿಲ್ಲ. ಅಲ್ಲಿರುವುದು ಮಾನವ ಜೀವನ, ಧರ್ಮ, ಸಂಸ್ಕೃತಿಗಳ ಬಗೆಗೆ ಆಳವಾಗಿ ಚಿಂತಿಸಿ, ಸಾರ್ಥಕವಾಗಿ ಬದುಕಿ ಪಡೆದುಕೊಂಡ ಅನುಭವ ಪರಿಪಾಕ. ಜೀವನವನ್ನು ನೈತಿಕ ನೆಲೆಯಲ್ಲಿ ಪರಿಶೀಲಿಸುವ ಈ ಗ್ರಂಥದ ಮುಕ್ತಕಗಳಲ್ಲಿ ಮನುಷ್ಯ ಪ್ರಯತ್ನಕ್ಕೂ ಮೀರಿದ ಶಕ್ತಿಯ ಬಗ್ಗೆ ಜಿಜ್ಞಾಸೆಯಿದೆ, ನಮ್ಮನ್ನು ಚಿಂತನೆಗೆ ಹಚ್ಚುವ ಸನ್ನಾಹವಿದೆ, ಸಂದೇಹವನ್ನು ಹೇಗೋ ಹಾಗೆ ಅಚ್ಚರಿಯನ್ನೂ ಬಿಂಬಿಸುವ ಉದಾರವಾದಿ ಮನೋಧರ್ಮವಿದೆ. ಹಾಗಾಗಿಯೇ ಇದು ನಮ್ಮ ಜನಕ್ಕೆ ಬೇಕು ಅನ್ನಿಸಿದ ಕಾವ್ಯವಾಗಿದೆ.

ನನ್ನ ಮಿತ್ರ ರವಿ ತಿರುಮಲೈ 'ಮಂಕುತಿಮ್ಮನ ಕಗ್ಗ'ಕ್ಕೆ ಮನಸೋತು ಹಲವು ದಶಕಗಳೇ ಕಳೆದಿವೆ. ಜೀವನವೆಂದರೇನು, ವಿಧಿಯೆಂದರೇನು, ಕಷ್ಟ ಸುಖಗಳೇನು, ನಾವು ಸುಸಂಸ್ಕೃತರಾಗುವುದು ಹೇಗೆ, ನಮ್ಮ ಬದುಕು ಹೇಗೆ ಸುಧಾರಿಸೀತು, ಇತ್ಯಾದಿ ಪ್ರಶ್ನೆಗಳನ್ನು ಕುರಿತು ಸದಾ ಚಿಂತಿಸುವ ಒಂದು ಮನಸ್ಸು 'ಮಂಕುತಿಮ್ಮನ ಕಗ್ಗ'ವನ್ನು ತನ್ನದೇ ಅನುಭವದ ಬೆಳಕಿನಲ್ಲಿ ಹೇಗೆ ಪರಿಶೋಧಿಸಬಲ್ಲದೆಂಬುದಕ್ಕೆ ಅವರು ರಚಿಸಿರುವ ಈ 'ಕಗ್ಗ ರಸಧಾರೆ'ಯೇ ಒಂದು ಜ್ವಲಂತ ನಿದರ್ಶನ. ಹಿಂದಿನ ಎರಡು ಭಾಗಗಳಲ್ಲಿದ್ದಂತೆ ಈ ಮೂರನೆಯ ಭಾಗದಲ್ಲಿಯೂ ಪ್ರತಿಯೊಂದು ಮುಕ್ತಕದ ಪದವಿಭಾಗ, ಶಬ್ದಾರ್ಥ, ತಾತ್ಪರ್ಯ, ವಿಸ್ತೃತ ವ್ಯಾಖ್ಯಾನ ಮೊದಲಾದುವುಗಳಿವೆ. ಒಂದೊಂದು ಮುಕ್ತಕವನ್ನೂ ಮನನಮಾಡಿದ ಹಾಗೆ ವಿವಿಧ ಅರ್ಥಗಳನ್ನು ಹೊಳೆಯಿಸುವಷ್ಟು ಧ್ವನಿಪೂರ್ಣವಾಗಿರುವ ಈ ಕಾವ್ಯವನ್ನು ರವಿ ಅವರು ಒಬ್ಬ ಪಂಡಿತನಂತೆ ಹೇಗೋ ಹಾಗೆ ಜೀವನಾನುಭವವುಳ್ಳ ಒಬ್ಬ ಸಾಮಾನ್ಯ ಓದುಗನಂತೆಯೂ ಗ್ರಹಿಸಿದ್ದಾರೆ; ತನ್ಮೂಲಕ ಓದುಗರಿಗೆ ಅನೇಕ ಒಳನೋಟಗಳನ್ನು ನೀಡಿದ್ದಾರೆ. ಡಿ.ವಿ.ಜಿ.ಯವರ ವ್ಯಾಪಕ ಓದನ್ನೂ ಅವರ ಚಿಂತನವಿಧಾನವನ್ನೂ ಅನುಭವ ಪರಿಪಾಕವನ್ನೂ ಸಮಗ್ರವಾಗಿ ಗ್ರಹಿಸಿದಾಗ ಮಾತ್ರ ಅರ್ಥಸ್ಫುಟತೆ, ಸಮಗ್ರ ವಿಶ್ಲೇಷಣೆ ಸಾಧ್ಯ. ಅದನ್ನು ಸಾಧಿಸಿರುವ ರವಿ ಅವರಿಗೆ ಓದುಗರೆಲ್ಲರ ಕೃತಜ್ಞತೆಗಳು ಸಲ್ಲಬೇಕು.

ಎಸ್. ದಿವಾಕರ್
ಸಣ್ಣ ಕಥೆಗಾರರು ಮತ್ತು ಅಂಕಣಕಾರರು

ವಿಜಯರವಿ ಪ್ರಕಾಶನ, ಬೆಂಗಳೂರು

ಬೆಲೆ ರೂ: ೨೫೦